## ಪತ್ರಾಂಕಿತ (ಗೆಜೆಟೆಡ್) ಹುದ್ದೆಗಳ ಮುಖ್ಯ ಪರೀಕ್ಷೆಯ ಪರಿಷ್ಕೃತ ಪಠ್ಯಕ್ರಮ

### ಪತ್ರಿಕೆ–2 : ಸಾಮಾನ್ಯ ಅಧ್ಯಯನ–1

**ವಿಭಾಗ – 1 : ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ (ಭಾರತ ಮತ್ತು ಕರ್ನಾಟಕ) – (ಆರು ಘಟಕಗಳು)**

ಘಟಕ – 1 : ಭಾರತದ ಸಾಂಸ್ಕೃತಿಕ ಪರಂಪರೆ (ಆಯ್ದ ಕ್ಷೇತ್ರ ಮತ್ತು ವಿಷಯಗಳು)

1. **ಸಿಂಧೂ ನಾಗರೀಕತೆ :** ಸಿಂಧೂ ನಾಗರಿಕತೆ ಮತ್ತು ವೇದಕಾಲಿನ ನಾಗರೀಕತೆ ನಡುವಿನ ವೈಶಿಷ್ಟ್ಯತೆ – ವರ್ಣ, ಜಾತಿ / ಜಾತಿ ವ್ಯವಸ್ಥೆಯ ವಿಕಾಸ ಧಾರ್ಮಿಕ ಸ್ಥಿತಿ – ಧಾರ್ಮಿಕ ಚಳುವಳಿಗಳ ಉಗಮ.

2. **ಸಾಹಿತ್ಯ :** ಸಂಸ್ಕೃತ ಸಾಹಿತ್ಯ (ಪ್ರಾಚೀನ), ವೇದಕಾಲೀನ ಸಾಹಿತ್ಯ, ಮಹಾಕಾವ್ಯಗಳು ಮತ್ತು ಪುರಾಣಗಳು ಭಾರತೀಯ ಜನ ಜೀವನ ಹಾಗೂ ಸಂಸ್ಕೃತಿಯ ಮೇಲೆ ಅದರ ಪ್ರಭಾವ, ರಾಜ್ಯಾಡಳಿತದಲ್ಲಿ ಗದ್ಯ ಕೃತಿಗಳ ರಚನೆಗಳು, ನೀತಿಶಾಸ್ತ್ರ (ನೀತಿ), ಜನಪ್ರಿಯ ಮತ್ತು ಪಂಚತಂತ್ರ ಕಥೆಗಳು (ಪ್ರಮುಖ ಕೃತಿಗಳ ರಚನೆಗಳು ಮಾತ್ರ) ಸಾಹಿತ್ಯಕ್ಕೆ ಮೊಗಲರ ಕೊಡುಗೆಗಳು.

3. **ವಿಜ್ಞಾನ ಮತ್ತು ತಂತ್ರಜ್ಞಾನ :** ಗಣಿತಶಾಸ್ತ್ರ, ಖಗೋಳ ಶಾಸ್ತ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಶರೀರ ಶಾಸ್ತ್ರ ಮತ್ತು ಔಷಧ ಶಾಸ್ತ್ರ (ಸರ್ಜರಿಯನ್ನು ಒಳಗೊಂಡು) ನೌಕಾ ನಿರ್ಮಾಣ, ಗಣಿಗಾರಿಕೆ ಮತ್ತು ಲೋಹಶಾಸ್ತ್ರ, ಎಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪ.

4. **ಕಲೆಗಳು (ಕರ್ನಾಟಕವನ್ನು ಹೊರತುಪಡಿಸಿ) :** ಮೌರ್ಯರ ಮತ್ತು ಗುಪ್ತರ ಕಾಲಗಳು, ಖಜುರಾಹೋ ದೇವಾಲಯಗಳು, ಮೌಂಟ್ ಅಬುವಿನ ಜೈನ ದೇವಾಲಯಗಳು ಮತ್ತು ಒಡಿಸಿಯಾದ ದೇವಾಲಯಗಳು, ಪಲ್ಲವ, ಚೋಳ ಮತ್ತು ಪಾಂಡ್ಯರ ಕೊಡುಗೆಗಳು, ಮೊಗಲರ ವಾಸ್ತುಶಿಲ್ಪ, ಕ್ಯಾಥೆಡ್ರಾಲ್ ವಾಸ್ತುಶಿಲ್ಪ, ಬೋಮ್ ಜೀಸಸ್ – ಹಳೆಯ ಗೋವಾ, ಸೇಂಟ್ ಪಾಲ್ಸ್ – ಕೋಲ್ಕತ್ತಾ ಸೇಂಟ್ ಥಾಮಸ್ – ಚೆನ್ನೈ, ಚಿತ್ರಕಲೆ – ಅಜಂತಾದ ಚಿತ್ರಾಲಂಕಾರಗಳು, ಮೊಗಲರ ಮತ್ತು ರಜಪೂತರ ಕಾಲದ ಚಿತ್ರಕಲೆ, ನೃತ್ಯ ಮತ್ತ ಜಲುಸಂಗೀತ, ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಮೊಗಲರ ಕೊಡುಗೆಗಳು, ಭಾರತದ ಜನಪದ ಕಲೆಗಳು.

5. **ಬಾಹ್ಯ ಜಗತ್ತಿಗೆ ಭಾರತದ ಸಂಸ್ಕೃತಿಯ ಕೊಡುಗೆ :** ಕೇಂದ್ರ ಏಷ್ಯಾ, ಚೀನಾ, ಜಪಾನ್, ಆಗ್ನೇಯಾ ಏಷ್ಯಾ ಮತ್ತು ಶ್ರೀಲಂಕಾ.

6. **ಭಾರತದ ಧರ್ಮಗಳು :**
   1. **ಹಿಂದೂ ಧರ್ಮ :** ಸಾಮಾನ್ಯ ವೈಶಿಷ್ಟ್ಯತೆಗಳು ಮತ್ತು ಕೆಲವು ಸಾಮಾನ್ಯ ನಂಬಿಕೆಗಳು – ಪುರುಷಾರ್ಥಗಳು – ಮತಾಚರಣೆಗಳು ಮತ್ತು ನೀತಿಶಾಸ್ತ್ರಗಳು – ಹಬ್ಬಗಳು ಮತ್ತು ಪವಿತ್ರ ದಿನಗಳು – ತೀರ್ಥಯಾತ್ರೆ ಮತ್ತು ಜಾತ್ರೆಗಳು, ಹಿಂದೂ ಪಂಥಗಳು, ವಿವಿಧ ಪಂಥಗಳಲ್ಲಿ ಸಂಯುಕ್ತವಾಗಿರುವಂಥ ಹಿಂದೂ ಧರ್ಮ, ಜೈನ, ವೈಷ್ಣವ ಮತ್ತು ಶಕ್ತ, ಉಪನಿಷತ್ ಮತ್ತು ಭಗವದ್ಗೀತೆಯ ತತ್ವ – ಪತಂಜಲಿಯ ಯೋಗತತ್ವ.
   2. **ಜೈನ ಧರ್ಮ :** ತತ್ವಗಳು – ದತ್ತಾತ್ರಯ, ನೀತಿ ಸಂಹಿತ, ಸಮಾನತೆ (ಸಮಾನ), ಅಹಿಂಸ, ಪಂಥಗಳು, ದಿಗಂಬರ ಮತ್ತು ಶ್ವೇತಾಂಬರ.
   3. **ಬೌದ್ಧ ಧರ್ಮ :** ತತ್ವಗಳು – ನಾಲ್ಕು ಮಹಾ ಸತ್ಯಗಳು, ಅಷ್ಟಾಂಗ ಮಾರ್ಗಗಳು, ನಿರ್ವಾಣ, ನೀತಿ ಸಿದ್ಧಾಂತಗಳು, ಪಂಥಗಳು, ಹೀನಾಯಾನ ಮತ್ತು ಮಹಾಯಾನ.
   4. **ಕ್ರಿಶ್ಚಿಯನ್ ಧರ್ಮ :** ಯೇಸುಕ್ರಿಸ್ತನ ಬೋಧನೆಗಳು, ಕ್ರಿಶ್ಚಿಯನ್‌ನ ಉಪದೇಶಗಳು, ಸಿದ್ಧಾಂತಗಳು ಮತ್ತು ಧರ್ಮಶಾಸ್ತ್ರ, ಕ್ರಿಶ್ಚಿಯನ್ ಪಂಗಡಗಳು – ರೋಮನ್ ಕ್ಯಾಥೋಲಿಕ್ ಚರ್ಚ್‌ಗಳು, ಪೂರ್ವ ಸಾಂಪ್ರದಾಯಕ ಚರ್ಚ್‌ಗಳು ಮತ್ತು ಪ್ರೊಟೆಸ್ಟಂಟ್‌ಗಳ ಚರ್ಚ್‌ಗಳು, ಭಾರತದಲ್ಲಿ ಧರ್ಮ ಪ್ರಚಾರ ಚಟುವಟಿಕೆಗಳು.
   5. **ಇಸ್ಲಾಂ ಧರ್ಮ :** ತತ್ವಗಳು ಮತ್ತು ಆಚರಣೆಗಳು – ದೇವರು, ಧರ್ಮದ ಮೇಲಿನ ನಂಬಿಕೆ, ಐದು ಇಸ್ಲಾಂ ಧರ್ಮ ಕಂಬಗಳು, ಪವಿತ್ರ ಸ್ಥಳಗಳು ಮತ್ತು ದಿನಗಳು, ಕುಟುಂಬ ವ್ಯವಸ್ಥೆ ಮತ್ತು ಷರಿಯಾ, ಕರ್ನಾಟಕದಲ್ಲಿ ಸೂಫಿಗಳು, ಪಂಥಗಳು : ಶಿಯಾ ಮತ್ತು ಸುನ್ನಿ.
   6. **ಸಿಖ್ಖ್ ಧರ್ಮ :** ತತ್ವಗಳು ಮತ್ತು ಆಚರಣೆಗಳು ಮತ್ತು ಇದರ ವಿಕಾಸ.

**ಘಟಕ 2: ಪರಿವರ್ತನೆಯುಕ್ತ ಭಾರತೀಯ ಸಮಾಜ : ಚಿಂತನೆಯ ಪ್ರಮುಖ ಮಾರ್ಗಗಳು, ಆಧುನಿಕ ಭಾರತದ ಇತಿಹಾಸ – 19ನೇ ಶತಮಾನದ ಪ್ರಾರಂಭದಿಂದ, ಸುಧಾರಣೆಗಳು ಮತ್ತು ಸುಧಾರಕರು.**

1. ಸಾಮಾಜಿಕ ಮತ್ತು ಧಾರ್ಮಿಕ ದೋಷಗಳ ನಿರ್ಮೂಲನೆ
2. ಎಲ್ಲರಿಗಾಗಿ ವೇದಗಳು – ಜಾತ್ಯಾತೀತ ಸಮಾಜ
3. ಆದರ್ಶ ಸೇವೆ
4. ಶೋಷಿತ ಮಾರ್ಗದ ವಿಮೋಚನೆ

5. 'ಎರಡು ರಾಷ್ಟ್ರ'ದ ಸಿದ್ಧಾಂತ ಮತ್ತು ಇಸ್ಲಾಮಿಕ್ ಧರ್ಮದ ಪುನರುಜ್ಜೀವನ
6. ಧರ್ಮ ಮತ್ತು ಶಿಕ್ಷಣದ ಮೂಲಕ ಶೋಷಿತ ವರ್ಗದ ಸಬಲೀಕರಣ
7. ಹಿಂದುತ್ವ ಮತ್ತು ದೇಶಭಕ್ತಿ
8. ದ್ರಾವಿಡ ಚಳುವಳಿ
9. ದಲಿತರ ವಿಮೋಚನೆಗಾಗಿ ಹೋರಾಟ ಮತ್ತು ಅವರ ಸಬಲೀಕರಣ
10. ಸಮಾಜವಾದಿ ಪ್ರಸ್ತಾವನೆ ಮತ್ತು ಸಂಪೂರ್ಣ ಕ್ರಾಂತಿ
11. ಗ್ರಾಮ ಸ್ವರಾಜ್, ಸತ್ಯಾಗ್ರಹ ಮತ್ತು ಭೂದಾನ

**ಘಟಕ 3: ಕದಂಬರಿಂದ ಹೊಯ್ಸಳರವರೆಗೆ**

1. ಕರ್ನಾಟಕದ ಪ್ರಾಚೀನತೆ : ಕನ್ನಡ ಭಾಷೆ ಮತ್ತು ಸಾಹಿತ್ಯ, ಕನ್ನಡ ನಾಡಿನ ವ್ಯಾಪ್ತಿ, ರಾಜ್ಯ ಮತ್ತು ಜಿಲ್ಲಾ ಗೆಜೆಟಿಯರ್‌ಗಳು, ಕರ್ನಾಟಕ ವಸ್ತು ಸಂಗ್ರಹಾಲಯಗಳು ಮತ್ತು ಪ್ರಾಚೀನ ಪತ್ರಾಗಾರಗಳು, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ರಕ್ಷಣೆ – ಭಾರತೀಯ ಪುರಾತತ್ವ ಇಲಾಖೆ ಕೆಲಸಗಳು – ಕರ್ನಾಟಕದಲ್ಲಿ ವಿಶ್ವ ಪಾರಂಪರಿಕ ತಾಣಗಳು.
2. ಕದಂಬರಿಂದ ಹೊಯ್ಸಳರವರೆಗೆ : ವಾಸ್ತು ಶಿಲ್ಪ, ಶಿಲ್ಪ, ಸಾಹಿತ್ಯ ಮತ್ತು ಧರ್ಮಕ್ಕೆ ಇವರ ಕೊಡುಗೆಗಳು

**ಘಟಕ 4: ವಿಜಯನಗರ ಸಾಮ್ರಾಜ್ಯ ಮತ್ತು ನಂತರದ ಕಾಲ (1336–1799)**

1. ವಿಜಯನಗರ ಸಾಮ್ರಾಜ್ಯ : ಸಾಮ್ರಾಜ್ಯದ ಉದಯ, ಉದ್ದೇಶಗಳು ಮತ್ತು ಮಹತ್ವಾಕಾಂಕ್ಷಿ – ವಿದ್ಯಾರಣ್ಯ ರಾಜಕೀಯ, ಇತಿಹಾಸ, ಹರಿಹರ, ಬುಕ್ಕ, ಇಮ್ಮಡಿ ದೇವರಾಯ, ಕೃಷ್ಣದೇವರಾಯ ಮತ್ತು ಅಳಿಯ ರಾಮರಾಜ – ತಾಳಿಕೋಟೆ ಕದನ ಮತ್ತು ಅದರ ಪರಿಣಾಮಗಳು, ರಾಜಧಾನಿಯ ವೈಭವ – ಆಡಳಿತ – ಸಮಾಜ, ಆರ್ಥಿಕತೆ ಮತ್ತು ಧಾರ್ಮಿಕತೆ, ಕಲೆಗಳು, ಚಿತ್ರಕಲೆ, ಸಂಗೀತ, ನೃತ್ಯ, ಸಾಹಿತ್ಯ, ವಾಸ್ತುಶಿಲ್ಪ ಮತ್ತು ಶಿಲ್ಪ, ವಿಜಯನಗರದ ವಿದೇಶಿಗರ ವಿವರಣೆ.
2. ಧಾರ್ಮಿಕ ಪಂಥಗಳು : ಶಂಕರಚಾರ್ಯರು, ರಾಮಾನುಜಚಾರ್ಯ, ಮಧ್ವಾಚಾರ್ಯರು – ಶ್ರೀ ಬಸವೇಶ್ವರ, ವೀರಶೈವ ಮತ್ತು ವಚನ ಚಳುವಳಿ – ಹರಿದಾಸ ಚಳುವಳಿ – ಕಲಮುಖ ಶಕ್ತ ಮತ್ತು ಪಾಶುಪಥ ಪಂಥಗಳು.
3. ಬಹುಮನಿ ಷಾಹಿಗಳು : ಮಹಮದ್ ಗವಾನ್ – ಬಹಮನಿಯ ಕೊಡುಗೆಗಳು – ಬಿಜಾಪುರದ ಆದಿಲ್ ಷಾಹಿಗಳು, ಸಾಹಿತ್ಯ ಮತ್ತು ವಾಸ್ತುಶಿಲ್ಪಕ್ಕೆ ಕೊಡುಕೆಗಳು – ಕರ್ನಾಟಕದ ಸೂಫಿಗಳು.
4. ಚಿಕ್ಕದೇವರಾಜ ಒಡೆಯರವರ ಕೊಡುಗೆಗಳು – ಕೆಳದಿ ಮತ್ತು ಚಿತ್ರದುರ್ಗದ ನಾಯಕರು, ಕಿತ್ತೂರಿನ ರಾಣಿಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ, ಯಲಹಂಕದ ನಾಡಪ್ರಭು, ಹೈದರಾಲಿ ಮತ್ತು ಟಿಪ್ಪುಸುಲ್ತಾನ್ (1761–1799)

**ಘಟಕ 5: ಆಧುನಿಕ ಮೈಸೂರು (1799–1947)**

1. ಕೃಷ್ಣರಾಜ ಒಡೆಯರ್ 3 – ಅವರ ಕೊಡುಗೆಗಳು
2. ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಸಶಸ್ತ್ರ ದಂಗೆ
3. ಕಮೀಷನರುಗಳ ಆಳ್ವಿಕೆ (1831–1881)
4. ಹೈದರಾಬಾದ್ – ಕರ್ನಾಟಕದಲ್ಲಿ ನಿಜಾಮರ ಆಳ್ವಿಕೆ
5. ದಿವಾನರ ಆಳ್ವಿಕೆಯಲ್ಲಿ ಮೈಸೂರು ಪ್ರಗತಿ

**ಘಟಕ 6: ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತು ಏಕೀಕರಣ (1885–1956)**

1. ರಾಷ್ಟ್ರೀಯತೆಯ ಉದಯ, ಪೂರ್ವಗಾಂಧಿಯುಗ (1885–1920), ಗಾಂಧಿಯುಗ (1920–1948)
2. ಹೈದರಾಬಾದ್ – ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ
3. ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ವ್ಯಕ್ತಿಗಳು
4. ಕರ್ನಾಟಕ ಏಕೀಕರಣ – ಏಕೀಕರಣ ಚಳುವಳಿಯ ಉದಯಕ್ಕೆ ಕಾರಣಗಳು – ಆಲೂರೂಉ ವೆಂಕಟರಾವ್ – ಸಾಕ್ಷರತೆಯ ಪಾತ್ರ, ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಪತ್ರಿಕಾ ಮಾಧ್ಯಮ – ಕರ್ನಾಟಕ ಏಕೀಕರಣದ ಮೂರು ಹಂತಗಳು (1947–1956)
5. ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು : ಧರ್ಮ ಪ್ರಚಾರಕದಿಂದ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಂದ ಶಿಕ್ಷಣ ಪ್ರಸಾರ – ಮುದ್ರಣ ಮತ್ತು ಪತ್ರಿಕಾ – ಸಾಹಿತ್ಯ ಮತ್ತು ವಿದ್ವತ್ಪೂರ್ಣ ಅಧ್ಯಯನಗಳು – ಕನ್ನಡ ಸಾಹಿತ್ಯದಲ್ಲಿ ನವೀನ ಸಾಹಿತ್ಯ ಪ್ರಕಾರಗಳು – ಹಿಂದುಳಿದ ವರ್ಗದ ಚಳುವಳಿ – ಮಿಲ್ಲರ್ ಸಮಿತಿಯ ವರದಿ, ಕರ್ನಾಟಕದಲ್ಲಿ ಜಾನಪದ ಕಲೆಗಳು.

## ವಿಭಾಗ–2 : ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಕೋನ (7 ಘಟಕಗಳು)

1. **ಸ್ವಾತಂತ್ರ್ಯ ನಂತರದ ಕರ್ನಾಟಕ** – ರಾಜಕೀಯ ಬಲವರ್ಧನೆಗಾಗಿ – ಸರ್ಕಾರಗಳ ಸತತ ಪ್ರಯತ್ನಗಳು – ಹಿಂದುಳಿದ ವರ್ಗಗಳು ಮತ್ತು ಸಾಮಾಜಿಕ ನ್ಯಾಯ – ಹಾವನೂರ ಸಮಿತಿ – ವೆಂಕಟಸ್ವಾಮಿ ಸಮಿತಿ – ಚಿನ್ನಪ್ಪರೆಡ್ಡಿ ಸಮಿತಿಯ ವರದಿಗಳು – ಇತ್ತೀಚಿನ ಧೋರಣೆಗಳು – ದಲಿತ ಚಳುವಳಿ – ದೇವರಾಜ ಅರಸ್ ಮತ್ತು ಭೂಸುಧಾರಣೆಗಳು, ಭಾಷಾ ವಿವಾದ : ಗೋಕಾಕ್ ಚಳುವಳಿ – ವಿವಾದಾಂಶಗಳು ಮತ್ತು ದೃಷ್ಟಿಕೋನಗಳು, ಅಂತರರಾಜ್ಯ ವಿವಾದಗಳು – ಗಡಿ ವಿವಾದಗಳು – ಮಹಾಜನ್ ಸಮಿತಿಯ ವರದಿ ಮತ್ತು ಅದರ ಪ್ರಭಾವ – ಜಲ ವಿವಾದಗಳು – ರೈತರ ಚಳುವಳಿಗಳು, ಪ್ರಾದೇಶಿಕ ಅಸಮತೋಲನ ಮತ್ತು ನಂಜುಂಡಪ್ಪ ಸಮಿತಿಯ ವರದಿ.
2. **ಸಾಮಾಜಿಕ ಬದಲಾವಣೆ ಮತ್ತು ಚಳುವಳಿಗಳು** – ಸಾಮಾಜಿಕ ರಚನೆ ಮತ್ತು ಸಾಮಾಜಿಕ ಬದಲಾವಣೆ, ಸಾಮಾಜಿಕ ಬದಲಾವಣೆಯ ಸಿದ್ಧಾಂತಗಳು, ಅಸಂಘಟಿತ ಸಮಾಜ ಮತ್ತು ಸಾಮಾಜಿಕ ಚಳುವಳಿಗಳು, ಉದ್ದೇಶಿತ ಸಾಮಾಜಿಕ ಬದಲಾವಣೆ, ಸಾಮಾಜಿಕ ನೀತಿ ಮತ್ತು ಸಾಮಾಜಿಕ ಅಭಿವೃದ್ಧಿ.
3. **ಸಾಮಾಜಿಕ ಬದಲಾವಣೆ ಮತ್ತು ಆಧುನೀಕರಣ** – ಸಂಘರ್ಷ ಪಾತ್ರದ ಸಮಸ್ಯೆಗಳು – ಪೀಳಿಗೆ ನಡುವಿನ ಅಂತರ, ಯುವಜನರ ಅಶಾಂತಿ ಮತ್ತು ಶಿಕ್ಷಣದ ವಾಣಿಜ್ಯೀಕರಣ, ಶೈಕ್ಷಣಿಕ ಶಕ್ತಿಯಾಗಿ ಭಾರತ ಹೊರಹೊಮ್ಮುವಿಕೆ – ಮಹಿಳೆಯ ಸ್ಥಾನಮಾನದ ಬದಲಾವಣೆ ಮತ್ತು ಸಾಮಾಜಿಕ ಚಳುವಳಿಗಳು, ಕೈಗಾರಿಕರಣ ಮತ್ತು ನಗರೀಕರಣ ನಿರ್ಬಂಧ ಗುಂಪುಗಳ ಪಾತ್ರ, ಸಂಸ್ಕೃತೀಕರಣ, ಪಾಶ್ಚಿಮಾತ್ಯೀಕರಣ ಮತ್ತು ಆಧುನೀಕರಣ – ಆಧುನೀಕರಣ ವಿರುದ್ಧ ಪಾರಂಪರಿಕತೆ, ಪ್ರಸ್ತುತ ಸಾಮಾಜಿಕ ಪಿಡುಗುಗಳು – ಮೂಲಭೂತವಾದಿತನ ಮತ್ತು ಭಯೋತ್ಪಾದನೆ, ನಕ್ಸಲ್‌ವಾದ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮತ್ತು ಕಪ್ಪುಹಣ.
4. **ಸರ್ಕಾರ ಮತ್ತು ರಾಜಕೀಯ ವ್ಯವಸ್ಥೆ** : ವಿಧಾನ ಮಂಡಲ : ಕಾರ್ಯಾಂಗ ಮತ್ತು ನ್ಯಾಯಾಂಗ, ಪಾರಂಪರಿಕ ಸಮಾಜದಲ್ಲಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಪ್ರಕಾರ್ಯ, ರಾಜಕೀಯ ಪಕ್ಷ ಮತ್ತು ಅದರ ಸಾಮಾಜಿಕ ಸಂಯೋಜನೆ.
5. **ಅಧಿಕಾರ ವಿಕೇಂದ್ರೀಕರಣ** : ಅಧಿಕಾರದ ವಿಕೇಂದ್ರೀಕರಣ ಮತ್ತು ರಾಜಕೀಯ ಭಾಗವಹಿಸುವಿಕೆ, ಕೇಂದ್ರ ಸರ್ಕಾರ, ಸಂಸತ್ತು, ಸಚಿವ ಸಂಪುಟ, ಸರ್ವೋಚ್ಚ ನ್ಯಾಯಾಲಯ, ನ್ಯಾಯಿಕ ವಿಮರ್ಶೆ, ಕೇಂದ್ರ – ರಾಜ್ಯದ ಸಂಬಂಧಗಳು, ರಾಜ್ಯ ಸರ್ಕಾರ, ರಾಜ್ಯಪಾಲರ ಪಾತ್ರ, ಪಂಚಾಯತ್ ರಾಜ್, ಭಾರತದ ರಾಜಕಾರಣದಲ್ಲಿ ವರ್ಗ ಮತ್ತು ಜಾತಿ, ಪ್ರಾಂತೀಯ ರಾಜಕೀಯ, ಭಾಷೀಕರಣ ಮತ್ತು ಕೋಮುವಾದ, ಜಾತ್ಯಾತೀಕರಣ ಕಾರ್ಯನೀತಿಯ ಸಮಸ್ಯೆಗಳು ಮತ್ತು ರಾಷ್ಟ್ರೀಯ ಏಕೀಕರಣ, ರಾಜಕೀಯ ಭಾಗವಹಿಸುವಿಕೆ ಮತ್ತು ಮತದಾನ, ಮತ ಬ್ಯಾಂಕ್ ರಾಜಕೀಯ.
6. **ಸಾಮಾಜಿಕ ಆರ್ಥಿಕ ವ್ಯವಸ್ಥೆ** : ಜಾಜಮಾನಿ ಪದ್ಧತಿ ಮತ್ತು ಸಾಂಪ್ರದಾಯಿಕ ಸಮಾಜದ ಮೇಲೆ ಅದರ ಪ್ರಭಾವ, ಮಾರುಕಟ್ಟೆ ಅರ್ಥವ್ಯವಸ್ಥೆ (ಮಾರ್ಕೆಟ್ ಎಕಾನಮಿ) ಮತ್ತು ಅದರ ಸಾಮಾಜಿಕ ಪರಿಣಾಮಗಳು, ವೃತ್ತೀಯ ವೈವಿಧ್ಯೀಕರಣ ಮತ್ತು ಸಾಮಾಜಿಕ ರಚನೆ, ವೃತ್ತಿ ಮತ್ತು ವೃತ್ತಿಪರ (ಪ್ರೊಫೆಷನಲೈಸೇಷನ್), ಕಾರ್ಮಿಕ ಸಂಘಗಳ ಪಾತ್ರ, ಸಾಮಾಜಿಕ ನಿರ್ಣಾಯಕಗಳು ಮತ್ತು ಆರ್ಥಿಕ ಅಭಿವೃದ್ಧಿಯ ಪರಿಣಾಮ, ಆರ್ಥಿಕ ಅಸಮಾನತೆಗಳು, ಸೋಷಣೆ ಮತ್ತು ಭ್ರಷ್ಟಾಚಾರ, ಜಾಗತೀಕರಣ ಮತ್ತು ಅದರ ಸಮಾಜಿಕ ಪರಿಣಾಮ.
7. **ಗ್ರಾಮೀಣ – ಸಾಮಾಜಿಕ ವ್ಯವಸ್ಥೆ ಮತ್ತು ಗ್ರಾಮೀಣಾಭಿವೃದ್ಧಿ** : ಗ್ರಾಮ ಸಮುದಾಯದ ಸಾಮಾಜಿಕ ಸಾಂಸ್ಕೃತಿಕ ಆಯಾಮಗಳು, ಸಾಂಪ್ರದಾಯಿಕ ಅಧಿಕಾರ ರಚನೆ, ಪ್ರಜಾಸತ್ತಾತ್ಮೀಕರಣ ಮತ್ತು ನಾಯಕತ್ವ, ಬಡತನ, ಋಣತ್ವ, ಜೀತ ಕಾರ್ಮಿಕ, ಭೂಸುಧಾರಣೆಗಳ ಸಾಮಾಜಿಕ ಪರಿಣಾಮಗಳು, ಗ್ರಾಮೀಣಾಭಿವೃದ್ಧಿ ಯೋಜನೆಗಳು, ಹಸಿರುಕ್ರಾಂತಿ, ಗ್ರಾಮೀಣಾಭಿವೃದ್ಧಿಯ ಹೊಸ ಕಾರ್ಯತಂತ್ರಗಳು, ಬದಲಾಗುತ್ತಿರುವ ಗ್ರಾಮೀಣ ಚಿತ್ರಣ.

## ವಿಭಾಗ –3: ಭಾರತೀಯ ಅರ್ಥವ್ಯವಸ್ಥೆ – ಯೋಜನೆ – ಗ್ರಾಮೀಣಾಭಿವೃದ್ಧಿ (8 ಘಟಕಗಳು)

1. **ಭಾರತದ ಅರ್ಥವ್ಯವಸ್ಥೆ** : ಸ್ವಾತಂತ್ರ್ಯ ನಂತರದ ಬೆಳವಣಿಗೆ – ಕೃಷಿಯ ಅನುಭವ, ಕೈಗಾರಿಕೆ ಮತ್ತು ತೃತೀಯ ವಲಯಗಳು, ಬೆಳವಣಿಗೆ ಮತ್ತು ಹಂಚಿಕೆ ನ್ಯಾಯ, ಬಡತನ ಮತ್ತು ಅಸಮಾನತೆ, ಯೋಜನಾ ಅವಧಿಯಲ್ಲಿ ಕರ್ನಾಟಕ ಅರ್ಥವ್ಯವಸ್ಥೆಯ ಬೆಳವಣಿಗೆ ಯುಗ, ರಾಜ್ಯ ಅರ್ಥ ವ್ಯವಸ್ಥೆಯಲ್ಲಿ ವೃದ್ಧಿ ಮತ್ತು ಕ್ಷೇತ್ರೀಯ ಬದಲಾವಣೆಗಳು ಮತ್ತು ಪರಸ್ಪರ ಸಂಪರ್ಕ.
2. **ಭಾರತ ಮತ್ತು ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳು** : ಬೆಳವಣಿಗೆ ಮತ್ತು ವ್ಯಾಪಾರ, ರಫ್ತುಗಳು ಮತ್ತು ಆಮದುಗಳ ಪರಿಮಾಣ, ಸಂಯೋಜನೆ ಮತ್ತು ಮಾರ್ಗ, ಆರ್ಥಿಕ ಅಭಿವೃದ್ಧಿಯಲ್ಲಿ ದೇಶೀಯ ಮತ್ತು ವಿದೇಶಿ ಬಂಡವಾಳ, ಭಾರತದ ವಿದೇಶಿ ವ್ಯಾಪಾರ ನೀತಿಯಲ್ಲಿ ಬದಲಾವಣೆಗಳು, ಸಂದಾಯಗಳ ಬಾಕಿ ಮತ್ತು ವಿದೇಶಿ ವಿನಿಮಯ, ಕರ್ನಾಟಕದ ರಫ್ತುಗಳು – ಪರಿಮಾಣ, ಸಂಯೋಜನೆ ಮತ್ತು ಮಾರ್ಗ.

3. **ಅಭಿವೃದ್ಧಿಯ ಮಾರ್ಗಗಳು :** ಪ್ರಾಂತ್ಯಗಳ ಮಧ್ಯೆ ಹಾಗೂ ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಿನ ತಾರತಮ್ಯ, ತಾರತಮ್ಯಗಳನ್ನು ತಗ್ಗಿಸಲು ಸಾರ್ವಜನಿಕ ಕಾರ್ಯನೀತಿಗಳು, ವಿಶೇಷ ಆರ್ಥಿಕ ವಲಯಗಳ ನಿರೀಕ್ಷೆಗಳು ಮತ್ತು ಸಮಸ್ಯೆಗಳು, ಕರ್ನಾಟಕದ ಪ್ರಗತಿಯಲ್ಲಿ ತಾರತಮ್ಯ ಮತ್ತು ಸಾರ್ವಜನಿಕ ಕಾರ್ಯನೀತಿಗಳು, ಅಭಿವೃದ್ಧಿ ತಾರತಮ್ಯದ ಪರಿಹಾರ, ಪ್ರಾದೇಶಿಕ ಅಭಿವೃದ್ಧಿ ಮಂಡಳಿಗಳು.

4. **ಯೋಜನೆ – ಯೋಜನೆಯ ಗುರಿಗಳು :** ಉದ್ದೇಶಗಳು ಮತ್ತು ಪ್ರಸ್ತಾವಗಳು, ಪಂಚವಾರ್ಷಿಕ ಯೋಜನೆಗಳ ಸಾಧನೆಗಳು ಮತ್ತು ವಿಫಲತೆಗಳು (1 ರಿಂದ 7ರ ವರೆಗಿನ ಪಂಚವಾರ್ಷಿಕ ಯೋಜನೆಗಳು) ಹೊಸ ಆರ್ಥಿಕ ನೀತಿಗಳ ಆಡಳಿತ ಕ್ರಮದಲ್ಲಿ ಅಭಿವೃದ್ಧಿ ಯೋಜನೆಗಳು (8ನೇ ಪಂಚವಾರ್ಷಿಕ ಯೋಜನೆಯ ನಂತರ) ಕರ್ನಾಟಕದಲ್ಲಿ ಯೋಜನೆಗಳು.

5. **ವಿಕೇಂದ್ರೀಕರಣ :** ಉನ್ನತ ಯೋಜನೆ ಮತ್ತು ಮೂಲಭೂತ ಯೋಜನೆಯ ಸಾಧಕ ಮತ್ತು ಬಾಧಕಗಳು ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಯಾಂತ್ರಿಕ ಯೋಜನೆ ಮತ್ತು ಅನುಭವ, ಯೋಜನೆ ರೂಪಿಸುವುದು ಮತ್ತು ಸಾಮರ್ಥ್ಯ ವೃದ್ಧಿಗೊಳಿಸುವುದು, ಯೋಜನೆ ಮತ್ತು ಹಣಕಾಸು, ಕರ್ನಾಟಕದಲ್ಲಿ ವಿಕೇಂದ್ರಿಕೃತ ಯೋಜನೆ, ಸಂಪನ್ಮೂಲ ಕ್ರೋಢೀಕರಣ ಮತ್ತು ವಹಿಸುವಿಕೆ, ಜಿಲ್ಲಾ ಯೋಜನಾ ಸಮಿತಿ, ರಾಜ್ಯ ಹಣಕಾಸು ಮತ್ತು ಸ್ಥಳೀಯ ಹಣಕಾಸುಗಳು, ರಾಜ್ಯ ಹಣಕಾಸು ಆಯೋಗ.

6. **ಗ್ರಾಮೀಣಾಭಿವೃದ್ಧಿ :** ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯತೆ, ಗಾಂಧಿರ್ಮಾದ ಗ್ರಾಮೀಣ ಅಭಿವೃದ್ಧಿ ಭೂಸುಧಾರಣೆಗಳು, ಬೇಸಾಯ ಮತ್ತು ಉತ್ಪಾದಕತೆಯ ಗಾತ್ರ, ನೀರಾವರಿ ಮತ್ತು ಒಣಬೇಸಾಯದ ಸಮಸ್ಯೆಗಳು, ಆಹಾರ ಭದ್ರತೆ, ಗ್ರಾಮೀಣ ಸಾಲ, ಕೃಷಿ ಮಾರುಕಟ್ಟೆ, ಕೃಷಿ ಕಾರ್ಮಿಕ, ಗ್ರಾಮೀಣ ಕೈಗಾರಿಕೆಗಳು ಮತ್ತು ಉದ್ಯೋಗ, ಕರ್ನಾಟಕ ಕೃಷಿಯ ಸಮಸ್ಯೆಗಳು, ಗ್ರಾಮೀಣ ಆರ್ಥಿಕತೆಯ ಮೂಲಸೌಕರ್ಯಗಳು (ಇಂಧನ, ನೀರಾವರಿ, ಸಾರಿಗೆ, ಸಂಪರ್ಕ, ಮಾರುಕಟ್ಟೆಗಳು) ಗ್ರಾಮೀಣ ಸಾಮಾಜಿಕ ಮೂಲಸೌಕರ್ಯಗಳು – ವಸತಿ, ಕುಡಿಯುವ ನೀರು, ನೈರ್ಮಲ್ಯ ಮತ್ತು ಚರಂಡಿ ವ್ಯವಸ್ಥೆ, ಗ್ರಾಮೀಣ ಆರೋಗ್ಯ ವ್ಯವಸ್ಥೆಗಳು ಮತ್ತು ಅವುಗಳ ಹಂಚಿಕೆ, ಕರ್ನಾಟಕದಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಮೂಲಸೌಕರ್ಯಗಳು, ಕರ್ನಾಟಕದಲ್ಲಿ ಗ್ರಾಮೀಣ ಮಾರುಕಟ್ಟೆಗಳು, ಕರ್ನಾಟಕದಲ್ಲಿ ಗ್ರಾಮೀಣ ವಸತಿ ಮತ್ತು ಆರೋಗ್ಯ ಪಾಲನಾ ವ್ಯವಸ್ಥೆಗಳು.

7. **ಗ್ರಾಮೀಣಾಭಿವೃದ್ಧಿಯ ಪ್ರಾರಂಭದ ಹಂತಗಳು :** ಬಡತನ ನಿರ್ಮೂಲನೆ ಹಾಗೂ ಉದ್ಯೋಗ ಸೃಜನ ಕಾರ್ಯಕ್ರಮಗಳು, ಪಂಚವಾರ್ಷಿಕ ಯೋಜನೆ ಮತ್ತು ಒಟ್ಟಾರೆ ಅಭಿವೃದ್ಧಿ, ಗ್ರಾಮೀಣ ಹಣಕಾಸಿನ ಸಂಸ್ಥೆಗಳು, ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಸ್ವತ್ತು ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆ – ಗ್ರಾಮ ಹುಲ್ಲುಗಾವಲುಗಳು ಮತ್ತು ಮರಮುಟ್ಟುಗಳು, ಜಲಭಾಗಗಳು, ಗ್ರಾಮೀಣ ಪ್ರದೇಶಗಳಲ್ಲಿ ನಗರ ಸೌಕರ್ಯಗಳನ್ನು ಒದಗಿಸುವಿಕೆ (ಪಿಯುಆರ್‌ಎ) ಕರ್ನಾಟಕದಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಗಳು, ಕರ್ನಾಟಕದಲ್ಲಿ ಸ್ವ–ಸಹಾಯ ಗುಂಪುಗಳು, ಮತ್ತು ಕಿರು ಬಂಡವಾಳ ಸಂಸ್ಥೆಗಳು, ಕರ್ನಾಕದ ಗ್ರಾಮೀಣ ಕೆರೆ ಪುನರುಜ್ಜೀವನ, ಕುಡಿಯುವ ನೀರು, ನೈರ್ಮಲ್ಯ ಮತ್ತು ಆರೋಗ್ಯ ಸಂರಕ್ಷಣೆಗೆ ಬಾಹ್ಯ ನೆರವು.

8. **ದತ್ತಾಂಶ ಸಂಗ್ರಹಣೆ ವಿಶ್ಲೇಷಣೆ** – ಅರ್ಥ ವಿವರಣೆ : ಅಂಕಿ ಅಂಶಗಳ ದತ್ತಾಂಶ ಸಂಗ್ರಹಣೆ, ಅರ್ಥ ವಿವರಣೆ ಮತ್ತು ಗುಣಾವಗುಣ ವಿವೇಚನೆ, ಗ್ರಾಫ್‌ಗಳು ಮತ್ತು ಚಾರ್ಟ್‌ಗಳ ಅಧ್ಯಯನ, ಬಾರ್ ಗ್ರಾಫ್‌ಗಳು, ಲೈನ್ ಗ್ರಾಫ್‌ಗಳು ಮತ್ತು ಪೈಚಾರ್ಟ್‌ಗಳು, ಕೋಷ್ಟಕ ಮತ್ತು ರೇಖಾಕೃತಿ ದತ್ತಾಂಶದ ಮೇಲೆ ಆಧಾರಿತವಾದದ ಸಮಸ್ಯೆಗಳು ಅಂಕಿ ಅಂಶಗಳ ದತ್ತಾಂಶ ಪರ್ಯಾಪ್ತತೆ – ಸಂಭಾವ್ಯತೆಯನ್ನಾಧರಿಸಿದ ಸಮಸ್ಯೆಗಳು ಪರಿವರ್ತನೆಗಳು ಮತ್ತು ಸಂಯೋಜನೆಗಳು – ಪರಿಮಾಣಾತ್ಮಕ ಸಾಮರ್ಥ್ಯ – ಸಂಖ್ಯಾ ಅನುಕ್ರಮಗಳು, ಶ್ರೇಣಿಗಳು, ಸರಾಸರಿಗಳು, ಸಂಖ್ಯಾ ಪದ್ಧತಿಗಳು, ಅನುಪಾತ ಮತ್ತು ಪ್ರಮಾಣ, ಲಾಭ ಮತ್ತು ನಷ್ಟ, ಶೇಕಡಾವಾರು, ಸಮಯ ಮತ್ತು ಕೆಲಸ, ವೇಗ–ಸಮಯ – ಅಂತರ, ಸರಳಬಡ್ಡಿ, ವಿಶ್ಲೇಷಣಾತ್ಮಕ ಮತ್ತು ನಿರ್ಣಯಾತ್ಮಕ ಕಾರಣ, ಓದುವ ಗ್ರಹಿಕೆ.

# ಘಟಕ – 1

# ಭಾರತದ ಸಾಂಸ್ಕೃತಿಕ ಪರಂಪರೆ

## ಸಿಂಧೂ ನಾಗರಿಕತೆ

ಭಾರತದಲ್ಲಿ ಪ್ರಾಚೀನ ಕಾಲದಿಂದ ಮಾನವನ ವಾಸವು ಸಂಸ್ಕೃತಿಯನ್ನು ಘೋಷಿಸಿದ್ದರೂ, ಐತಿಹಾಸಿಕ ಸಂಶೋಧನೆ ಹಾಗೂ ದಾಖಲೆಗಳ ಅಭಾವದಿಂದ ಸಿಂಧೂ ನಾಗರಿಕತೆಯಂತಹ ಪ್ರಾಚೀನ ನಾಗರಿಕತೆಯ ಇತಿಹಾಸವು ಅಗೋಚರವಾಗಿತ್ತು. ಹಾಗಾಗಿ ಭಾರತದ ಇತಿಹಾಸವು ಆರ್ಯರ ಆಗಮನದ ನಂತರವೇ ಪ್ರಾರಂಭವಾಯಿತೆಂದು ಈವರೆಗೂ ಭಾವಿಸಲಾಗಿತ್ತು. ಆದರೆ 1921–22ರಲ್ಲಿ ನಡೆದ ಉತ್ಖನನಗಳು ಭಾರತದ ಇತಿಹಾಸದ ಪ್ರಾಚೀನತೆಯನ್ನು ಸುಮಾರು ಕ್ರಿ.ಪೂ. 3000ದಷ್ಟು ಹಿಂದಕ್ಕೊಯ್ದಿತು.

ಇದು ಜಗತ್ತಿನ ಮೊದಲ ನಗರ ನಾಗರಿಕತೆಯಾಗಿದೆ. ಇದು ಈಜಿಪ್ಟ್ ಮತ್ತು ಮೆಸೋಪೊಟೋಮಿಯಾ ನಾಗರೀಕತೆಗಳ ಸಮಕಾಲೀನದ್ದಾಗಿದ್ದು, ಅವುಗಳಿಗಿಂತಲೂ ಹೆಚ್ಚು ಮುಂದುವರೆದ ನಾಗರಿಕತೆಯಾಗಿತ್ತೆಂಬುದೇ ಇದರ ವಿಶೇಷ.

## ಸಿಂಧೂ ನಾಗರಿಕತೆಯ ಸಂಶೋಧನೆ:

ಭಾರತದಲ್ಲಿ ಬ್ರಿಟಿಷ್ ಸರ್ಕಾರವು 1856ರ ಸಮಯದಲ್ಲಿ ಲಾಹೋರ್‌ಗೆ ರೈಲು ಸಂಪರ್ಕ ವ್ಯವಸ್ಥೆಯನ್ನು ನೀಡಲು ರೈಲು ಹಳಿಯ ನಿರ್ಮಾಣ ಕಾರ್ಯ ನಡೆಸಿತ್ತು. ಈ ಸಮಯದಲ್ಲಿಯೇ ಸುಟ್ಟ ಇಟ್ಟಿಗೆಗಳು, ಮತ್ತಿತರ ಅವಶೇಷಗಳು ದೊರಕಿದ್ದವು. ನಂತರ ಪ್ರಾಚ್ಯ ವಸ್ತು ಸಂಶೋಧನಾ ಮಂಡಳಿಯನ್ನು 1906ರಲ್ಲಿ ಸ್ಥಾಪಿಸಲಾಯಿತು. ಸರ್ ಜಾನ್ ಮಾರ್ಷಲ್ ನಿರ್ದೇಶನದಂತೆ ದಯಾರಾಂ ಸಹಾನಿ, ಆರ್.ಡಿ. ಬ್ಯಾನರ್ಜಿ ಬೌದ್ಧ ಸ್ತೂಪಗಳ ಉತ್ಖನನ ಕಾರ್ಯ ಪ್ರಾರಂಭವಾಯಿತು. ಈ ಕಾರ್ಯ ಪ್ರಗತಿಯಲ್ಲಿರುವಾಗಲೇ 1921ರಲ್ಲಿ ದಯಾರಾಂ ಸಹಾನಿಯವರು ಹರಪ್ಪಾ ನಗರವನ್ನು ಮತ್ತು 1922ರಲ್ಲಿ ಆರ್.ಡಿ. ಬ್ಯಾನರ್ಜಿಯವರು ಮೆಹೆಂಜೊದಾರೊ ನಗರವನ್ನು ಉತ್ಖನನ ಮಾಡಿ ಈ ನಾಗರಿಕತೆಯನ್ನು ಬೆಳಕಿಗೆ ತಂದರು.

ಸರ್ ಜಾನ್ ಮಾರ್ಷಲ್‌ರು 1924ರಲ್ಲಿ ಲಂಡನ್‌ನ ಪತ್ರಿಕೆಗಳಲ್ಲಿ ಸಿಂಧೂ ನಾಗರಿಕತೆಯ ಕುರಿತು ಮೊದಲ ಬಾರಿಗೆ ಪ್ರಪಂಚಕ್ಕೆ ಪರಿಚಯಿಸಿದರು. 1921ರಿಂದ ಇತ್ತೀಚಿನವರೆಗೂ ಅಂದರೆ 1990ರವರೆಗೂ ಸಾಕಷ್ಟು ಉತ್ಖನನಗಳು ನಡೆದಿವೆ. ಸಿ–14 ವಿಕಿರಣಶೀಲ ಕಾರ್ಬನ್ ಕಾಲಗಣನೆಯ ವಿಧಾನದ ಮೂಲಕ ಸಿಂಧೂ ನಾಗರಿಕತೆಯ ಕಾಲವನ್ನು ಕ್ರಿ.ಪೂ. 3000 ವರ್ಷಗಳಷ್ಟು ಹಳೆಯದು ಎನ್ನಬಹುದಾಗಿದೆ. ಕ್ರಿ.ಪೂ. 5000ರಲ್ಲೇ ಈ ಪ್ರದೇಶದಲ್ಲಿ ಜನರು ಗೋಧಿ ಮತ್ತು ಬಾರ್ಲಿ ಬೆಳೆಯುತ್ತಿದ್ದರು. ಮೇಕೆ–ಕುರಿ ಸಾಕುತ್ತಿದ್ದರು ಎಂದು ರೇಡಿಯೋ ಕಾರ್ಬನ್ ಆಧಾರಗಳು ಸ್ಪಷ್ಟಪಡಿಸುತ್ತವೆ.

ಈ ನಾಗರಿಕತೆಯು 'ಮಹಾರಾಷ್ಟ್ರ, ಜಮ್ಮು ಕಾಶ್ಮೀರ, ಉತ್ತರಪ್ರದೇಶ, ಗುಜರಾತ್, ರಾಜಸ್ತಾನ್, ಪಂಜಾಬ್, ಹರಿಯಾಣಕ್ಕೂ ವಿಸ್ತರಿಸಿತ್ತು.'

## ಪ್ರಮುಖ ಸಂಶೋಧಕರು:

ದಯಾರಾಂ ಸಹಾನಿ, ಆರ್.ಡಿ. ಬ್ಯಾನರ್ಜಿ, ಸೈನ್, ಎಸ್.ಆರ್. ರಾವ್, ಎಫ್.ಎ. ಖಾನ್, ಸಿ.ಎಫ್. ಡೆಲ್ಕ, ಮಾರ್ಟಿನ್ ವ್ಹೀಲರ್, ಜಾನ್ ಮಾರ್ಷಲ್ ಮಹನೀಯರ ಕಲ್ಪನಾ ಕೂಸೇ ಈ ನಮ್ಮ 'ಸಿಂಧೂ ನಾಗರಿಕತೆ'.

## ಸಿಂಧೂ ನಾಗರಿಕತೆಗೆ ಒಳಪಟ್ಟಂತಹ ಪ್ರಮುಖ ನಗರಗಳೆಂದರೆ:

ಹರಪ್ಪ, ಮೆಹಂಜೋದಾರೋ, ಕಾಲಿಬಂಗನ್, ಲೋಥಾಲ್, ಚಾನ್ಹುದಾರೋ, ಬನವಾಲಿ, ಸರ್‌ಕೊಟ್ಟ, ರಾಖಿಗಿರಿ, ಸೂಕ್ತಜಂಡರ್, ಬಾಲ್‌ಕೋಟ್, ಅಲ್ಲಾದಿನೊ, ದೋಲವೀರ, ಆಲಂಗಿರ್‌ಪುರ, ಮಾಂಡು, ದೈಮಾಬಾದ್ ಇತ್ಯಾದಿ.

## ಸಿಂಧೂ ನಾಗರಿಕತೆಯ ವಿಸ್ತಾರ:

ಸಿಂಧೂ ನಾಗರಿಕತೆಯು ಬಲೂಚಿಸ್ತಾನದ ಸೂಕ್ತಜೆಂಡರ್‌ನಿಂದ ಭಾರತದ ಉತ್ತರಪ್ರದೇಶದ ಅಲಂಗಿಪುರ್, ಉತ್ತರದಲ್ಲಿ ಹಿಮಾಲಯದ ತಪ್ಪಲಿನ ರೋಪಾರ್‌ನಿಂದ ದಕ್ಷಿಣದಲ್ಲಿ ಮಹಾರಾಷ್ಟ್ರದ ದೈಮಾಬಾದವರೆಗೂ ವ್ಯಾಪಿಸಿತ್ತು. ಒಟ್ಟಿನಲ್ಲಿ ಪೂರ್ವ ಪಶ್ಚಿಮಕ್ಕೆ 1600 ಕಿ.ಮೀ. ಮತ್ತು ಉತ್ತರ ದಕ್ಷಿಣಕ್ಕೆ 1100 ಕಿ.ಮೀ,ವರೆಗೆ ವ್ಯಾಪ್ತಿ ಹೊಂದಿತ್ತು ಮತ್ತು ತ್ರಿಭುಜಾಕೃತಿಯಲ್ಲಿ 1299600 ಚ.ಕಿ.ಮೀ. ವಿಶಾಲವಾದ ಭೂ ವ್ಯಾಪ್ತಿಯನ್ನು ಇದು ಹೊಂದಿತ್ತು ಎನ್ನಬಹುದಾಗಿದೆ. ಇಂದು ಈ ನಾಗರಿಕತೆಗೆ ಸಂಬಂಧಿಸಿದಂತೆ 1000ಕ್ಕೂ ಹೆಚ್ಚಿನ ನಿವೇಶನಗಳು ಕಂಡುಬಂದಿವೆ. ಇತರೆ ನಾಗರಿಕತೆಗಳ ವ್ಯಾಪ್ತಿಗೆ ಹೋಲಿಸಿದರೆ ಸಿಂಧೂ ನಾಗರಿಕತೆಯು ವಿಶಾಲವಾದ ಭೂ ಪ್ರದೇಶ ಹೊಂದಿತ್ತು.

## ಸಿಂಧೂ ನಾಗರಿಕತೆಯ ನಿರ್ಮಾಪಕರು:

ಸಿಂಧೂ ನಾಗರಿಕತೆಯ ಕರ್ತೃಗಳು ಒಂದು ಜನಾಂಗಕ್ಕೆ ಸೇರಿದವರಲ್ಲಾ ಇದು ಹಲವಾರು ಜನಾಂಗಗಳ ಮಿಶ್ರಣವೆಂಬುದು ಸತ್ಯ. ಸಿಂಧೂ ನಾಗರಿಕತೆಯ ಮೂಲ ಅಥವಾ ನಿರ್ಮಾಪಕರ ಬಗ್ಗೆ ಇತಿಹಾಸ ತಜ್ಞರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಇಂದು ಈ ನಾಗರಿಕತೆಯ ವ್ಯಾಪ್ತಿಯಲ್ಲಿ ದೊರೆತಿರುವ ಅಸ್ತಿಪಂಜರಗಳ ಆಧಾರದ ಮೇಲೆ ಈ ನಾಗರಿಕತೆಯ ಮೂಲ ನಿವಾಸಿಗಳಾರು? ಎಂಬುದನ್ನು ತೀರ್ಮಾನಿಸಬೇಕಾಗಿದೆ.

ಈ ನಾಗರಿಕತೆಯ ಜನತೆ ನಾಲ್ಕು ಜನಾಂಗೀಯ ಲಕ್ಷಣಗಳುಳ್ಳವರಾಗಿ ವರ್ಗೀಕರಿಸಿದ್ದಾರೆ. ಅವುಗಳೆಂದರೆ 1) ಮೆಡಿಟೇರಿಯನ್ನರು 2) ಪ್ರೋಟೋ–ಆಸ್ಟ್ರೋಲಾಯಿಡ್ಸ್ 3) ಆಲ್ಫೆನಾಯ್ಡರು 4) ಮಂಗೋಲಾಯ್ಡ್ಸ್. ಹಾಗೆಯೇ ವೀಲರ್‌ರವರು "ಸಿಂಧೂ ನಾಗರಿಕತೆ ಜನಾಂಗ ಮೆಸಪೊಟೋಮಿಯಾದಿಂದ ಬಂದವರೆಂದು" ವಾದಿಸಿದ್ದಾರೆ. ಹಾಗೆಯೇ ಬಹುತೇಕ ವಿದ್ವಾಂಸರು ಸಿಂಧು ನಾಗರಿಕತೆಯ ಜನರು ದ್ರಾವಿಡರು ಎಂಬುದನ್ನು ಬಲವಾಗಿ ಬೆಂಬಲಿಸಿದ್ದಾರೆ.

ಈಗಾಗಲೇ ಹೇಳಿದಂತೆ ಒಟ್ಟಾರೆಯಾಗಿ ಮೊಹೆಂಜೋದಾರಿನಲ್ಲಿ ದೊರೆತಿರುವಂತಹ ಅಸ್ತಿಪಂಜರ ಹಾಗೂ ತಲೆಬುರುಡೆಗಳ ಆಧಾರದ ಮೇಲೆ ಸಿಂಧೂ ಜನರು 4 ಜನಾಂಗದವರ ಮಿಶ್ರಣವೆನ್ನಲಾಗಿದೆ.

1) ಮೆಡಿಟೇರಿಯನ್ನರು

2) ಪ್ರೋಟೋ–ಆಸ್ಟ್ರೋಲಾಯಿಡ್ಸ್

3) ಆಲ್ಫೆನಾಯ್ಡರು

4) ಮಂಗೋಲಾಯ್ಡ್ಸ್

ಹೀಗೆ ಹಲವಾರು ಪ್ರಮುಖ ಜನಾಂಗದವರ ಮಿಶ್ರಣ ಹೊಂದಿ ಬೆಳೆದು ನಿಂತ ಈ ನಾಗರೀಕತೆಯು ಸಿಂಧೂ ನದಿ ಬಯಲನ್ನು ತಮ್ಮ ಉಪಯೋಗಕ್ಕೆ ಬಳಸುವುದನ್ನು ಕುರಿತು ಅಧ್ಯಯಿಸಿ ಜಗತ್ತಿಗೊಂದು ಮಾದರಿಯಾದ ನಾಗರೀಕತೆ ನೀಡಿದರು.

## ಸಿಂಧೂ ನಾಗರಿಕತೆಯ ವೈಶಿಷ್ಟ್ಯಗಳು:

ಸಿಂಧೂ ನಾಗರಿಕತೆ ಎಂದರೆ 'ನಾಗರಿಕ ಸಂಸ್ಕೃತಿಯೊಂದರ ಸಾಂಸ್ಕೃತಿಕ ಚೌಕಟ್ಟು' ಎಂದೇ ಹೇಳಬಹುದು. ಇಲ್ಲಿನ ವಿಶೇಷ ಅಂಶಗಳೆಂದರೆ,

* ನಗರ ಯೋಜನೆ
* ವಾಸದ ಗೃಹಗಳು
* ಸಾರ್ವಜನಿಕ ಕಟ್ಟಡಗಳು
* ಕಾರ್ಮಿಕರ ಮನೆಗಳು

* ಬೃಹದಾದ ಈಜುಕೊಳ
* ಸಾರ್ವಜನಿಕ ಉಗ್ರಾಣ
* ಒಳಚರಂಡಿ ವ್ಯವಸ್ಥೆ
* ರಾಜಕೀಯ ವ್ಯವಸ್ಥೆ
* ಮುದ್ರೆಗಳು
* ಕಲೆ ಮತ್ತು ವಾಸ್ತುಶಿಲ್ಪ
* ಉಡುಗೆ ತೊಡುಗೆಗಳು
* ಕೃಷಿ
* ವ್ಯಾಪಾರ ಸಂಪರ್ಕ
* ವಿಜ್ಞಾನ ಮುಂತಾದವು.

## 1) ನಗರ ಯೋಜನೆ:

ಸಿಂಧೂ ಜನರು ಮೂಲತ: ನಗರವಾಸಿಗಳು. ಇವರು ವ್ಯವಸ್ಥಿತವಾದ ನಗರ ಜೀವನವನ್ನು ರೂಢಿಸಿಕೊಂಡಿದ್ದರು. ಹರಪ್ಪ ಮತ್ತು ಮೆಹೆಂಜೋದಾರೋ ಪ್ರಮುಖ ನಗರಗಳು. ಇಲ್ಲಿ ನಗರಗಳೂ ವಿಶಾಲವಾಗಿದ್ದು, ರಸ್ತೆಗಳು ನೇರವಾಗಿ ಮತ್ತು ಅಗಲವಾಗಿವೆ. ಮುಖ್ಯ ರಸ್ತೆಗಳು 13ರಿಂದ 33 ಅಡಿ ಅಗಲ, ಕಿರಿ ಬೀದಿಗಳು 9ರಿಂದ 11 ಅಡಿ ಅಗಲವಾಗಿವೆ. ರಸ್ತೆಬದಿಯಲ್ಲಿ ಕಸದ ತೊಟ್ಟಿ, ದೀಪಗಳು, ಕಾವಲು ಪಹರೆ ಇತ್ಯಾದಿ.

ಇದನ್ನು ಮೆಸಪೋಟೇಮಿಯಾದ ನಾಗರಿಕತೆಯೊಡನೆ ಹೋಲಿಸಿ ನೋಡಿದರೆ,

1. ಸಿಂಧೂ ಜನರು ಮನೆಗಳನ್ನು ರಸ್ತೆಬದಿಗೆ ಸಾಕಷ್ಟು ಸ್ಥಳಾವಕಾಶ ಬಿಟ್ಟು ನಿರ್ಮಿಸಿದರೆ, ಮೆಸಪೋಟೇಮಿಯಾದ ಜನರು ಮನೆಗಳನ್ನು ರಸ್ತೆಬದಿಯವರೆಗೂ ನಿರ್ಮಿಸಿದ್ದರು. (ಊರ್, ನಿಪ್ಪೂರ್, ಕಿಷ್ ಪಟ್ಟಣ).
2. ಸಿಂಧೂ ಜನರು ರಸ್ತೆಗಳನ್ನು ವಿಶಾಲವಾಗಿ ನಿರ್ಮಿಸಿಕೊಂಡರೆ ಇವರ ರಸ್ತೆಗಳು ಇಕ್ಕಟ್ಟಾಗಿದ್ದವು.
3. ಸಿಂಧೂ ಜನರು ರಸ್ತೆಗಳ ಧೂಳು ಬರದಂತೆ ಇಟ್ಟಿಗೆ ಹಾಗೂ ಮಡಿಕೆ ಚೂರುಗಳಿಂದ ನಿರ್ಮಿಸುತ್ತಿದ್ದರು. ಆದರೆ ಇವರ ರಸ್ತೆಗಳು ಧೂಳುಮಯವಾಗಿದ್ದವು.

## ನಗರ ಯೋಜನೆ ಪ್ರಮುಖ ಲಕ್ಷಣಗಳೆಂದರೆ:

1. ವಾಸದ ಗೃಹಗಳು ಸುಟ್ಟ ಇಟ್ಟಿಗೆಗಳಿಂದ ನಿರ್ಮಾಣವಾಗುತ್ತಿದ್ದವು. ಮನೆ ಮನೆಗಳ ನಡುವೆ ಸಾಕಷ್ಟು ಸ್ಥಳಾವಕಾಶವಿರುತ್ತಿತ್ತು. ಇಟ್ಟಿಗೆಗಳು 55.5 / 25.5*9 ಸೆ.ಮೀ. ವಿಸ್ತೀರ್ಣವಾಗಿದ್ದವು. ಸಾಕಷ್ಟು ಗಾಳಿ ಬೆಳಕಿನ ವ್ಯವಸ್ಥೆ ಇತ್ತು. ಬಾಗಿಲುಗಳು ಮರದಿಂದ ಕೂಡಿದ್ದು 2ರಿಂದ 7 ಅಡಿ ಅಗಲವಾಗಿದ್ದವು. ಇಲ್ಲಿಯೂ ಬಡ ಮತ್ತು ಶ್ರೀಮಂತ ವರ್ಗದ ಜನರಿದ್ದು ದೊಡ್ಡ ಮತ್ತು ಸಣ್ಣ ಮನೆಗಳಿದ್ದವು. ಪ್ರತ್ಯೇಕವಾದ ಶೌಚ ವ್ಯವಸ್ಥೆ, ಸ್ನಾನಗೃಹ, ಪರೋಕ್ಷ ಮಳೆನೀರು ಕೊಯ್ಲು ವ್ಯವಸ್ಥೆ ಜಾರಿಯಲ್ಲಿತ್ತು. ಸಿಂಧೂ ನಗರಗಳು ಸಮೃದ್ದವಾಗಿ ಬೆಳೆಯಲು ಅವುಗಳಿಗೆ ದೊರೆತ ವಿಫುಲವಾದ ನೀರೇ ಕಾರಣವಾಗಿತ್ತು.
2. ಸಾರ್ವಜನಿಕ ಕಟ್ಟಡಗಳು ವಿಶಾಲವಾಗಿದ್ದು, ದೊಡ್ಡ ಕಟ್ಟಡವೆಂದರೆ 230*78 ಅಡಿ.
3. ಕಾರ್ಮಿಕರ 16 ಮನೆಗಳು ದೊರೆತಿದ್ದು 18*7 ಮೀ. ಉದ್ದಗಲವಾಗಿವೆ.

4. ಮೆಹೆಂಜೋದಾರ್‌ನಲ್ಲಿ ಸಾರ್ವಜನಿಕ ಈಜುಕೊಳ ಪತ್ತೆಯಾಗಿದ್ದು, ಇದು 180*109 ಅಡಿ ಉದ್ದಗಲವಾಗಿದೆ. ಬಿಸಿ ನೀರಿನ ಸ್ನಾನಕ್ಕೆ ವ್ಯವಸ್ಥೆ ಇತ್ತು. ನೀರು ಒಳಬರಲು ಹಾಗೂ ಹೊರಹೋಗಲು ವ್ಯವಸ್ಥೆ ಇದ್ದು, ಧಾರ್ಮಿಕ ಸಂದರ್ಭಗಳಲ್ಲಿ ಬಳಕೆಯಾಗುತ್ತಿತ್ತು. (ಶುಚಿತ್ವಕ್ಕೆ ದೇಹ ನೈರ್ಮಲ್ಯಕ್ಕೆ ಗರಿಷ್ಠ ಆದ್ಯತೆ).

5. ಸಾರ್ವಜನಿಕ ಉಗ್ರಾಣವನ್ನು ಧಾನ್ಯ ಸಂಗ್ರಹಣೆಗಾಗಿ ಬಳಸುತ್ತಿದ್ದರು. ಇವು ಹರಪ್ಪ, ಮೆಹಂಜೋದಾರೋ, ಲೋಥಾಲ್, ಕಾಲಿಬಂಗನ್‌ನಲ್ಲಿವೆ. 72 ಉಗ್ರಾಣ ದೊರಕಿದ್ದು, ಸರ್ಕಾರದ ದವಸವನ್ನು ಇಲ್ಲಿ ಸಂಗ್ರಹಿಸಲಾಗುತ್ತಿತ್ತು. ಅಂದು ಯೋಜನಾಬದ್ಧವಾಗಿ ನಿರ್ಮಾಣವಾದಂತಹ ಉಗ್ರಾಣಗಳೇ ಇಂದಿನ ಖಜಾನೆಗಳು ಎಂದು ಹೋಲಿಸಲಾಗಿದೆ.

6. ಒಳಚರಂಡಿ ವ್ಯವಸ್ಥೆ: ಯಾವುದೇ ದೇಶದ ಪ್ರಾಚೀನ ನಾಗರಿಕತೆ ಹೊಂದಿರದ ಒಳಚರಂಡಿ ವ್ಯವಸ್ಥೆಯನ್ನು ಸಿಂಧೂ ಜನರು ಹೊಂದಿದ್ದರು. ರಸ್ತೆಯ ಎರಡೂ ಬದಿಯಲ್ಲಿ 1ರಿಂದ 2 ಅಡಿ ಆಳವಾಗಿ ಒಳಚರಂಡಿ ಹಾದು ಹೋಗುವಂತೆ ನಿರ್ಮಿಸಲಾಗಿದೆ. ಬಚ್ಚಲು ಮನೆಯ ಕಲ್ಮಶಗಳನ್ನು ಮಣ್ಣಿನ ಪೈಪಿನ ಮೂಲಕ ಚರಂಡಿಗೆ ಸಂಪರ್ಕ ಕಲ್ಪಿಸಲಾಗಿದೆ. ಚರಂಡಿ ಶುದ್ದಿಗೆ ಮ್ಯಾನ್‌ಹೋಲ್ ವ್ಯವಸ್ಥೆ ಇತ್ತು.

   ಎ.ಎಲ್. ಭಾಷ್ಯಂರವರ ಪ್ರಕಾರ, 'ರೋಮನ್ ನಾಗರಿಕತೆವರೆಗೂ ಯಾವುದೇ ಪುರಾತನ ನಾಗರೀಕತೆಯು ಸಿಂಧೂ ಜನರಂತಹ ಅತ್ಯಾಧುನಿಕ ಒಳಚರಂಡಿ ವ್ಯವಸ್ಥೆ ಹೊಂದಿರಲಿಲ್ಲ.'

## 2) ರಾಜಕೀಯ ವ್ಯವಸ್ಥೆ:

ಪ್ರತೀ ನಗರದಲ್ಲೂ ವಂಶಪಾರಂಪರ್ಯ ರಾಜಪ್ರಭುತ್ವ ಇತ್ತೆಂದು ಊಹೆ ಮಾಡಲಾಗಿದೆ. 'ಹರಿಯಾಣದ ಕುನಾಲದಲ್ಲಿ ದೊರೆತಿರುವ ಬೆಳ್ಳಿ ಕಿರೀಟವು ಇದನ್ನು ದೃಢಪಡಿಸಿದೆ. ಎಸ್.ಆರ್.ಪಾಲ್‌ರವರು ಮುದ್ರೆಗಳ ಮೇಲೆ ಪಾಲ, ಪಾಲಕ, ಮಹಾಪಾಲಕ ಎಂದು ಗುರುತಿಸಿ ಅವನ್ನು ಆಡಳಿತಗಾರ, ಉಪ ಆಡಳಿತಗಾರ, ಮಹಾ ಆಡಳಿತಗಾರ ಎಂದು ತಿಳಿಸಿದ್ದಾರೆ. ಆದಾಗ್ಯೂ ರಾಜಕೀಯದ ಕುರಿತು ಸ್ಪಷ್ಟವಾದ ತೀರ್ಮಾನ ಹೊಂದಲು ಸಾಧ್ಯವಾಗಿಲ್ಲ.

## 3) ಮುದ್ರೆಗಳು:

ಮುದ್ರೆಗಳು ಸಿಂಧೂ ನಾಗರಿಕತೆಯ ಪ್ರಮುಖವಾದ ಲಕ್ಷಣಗಳಲ್ಲಿ ಒಂದಾಗಿದ್ದು, ಇವರ ಕಲಾ ನೈಪುಣ್ಯತೆಗೆ ಸಾಕ್ಷಿಗಳಾಗಿವೆ. ಇವನ್ನು ಟೆರಿಕೋಟ್, ಜೇಡಿಮಣ್ಣು, ಮೃದುಕಲ್ಲು ಮತ್ತು ದಂತದಿಂದ ತಯಾರಿಸಲಾಗಿದೆ. ಇವು ಆಯತಾಕಾರ ಮತ್ತು ಚದುರಾಕಾರವಾಗಿವೆ. 1.2ರಿಂದ 6.45 ಸೆ.ಮೀ. ಅಗಲವಾಗಿವೆ. ಮುದ್ರೆಗಳು 3 ಮುದ್ದೇಶಕ್ಕೆ ಬಳಕೆ.

1) ಧರ್ಮದ ಸಂಕೇತ

2) ವ್ಯಾಪಾರದ ಉದ್ದೇಶ

3) ಮತಾಚರಣೆಗಾಗಿ

ಇವರು ಚಿತ್ರಲಿಪಿ ಬಳಸುತ್ತಿದ್ದು, ಇದುವರೆಗೂ ಓದಿ ಅರ್ಥೈಸಲಾಗಿಲ್ಲಾ. ಇದು ಸೆಮಿಟಿಕ್ ಬರಹವನ್ನು ಬಹುವಾಗಿ ಹೋಲುತ್ತದೆ. 1 ಮುದ್ರೆ ಗರಿಷ್ಠ 26 ಚಿತ್ರ ಹೊಂದಿದೆ. ಇವರ ಲಿಪಿ ಬಲದಿಂದ ಎಡಕ್ಕೆ ಸಾಗುತ್ತದೆ.

## 4) ಕಲೆ ಮತ್ತು ವಾಸ್ತುಶಿಲ್ಪ:

ಇವರು ಕಲಾಪ್ರಿಯರಾಗಿದ್ದು, ಭವ್ಯ ವಾಸ್ತುಶಿಲ್ಪದಲ್ಲಿ ನುರಿತವರಾಗಿದ್ದರು. ಮುದ್ರೆಗಳ ಮೇಲೆ ಮಾನವನ ಆಕೃತಿ, ಮಾತೃದೇವತೆ, ಗೂಳಿ, ಪಶುಪತಿ, ಟಗರು ಮುಂತಾದ ಚಿತ್ರಕೆತ್ತನೆ ಅಭೂತಪೂರ್ವವಾಗಿತ್ತು.

(ಮೆಹೆಂಜೋದಾರ್‌ನಲ್ಲಿ ದೊರೆತಿರುವ ಕಂಚಿನ ಲೋಹದ ನೃತ್ಯಭಂಗಿಯ ನರ್ತಕಿಯ ಪ್ರತಿಮೆ (4 1/2 ಅಡಿ). 17 ಸೆ.ಮೀ.ನ ಮೆದುಶಿಲೆಯ ಪುರುಷ ಗಡ್ಡಧಾರಿಯ ಚಿತ್ರ ವಿಗ್ರಹ ದೊರೆತಿವೆ.)

ಹರಪ್ಪಾದಲ್ಲಿ ಶಿವನ ರುದ್ರತಾಂಡವ ಮೂರ್ತಿಯೊಂದು ದೊರೆತಿದ್ದು ಅದನ್ನು ನಟರಾಜ ಎಂದು ಗುರುತಿಸಲಾಗಿದೆ. ಮಾರ್ಷಲ್‌ರ ಪ್ರಕಾರ 'ಸಿಂಧೂ ಕಲಾಕೃತಿಗಳು ತೋರಿಕೆಗೆ ಪ್ರಾಚೀನವು ನೈಜವಾಗಿ ಆಧುನಿಕವಾಗಿವೆ.'

## 5) ಸಾಮಾಜಿಕ ಜೀವನ:

1. ಸಮಾಜವನ್ನು ಪುರೋಹಿತ, ಕ್ಷತ್ರಿಯ, ವ್ಯಾಪಾರಿ, ಕಾರ್ಮಿಕವೆಂಬ 4 ವರ್ಗದಲ್ಲಿ ವಿಂಗಡಣೆ ಮಾಡಲಾಗಿತ್ತು.
2. ಗೋಧಿ, ಬಾರ್ಲಿ, ಭತ್ತ, ನವಣೆ ಬೆಳೆಯುತ್ತಿದ್ದರು. ಮೀನು, ಆಮೆ, ಕುರಿ ಮಾಂಸ ಸೇವಿಸುತ್ತಿದ್ದರು. 'ಲೋಥಾಲ್ ಮತ್ತು ರಂಗಪುರದಲ್ಲಿ ಭತ್ತದ ಹೊಟ್ಟಿನ ಅವಶೇಷಗಳು ದೊರೆತಿವೆ.
3. ಸಿಂಧೂ ಜನರು ಹತ್ತಿಯಿಂದ ನೇಯ್ದ ಬಟ್ಟೆಯನ್ನು ಧರಿಸುತ್ತಿದ್ದರು. ಪಾದರಕ್ಷೆ ಬಳಕೆ ಗೊತ್ತಿರಲಿಲ್ಲಾ. ಇವರ ತೊಡುಗೆಗಳು ಮೇಲು ಹೊದಿಕೆ ಮತ್ತು ಕೆಳಹೊದಿಕೆಗಳಿಂದ ಕೂಡಿತ್ತು.
4. ಆಭರಣ ಪ್ರಿಯರಾಗಿದ್ದು ಓಲೆ, ಮೂಗುತಿ, ಕಂಠಹಾರ, ಡಾಬು, ಕಾಲ್ಗಡಗ, ಉಂಗುರ, ಕೈ ಕಡಗ ಧರಿಸುತ್ತಿದ್ದರು. (ಚಿನ್ನ, ಬೆಳ್ಳಿ, ತಾಮ್ರ, ದಂತ ಮುಂತಾದವುಗಳಿಂದ.)
5. ಅಲಂಕಾರ ಪ್ರಿಯರು, ಸುಗಂಧ ಪರಿಮಳ ದ್ರವ್ಯದ ಪರಿಚಯವಿತ್ತು. ಹರಪ್ಪಾದಲ್ಲಿ ಒಯ್ಯಾರ್ ಚೀಲವೊಂದು ದೊರಕಿದೆ.
6. ಚಾನ್ಹುದಾರೋ ಬೊಂಬೆಗಳ ತಯಾರಿಕೆಗೆ ಪ್ರಸಿದ್ದಿಯಾಗಿತ್ತು. ಟೆರ್ರೆಕೋಟಾ ಆಕೃತಿಗಳು ದೊರಕಿವೆ.

## 6) ಆರ್ಥಿಕ ಜೀವನ:

1. ಕೃಷಿ ಪ್ರಮುಖ ಕಸುಬಾಗಿತ್ತು. ರಾಗಿಯ ಬಳಕೆ ತಿಳಿದಿತ್ತು. ಇವರು ಹತ್ತಿಯನ್ನು 'ಸಿಂಧೂನ್' ಎಂದು ಕರೆಯುತ್ತಿದ್ದರು.
2. 'ಡುಬ್ಬದ ಗೂಳಿ' ಪ್ರಿಯವಾದ ಪ್ರಾಣಿ. ಕುದುರೆ ಬಳಕೆ ಗೊತ್ತಿರಲಿಲ್ಲ.
3. ಚಿನ್ನ, ಬೆಳ್ಳಿ, ಕಂಚು, ತಾಮ್ರ, ಸೀಸದ ಪರಿಚಯವಿತ್ತು. ರಾಜಸ್ತಾನದ 'ಖೇತ್ರಿ' ಗಣಿ ತಾಮ್ರ ತಯಾರಿಕೆಗೆ ಹೆಸರಾಗಿತ್ತು. ತಾಮ್ರಕ್ಕೆ ತವರ ಬೆರೆಸಿ ಕಂಚು ತಯಾರಿಸುವ ಕಲೆ ತಿಳಿದಿತ್ತು. ತವರ ಅಫಘಾನ್‌ನಿಂದ ಆಮದಾಗುತ್ತಿತ್ತು.
4. ಸಿಂಧೂ ಜನರು ಜಗತ್ತಿನಲ್ಲೇ ಮೊದಲ ನುರಿತ ಮಡಿಕೆ ತಯಾರಕರು. ಸುಟ್ಟ ಮಡಿಕೆಗಳ ಮೇಲೆ ಪ್ರಾಣಿ ಪಕ್ಷಿಗಳ ಚಿತ್ರ ಬರೆಯುತ್ತಿದ್ದರು. ಮಡಿಕೆಗಳನ್ನು ಬಾಗ್ದಾದ್ ಬಳಿಯ 'ಟೇಲ್ ಆಸ್ಮಾರ'ಗೆ ರಫ್ತು ಮಾಡುತ್ತಿದ್ದರು.
5. ಪಾತ್ರೆಗಳು ತಾಮ್ರ, ಕಂಚು, ಬೆಳ್ಳಿಯಿಂದ ತಯಾರಿಕೆ, ಕಬ್ಬಿಣದ ಪರಿಚಯ ಇರಲಿಲ್ಲ.
6. ಇವರು ಶಾಂತಿ ಪ್ರಿಯರಾಗಿದ್ದು, ಆಕ್ರಮಣಶೀಲತೆ ಇರಲಿಲ್ಲ.
7. ವ್ಯಾಪಾರ ಸಂಪರ್ಕದಲ್ಲಿ ಈ ನಾಗರಿಕತೆ ಮುಂದಿತ್ತು. ಆಂತರಿಕ ಮತ್ತು ವಿದೇಶಿ ವ್ಯಾಪಾರಗಳು ನಡೆಯುತ್ತಿದ್ದವು. ಮೆಸಪೊಟೋಮಿಯಾ, ಪರ್ಷಿಯಾ, ಸಮೇರಿಯನ್ ದೇಶಗಳೊಂದಿಗೆ ವ್ಯಾಪಾರ ಸಂಬಂಧವಿತ್ತು. ಇಲ್ಲಿ ಸಿಂಧೂ ಮುದ್ರೆಗಳು ದೊರೆತಿವೆ. ಲೋಥಾಲ್‌ನಲ್ಲಿ 'ಹಡಗು ಕಟ್ಟೆ' ಪತ್ತೆಯಾಗಿದೆ. (ಬಾಲ್ ಕೋಟ್ ಮತ್ತು ಸುಕೋರ್ತಾ). ಒಂದೇ ಬಗೆಯ ಅಳತೆ ಮತ್ತು ತೂಕದ ಕಲ್ಲುಗಳು ದೊರೆತಿವೆ. ಇವರಿಗೆ ದಶಮಾಂಶ ಪದ್ದತಿಯ ಅರಿವಿದೆ. ಗರಿಷ್ಠ ಒಟ್ಟು 8150 ಗ್ರಾಂ. ಕನಿಷ್ಠ 13.64 ಗ್ರಾಂ. ಉದ್ದ ಅಳೆಯಲು ಪಾದ ಬಳಕೆ (31.6 ಸೆ.ಮೀ.).

## 7) ಧಾರ್ಮಿಕ ಜೀವನ:

ಡಾ. ಮಾರ್ಷಲ್ ಪ್ರಕಾರ 'ಸಿಂಧೂ ಕೊಳದ ಸಂಸ್ಕೃತಿಯು ಆಧುನಿಕ ಹಿಂದೂ ಧರ್ಮದ ತವರು ಮನೆಯಾಗಿತ್ತು' ಎಂದಿದ್ದಾರೆ.

* ಮಾತೃದೇವತೆ ಪೂಜಿಸುತ್ತಿದ್ದರು. (ನೈಲ್ ದೇವತೆ 'ಪಿಸಿಸ್'ಗೆ ಹೋಲಿಕೆ.) ಪ್ರಾಣಿ ಬಲಿ ರೂಢಿ, 'ಮಾತೃ ಪ್ರಧಾನ ಸಾಮಾಜಿಕ ವ್ಯವಸ್ಥೆ.'
* ಶಿವ ಅಥವಾ ಪಶುಪತಿ ಪೂಜೆ (ಪುರುಷ ದೇವ). ತ್ರಿಮೂರ್ತಿ ಎನ್ನಲಾಗಿದೆ. ಶೈವ ಧರ್ಮ ಅಸ್ತಿತ್ವದಲ್ಲಿತ್ತು.
* ಡುಬ್ಬದ ಗೂಳಿ: ಪವಿತ್ರ ಪ್ರಾಣಿ, ಪಾರಿವಾಳ – ಪವಿತ್ರ ಪಕ್ಷಿ.
* ಅರಳಿ ಮರ: ಪವಿತ್ರ ವೃಕ್ಷ, ವೃಕ್ಷ ಪೂಜೆ ಜಾರಿಯಲ್ಲಿತ್ತು.
* ಜಲದೇವತೆ ಆರಾಧನೆಯಿತ್ತು. 'ಮೊಸಳೆ' ಸಿಂಧೂ ನದಿಯೆಂಬ ಭಾವ.
* ಸೂರ್ಯ ಆರಾಧನೆ ಮತ್ತು ಕಾಲಿಬಂಗನದಲ್ಲಿ ದೊರೆತಿರುವ ಯಜ್ಞ–ಕುಂಡಗಳಿಂದಾಗಿ ಅಗ್ನಿ ಪೂಜೆ ರೂಢಿಯಲ್ಲಿತ್ತೆಂದು ತಿಳಿದಿದೆ.
* ಯಜ್ಞ, ತಂತ್ರ, ಮಂತ್ರಗಳಲ್ಲಿ ನಂಬಿಕೆ ಇತ್ತು.

### 8) ಶವ ಸಂಸ್ಕಾರ:

* ಪೂರ್ಣ ಹೂಳುವ ಪದ್ಧತಿ – ಮಕ್ಕಳ ದೇಹವನ್ನು ಮಡಿಕೆಗಳಲ್ಲಿ ಹೂಳುತ್ತಿದ್ದರು. ಸತಿಪದ್ಧತಿ ಸುಳಿವಿತ್ತು.
* (ಆಂಶಿಕ ಶವಸಂಸ್ಕಾರ ಕೂಡ ಇತ್ತು (ಪ್ರಾಣಿ–ಪಕ್ಷಿಗೆ ಆಹಾರ.)
* ಸುಡುವ ಪದ್ಧತಿ ಇತ್ತು. ಸುಟ್ಟು ಬೂದಿಯ ಮಡಿಕೆ ಮೇಲೆ ನವಿಲಿನ ಚಿತ್ರ ಬರೆಯುತ್ತಿದ್ದರು.

### ಸಿಂಧೂ ನಾಗರಿಕತೆಯ ಅವನತಿ:

* ನದಿ ಪಾತ್ರಗಳು ಬತ್ತಿ ಹೋದದ್ದು – ಘಕ್ಕಾರ್, ಹಕ್ರಾ, ಸರಸ್ವತಿ.
* ನೆರೆ ಹಾವಳಿ ಮತ್ತು ಭೂಕಂಪ (ಮೆಕ್ಕಲು ಮಣ್ಣು ಗೋಚರ) – ನಗರ 7 ಬಾರಿ ನಿರ್ಮಾಣ.
* ಸಿಂಧೂ ನದಿ ಪ್ರವಾಹದ ದಿಕ್ಕನ್ನು ಬದಲಿಸಿದ್ದು.
* ಹವಾಮಾನದಲ್ಲಾದ ಬದಲಾವಣೆಗಳು – ಇಟ್ಟಿಗೆ ಸುಡಲು ಕಾಡಿನ ನಾಶ, ಬರ ಪರಿಸ್ಥಿತಿ (ಫೇರ್ ಸರ್ವಿಸ್ ಜೀವಿ ಶಾಸ್ತ್ರಜ್ಞನ ಪ್ರಕಾರ).
* ಪರಕೀಯ ದಾಳಿಗಳು: ವ್ಹೀಲರ್ ಪ್ರಕಾರ 'ಆರ್ಯರ ಆಕ್ರಮಣದಿಂದ' ಸಿಂಧೂ ನಾಗರೀಕತೆ ನಾಶವಾಗಿದೆ. ಆರ್ಯರು ಇಂದ್ರನನ್ನು 'ನಗರನಾಶಕನೆಂದು ಹೇಳಿದ್ದಾರೆ.

ಹೀಗೆ ಹಲವಾರು ಕಾರಣಗಳಿಂದ ನಾಗರೀಕತೆ ಅವನತಿ ಹೊಂದಿತು. ಆದರೆ ಅವರ ಪರಂಪರೆ ಉಳಿಯಿತು.

ಒಂದರ್ಥದಲ್ಲಿ ಸಿಂಧೂ ನಾಗರೀಕತೆ ಅಂತ್ಯವಾಗಿಲ್ಲಾ. ಅದು ಇಂದಿಗೂ ಮುಂದುವರೆದಿದೆ. ಪ್ರಾಚ್ಯ ಸಂಶೋಧನೆ ಹರಪ್ಪಾ ನಾಗರೀಕತೆಯ ಮುಂದುವರಿಕೆಗೆ ಆಧಾರ ಒದಗಿಸಿವೆ.

1. ಸಿಂಧ್ ಪ್ರದೇಶದ ಹರಪ್ಪಾ ನಗರಗಳಾದ ಆಮ್ರಿ, ಚಾನ್ಹುದಾರೋಗಳಲ್ಲಿ 'ಝುಕರ್' ಕುಂಬಾರಿಕೆ ಕಲೆ ಪ್ರಾರಂಭವಾಗಿದೆ.
2. ಕಛ್ ಮತ್ತು ಸೌರಾಷ್ಟ್ರದಲ್ಲಿ ಸೆರಾಮಿಕ್ ಕಲೆ ಸಂಪದ್ಭರಿತವಾಗಿದೆ.
3. ಹರಪ್ಪಾ ಪರಂಪರೆಯ ಅಂತ್ಯವೆಂದರೆ ಕೇಂದ್ರೀಕೃತ ನೀತಿ ನಿರ್ಧಾರ ಹಾಗೂ ಅರ್ಥವ್ಯವಸ್ಥೆಯ ಕೊನೆ ಎಂದರ್ಥ. ಆದರೆ ಜಾನಪದ ಸಂಸ್ಕೃತಿ ಧಾರ್ಮಿಕ ಪರಂಪರೆ ಖಂಡಿತವಾಗಿಯೂ ಮುಂದುವರೆದಿದೆ.
4. ಪುರೋಹಿತ ವರ್ಗಗಳು ಪ್ರಸ್ತುತವಾಗಿಯೂ ಇವನ್ನೇ ಮುಂದುವರೆಸಿವೆ.

5. ಹಿಂದೂ ಧರ್ಮದ ಪ್ರಸ್ತುತ ಆಚರಣೆಗಳು ಸಿಂಧೂ ಧರ್ಮದಿಂದಲೇ ಪಡೆದವುಗಳಾಗಿವೆ.
6. ಪಶುಪತಿಯೇ ಈಗಿನ ಶಿವನ ರೂಪದಲ್ಲಿ ಆರಾಧಿತವಾಗುತ್ತಿದೆ.
7. ಅರಳೀಮರ ಪೂಜೆ, ಬೇವಿನಮರ ಪೂಜೆ ಮುಂದುವರಿಕೆ.
8. ಸಿಂಧೂ ಜನರು ಯಾವ ಪ್ರಾಣಿಗಳನ್ನು ಪೂಜ್ಯವೆಂದು ಭಾವಿಸಿದ್ದರೋ ಅವು ಈಗಿನ ದೇವರ ವಾಹನಗಳಾಗಿವೆ.
9. ರಾಜಸ್ತಾನ, ಹರ್ಯಾಣ, ಗುಜರಾತ್, ಮತ್ತಿತರ ಕಡೆಗಳಲ್ಲಿ ಅನಂತರದ ಕಾಲದಲ್ಲಿ ನಗರ ಕೇಂದ್ರಿತ ವ್ಯವಸ್ಥೆಯ ಜಾಗದಲ್ಲಿ ಕೃಷಿ ಸಮುದಾಯಗಳು ತಲೆ ಎತ್ತಿವೆ.
10. ಕುಂಬಾರ ಚಕ್ರ, ಎತ್ತಿನಗಾಡಿ, ದೋಣಿ ಎಲ್ಲವೂ ಮುಂದುವರೆದಿವೆ. ಒಟ್ಟಾರೆ 'ಹರಪ್ಪಾ ನಾಗರೀಕತೆಯ ಧರ್ಮವು ಹಿಂದೂ ಧರ್ಮದ ಜನನಿಯಾಗಿದೆ.

## ಸಿಂಧೂ ನಾಗರಿಕತೆ ಮತ್ತು ವೈದಿಕ ಸಂಸ್ಕೃತಿಗಳ ನಡುವೆ ಬರುವ ಭಿನ್ನತೆಗಳು:

ಭಾರತದ ಪ್ರಾಚೀನ ಶ್ರೀಮಂತ ಇತಿಹಾಸ ಪ್ರಾರಂಭವು ಸಿಂಧೂ ಮತ್ತು ಆರ್ಯ ನಾಗರಿಕತೆಯಿಂದಲೇ ಪ್ರಾರಂಭವಾಗಿವೆ. ಭಾರತದ ಶ್ರೀಮಂತ ಇತಿಹಾಸಕ್ಕೆ ಈ ಎರಡೂ ನಾಗರಿಕತೆಗಳು ತಮ್ಮದೇ ಆದ ಹೆಜ್ಜೆ ಗುರುತುಗಳನ್ನಿರಿಸಿವೆ. ಕ್ರಿ.ಪೂ. 3000ದಷ್ಟು ಪುರಾತನವಾದ ಸಿಂಧೂ ನಾಗರಿಕತೆಯು ಭಾರತದ ಪೂರ್ವ ಮತ್ತು ಉತ್ತರದ ಹಲವು ಭಾಗಗಳಲ್ಲಿ ವ್ಯಾಪಿಸಿತ್ತು.

ಮುಂದೆ ಬಂದ ಆರ್ಯನ್ನರು ಉತ್ತರ ಭಾರತದಾದ್ಯಂತ ವ್ಯಾಪಿಸಿದರು. ಈ ಎರಡು ಸಂಸ್ಕೃತಿಗಳ ನಡುವೆ ಹೆಚ್ಚೇನು ಭಿನ್ನತೆ ಇಲ್ಲ. ಅವೆರಡು ಒಂದೇ ಬಗೆಯ ಸಂಸ್ಕೃತಿ ಹೊಂದಿವೆ ಎಂದೇ ಬಹಳ ಕಾಲ ಪರಿಗಣಿಸಲಾಗಿತ್ತು. ಆದರೆ ಈವರೆಗೂ ನಡೆದ ಸಂಶೋಧನೆಗಳು ಈ ಎರಡೂ ಸಂಸ್ಕೃತಿಗಳ ನಡುವೆ ಸಾಕಷ್ಟು ವಿಭಿನ್ನತೆಗಳನ್ನು ಗೋಚರಿಸುವಂತೆ ಮಾಡಿವೆ.

**ಅವುಗಳು:**

## ಸಿಂಧೂ ನಾಗರಿಕತೆಯ

1) ಸಿಂಧೂ ನಾಗರಿಕತೆಯ ಜನತೆ ವ್ಯಾಪಾರಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರು. ವಿದೇಶಿ ವ್ಯಾಪಾರವನ್ನು ಬೆಳೆಸಿದ್ದರು. ಸಮುದ್ರದ ಮೂಲಕ ವ್ಯಾಪಾರ ಮಾಡುತ್ತಿದ್ದರು.
2) ಸಿಂಧೂ ಜನರಿಗೆ ಕಂಚು, ತಾಮ್ರದ ಬಳಕೆ ತಿಳಿದಿತ್ತು. ಕಬ್ಬಿಣದ ಉಪಯೋಗ ತಿಳಿದಿರಲಿಲ್ಲ.
3) ಸಿಂಧೂ ಜನರು ಮುದ್ರೆಗಳನ್ನು ಹಣದ ರೂಪವಾಗಿ ಬಳಸಿದರು.
4) ಸಿಂಧೂ ನಾಗರಿಕತೆಯ ಸಮಾಜದಲ್ಲಿ ಆರ್ಥಿಕ ಮಾನದಂಡವಾಗಿಟ್ಟುಕೊಂಡು ವರ್ಗ ವಿಭಜನೆಯ ಸಮಾಜ ವ್ಯವಸ್ಥೆ ಇತ್ತೆಂದು ತಿಳಿದು ಬರುತ್ತದೆ.
5) ಸಿಂಧೂ ನಾಗರಿಕತೆಯ ಲಿಪಿಯು ಚಿತ್ರ ಲಿಪಿಗೆ ಸೀಮಿತವಾಗಿತ್ತು.
6) ಸಿಂಧೂ ನಾಗರಿಕತೆಯು ಭೌತಿಕ ನಾಗರಿಕತೆಯಾಗಿತ್ತು.
7) ಸಿಂಧೂ ನಾಗರಿಕತೆಯಲ್ಲಿ ಪ್ರಾಕ್ತನ ಆಧಾರಗಳು ಸಾಕಷ್ಟು ದೊರೆತಿವೆ.
8) ಸಿಂಧೂ ಸಂಸ್ಕೃತಿಯು ಸಂಪೂರ್ಣ ನಗರ ಸಂಸ್ಕೃತಿಯಾಗಿದ್ದು, ಜನರೆಲ್ಲರೂ ನಗರವಾಸಿಗಳು.
9) ಅಸ್ತಿತ್ವದ ಕಾಲ: ಸಿಂಧೂ ನಾಗರಿಕತೆ – ಕ್ರಿ.ಪೂ. 3000.
10) ಸಿಂಧೂ ಜನರು ಯುದ್ದಪ್ರಿಯರಲ್ಲಾ. ಇವರು ಶಾಂತಿಗೋಸ್ಕರ ರಕ್ಷಣಾ ಆಯುಧಗಳನ್ನು ಮಾತ್ರ ಹೊಂದಿದರು.
11) ಲಿಪಿ ಗೊತ್ತಿದ್ದರೂ ಸಿಂಧೂ ನಾಗರೀಕತೆ ಕಾಲದಲ್ಲಿ ಸಾಹಿತ್ಯ ರಚನೆಯಾಗಲಿಲ್ಲಾ.

12) ಸಿಂಧೂ ಜನರಿಗೆ ಡುಬ್ಬದ ಗೂಳಿ ಪವಿತ್ರವಾದ ಪ್ರಾಣಿಯೆನಿಸಿತು.

13) ಸಿಂಧೂ ನಾಗರೀಕತೆ ಕಾಲದಲ್ಲಿ ನೃತ್ಯ, ಚದುರಂಗದಂತಹ ಒಳಾಂಗಣ ಕ್ರೀಡೆಗಳು ಜನಪ್ರಿಯವಾಗಿದ್ದವು.

14) ಸಿಂಧೂ ನಾಗರೀಕತೆ ಜನರಿಗೆ ಕಬ್ಬಿಣದ ಬಳಕೆ ಗೊತ್ತಿರಲಿಲ್ಲಾ, ಕುದುರೆಯ ಬಗೆಗೆ ಗೊತ್ತಿರಲಿಲ್ಲಾ. ಜೊತೆಗೆ ವಿಭಕ್ತ ಕುಟುಂಬಗಳಾಗಿದ್ದವು.

15) ಸ್ತ್ರೀಯರು ಸಿಂಧೂ ನಾಗರಿಕತೆ ಕಾಲದಲ್ಲಿ ಸೌಂದರ್ಯ ಪ್ರಿಯರು. ಇಲ್ಲಿನ ಜನ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಚೆನ್ನಾಗಿ ನುರಿತಿದ್ದರು.

16) ಸಿಂಧೂ ನಾಗರೀಕತೆಯು ಪ್ರಜಾಸತ್ತೆ ಪ್ರಭುತ್ವದ ಜನಪ್ರಿಯತೆ ಹೊಂದಿದ್ದರು.

17) ಸಿಂಧೂ ನಾಗರೀಕರು ಮಾತೃದೇವರ ಆರಾಧಕರು ಮತ್ತು ಮಾತೃಪ್ರಧಾನ ಕುಟುಂಬ, ಮೂರ್ತಿ ಪೂಜೆ ರೂಢಿಯಲ್ಲಿತ್ತು.

18) ಶವ ಸಂಸ್ಕಾರ ಪದ್ದತಿ ಸಿಂಧೂ ಜನರದ್ದು ಹೂಳುವದಾಗಿತ್ತು.

19) ಈ ಸಿಂಧೂ ಸಂಸ್ಕೃತಿಯ ಕರ್ತೃಗಳನ್ನು ದ್ರಾವಿಡರೆಂದು ಭಾವಿಸಲಾಗಿದೆ.

20) ಸಿಂಧೂ ಲಿಪಿ ಬಲದಿಂದ ಎಡಕ್ಕೆ.

21) ಸಿಂಧೂ ಜನರು ಕಪ್ಪು ವರ್ಣದ ಚಪ್ಪಟೆ ಮೂಗುಳ್ಳ ದೃಢಕಾಯರು.

22) ಸಿಂಧೂ ನಾಗರೀಕತೆ ಜನರು ಉನ್ನತವಾದಂತಹ ಭೌತಿಕ ನಾಗರೀಕತೆಯನ್ನು ಸೃಷ್ಟಿಸಿದರು.

## ಆರ್ಯರು

1) ಆದರೆ ಆರ್ಯರು ಪ್ರಮುಖವಾಗಿ ಕೃಷಿ ಮತ್ತು ಪಶು ಸಂಗೋಪನೆಯನ್ನು ಮಾಡುತ್ತಿದ್ದರು.

2) ಆರ್ಯರಿಗೆ ಕಬ್ಬಿಣದ ಉಪಯೋಗ ತಿಳಿದಿತ್ತು.

3) ಆರ್ಯರು ವಸ್ತುಗಳ ವಿನಿಮಯದ ಮೂಲಕ ವ್ಯಾಪಾರ ನಡೆಸುತ್ತಿದ್ದರು.

4) ಆರ್ಯರು ವರ್ಗ ವಿಭಜನೆಯ ಸಮಾಜ ವ್ಯವಸ್ಥೆ ಹೊಂದಿದ್ದರು.

5) ಆರ್ಯರದ್ದು ಸಾಹಿತ್ಯ ರಚನೆಯ ಮಟ್ಟಕ್ಕೆ ಬೆಳೆದಿತ್ತು.

6) ಆರ್ಯರದ್ದು ಆಧ್ಯಾತ್ಮಿಕತೆಯದ್ದಾಗಿತ್ತು.

7) ಆರ್ಯರ ಕಾಲದಲ್ಲಿ ಪ್ರಾಕ್ತನ ಆಧಾರಗಳು ದೊರೆತಿಲ್ಲ.

8) ವೈದಿಕ ಸಂಸ್ಕೃತಿಯ ಬಹುಪಾಲು ಜನರು ಗ್ರಾಮವಾಸಿಗಳು.

9) ವೈದಿಕ ಸಾಹಿತ್ಯ ಕ್ರಿ.ಪೂ. 200–900.

10) ಆರ್ಯರು ಸಂಪೂರ್ಣ ಯುದ್ದ ಪ್ರಿಯರು. ಇವರು ಯುದ್ದ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು.

11) ವೈದಿಕ ಕಾಲದಲ್ಲಿ ಲಿಪಿ ಬಗ್ಗೆ ಜ್ಞಾನವಿಲ್ಲದಿದ್ದರೂ ಅಪಾರ ಪ್ರಮಾಣದ ಸಾಹಿತ್ಯ ಸೃಷ್ಟಿಯಾಯಿತು.

12) ಆರ್ಯರಿಗೆ ಹಸು ಪವಿತ್ರ ಪ್ರಾಣಿಯಾಯಿತು.

13) ವೈದಿಕ ಕಾಲದಲ್ಲಿ ರಥ ಸ್ಪರ್ಧೆ, ಬೇಟೆ ತರಹದ ಹೊರಾಂಗಣ ಕ್ರೀಡೆಗಳು ಅತೀ ಹೆಚ್ಚು ಜನಪ್ರಿಯವಾಗಿದ್ದವು.

14) ವೈದಿಕ ಸಂಸ್ಕೃತಿಯಲ್ಲಿ ಕಬ್ಬಿಣದ ಬಳಕೆ ಗೊತ್ತಿತ್ತು. ಕುದುರೆಯ ಅರಿವಿತ್ತು. ಇವು ಅವಿಭಕ್ತ ಕುಟುಂಬ ಹೊಂದಿದ್ದವು.

15) ವೈದಿಕ ಸಂಸ್ಕೃತಿಯಲ್ಲಿ ಸ್ತ್ರೀಯರು ಸೌಂದರ್ಯಪ್ರಿಯರಂತೆ ಕಂಡಿಲ್ಲಾ ಹಾಗೂ ಈ ಜನ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ನುರಿತವರಲ್ಲಾ.

16) ವೈದಿಕ ಸಂಸ್ಕೃತಿಯು ಅನುವಂಶಿಕ ರಾಜಪ್ರಭುತ್ವ ಹೊಂದಿತ್ತು.

17) ವೈದಿಕ ಜನರದ್ದು ಪುರುಷ ದೇವರ ಪ್ರಾಬಲ್ಯ, ಪಿತೃ ಪ್ರಧಾನ ಸಮಾಜ ಮೂರ್ತಿ ಪೂಜೆ ಇರಲಿಲ್ಲ.

18) ಶವ ಸಂಸ್ಕಾರ ಪದ್ದತಿ ವೈದಿಕ ಜನರು ಸುಡುತ್ತಿದ್ದರು.

19) ವೈದಿಕರನ್ನು ಆರ್ಯರೆಂದು ಗುರುತಿಸಲಾಗಿದೆ.

20) ವೈದಿಕ ಲಿಪಿ ಎಡದಿಂದ ಬಲಕ್ಕೆ.

21) ವೈದಿಕರ ಕೆಂಪು ವರ್ಣದ ಚೂಪ ಮೂಗುಳ್ಳ ಕುಳ್ಳಗಿನ ವ್ಯಕ್ತಿಗಳು.

22) ವೈದಿಕರು ತಾತ್ವಿಕ ಉನ್ನತಾದರ್ಶ ನಾಗರೀಕತೆ ನಿರ್ಮಿಸಿದರು.

ಹೀಗೆ ಹಲವಾರು ವ್ಯತ್ಯಾಸಗಳಿಂದಾಗಿ ಹರಪ್ಪ ಮತ್ತು ಆರ್ಯ ಸಂಸ್ಕೃತಿಗಳು ಬೇರೆ ಬೇರೆ ಎಂದು ತೀರ್ಮಾನಿಸಿ, ಹರಪ್ಪ ನಾಗರೀಕತೆಯು ಆರ್ಯ ನಾಗರಿಕತೆಗಿಂತ ಮುಂಚಿನದೆಂದು ತೀರ್ಮಾನಿಸಲಾಗಿದೆ.

## ಜಾತಿ ಮತ್ತು ವರ್ಣ ವ್ಯವಸ್ಥೆ ಉಗಮವಾದ ಬಗೆ:

### ವರ್ಣ ಪದ್ಧತಿಯ ಉಗಮ (ಏಣಿ ಶ್ರೇಣಿ ಪದ್ಧತಿ):

ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ 'ವೇದಕಾಲೀನ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಹಿಂದೂ ಸಮಾಜದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ 4 ಸಾಮಾಜಿಕ ಸ್ತರಗಳನ್ನು ಪ್ರತಿನಿಧಿಸಲು 'ವರ್ಣ' ಪದದ ಬಳಕೆ ಇತ್ತು.'

ವರ್ಣ ಎಂಬ ಸಂಸ್ಕೃತ ಪದವು 'ವೃ' ಎಂಬ ಮೂಲ ಪದದಿಂದ ಹುಟ್ಟಿದ್ದು, 'ಆಯ್ಕೆ ಮಾಡು' ಎಂಬರ್ಥವನ್ನು ನೀಡುತ್ತದೆ. ಇದು ವೃತ್ತಿ ಆಯ್ಕೆ ಅಥವಾ ಕರ್ಮದ ಆಯ್ಕೆ ಸೂಚಿಸುತ್ತದೆ.

### ವರ್ಣಗಳ ಹುಟ್ಟು:

ವರ್ಣಗಳ ಉಗಮಕ್ಕೆ ಸಂಬಂಧಿಸಿದಂತೆ 'ಸಾಂಪ್ರದಾಯಿಕ ಸಿದ್ಧಾಂತವು' ಒಂದಿಷ್ಟು ಮಾಹಿತಿ ನೀಡುತ್ತದೆ. ಈ ಸಿದ್ಧಾಂತದಂತೆ 'ಋಗ್ವೇದದ ಪುರುಷ ಸೂಕ್ತದಲ್ಲಿ ಬರುವ ವಿವರಣೆಯೇ ವರ್ಣಗಳಿಗೆ ಅತ್ಯಂತ ಪುರಾತನದ ಮಾಹಿತಿಯಾಗಿದೆ.

ಉತ್ತರ ವೈದಿಕ ಕಾಲದಲ್ಲಿ 'ವರ್ಣ' ಕಲ್ಪನೆ ಹುಟ್ಟಿ ನಂತರ ಜಟಿಲವಾಯಿತು. ಪ್ರಮುಖವಾಗಿ ವೃತ್ತಿಯ ಆಧಾರದ ಮೇಲೆ ಸಮಾಜವನ್ನು 'ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಎಂದು 4 ವರ್ಣಗಳಾಗಿ ವಿಭಾಗಿಸಿ ಇದನ್ನು 'ಚಾತುರ ವರ್ಣ' ಪದ್ಧತಿ ಎನ್ನಲಾಯಿತು.

'ಪ್ರಜಾಪತಿ ಬ್ರಹ್ಮನ ಮಹಾ ಶರೀರದ ಮುಖದಿಂದ ಬ್ರಾಹ್ಮಣನು, ಬಾಹುಗಳಿಂದ ಕ್ಷತ್ರಿಯನು, ತೊಡೆಗಳಿಂದ ವೈಶ್ಯನು ಮತ್ತು ಪಾದಗಳಿಂದ ಶೂದ್ರನು ಉತ್ಪತ್ತಿಯಾದರೆಂಬ ಭಾವನೆ ಮೊದಲಿನಿಂದಲೂ ಇದೆ.

### ಶ್ರಮ ವಿಭಜನೆ ಕ್ರಮವನ್ನು ಪ್ರತಿನಿಧಿಸುವ ವರ್ಣಗಳು:

ವರ್ಣಗಳು ಶ್ರಮ ವಿಭಜನೆಯ ತತ್ವವನ್ನು ಆಧರಿಸಿ ರೂಪುಗೊಂಡಿವೆ. ಬ್ರಹ್ಮನ ಬಾಯಿಯಿಂದ ಬಂದ ಬ್ರಾಹ್ಮಣರು ಅಧ್ಯಯನ, ಅಧ್ಯಾಪನ ಮತ್ತು ಪೌರೋಹಿತ್ಯದಲ್ಲಿ. ಭುಜದಿಂದ ಜನ್ಮತಳೆದ ಕ್ಷತ್ರಿಯರು, ರಾಜ್ಯಾಡಳಿತ, ಯುದ್ಧ ಮುಂತಾದವು. ತೊಡೆಗಳಿಂದ ಹುಟ್ಟಿದ ವೈಶ್ಯರು ವ್ಯಾಪಾರೋದ್ಯಮದಲ್ಲಿ. ಪಾದದಿಂದ ಶೂದ್ರರು ಈ ಮೇಲಿನ ಮೂರು ವರ್ಣಗಳಿಗೆ ಸೇವೆ ಸಲ್ಲಿಸುವ ಕಾರ್ಯ ಮಾಡಿದರು.

ಇಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ – ದ್ವಿಜರು. ಶೂದ್ರ – ದ್ವಿಜೇತರ ಎಂದು ಗುರುತಿಸಲಾಗಿದೆ.

ದ್ವಿಜರು ಮಾತ್ರ ಜನಿವಾರ ಧರಿಸುವಂತಿದ್ದು, ಸಂಸ್ಕಾರದಿಂದ 2ನೇ ಹುಟ್ಟು ಪಡೆದು ಅವರು ದ್ವಿಜರೆನಿಸಿದ್ದರು. ಪವಿತ್ರ ಧರ್ಮಗ್ರಂಥಗಳ ಅಧ್ಯಯನ ಮಾಡುತ್ತಿದ್ದರು. ದ್ವಿಜೇತರರಿಗೆ ಇವೆಲ್ಲವೂ ನಿಷೇಧವಾಗಿತ್ತು. ಆದರೆ ಇಲ್ಲಿ 'ಅಸ್ಪೃಶ್ಯ'ವೆಂದು ಪರಿಗಣಿತವಾದ ಧರ್ಮವಿರಲಿಲ್ಲ.

ವರ್ಣವೆಂಬುದು ಬಣ್ಣದಿಂದ ಹುಟ್ಟಿದ್ದು, ಋಗ್ವೇದ ಕಾಲದ ಆರ್ಯರು ಭಾರತದ ಮೂಲನಿವಾಸಿಗಳಾದ ಕಪ್ಪಾದ ದ್ರಾವಿಡರಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ಈ ವರ್ಣ ಪದ್ಧತಿಯನ್ನು ಹುಟ್ಟು ಹಾಕಿದರು. ಆದ್ದರಿಂದ ಋಗ್ವೇದದಲ್ಲಿ ವರ್ಣಪದ್ಧತಿ ಇದೆ. ಜಾತಿ ಪದ್ಧತಿ ಇಲ್ಲ. ಆಗ ಒಂದು ವರ್ಣದಿಂದ ಮತ್ತೊಂದು ವರ್ಣಕ್ಕೆ ಪರಿವರ್ತನೆ ಹೊಂದಬಹುದಿತ್ತು. ಶೂದ್ರನಾದವನು ತನ್ನ ಉತ್ತಮ ಆಚಾರದಿಂದ ಉತ್ತಮ ವರ್ಣ ಸ್ಥಾನ ಪಡೆಯಬಹುದಿತ್ತು. ಉದಾ: ವಸಿಷ್ಠ ವೈಶ್ಯನಾದರೂ ತನ್ನ ಗುಣಕರ್ಮದಿಂದ ಮಹರ್ಷಿ ಎನಿಸಿಕೊಂಡನು. ವಿಶ್ವಾಮಿತ್ರ ಕ್ಷತ್ರಿಯನಾದರೂ ಉದ್ಯೋಗದಿಂದ ಬ್ರಾಹ್ಮಣ ವೃತ್ತಿ ಕೈಗೊಂಡನು. ಪರಶುರಾಮ ಬ್ರಾಹ್ಮಣನಾದರೂ ಉದ್ಯೋಗದಿಂದ ಕ್ಷತ್ರಿಯನಾದ.

ಒಟ್ಟಾರೆಯಾಗಿ ಋಗ್ವೇದ ಕಾಲದಲ್ಲಿ ವರ್ಣ ವ್ಯವಸ್ಥೆ ಇದ್ದು ತಮ್ಮ ಪಾಲಿಗೆ ಬಂದದ್ದು ಕರ್ಮಫಲ ಎಂದು ಭಾವಿಸಿ ಅದೇ ವೃತ್ತಿಯಲ್ಲಿ ನೆಮ್ಮದಿ ಕಂಡುಕೊಂಡರು.

**ಜಾತಿ ಪದ್ಧತಿ:**

ಒಂದು ಸಮಾಜದ ಎಲ್ಲಾ ಸದಸ್ಯರು ಪಡಿಯಚ್ಚುಗಳಲ್ಲಾ. ಅವರು ಪರಸ್ಪರ ಭಿನ್ನತೆಯನ್ನು ಹೊಂದಿರುತ್ತಾರೆ. ಹೀಗೆ ವ್ಯಕ್ತಿಗಳು ಪಡೆದಿರುವ ಅಂತಸ್ತಿನ ಮೇಲೆ 'ಶ್ರೇಷ್ಠ–ಕನಿಷ್ಠ', 'ಮೇಲು–ಕೀಳು', 'ಉಚ್ಚ–ನೀಚ' ಎಂಬಂತಹ ವ್ಯವಸ್ಥೆಗೆ 'ಸಾಮಾಜಿಕ ಸ್ತರ ವಿನ್ಯಾಸ ಎನ್ನಬಹುದು. ಜಾತಿ ಮತ್ತು ವರ್ಗ ವ್ಯವಸ್ಥೆ ಈ ಸ್ತರ ವಿನ್ಯಾಸದ ಪ್ರಮುಖ ಭಾಗಗಳಾಗಿವೆ.

ಭಾರತದಲ್ಲಿನ ಜಾತಿಗೆ ಸರಿಸಮನಾದ ಪದ್ಧತಿಯು ಜಗತ್ತಿನ ಬೇರಾವ ದೇಶಗಳಲ್ಲಿಯೂ ಕಂಡುಬರುವುದಿಲ್ಲ. ಜಾತಿಯು ಭಾರತದ ಜೀವನ ದರ್ಶನ, ಧಾರ್ಮಿಕತೆ ರೂಢಿ ಸಂಪ್ರದಾಯದಲ್ಲಿ ಹಾಸುಹೊಕ್ಕಾಗಿದೆ. (4000ಕ್ಕೂ ಹೆಚ್ಚು ಉಪಜಾತಿಗಳೊಂದಿಗೆ).

'ಜಾತಿ ಎಂಬ ಪದವು ಆಂಗ್ಲಭಾಷೆಯ 'ಕಾಸ್ಟ್' ಎಂಬ ಪದದಿಂದ ಬಂದಿದ್ದು 'ಕಾಸ್ಟ್' ಎಂಬ ಪದವು ಪೋರ್ಚುಗೀಸ್ ಮೂಲದ ಕಾಸ್ಟಾ ಎಂಬ ಪದದಿಂದ ಬಂದಿದೆ. ಇದರರ್ಥ ಅನುವಂಶೀಯತೆ ಅಥವಾ ತಳಿ ಅಥವಾ ಜನಾಂಗ.

**ಉಗಮ:**

ಭಾರತೀಯ ಸಮಾಜದ ಅವಿಭಾಜ್ಯ ಅಂಗದಂತಿರುವ ಜಾತಿ ವ್ಯವಸ್ಥೆಗೆ ತನ್ನದೇ ಆದ ಒಂದು ದೀರ್ಘವಾದ ಇತಿಹಾಸವಿದೆ. ಇದು ಯಾವ ನಿಗದಿತ ಕಾಲಾವಧಿಯಲ್ಲಿ ಎಂಲತಹ ನಿಶ್ಚಿತ ಒತ್ತಡಗಳಲ್ಲಿ ಹುಟ್ಟಿತೆಂದು ಹೇಳುವುದು ಕಷ್ಟಕರ.

**ಜಾತಿಯ ಲಕ್ಷಣಗಳು:**

1) ಇದು ಸಮಾಜದ ಹೋಳು ಹೋಳಾದ ಭಾಗವಾಗಿದೆ.

2) ಏಣಿ ಶ್ರೇಣಿ ಪದ್ಧತಿ ಹೊಂದಿದೆ.

3) ಊಟೋಪಚಾರ ಮತ್ತು ಸಾಮಾಜಿಕ ಸಂಪರ್ಕದ ಮೇಲೆ ನಿರ್ಬಂಧ ಹೇರುತ್ತದೆ.

4) ಲೌಕಿಕ ಮತ್ತು ಧಾರ್ಮಿಕ ದೌರ್ಬಲ್ಯಗಳಿಂದ ಕೂಡಿದೆ.

5) ಒಳಬಾಂಧವ್ಯ ವಿವಾಹವಿದೆ.

6) ವೃತ್ತಿಯ ಮೇಲೆ ನಿರ್ಬಂಧವಿದೆ.

ಇಲ್ಲಿ ಪ್ರಮುಖವಾಗಿ ವೇದಗಳ ಕಾಲದಲ್ಲಾದ ಜಾತಿಯ ಉಗಮದ ಬಗೆಗೆ ನೋಡುವುದಾದರೆ,

ಋಗ್ವೇದದ '10ನೇ ಮಂಡಲದ' ಪುರುಷ ಸೂಕ್ತದಲ್ಲಿ ಜಾತಿಪದ್ಧತಿಯ ಉಲ್ಲೇಖವಿದೆ. ಋಗ್ವೇದದ ಕಾಲದಲ್ಲಿ ಜಾತಿ ಇನ್ನೂ ಸ್ಪಷ್ಟವಾಗಿ ರೂಪುಗೊಂಡಿರಲಿಲ್ಲ. ಆಗ ವೃತ್ತಿ ಅನುವಂಶಿಕವಾಗಿರಲಿಲ್ಲ. ಉತ್ತರ ವೈದಿಕ ಕಾಲದಲ್ಲಿ ಜಾತಿ ಪದ್ದತಿಯು ಹೆಚ್ಚು ಸಂಕೀರ್ಣಗೊಂಡಿತು. ಕಾರಣ ವೃತ್ತಿ ಅನುವಂಶೀಯವಾಗಿತ್ತು. ಜಾತಿಯು ವೃತ್ತಿಯನ್ನು ನಿರ್ಧರಿಸುವ ಏಕೈಕ ಸಾಧನವಾಯಿತು. ವರ್ಣ ಬದಲಾವಣೆಗೆ ಅಥವಾ ಜಾತಿ ಬದಲಾವಣೆಗೆ ಅವಕಾಶವೇ ಇಲ್ಲದಂತಾಯಿತು. ಅವನ ಹುಟ್ಟೇ ಅವನ ಜಾತಿ ನಿರ್ಣಯ ಮಾಡುತ್ತಿತ್ತು. ಯಾರು ಯಾವ ಜಾತಿಯಲ್ಲಿ ಹುಟ್ಟುತ್ತಾರೋ ಅವರು ಅದೇ ಜಾತಿಯಲ್ಲಿ ವೃತ್ತಿ ಅನುಸರಿಸಬೇಕೆಂಬ ಕಟ್ಟಳೆ ನಿರ್ಮಾಣವಾಯಿತು.

ಒಟ್ಟಾರೆಯಾಗಿ ನೋಡಿದಾಗ 5 ಜಾತಿ ಗುಂಪುಗಳು ಇಲ್ಲಿ ಗೋಚರಿಸಲಾರಂಭಿಸಿದವು. ಅವುಗಳೆಂದರೆ,

1) ದ್ವಿಜರು.

2) ದ್ವಿಜರು ಯಾವ ಜಾತಿಗಳಿಂದ ಆಹಾರ ಸ್ವೀಕರಿಸುವರೋ ಅವರು.

3) ಯಾವ ಜಾತಿಗಳಿಂದ ದ್ವಿಜರು ನೀರಿನ ಹೊರತಾಗಿ ಬೇರೇನನ್ನೂ ಸ್ವೀಕರಿಸಬಾರದೋ ಅವರು.

4) ದ್ವಿಜರು ನೀರನ್ನೂ ಸ್ವೀಕರಿಸಬಾರದೋ ಆ ಜನರೂ.

5) ದ್ವಿಜರನ್ನು ಸ್ಪರ್ಶಿಸಲೂ ಸಾಧ್ಯವಾಗದವರು (ಅಸ್ಪೃಶ್ಯರು).

ಸಾತ್ವಿಕ ಕುಟುಂಬದಲ್ಲಿ ಹುಟ್ಟಿ ಸಾತ್ವಿಕ ಗುಣಗಳಿಲ್ಲದಿದ್ದರೂ ಬ್ರಾಹ್ಮಣನು ಅದೇ ವೃತ್ತಿ ಕೈಗೊಳ್ಳುತ್ತಿದ್ದ.

ರಜೋ ಗುಣವಿಲ್ಲದೇ ಹುಟ್ಟಿದ ಕ್ಷತ್ರಿಯ ಅದೇ ವೃತ್ತಿ ಮುಂದುವರೆಸಬೇಕಿತ್ತು. ತಮೋ ಮತ್ತು ಸಾತ್ವಿಕ ಗುಣವುಳ್ಳ ವೈಶ್ಯ ಉತ್ತಮ ಸಂಸ್ಕಾರದಿಂದ ಸಾತ್ವಿಕ ಗುಣವನ್ನು ಪಡೆದರೂ ಬ್ರಾಹ್ಮಣನಾಗುವಂತಿರಲಿಲ್ಲ. ಒಟ್ಟಾರೆಯಾಗಿ ಜಾತಿ ಒಂದು ಮುಚ್ಚಿದ ವ್ಯವಸ್ಥೆಯಾಗಿ ನಿಂತಿತು.

ದಿನಕಳೆದಂತೆ ಕಸುಬುಗಳು ಹೆಚ್ಚಾದಂತೆಲ್ಲಾ ಅನೇಕ ಉಪಕಸುಬುಗಳು ಹೆಚ್ಚಿ ಅನೇಕ ಜಾತಿ, ಉಪಜಾತಿ ಹೆಚ್ಚಿದವು. ಶೂದ್ರರನ್ನು ಅಶುದ್ದರೆಂದು ಪರಿಗಣಿಸಲಾಯಿತು. ಅಸ್ಪೃಶ್ಯತ ಆಚರಣೆ ಜಾರಿಗೆ ಬಂತು.

## ವರ್ಣ ಮತ್ತು ಜಾತಿಯ ನಡುವೆ ವ್ಯತ್ಯಾಸಗಳು:

**ವರ್ಣ:**

1) ವರ್ಣ ವ್ಯವಸ್ಥೆಯು ಒಂದು ಮುಕ್ತ ವ್ಯವಸ್ಥೆಯಾಗಿದೆ.

2) ವ್ಯಕ್ತಿಯ ಗುಣ ಮತ್ತು ಕರ್ಮಾಚರಣೆ ಆಧಾರದ ಮೇಲೆ ವರ್ಣ ನಿರ್ಧಾರ.

3) ಇಲ್ಲಿ ಸಮಾನಾಂತರ ಮತ್ತು ಲಂಬ ಚಲನೆಗೆ ಅವಕಾಶ.

4) ಚತುರ್ವರ್ಣ ಸಿದ್ಧಾಂತದಂತೆ 4 ವರ್ಣಗಳು ಮಾತ್ರ ಇವೆ.

5) ಮುಕ್ತತೆ ದೃಷ್ಟಿಯಲ್ಲಿ ಪ್ರಸ್ತುತ ವರ್ಗ ವ್ಯವಸ್ಥೆಗೆ ಸಮವಾಗಿದೆ. ಇಂದು ಆಚರಣೆಯಲ್ಲಿಲ್ಲಾ.

6) ಇದಕ್ಕೆ ಮತಧರ್ಮದ ಬೆಂಬಲವಿತ್ತು.

7) ನಮ್ಯತೆಯಿಂದ ಕೂಡಿದೆ ಮತ್ತು ವ್ಯಕ್ತಿಯ ಬುದ್ದಿವಂತಿಕೆ ಪ್ರತಿಭೆ ಮತ್ತು ಜ್ಞಾನವನ್ನಾಧರಿಸಿದೆ.

8) ವರ್ಣಗಳ ನಡುವೆ ವಿವಾಹಕ್ಕೆ ಅನುಮತಿ.

9) ವರ್ಣ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯ ಪ್ರಸ್ತಾಪವಿಲ್ಲಾ.

**ಜಾತಿ:**

1) ಜಾತಿ ವ್ಯವಸ್ಥೆಯು ಒಂದು ಮುಚ್ಚಿದ ವ್ಯವಸ್ಥೆಯಾಗಿದೆ.

2) ಹುಟ್ಟಿನಿಂದಲೇ ನಿರ್ಧಾರ.

3) ಲಂಬ ಚಲನೆಗೆ ಅವಕಾಶವಿಲ್ಲಿಲ್ಲ.

4) 4000ಕ್ಕೂ ಹೆಚ್ಚು ಜಾತಿಗಳಿವೆ.

5) ಸರ್ವವ್ಯಾಪಕವಾದ ಆಚರಣೆ.

6) ದೈವಿಕ ಬೆಂಬಲವಿದೆ ಎಂದು ನಂಬಲಾಗಿತ್ತು.

7) ಕಠಿಣವಾಗಿದೆ ಮತ್ತು ಜಾತಿಯ ಸ್ಥಾನ ಬದಲಾಗುವುದಿಲ್ಲ.

8) ಅನುಮತಿ ಇಲ್ಲ.

9) ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯ ಪ್ರಸ್ತಾಪವಿದೆ.

**ಧಾರ್ಮಿಕ ಸ್ಥಿತಿಗಳು: ಕಾರಣಗಳು:**

1) ಬ್ರಾಹ್ಮಣ ಶ್ರೇಷ್ಠತೆ

2) ದುಬಾರಿ ಯಜ್ಞ ಯುಗಾದಿ

3) ಕೆಲವೇ ವರ್ಗಕ್ಕೆ ವೇದಗಳ ಅಧ್ಯಯನ ಸೀಮಿತ

4) ವೈಶ್ಯರ ಪ್ರಾಬಲ್ಯತೆ

5) ಕೃಷಿ ಸಂಪತ್ತಿನ ಹೆಚ್ಚಳ

6) ಪಶು ಹತ್ಯೆ ವಿರೋಧಿಸಿ

7) ನಗರೀಕರಣ

8) ಹೊಸ ರಾಜಮನೆತನಗಳ ಉದಯ

9) ಮೋಕ್ಷದ ಮಾರ್ಗಗಳ ಅರಿವಿನಲ್ಲಿ ಕೊರತೆ

10) ಪುರೋಹಿತ ಪ್ರಾಬಲ್ಯ ಭಾಷೆ

11) ಸಾಮಾಜಿಕ ನಿಕೃಷ್ಟ ಸ್ಥಿತಿ ವಿರುದ್ಧ ದಂಗೆ (ಬಾಲ್ಯ ವಿವಾಹ, ಸತಿಸಹಗಮನ ಇತ್ಯಾದಿ).

## ವೈದಿಕ ಸಾಹಿತ್ಯ:

ವೈದಿಕ ಸಾಹಿತ್ಯವು ಪ್ರಪಂಚದ ಅತ್ಯಂತ ಪುರಾತನ ಸಾಹಿತ್ಯವಾಗಿದೆ. ಇದು ಹಿಂದೂಗಳಿಗೆ ಪೂಜನೀಯವಾದುದು. ವೈದಿಕ ಸಾಹಿತ್ಯವು ಹಿಂದೂ ಧರ್ಮದ ಅಡಿಪಾಯವಾಗಿದೆ. ಈ ಸಾಹಿತ್ಯವು ಪವಿತ್ರ ಜ್ಞಾನದ ಮೂಲವಾಗಿದ್ದು, ಸಂಸ್ಕೃತದ ಶ್ಲೋಕಗಳ ರೂಪಾಂತರದಲ್ಲಿದೆ. ಪ್ರಾಚೀನ ಭಾರತದ ಋಷಿಗಳಾದ ವಿಶ್ವಾಮಿತ್ರ, ಭಾರದ್ವಾಜ, ಕಣ್ವ, ವಸಿಷ್ಠ, ನಾರಾಯಣ, ಅತ್ರಿ, ಕಶ್ಯಪ, ವಾಸುದೇವ ಮುಂತಾದವರಿಂದ ಬರೆಯಲಾಗಿದೆ.

ವೈದಿಕ ಸಾಹಿತ್ಯವು ಮುಖ್ಯವಾಗಿ ಕಂಠಪಾಠದ ಮೂಲಕ ಕೇಳಿ ಕಲಿತು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದು ಬಂದು ಗುಪ್ತರ ಕಾಲದಲ್ಲಿ ಗ್ರಂಥರೂಪ ಪಡೆಯಿತು. ಇದು ವೈದಿಕ ಧರ್ಮ ಮೂಲಗಳಿಂದ ಜ್ಞಾನ, ಕರ್ಮ, ಭಕ್ತಿ ಸಿದ್ಧಾಂತಗಳ ಆಧಾರದ ಮೇಲೆ ರಚಿತವಾಗಿವೆ. ವೈದಿಕ ಸಾಹಿತ್ಯವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

1) ಶೃತಿ – ವೇದಗಳು, ಬ್ರಾಹ್ಮಣಕಗಳು, ಅರಣ್ಯಕಗಳು, ಉಪನಿಷತ್‌ಗಳು.

2) ಸ್ಮೃತಿ – ವೇದಾಂಗಗಳು, ಧರ್ಮಶಾಸ್ತ್ರಗಳು, ಉಪವೇದಗಳು, ಮಹಾಕಾವ್ಯ, ಪುರಾಣಗಳು.

**ವಿವರಣೆ:**

**ವೇದಗಳು: ಕ್ರಿ.ಪೂ. 2500)**

ವೇದಗಳು ಭಾರತದ ಅತ್ಯಂತ ಪ್ರಾಚೀನ ಧಾರ್ಮಿಕ ಸಾಹಿತ್ಯ ಕೃತಿಯಾಗಿದೆ. ವೈದಿಕ ಸಾಹಿತ್ಯದಲ್ಲಿ ವೇದಗಳು ಅಗ್ರಸ್ಥಾನ ಪಡೆದಿವೆ. ಆರ್ಯರು ವೇದಗಳ ಕರ್ತೃ. ಸಂಸ್ಕೃತದಲ್ಲಿರುವ ಈ ವೇದಗಳು ಮಾನವನಿಂದ ರಚಿತವಾಗಿರದೆ, ದೇವರ ಪ್ರೇರಣೆಯಿಂದ ಋಷಿಮುನಿಗಳು ರಚಿಸಿರುವ ಅಪೌರುಷೇಯ ಸಂಹಿತೆಗಳಾಗಿವೆ. ವೇದಗಳಲ್ಲಿ ನಾಲ್ಕು ವೇದಗಳಿವೆ. ಪ್ರತಿಯೊಂದು ವೇದವೂ ಸಹ ಉಪವೇದಗಳನ್ನು ಹೊಂದಿವೆ. ನಾಲ್ಕು ವೇದಗಳು:

1) ಋಗ್ವೇದ: ಇದರಲ್ಲಿ 1028 ಶ್ಲೋಕಗಳಿವೆ. ಪ್ರಮುಖವಾಗಿ ಗಾಯತ್ರಿ ಮಂತ್ರವಿದೆ. ಇದು ಧಾರ್ಮಿಕ ಕೃತಿಯಾಗಿದ್ದರೂ ಸಹ ಆರ್ಯರ ರಾಜಕೀಯ, ಸಾಮಾಜಿಕ, ಆರ್ಥಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ವೈದಿಕ ಜನರ ಪರಲೌಕಿಕ ಕಲ್ಪನೆಗಳು ಇದರಲ್ಲಿ ಕಂಡುಬರುತ್ತವೆ.
2) ಯಜುರ್ವೇದ: ಯಜ್ಞ ಯಾಗಾದಿಗಳ ಆಚರಣೆ ಮತ್ತು ಪ್ರಾರ್ಥನೆಗಳನ್ನು ಒಳಗೊಂಡ ಗ್ರಂಥವಾಗಿದೆ.
3) ಸಾಮವೇದ: ಇದು ಸಂಗೀತದ ಪ್ರಸ್ತಾಪ, ಗಾಯನ ಮತ್ತು ರಾಗಗಳ ಸಂಕಲನ ಗ್ರಂಥವಾಗಿದೆ.
4) ಅಥರ್ವಣವೇದ: ಮಾನವನ ಅತೀಂದ್ರಿಯ ಶಕ್ತಿಗಳ ನಿಯಂತ್ರಣ, ಮಾಟ, ಮಂತ್ರ, ತಂತ್ರ, ವಿದ್ಯೆ, ಇಂದ್ರಜಾಲ ಮುಂತಾದವುಗಳ ಕುರಿತಾದ ಚಿತ್ರಣ ನೀಡುತ್ತದೆ.

**ಬ್ರಾಹ್ಮಣಕಗಳು:**

ವೇದಗಳ ಮೇಲೆ ರಚಿಸಿದ ಅನುಬಂಧ ವ್ಯಾಖ್ಯಾನಗಳೇ ಬ್ರಾಹ್ಮಣಕಗಳು. ವೇದಗಳು ಶ್ಲೋಕ ರೂಪದಲ್ಲಿದ್ದು, ಶ್ರೀ ಸಾಮಾನ್ಯರಿಗೆ ತಿಳಿಯುವಂತೆ ಗದ್ಯ ರೂಪದಲ್ಲಿ ರಚಿಸಲಾಯಿತು.

**ಉಪನಿಷತ್ತುಗಳು:**

ಉಪನಿಷತ್ ಎಂದರೆ ಗುರುವಿನ ಬಳಿ ಶಿಷ್ಯ ಕುಳಿತು ಕಲಿಯುವುದು. ಈ ಕೃತಿಗಳು ಆರ್ಯರ ಆಧ್ಯಾತ್ಮಿಕ ಚಿಂತನೆಗಳನ್ನು ಒಳಗೊಂಡಿದೆ. ಸುಮಾರು 108 ಉಪನಿಷತ್ತುಗಳು ರಚನೆಯಾಗಿದ್ದು, ಇವು ತತ್ವಶಾಸ್ತ್ರದ ಕುರಿತಂತೆ ವಿವರಿಸುತ್ತವೆ. ಇದು ವೈದಿಕ ಸಾಹಿತ್ಯದ ಕಡೆಯ ಭಾಗವಾಗಿದ್ದು, ಇದನ್ನು ವೇದಾಂತ ಎನ್ನುವರು. ಈ ಉಪನಿಷತ್ತುಗಳ ಕುರಿತು ಮ್ಯಾಕ್ಸ್ ಮುಲ್ಲರ್ 'ಮಾನವನ ಬುದ್ಧಿಶಕ್ತಿಯ ಅದ್ಭುತ ರಚನೆಗಳು' ಎಂದು ಕರೆದಿದ್ದಾನೆ.

**ವೇದಾಂಗಗಳು:**

1) ಕಲ್ಪ 2) ಶಿಕ್ಷಾ 3) ವ್ಯಾಕರಣ 4) ನಿರುಕ್ತ 5) ಛಂದಸ್ಸು 6) ಜ್ಯೋತಿಷ್ಯ

**ಉಪವೇದಗಳು:**

ಈಗಾಗಲೇ ಹೇಳಿದಂತೆ ಪ್ರತಿಯೊಂದು ವೇದವು ಉಪವೇದವನ್ನು ಹೊಂದಿತ್ತು. ಅವುಗಳು ಈ ರೀತಿಯಾಗಿವೆ.

1) ಋಗ್ವೇದದ ಉಪವೇದ ಆಯುರ್ವೇದ. ಇದು ಔಷಧ, ಗಿಡ ಮೂಲಿಕೆಗಳ ಕುರಿತಾದ ಮಾಹಿತಿ ನೀಡುತ್ತದೆ.
2) ಯಜುರ್ವೇದದ ಉಪವೇದ ಧನುರ್ವೇದ. ಇದು ಯುದ್ಧ ಕಲೆಯನ್ನು ವಿವರಿಸುತ್ತದೆ.
3) ಸಾಮವೇದದ ಉಪವೇದ ಗಂಧರ್ವ ವೇದ. ಇದು ಸಂಗೀತ, ನೃತ್ಯದ ಕುರಿತಾದ ರಚನೆಗಳನ್ನು ಹೊಂದಿದೆ.
4) ಅಥರ್ವಣವೇದದ ಉಪವೇದ ಶಿಲ್ಪವೇದವು ವಾಸ್ತುಶಿಲ್ಪದ ಕುರಿತು ವಿವರಿಸುವ ಕೃತಿಯಾಗಿದೆ.

## ಮಹಾಕಾವ್ಯಗಳು:

ರಾಮಾಯಣ ಹಾಗೂ ಮಹಾಭಾರತಗಳು ಹಿಂದೂ ಧರ್ಮದಲ್ಲಿ ಪ್ರಚಲಿತವಿರುವ ಸಂಸ್ಕೃತದ ಉತ್ಕೃಷ್ಟ ಮಹಾಕಾವ್ಯಗಳೆಂದು ಪರಿಗಣಿಸಲ್ಪಟ್ಟಿವೆ.

## ರಾಮಾಯಣ:

ರಾಮಾಯಣದ ಕರ್ತೃ ವಾಲ್ಮೀಕಿ ಎಂದು ಪರಂಪರೆ ತಿಳಿಸುತ್ತದೆ. ತನ್ನ ಮಲತಾಯಿ ಕೈಕೇಯಿಯ ಅಸೂಯೆಗೊಳಗಾಗಿ ರಾಜಕುಮಾರನಾದ ರಾಮನು ಹದಿನಾಲ್ಕು ವರ್ಷಗಳ ಕಾಲ ರಾಜ್ಯ ತ್ಯಜಿಸಿ, ತನ್ನ ಪತ್ನಿ ಸೀತೆ ಮತ್ತು ತಮ್ಮ ಲಕ್ಷ್ಮಣನೊಂದಿಗೆ ವನವಾಸಕ್ಕೆ ಹೋದುದು. ಸೀತೆಯನ್ನು ಲಂಕಾಧಿಪತಿ ರಾವಣನು ಅಪಹರಿಸಿದುದು, ಘೋರ ಯುದ್ಧಾ ನಂತರ ಸೀತೆಯನ್ನು ರಕ್ಷಿಸಿ ಮರಳಿ ಪಡೆದುದು ಇದರ ಕಥೆ.

ಮೂಲಭೂತವಾಗಿ ರಾಮಾಯಣವು ಒಂದು ಕಾವ್ಯ ಸೃಷ್ಟಿಯಾದುದರಿಂದ, ಅನಂತರ ಬಂದ ಕವಿಗಳ ಚಿಂತನೆ ಮತ್ತು ಕಾವ್ಯಗಳ ಮೇಲೆ ಅದು ಪ್ರಭಾವ ಬೀರಿತು. ಅದರಿಂದ, ಕಾಲಕ್ರಮೇಣ ಕಾವ್ಯದೊಂದಿಗೆ ಹೊಸ ವಿಚಾರಗಳು ಬಂದು ಸೇರಿಸಿಕೊಂಡವು. ಪ್ರಸ್ತುತ ರಾಮಾಯಣದಲ್ಲಿ ಏಳು ಕಾಂಡಗಳೂ, 24000 ಶ್ಲೋಕಗಳು ಇವೆ. ರಾಮಾಯಣ ಗ್ರಂಥವನ್ನು ಮೂರು ಪರಿಷ್ಕೃತ ಪಾಠಗಳಲ್ಲಿ ಜೋಪಾನ ಮಾಡಲಾಗಿದೆ. ಅವೆಂದರೆ, ವಾಯುವ್ಯ, ದಕ್ಷಿಣಾತ್ಯ, ಮತ್ತು ಪೌರ್ವಾತ್ಯ ಪಾಠಗಳು. ಮುಂಬಯಿಯ ಪರಿಷ್ಕೃತ ಪಾಠವು ಈ ಮಹಾಕಾವ್ಯದ ಅತ್ಯಂತ ಹಳೆಯ ಪಾಠವೆಂದು ನಂಬಲಾಗಿದೆ. ರಾಮಾಯಣವನ್ನು ಒಂದೇ ಕಾಲದಲ್ಲಿ ಬರೆದಿದ್ದಲ್ಲ ಎಂಬುದು ಸ್ಪಷ್ಟ. ಮೊದಲ ಕಾಂಡಕ್ಕೂ ಮುಂದಿನ ಐದು ಪ್ರಕ್ಷಿಪ್ತವಲ್ಲದ ಕಾಂಡಗಳಿಗೂ ಬಳಸಿರುವ ಶೈಲಿ ಮತ್ತು ಭಾಷೆಗಳಲ್ಲಿ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಅಲ್ಲದೇ ಮೊದಲ ಮತ್ತು ಏಳನೆಯ ಕಾಂಡಗಳಲ್ಲಿ ಬರುವ ಕಥಾನಾಯಕನ ಚಿತ್ರಣಕ್ಕೂ, ಉಳಿದ ಐದು ಕಾಂಡಗಳಲ್ಲಿ ಬರುವ ಕಥಾನಾಯಕನ ಚಿತ್ರಣಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಒಟ್ಟೂ ಕಾವ್ಯಸೃಷ್ಟಿ ಯಾವಾಗ ಆಯಿತೆಂದು ನಿರ್ದಿಷ್ಟವಾಗಿ ಕಾಲನಿರ್ಣಯಕ್ಕೆ ಬರುವುದು ಕಷ್ಟವಾಗುತ್ತದೆ. ಮಹಾಭಾರತವು ಈಗಿನ ಗಾತ್ರದಲ್ಲಿ ಕ್ರಿ.ಶ.4ನೆಯ ಶತಮಾನದಲ್ಲಿ ತೋರಿಕೊಂಡಿದ್ದರೆ, ರಾಮಾಯಣವು ಅದಕ್ಕೆ ಸುಮಾರು ಒಂದೆರಡು ಶತಮಾನಗಳಿಗೆ ಮುಂಚೆಯೇ ತನ್ನ ಪೂರ್ಣ ಗಾತ್ರದಲ್ಲಿ ಲಭ್ಯವಾಗಿರಬಹುದೆಂಬುದು ವಿಂಟರ್ನಿಟ್ಜರ ಅಭಿಪ್ರಾಯವಾಗಿದೆ.

## ಮಹಾಭಾರತ:

ಮಹಾಭಾರತವನ್ನು ರಾಮಾಯಣದಂತೆ ಒಂದು ಕಾವ್ಯ ಸೃಷ್ಟಿಯಾಗಿ ಪರಿಗಣಿಸದೆ, ಒಂದು ಸಮಗ್ರ ವಾಙ್ಮಯವೆಂದು ಪುರಸ್ಕರಿಸಲಾಗಿದೆ. ಕೌರವರು ಮತ್ತು ಪಾಂಡವರಲ್ಲಿ ಹದಿನೆಂಟು ದಿನಗಳು ನಡೆದ ಮಹಾಕುರುಕ್ಷೇತ್ರ ಯುದ್ಧವು ಇದರ ಕೇಂದ್ರ ವಸ್ತು. ಈ ಮಹಾಯುದ್ಧದಲ್ಲಿ ಬಹುಪಾಲು ಸಮಕಾಲೀನ ರಾಜರುಗಳು ಒಂದಲ್ಲ ಒಂದು ಪಕ್ಷವನ್ನು ವಹಿಸಿ ಹೋರಾಡಿದರು. ಪರಿಣಾಮವೆಂದರೆ, ಕೌರವರ ನಾಶ ಮತ್ತು ಪಾಂಡವರ ಸಾರ್ವಭೌಮಾಧಿಪತ್ಯ. ಕಾಲಸರಿದಂತೆ ಹೊಸ ಹೊಸ ಅರಸರ ಉಪಾಖ್ಯಾನಗಳೂ, ಅಖ್ಯಾಯಿಕೆಗಳೂ ಇದರ ಕೇಂದ್ರ ವಸ್ತುವಿನಲ್ಲಿ ಬಂದು ಸೇರಿಕೊಂಡವು. ಅಂದಿನಿಂದ ರಾಜಕೀಯ ಹಾಗೂ ಸಾಮಾಜಿಕ ನಡಾವಳಿಯನ್ನು ಅನುಸರಿಸಿ, ಮಾನವನ ಬದುಕಿನ ವಿವಿಧ ಮುಖಗಳು ಅದರಲ್ಲಿ ಕಾಣಿಸಿಕೊಂಡವು. ಈ ಕಾರ್ಯವು ಅನೇಕ ಶತಮಾನಗಳವರೆಗೆ ನಡೆದುಕೊಂಡು ಬಂದು, ಕ್ರಿಸ್ತಶಕದ ಆದಿಯಲ್ಲಿ ಈ ಮಹಾಕಾವ್ಯವು ಒಂದು ಲಕ್ಷ ಶ್ಲೋಕಗಳನ್ನು ಒಳಗೊಂಡು ಈಗಿನ ರೂಪವನ್ನು ತಾಳಿತು. ಮಹಾಭಾರತವನ್ನು ಹದಿನೆಂಟು ಪರ್ವಗಳಾಗಿ ವಿಭಜಿಸಲಾಗಿದೆ. ಇದಕ್ಕೆ ಅನುಬಂಧವಾಗಿ 'ಹರಿವಂಶ' ಎಂಬ ಕೃತಿಯು ಹೊರಬಂದಿತು. ವಿಖ್ಯಾತವಾದ ಭಗವದ್ಗೀತೆಯು ಮಹಾಭಾರತದ ಭೀಷ್ಮ ಪರ್ವದಲ್ಲಿ ಬರುತ್ತದೆ. ಇದು ಪವಿತ್ರ ಗ್ರಂಥವೆಂದು ಪುರಸ್ಕರಿಸಲ್ಪಟ್ಟು ಹಲವು ಶತಮಾನಗಳಿಂದ ಲಕ್ಷಾಂತರ ಜನ ಇದನ್ನು ಓದಿ ಮೆಚ್ಚಿಕೊಂಡಿದ್ದಾರೆ.

ಈ ಮಹಾಕಾವ್ಯವು ಈಗಿನ ಗಾತ್ರದಲ್ಲಿ ತೋರಿಸಿಕೊಳ್ಳುವುದಕ್ಕೆ ಮೊದಲು ಮೂರು ಪ್ರಮುಖ ಘಟ್ಟದಲ್ಲಿ ಬೆಳೆದು ಬಂದಿತು. ಕ್ರಿ.ಶ. 500ರ ವೇಳೆಗೆ ಮಹಾಭಾರತವು ಮಹಾಕಾವ್ಯ ರೂಪಕ್ಕಿಂತ ಮಿಗಿಲಾದ ಸ್ಥಾನವನ್ನು ಗಳಿಸಿಕೊಂಡಿತೆಂಬುದನ್ನು ಸಾಹಿತ್ಯಿಕ ಹಾಗೂ ಶಾಸನಗಳ ಆಧಾರಗಳಿಂದ ತಿಳಿದು ಬರುತ್ತದೆ. ಈಗಿರುವುದೊಂದು

ಪವಿತ್ರ ಗ್ರಂಥವೆಂದೂ, ಧಾರ್ಮಿಕ ಗ್ರಂಥವೆಂದೂ ಮಾನ್ಯ ಮಾಡಲ್ಪಟ್ಟಿತು. ಕ್ರಿ.ಪೂ. 4ನೆಯ ಶತಮಾನದಲ್ಲಿ ಮಹಾಭಾರತವು ಮಹಾಕಾವ್ಯ ರೂಪದಲ್ಲಿ ಕಾಣಿಸಿಕೊಂಡಿರಲಿಲ್ಲವೆಂಬುದು ನಾವು ಗಮನಿಸಬೇಕಾದ ಅಂಶ. ಮೂಲ ಕಥೆಯು ಈಗಿರುವ ಸಂಕಲನ ರೂಪದಲ್ಲಿ ಮಾರ್ಪಾಡಾಗಲು, ಕ್ರಿ.ಪೂ. 4ನೆಯ ಶತಮಾನದಿಂದ, ಕ್ರಿ.ಶ. 4ನೆಯ ಶತಮಾನದವರೆಗಿನ ನಡುವಿನ ದೀರ್ಘಕಾಲ ಬೇಕಾಯಿತು.

### ಪುರಾಣಗಳು:

ಪುರಾಣವೆಂದರೆ, 'ಪ್ರಾಚೀನವಾದ ಕಥನ' ಎಂದರ್ಥ. ಬ್ರಾಹ್ಮಣಗಳಲ್ಲಿ, ಉಪನಿಷತ್ತುಗಳಲ್ಲಿ ಮತ್ತು ಬೌದ್ಧ ಗ್ರಂಥಗಳಲ್ಲಿ ಈ ಶಬ್ದವು ಇತಿಹಾಸ ಎಂಬ ಪದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗಿದೆ. ಸಂಸ್ಕೃತ ಶಬ್ದಕೋಶ ಅಮರಕೋಶದ ಕರ್ತೃ ಅಮರಸಿಂಹನು ಪುರಾಣವು ಐದು ಬಗೆಯ ವಿಷಯಗಳನ್ನು ವರ್ಣಿಸಬೇಕೆಂದು ಹೇಳುತ್ತಾನೆ. ಅವು ಯಾವುವೆಂದರೆ, 1) ಸರ್ಗ (ಸೃಷ್ಟಿ) 2) ಪ್ರತಿಸರ್ಗ 3) ವಂಶ 4) ಮನ್ವಂತ ಮತ್ತು 5) ವಂಶಾನುಚರಿತೆ.

ಧಾರ್ಮಿಕ ಕ್ರಾಂತಿಯುಂಟಾಗಿ, ಬೌದ್ಧ ಧರ್ಮವು ವೈದಿಕ ಸಂಸ್ಕೃತಿಗೆ ಪ್ರಬಲ ವಿರೋಧಿಯಾಗಿ ಬಲಗೊಳ್ಳುತ್ತಿದ್ದ ಕಾಲದಲ್ಲಿ ಪುರಾಣಗಳು ಸೃಷ್ಟಿಯಾಗಿ ಹಿಂದೂ ಸಂಸ್ಕೃತಿಯ ಅವಶೇಷಗಳನ್ನು ಉಳಿಸಿ ರಕ್ಷಿಸಿಕೊಳ್ಳುವುದರಲ್ಲಿ ಆ ಸಂಸ್ಕೃತಿಯ ಆರಾಧಕರು ಕಾತರರಾಗಿದ್ದರು. ಆ ಕಾಲದ ಪರಿಸ್ಥಿತಿಯನ್ನು ಎದುರಿಸುವಲ್ಲಿ ಪ್ರಸಿದ್ಧ ಸಂಕಲನಕಾರ ವ್ಯಾಸನು ನಿಯಮಿತನಾದನು. ಬಾಣಭಟ್ಟನು ತನ್ನ ಹರ್ಷಚರಿತದಲ್ಲಿ 'ವಾಯು ಪುರಾಣ'ವನ್ನು ಕುರಿತು ಉಲ್ಲೇಖಿಸಿದ್ದಾನೆ. ಪುರಾಣಗಳು ಧಾರ್ಮಿಕ ನೀತಿಯ ಮೂಲಸ್ಥಾನವೆಂದು ಕುಮಾರ ಇಳಭಟ್ಟನು (ಕ್ರಿ.ಶ. 750) ಪುರಸ್ಕರಿಸಿದ್ದಾನೆ. ಪುರಾಣಗಳು ಈಗಿರುವ ಮಹಾಭಾರತದ ಪರಿಷ್ಕರಣಕ್ಕೂ ಹಿಂದೆಯೇ ಸೃಷ್ಟಿಯಾಗಿರಬೇಕೆಂದು ತೋರುತ್ತದೆ. ಅವು ಗುಪ್ತರ ಕಾಲದಲ್ಲಿ ಬರೆಯಲ್ಪಟ್ಟಿರಬೇಕೆಂದು ಸೂಚಿತವಾಗಿದೆ.

ಪುರಾಣಗಳು ಇತಿಹಾಸ ಧಾರ್ಮಿಕ ಸಾಹಿತ್ಯಗಳೆಂಬ ದೃಷ್ಟಿಯಿಂದ ಅತಿ ಮಹತ್ವದ ಸ್ಥಾನವನ್ನು ಗಳಿಸಿವೆ. ಒಟ್ಟು ಹದಿನೆಂಟು ಪುರಾಣಗಳಿವೆ. ಸತ್, ರಜಸ್ ಮತ್ತು ತಮಸಗಳೆಂಬ ಮೂರು ವಿಶ್ವಗುಣಗಳ ಆಧಾರದ ಮೇಲೆ ಇವುಗಳನ್ನು ವರ್ಗೀಕರಿಸಲಾಗಿದೆ. ವಿಷ್ಣು, ಭಾಗವತ, ನಾರದೀಯ, ಗರುಡ, ಪದ್ಮ ಮತ್ತು ವರಾಹ ಪುರಾಣಗಳು, ಸಾತ್ವಿಕ ಪುರಾಣಗಳು ಬ್ರಹ್ಮ, ಬ್ರಹ್ಮಾಂಡ, ಬ್ರಹ್ಮವೈವರ್ತ, ಮಾರ್ಕಂಡೇಯ, ಭವಿಷ್ಯ ಮತ್ತು ವಾಮನ ಪುರಾಣಗಳು ರಾಜಸ ಪುರಾಣಗಳು. ಶಿವ, ಲಿಂಗ, ಸ್ಕಂದ, ಅಗ್ನಿ, ಮತ್ಸ್ಯ ಮತ್ತು ಕೂರ್ಮ ಪುರಾಣಗಳು ತಾಮಸ ಪುರಾಣಗಳು. ಇವುಗಳಲ್ಲಿ ಭಾಗವತ ಪುರಾಣವು ಅತಿ ಪ್ರಸಿದ್ಧವಾದುದೆಂಬುದು ನಿರ್ವಿವಾದ. ಈ ಹದಿನೆಂಟು ಪುರಾಣಗಳಲ್ಲದೇ, ಹದಿನೆಂಟು ಉಪಪುರಾಣಗಳೂ ಇವೆ.

### ಸ್ಮೃತಿ:

ಶ್ರೌತಸೂತ್ರಗಳು ಮತ್ತು ಗೃಹ್ಯಸೂತ್ರಗಳಲ್ಲದೇ, ಪ್ರಾಚೀನ ಕಾಲದಲ್ಲಿ ಹಲವಾರು ಧರ್ಮ ಸೂತ್ರಗಳು ಇದ್ದುವು. ಇವುಗಳನ್ನು ನಾಗರಿಕ ಮತ್ತು ಧಾರ್ಮಿಕ ನೀತಿಗಳ ಮೂಲ ತತ್ವಗಳನ್ನು ಒಳಗೊಂಡ ಗ್ರಂಥಗಳೆಂದು ಭಾವಿಸಬಹುದು. ಈ ಧರ್ಮಸೂತ್ರಗಳಲ್ಲಿ ಗೌತಮ, ಹಾರೀತ, ವಶಿಷ್ಟ, ಬೋಧಾಯನ, ಅಪಸ್ತಂಭ ಮತ್ತು ಹಿರಣ್ಯಕೇಶಿನ್ ಧರ್ಮಸೂತ್ರಗಳನ್ನೂ ಇಲ್ಲಿ ಉಲ್ಲೇಖಿಸಬಹುದು. ವೈದಿಕವಾದ ನೀತಿಗಳನ್ನು ಒಳಗೊಂಡ ಅತಿ ಮಹತ್ವದ ಹಾಗೂ ಹೆಚ್ಚು ಪ್ರಚಲಿತವಾದ ನ್ಯಾಯ ಸೂತ್ರವೆಂದರೆ ಮನುಸ್ಮೃತಿ, ನಾರದ ಸ್ಮೃತಿ, ಬೃಹಸ್ಪತಿ ಸ್ಮೃತಿ ಮತ್ತು ಯಾಜ್ಞವಲ್ಕ್ಯ ಸ್ಮೃತಿಗಳು ಮುಖ್ಯವಾಗಿ ಹೆಸರಿಸಬಹುದಾದ ಇತರ ನ್ಯಾಯ ಗ್ರಂಥಗಳು.

ಈ ಸೂತ್ರಗಳು ಕ್ರಿ.ಪೂ. 5 ಅಥವಾ 4ನೆಯ ಶತಮಾನಗಳಲ್ಲಿ ರಚಿತವಾಗಿರಬೇಕೆಂಬುದು ಸಾಮಾನ್ಯವಾದ ಅಭಿಪ್ರಾಯ. ಈಗ ಲಭ್ಯವಿರುವ ಮನುಸ್ಮೃತಿಯು ಕ್ರಿ.ಪೂ.1ನೆಯ ಶತಮಾನದಲ್ಲಿ ಅಂದರೆ ಕಣ್ವರ ಕಾಲದಲ್ಲಿ ರಚಿತವಾಗಿರಬೇಕೆಂದು ತೋರುತ್ತದೆ.

**ಸಂಸ್ಕೃತದ ಉತ್ಕೃಷ್ಟ ಕವನ, ನಾಟಕ, ಪ್ರಜಾರಾಜ್ಯ ಪದ್ದತಿಯ ಗದ್ಯ ಕೃತಿಗಳು, ನೀತಿ, ಪ್ರಸಿದ್ದ (ಜನಪ್ರಿಯ) ಕಥೆಗಳು, ಪಂಚತಂತ್ರ (ಪ್ರಮುಖವಾದ ಕೃತಿಗಳು)**

## ಸಂಸ್ಕೃತದ ಉತ್ಕೃಷ್ಟ ಕವನ:

## ಆಸ್ಥಾನ ಮಹಾಕಾವ್ಯಗಳು:

ಸಂಸ್ಕೃತದಲ್ಲಿ ಅತಿ ಪ್ರಮುಖವಾದ ಬೌದ್ಧ ಕವಿಯೆಂದರೆ ಟಶ್ವಘೋಷ. ಇವನು ಕ್ರಿ.ಶ. ಒಂದನೆಯ ಶತಮಾನದಲ್ಲಿ ಜೀವಿಸಿದ್ದು, ಕನಿಷ್ಠ ದೊರೆಯ ಆಸ್ಥಾನದಲ್ಲಿ ಕವಿಯಾಗಿ ಅಲಂಕರಿಸಿದ್ದ. ಅಶ್ವಘೋಷನ ಮಹಾಕೃತಿಯಾಗಿ 'ಬುದ್ದ ಚರಿತ'ವು ಗೌತಮ ಬುದ್ದನ ಜೀವನ ಚರಿತ್ರೆಯನ್ನು ನಿರೂಪಿಸುತ್ತದೆ. ಅವನು 'ಸೌಂದರಾನಂದ' ಎಂಬ ಮತ್ತೊಂದು ಮಹಾಕಾವ್ಯವನ್ನೂ ಬರೆದಿದ್ದಾನೆ.

ಅಶ್ವಘೋಷನ ನಂತರ ಬಂದ ಮತ್ತೊಬ್ಬ ಭಾರತದ ಪ್ರಖ್ಯಾತ ಕವಿಯೆಂದರೆ ಕಾಳಿದಾಸ. ಇವನು ಗುಪ್ತವಂಶದ ಎರಡನೆಯ ಚಂದ್ರಗುಪ್ತನ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. 380–413) ಪ್ರವರ್ಧಮಾನದಲ್ಲಿದ್ದನೆಂಬುದು ಸಾಮಾನ್ಯ ನಂಬುಗೆ. ಇವನ ಶ್ರೇಷ್ಠ ಕೃತಿಗಳು ಪ್ರಾಯಶ: ಒಂದನೇಜಯ ಕುಮಾರ ಗುಪ್ತನ ಕಾಲದಲ್ಲಿ (ಕ್ರಿ.ಶ. 413–453) ರಚಿತವಾಗಿರಬೇಕು. ಇವನ ಮಹಾಕಾವ್ಯವಾದ ಕುಮಾರಸಂಭವವು 17 ಅಧ್ಯಾಯಗಳನ್ನು ಒಳಗೊಂಡಿದೆ. ಅದರಲ್ಲಿ ಮೊದಲ ಎಂಟು ಅಧ್ಯಾಯಗಳು ಮಾತ್ರ ಅವನ ಸೃಷ್ಟಿಯಾಗಿರಬಹುದೆಂಬುದು ಸಾಮಾನ್ಯ ಭಾವನೆ. ಶಿವ–ಉಮೆಯರ ವಿವಾಹ, ಕಾರ್ತಿಕೇಯನ ಜನನ – ಇದು ಈ ಕಾವ್ಯದ ವಸ್ತು. 'ರಘುವಂಶ' ಕಾಳಿದಾಸನ ಮತ್ತೊಂದು ಮಹಾಕಾವ್ಯ. ಇದರಲ್ಲಿ ಹತ್ತೊಂಬತ್ತು ಅಧ್ಯಾಯಗಳಿದ್ದು ಇಕ್ಷ್ವಾಕುವಂಶದ ಅರಸರ ಚರಿತ್ರೆಯನ್ನು ಇದು ಆಧರಿಸಿದೆ. ಭಾರವಿಯು ರಚಿಸಿದ ಮಹಾಕಾವ್ಯ ಕಿರಾತಾರ್ಜುನೀಯವು ಹದಿನೆಂಟು ಅಧ್ಯಾಯಗಳನ್ನು ಒಳಗೊಂಡು, ಮಹಾಭಾರತ ಕಥೆಯನ್ನು ಆಧರಿಸಿದೆ. ಶಿವನಿಂದ ಅರ್ಜುನನು ಹೇಗೆ ಪಾಶುಪತಾಸ್ತ್ರವನ್ನು ಪಡೆದನೆಂಬುದು ಈ ಕಾವ್ಯದ ವಸ್ತು. ಕ್ರಿ.ಶ. 634ರ ಇಮ್ಮಡಿ ಪುಲಿಕೇಶಿಯ ಪ್ರಸಿದ್ಧವಾದ ಐಹೊಳೆ ಶಾಸನದಲ್ಲಿ ಕಾಳಿದಾಸನೊಂದಿಗೆ ಭಾರವಿಯ ಹೆಸರನ್ನೂ ಉಲ್ಲೇಖಿಸಿರುವುದರಿಂದ, ಭಾರವಿಯ ಕಾಲವನ್ನು ಊಹಿಸುವುದು ಕಷ್ಟವಿಲ್ಲ.

ಇಪ್ಪತ್ತೆರಡು ಅಧ್ಯಾಯಗಳುಳ್ಳ 'ಭಟ್ಟಿಕಾವ್ಯ' ಅಥವಾ 'ರಾವಣವಧ' ಎಂಬ ಕಾವ್ಯವು ಭಟ್ಟಿಯಿಂದ ರಚಿತವಾಗಿದೆ. ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಗಳ ವಿಧಿ ನಿಯಮಗಳು, ಮೂಲತತ್ವಗಳನ್ನು ದೃಷ್ಟಾಂತ ಸಹಿತ ವಿವರಿಸುವುದು ಈ ಕಾವ್ಯದ ಉದ್ದೇಶ. ರಾಮ ಜನನದಿಂದ ರಾವಣ ಸಂಹಾರದವರೆಗಿನ ರಾಮ ಕಥೆಯನ್ನು ಈ ಕಾವ್ಯವು ಬಿತ್ತರಿಸುತ್ತದೆ. ಕವಿಯು ತನ್ನ ಕಾವ್ಯದಲ್ಲಿ ವಲ್ಲಭಿಯಲ್ಲಿ ಶ್ರೀಧರಸೇನನ ಆಶ್ರಯದಲ್ಲಿ ತಾನು ಜೀವಿಸಿದ್ದೆನೆಂದು ಹೇಳಿಕೊಂಡಿದ್ದಾನೆ. ಇದರಿಂದ ಕ್ರಿ.ಶ. 6ನೆಯ ಶತಮಾನದ ಉತ್ತರಾರ್ಧ ಮತ್ತು ಕ್ರಿ.ಶ. 7ನೆಯ ಶತಮಾನದ ಪೂರ್ವಾರ್ಧಗಳಲ್ಲಿ ಈ ಕವಿಯು ಜೀವಿಸಿದ್ದನೆಂದು ಹೇಳಬಹುದು.

ಕುಮಾರದಾಸನು 'ಜಾನಕೀಹರಣ' ಎಂಬ ಕಾವ್ಯವನ್ನು ಇಪ್ಪತ್ತೈದು ಅಧ್ಯಾಯಗಳಲ್ಲಿ ರಚಿಸಿದ್ದಾನೆ. ರಾಮಾಯಣದಿಂದ ಇದರ ವಸ್ತುವನ್ನು ಆಯ್ದುಕೊಳ್ಳಲಾಗಿದೆ. ಇವನು ಕ್ರಿ.ಶ. 6ನೆಯ ಶತಮಾನದಲ್ಲಿ ಶ್ರೀಲಂಕಾದ ದೊರೆಯಾಗಿದ್ದನೆಂದು ಹೇಳಲಾಗಿದೆ.

'ಶಿಶುಪಾಲವಧ'ದ ಕರ್ತೃ ಮಾಘನು ಕ್ರಿ.ಶ.8ನೆಯ ಶತಮಾನದಲ್ಲಿರಬೇಕೆಂದು ತೋರುತ್ತದೆ. ಕ್ರಿ.ಶ.9ನೆಯ ಶತಮಾನದ ಪ್ರಸಿದ್ದ ಅಲಂಕಾರಿಕ ಆನಂದವರ್ಧನನು ಇವನ ಹೆಸರನ್ನು ಉಲ್ಲೇಖಿಸಿದ್ದಾನೆ. 'ಶಿಶುಪಾಲವಧ'ವು ಇಪ್ಪತ್ತು ಅಧ್ಯಾಯಗಳನ್ನು ಹೊಂದಿದ್ದು ಮಹಾಭಾರತದಲ್ಲಿ ಬರುವ ಉಪಾಖ್ಯಾನವೊಂದನ್ನು ಆಧರಿಸಿದೆ.

ಶ್ರೀಹರ್ಷನ ಮೇರು ಕೃತಿ 'ನೈಷಧ ಚರಿತ' ಅಥವಾ 'ನೈಷಧಿಯ ಚರಿತ'ವು ಮಹಾಭಾರತದಲ್ಲಿ ಬರುವ ನಳದಮಯಂತಿಯರ ಉಪಾಖ್ಯಾನವನ್ನು ಕೇಂದ್ರವಸ್ತುವನ್ನಾಗಿ ಮಾಡಿಕೊಂಡಿದೆ. ಈ ಕೃತಿಯು ಕ್ರಿ.ಶ. 12ನೆಯ ಶತಮಾನದ ಉತ್ತರಾರ್ಧದಲ್ಲಿ ರಚಿತವಾಯಿತು. ಇದರಲ್ಲಿ ಇಪ್ಪತ್ತೆರಡು ಅಧ್ಯಾಯಗಳಿವೆ.

**ಭಾವಕವಿತ್ವ:**

ಸಂಸ್ಕೃತ ಸಂಪ್ರದಾಯ ಸಾಹಿತ್ಯವು ಭಾವಕವಿತೆಗಳಿಂದ ಸಮೃದ್ಧವಾಗಿದೆ. ಸಂಸ್ಕೃತ ಭಾವಕವಿತ್ವದಲ್ಲಿ ಕಾಳಿದಾಸನ ಹೆಸರು ಅತ್ಯುನ್ನತ ಸ್ಥಾನದಲ್ಲಿದೆ. ಅವನ 'ಮೇಘದೂತ'ವು ಈ ಪ್ರಭೇದದಲ್ಲಿ ಬಂದ ಅತಿ ಮನೋಹರವಾದ ಕಾವ್ಯ. ಘಟಕರ್ಪರನಿಂದ ರಚಿತವಾದ 'ಘಟಕರ್ಪರ' ಕಾವ್ಯವು ಮತ್ತೊಂದು ಪ್ರಸಿದ್ಧವಾದ ಭಾವಕಾವ್ಯ. ಈ ಕವಿಯು ವಿಕ್ರಮಾದಿತ್ಯ ದೊರೆಯ ಆಸ್ಥಾನದಲ್ಲಿದ್ದ ಒಂಭತ್ತು ರತ್ನಗಳಲ್ಲಿ ಒಬ್ಬನಾಗಿದ್ದನೆಂದು ಪರಂಪರೆಯು ಹೇಳುತ್ತದೆ. ಕ್ರಿ.ಶ. 7ನೆಯ ಶತಮಾನದಲ್ಲಿದ್ದನೆಂದು ಹೇಳಲಾದ ಭರ್ತೃಹರಿಯು ಶೃಂಗಾರ ಶತಕ, ನೀತಿ ಶತಕ ಮತ್ತು ವೈರಾಗ್ಯ ಶತಕಗಳೆಂಬ ಮೂರು ಶತಕಗಳನ್ನು ರಚಿಸಿದ್ದಾನೆ. ಅಮರ ಕವಿಯು ಬರೆದ ಅಮರ ಶತಕವೂ ಹೆಚ್ಚಕು ಜನಪ್ರಿಯವಾದ ಕಾವ್ಯ. ಈ ಶತಕದ ಪದ್ಯಗಳು ಸಮಕಾಲೀನ ಹಾಗೂ ಅನಂತರ ಬಂದ ಸಂಸ್ಕೃತ ಕಾವ್ಯ ಮೀಮಾಂಸೆ ಗ್ರಂಥಗಳಲ್ಲಿ ವಿಶೇಷವಾದ ಉದಾಹೃತವಾಗಿವೆ. ಕ್ರಿ.ಶ. 11–12ನೆಯ ಶತಮಾನದಲ್ಲಿದ್ದ ಬಿಲ್ಹಣನ 'ಚೌರ ಪಂಚಶಿಕಾ'ದಲ್ಲಿ ಪ್ರಣಯಿಯೊಬ್ಬನು ತನ್ನ ಪ್ರಿಯತಮೆಯ ಮಧುರ ಸಾನ್ನಿಧ್ಯದ ನೆನಪುಗಳನ್ನು ಸ್ಮರಿಸಿಕೊಳ್ಳುವ ಚಿತ್ರಣವಿದೆ. ಸಂಸ್ಕೃತ ಕಾವ್ಯದಲ್ಲಿ ಕೊನೆಯ ವಿಖ್ಯಾತ ಹೆಸರಾತ ಜಯದೇವ ಕವಿಯು ಬಂಗಾಳದವನು. ಕ್ರಿ.ಶ. 12ನೆಯ ಶತಮಾನದಲ್ಲಿ ರಾಜಾಲಕ್ಷ್ಮಣಸೇನನ ಆಳ್ವಿಕೆಯ ಕಾಲದಲ್ಲಿ ಇವನು ಜೀವಿಸಿದ್ದ. ಅವನ 'ಗೀತಗೋವಿಂದ'ವು ಸಂಸ್ಕೃತ ಭಾವ ಕವಿತೆಯಲ್ಲಿ ಉತ್ತುಂಗ ಸ್ಥಾನವನ್ನು ಗಳಿಸಿದೆ.

**ನಾಟಕ:**

ಸಂಸ್ಕೃತ ನಾಟಕಗಳ ಉಗಮವು ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಒಂದು ಆಸಕ್ತಿ ಕೆರಳಿಸುವ ಅಧ್ಯಯನವಾಗಿದೆ. ಈ ಬಗ್ಗೆ ಇರುವ ದಿಕ್ಕು ತಪ್ಪಿಸುವಂಥ ಅಭಿಪ್ರಾಯಗಳನ್ನು ಸಮನ್ವಯಕ್ಕೆ ತರುವುದು ಕಷ್ಟದ ಕೆಲಸ. ಭರತನ ನಾಟ್ಯಶಾಸ್ತ್ರವು ಸಂಸ್ಕೃತ ನಾಟ್ಯ ಶಾಸ್ತ್ರವನ್ನು ಕುರಿತು ಬಂದಿರುವ ಅತಿ ಪ್ರಾಚೀನ ಗ್ರಂಥವೆಂಬುದು ನಿರಾಕರಿಸಲಾಗದ ಸಂಗತಿ.

ಸಂಸ್ಕೃತ ನಾಟಕವು ಐದು ಸಂಧಿಗಳನ್ನು ಒಳಗೊಂಡಿರಬೇಕು. ಅವೆಂದರೆ, ಮುಖ, ಪ್ರತಿಮುಖ, ಗರ್ಭ, ವಿಮರ್ಶೆ ಮತ್ತು ನಿರ್ವಹಣ. ರಸ ಮತ್ತು ವಸ್ತುವಿನಲ್ಲಿ ಪರಿಪೂರ್ಣ ಐಕ್ಯವಿರಬೇಕೆಂದು ನಾಟ್ಯಶಾಸ್ತ್ರಕಾರರು ಲಕ್ಷಣಗಳಲ್ಲಿ ಹೇಳಿದ್ದಾರೆ. ಆದರೆ ನಾಟಕಕಾರರು ಪಾತ್ರ ಮತ್ತು ವಸ್ತು ನಿರೂಪಣೆಗಿಂತ, ರಸ ನಿರೂಪಣೆಗೆ ಹೆಚ್ಚು ಪ್ರಾಮುಖ್ಯತೆ ನೀಡಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ನಮಗೆ ಲಭ್ಯವಾಗಿರುವ ಬಹುಪಾಲು ಸಂಸ್ಕೃತ ನಾಟಕಗಳಲ್ಲಿ ವಿಭಿನ್ನ ಪಾತ್ರ ಸೃಷ್ಟಿಗಿಂತ, ಒಂದೇ ರೀತಿಯ ಪಾತ್ರ ಸೃಷ್ಟಿಯು ಅತಿ ಎನ್ನುವಷ್ಟು ಕಂಡುಬರುವುದಕ್ಕೆ ಮೇಲೆ ತಿಳಿಸಿದ ಸಂಗತಿಯೇ ಕಾರಣವೆನ್ನಬಹುದು.

ಸಂಸ್ಕೃತ ನಾಟಕವನ್ನು ರೂಪಕ ಮತ್ತು ಉಪರೂಪಕಗಳೆಂದು ಎರಡು ವಿಧವಾಗಿ ವರ್ಗೀಕರಿಸಲಾಗಿದೆ. ರೂಪಕದಲ್ಲಿ ನಾಟಕ, ಪ್ರಕರಣ, ಬಾಣ, ವ್ಯಾಯೋಗ, ಸಮವಕಾರ ಮತ್ತು ಪ್ರಹಸನಗಳು ಸೇರಿವೆ. ಉಪರೂಪಕದಲ್ಲಿ ನಾಟಿಕಾ, ತ್ರೋಟಕ, ಪ್ರಸ್ಥಾನ ಮುಂತಾದವುಗಳು ಸೇರಿವೆ.

ಭಾರತೀಯ ನಾಟಕವನ್ನು ಕ್ರಿ.ಪೂ. 5 ಅಥವಾ 4ನೆಯ ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ಯಬಹುದು. ಮಹಾಭಾಷ್ಯವು, 'ಕಂಸವಧ' ಮತ್ತು 'ಬಲಿಬಂಧ' ಎಂಬ ಎರಡು ನಾಟಕಗಳನ್ನು ಉಲ್ಲೇಖಿಸುತ್ತದೆ. ಪ್ರಾಚೀನ ನಾಟಕಕಾರದಲ್ಲಿ ಅತಿ ಪ್ರಮುಖನಾದವನೆಂದರೆ ಭಾಸ. ಭಾಸ ರಚಿತವೆಂದು ಹೇಳಲಾಗುವ ನಾಟಕಗಳ ಯಥಾರ್ಥತೆ ಮತ್ತು ಕರ್ತೃತ್ವದ ಬಗ್ಗೆ ವಿದ್ವಾಂಸರು ಸಾಮಾನ್ಯವಾಗಿ ಭಿನ್ನಾಭಿಪ್ರಾಯಗಳನ್ನು ತಾಳಿದ್ದಾರೆ. ನಂತರ ಬಂದ ಕಾಳಿದಾಸ, ಬಾಣ, ರಾಜಶೇಖರ ಮೊದಲಾದ ಕವಿಗಳು ಭಾಸನನ್ನು ಗೌರವದಿಂದ ಹೆಸರಿಸಿದ್ದಾರೆ. ಭಾಸನ ನಾಟಕಗಳಿಗೆ ಮೂರು ಆಕರಗಳಿಂದ ವಸ್ತುವನ್ನು ಆಯ್ದುಕೊಳ್ಳಲಾಗಿದೆ. ರಾಮಾಯಣ, ಮಹಾಭಾರತ ಮತ್ತು ವಿವಿಧ ಜನಪ್ರಿಯ ಕಥಾನಕಗಳೇ ಈ ಆಕರಗಳು. 'ಪ್ರತಿಮಾ' ಮತ್ತು 'ಅಭಿಷೇಕ' ಎಂಬ ಎರಡು ನಾಟಕಗಳು ರಾಮಾಯಣವನ್ನು ಆಧರಿಸಿವೆ. ಮಧ್ಯಮ ವ್ಯಾಯೋಗ, ದ್ಯೂತ, ಘಟೋತ್ಕಚ ಮತ್ತು ಕರ್ಣಭಾರಗಳು ಮಹಾಭಾರತವನ್ನು ಆಧರಿಸಿವೆ. ಭಾಸನ ನಾಟಕಗಳಲ್ಲೆಲ್ಲಾ 'ಸ್ವಪ್ನವಾಸವದತ್ತ' ನಾಟಕವೇ ಉತ್ಕೃಷ್ಟವಾದುದೆಂದು ಭಾರತೀಯ ವಿಮರ್ಶಕರ ಅಭಿಮತ.

ಶೂದ್ರಕನದೆಂದು ಹೇಳಲಾದ ಹತ್ತು ಅಂಕಗಳುಳ್ಳ 'ಮೃಚ್ಛಕಟಿಕ'ದ ಕರ್ತೃತ್ವ ಮತ್ತು ಕಾಲದ ಬಗ್ಗೆ ಇಂದಿಗೂ ವಿವಾದಗಳಿವೆ. ಈ ನಾಟಕವು ದಂಡಿವಿರಚಿತವೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಭಾಸನ ಹದಿಮೂರು ನಾಟಕಗಳ ಶೋಧನೆ ನಡೆದ ನಂತರ 'ಮೃಚ್ಛಕಟಿಕ'ವು ಕ್ರಿ.ಶ. ಮೂರನೆಯ ಶತಮಾನದಲ್ಲಿ ಅವನು ಬರೆದ 'ಚಾರುದತ್ತ'ದ ನಂತರ ಬಂದಿರಬಹುದೆಂಬುದನ್ನು ಇದು ಸಮರ್ಥಿಸುತ್ತದೆ. ಕಾಳಿದಾಸನು ಭಾಸ, ಸೌಮಿಲ್ಲ ಮತ್ತು ಕವಿಪುತ್ರರ ಹೆಸರನ್ನೂ ಉಲ್ಲೇಖಿಸಿದ್ದರೂ, ಶೂದ್ರಕನ ಬಗ್ಗೆ ಒಂದು ಮಾತು ಹೇಳಿಲ್ಲ. ರಾಜತರಂಗಿಣಿ, ಕಥಾಸರಿತ್ಸಾಗರ ಮತ್ತು ಸ್ಕಂದ ಪುರಾಣಗಳಲ್ಲಿ ಶೂದ್ರಕ ಮಹಾರಾಜನ ಹೆಸರು ದೊರೆಯುತ್ತದೆ.

ಕಾಳಿದಾಸನು 'ಮಾಲವಿಕಾಗ್ನಿಮಿತ್ರ', 'ವಿಕ್ರಮೋರ್ವಶೀಯ' ಮತ್ತು 'ಅಭಿಜ್ಞಾನ ಶಾಕುಂತಲ' ಎಂಬ ನಾಟಕಗಳನ್ನು ಬರೆದಿದ್ದಾನೆ. ಭಾರತೀಯ ನಾಟಕಕಾರರಲ್ಲಿ ಕಾಳಿದಾಸನು ಅತಿ ಉನ್ನತವಾದ ಸ್ಥಾನವನ್ನು ಗಳಿಸಿದ್ದಾನೆ. ಅವನ ಪ್ರತಿಭಾ ದೀಪ್ತಿಯಿಂದ ಹೊರಬಂದ ಪ್ರಬುದ್ಧವಾದ ನಾಟಕ 'ಅಭಿಜ್ಞಾನ ಶಾಕುಂತಲ'ವು ವಿಶ್ವವಿಖ್ಯಾತವಾಗಿ ಮನ್ನಣೆ ಪಡೆದಿದೆ.

ಕ್ರಿ.ಶ. 606ರಿಂದ 647ರವರೆಗೆ ಆಳಿದ ಕನ್ಯಾಕುಬ್ಜದ ದೊರೆ ಹರ್ಷನು ಮೂರು ನಾಟಕಗಳನ್ನು ಬರೆದಿರುವನೆಂದು ಹೇಳಲಾಗಿದೆ. ಅವನು ಬಾಣನ ಸಮಕಾಲೀನನಾಗಿದ್ದನು. 'ರತ್ನಾವಳಿ'ಯು ಹರ್ಷನ ಮೇರು ಕೃತಿ. 'ಪ್ರಿಯದರ್ಶಿಕಾ ಮತ್ತು ನಾಗಾನಂದ' ನಾಟಕಗಳನ್ನೂ ಅವನು ರಚಿಸಿದ್ದಾನೆ.

ಕಾಳಿದಾಸನ ನಂತರ ನಾಟಕಕಾರರಲ್ಲಿ ಕೇಳಿ ಬರುವ ಮತ್ತೊಂದು ಪ್ರಸಿದ್ಧವಾದ ಹೆಸರೆಂದರೆ ಭವಭೂತಿ. ಇವನು ಕ್ರಿ.ಶ. 736ರಲ್ಲಿದ್ದನೆಂದು ಹೇಳಲಾದ ಕನ್ಯಾಕುಬ್ಜದ ದೊರೆ ಯಶೋವರ್ಮನ ಆಸ್ಥಾನದಲ್ಲಿದ್ದನೆಂದು ಕಲ್ಹಣನ ರಾಜತರಂಗಿಣಿಯಲ್ಲಿ ಉಲ್ಲೇಖಿಸಲಾಗಿದೆ. ಭವಭೂತಿ ರಚಿಸಿದನೆಂದು ಹೇಳಲಾದ ನಾಟಕಗಳು 'ಮಹಾವೀರ ಚರಿತ', 'ಮಾಲತಿ ಮಾಧವ' ಮತ್ತು 'ಉತ್ತರರಾಮ ಚರಿತ'ಗಳು.

## ನೀತಿ, ಪ್ರಸಿದ್ಧ (ಜನಪ್ರಿಯ) ಕಥೆಗಳು, ಪಂಚತಂತ್ರ (ಪ್ರಮುಖವಾದ ಕೃತಿಗಳು):

### ನೀತಿಬೋಧಕ ಕಥಾಸಾಹಿತ್ಯ:

ನೀತಿಬೋಧಕ ಕಥಾಸಾಹಿತ್ಯವು ಅತ್ಯಂತ ಪ್ರಾಚೀನ ಕಾಲದಿಂದಲೂ ಭಾರತೀಯ ಸಾಹಿತ್ಯದ ಒಂದು ಗಣ್ಯವಾದ ಭಾಗವಾಗಿದೆ. ಪ್ರಾಣಿಗಳ ಕಥೆಗಳನ್ನು ಹೇಳಿ ನೀತಿ ಬೋಧಿಸುವ ಕಲೆಯು ಹಿಂದೂಗಳ ಸಂಶೋಧನೆಯೆಂದು ಸರ್ ವಿಲಿಯಮ್ ಜೋನ್ಸ್‌ರು ಅಭಿಪ್ರಾಯ ಪಟ್ಟಿದ್ದಾರೆ. ಮನುಷ್ಯ ಮತ್ತು ಮೀನು, ಇಂದ್ರನು ಮರ್ಕಟ ಮತ್ತು ಕಪಿಂಜಲ ಎಂಬ ಹಕ್ಕಿಗಳಾಗಿ ಹುಟ್ಟಿದ್ದು ಮುಂತಾದ ಕಥೆಗಳು ಋಗ್ವೇದದಲ್ಲಿವೆ. ಛಾಂದೋಗ್ಯ ಉಪನಿಷತ್ತಿನಲ್ಲಿ ತಮ್ಮ ಆಹಾರಕ್ಕಾಗಿ ಕೂಗುವ ನಾಯಕನ ಸಂಶೋಧನೆಯಲ್ಲಿದ್ದ ನಾಯಿಗಳ ಪ್ರತೀಕಾತ್ಮಕ ಕಥನ, ಜಾನುಶ್ರುತಿಯ ಮರಿಮಗನ ಗಮನವನ್ನು ಸೆಳೆದ ಎರಡು ಹಂಸಗಳ ಮಾತುಕತೆ, ಸತ್ಯಕಾಮ ಜಾಬಾಲಿಗೆ ಎತ್ತು, ಹಂಸ, ಮದ್ಗು (ನೀರೊಳಗಿನ ಒಂದು ಹಕ್ಕಿ) – ಇವು ಉಪದೇಶ ನೀಡಿದ ಸಂಗತಿ. ಇವೇ ಮುಂತಾದ ಕಥೆಗಳಿವೆ. ಕ್ರಿ.ಪೂ. ಎರಡನೇ ಶತಮಾನದಲ್ಲಿ ಬಾಳಿದ ಮಹಾಭಾಷ್ಯಕಾರನಾದ ಪತಂಜಲಿಗೆ ಪ್ರಾಣಿ ಕಥೆಗಳು ಗೊತ್ತಿದ್ದವು. 'ಆಜಾಕೃಪ್ರಾಶಣಭಿಯ', 'ಕಾಕತಾಳೀಯ' ಮುಂತಾದ ನ್ಯಾಯಗಳ ಉತ್ಪತ್ತಿಯನ್ನು ವಿವರಿಸುವಾಗ ಅವು ಪ್ರಾಣಿ ಕಥೆಗಳಿಗೆ ಸಂಬಂಧಿಸಿದ್ದವೆಂದು ಅವನು ಸೂಚಿಸುತ್ತಾನೆ. ಪಾಂಡವರನ್ನು ಕೊಂದರೆ ಅಥವಾ ಅವರನ್ನು ಪೀಡಿಸಿದರೆ, ಬಂಗಾರದ ಮೊಟ್ಟೆಗಳನ್ನಿಡುವ ಹಕ್ಕಿಯನ್ನು ಕೊಂದಂತಾದಿತೆಂದು ಮಹಾಭಾರತದಲ್ಲಿ ವಿದುರನು ಧೃತರಾಷ್ಟ್ರನಿಗೆ ಹೇಳುತ್ತಾನೆ. ಬೌದ್ಧ ಮತ್ತು ಜೈನರ ಪ್ರಾಚೀನ ಸಾಹಿತ್ಯದಲ್ಲಿಯೂ ಅವರ ನೀತಿ ಮತ್ತು ತಂತ್ರಜ್ಞಾನಗಳನ್ನು ಬೋಧಿಸುವ ಪ್ರಾಣಿ ಕಥೆಗಳಿವೆ. ಇದರಿಂದ ಹಿಂದೂಸ್ಥಾನದಲ್ಲಿ ಪ್ರಾಚೀನ ಕಾಲದಿಂದಲೂ ನೀತಿಬೋಧಕ ಕಥೆಗಳು ಅಥವಾ ಪ್ರಾಣಿ ಕಥೆಗಳು ಪ್ರಚಲಿತವಾಗಿದ್ದವೆಂದು ಗೊತ್ತಾಗುತ್ತದೆ. ಈ ಕಥೆಗಳು ಹಿಂದೂಸ್ಥಾನದಿಂದ ಪಾಶ್ಚಾತ್ಯ ದೇಶಗಳಿಗೆ ಹೋಗಿ ಈಗ ಕಂಡುಬರುವ ಭಿನ್ನ ಭಿನ್ನ ಆಕಾರಗಳನ್ನು ಪಡೆದವೆಂಬುದು ಡಾ. ರ್‍ಹಿಸ್ ಡೇವಿಡ್ಸ್ ಅವರ ಮತವಾಗಿದೆ. ಭಾರತ ಮತ್ತು ಗ್ರೀಸ್‌ಗಳಲ್ಲಿ ಸಾಮಾನ್ಯವಾಗಿ ಪ್ರಚಾರದಲ್ಲಿರುವ ಕಥೆಗಳ ಹುಟ್ಟು ಭಾರತದಲ್ಲಿಯೇ ಆಯಿತೆಂದು ಅಸ್ಸೀರಿಯನ್ ಮಾರ್ಗವಾಗಿ ಅವು ಗ್ರೀಸ್‌ಗೆ ಹೋದವೆಂದೂ ಒಟ್ಟೋ ಕೆಲ್ಲರ್ ಅವರ ಅಭಿಪ್ರಾಯ.

**ಪಂಚತಂತ್ರ:**

ಸಂಸ್ಕೃತದ ನೀತಿಬೋಧಕ ಪ್ರಾಣಿ ಕಥೆಗಳಲ್ಲಿ 'ಪಂಚತಂತ್ರ' ಮತ್ತು 'ಹಿತೋಪದೇಶ'ಗಳು ಬಹಳ ಜನಪ್ರಿಯವಾಗಿವೆ. ಬೈಬಲನ್ನು ಬಿಟ್ಟರೆ ಜಗತ್ತಿನಲ್ಲಿ ಅತ್ಯಂತ ಹೆಚ್ಚು ಪ್ರಸಾರದಲ್ಲಿದ್ದ ಗ್ರಂಥವೆಂದರೆ ಪಂಚತಂತ್ರ. ಭಾರತೀಯ ಮತ್ತು ವಿದೇಶೀಯ ಸುಮಾರು 50 ಭಾಷೆಗಳಲ್ಲಿ ಪಂಚತಂತ್ರದ ಸುಮಾರು 200ಕ್ಕಿಂತ ಹೆಚ್ಚು ರೂಪಾಂತರಗಳಿವೆಯೆಂದು ಹರ್ಟೆಲ್ ಕಂಡುಹಿಡಿದಿದ್ದಾರೆ. ಖೋಸ್ರು ಆನುಶೀರ್ವನ್ ಎಂಬ ಅರಸನ ಆಳ್ವಿಕೆ (ಕ್ರಿ.ಶ.531–579)ಯಲ್ಲಿ ಇರಾನದ ವೈದ್ಯನಾದ ಬೂರ್ಜೊ ಪಂಚತಂತ್ರವನ್ನು ಪೆಹಲವಿ ಭಾಶಷೆಗೆ ಭಾಷಾಂತರ ಮಾಡಿದ. ಆದರೆ ಅದು ಇಂದು ಉಪಲಬ್ದವಿಲ್ಲ. ಈ ಪೆಹಲವಿ ಅನುವಾದವನ್ನಾಧರಿಸಿ ಬುಡ್ ಎಂಬುವನು ಕ್ರಿ.ಶ. 570ರಲ್ಲಿ ಸಿರಿಯಾ ಭಾಷೆಗೆ ಅದನ್ನು ಭಾಷಾಂತರಿಸಿದನು. ಮತ್ತು ಅಬ್ದುಲ ಇಬ್ನಲ್ ಮೊಗಾಫ್ಫಾ ಕ್ರಿ.ಶ. 580ರಲ್ಲಿ ಅರಬ್ಬೀ ಭಾಷೆಗೆ ಅದನ್ನು ಅನುವಾದಿಸಿದನು. ಬಳಿಕ ಗ್ರೀಕ್ (ಕ್ರಿ.ಶ.1080), ಹಿಬ್ರೂ (ಕ್ರಿ.ಶ.1100), ಜರ್ಮನ್ (ಕ್ರಿ.ಶ.1480), ಇಟಾಲಿಯನ್ (ಕ್ರಿ.ಶ.1552), ಇಂಗ್ಲೀಷ್ (ಕ್ರಿ.ಶ.1570), ಫ್ರೆಂಚ್ (ಕ್ರಿ.ಶ.1678) ಮುಂತಾದ ಪಾಶ್ಚಾತ್ಯ ಭಾಷೆಗಳಲ್ಲಿ ಪಂಚತಂತ್ರದ ಅನುವಾದಗಳಾದವು. ಕ್ರಿ.ಶ. 668ರಲ್ಲಿ ರಚಿತವಾದ ಚೀನಿ ವಿಶ್ವಕೋಶದಲ್ಲಿ ಪಂಚತಂತ್ರದ ಉಲ್ಲೇಖವಿದೆ. ಆಗಿನ ಕಾಲದಲ್ಲಿ ಯಾವುದಾದರೊಂದು ಗ್ರಂಥವು ಸಾರ್ವತ್ರಿಕವಾಗಿ ಜನಮೆಚ್ಚುಗೆಯನ್ನು ಪಡೆಯಲು ಒಂದೆರಡು ಶತಮಾನಗಳಾದರೂ ಬೇಕಾಗುತ್ತಿದ್ದವು. ಆದುದರಿಂದ ಪೆಹಲ ಭಾಷೆಯಲ್ಲಿ ಅನುವಾದವಾಗುವುದಕ್ಕಿಂತ ಒಂದೆರಡು ಶತಮಾನಗಳ ಮೊದಲು ಅಂದರೆ ಮೂರನೇ ಅಥವಾ ನಾಲ್ಕನೇ ಶತಮಾನದಲ್ಲಿ ಮೂಲ ಪಂಚತಂತ್ರದ ರಚನೆಯಾಗಿದ್ದಿರಬೇಕೆಂದು ಊಹೆಯಿದೆ. ಈ ಗ್ರಂಥದಲ್ಲಿ 5 ಭಾಗಗಳಿವೆ. ಮತ್ತು ಪ್ರತಿಯೊಂದು ಭಾಗಕ್ಕೆ ತಂತ್ರವೆಂದು ಹೆಸರು ಬಂದಿರಬೇಕು. ಆ ತಂತ್ರಗಳು ಮಿತ್ರಭೇದ, ಮಿತ್ರ ಸಂಪ್ರಾಪ್ತಿ, ಕಾಕೊಲೂಕೀಯ ಲಬ್ಧ ಪ್ರಣಾಶ ಮತ್ತು ಅಪರೀಕ್ಷೀತಕಾರಕ. ದಕ್ಷಿಣ ಭಾರತದ ಮಹಿಲಾರೋಪ್ಯವೆಂಬ ರಾಜ್ಯದಲ್ಲಿ ಆಳುತ್ತಿದ್ದ ಅಮರಶಕ್ತಿಯೆಂಬ ಅರಸನ ಮೂವರ ಮೂರ್ಖ ಮಕ್ಕಳಿಗೆ ರಾಜನೀತಿಯಲ್ಲಿ ತರಬೇತಿ ಕೊಡಲು ವಿಷ್ಣುಶರ್ಮನೆಂಬ ಪಂಡಿತನು ಹೇಳಿದ ಕಥೆಗಳು ಪಂಚತಂತ್ರದಲ್ಲಿ ಸಂಕಲಿತವಾಗಿವೆ. ಆದರೆ ಈ ಹೆಸರುಗಳ ಬಗ್ಗೆ ಇನ್ನಾವ ಸಂಗತಿಯೂ ತಿಳಿದಿಲ್ಲವಾದ್ದರಿಂದ ಗ್ರಂಥಕರ್ತನ ಬಗ್ಗೆ ಯಾವುದೇ ನಿರ್ಣಯಕ್ಕೆ ಬರುವುದು ಸಾಧ್ಯವಿಲ್ಲ.

**ಹಿತೋಪದೇಶ:**

ಕಾಣೆಯಾದ ಪಂಚತಂತ್ರವನ್ನು ಪುನ: ರಚಿಸಲು ಮಾಡಿದ ಪ್ರಯತ್ನಗಳಲ್ಲಿ ಹಿತೋಪದೇಶವೂ ಒಂದಾಗಿದೆ. ಪಂಚತಂತ್ರದೊಳಗಿನ ಅನೇಕ ಕಥೆಗಳು ಇಲ್ಲಿ ಸಮಾವೇಶಗೊಂಡಿದೆ. ಪಂಚತಂತ್ರವಲ್ಲದೆ ಇನ್ನೊಂದು ಗ್ರಂಥದಿಂದ ತಾನೂ ವಿಷಯಗಳನ್ನು ತೆಗೆದುಕೊಳ್ಳುತ್ತೇನೆಂದು ಹಿತೋಪದೇಶಕಾರನು ತನ್ನ ಪ್ರಸ್ತಾವನೆಯಲ್ಲಿಯೇ ಹೇಳಿರುವನು ಮತ್ತು ಆ ಇನ್ನೊಂದು ಗ್ರಂಥವೆಂದರೆ ಕಾಮಂದಕನ 'ನೀತಿಸಾರ' ಇರಬೇಕೆಂದು ಪೀಟರ್ಸನ್ ಮೊದಲಾದ ವಿದ್ವಾಂಸರ ಮತವಾಗಿದೆ. ಹಿತೋಪದೇಶಕಾರನ ಕೃತಿಯಲ್ಲಿ ನಾಲ್ಕು ಭಾಗಗಳಿವೆ. ಇವುಗಳಿಗೆ ಕಥಾಸಂಗ್ರಹವೆಂಬ ಹೆಸರಿದೆ. ಅವು ಮಿತ್ರಲಾಭ, ಸುಹೃದ್ಭೇದ ವಿಗ್ರಹ ಮತ್ತು ಸಂಧಿ ಪಂಚತಂತ್ರದ ಮೊದಲಿನ ಮೂರು ತಂತ್ರಗಳಿಂದಲೇ ಹಿತೋಪದೇಶಕಾರನು ಹೆಚ್ಚಾಗಿ ಕಥೆಗಳನ್ನೂ ವಿಷಯವನ್ನು ತೆಗೆದುಕೊಂಡಿದ್ದಾನೆ. ಅವನು ಸ್ವತಂತ್ರವಾಗಿ ನಾಲ್ಕನೆಯ ಕಥಾಸಂಗ್ರಹವನ್ನು ರಚಿಸಿದ್ದಾನೆ. ಪಂಚತಂತ್ರದ 43 ಕಥೆಗಳಲ್ಲಿ 25 ಕಥೆಗಳು ಹಿತೋಪದೇಶದಲ್ಲಿ ಬಂದಿವೆ ಮತ್ತು ಇವು ಬೇರೆ ಎಲ್ಲಿಯೂ ಉಪಲಬ್ದವಿಲ್ಲ. ಕೆಲವು ಮೂಲ ಕಥೆಗಳು ಹಿತೋಪದೇಶದಲ್ಲಿವೆ.

ಪಂಚತಂತ್ರ ಈ ಗ್ರಂಥಗಳಲ್ಲಿ ಪಶು, ಪಕ್ಷಿ ಮುಂತಾದ ಪ್ರಾಣಿಗಳ ಮಾನವ ಗುಣಗಳಿರುವುದನ್ನು ಪ್ರಮುಖವಾಗಿ ಕಾಣಬಹುದು. ಇಲ್ಲಿನ ಕಥೆಗಳಲ್ಲಿ ಪ್ರಾಣಿಗಳು ಮನುಷ್ಯರಂತೆ ಮಾತನಾಡುತ್ತವೆ, ಜೀವನ ನಡೆಸುತ್ತವೆ, ಬಾಳಿನ ಸುಖ–ದು:ಖಗಳನ್ನು ಅನುಭವಿಸುತ್ತವೆ, ಮನುಷ್ಯರಂತೆ ಶಾಸ್ತ್ರಾಭ್ಯಾಸ ಮಾಡಿ ಧಾರ್ಮಿಕ ಕ್ರಿಯೆಗಳನ್ನು ಆಚರಿಸುತ್ತವೆ. ದೇವತೆಗಳು ಸಾಧು, ಸಂತರ ಮತ್ತು ಮಹಾತ್ಮರನ್ನು ಕುರಿತು ಚರ್ಚಿಸುತ್ತವೆ. ನೀತಿಯ ಸೂಕ್ಷ್ಮ ವಿವರಗಳನ್ನು ಕುರಿತು ವಿಚಾರ ವಿನಿಮಯ ಮಾಡುತ್ತವೆ. ಇದರಿಂದ ಕಥೆಗಳ ಸ್ವಾರಸ್ಯ ಹೆಚ್ಚಿದೆ.

ಮೇಲಾಗಿ ಪಶು, ಪಕ್ಷಿಗಳ ವಿಶಿಷ್ಟ ನಡತೆಯಿಂದ ಮನುಷ್ಯನು ಅನೇಕ ಗುಣಗಳನ್ನು ಕಲಿಯಬಹುದಾಗಿದೆ. ಉದಾ: ನಾಯಿಯಿಂದ ಕೃತಜ್ಞತೆ, ಜೇಡರ ಹುಳದಿಂದ ಪುನ: ಪುನ: ಪ್ರಯತ್ನಿಸುವ ಜಿಗುಟುತನ, ಇರುವೆ ಮತ್ತು ಜೇನ್ನೊಣಗಳಿಂದ ಸಂಗ್ರಹ ಪ್ರವೃತ್ತಿ, ಕತ್ತೆಯಿಂದ ಕಷ್ಟ ಸಹಿಷ್ಣುತೆ, ನರಿಯಿಂದ ಧೂರ್ತತೆ ಮುಂತಾದವು ಎಲ್ಲ ತರಹದ ಸ್ವಭಾವದ ಜನರ ಸಂಗಮವಾದ ಈ ಜಗತ್ತಿನಲ್ಲಿ ಯಶಸ್ವಿಯಾಗಿ ಬದುಕಲು ಮನುಷ್ಯನು ಈ ಎಲ್ಲ ಗುಣಗಳನ್ನು ಅರಿತುಕೊಂಡಿರುವುದು ಅಗತ್ಯ. ಪ್ರಾಣಿಗಳ ಜಗತ್ತಿಗೆ ಸಂಬಂಧಿಸಿದಂತೆ ಈ ಕಥೆಗಳನ್ನು ಮನಮುಟ್ಟುವಂತೆ ಹೇಳಿ ಜೀವನದ ಒಳಿತು ಕೆಡಕುಗಳ ಸ್ಪಷ್ಟ ಚಿತ್ರಣವನ್ನು ಕಥೆಗಾರನು ಜನರ ಮುಂದಿಟ್ಟಿದ್ದಾನೆ. ಹೀಗಾಗಿ ಈ ಕಥೆಗಳು ಜನರಿಗೆ ದಾರಿ ದೀಪಗಳಾಗಿವೆ.

ಎರಡನೆಯದಾಗಿ, ಈ ಕಥೆಗಳನ್ನು ಅರ್ಥಪೂರ್ಣವಾದ ಪದ್ಯಗಳಿಂದ ಕೂಡಿದ ಸುಲಭ ಗದ್ಯದಲ್ಲಿ ಬರೆಯಲಾಗಿದೆ. ಸಾಮಾನ್ಯವಾಗಿ ನೀತಿಯ ಮಾತುಗಳು ಪದ್ಯಗಳಲ್ಲಿವೆ ಮತ್ತು ಆ ಮಾತುಗಳನ್ನು ಸಮರ್ಥಿಸಲು ಗದ್ಯದಲ್ಲಿ ಕಥೆಗಳನ್ನು ಹೇಳಲಾಗಿದೆ. ಎಲ್ಲ ಪದ್ಯಗಳನ್ನು ಕಥೆಗಾರನೇ ರಚಿಸಿಲ್ಲ. ರಾಮಾಯಣ, ಮಹಾಭಾರತಾದಿ ಕಾವ್ಯಗಳಿಂದಲೂ, ಸ್ಮೃತಿಗಳಿಂದಲೂ ಅನೇಕ ಶ್ಲೋಕಗಳನ್ನು ಕಥೆಗಾರನು ತನಗೆ ಬೇಕಾದಂತೆ ತೆಗೆದುಕೊಂಡಿದ್ದಾನೆ. ಸುಲಭವಾದ ಗದ್ಯದಲ್ಲಿ ಕಥೆಗಳನ್ನು ಹೇಳಿರುವುದರಿಂದ ಅವನ್ನು ತಿಳಿದುಕೊಳ್ಳಲು ಕಷ್ಟವಾಗುವುದಿಲ್ಲ. ನೀತಿಯ ಮಾತುಗಳು ಪದ್ಯರೂಪದಲ್ಲಿರುವುದರಿಂದ ಅವನ್ನು ಕಂಠಪಾಠ ಮಾಡಿ ಅವಶ್ಯಕತೆಗೆ ತಕ್ಕಂತೆ ಉದಾಹರಿಸಲು ಸಾಧ್ಯವಾಗಿದೆ.

ಈ ಕಥೆಗಳಲ್ಲಿ ಉಪಕಥೆಗಳು ಬರುವುದನ್ನು ಕಾಣಬಹುದು. ಮುಖ್ಯ ಕಥೆಯಲ್ಲಿಯ ಒಂದು ಪಾತ್ರವು ಒಂದು ಜಾಣ್ಮೆಯ ಅಥವಾ ನೀತಿಯ ಮಾತನ್ನು ಉಲ್ಲೇಖಿಸಿ ಅದರ ಸಮರ್ಥನೆಗಾಗಿ ಒಂದು ಕಥೆಯನ್ನು ಹೇಳತೊಡಗುತ್ತದೆ. ಹೀಗೆ ಉಪಕಥೆಯೊಂದು ಆರಂಭವಾಗುತ್ತದೆ. ಅದೇ ರೀತಿಯಾಗಿ ಆ ಉಪಕಥೆಯಲ್ಲಿಯ ಒಂದು ಪಾತ್ರವು ತಾನು ನುಡಿದ ಮಾತನ್ನು ಪುಷ್ಟಿಕರಿಸಲು ಬೇರೊಂದು ಕಥೆಯನ್ನು ಆರಂಭಿಸುತ್ತದೆ. ಹೀಗೆ ಮುಖ್ಯ ಕಥೆಯಲ್ಲಿ ಉಪಕಥೆ, ಆ ಉಪಕಥೆಯಲ್ಲಿ ಇನ್ನೊಂದು ಉಪಕಥೆ ಬರುತ್ತದೆ. ಕಥೆಗಳನ್ನು ಹೀಗೆ ಪೋಣಿಸಲಾಗಿದೆ. ಆದುದರಿಂದ ಇಡಿಯ ಗ್ರಂಥವು ಚೈನೀಸ್ ಬಾಕ್ಸ್‌ನ್ನು ಹೋಲುತ್ತದೆ. ಕಥಘೆಗಳನ್ನು ಹೇಳುವ ಈ ಮಾದರಿಯೂ ಜನಮೆಚ್ಚುಗೆ ಪಡೆಯಿತು ಮತ್ತು ಪರದೇಶಗಳಲ್ಲಿ ಸಹ ಈ ಮಾದರಿಯನ್ನನುಸರಿಸಿ ಅರೇಬಿಯನ್ ನೈಟ್ಸ್ ಮೊದಲಾದ ಸ್ವತಂತ್ರ ಗ್ರಂಥಗಳು ಸಾವಿರಾರು ವರ್ಷಗಳ ಹಿಂದೆಯೇ ರಚಿತವಾದವು.

ಪಂಚತಂತ್ರ ಮತ್ತು ಹಿತೋಪದೇಶಗಳೆರಡು ತಿಳಿಗೇಡಿ ರಾಜಕುಮಾರರಿಗೆ ರಾಜನೀತಿಯಲ್ಲಿ ತರಬೇತಿ ನೀಡಲು ರಚಿತವಾದವು. ಹೀಗಾಗಿ ಇವುಗಳಲ್ಲಿ ಅರಸರಲ್ಲಿರಬೇಕಾದ ರಾಜಕಾರಣ, ಕುಶಲತೆ ಮತ್ತು ಮುತ್ಸದ್ದಿತನದ ಚಿತ್ರವಿದೆ. ಮನುಷ್ಯರಲ್ಲಿ ಕಂಡುಬರುವ ಒಳ್ಳೆಯ ಮತ್ತು ಕೆಟ್ಟ ಗುಣಗಳನ್ನು ಸೂಚ್ಯವಾಗಿ ಮತ್ತು ತಿಳಿಯಾಗಿ ಈ ಕಥೆಗಾರರು ಬಣ್ಣಿಸಿದ್ದಾರೆ.

## ವೇದಗಳ ಕಾಲದಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನ:

(ಗಣಿತ, ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ವೈದ್ಯಶಾಸ್ತ್ರ, ಹಡಗು ತಯಾರಿಕೆ, ಗಣಿಗಾರಿಕೆ ಮತ್ತು ಲೋಹೋದ್ದರಣ, ವಾಸ್ತು ಶಿಲ್ಪತೆ).

ಪ್ರಾಚೀನ ಭಾರತವು ಪ್ರತಿಯೊಂದು ಕ್ಷೇತ್ರದಲ್ಲಿಯೂ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದಿದೆ, ಸಾಧನೆಯನ್ನು ಮಾಡಿದೆ. ಪ್ರಸ್ತುತ ಆಧುನಿಕ ಭಾರತದ ಯುವ ತರುಣರು ನಮ್ಮ ಭಾರತದ ಸಾಧನೆಗಳನ್ನು, ಕೊಡುಗೆಗಳನ್ನು ತಿಳಿಯುವುದು ಅತ್ಯಂತ ಮಹತ್ವದ್ದಾಗಿದೆ. ಈ ಕೊಡುಗೆಗಳ ರಕ್ಷಣೆ ಮತ್ತು ಮುಂದಿನ ಪೀಳಿಗೆಗೆ ಮುಂದುವರೆಯಿಸುವಂತೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

## ವೇದಗಳ ಕಾಲದಲ್ಲಿ 'ಗಣಿತ':

ಬ್ರಹ್ಮಗುಪ್ತನ ಕಾಲದಿಂದಲೂ ವಿಕಾಸ ಹೊಂದಿದ ಬೀಜಗಣಿತವು ಆಧುನಿಕ ಜಗತ್ತಿನಲ್ಲಿ ಪ್ರತ್ಯೇಕ ಶಾಖೆಯಾಗಿ ರೂಪತಾಳಿತು.

ಪ್ರಾಚೀನ ಭಾರತೀಯರು ಗಣಿತಶಾಸ್ತ್ರಕ್ಕೆ ನೀಡಿದ ಕೊಡುಗೆಗಳು ಈ ಕೆಳಗಿನಂತಿವೆ.

1) ಭಾರತದ ಪ್ರಪ್ರಥಮ ಕೊಡುಗೆ ಸೊನ್ನೆ '0'.

2) ಜಯದೇವರು ರಚಿಸಿದ ಚಕ್ರವಾಲ ಸಿದ್ದಾಂತ, ವರ್ಗ ಪ್ರಕೃತಿಯ ಪ್ರಯೋಗಗಳು.

3) ಬೌಧಾಯನನು ರಚಿಸಿದ ಕರ್ಣ ವರ್ಗ ಪ್ರಯೋಗವು ಪೈಥಾಗೋರಸ್‌ನ ಪ್ರಯೋಗಕ್ಕೆ ಅನುರೂಪವಾಗಿದೆ.

4) ಅತ್ಯಂತ ಪ್ರಾಚೀನ ಗ್ರಂಥವಾದ 'ಶುಲ್ಬ' ಸೂತ್ರಗಳಲ್ಲಿ ಎಎಕ್ಸ್2+ಬಿಎಕ್ಸ್=ಸಿ ಮಾದರಿಯ ಸಮೀಕರಣಗಳು ಮತ್ತು ಅವುಗಳ ಪರಿಹಾರೋಪಾಯಗಳು ಕಂಡು ಬರುತ್ತವೆ.

5) ಭಾಸ್ಕರಾಚಾರ್ಯರು ರಚಿಸಿದ 'ಲೀಲಾವತಿ' ದತ್ತ ವಸ್ತುಗಳ ಕ್ರಮ ಯೋಜನಾ ಉಲ್ಲೇಖ ನೀಡುತ್ತದೆ.

6) ಮಹಾವೀರಾಚಾರ್ಯ ನಿರುದ್ದ (ಲ.ಸಾ.ಅ) ಕಲ್ಪನೆ.

7) ಎ2+ಬ2=ಸಿ2 ಸಾಮಾನ್ಯವಾಗಿ ಈ ಪ್ರಮೇಯವನ್ನು ಭಾರತೀಯರು ವೇದಕಾಲದಿಂದಲೂ ಬಳಸುತ್ತಿದ್ದರು ಎಂಬುದು ಗಮನಾರ್ಹ ಸಂಗತಿ.

8) ಪ್ರಾಚೀನ ಭಾರತದಲ್ಲಿ ಜ್ಯಾಮಿತಿಯು ಪೂರ್ಣರೂಪದಲ್ಲಿ ವಿಕಾಸ ಹೊಂದಿದ ಶಾಸ್ತ್ರವಾಗಿತ್ತು. ಯಜ್ಞಗಳ ವಿಧಿವಿಧಾನಗಳಿಗೆ ನಿಖರವಾದ ಗಣಿತೀಯ ನಿಯಮಗಳುಳ್ಳ ಯಜ್ಞವೇದಿಕೆಗಳ ರಚನೆಯಾಗುತ್ತಿತ್ತು.

9) ಖಚಿತವಾದ ಅಳತೆಯ ಯಜ್ಞವೇದಿಗಳನ್ನು ನಿರ್ಮಿಸಲು ವೇದಕಾಲೀನ ಭಾರತೀಯರು ವರ್ಗಮೂಲಗಳನ್ನು ಕಂಡುಹಿಡಿದರು.

10) ಪೈ ಬೆಲೆಯನ್ನು 3,1416 ಎಂದು ಆರ್ಯಭಟ ಊಹಿಸಿದ್ದನು.

11) ತ್ರಿಕೋನ ಮಿತಿಯ ಜನಕ 2ನೇ ಭಾಸ್ಕರಾಚಾರ್ಯ.

ಹೀಗೆ ವೇದಗಳ ಕಾಲದಲ್ಲಿಯೇ ಗಣಿತಶಾಸ್ತ್ರವು ಅಪಾರ ಸಾಧನೆ ಸಾಧಿಸಿತ್ತು.

## ಖಗೋಳಶಾಸ್ತ್ರ:

ಖಗೋಳ ವಿಜ್ಞಾನವು ವೈದಿಕ ಸಾಹಿತ್ಯದಿಂದ ಆರಂಭವಾಗಿ ಸಂಹಿತೆ, ಬ್ರಾಹ್ಮಣಕ, ಸಂಹಿತೆಗಳ ಮೇಲಿನ ಭಾಷ್ಯದಲ್ಲಿ ಕಂಡುಬರುತ್ತದೆ.

ವೇದೋತ್ತರ ಕಾಲದಲ್ಲಿ ಪ್ರಮುಖರಾದ ಖಗೋಳಶಾಸ್ತ್ರಜ್ಞರೆಂದರೆ,

1) ಆರ್ಯಭಟ – 1

2) ಬ್ರಹ್ಮಗುಪ್ತ

3) ಭಾಸ್ಕರಾಚಾರ್ಯ

4) ಭಾಸ್ಕರಾಚಾರ್ಯ – 2

**ಆರ್ಯಭಟನ 2 ಪ್ರಮುಖ ಕೃತಿಗಳೆಂದರೆ,**

1) ಆರ್ಯಭಟೀಯ (ಗಣಿತಶಾಸ್ತ್ರ ಮತ್ತು ಖಗೋಳಶಾಸ್ತ್ರ ಸಂಗ್ರಹ)

2) ಆರ್ಯಭಟ ಸಿದ್ದಾಂತ

ಗ್ರೆಗೋರಿಯನ್ ಕ್ಯಾಲೆಂಡರ್ ಚಾಲ್ತಿಗೆ ಬರುವವರೆಗೂ ನಮ್ಮ ದೇಶದಲ್ಲಿ ಆರ್ಯಭಟೀಯನ ಪಂಚಾಂಗ ಪದ್ದತಿಯೇ ಜಾರಿಯಲ್ಲಿತ್ತು. ಈ ಪಂಚಾಂಗವನ್ನು ಆರ್ಯಭಟನು ಗ್ರಹಗಳ ಚಲನೆ ಮತ್ತು ಗ್ರಹಣಗಳ ಬಗ್ಗೆ ಮುನ್ಸೂಚನೆ ನೀಡಲು ರಚಿಸಿದ್ದಾಗಿತ್ತು. (ಅಂತರಾಷ್ಟ್ರೀಯ ಖಗೋಳ ವಿಜ್ಞಾನಿಗಳ ಸಂಘ ಚಂದ್ರನ ಮೇಲಿನ ಒಂದು ಕುಳಿಗೆ) ಆರ್ಯಭಟನ ಹೆಸರಿಡಲಾಗಿದೆ.

**ಬ್ರಹ್ಮಗುಪ್ತ: ಕೃತಿಗಳು**

ಬ್ರಹ್ಮಗುಪ್ತ ಸಿದ್ಧಾಂತ ಮತ್ತು ಖಂಡಖಾದ್ಯಕ ಕೆಪ್ಲರ್ ಮಂಡಿಸಿದ್ದ ಪ್ಯಾರಾಲ್ಯಾಕ್ಸ್ ಸಿದ್ಧಾಂತ ಖಂಡಖಾದ್ಯಕ ಕೃತಿಯ ನಕಲಾಗಿದೆ.

## ಭಾಸ್ಕರ್ – 2

ಇವರ ಪ್ರಮುಖ ಕೃತಿ – ಸಿದ್ಧಾಂತ ಶಿರೋಮಣಿ. ಇದರಲ್ಲಿ 2 ಭಾಗಗಳಿದ್ದು 1) ಗೋಳಾಧ್ಯಾಯ (ಖಗೋಳ), 2) ಗ್ರಹಗಣಿತ.

## ಖಗೋಳಶಾಸ್ತ್ರದಲ್ಲಿ ಭಾರತೀಯರ ಕೊಡುಗೆಗಳು:

1) ಆರ್ಯಭಟ 'ಭೂಮಿಯ ಪರಿಭ್ರಮಣ' ಕಲ್ಪನೆಯನ್ನು ವಿವರಿಸಿ, ದೈನಂದಿನ ಚಲನೆಯ ಕುರಿತು ಹೇಳಿ 365 ದಿನ 6 ಗಂಟೆ 12 ನಿಮಿಷದ ನಿಖರ ಮಾಹಿತಿಯನ್ನು ನೀಡಿದ್ದನು. ಆರ್ಯಭಟನು ಭೂ ಕೇಂದ್ರ ಸಇದ್ಧಾಂತವನ್ನು ತಿರಸ್ಕರಿಸಿ, ಭೂಮಿಯು ತನ್ನ ಅಕ್ಷದಲ್ಲಿ ಸುತ್ತುತ್ತದೆ ಮತ್ತು ನಕ್ಷತ್ರಗಳು ಆಕಾಶದಲ್ಲಿ ಸ್ಥಿರವಾಗಿವೆ ಎಂಬುದು ಈತನ ಖಚಿತ ಅಭಿಪ್ರಾಯ.

   ಭೂಮಿಯ 1 ನಾಕ್ಷತ್ರಿಕ ಪ್ರಕ್ಷಿಣಿ ಅವಧಿ 23 ಗಂಟೆ 56 ನಿಮಿಷ 4.1 ಸೆಕೆಂಡುಗಳು ಎಂದು ಅಂದೇ ಲೆಕ್ಕಾಚಾರ ಹಾಕಿದ್ದ.

2) ಗ್ರಹಗಳು ನಿರಂತರ ಚಲನೆಯನ್ನು ಹೊಂದಿರುವುದರ ಬಗೆಗೆ ಆರ್ಯಭಟ ವಿವರಿಸಿದ್ದನು.
3) ಚಂದ್ರಗ್ರಹಣದ ಕುರಿತು, ಅದರ ಸಮಯದ ಕುರಿತು ಮತ್ತು ಗ್ರಹಣದ ಕಾರಣಗಳ ಕುರಿತು ಸಹ ಆರ್ಯಭಟ ಪರಿಚಯ ನೀಡಿರುತ್ತಾನೆ.
4) ಭಾಸ್ಕರ 2 ರವರ ಸಿದ್ಧಾಂತ ಶಿರೋಮಣಿಯಲ್ಲಿ ಗ್ರಹಗಳ ಚಲನೆ ಮತ್ತು ಗುರುತ್ವಾಕರ್ಷಣೆ ಉಲ್ಲೇಖವಿದೆ.
5) ಸೂರ್ಯದೇವನಿಗೆ ನಮಸ್ಕಾರ ಮಾಡುವ ಸ್ತೋತ್ರ ತಿಳಿಸುವಂತೆ 'ನಿಮಿಷಾರ್ಧದಲ್ಲಿ 2202 ಯೋಜನೆಗಳನ್ನು ಕ್ರಮಿಸುವ ನಿನಗೆ ನಮಸ್ಕಾರ.'
6) ಸಾಯಣಾಚಾರ್ಯರ ಪ್ರಕಾರ 1 ಯೋಜನೆ = 9.0625 ಮೈಲಿ. ಇದರ ಪ್ರಕಾರ ಬೆಳಕಿನ ವೇಗ 185.016 ಮೈಲಿ ಸೆಕೆಂಡ್.
7) ಋಗ್ವೇದದ 1ನೇ ಮಂಡಲದಲ್ಲಿ ಗ್ರಹಗಳ ಕಕ್ಷೆ ದೀರ್ಘವೃತ್ತಾಕಾರ ಎಂದು ವಿವರಿಸಲಾಗಿದೆ.

   ಹೀಗೆ ಖಗೋಳಶಾಸ್ತ್ರಕ್ಕೆ ಪ್ರಾಚೀನ ಭಾರತದ ಕೊಡುಗೆ ಅಪಾರ.

## ಭೌತಶಾಸ್ತ್ರ:

1) ತರ್ಕ ಸಂಗ್ರಹ ಕೃತಿಯಲ್ಲಿ ಯಂತ್ರಶಾಸ್ತ್ರದ ಚಲನೆಯ ಮೇಲ್ಮುಖ ಚಲನೆ, ಕೆಳಮುಖ ಚಲನೆ, ಸಂಕೋಚ, ವಿಕಾಸ ಮತ್ತು ನಡೆಯುವುದು ಎಂಬ 5 ವಿಧದ ಚಲನಶಕ್ತಿಗಳ ಕುರಿತು ವಿವರಣೆ ನೀಡಲಾಗಿದೆ.
2) ಶ್ರೀಧರಾಚಾರ್ಯರ 'ನ್ಯಾಯ ಕರಿದಶೀ' ಕೃತಿಯು ದ್ರವ್ಯದ ಸ್ಥಿತಿಸ್ಥಾಪಕತ್ವದ ಕುರಿತು ವಿವರಿಸುತ್ತದೆ.
3) ರಸಾರ್ಣವ ಕೃತಿಯು ಅಯಸ್ಕಾಂತಗಳು ಮತ್ತು ಕಾಂತಶಕ್ತಿಯ ಕುರಿತು ಮಾಹಿತಿ ನೀಡುವುದರ ಮೂಲಕ ಆಗಲೇ ಅಯಸ್ಕಾಂತಗಳ ಬಳಕೆಯನ್ನು ಪರಿಚಯಿಸಿದ್ದವು.
4) ನ್ಯಾಯದರ್ಶನ ಎಂಬ ಕೃತಿಯು ದೃಷ್ಟಿ ಶಾಸ್ತ್ರ, ಮಸೂರಗಳು, ಕಾಮನಬಿಲ್ಲು, ವರ್ಣಗಳ ಕುರಿತಾಗಿ ಮಾಹಿತಿ ನೀಡುತ್ತದೆ. ಈ ಕಾಲದಲ್ಲೇ 90 ವಿಧದ ಅಯಸ್ಕಾಂತ ಪಟ್ಟಿ ಮಾಡಲಾಗಿತ್ತು. ಕಾಮನಬಿಲ್ಲಿಗೆ ಕಾರಣ ಮತ್ತು ಮಸೂರಗಳ ಬಗೆಗೆ ಅರಿವಿದ್ದದ್ದು ಸ್ಪಷ್ಟ.

## ರಸಾಯನಶಾಸ್ತ್ರ:

1) ಭಾರತದಲ್ಲಿ ರಸಾಯನಶಾಸ್ತ್ರವು ಪಾದರಸ, ಸತು ಮತ್ತು ತಾಮ್ರಗಳ ಮಿಶ್ರಲೋಹಗಳ ತಯಾರಿಕಾ ರೂಪದಲ್ಲಿ 3000 ವರ್ಷಗಳ ಹಿಂದೆಯೇ ಬಳಕೆಯಲ್ಲಿತ್ತು.

2) ಯೂರೋಪ್‌ನ ಪ್ಯಾರಾಸೆಲ್ಸಸ್‌ನಂತೆಯೇ ನೊಂದ ರೋಗಿಗಳನ್ನು ನರಳಾಟದಿಂದ ಮುಕ್ತಗೊಳಿಸುವುದೇ ಪ್ರಾಚೀನ ರಸಾಯನಶಾಸ್ತ್ರದ ಉದ್ದೇಶವಾಗಿತ್ತು. ಚರಕ ಮತ್ತು ಸುಶ್ರುತ ಸಂಹಿತೆಗಳು ಅಂದಿನ ರಸಾಯನಶಾಸ್ತ್ರ ಔಷಧಿಶಾಸ್ತ್ರದ ಬಗ್ಗೆ ಬೆಳಕು ಚೆಲ್ಲುತ್ತದೆ.

3) ಆಯುರ್ವೇದ ಮತ್ತು ಔಷಧ ವಿಜ್ಞಾನದಲ್ಲಿ ಸಸ್ಯೋತ್ಪನ್ನಗಳ ಸಂಸ್ಕರಣಾ ವಿಧಾನವು ಆಗಲೇ ಚಿರಪರಿಚಿತವಾದ ವಿಷಯವಾಗಿತ್ತು.

4) ಆಗಿನ ಪ್ರಯೋಗ ಶಾಲೆಯಲ್ಲಿ ರಾಸಾಯನಿಕ ಮತ್ತು ವಿಜ್ಞಾನ ಪರೀಕ್ಷೆಗಾಗಿ 32 ಬಗೆಯ ಉಪಕರಣಗಳನ್ನು ಬಳಸುತ್ತಿದ್ದರು.

5) ರಾಸಾಯನಿಕದ ಪ್ರಯೋಗಾಲಯದ ಜಾಗ ಮತ್ತು ಸ್ವರೂಪದ ಬಗ್ಗೆ ರಸರತ್ನ ಸಮುಚ್ಚಯ ಗ್ರಂಥದ 7ನೇ ಅಧ್ಯಾಯದಲ್ಲಿ ಉಲ್ಲೇಖವಿದೆ.

6) ಭಟ್ಟಿ ಇಳಿಸುವಿಕೆ ಪಾತ್ರೆಗಳು – ಕೋಷ್ಠೀಯಂತ್ರ ಮತ್ತು ಢೇಕಿಯಂತ್ರ.

(ಕೋಷ್ಠೀಯಂತ್ರ – ಅದಿರುಗಳ ಸಾರ ಪಡೆಯಲು ಉಪಯುಕ್ತ.)

(ಢೇಕಿಯಂತ್ರ – ಭಟ್ಟಿ ಇಳಿಸುವಿಕೆ ಯಂತ್ರ).

(ಲೇರ್ಯಕ್‌ಪಾತನ ಯಂತ್ರ – ಓರೆ ಭಟ್ಟಿ ಇಳಿಸುವಿಕೆ).

7) ಅಗಸ್ತ್ಯ ಸಂಹಿತೆಯಲ್ಲಿ ಕೋಶದ ಉತ್ಪಾದನೆ ಕುರಿತಾದ ವಿವರಣೆ ಇದೆ.

8) ಶಕ್ರ ನೀತಿಯು ಸ್ಫೋಟಕಗಳ ಕುರಿತು ವಿವರಿಸಲಾಗಿದೆ.

9) ಸೋಸುವಿಕೆ, ಕಷಾಯ ಕುದಿಸುವಿಕೆ, ಭಟ್ಟಿ ಇಳಿಸುವಿಕೆಯ ಮೂಲಕ ವನಸ್ಪತಿಗಳ ಸಾರವನ್ನು ಔಷಧಿಗಳಿಗಾಗಿ ಸಿದ್ಧಪಡಿಸಲಾಗುತ್ತಿತ್ತು.

10) ನಾನಾ ರೀತಿಯ ಲೋಹ ಭಸ್ಮಗಳನ್ನು ನಿರ್ದಿಷ್ಟ ಉಷ್ಣತೆ ಹಾಗೂ ಒತ್ತಡದಲ್ಲಿ ತಯಾರಿಸಲಾಗುತ್ತಿತ್ತು.

11) ಪ್ರಯೋಗಶಾಲೆಯ ಪೂರ್ವ ದಿಕ್ಕಿನಲ್ಲಿ ಪಾದರಸ ಸ್ತಂಭವಿರಬೇಕು. ಕರಗಿಸುವುದು ಆಗ್ನೇಯದಲ್ಲಿ, ಕಲ್ಲಿನ ಕೆಲಸ ದಕ್ಷಿಣದಲ್ಲಿ, ಪಶ್ಚಿಮದಲ್ಲಿ ಸ್ವಚ್ಛತಾ ವಿಭಾಗ ಹೀಗೆ ವಿಂಗಡಣೆ ಮಾಡಿದೆ.

12) ಶುಕ್ರನೀತಿ ಅಧ್ಯಾಯ–4ರಲ್ಲಿ ತಿಳಿದಿರುವಂತೆ (ಶುಕ್ರಾಚಾರ್ಯ) ಇದ್ದಿಲು+ಗಂಧಕ+ಪೊಟ್ಯಾಸಿಯಂ ನೈಟ್ರೇಟ್, ಸೀಸದ ಆಕ್ಸೈಡ್, ಅಂಟು ದ್ರವ್ಯ ಬೆರೆಸಿ ಬೆಂಕಿ ಸೋಕಿಸಿ ಸ್ಫೋಟಕ ಪಡೆಯಬಹುದು ಎಂದು ಆಗಲೇ ತಿಳಿಸಲಾಗಿತ್ತು.

## ಸಸ್ಯಶಾಸ್ತ್ರ:

ಋಷಿಗಳಾದ ಭಾರದ್ವಾಜ ಹಾಗೂ ಭೃಗು ಇವರುಗಳ ನಡುವಣ ಸಂವಾದದಲ್ಲಿ ಸಸ್ಯಗಳು 5 ಬಗೆಯ ಜ್ಞಾನವನ್ನು ಹೊಂದಿದ್ದು ಇವು ಸಜೀವಿಗಳೆಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

1) ಸುಶ್ರುತ ಸಂಹಿತೆಯ ಸಸ್ಯಗಳನ್ನು 4 ಬಗೆಯಾಗಿ ವಿಂಗಡಣೆ.

1. ವನಸ್ಪತಿ – ಹೂ ಬಿಡದ ದೊಡ್ಡ ಮರಗಳು
2. ವೃಕ್ಷ – ಹೂ ಹಾಗೂ ಫಲ ಕೊಡುವ ಮರಗಳು

3. ವೀರುಧ – ಬಳ್ಳಿ

4. ಓಷಧಿ – ಜೀವಸತ್ವ ನೀಡುವ ಸಸ್ಯ.

2) ಮಹಾಭಾರತದ ಶಾಂತಿಪರ್ವದಲ್ಲಿ – (ಅಧ್ಯಾಯ 184) ಸಸ್ಯಗಳು ಸುಖ ದು:ಖಗಳನ್ನು ಅನುಭವಿಸುತ್ತವೆ. ಅವುಗಳನ್ನು ಕತ್ತರಿಸಿದರೆ ಮತ್ತೇ ಜೀವತಳೆಯುತ್ತವೆಂಬ ಉಲ್ಲೇಖವಿದೆ. ಸಸ್ಯಗಳು ಆಹಾರ ತಯಾರಿಸಿಕೊಳ್ಳುತ್ತವೆಂಬ ಉಲ್ಲೇಖವಿದೆ. (20ನೇ ಶತಮಾನದಲ್ಲಿ ಜಗದೀಶ ಚಂದ್ರ ಬೋಸರು ಈ ಮಾತನ್ನು ಋಷಿಗಳ ಹೇಳಿಕೆಯನ್ನು ದೃಢೀಕರಿಸಿದರು.)

3) ಸಸ್ಯಗಳು ತಮ್ಮ ಪಾದ (ಬೇರಿನ ಮೂಲಕ) ಜಲವನ್ನು ಹೀರುತ್ತವೆ ಎಂದು 16ನೇ ಶ್ಲೋಕ (ಶಾಂತಿಪರ್ವ) ದೃಢಪಡಿಸುತ್ತದೆ.

4) ಮತ್ತೊಂದು ಸಂಶೋಧನೆಯು ಅಮರಕೋಶ, ವೃಕ್ಷಯುರ್ವೇದ ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಕಂಡುಬರುವಂತೆ ಪ್ರಾಚೀನ ಭಾರತದ ಸಸ್ಯಶಾಸ್ತ್ರವು ಅದೆಷ್ಟು ಪರಿಷ್ಕೃತವಾಗಿತ್ತು ಎಂಬುದನ್ನು ದೃಢಪಡಿಸುತ್ತದೆ. 17ನೇ ಶತಮಾನದಲ್ಲಿಯೇ 'ಬಿನೋಮಿನಲ್ ನೋಮೆನ್‌ಕ್ಲಛರ್' ಮೂಲಕ ಸಸ್ಯಗಳನ್ನು ಬಾಹ್ಯ ಚಿಹ್ನೆಯ ಆಧಾರದ ಮೇಲೆ ವರ್ಗೀಕರಿಸಲಾಗಿದೆ.

**ಪ್ರಾಣಿಶಾಸ್ತ್ರ:**

ಸುಶ್ರುತ ಸಂಹಿತೆಯಲ್ಲಿ ಅಧ್ಯಾಯ 1 ಶ್ಲೋಕ 30. ಚರಪ್ರಾಣಿಗಳನ್ನು 4 ವಿಧವಾಗಿ ವಿಂಗಡಣೆ.

1) ಜರಾಯುಜ – ಗರ್ಭದಿಂದ ಜನನ

2) ಅಂಡಜ – ಮೊಟ್ಟೆಯಿಂದ

3) ಸ್ವೇದಜ – ಬೆವರಿನಿಂದ – ಹೇನು, ಜಿಗಟ್

4) ಉದ್ಭಿಜ – ಸೀಳಿಕೊಂಡು ಹೊರಬಂದವು – ಕಪ್ಪೆ, ಇಂದ್ರಗೋಪ.

**ವೈದ್ಯಶಾಸ್ತ್ರ:**

1) ನಾಲ್ಕು ವೇದಗಳಲ್ಲಿ ಕೊನೆಯದಾದ ಅಥರ್ವವೇದದಲ್ಲಿ ರೋಗಗಳು ಹಾಗೂ ಅವುಗಳ ಚಿಕಿತ್ಸೆಯ ಬಗೆಗಿನ ಮಂತ್ರಗಳೂ ಕಂಡುಬರುತ್ತವೆ. ಇದು ಆಯುರ್ವೇದದ 8 ವಿಭಾಗಗಳ ವಿಷಯವನ್ನೂ ತಿಳಿಸುತ್ತದೆ.

2) ಇಂದಿಗೂ ಕೂಡ ಆಯುರ್ವೇದದಲ್ಲಿ ಬಳಕೆಯಾಗುವ 'ಶಿಲಾಜತು' ಎನ್ನುವ ದ್ರವ್ಯವು ಸಿಂಧೂ ನಾಗರೀಕತೆಯ ಉತ್ಖನನದಲ್ಲಿ ಕಂಡಿದೆ.

3) ಆಯುರ್ವೇದವು 3 ಪರಂಪರೆ ಕಂಡಿತು.

ಅ) ಆತ್ರೇಯ ಪರಂಪರೆ (ಕಾಯ ಚಿಕಿತ್ಸಾ) – ಚರಕಾಚಾರ್ಯರು.

ಬ) ಧನ್ವಂತರಿ (ಶಸ್ತ್ರ ಚಿಕಿತ್ಸೆ) – ಸುಶ್ರುತ

ಕ) ಕಾಶ್ಯಪ (ಪ್ರಸೂತಿ) – ವಾಗ್ಭಟಾಚಾರ್ಯ

4) ಚರಕ ಸಂಹಿತೆ ಪ್ರಕಾರ ದೇಹದ ಬಲವೃದ್ದಿಕರ ಅಂಶಗಳೆಂದರೆ ಉತ್ತಮವಾದ ಕುಲದಲ್ಲಿ ಜನನ, ಉತ್ತಮ ವೀರ್ಯದಿಂದ ಜನನ, ಪುಷ್ಟಿಕರ ಆಹಾರ, ಆರೋಗ್ಯಕರ ಶರೀರ, ಸಮೃದ್ದಿಯುತ ಯೌವ್ವನ.

5) ಇಲ್ಲಿ ಆಯುರ್ವೇದವು ಕೇವಲ ರೋಗ ಹಾಗೂ ಅವುಗಳ ಚಿಕಿತ್ಸೆಗೆ ಮಾತ್ರ ಸೀಮಿತವಾದ ಶಾಸ್ತ್ರವಲ್ಲಾ, ದೇಹದ ಸಂಪೂರ್ಣ ಸ್ವಾಸ್ಥ್ಯಕ್ಕು ಗಮನವನ್ನು ನೀಡುತ್ತದೆ.

6) ಚರಕ ಸಂಹಿತೆಯು ಆಯುರ್ವೇದದ 8 ವೈಶಿಷ್ಟ್ಯಗಳನ್ನು ತಿಳಿಸಿದೆ. ಉದಾ: ಅಭ್ಯಂತರ ಚಿಕಿತ್ಸೆ (ಕಣ್ಣು, ಕಿವಿ, ಮೂಗು), ಶಸ್ತ್ರ ಚಿಕಿತ್ಸೆ, ಬಾಲರೋಗ ಚಿಕಿತ್ಸೆ, ವಿಷ ಚಿಕಿತ್ಸೆ, ಮನೋರೋಗ, ವಾಜೀಕರಣ (ವೃಷ್ಯ).

7) ಸುಶ್ರುತ ಸಂಹಿತೆಯು ಮಾನವ ಶರೀರದ ರಚನಾಶಾಸ್ತ್ರದ ಬಗ್ಗೆ ತಿಳುವಳಿಕೆ ಮೂಡಿಸಿತು.

(ಚರ್ಮದ 7 ಪದರ, ಏಳು ಧಾತು, 700 ರಕ್ತನಾಳ, 24 ದಮನಿ, 9 ಬಾಹ್ಯದ್ವಾರ, 210 ಕೀಲು, 2 ಕರುಳು).

8) ಸುಶ್ರುತ ಸಂಹಿತೆಯ ಮರ್ಮಸ್ಥಾನಗಳ ಬಗೆಗೆ ಉಲ್ಲೇಖವನ್ನು ನೀಡಿತ್ತು. (ಯಾವ ಸ್ಥಾನಕ್ಕೆ ಪೆಟ್ಟಾದಾಗ ಮರಣ ಸದೃಶ ವೇದನೆ ಉಂಟಾಗುತ್ತೋ, ಅದೇ ಮರ್ಮ ಸ್ಥಾನ).

9) ಅಷ್ಟಾಂಗ ಹೃದಯ: (ವಾಗ್ಭಟನ) ಗ್ರಂಥದಲ್ಲಿ ಭ್ರೂಣ ಶಾಸ್ತ್ರ ಮತ್ತು ಪ್ರಸೂತಿ ತಂತ್ರ, ಭ್ರೂಣದ ಬೆಳವಣಿಗೆ ಮತ್ತು ಅಭಿವೃದ್ಧಿ ಬಗ್ಗೆ ಉಲ್ಲೇಖ.

10) ಚರಕ ಸಂಹಿತೆಯಲ್ಲಿ ನಮೂದಿಸಿದಂತೆ 3000 ವರ್ಷಗಳ ಹಿಂದೆಯೇ ಭಾರತದಲ್ಲಿ ಜನ್ಮಜಾತ ಅಂಗವೈಕಲ್ಯಗಳಿಗೆ ಯಾವುದೇ ಅತಿಮಾನುಷ ಶಕ್ತಿಗಳನ್ನು ಹೊಣೆಯಾಗಿಸದೇ, ತಂದೆ ತಾಯಿಯವರ ಜೀನ್ ವಿಕೃತಿಯೇ ಕಾರಣ ಎಂದು ವೈಜ್ಞಾನಿಕವಾಗಿ ತಿಳಿಸಿರುವುದು ಅತ್ಯಂತ ಮನೋಜ್ಞ ಸಂಗತಿಯಾಗಿದೆ.

11) ಧನ್ವಂತರಿ ಶಿಷ್ಯನಾದ ಸುಶ್ರುತನು ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಸೂತ್ರಗಳನ್ನು ಮೊದಲ ಬಾರಿಗೆ ಕ್ರೋಢೀಕರಿಸಿದನು.

* ಕರುಳಿನ ಶಸ್ತ್ರ ಚಿಕಿತ್ಸೆ
* ಮೂತ್ರಕೋಶದಲ್ಲಿ ಕಲ್ಲನ್ನು ತೆಗೆಯುವುದು
* ಮೂಗಿನ ಸುರೂಪಿ ಶಸ್ತ್ರ ಚಿಕಿತ್ಸೆ

12) ಎಲ್ಲಾ ರೀತಿಯ ಶಸ್ತ್ರ ಕ್ರಿಯಾ ಉಪಕರಣಗಳಿದ್ದವು.

13) ಪಂಚಕರ್ಮ ಚಿಕಿತ್ಸೆ (ದೇಹದ ವಿಷ ವಸ್ತು, ಮಲ ಹೊರಹಾಕಲು).

14) ಸಸ್ಯ ಔಷಧಿ ನೀಡಿ ವಾಂತಿ ಮಾಡಿಸುವುದು.

15) ಜಿಗಣೆಯಿಂದ ರಕ್ತ ಹೀರಿಸುವ ಚಿಕಿತ್ಸೆ.

ಇವೆಲ್ಲವೂ ಆಧುನಿಕ ಕಾಲದ ವೈದ್ಯಕೀಯ ಚಿಕಿತ್ಸೆಗೆ ತುಂಬಾ ಹತ್ತಿರವಾಗಿವೆ.

**ವಾಸ್ತುಶಾಸ್ತ್ರ:**

1) ಮತ್ಸ್ಯ ಪುರಾಣದಲ್ಲಿ ಕಟ್ಟಡ ನಿರ್ಮಾಣ, ಮಣ್ಣು ಪರೀಕ್ಷೆಯ ಕುರಿತು ಮತ್ತು ವಿಗ್ರಹಗಳ ಕುರಿತಾದ ಮಾಹಿತಿಯನ್ನು ಕಾಣಬಹುದಾಗಿದೆ.

2) ಮಯಮತನ ಕೃತಿಯಲ್ಲಿ ಇಟ್ಟಿಗೆ ತಯಾರಿಕೆ, ಗಾರೆ ಕಲಿಸುವುದು, ಕಂಬಗಳ ಜೋಡಣೆ, ಸ್ವಸ್ತಿಕ ವಿನ್ಯಾಸಗಳ ಕುರಿತಾದ ಮಾಹಿತಿ ಇದೆ.

3) ಉಪನಿಷದ್ ಕೃತಿಯಲ್ಲಿ ದೇಗುಲ ವಿನ್ಯಾಸ, ಶಿಲೆಗಳ ಆಯ್ಕೆ, ಕೆತ್ತನೆಯ ಸಾಧನಗಳ ವಿವರಣೆ ಇದೆ.

4) ಶುಕ್ರನೀತಿ ಕೃತಿಯಲ್ಲಿ ನಗರ ಯೋಜನೆ ರಸ್ತೆಗಳು ಮತ್ತು ನಗರದ ನೀಲನಕ್ಷೆಯನ್ನು ಕಾಣಬಹುದು.

5) ಅರ್ಥಶಾಸ್ತ್ರ ಕೃತಿಯು ಗೃಹ ನಿರ್ಮಾಣಗಳ ಸೂತ್ರಗಳು, ದಿಬ್ಬಗಳ ನಿರ್ಮಾಣವನ್ನು ವಿವರಿಸುತ್ತದೆ.

6) ವಾಸ್ತುಶಾಸ್ತ್ರದ ಕಲ್ಪನೆಯು ಆಗಲೇ ಬೆಳೆದಿತ್ತು ಎಂಬುದು ಅವರ ಕಟ್ಟಡಗಳಿಂದ ತಿಳಿದು ಬರುತ್ತದೆ.

7) ವಾಸದ ಮನೆಗಳ ಗುಣಮಟ್ಟವು ಪ್ರಾಚೀನ ನಾಗರೀಕತೆಗಳ ಉತ್ಕೃಷ್ಟತೆಯ ಮಾನದಂಡವಾಗಿತ್ತು. ಇವುಗಳಲ್ಲಿ ಅರಮನೆ, ಧಾರ್ಮಿಕ ಸ್ಥಾನ, ಸೇನಾ ನೆಲೆಗಳು ಸೇರಿದ್ದವು.

8) ಅಥರ್ವಣವೇದದ 'ಶಾಲಾ ನಿರ್ಮಾಣ ಸೂಕ್ತ ಹಾಗೂ ಶಾಲಾ ಸೂಕ್ತಗಳು ಶಾಶ್ವತ ಕಟ್ಟಡದ ಕುರಿತಾಗಿ ಸಾಕಷ್ಟು ತಿಳಿಸಿವೆ.

10) ವಾಸ್ತು ಶಾಸ್ತ್ರ, ಬೃಗ ಸಂಹಿತೆಯು ಕಟ್ಟಡ ನಿರ್ಮಾಣಕ್ಕೂ ಮುನ್ನ ಮಣ್ಣು ಪರೀಕ್ಷೆಯ ಬಗೆಗೆ ಹೇಳುತ್ತದೆ.

11) ಇಟ್ಟಿಗೆ ತಯಾರಿಕೆ ಒಂದೇ ಆಕಾರ, ಒಂದೇ ಅಳತೆ ಇವು ಹರಪ್ಪಾ ಸಂಸ್ಕೃತಿಯ ವಿಶೇಷ ಲಕ್ಷಣ.

12) ಆಗಿನ ಕಾಲದಲ್ಲೇ ನಾಗರೀಕತೆ ನಮೂನೆ ಏಕರೂಪವಾಗಿತ್ತು. ಸಾವಿರಾರು ವರ್ಷ ಬಾಳಿಕೆ ಬರುವ ಇಟ್ಟಿಗೆ ತಯಾರಿಸುತ್ತಿದ್ದರೆಂದರೆ ಅಚ್ಚರಿಯೇ. ಹರಪ್ಪಾ ಅವಶೇಷದ ಇಟ್ಟಿಗೆಗಳನ್ನು ಮುಲ್ತಾನ್ – ಲಾಹೋರ್ ರೈಲು ಮಾರ್ಗಕ್ಕೆ ಬಳಸಲಾಯಿತು. ಅಂದರೆ ರೈಲು ಮಾರ್ಗಕ್ಕೂ ಮಿಗಿಲಾದ ತಾಂತ್ರಿಕ ಉನ್ನತಿಯ ಕಥೆಯನ್ನು ಈ ಇಟ್ಟಿಗೆಗಳು ಸಾರಿದವು. (ಇವು ಕುಲುಮೆಯಲ್ಲಿ ಬೇಯಿಸಿದ ಇಟ್ಟಿಗೆಗಳಾಗಿದ್ದವು.)

13) ಕಟ್ಟಡ ತಯಾರಿಕೆ – ಕಂಬಗಳ ಜೋಡಣೆ: ಮೇಷಯುದ್ಧ, ತ್ರಿಖಂಡ, ಸೌಭದ್ರ, ಅರ್ಥಪಾಣಿ ಹಾಗೂ ಮಹಾವೃತ್ತ ಕಂಬ ಸ್ಥಾಪನಾ ನಮೂನೆಗಳು. ಕಾಗದದ ಹಾಳೆಯಷ್ಟೇ ತೆಳುವಾದ ಕಂಬ 50 ಅಡಿ ಅಗಲವಾದ ಕಂಬ.

14) ದೇಗುಲ ವಿನ್ಯಾಸ: ಸಾಂಚಿ ಸ್ತೂಪ, ತಂಜಾವೂರು ಇತ್ಯಾದಿ.

1. ದೇಗುಲ ನಿರ್ಮಾಣಕ್ಕೆ ಶಿಲೆಗಳ ಆಯ್ಕೆ: ಅತೀ ಕಠಿಣ ಶಿಲೆ ಪ್ರತಿಮೆಗಳಿಗೆ ಪರಿಗಣಿಸಬಾರದು. ಯಾವ ಶಿಲೆ ಕಪ್ಪು, ಗಾಢಕಂದು, ಅರಿಶಿಣ ಹಳದಿ ಬಣ್ಣದ ಸಮವರ್ಣದ್ದೋ ಇದನ್ನು ಪ್ರಧಾನ ಪ್ರತಿಮೆಗೆ ಪರಿಗಣಿಸಬೇಕು.

2. ಯಜ್ಞಸ್ತಂಭಕ್ಕೆ, ಅಗ್ನಿಪ್ಪಿಕೆಗೆ – ಮರಳುಗಲ್ಲು ಸೂಕ್ತ.

3. ವಿಗ್ರಹಗಳು–ಮಿಶ್ರ ಲೋಹಗಳು ಪ್ರಾಶಸ್ತ್ಯ.

ವಿಗ್ರಹವನ್ನು 9 ಭಾಗಗಳಾಗಿ ವಿಂಗಡಣೆ ಮಾಡಿಕೊಂಡು ರಚಿಸಬೇಕು.

15) ನಗರ ಯೋಜನೆಗೆ ಪೂರ್ವದಲ್ಲೇ ನೀಲನಕ್ಷೆ ತಯಾರು ಮಾಡುವ ಸಂಪ್ರದಾಯ ಆಗಿನಿಂದಲೇ ಬಂದಿತ್ತು.

16) ರಸ್ತೆಗಳು, ಆಮೆ ಬೆನ್ನಿನಂತೆ ಮೇಲ್ಮೈ ಉಳ್ಳ, ಇಕ್ಕೆಲಗಳಲ್ಲೂ ಇಳಿಜಾರಾಗಿರುವ ರಸ್ತೆ ರಚಿತವಾಗಬೇಕು. ಮಗ್ಗುಲಲ್ಲಿ ನೀರು ಹರಿದು ಹೋಗಲು ಚರಂಡಿ ನಿರ್ಮಾಣವಾಗಬೇಕು.

17) ಸ್ವಸ್ತಿಕ್ ವಿನ್ಯಾಸದಲ್ಲಿ ನಗರ ರಚನೆ.

18) ಹರಪ್ಪಾ ನಾಗರೀಕತೆಯ ಸ್ನಾನದ ಗೃಹಗಳು ಪ್ರಸ್ತುತ ನಾಗರೀಕತೆಗೂ ಮಾದರಿಯಾಗಿವೆ.

**ಲೋಹಶಾಸ್ತ್ರ:**

1) ಚಿನ್ನದ ಬಳಕೆಯನ್ನು ಭಾರತೀಯರು ಪ್ರಥಮವಾಗಿ ಪ್ರಾರಂಭಿಸಿದರು.

2) ಚಿನ್ನ, ಬೆಳ್ಳಿ, ಕಂಚು, ತಾಮ್ರ, ಹಿತ್ತಾಳೆ, ಸತು, ಕಬ್ಬಿಣ ಹಾಗೂ ಉಕ್ಕಿನ ಬಳಕೆಯಲ್ಲಿ ಭಾರತೀಯರದು ಕ್ರಿ.ಪೂ.3000ರಿಂದಲೂ ಮೇಲುಗೈ ಇದೆ.

3) ಕ್ರಿ.ಪೂ.3000ದಿಂದ ಲೋಹಗಳನ್ನು ಕರಗಿಸಿ ಮಿಶ್ರ ಲೋಹ ತಯಾರಿಸುತ್ತಿದ್ದರು. ಇದಕ್ಕೆ ಉದಾಹರಣೆ ಹರಪ್ಪಾ ನಾಗರಿಕತೆಯ ಕಂಚಿನ ವಿಗ್ರಹ.

4) ಈಜಿಪ್ಟ್, ರೋಮ್ ದೇಶಗಳೊಂದಿಗೆ ವ್ಯಾಪಾರದಲ್ಲಿ ಲೋಹಗಳ ಪ್ರಾಧಾನ್ಯತೆಯು ಇತ್ತು. ಲೋಹಗಳ ಆಮದು, ರಫ್ತು ವ್ಯಾಪಾರ ನಡೆಸಲಾಗುತ್ತಿತ್ತು.

5) ಕಬ್ಬಿಣ ಮತ್ತು ಉಕ್ಕಿನಿಂದ ತಯಾರಿಸಿದ ಸ್ವರಕ್ಷಣೋಪಕರಣಗಳನ್ನು ಹರಪ್ಪ ಸಂಸ್ಕೃತಿಯಲ್ಲಿ ಮತ್ತು ಯುದ್ಧೋಪಕರಣಗಳನ್ನು ಆರ್ಯರ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ.

6) ಸುಪ್ರಸಿದ್ಧ ಡೆಮಾಸ್ಕಸ್ ಖಡ್ಗಗಳ ತಯಾರಿಕೆಗೆ ಬೇಕಾಗುವ 'ವೂಟ್ಸಸ್ಟೀಲ್' ಕೂಡಾ ಭಾರತದಿಂದ ರಫ್ತಾಗುತ್ತಿತ್ತು. ಚರಿತ್ರೆಯಲ್ಲಿ ಉಲ್ಲೇಖವಾಗಿರುವ ಮೊಟ್ಟ ಮೊದಲ ಶಸ್ತ್ರಾಸ್ತ್ರ ಸರಬರಾಜು ಭಾರತದಿಂದಲೇ ಆಗಿರುವುದಕ್ಕೆ ದಾಖಲೆಗಳಿವೆ.

7) 1600 ವರ್ಷಗಳ ದೆಹಲಿಯ ಮೆಹರೌಲಿ ಕಂಬ ಲೋಹಶಾಸ್ತ್ರಕ್ಕೆ ಉತ್ಕೃಷ್ಟ ನಿದರ್ಶನವಾಗಿದೆ.

8) ಬಿಹಾರದ 4ನೆಯ ಶತಮಾನದ 2.1 ಮೀಟರ್ ಎತ್ತರದ ಬುದ್ಧನ ಲೋಹದ ವಿಗ್ರಹವು ಸಹ ಪ್ರಾಚೀನ ಭಾರತದ ಲೋಹಶಾಸ್ತ್ರಕ್ಕೆ ಅಪೂರ್ವ ನಿದರ್ಶನವಾಗಿದೆ.

9) ಕ್ರಿ.ಶ. 18ನೆಯ ಶತಮಾನದಲ್ಲಿ ಭಾರತದಲ್ಲಿ 20000ಕ್ಕೂ ಹೆಚ್ಚು ಕುಲುಮೆಗಳು ಇದ್ದವೆಂದು ಹೇಳಲಾಗಿದೆ.

10) ಬೃಹದ್ ವಿಮಾನಶಾಸ್ತ್ರ: ಮಹರ್ಷಿ ಭಾರದ್ವಾಜ: ಶುದ್ಧ ಲೋಹಗಳ ಕರಗಿಸುವಿಕೆ ಬಗ್ಗೆ ವಿವರಿಸಲಾಗಿದೆ. ಯಂತ್ರಸರ್ವಸ್ವಂ ಎಂಬ ಕೃತಿಯ 40 ಅಧ್ಯಾಯದಲ್ಲಿ ವಿಮಾನಶಾಸ್ತ್ರವನ್ನೂ ಉಲ್ಲೇಖಿಸಿದ್ದಾರೆ. ವಿಮಾನ ತಯಾರಿಕಾ ಲೋಹಗಳ ಉಲ್ಲೇಖವಿದೆ.

11) ಗುಪ್ತರು ಟಂಕಿಸಿದ ನಾಣ್ಯಗಳು, ಮೌರ್ಯರ ಶಿಲ್ಪಕಲೆಗಳು ಮುಂತಾದವುಗಳು ಪ್ರಾಚೀನ ಭಾರತದ ಲೋಹಶಾಸ್ತ್ರಕ್ಕೆ ಉದಾಹರಣೆಗಳು.

12) ಎಲ್ಲಾ ರೀತಿಯ ಲೋಹಗಳನ್ನು ಕರಗಿಸಲು 532 ನಮೂನೆಗಳನ್ನು ಉಲ್ಲೇಖಿಸಲಾಗಿತ್ತು. (ಭಸ್ತ್ರಕಾನಿಬಂಧನ– ಗ್ರಂಥ).

13) 2000 ವರ್ಷಗಳ ಹಿಂದೆಯೇ ಭಾರತದಲ್ಲಿ ಉತ್ತಮ ಭಟ್ಟಿ ಇಳಿಸುವ ತಂತ್ರಜ್ಞಾನದಿಂದ ಸತುವು ತಯಾರಾಗುತ್ತಿತ್ತು. ರಾಜಸ್ಥಾನದ ಉದಯಪುರದ ಬಳಿಯ 'ಜವಾರ್' ಎಂಬಲ್ಲಿ ಸತುವಿನ ತಯಾರಿಕಾ ಘಟಕಗಳ ಅವಶೇಷ ದೊರೆತಿವೆ.

14) ವಾಗ್ಭಟನ 'ರಸರತ್ನಸಮುಚ್ಚಯ' ಗ್ರಂಥದಲ್ಲಿ ಲೋಹಭಸ್ಮ ಮತ್ತು ಚಿನ್ನದ ತಯಾರಿಕೆ ಬಗ್ಗೆ ಉಲ್ಲೇಖ ನೀಡಿದ್ದಾನೆ.

15) ವರಾಹಮಿಹಿರನ ಬೃಹತ್ ಸಂಹಿತೆಯು 'ಅಂಟುದ್ರವ್ಯಗಳ' ಬಗೆಗೆ ಉಲ್ಲೇಖ ನೀಡುತ್ತದೆ.

16) ತುಂಬೇಕಾಯಿ, ಬೆಲದಕಾಯಿ, ಬಜೆ ಬೀರು ಮಿಶ್ರಣವನ್ನು 1/8 ಭಾಗದಷ್ಟು ಆಗುವವರೆಗೂ ಕುದಿಸಿ ನಂತರ ಉಳಿದ ಗಷ್ಟಿಗೆ ದಾರಮಂದರಸ, ಮಲ್ಲಿಗೆ, ತೇಗದ ರಸ ಮತ್ತು ಬಿಲ್ವರಸ ಸೇರಿಸಿ 'ವಜ್ರಲೇಪ' ಮಾಡಬಹುದೆಂದಿದ್ದರು.

17) ಅಶೋಕಸ್ತಂಭವು ಮೂಲತ: ಮರಳುಶಿಲಾ ಕಂಬವಾಗಿದ್ದು 'ವಜ್ರಲೇಪ' ಬಳಿದು ಲೋಹದ ತೀರಿ ಮಾಡಲಾಗಿದೆ ಎಂದು ತಿಳಿಸಿದೆ.

## ವೈದ್ಯಕೀಯ ಶಾಸ್ತ್ರದಲ್ಲಿ ಶಸ್ತ್ರ ಚಿಕಿತ್ಸೆ:

ಶಸ್ತ್ರಚಿಕಿತ್ಸಾ ವಿಜ್ಞಾನದ ಮೂಲವ್ಯಕ್ತಿಯಾಗಿ ಧನ್ವಂತರಿಯನ್ನು ಗುರುತಿಸಲಾಗಿದೆ. ಈತನ ಶಿಷ್ಯನಾದ ಸುಶ್ರುತನು ನಂತರ ಶಸ್ತ್ರ ಚಿಕಿತ್ಸೆಯಲ್ಲಿ ಪ್ರಸಿದ್ಧಿಯಾದ. ಇಲ್ಲಿ ಪ್ರಮುಖವಾದ ಶಸ್ತ್ರ ಚಿಕಿತ್ಸೆಗಳೆಂದರೆ,

1) ಕರುಳಿನ ಶಸ್ತ್ರ ಚಿಕಿತ್ಸೆ.

2) ತನ್ನಷ್ಟಕ್ಕೆ ತಾನೇ ಕರಗಿ ಹೋಗುವ ಹೊಲಿಗೆಗಳು.

3) ಮೂತ್ರಕೋಶದ ಕಲ್ಲುಗಳ ನಿವಾರಣೆ.

4) ಮೂಗನ್ನು ಸುರೂಪಗೊಳಿಸುವ ಶಸ್ತ್ರ ಚಿಕಿತ್ಸೆ. (ಪ್ರಸ್ತುತ ಪ್ಲ್ಯಾಸ್ಟಿಕ್ ಸರ್ಜರಿ ಎಂದೇ ಪ್ರಸಿದ್ಧ). ಇದನ್ನು ಭಾರತೀಯ 'ರೈನೋಪ್ಲಾಸ್ಟಿ' ಎಂದು ಕರೆಯಲಾಗುತ್ತಿದೆ.

5) ಹೊಲಿಗೆ ಹಾಕುವುದು: 'ಮೂರ್ವಾ' ಎಂಬ ಬಳ್ಳಿಯ ನಾರಿನಿಂದ ಹೊಲಿಗೆಯನ್ನು ಹಾಕುತ್ತಿದ್ದರು. (ತೆಳುವಾದ ನೂಲಿನಿಂದ).

ಹಾಗಾಗಿ ಶಸ್ತ್ರ ಚಿಕಿತ್ಸೆಯಲ್ಲಿ ಪ್ರಪಂಚಕ್ಕೆ ಮಾದರಿಯಾದವರು ಭಾರತೀಯರು.

## ಕಲೆ (ಕರ್ನಾಟಕವನ್ನು ಹೊರತುಪಡಿಸಿ)

### 1) ಮೌರ್ಯ ಮತ್ತು ಗುಪ್ತರ ಕಾಲದಲ್ಲಿನ ಕಲೆ:

### 1) ಮೌರ್ಯರು:

ಮೌರ್ಯ ಸಾಮ್ರಾಜ್ಯ ಭಾರತದ ಪ್ರಥಮ ಐತಿಹಾಸಿಕ ಮತ್ತು ಅತಿ ದೊಡ್ಡ ಸಾಮ್ರಾಜ್ಯವಾಗಿದೆ. ರಾಜಕೀಯವಾಗಿ ಹರಿದು ಹಂಚಿಹೋಗಿದ್ದ ಭಾರತವನ್ನು ಮೌರ್ಯರು ಒಂದುಗೂಡಿಸಿದರು. ಸ್ಮಿತ್‌ರವರು ಈ ಸಾಮ್ರಾಜ್ಯದ ಅವಧಿಯನ್ನು **'ಕತ್ತಲೆಯಿಂದ ಬೆಳಕಿನೆಡೆಗೆ ಕಾಲಿಡುವ ಸಮಯ'** ಎಂದು ಕರೆದಿದ್ದಾರೆ. ಭಾರತದ ನಿಜವಾದ ಕಲೆ ಪ್ರಾರಂಭವಾದದ್ದು ಮೌರ್ಯರಿಂದಲೇ.

ಮೌರ್ಯರ ಕಲೆ ಗ್ರೀಕ್ ಮತ್ತು ಪರ್ಶಿಯನ್‌ರಿಂದ ಪ್ರಭಾವಿತವಾಗಿತ್ತು. ಕಲ್ಲಿನಿಂದ ವಾಸ್ತುಶಿಲ್ಪ ರಚಿಸಿದವರಲ್ಲಿ ಇವರು ಮೊದಲಿಗರು. ಅಶೋಕನ ಕಾಲದಲ್ಲಾದ ಅತ್ಯುತ್ತಮ ಕಲಾಕೃತಿಗಳು ಭಾರತೀಯ ಕಲೆಯ ಲಕ್ಷಣ ಮತ್ತು ಪ್ರಗತಿಯ ಚಿತ್ರವನ್ನು ಅರಿಯಲು ನಮಗೆ ಸಹಾಯಕವಾಗಿವೆ.

ಈ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯನ ಕಾಲದ ಕಟ್ಟಡಗಳು, ಸ್ಮಾರಕ ಮತ್ತು ಅರಮನೆಗಳು ಮರದಲ್ಲಿ ನಿರ್ಮಾಣವಾದ್ದರಿಂದ ಸಂಪೂರ್ಣವಾಗಿ ಹಾಳಾಗಿ ಹೋಗಿವೆ. ಆದರೆ ಅಶೋಕ ಚಕ್ರವರ್ತಿಯ ಕಾಲದಿಂದ ಶಿಲಾ ಬಳಕೆ ರೂಢಿಗೆ ಬಂತು.

ಮೌರ್ಯರ ಕಲಾ ಸ್ಮಾರಕಗಳನ್ನು 4 ವಿಭಾಗಗಳಲ್ಲಿ ವಿಂಗಡಿಸಬಹುದು.

1) ಸ್ತೂಪಗಳು 2) ಸ್ತಂಭಗಳು

3) ಅರಮನೆಗಳು 4) ಗುಹೆಗಳು

### 1) ಸ್ತೂಪಗಳು:

ಬುದ್ಧನ ಅವಶೇಷಗಳ ಮೇಲೆ ನಿರ್ಮಿಸಿರುವ ಸ್ಮಾರಕಗಳೇ ಸ್ತೂಪಗಳು. ಇವುಗಳು ವೃತ್ತಾಕಾರದ ಗಟ್ಟಿಶಿಲೆಗಳಿಂದ ನಿರ್ಮಿಸಲಾಗಿರುವಂತಹವು. ಬುದ್ಧನ ಜೀವನಕ್ಕೆ ಸಂಬಂಧಪಟ್ಟಂತಹ ಪವಿತ್ರ ಸ್ಥಳ ಗುರುತಿಸುವುದು ಇವುಗಳ ಉದ್ದೇಶ. ದುಂಡನೆಯ ತಳಹದಿ ಹೊಂದಿದ್ದ ಸ್ತೂಪಗಳು ವೃತ್ತಾಕಾರವಾಗಿ ಮೇಲೇರಿ ಛತ್ರಿಯಾಕಾರದ ಗುಮ್ಮಟ ಹೊಂದಿರುತ್ತಿದ್ದವು. ಅಶೋಕನು 84000 ಸ್ತೂಪ ನಿರ್ಮಿಸಿದ್ದು, ಸಾಂಚಿ, ತಕ್ಷಶಿಲಾ, ಶ್ರೀನಗರ, ಖುಷಿನಗರ, ಕಪಿಲವಸ್ತು, ಕಾಶಿ, ಅಮರಾವತಿ, ಗಯಾ, ಪ್ರಯಾಗ, ಅಯೋಧ್ಯ, ಕನೋಜ್, ಕೌಶಾಂಬಿಗಳಲ್ಲಿ ಈ ಸ್ತೂಪಗಳನ್ನು ಕಾಣಬಹುದಾಗಿದೆ. ಸಾಂಚಿ ಸ್ತೂಪ ವಿಶ್ವ ಪರಂಪರೆಯ ತಾಣವಾಗಿದೆ. ಮೆಹ್ರೌಲಿಯ ಕಬ್ಬಿಣದ ಸ್ತೂಪ ಸಹ ಪ್ರಸಿದ್ಧಿ ಪಡೆದಿದೆ.

### 2) ಸ್ತಂಭಗಳು:

1) ಏಕಶಿಲೆಯಿಂದ ನಿರ್ಮಾಣ ಮಾಡಲಾಗಿದೆ. ಅಶೋಕನಿಂದ ಸುಮಾರು 30 ಸ್ತಂಭಗಳನ್ನು ನಿರ್ಮಿಸಲಾಗಿದೆ.

2) ಇವು ಸುಮಾರು 40–50 ಅಡಿ ಎತ್ತರ, 50 ಟನ್ ತೂಕ ಹೊಂದಿದ್ದು, ಇವುಗಳು ತಳಭಾಗ, ನಡುಭಾಗ, ಶೀರೋಭಾಗಗಳಿಂದ ಕೂಡಿವೆ. ತಳಭಾಗದಲ್ಲಿ ನವಿಲಿನ ಚಿತ್ರ ಬಿಡಿಸಲಾಗಿದೆ. ನಡುಭಾಗ ಗಾಜಿನಂತೆ ಹೊಳಪು, ಶಿರಭಾಗ ಬೋದಿಗೆಯು ಏಕಶಿಲೆಯಿಂದ ನಿರ್ಮಾಣವಾಗಿದ್ದು ಅಪೂರ್ಣ ಪ್ರಾಣಿಗಳ ಆಕೃತಿ ಹೊಂದಿದೆ.

3) ಇವುಗಳಲ್ಲಿ ವೃಷಭ ಸ್ತಂಭ, ಸಾರನಾಥದ ಸ್ತಂಭಗಳು ಪ್ರಮುಖವಾಗಿವೆ. ಸಾರನಾಥದ ಸ್ತಂಭದ ಧರ್ಮ ಚಕ್ರ ಏಕತೆಯ ಸಂಕೇತವಾಗಿದೆ ಮತ್ತು ಇದು ಪ್ರಸ್ತುತ ನಮ್ಮ ದೇಶದ ರಾಷ್ಟ್ರ ಲಾಂಛನವಾಗಿದೆ. ಬುದ್ಧನು ತನ್ನ ಮೊದಲ ಪ್ರವಚನ ನೀಡಿದ ಸಾರನಾಥದಲ್ಲಿ ಇದರ ನೆನಪಿಗಾಗಿ ಅಶೋಕನು ಸಾರನಾಥ ಸ್ತಂಭವನ್ನು ನಿರ್ಮಿಸಿದನು.

ಈ ಸ್ತಂಭವು 7 ಅಡಿ ಎತ್ತರವಾಗಿದ್ದು, ಬೋದಿಗೆ ಮೇಲೆ ನಾಲ್ಕು ದಿಕ್ಕುಗಳಿಗೆ ಮುಖ ಮಾಡಿದ ಸಿಂಹಗಳ ಕೆತ್ತನೆಯಿದೆ. ಪೀಠದ ಕೆಳಗೆ ಕಮಲ ಪುಷ್ಪವನ್ನು ಗಂಟೆಯಾಕಾರದಲ್ಲಿ ತಲೆ ಕೆಳಗೆ ಕೆತ್ತಲಾಗಿದೆ. ಮಧ್ಯದಲ್ಲಿ 24 ಅರೆಯ ಧರ್ಮಚಕ್ರವಿದೆ. ಸಿಂಹ, ಆನೆ, ವೃಷಭ ಮತ್ತು ಕುದುರೆಗಳನ್ನು ಕೆತ್ತಲಾಗಿದೆ.

### 3) ಅರಮನೆಗಳು:

1) ಚಂದ್ರಗುಪ್ತನ ವಿಶಿಷ್ಟ ಅರಮನೆ ಪರ್ಷಿಯನ್ ಅರಮನೆ ಮಾದರಿಯಲ್ಲಿ ಇತ್ತು. 8 ಸಾಲು 80 ಕಂಬಗಳ ಭವ್ಯ ಸಭಾಂಗಣವಿತ್ತು. ಆದರೆ ಮರದಿಂದ ನಿರ್ಮಾಣವಾಗಿದ್ದ ಇದು ಬೇಗ ನಾಶವಾಯಿತು.

2) ಪಾಟಲೀಪುತ್ರದ ಭವ್ಯ ಅರಮನೆ ಅಶೋಕನ ಸಾಧನೆಯಾಗಿದ್ದು ಫಾಹಿಯಾನ್ ಇದನ್ನು ನೋಡಿದ್ದಾಗಿ, ಇದು ಮಾನವ ನಿರ್ಮಿತವೆಂದು ಹೇಳಲು ಕಷ್ಟವೆಂದಿದ್ದಾನೆ.

### 4) ಗುಹಾಲಯಗಳು:

1) ಜೈನ ಮತ್ತು ಬೌದ್ಧ ಸನ್ಯಾಸಿಗಳಿಗೆ ವಾಸ ಮಾಡಲು ಗಯಾ ಸಮೀಪ ಬರಾಬರ್ ಮತ್ತು ನಾಗಾರ್ಜುನ್ ಗುಡ್ಡಗಳಲ್ಲಿ ಗುಹಾಲಯ ಕೊರೆಯಲಾಗಿದೆ. ಇವನ್ನು ವಿಹಾರಗಳೆಂದು ಕರೆದಿದ್ದಾರೆ.

2) ಬರಾಬರ್‌ನಲ್ಲಿ 4 ಮತ್ತು ನಾಗಾರ್ಜುನದಲ್ಲಿ 3 ಗುಹೆ ಕೊರೆಯಲಾಗಿದೆ. ಇಲ್ಲಿ 'ಸುಧಾಮ ಗುಹೆ ಮತ್ತು ಲೊಮಷ ಗುಹೆ' ಪ್ರಮುಖವಾದವು.

ಹೀಗೆ ಮೌರ್ಯರ ಕಾಲವು ಭಾರತೀಯ ಕಲಾ ಪೋಷಕರಂತೆ ಕಂಡು ಬಂದಿದ್ದರಲ್ಲಿ ಅಚ್ಚರಿಯಿಲ್ಲ.

## 2) ಗುಪ್ತರ ಕಾಲದ ಕಲೆ:

ಗುಪ್ತರು ವಿದೇಶಿಯರನ್ನು ಹೊರ ಹಾಕಿ ಇಡೀ ಭಾರತವನ್ನಾಳಿದರು, ಭಾರತೀಕರಣಗೊಳಿಸಿದರು. ರಾಷ್ಟ್ರಕ್ಕೆ ದಕ್ಷ ಆಡಳಿತ ನೀಡಿದರು. ಆಗಿನ ಸಮಯದಲ್ಲಿ ಮಹತ್ವ ಕಳೆದುಕೊಂಡಿದ್ದ ಹಿಂದೂ ಧರ್ಮವನ್ನು ರಾಜ್ಯಧರ್ಮವನ್ನಾಗಿಸಿದರು. ಬೌದ್ಧ ಧರ್ಮವನ್ನು ಪ್ರೀತ್ಯಾಧರಗಳಿಂದ ಕಂಡರು. ಭಾರತದ ಪವಿತ್ರ ಭಾಷೆ ಸಂಸ್ಕೃತದಲ್ಲಿ ಶ್ರೀಮಂತ ಸಾಹಿತ್ಯ ಸೃಷ್ಟಿಸಿದರು. ಭಾರತೀಯ ಸಂಸ್ಕೃತಿಯನ್ನು ಮಧ್ಯ ಏಷಿಯಾ, ಆಗ್ನೇಯ ಏಷಿಯಾದಲ್ಲೆಲ್ಲಾ ಪಸರಿಸಿದರು.

ಮೌರ್ಯರಂತೆಯೇ ಅತೀವ ಕಲಾಪ್ರಿಯರಾದ ಗುಪ್ತರು ಸಾಮ್ರಾಜ್ಯದ ವಿಸ್ತರಣೆಯ ಜೊತೆಗೆ ಶಿಲ್ಪಕಲೆ ಮತ್ತು ಚಿತ್ರಕಲೆಗೆ ಅಮೋಘವಾದ ಸೇವೆ ಸಲ್ಲಿಸಿದ್ದಾರೆ. ಕಲಾತ್ಮಕ ದೃಷ್ಟಿಯಿಂದಲೇ ಈ ಯುಗವನ್ನು ಸುವರ್ಣಯುಗ ಎಂದು ಬಿಂಬಿಸುವುದರಲ್ಲಿ ಅತಿಶಯೋಕ್ತಿ ಇಲ್ಲ.

**ಗುಪ್ತರ ಕಲೆಯ ಪ್ರಮುಖ ಲಕ್ಷಣಗಳೆಂದರೆ:**

1) ಭಾರತೀಕರಣ – ಸಂಪೂರ್ಣವಾದ ಭಾರತೀಯ ಕಲಾ ನೈಪುಣ್ಯತೆ.

2) ಬಾಹ್ಯ ಆಡಂಬರ ಬದಲು ಆಧ್ಯಾತ್ಮಿಕ ಪ್ರತಿಬಿಂಬನೆ.

3) ಗುಹಾಲಯದ ಜೊತೆಗೆ ದೇವಾಲಯದ ನಿರ್ಮಾಣ.

4) ನಾಗರ ಮತ್ತು ದ್ರಾವಿಡ ಶೈಲಿಯ ಮಿಶ್ರಣ.

**ಗುಪ್ತರ ವಾಸ್ತುಶಿಲ್ಪದ ಪ್ರಮುಖ ಲಕ್ಷಣಗಳು:**

1) ಇಟ್ಟಿಗೆ ಬದಲು ಕಲ್ಲಿನ ಬಳಕೆ.

2) ದೇವಾಲಯಗಳನ್ನು ಎತ್ತರದ ಜಗುಲಿ ಮೇಲೆ ನಿರ್ಮಿಸಿದ್ದು.

3) ವಿದೇಶಿ ಪ್ರಭಾವದಿಂದ ಮುಕ್ತ.

4) ದೇವತಾ ಮೂರ್ತಿಗಳುಳ್ಳ ಗರ್ಭಗುಡಿ ನಿರ್ಮಾಣ ಮತ್ತು ಪ್ರದಕ್ಷಿಣೆ ಪಥ ಇರುವುದು.

5) ದೇವಾಲಯದ 4 ಮೂಲೆಯಲ್ಲೂ ಸುಂದರ ಕೆತ್ತನೆಯುಳ್ಳ ಕಂಬ ನಿರ್ಮಾಣ ಇದನ್ನು ಹೂಬಳ್ಳಿಗಳಿಂದ ಅಲಂಕಾರ, ಚೌಕಾಕಾರದ ಸಭಾಂಗಣ.

ಒಟ್ಟಿನಲ್ಲಿ ಗುಪ್ತರ ಕಲೆ ಹಿಂದೂ ಕಲೆಯ ಶ್ರೇಷ್ಠತೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದು.

ಗುಪ್ತರ ಕಲೆಯಲ್ಲಿ ಪ್ರಮುಖವಾದ 3 ಸಾಧನೆಗಳೆಂದರೆ,

1) ದೇವಾಲಯಗಳು.

2) ಸ್ತೂಪಗಳು.

3) ಗುಹಾಲಯಗಳು.

### ದೇವಾಲಯಗಳು:

ಗುಪ್ತರ ಕಾಲದಿಂದಲೇ ದೇವಾಲಯಗಳಲ್ಲಿ ವಿಗ್ರಹದ ಆರಾಧನೆ ರೂಢಿಗೆ ಬಂದಿತು. ಸಾಂಚಿ, ಸಾರನಾಥ, ನಲಂದ, ಗಯಾ, ಅಜಂತ, ಉದಯಗಿರಿಗಳಲ್ಲಿ ದೇವಾಲಯಗಳನ್ನು ಕಾಣಬಹುದಾಗಿದೆ. ವಾಸ್ತುಶಿಲ್ಪದ ದೃಷ್ಟಿಯಿಂದ ದೇವಘರ್‌ನ ದಶಾವತಾರ ದೇವಾಲಯ ಮಹತ್ವದ್ದಾಗಿದೆ.

ದೇವಘರದ ದಶಾವತರ ದೇವಾಲಯ (3 ಮಂಟಪ, 4 ದ್ವಾರಗಳಿವೆ.) ಈ ದೇವಾಲಯದ ಕಲೆ ಮುಂದೆ ಜಾವಾ, ಸುಮಾತ್ರಾ, ವಿಯೆಟ್ನಾಂ ಮೇಲೆ ಪ್ರಭಾವವನ್ನು ಬೀರಿತು.

ಭೀಚರ್‌ಗಾಂ ಇಟ್ಟಿಗೆ ದೇವಾಲಯ.

ಸಾಂಚಿ ಶಿವ ದೇವಾಲಯ.

ಅಜಂತ 1,2,10,16,17,19ನೇ ಗುಹೆಗಳು.

### ಸ್ತೂಪಗಳು:

ಇವರು ಕೂಡ ಅನೇಕ ಸ್ತೂಪಗಳನ್ನು ನಿರ್ಮಾಣ ಮಾಡಿದರು. ಅವುಗಳಲ್ಲಿ ಪ್ರಮುಖವಾದವುಗಳು ಸಾರನಾಥದ ಧರ್ಮ ಸ್ತೂಪ, ಗಯಾದ ಬೌದ್ಧ ವಿಹಾರ, ನಳಂದ, ರಾಜಘರನ ಸ್ತೂಪಗಳು.

### ಗುಹಾಲಯಗಳು:

ಅಜಂತಾದಲ್ಲಿ 1,2,10,16,17 ಮತ್ತು 19ನೇ ಗುಹಾಲಯ, ಅಮೃತ ಗುಹಾಲಯ, ಎಲ್ಲೋರದ ಗುಹೆಗಳನ್ನು ನಿರ್ಮಿಸಿದರು.

## 2) ಶಿಲ್ಪಕಲೆ:

ಇವರ ಕಾಲದಲ್ಲಿ ಗಾಂಧಾರ ಕಲೆ ಹಿನ್ನಡೆದು ಮಥುರಾ ಕಲೆ ಪ್ರಾಮುಖ್ಯತೆ ಪಡೆಯಿತು. ಶಿಲ್ಪಗಳಲ್ಲಿ ಧಾರ್ಮಿಕತೆ ಭಕ್ತಿ ಭಾವಕ್ಕೆ ಆಸ್ಪದ ನೀಡಲಾಯಿತು.

ಇವರ ಶಿಲ್ಪಕಲೆಗಳಲ್ಲಿ ಎರಡು ರೀತಿಯನ್ನು ಕಾಣಬಹುದಾಗಿದೆ. ಬೌದ್ಧ ಶಿಲ್ಪಕಲೆ ಮತ್ತು ಹಿಂದೂ ಶಿಲ್ಪಕಲೆ.

ಬೌದ್ಧ ಶಿಲ್ಪಕಲೆಯಲ್ಲಿ ಪ್ರಮುಖವಾಗಿ ಸಾರನಾಥದ ಬುದ್ಧನ ವಿಗ್ರಹ, ಮಥುರಾದ ನಿಂತ ಬುದ್ಧನ ವಿಗ್ರಹ, ನಳಂದದ ಬೌದ್ಧನ ವಿಗ್ರಹ, ಮಥೂರಾದ ಮಹಾವೀರನ ವಿಗ್ರಹ ಮತ್ತು ಹಿಂದೂ ಶಿಲ್ಪಕಲೆಯಲ್ಲಿ ಗ್ವಾಲಿಯರ್‌ನ ಅಪ್ಸರೆಯರ ವಿಗ್ರಹ, ಉದಯಗಿರಿಯ ವಿಷ್ಣು ವಿಗ್ರಹ, ದೆಹಲಿಯ ಮೆಹ್ರೌಲಿ ಸ್ತಂಭ ಶಾಸನ, ಮಥೂರಾದ ವಿಷ್ಣು ವಿಗ್ರಹ, ಕಾಶಿಯ ಕಾರ್ತಿಕೆಯ ವಿಗ್ರಹಗಳು ಪ್ರಮುಖವಾಗಿವೆ.

## 3) ಚಿತ್ರಕಲೆ:

ಗುಪ್ತರ ಚಿತ್ರಕಲೆಯನ್ನು ನಾವು ಅಜಂತ, ಎಲ್ಲೋರ, ಬಾಘ್ ಮತ್ತು ಸಿಗರಿಯಾದಲ್ಲಿ ಕಾಣಬಹುದು. ಅರಮನೆ ದೃಶ್ಯ, ಯುದ್ದ ದೃಶ್ಯ, ಬುದ್ದ ಮತ್ತು ಜಾತಕ ಕಥೆಗಳಿಗೆ ಸಂಬಂಧಿಸಿದ ಚಿತ್ರಗಳಿವೆ.

**ಅಜಂತಾ:**

ಇದನ್ನು ಏಷ್ಯಾದ ಕಲೆಯ ತೊಟ್ಟಿಲು ಎನ್ನಲಾಗುತ್ತದೆ. ಜಗತ್ ಪ್ರಸಿದ್ಧ ಅಜಂತಾ ಚಿತ್ರಶಾಲೆ ಗುಪ್ತರದ್ದು. ಇವರ ಕಾಲದಲ್ಲಿ ಅಜಂತಾ ಗುಹೆಗಳ ಗೋಡೆ ಮೇಲೆ ಮೇಲ್ಛಾವಣಿ ಮೇಲೆ ಭಿತ್ತಿ ಚಿತ್ರಗಳನ್ನು ಬಿಡಿಸಲಾಗಿದೆ. ಅಪ್ಸರೆ, ಗಂಧರ್ವ ಹೂ, ಜಾತಕ ಕಥೆಗಳನ್ನು ಚಿತ್ರಿಸಲಾಗಿದೆ.

1ನೇ ಗುಹೆ – 2ನೇ ಪುಲಿಕೇಶಿ ಪರ್ಷಿಯಾ ರಾಯಬಾರಿ ಖುಸ್ರುನನ್ನು ಆಹ್ವಾನಿಸುತ್ತಿರುವ ದೃಶ್ಯ.

2ನೇ ಗುಹೆ – ಬುದ್ದನ ಜನನ ಮತ್ತು ಇಂದ್ರಲೋಕದ ಚಿತ್ರಗಳು.

10ನೇ ಗುಹೆ – ಬುದ್ದನ ಜನನ ಮತ್ತು ಜಾತಕ ಕಥೆಗಳ ಚಿತ್ರ.

16ನೇ ಗುಹೆ – ಬುದ್ದನು ಸುಜಾತಳಿಂದ ಭಿಕ್ಷಾನ್ನ ಪಡೆಯುತ್ತಿರುವ ಹಾಗೂ ಪರಿತ್ಯಾಗ ಚಿತ್ರಗಳಿವೆ.

17ನೇ ಗುಹೆ – ಯಶೋಧರಾ ರಾಹುಲನನ್ನು ಬುದ್ದನಿಗೆ ನೀಡುತ್ತಿರುವ ತಾಯಿ ಮಗು ಚಿತ್ರ (ಏಷ್ಯಾದ ಅದ್ವಿತೀಯ ಚಿತ್ರ).

19ನೇ ಗುಹೆ – ಬುದ್ದನು ಗುರುವಾಗಿ ಕಪಿಲವಸ್ತುವಿಗೆ ಹಿಂತಿರುಗುತ್ತಿರುವ ದೃಶ್ಯ.

ಗುಪ್ತರ ಕಾಲದಲ್ಲಿ 'ಸುಡಾವೆ' ಮಣ್ಣಿನಿಂದ ನಿರ್ಮಿಸಿದ ಕಲಾಕೃತಿಗಳು ದೊರೆತಿವೆ. (ಸ್ತ್ರೀ, ಪುರುಷ, ಪ್ರಾಣಿ ಆಕೃತಿ, ದೇವತೆ ಚಿತ್ರ).

ಇವರು ಸಂಗೀತ ಪ್ರಿಯರು ಆಗಿದ್ದು ನಾಣ್ಯವೊಂದರಲ್ಲಿ ಸಮುದ್ರಗುಪ್ತನು ವೀಣೆ ನುಡಿಸುತ್ತಿರುವ ಚಿತ್ರವಿದೆ.

ಹೀಗೆ ಗುಪ್ತರ ಕಾಲವು ಕಲೆ ಮತ್ತು ವಾಸ್ತುಶಿಲ್ಪಗಳ ಅದ್ವಿತೀಯ ಸಾಧನೆಗೈದು ಸುವರ್ಣಯುಗ ಎನಿಸಿತು.

## ಖಜುರಾಹೋ ದೇವಾಲಯಗಳು:

ರಜಪೂತರ ಚಾಂದೇಲರಿಂದ (ಬೀಜಾಕ ಭುಕ್ತಿ) ಪ್ರಾರಂಭವಾದ ಈ ಕಲೆಯು 12ನೆಯ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆಗ 80 ದೇವಾಲಯಗಳು ಈ ವಾಸ್ತುಶಿಲ್ಪದಿಂದ ನಿರ್ಮಿತವಾಗಿದ್ದವು. ಆದರೆ ಪ್ರಸ್ತುತ 20 ದೇವಾಲಯಗಳು ಮಾತ್ರ ಕಂಡುಬರುತ್ತವೆ. ಈ ಶಿಲ್ಪಕಲೆಯ ಕಾಲಾವಧಿಯು ಕ್ರಿ.ಶ. 950ರಿಂದ 1050. ಖಜರಾಹೋ ಎಂದರೆ 'ಡೇಟ್ ಪಾಮ್' ಎಂಬರ್ಥ ನೀಡುತ್ತದೆ. ಈ ದೇವಾಲಯಗಳು ಹಿಂದೂ ಮತ್ತು ಜೈನ ದೇವಾಲಯಗಳಿಮದ ಕೂಡಿದ್ದು, ನಾಗರ ಶೈಲಿಯಲ್ಲಿ ನಿರ್ಮಿತವಾಗಿವೆ. ಇವು8 ಶೃಂಗಾರಮಯ ಶಿಲ್ಪ ಕಲೆಗಳಿಗೆ ಪ್ರಸಿದ್ಧ.

ಮಧ್ಯಪ್ರದೇಶದ ಬುಂದೇಲ್ ಖಂಡದ ಒರಿಸ್ಸಾ, ಚಂದೇಲಾ, ಸೋಲಂಕಿ, ಚಿತ್ತಾರ್‌ಪುರ ಜಿಲ್ಲೆಯ ಖಜುರಾಹೋದಲ್ಲಿ ಮಧ್ಯಯುಗದ ವಾಸ್ತುಶಿಲ್ಪ ಉತ್ತುಂಗವಾದ ಶಿಖರವನ್ನು ತಲುಪಿತ್ತು. ಇಲ್ಲಿ 8 ಚ.ಕಿ.ಮೀ. ವ್ಯಾಪ್ತಿಯಲ್ಲಿ 85ಕ್ಕೂ ಹೆಚ್ಚು ವೈಭವೋಪೇತ ದೇವಾಲಯಗಳ ಸಂಕೀರ್ಣ ಕಂಡಿದ್ದು, 20 ದೇವಾಲಯಗಳು ಅಳಿದುಳಿದಿದೆ. ಇಲ್ಲಿನ ಬಹುತೇಕ ದೇವಾಲಯಗಳನ್ನು ಬುಂದೇಲ್‌ಖಂಡದ ಚಂದೇಲ ಅರಸರು ನಿರ್ಮಿಸಿದ್ದರು.

## ಪ್ರಮುಖ ಲಕ್ಷಣಗಳು:

* ಇಲ್ಲಿಯ ದೇವಾಲಯಗಳು ನಾಗರ ಶೈಲಿಯಲ್ಲಿವೆ. ಶೈಲಿ ಹಾಗೂ ನೈಪುಣ್ಯತೆಯ ದೃಷ್ಟಿಯಿಂದ ಚಂದೇಲರ ಕಲಾತ್ಮಕತೆ ಪರಮೋನ್ನತಿ ತಲುಪಿದ್ದನ್ನು ನಾವು ಕಾಣಬಹುದು.

* ದೇವಾಲಯಗಳು ಆವರಣದಿಂದ ಸುತ್ತುವರೆಯಲ್ಪಟ್ಟಿದ್ದು ಶಿಖರದ ಸುತ್ತಲೂ ಚಿಕ್ಕ ಶಿಖರಗಳಿವೆ.

* ಇಲ್ಲಿಯ ದೇವಾಲಯಗಳನ್ನು 3 ಭಾಗಗಳಾಗಿ ವರ್ಗೀಕರಿಸಿದೆ.

1. ಪಶ್ಚಿಮ ದೇವಾಲಯ ಸಮುಚ್ಚಯ: ಲಕ್ಷ್ಮಣ, ಮಾತಂಗೇಶ್ವರ, ವರಾಹ, ವಿಶ್ವನಾಥ, ನಂದಿ, ಮಹಾದೇವ ದೇವಾಲಯಗಳಿವೆ.

2. ಪೂರ್ವ ದೇವಾಲಯ ಸಮುಚ್ಚಯ: ಇಲ್ಲಿ ಬ್ರಹ್ಮ, ವರುಣ, ಜವರಿ ದೇವಾಲಯಗಳಿವೆ.

3. ದಕ್ಷಿಣ ದೇವಾಲಯ ಸಮುಚ್ಚಯ: ಇಲ್ಲಿ ಮಹಾದೇವ ಮತ್ತು ಚತುರ್ಭುಜ ದೇವಾಲಯಗಳಿವೆ. ಕಂಡರಿಯಾ ಎಂಬುದು ಇಲ್ಲಿಯ ಸುಪ್ರಸಿದ್ಧ ದೇಗುಲ. ಇದು ತೀರಾ ಸಂಕೀರ್ಣವಾದ ವಾಸ್ತುಶಿಲ್ಪದಿಂದ ಕೂಡಿದೆ ಮತ್ತು ಅತಿ ಹೆಚ್ಚು ಪ್ರವಾಸಿಗರಿಂದ ಆಕರ್ಷಿತವಾದ ದೇವಾಲಯವಾಗಿದೆ. ಪ್ರಸ್ತುತ 'ಬೀಜಮಂಡಲ ದೇಗುಲವು ಉತ್ಖನನದಲ್ಲಿದೆ. ಮಾತಂಗೇಶ್ವರ ದೇವಾಲಯದಲ್ಲಿ ಮಾತ್ರ ಈಗ ಪೂಜೆ ನೆರವೇರುತ್ತದೆ. ಚೌಸಟ್ ಜೋಗಿಣಿ ದೇಗುಲ 64 ಜೋಗಿಣಿಗಳಿಂದ ಆವೃತವಾಗಿದೆ.

ಈ ಎಲ್ಲ ವಿಶೇಷತೆಗಳಿಂದಾಗಿ ಖಜುರಾಹೋವನ್ನು ವಿಶ್ವ ಪರಂಪರೆ ತಾಣವಾಗಿ ಅಂಗೀಕರಿಸಲಾಗಿದೆ.

## ಮೌಂಟ್ ಅಬುವಿನ ಜೈನರ ದೇವಾಲಯಗಳು:

ರಾಜಸ್ತಾನದ ಮೌಂಟ್ ಅಬುನಿಂದ 2 1/2 ಕಿ.ಮೀ. ದೂರದಲ್ಲಿ ಈ ದೇವಾಲಯಗಳನ್ನು 11ರಿಂದ 13ನೇ ಶತಮಾನದ ನಡುವೆ ನಿರ್ಮಿಸಲಾಗಿದೆ. ಈ ದೇವಾಲಯಗಳನ್ನು ಸೋಲಂಕಿ ಅರಸ ವಾಸ್ತುಪಾಲ ತೇಜ್ಪಾಲರು ನಿರ್ಮಿಸಿದ್ದಾರೆ.

ಈ ದೇವಾಲಯಗಳು ಅಮೃತಶಿಲೆಗಳಿಂದ ಮತ್ತು ಸಂಕೀರ್ಣ ಕೆತ್ತನೆಗಳಿಂದ ಕೂಡಿವೆ. ಇವನ್ನು ದಿಲ್ವಾರ ದೇವಾಲಯ ಎನ್ನುತ್ತಾರೆ. ಜೈನರ ಮೌಲ್ಯಗಳಾದ ಪ್ರಾಮಾಣಿಕತೆ, ಸರಳತೆ, ಮಿತವ್ಯಯಗಳನ್ನು ಈ ವಾಸ್ತುಶಿಲ್ಪದಲ್ಲಿ ಕಾಣಬಹುದು. ಎತ್ತರವಾದ ಗೋಡೆಯಿಂದ ಆವೃತವಾಗಿ, ಅರಣ್ಯದ ಬೆಟ್ಟದ ಮಧ್ಯದಲ್ಲಿ ಈ ಮಂದಿರಗಳಿವೆ.

ಪ್ರಮುಖವಾಗಿ ಕಂಡುಬರುವ ಇಲ್ಲಿನ 5 ಮಂದಿರಗಳು ಈ ಕೆಳಗಿನಂತಿವೆ.

1) ವಿಮಲ್ ವಸಾಹಿ ದೇವಾಲಯ: ಅತ್ಯಂತ ಪ್ರಾಚೀನ ದೇವಾಲಯವಾಗಿದ್ದು, ಕ್ರಿ.ಶ.1031ರಲ್ಲಿ ವಿಮಲ್ ಷಾ ಎಂಬ ಮಂತ್ರಿ ಕಟ್ಟಿಸಿದನು. ಈ ದೇವಾಲಯವು ಜೈನ ತೀರ್ಥಂಕರರಾದ ಆದನಾಥರಿಗೆ ಅರ್ಪಿಸಲಾಗಿದೆ.

2) ಲುನ್ ವಸಾಹಿ ದೇವಾಲಯ: ಈ ದೇವಾಲಯದಲ್ಲಿ 24 ತೀರ್ಥಂಕರಗಳ ಪ್ರತಿಮೆಗಳಿವೆ. ಪ್ರಮುಖವಾಗಿ ನೇಮಿನಾಥರಿಗೆ ಅರ್ಪಿಸಲಾಗಿದೆ. ನೇಮಿನಾಥ ದೇವಾಲಯದ ನವರಂಗದ ಗೋಪುರದ ತೂಗಾಡುವ ಕಮಲವು ಒಂದು ಅದ್ಭುತ ಸೃಷ್ಟಿಯಾಗಿದೆ.

3) ಪೀಥಲರ್ ದೇವಾಲಯ: ಈ ದೇವಾಲಯವನ್ನು ಮೊದಲ ತೀರ್ಥಂಕರರಾದ ವೃಷಭನಾಥರಿಗೆ ಅರ್ಪಿಸಲಾಗಿದೆ.

4) ಪಾರ್ಶ್ವನಾಥ ದೇವಾಲಯ.

5) ಮಹಾವೀರ ಸ್ವಾಮಿ ದೇವಾಲಯ.

## ಒರಿಸ್ಸಾದ ದೇವಾಲಯಗಳು:

ನಾಗರಶೈಲಿಯ ಶುದ್ಧರೂಪವನ್ನು ಪ್ರದರ್ಶಿಸುವ ಈ ದೇವಾಲಯಗಳನ್ನು 7ರಿಂದ 12ನೇ ಶತಮಾನದವರೆಗೆ ನಿರ್ಮಿಸಲಾಗಿದೆ. ಒರಿಸ್ಸಾದ ಭುವನೇಶ್ವರನನ್ನು ಕೇಂದ್ರವಾಗಿರಿಸಿಕೊಂಡು ಸಮುದ್ರ ತೀರದ ಮೇಲೆ ಈಶಾನ್ಯ ವಾಯುವ್ಯ ದಿಕ್ಕುಗಳಲ್ಲಿ ಈ ದೇವಾಲಯಗಳನ್ನು ನಿರ್ಮಿಸಲಾಗಿದೆ. ಈ ದೇವಾಲಯಗಳ ವಿಶೇಷತೆಗಳು ಈ ಕೆಳಗಿನಂತಿವೆ.

1) ಚಚ್ಚೌಕಾದ ಗರ್ಭಗೃಹ, ತ್ರಿರಥ ತಳಪಾಯ, ವಕ್ರವಾದ ಬಾಹ್ಯರೇಖೆಯುಳ್ಳ ಎದ್ದು ಕಾಣುವ ಶಿಖರ ಹೊಂದಿರುತ್ತವೆ.

2) ಪ್ರತಿಯೊಂದು ದೇವಾಲಯದಲ್ಲಿಯೂ ಪಂಚರಥ ತಳ ವಿನ್ಯಾಸವಿದೆ.

3) ಜಾಂಘವನ್ನು ಕೆಳಗೆ ಮತ್ತು ಮೇಲೆ ಅಡ್ಡ ಹೋಗುವ ಪಟ್ಟಿಗಳಿಂದ ಭಾಗ ಮಾಡಲಾಗಿದೆ.

4) ಪ್ರತಿಯೊಂದು ದೇವಾಲಯದಲ್ಲಿಯೂ ಮುನ್ನುಗ್ಗುವ ಸಿಂಹದ ಪ್ರತಿಮೆ ಇರುತ್ತದೆ.

5) ಈ ದೇವಾಲಯಗಳ ಎರಡು ಪ್ರಮುಖ ಲಕ್ಷಣವೆಂದರೆ, ರೇಖಾ ದೇವುಲ್ ಮತ್ತು ಪೀಡಾ ದೇವುಲ್. ರೇಖಾ ದೇವುಲ್ ಎಂದರೆ ಗರ್ಭಗುಡಿಯ ಮೇಲಿನ ಶಿಖರ ಮೇಲೆ ಹೋದಂತೆ ವಕ್ರವಾಗುತ್ತಾ ಹೋಗುವುದು ಮತ್ತು ಪೀಡಾ ದೇವುಲ್ ಎಂದರೆ ಮಂಟಪದ ಮೇಲೆ ಎತ್ತರಕ್ಕೆ ಹೋದಂತೆ ಕಡಿಮೆ ಗಾತ್ರದ ಕಟ್ಟೆಗಳು, ಪಿರಾಮಿಡ್ ಆಕಾರದ ಮಾಳಿಗೆ ಇರುವುದು.

**ಪ್ರಮುಖ ದೇವಾಲಯಗಳು:**

1) ಕೋನಾರ್ಕ್ ಸೂರ್ಯ ದೇವಾಲಯ

2) ಪುರಿ ಜಗನ್ನಾಥ ದೇವಾಲಯ

3) ಅನಂತ ವಾಸುದೇವ ದೇವಾಲಯ

4) ಬ್ರಹ್ಮೇಶ್ವರ ದೇವಾಲಯ

5) ಬ್ರಹ್ಮ ದೇವಾಲಯ

6) ಕಪಿಲೇಶ್ವರ ದೇವಾಲಯ

7) ಮುಕ್ತೇಶ್ವರ ದೇವಾಲಯ

8) ಪರಶುರಾಮೇಶ್ವರ ದೇವಾಲಯ

9) ರಾಜಾ ರಾಣಿ ದೇವಾಲಯ

10) ವೈಟಲ್ ದೇವಾಲಯ

## 1) ಕೋನಾರ್ಕ್ ದೇವಾಲಯ:

ಒರಿಸ್ಸಾದ ಪುರಿ ಜಿಲ್ಲೆಯಲ್ಲಿ ಕೊನಾರ್ಕ್‌ನಲ್ಲಿ ವಿಶ್ವವಿಖ್ಯಾತ 'ಸೂರ್ಯ ದೇವಾಲಯ'ವಿದೆ. ಇದನ್ನು ಪೂರ್ವದ ಗಂಗರಸ 1ನೇ ನರಸಿಂಹದೇವನು 1238–64ರ ಅವಧಿಯಲ್ಲಿ ನಿರ್ಮಿಸಿದನು. ಈ ದೇವಾಲಯವನ್ನು ಸೂರ್ಯ ದೇವನಿಗೆ ಅರ್ಪಿಸಿದನು. ದೇವಾಲಯ ರಥದ ಆಧಾರದಲ್ಲಿದ್ದು 24 ಬೃಹತ್ ಚಕ್ರ ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗ 7 ಕುದುರೆ ನಿರ್ಮಿಸಲಾಗಿದೆ. ದೇವಾಲಯದ ಗೋಪುರ 227 ಅಡಿ ಎತ್ತರವಾಗಿದ್ದು ಗೋಡೆಯ ಮೇಲಿನ ರತಿಕ್ರೀಡೆಗಳು ಎಲ್ಲರ ಗಮನವನ್ನು ಸೆಳೆಯುತ್ತವೆ. 4 ಕಡೆಯಿಂದ 4 ಮಹಾದ್ವಾರವಿದ್ದು, ಗರ್ಭಗುಡಿಯ ಮೇಲೆ 3 ಸೂರ್ಯನ ವಿಗ್ರಹ ನಿರ್ಮಿಸಲಾಗಿದೆ. ಇದು ಕೂಡ ವಿಶ್ವಪರಂಪರೆ ಪಟ್ಟಿ ಸೇರಿದ್ದು, 'ಬ್ಲಾಕ್ ಪಗೋಡ' ಎಂದಿದ್ದಾರೆ.

### 2) ಭುವನೇಶ್ವರ:

ಭುವನೇಶ್ವರದ ಲಿಂಗರಾಜದೇವಾಲಯವು ಭಾರತದ ಅತ್ಯಂತ ದೊಡ್ಡ ಹಾಗೂ ಸುಂದರ ದೇವಾಲಯಗಳಲ್ಲಿ ಒಂದು. ಇದನ್ನು ಬಂಗಾಳದ ಪಾಲರಾಜ ಮಹಿಪಾಲನು ಕ್ರಿ.ಶ.1000ರಲ್ಲಿ ನಿರ್ಮಿಸಿದನು. 520 ಅಡಿ ಉದ್ದ 400 ಅಡಿ ಅಗಲ 180 ಅಡಿ ಎತ್ತರ. ರಾಮೇಶ್ವರಂ ದೇವಾಲಯ ಬಿಟ್ಟರೆ 2ನೇ ಭಾರತದ ದೊಡ್ಡ ದೇವಾಲಯ. ನಾಗರ ಶೈಲಿಯ ಬೃಹತ್ ಗೋಪುರವಿದೆ. ಇಲ್ಲಿಯ ಕಂಬಗಳಲ್ಲಿ ಸಂಗೀತದ ಮಂಟಪವಿದೆ. ದೇವಾಲಯದ ಒಳಗೆ 16000 ಶಿಲ್ಪಕಾ ಕೃತಿಗಳಿವೆ.

### 3) ಪುರಿಯ ಜಗನ್ನಾಥ ದೇವಾಲಯ:

ಒರಿಸ್ಸಾದ ಪುರಿಯ ಜಗನ್ನಾಥ ದೇವಾಲಯವು ಹಿಂದೂಗಳಿಗೆ ಪವಿತ್ರವಾದುದಾಗಿದೆ. ಇದನ್ನು 1030ರಲ್ಲಿ ಪೂರ್ವ ಗಂಗರನ ನರಸಿಂಹದೇವನು ನಿರ್ಮಾಣ ಮಾಡಿದ್ದನು. ಇದು 650 ಅಡಿ ಉದ್ದ 630 ಅಡಿ ಅಗಲವಿದ್ದು 192 ಅಡಿ ಗೋಪುರವಿದೆ. ಇದೊಂದು ವಿಷ್ಣು ದೇವಾಲಯ.

ಹೀಗೆ ಒರಿಸ್ಸಾ ರಾಜ್ಯವೂ ತನ್ನದೇ ಆದ ಶಿಲ್ಪಕಲೆಯುಳ್ಳ ದೇವಾಲಯಗಳಿಂದ ಸ್ಥಾನ ಪಡೆದುಕೊಂಡಿದೆ.

### ಕಲೆಗೆ ಸಂಬಂಧಿಸಿದಂತೆ ಪಲ್ಲವರ ಕೊಡುಗೆಗಳು:

ಕ್ರಿ.ಶ.3ನೇ ಶತಮಾನದಿಂದ 9ನೇ ಶತಮಾನದವರೆಗೆ ದಕ್ಷಿಣ ಭಾರತವನ್ನು ದಕ್ಷ ಆಡಳಿತದೊಂದಿಗೆ ಮುನ್ನಡೆಸಿಕೊಂಡು ಹೋದವರು ಪಲ್ಲವರು. ಪಲ್ಲವರು ಕಲಾಭಿಮಾನಿಗಳು, ಕಲಾ ಕ್ಷೇತ್ರದಲ್ಲಿ ಬೃಹತ್ ಕೊಡುಗೆ ನೀಡಿದವರು. ದಕ್ಷಿಣ ಭಾರತದ ಎಲ್ಲಾ ವಾಸ್ತುಶೈಲಿಗೆ ಮೂಲ ಪ್ರೇರಕವಾದ ದ್ರಾವಿಡ ಶೈಲಿಯಲ್ಲಿ ವಾಸ್ತುವನ್ನು ರೂಪಿಸಿದವರು ಪಲ್ಲವರು.

ಇವರು ನಿರ್ಮಿಸಿದ ದೇವಾಲಯಗಳ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ.

1) ಗರ್ಭಗುಡಿ, ಗೋಪುರಗಳ ನಿರ್ಮಾಣ

2) ವಿಶಾಲವಾದ ಪ್ರಾಕಾರ

3) ಕಂಬಗಳಿಂದ ಕೂಡಿದ ವಿಶಾಲವಾದ ಸಭಾಂಗಣ

4) ಏಕಶಿಲಾ ರಥಗಳು

### ಕಲೆಗೆ ಸಂಬಂಧಿಸಿದ ಇವರ ಕೊಡುಗೆಗಳೆಂದರೆ:

1) ಪಲ್ಲವರು ಮತಸಹಿಷ್ಣುರಾಗಿದ್ದು, ಎಲ್ಲಾ ಧರ್ಮವನ್ನು ಪೋಷಿಸಿದರು. ಹ್ಯೂಯನ್‌ತ್ಸಾಂಗನ್ ಮಾತಿನಂತೆ ಕಂಚಿಯಲ್ಲಿ 100 ಬೌದ್ಧವಿಹಾರಗಳಿದ್ದವಂತೆ. ಪಲ್ಲವರು ಭಕ್ತಿಪಂಥದ ಪ್ರತಿಪಾದಕರು.

2) ದಕ್ಷಿಣ ಭಾರತದಲ್ಲೇ ಪ್ರಥಮ ಬಾರಿಗೆ ದ್ರಾವಿಡ ಶೈಲಿಯಲ್ಲಿ ಉತ್ಕೃಷ್ಟ ವಾಸ್ತುಶಿಲ್ಪ ರಚಿಸಿದ ಕೀರ್ತಿ ಪಲ್ಲವರಿಗೆ ಸಲ್ಲುತ್ತದೆ. ಗರ್ಭಗುಡಿ ಮತ್ತು ಗೋಪುರ ನಿರ್ಮಾಣ, ವಿಶಾಲವಾದ ಸಭಾಂಗಣ (ಕಂಬಗಳಿಂದ) ಏಕಶಿಲಾ ರಥಗಳ ರಚನೆ.

3) ಪಲ್ಲವರ ಕಲೆ 4 ಶೈಲಿಗಳಲ್ಲಿ ವಿಕಾಸ ಹೊಂದಿತ್ತು. ಅವುಗಳು: 1) ಮಹೇಂದ್ರ ಶೈಲಿ 2 ) ಮಾಮಲ್ಲ ಶೈಲಿ 3) ರಾಜಸಿಂಹ ಶೈಲಿ 4) ಅಪರಂಜಿತ ಶೈಲಿ.

4) ಇವರ ವಾಸ್ತುಶಿಲ್ಪವನ್ನು 2 ಹಂತಗಳಲ್ಲಿ ವಿಂಗಡಿಸಲಾಗಿದೆ.

1. ಕ್ರಿ.ಶ.7ನೇ ಶತಮಾನದಲ್ಲಿ ನಿರ್ಮಾಣವಾದ ದೇವಾಲಯಗಳು.

2. ಕ್ರಿ.ಶ.8 ಮತ್ತು 9ನೇ ಶತಮಾನದಲ್ಲಿ ನಿರ್ಮಾಣವಾದ ದೇವಾಲಯಗಳು.

3,7ನೇ ಶತಮಾನದಲ್ಲಿ ಮಹೇಂದ್ರವರ್ಮನಿಂದ ನಿರ್ಮಾಣ, 8 ಮತ್ತು 9ನೇ ಶತಮಾನದವು 1ನೇ ನರಸಿಂಹವರ್ಮನ ಕಾಲದಲ್ಲಿ ನಿರ್ಮಾಣವಾಯಿತು. ಇವರ ಪ್ರಮುಖ ಸಾಧನೆಗಳೆಂದರೆ:

**1) ಕಂಚಿ: (9 ರಾಜಸಿಂಹ ಶೈಲಿ)**

ಕಂಚಿಯು ಪಲ್ಲವರ ವಾಸ್ತುಶಿಲ್ಪದ ತವರು. ಇಲ್ಲಿ ಕೈಲಾಸನಾಥ, ವೈಕುಂಠ, ಪೆರುಮಾಳ್, ವರದರಾಜಸ್ವಾಮಿ ದೇವಾಲಯ ಪ್ರಮುಖವಾದವು.

**2) ಕೈಲಾಸನಾಥ ದೇವಾಲಯ:**

ರಾಜಸಿಂಗನಿಂದ ನಿರ್ಮಾಣವಾದ ಇದು ಪ್ಯಾರಾಮಿಡ್ ಆಕೃತಿಯ ವಿಮಾನವನ್ನು ಹೊಂದಿದೆ. ಗರ್ಭಗುಡಿ ಸ್ತಂಭಮಂಟಪವನ್ನು ಇದು ಹೊಂದಿದೆ. ದೇವಾಲಯದ ತಳಭಾಗಕ್ಕೆ ಗ್ರಾನೈಟ್ ಹಾಕಲಾಗಿದೆ.

**3) ಮಹಾಬಲಿಪುರಂ:**

ಇದು ಪಲ್ಲವರ ಮತ್ತೊಂದು ಕಲಾ ಕೇಂದ್ರ. 1ನೇ ನರಸಿಂಹ ವರ್ಮನಿಂದ ನಿರ್ಮಾಣವಾದ ಇದು ದಕ್ಷಿಣ ಭಾರತದ ವಾಸ್ತು ಶಿಲ್ಪದ ತವರು ಮನೆಯಾಗಿದೆ. ಇಲ್ಲಿನ ರಚನೆಗಳನ್ನು 4 ಭಾಗಗಳಾಗಿ ವಿಂಗಡಿಸಬಹುದು.

1) ಮಂಟಪ 9 ಗುಹಾಲಯ: 1ನೇ ನರಸಿಂಹವರ್ಮನ ಕಾಲದಲ್ಲಿ 100 ಅಡಿ ಎತ್ತರದ ಶಿಲಾಗುಡ್ಡ ಕೊರೆದು ನಿರ್ಮಿಸಿರುವ 10 ಗುಹಾಲಯಗಳಿವೆ. ಇಲ್ಲಿ ದುರ್ಗಿ, ಸೂರ್ಯ, ಅನಂತಶಯನ, ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿ ಹಿಡಿದಿರುವ ಶಿಲ್ಪಗಳಿವೆ.

2) ಏಕಶಿಲಾ ರಥಗಳು: ಇವನ್ನು ಪಗೋಡಗಳೆಂದು ಕರೆಯಲಾಗಿದೆ. 8 ರಥಗಳಿವೆ. 5 ಪಂಚಪಾಂಡವರ ಹೆಸರಿನಲ್ಲಿವೆ. ಧರ್ಮರಾಜ ರಥ ದೊಡ್ಡದು. 1ನೇ ನರಸಿಂಗ ವರ್ಮನ ಕಾಲದಲ್ಲಿ ನಿರ್ಮಾಣ.

3) ಗಂಗಾವತರಣ ಶಿಲ್ಪಗುಚ್ಚ: ಭಗೀರಥ ಗಂಗೆಯನ್ನು ಭೂಮಿಗೆ ತರಲು ತಪಸ್ಸಿನಲ್ಲಿ ಮಗ್ನವಾಗಿರುವ ಭಂಗಿಯನ್ನು ಮಂಟಪಗಳ ಸಮೀಪ 98 ಅಡಿ ಕೆತ್ತಲಾಗಿದೆ. 30 ಅಡಿ ಎತ್ತರವಾಗಿದೆ.

**4) ಕಡಲತೀರ ದೇವಾಲಯ:**

2ನೇ ನರಸಿಂಹವರ್ಮ ಇದರ ನಿರ್ಮಾಪಕ. ಮಹಾಬಲಿಪುರಂನ ಕಡಲತೀರ ದೇವಾಲಯವು ಅತ್ಯಂತ ಪುರಾತನದ್ದು. ದೇವಾಲಯದ ತಳಭಾಗದಲ್ಲಿ ಗುಪ್ತರ ಸುರಂಗಮಾರ್ಗವಿದ್ದು ಇದರ ಮೂಲಕ ವಿದೇಶಿಯರನ್ನು ಆಸ್ಥಾನಕ್ಕೆ ಕರೆ ತರುವ ಪದ್ಧತಿ ಇತ್ತು. ಇದರ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದ್ರಾವಿಡ ಶೈಲಿಯ ಶಿಖರಗಳಿವೆ. ಯೂನೆಸ್ಕೋದ ವಿಶ್ವಪರಂಪರೆಯ ಪಟ್ಟಿಯಲ್ಲಿ ಇದು ಸ್ಥಾನ ಪಡೆದಿದೆ. ಇದು ಧರ್ಮರಾಯನ ರಥವನ್ನು ಹೋಲುತ್ತದೆ.

ಇವರು ಚಿತ್ರಕಲೆಗೂ ಪ್ರೋತ್ಸಾಹ ನೀಡಿದ್ದು ಸಿತ್ತನ್ ವಾಸಲ್ ಮತ್ತು ತಿರುಮಲೈಪುರ ಗುಹೆಗಳಲ್ಲಿ ಇವರ ಉತ್ಕೃಷ್ಟ ಚಿತ್ರಕಲೆಯನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ದಕ್ಷಿಣ ಭಾರತದ ಕಲಾ ಪರಂಪರೆಯಲ್ಲಿ ನೂತನ ಅಧ್ಯಾಯ ಬರೆದ ಪಲ್ಲವರ ಕೃತಿಯು ಮುಂದೆ ದಕ್ಷಿಣ ಭಾರತದ ರಾಜರಿಗೆಲ್ಲಾ ಮಾದರಿಯಾಯಿತು.

## ಚೋಳರ ಕಾಲದಲ್ಲಿ ಕಲೆ:

ಪಲ್ಲವರ ಅವನತಿಯ ನಂತರ 9ನೇಯ ಶತಮಾನದಿಂದ 12ರವರೆಗೆ ಚೋಳರು ದಕ್ಷಿಣ ಭಾಗದ ಬಹುಭಾಗವನ್ನಾಳಿದರು. ಚೋಳರು ಕಲಾಕಾರರು. ವಾಸ್ತುವನ್ನು ದಏತ್ಯವಾಗಿ ಕಲ್ಪಿಸಿ ರತ್ನಕಾರರಂತೆ ದೇವಾಲಯಗಳನ್ನು ಅಲಂಕರಿಸಿದರು.

ಚೋಳರ ಕಾಲವು ಪಲ್ಲವರ ಕಾಲದಲ್ಲಿ ಪ್ರಾರಂಭವಾಗಿದ್ದ ದ್ರಾವಿಡ ವಾಸ್ತುಶಿಲ್ಪ ಶೈಲಿಯ ಮುಂದುವರೆದ ಭಾಗವಾಗಿದೆ. ಚೋಳರು ದ್ರಾವಿಡ ಶೈಲಿಯನ್ನು ಪರಿಪೂರ್ಣಗೊಳಿಸಿದರೆಂದೇ ಹೇಳಲಾಗುತ್ತದೆ.

ಚೋಳರು ಮೂರ್ತಿಶಿಲ್ಪ ಮತ್ತು ಲೋಹ ವಿಗ್ರಹಗಳ ನಿರ್ಮಾಣದಲ್ಲಿ ಮುಂದಿದ್ದರು. ಸುಂದರವಾದ ಮೂರ್ತಿಶಿಲ್ಪಗಳ ರಚನೆಯನ್ನು ಮಾಡಿದ್ದಾರೆ. ತಂಜಾವೂರು, ತ್ರಿವೆಂಡ್ರಂ, ಶ್ರೀನಿವಾಸ ನೆಲ್ಲೂರು, ಕುಂಭಕೋಣಂ, ಚಿದಂಬರಂ, ರಾಮೇಶ್ವರಂ, ತ್ರಿಭುವನಂ ಮುಂತಾದ ಪ್ರದೇಶಗಳಲ್ಲಿ ದೇವಾಲಯಗಳನ್ನು ಕಾಣಬಹುದಾಗಿದೆ.

## ಇವರ ಕಲೆಗೆ ಉತ್ತಮ ಉದಾಹರಣೆಗಳು:

1) 'ತಂಜಾವೂರಿನ ಬೃಹದೀಶ್ವರ' ದೇವಾಲಯ: ಇದು ರಾಜರಾಜ ಚೋಳನಿಂದ ನಿರ್ಮಿಸಲ್ಪಟ್ಟಿತು. ಇದು 500 ಅಡಿ ಉದ್ದ, 250 ಅಡಿ ಅಗಲವಿರುವ ಹೊರಾಂಗಣವಿದೆ. 199 ಅಡಿ ಶಿಖರವಿದೆ. 14 ಅಂತಸ್ತು ಹೊಂದಿದೆ. 'ಪರ್ಸಿ ಬ್ರೌನ್ 199 ಅಡಿಯ ವಿಮಾನವು ವಾಸ್ತುಶಿಲ್ಪದಲ್ಲೇ ಅಮೋಘ ಎಂದಿದ್ದಾರೆ. (ಮಹಾದ್ವಾರ, ಕಂಬ, ಹೆಚ್ಚು ವಿಮಾನಗಳು, ಚಪ್ಪಟೆ ಇನ್ನೂ ಹೆಚ್ಚು.)

2) ರಾಜೇಂದ್ರ ಚೋಳನಿಂದ ನಿರ್ಮಾಣವಾದ ಹೊಸ ರಾಜಧಾನಿ ಗಂಗೈಕೊಂಡ ಚೋಳಪುರಂನಲ್ಲಿ ಮತ್ತೊಂದು ಬೃಹದಾಕಾರದ ದೇವಾಲಯದ ನಿರ್ಮಾಣವಾಗಿತ್ತು.

3) 15 ಮೈಲಿ ಏರಿಯ ಕೃತಕ ಸರೋವರ ನಿರ್ಮಾಣ.

ವಾಸ್ತುಶಿಲ್ಪ ಮಾತ್ರ ಅಲ್ಲದೇ ಶಿಲ್ಪಕಲೆಯಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದ್ದರು. ಶಿವ, ವಿಷ್ಣು, ಪಾರ್ವತಿ, ಲಕ್ಷ್ಮೀ, ವಿಗ್ರಹಗಳು ಶೈವ ಮತ್ತು ವೈಷ್ಣವ ಸಂತರ ವಿಗ್ರಹಗಳು ಸೃಷ್ಟಿಯಾದವು.

ಲೋಹ ವಿಗ್ರಹಗಳಲ್ಲಿ ಸೃಷ್ಟಿಯಾದ ನಟರಾಜ ವಿಗ್ರಹ ಅದ್ವಿತೀಯವಾದುದು. (ಕಾಪ್ರಾ+ಕಂಚು)

ಹೀಗೆ ಚೋಳರ ಕಾಲದಲ್ಲಿ ದ್ರಾವಿಡ ಶೈಲಿಯ ಪೋಷಣೆಯಾಯಿತು.

## ಮೊಘಲರ ಕಾಲದಲ್ಲಿನ ವಾಸ್ತುಶಿಲ್ಪ ಕಲೆ ಮತ್ತು ಸಂಗೀತ:

ಮೊಘಲರ ವಾಸ್ತುಶಿಲ್ಪವು ಭಾರತದ ಸಂಸ್ಕೃತಿಗೆ ಒಂದು ವಿಶಿಷ್ಟ ರೀತಿಯ ಕಾಣಿಕೆಯಾಗಿದೆ. ಇವರು ಕಟ್ಟಡ ನಿರ್ಮಾಣದಲ್ಲಿ ನಿಷ್ಣಾತರು. ಸೌಂದರ್ಯ ಮತ್ತು ಭವ್ಯತೆಯಲ್ಲಿ ಅವರ ಕಟ್ಟಡಗಳು 'ಪರ್ಸಿಲ್ಸನ ಶೋಭಾಯಮಾನತೆಗೆ ಒಗ್ಗಿರುವ ಕಣ್ಣುಗಳನ್ನು ಕುಕ್ಕುವಂತಿವೆ' ಎಂದು ಹೇಳಲಾಗುತ್ತದೆ. ವಾಸ್ತು ಶಿಲ್ಪ ಮತ್ತು ಭಾರತದ ಹಿಂದೂ ವಾಸ್ತುಶಿಲ್ಪದ ಸಮ್ಮಿಶ್ರಣವೇ ಮೊಘಲರ ವಾಸ್ತುಶಿಲ್ಪವಾಗಿತ್ತು. ಇದನ್ನು ಇಂಡೋ–ಮುಸ್ಲಿಂ ಶೈಲಿ ಅಥವಾ ಇಂಡೋ ಸಾರ್ಸೆನಿಕ್ ಶೈಲಿ ಎನ್ನುತ್ತಾರೆ.

**ಇವರ ವಾಸ್ತುಶೈಲಿಯ ಲಕ್ಷಣಗಳೆಂದರೆ:**

1) ಅಂಡಾಕಾರದ ಗುಮ್ಮಟ

2) ಎತ್ತರವಾದ ಸ್ತಂಭಗೋಪುರ

3) ವಿಭಿನ್ನ ಶೈಲಿಯ ಸ್ತಂಭ

4) ಓಪನ್ ಕೋರ್ಟ್ ಯಾರ್ಡ್ಸ್

5) ಕೆಂಪು ಮರಳು ಶಿಲೆಯ ಮತ್ತು ಬಿಳಿ ಅಮೃತ ಶಿಲೆ ಬಳಕೆ.

**ಪ್ರಮುಖ ಕೊಡುಗೆಗಳು:**

1) ದೆಹಲಿಯ ಹುಮಾಯೂನ್ ಗೋರಿ ಪರ್ಷಿಯನ್ ಶೈಲಿ ಇದನ್ನು ಶೋಭಾಯಮಾನ್ ಸಮಾಧಿ ಎನ್ನುತ್ತಾರೆ. (ವಿಧವೆ ಹಾಜಿ ಬೇಗಂ ನಿರ್ಮಾಣ).

2) ಆಗ್ರಾ, ಲಾಹೋರ್, ಕೋಟೆ ನಿರ್ಮಾಣ, ಕೋಟೆಯೊಳಗೆ ಹಲವು ಕಟ್ಟಡ. ಉದಾ: ಅಕ್ಬರನ ಅರಮನೆ ಜಗಂಗೀರ್ ಮಹಲ್ (ಸೂಕ್ಷ್ಮ ಕೆತ್ತನೆ – ಹಿಂದೂ ಶೈಲಿ).

3) ಫತೆಪುರ್ ಸಿಕ್ರಿ (1569) ಸಂತನಾದ 'ಶೇಕ್ ಸಲೀಂ ಚಿಷ್ತಿ'ಯ ನೆನಪಿಗಾಗಿ ಅಕ್ಬರ್‌ನಿಂದ ನಿರ್ಮಾಣ. (ಇದರೊಳಗೆ ಜೋಧಬಾಯಿ ಅರಮನೆ, ಬುಲಂದ್ ದರ್‌ವಾಜಾ ದಿವಾನ್ ಪಿ–ಅಂ ಮ್ತು ಖಾಶಸ್ ಜಾಮಿ ಮಸೀದಿ) ಶಿಲೆಯ ಪ್ರಣಯ ಪ್ರಕರಣ.

4) ಜಹಾಂಗೀರ: 2 ಗೋರಿ ನಿರ್ಮಾಣ 'ಅಕ್ಬರ್ ಮತ್ತು ನೂರ್ ಜಹಾನ್‌ಳ ತಂದೆ. ಆಗ್ರಾದಲ್ಲಿ ನೂರ್ ಜಹಾನ್‌ಳ ತಂದೆ ಇತ್ಮದ್ ಉದ್ದೌಲ್' ಗೋರಿ ಅಮೃತ ಶಿಲೆಯಲ್ಲಿ ವೈಭವ ನಿರ್ಮಾಣ.

5) ಷಾ–ಜಹಾನ್: ಇವನನ್ನು ಸಾಧಕಗಳ ಸಾಮ್ರಾಟ, ಮೊಗಲ್ ಆಗಸ್ಟಸ್ ಎಂದು ಕರೆಯಲಾಗುತ್ತದೆ. ಇವನ ಪ್ರಮುಖ ಶಿಲ್ಪಗಳೆಂದರೆ:

   1) ಮಯೂರ ಸಿಂಹಾಸನ – ಇದರ ವಿಶೇಷತಗೆ ಎಂದರೆ ಇದನ್ನು 7 ವರ್ಷದಲ್ಲಿ ತಯಾರಿಸಲಾಗಿದೆ. 01 ಲಕ್ಷ ತೊಲ ಬಂಗಾರ, ವಜ್ರ ವೈಢೂರ್ಯ ಬಳಸಲಾಗಿದೆ. ಇದರ ಶಿಲ್ಪಿ ಬಾದಲ್‌ಖಾನ್.

   2) ಕೊಹಿನೂರ್ ವಜ್ರ (756 ಕ್ಯಾರೆಟ್).

   3) ತಾಜ್‌ಮಹಲ್ (1632–53) (ಶಿಲ್ಪಿ–ಉಸ್ತಾದ್ ಇಸಾ ಖಾನ್) ಅಮೃತಶಿಲೆ ಬಳಕೆ. (ರಜಪುತಾನದ ಮಕ್ರಾನದಿಂದ) ಕಲ್ಲಿನ ಶವ ಸಂಪುಟವನ್ನು ರತ್ನದ ಪರದೆಯಿಂದ ಮುಚ್ಚಲಾಗಿತ್ತು.

   4) ಷಹಜಾನಬಾದ್ ನಗರ ನಿರ್ಮಾಣ.

   5) ಕೆಂಪು ಕೋಟೆ.

   6) ಆಗ್ರಾದ ಮೋತಿ ಮಹಲ್.

ಒಟ್ಟಾರೆಯಾಗಿ ಹೇಳುವುದಾದರೆ ಮೊಘಲರ ವಾಸ್ತುಶಿಲ್ಪವು 'ಶಿಲೆಯಲ್ಲಿನ ಭಾವಗೀತೆ' ಎಂದೇ ವರ್ಣಿಸಲಾಗಿದೆ.

## ಕೆಥಿಡ್ರಿಯಲ್ ವಾಸ್ತುಶಿಲ್ಪ ಕಲೆ:

### 1) ಬೋಮ್ ಜೆಸಸ್:

ಬೆಸಿಲಿಕಾ ಆಫ್ ಜಿಸಸ್ ಎಂದೂ ಸಹ ಕರೆಯಲಾಗುವ ಈ ಚರ್ಚ್ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಪೋರ್ಚುಗೀಸರ ಆಡಳಿತದ ಸಮಯದಲ್ಲಿ ಎಂದರೆ 1605ರಲ್ಲಿ ನಿರ್ಮಿಸಲಾಗಿದೆ. ಇದು 'ಫ್ರಾನ್ಸಿಸ್ ಗ್ಜೆವಿಯರ್' ರವರ ದೇಹವನ್ನು ಹೊಂದಿದ್ದು ಭಾರತದಲ್ಲಿ 'ಬರೋಕ್' ಇಂಗ್ಲೀಷ್ ವಾಸ್ತುಶಿಲ್ಪದ ಅತ್ಯುತ್ತಮ ಉದಾಹರಣೆಯಾಗಿದೆ.

ಬಾಮ್ ಜೀಸಸ್ ಭಾರತದ ಮತ್ತು ಗೋವಾದ ಅತ್ಯಂತ ಹಳೆಯದಾದ ಚರ್ಚುಗಳಲ್ಲಿ ಒಂದಾಗಿದ್ದು ಮಾರ್ಬಲ್ (ಅಮೃತಶಿಲೆ) ಜೊತೆಗೆ ಅಮೂಲ್ಯವಾದ ಇನ್ನಿತರ ಶಿಲೆಗಳಿಂದ ನಿರ್ಮಾಣವಾಗಿದೆ.

ಇದರ ನಿರ್ಮಾತೃ – ಆರ್ಚ ಬಿಷಪ್ – ಥಘಾಮ್ ಪ್ರೊ. ಅಲೆಕ್ಸೊಡೆ ಮೆನೆಜಸ್ ಇಲ್ಲಿ 'ಡಾಮ್ ಮಾರ್ಟಿನ್'ರವರ ಅತ್ಯಮೂಲ್ಯ ಚಿತ್ರಕಲೆಗಳು ಇಲ್ಲಿ ಕಂಡುಬರುತ್ತವೆ. ಇವನ್ನು 'ಮ್ಯೂರಲ್ (ಗೋಡೆ ಮೇಲಿನ ಭಿತ್ತಿ ಚಿತ್ರಕಲೆ) ಎನ್ನಲಾಗುತ್ತದೆ. ಇದರೊಳಗೆ ಜೀವನದ ದೃಶ್ಯವನ್ನು ತೋರಿಸುವ ವರ್ಣಚಿತ್ರಗಳು ಚರ್ಚ್

ಗೋಡೆ ಮೇಲಿವೆ. ಇಲ್ಲಿ ಸೆಂಟ್ ಫ್ರಾನ್ಸಿಸ್ ಗ್ಸೇವಿಯರ್‌ರವರ ಬೆಳ್ಳಿಯ ಒಡವೆಗಳ ಪೆಟ್ಟಿಗೆಯಲ್ಲಿ ಇವರ ಶವ ಇಟ್ಟು ಸಮಾಧಿ ಮಾಡಲಾಗಿದೆ.

ಫ್ರಾನ್ಸಿಸ್‌ರ ಜೀವನ ಚರಿತ್ರೆ ಬಿಂಬಿಸುವ ಅನೇಕ ವರ್ಣಚಿತ್ರಗಳನ್ನು ಇಲ್ಲಿ ಕಾಣಬಹುದು. 408 ವರ್ಷಗಳ ಹಳೆಯದಾದ ಈ ಚರ್ಚ್ ಸಾರ್ವಜನಿಕರಿಗೆ ಪ್ರತಿದಿನ ದರ್ಶನಕ್ಕೆ ತೆರೆಯಲಾಗಿದೆ.

## 2) ಸೆಂಟ್ ಪೌಲ್ಸ್ – ಕೋಲ್ಕತ್ತಾ:

ಇದು 'ಗೋಥಿಕ್ ರಿವೈವಲ್' ಶೈಲಿಯಲ್ಲಿ ನಿರ್ಮಾಣವಾದ ಚರ್ಚ್ ಆಗಿದ್ದು 1847ರಲ್ಲಿ ಮುಕ್ತಾಯವಾಯಿತು. ಇದರ ಕಟ್ಟಡ ಆರಂಭಿಸಿದವರು – ಬಿಷಪ್ ಡೇನಿಯಲ್ ವಿಲ್ಸನ್ 1839ರಲ್ಲಿ ಬ್ರೀಟಿಷ್‌ನಿಂದ ನೇರ ಆಡಳಿತದ ಚರ್ಚ್ ಆಯಿತು.

* ಇಂಡೋ ಗೋಥಿಕ್ ಶೈಲಿ (ಸಾರ್ಸೇನಿಕ್+ಗೋಥಿಕ್+ಹಿಂದೂಶೈಲಿ ಮಿಶ್ರಣ)
* ಐರಾನ್ ಸ್ಟೀಲ್ ಕಾಂಕ್ರೀಟ್ ಬಳಕೆ.
* ದಪ್ಪವಲ್ಲದ ಗೋಡೆಗಳು, ದೊಡ್ಡ ಕಿಟಕಿ.

ಹೊರಾಂಗಣ: 200 ಅಡಿ ಎತ್ತರದ ಕಮಾನು, ಬುನಾರ್ ಶಿಲೆ ಬಳಕೆ. ಒಳಾಂಗಣ: ಬ್ಯಾಸಿಲಿಕಾಹಾಲ್ ಮುರಾಲ್ ಪೇಂಟಿಂಗ್ ಸೆಂಟ್‌ಪಾಲ್‌ನ ವಿಗ್ರಹವಿದೆ.

## 3) ಸೆಂಟ್ ಥಾಮಸ್ – ಚೆನ್ನೈ:

ಇದನ್ನು 1825ರಲ್ಲಿ ಸೆಂಟ್ ಥಾಮಸ್ ಎಂಬುವವರು ನಿರ್ಮಿಸಿದರು. ಇದು ಪ್ರಸ್ತುತ ಕ್ರಿಯಾತ್ಮಕ ಸ್ಥಾನದಲ್ಲಿದ್ದು, ನಿಯೋಗೋಥಿಕ್ ಶೈಲಿಯಲ್ಲಿ ಇದು ನಿರ್ಮಾಣವಾಗಿದೆ. ಇಲ್ಲಿ ಸೆಂಟ್ ಥಾಮಸ್‌ರವರ ಸಮಾಧಿ ಇದೆ. ಇವರು ಜೀಸಸ್‌ನ ಧರ್ಮ ಪ್ರಚಾರಕ. ಇದನ್ನು ಬ್ರಿಟೀಷರು ಪುನರ್ ನಿರ್ಮಿಸಿ 'ಕೆಥೆಡ್ರಲ್' ಎಂಬ ಸ್ಥಾನಮಾನವನ್ನು ನೀಡಲಾಯಿತು. ಯೇಸುವಿನ 12 ಜನ ಶಿಷ್ಯರಲ್ಲಿ ಸೆಂಟ್ ಥಾಮಸ್ ಒಬ್ಬರು. ಇವರು ಕೇರಳದ ಜೂಡಿಯಾದಲ್ಲಿ ಬದುಕಿದ್ದರು. ಕ್ರಿ.ಶ.52ರಿಂದ 72ರವರೆಗೆ ಬೋಧನೆಗಳನ್ನು ಮಾಡಿದ್ದರು. ಇದು ಕ್ರಿಶ್ಚಿಯನ್ನರ ಪವಿತ್ರ ಸ್ಥಳವಾಗಿದ್ದು ಇದಕ್ಕೆ ಹೊಂದಿಕೊಮಡಂತೆ ವಸ್ತು ಸಂಗ್ರಹಾಲಯವಿದೆ. ಇದಕ್ಕೆ ಮೈನರ್ ಬ್ಯಾಸಿಲಿಕಾ ಸ್ಥಾನಮಾನ ನೀಡಲಾಗಿದೆ.

ಈ ಚರ್ಚನ್ನು ಸುಣ್ಣ ಮತ್ತು ಇಟ್ಟಿಗೆ ಪುಡಿ, ಗಾರೆಗಳನ್ನು ಬಳಸಿ ನಿರ್ಮಿಸಲಾಗಿದೆ. ಇದರ ಉದ್ದ 210 ಅಡಿ.

## ಅಜಂತಾ ತೈಲ ಚಿತ್ರಗಳು:

ಮಹಾರಾಷ್ಟ್ರದ ಔರಂಗಾಬಾದ್ ಹತ್ತಿರವಿರುವ ಈ ಅಜಂತಾ ಗುಹಾಲಯವು ವಿಶ್ವದ ಪ್ರಮುಖ ಪಾರಂಪರಿಕ ತಾಣ. ಕ್ರಿ.ಪೂ.2ನೇ ಶತಮಾನದಷ್ಟು ಪ್ರಾಚೀನತೆಯನ್ನು ಹೊಂದಿರುವ ಈ ಗುಹೆಗಳು ಹಿಂದೂ, ಜೈನ, ಬೌದ್ಧ ಧರ್ಮಗಳಿಗೆ ಸಾಕ್ಷಿಯಾಗಿವೆ. ಇಲ್ಲಿ ಸುಮಾರು 30ಕ್ಕೂ ಹೆಚ್ಚು ಗುಹೆಗಳ ಗುಂಪು ಇದ್ದು, ಮೂರು ಧರ್ಮಗಳ ಚಿತ್ರಕಲೆ, ಶಿಲ್ಪಕಲೆ, ತೈಲಚಿತ್ರಗಳನ್ನು ಒಳಗೊಂಡಿವೆ.

ಈ ವರ್ಣಚಿತ್ರಗಳು ಕ್ರಿ.ಪೂ.2ರಿಂದ 7ನೇ ಶತಮಾನದವರೆಗಿನ ವಾಸ್ತವಿಕತೆಗೆ ಹಿಡಿದ ಕನ್ನಡಿಯಂತಿವೆ.

ಈ ಗುಹೆಗಳಲ್ಲಿ ಕಂಡುಬರುವ ಚಿತ್ರಗಳು:

1) ಬುದ್ಧನ ಜೀವನ ಮತ್ತು ಬೌದ್ಧ ಧರ್ಮದ ಪ್ರಭಾವದ ಕುರಿತಾದ ಚಿತ್ರಗಳು.

2) ದೇಶ ವಿದೇಶಗಳ ಸಂದರ್ಶಕರು, ರಾಯಭಾರಿಗಳು, ಹಿಂದೂ ರಾಜರ ಆಸ್ಥಾನಕ್ಕೆ ಬಂದು ರಾಜರಿಂದ ಸತ್ಕಾರ ಪಡೆಯುತ್ತಿದ್ದ ಚಿತ್ರಗಳು.

3) ಮನುಷ್ಯರ ಸಾಲುಗಳು, ಕಥೆಗಳು, ಗಂಧರ್ವರು, ಮಕರಗಳು, ಆನೆಗಳು.

4) ಸಮಕಾಲೀನ ಜೀವನದ ವಿಶಾಲವಾದ ದೃಶ್ಯ.

**ಮೊಘಲರ ಚಿತ್ರಕಲೆ:**

ಮೊಘಲರು ವಾಸ್ತುಶಿಲ್ಪದಂತೆ ಚಿತ್ರಕಲೆಯನ್ನು ಪ್ರೋತ್ಸಾಹಿಸಿದರು. ಅವರ ಚಿತ್ರಕಲೆಯು ಪರ್ಶಿಯನ್ ಚಿತ್ರಕಲೆಯಿಂದ ಪ್ರಭಾವಿತಗೊಂಡಿತ್ತು. ಅರಮನೆಯ ಗೋಡೆಗಳ ಮೇಲೆ ಅರಮನೆ, ಯುದ್ಧ, ಬೇಟೆ, ಮರ, ಗಿಡಬಳ್ಳಿ, ಹಕ್ಕಿ, ಪ್ರಾಣಿಗಳು, ಸ್ತ್ರೀಯರ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಬಾಬರ್ ನಿಸರ್ಗ ಪ್ರೇಮಿಯಾಗಿದ್ದು, ಪ್ರಕೃತಿ ಸೌಂದರ್ಯವನ್ನು ಆಸಕ್ತಿಯಿಂದ ವೀಕ್ಷಿಸುತ್ತಿದ್ದ.

ಬಾಬರ್ ಭಾರತಕ್ಕೆ ಬರುವಾಗ ತನ್ನೊಡನೆ ಅನೇಕ ಚಿತ್ರಕಾರರನ್ನು ಕರೆತಂದನು. ಹಾಗೆಯೇ ಹುಮಾಯೂನನು ಪರ್ಷಿಯಾದಲ್ಲಿಯ ಮೀರಸೈಯದ ಅಲಿ, ಖ್ವಾಜಾ ಅಬ್ಬುಸ್ ಸಮದ ಎಂಬ ಚಿತ್ರಕಾರರನ್ನು ಭಾರತಕ್ಕೆ ಕರೆತಂದನು. ಇವರು 12 ಸಂಪುಟಗಳ ದಸ್ತನ–ಇ–ಹಮೀರ–ಹಮ್ಜಾವನ್ನು ಚಿತ್ರ ಸಹಿತ ಸಿದ್ಧ ಪಡಿಸಿದರು.

ಅಕ್ಬರನ ಕಾಲದಲ್ಲಿ ಚಿತ್ರಕಲೆಗಳು ಇಂಡೋಪರ್ಶಿಯನ್ ಅಂಶಗಳಿಂದ ಮಿಶ್ರಣಗೊಂಡವು. ಈತ ಚಿತ್ರಕಲೆಯ ಒಂದು ಪ್ರತ್ಯೇಕ ಇಲಾಖೆಯನ್ನು ರಚಿಸಿದನು.

1561ರಲ್ಲಿ ತಾನ್‌ಸೇನ್ ಮೊಘಲ್ ಆಸ್ಥಾನಕ್ಕೆ ಬರುವ ಚಿತ್ರದಲ್ಲಿ ಹಿಂದು+ಬೇಗಿ+ಪರ್ಷಿಯನ್ ಶೈಲಿಗಳ ಸಮಾಗಮ ಗೋಚರಿಸುತ್ತದೆ.

ಫತ್ತೇಪು ಸೀಕ್ರಿಯ ಕಟ್ಟಡಗಳ ಮೇಲೆ ಹಿಂದೂ ಮತ್ತು ಮುಸ್ಲಿಂ ಚಿತ್ರಕಾರರು ಮೊಘಲ್ ಶೈಲಿಯಲ್ಲಿ ಚಿತ್ರಗಳನ್ನು ಸೃಷ್ಟಿ ಮಾಡಿದ್ದರು.

ಅಕ್ಬರನ 17 ವಿಖ್ಯಾತ ಕಲಾಕಾರರಲ್ಲಿ 13 ಜನ ಹಿಂದೂಗಳಿದ್ದರು. ಜಹಾಂಗೀರನ ಕಾಲದಲ್ಲಿ ಮತ್ತಷ್ಟು ಬೆಳವಣಿಗೆ ಹೊಂದಿದ ಚಿತ್ರಕಲೆಯು ಮತ್ತಷ್ಟು ಪ್ರಗತಿ ಸಾಧಿಸಿತು. ಅಬ್ದುಲ್ ಹಸನ್, ಉಸ್ತಾದ್ ಮನ್ಸೂರ್, ಗೋವರ್ಧನ ಮುಂತಾದ ಚಿತ್ರಕಾರರಿದ್ದರು.

ಷಹಜಾನ್‌ನ ಮಗ 'ದಾರಾಶುಕೋ' ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದೆ.

ಔರಂಗಜೇಬನ ಕಾಲದಲ್ಲಿ ಮೊಘಲರ ಚಿತ್ರಕಲೆ ಸಂಪೂರ್ಣವಾಗಿ ನಿಂತಿತು.

**ರಾಜಪೂತ ಚಿತ್ರಕಲೆ:**

ಕ್ರಿ.ಶ.16ನೆಯ ಶತಮಾನದಲ್ಲಿ ಪ್ರಾರಂಭವಾದ ಈ ಚಿತ್ರಕಲೆಯು ಮೇವಾಡ, ಅಂಬೇರ, ಭೂಂದಿ, ಜೋಧಪುರ, ಗುಜರಾತ್, ಮಾಳ್ವ ಮುಂತಾದ ಕೇಂದ್ರಗಳಲ್ಲಿ ಕಂಡು ಬಂದಿವೆ. ಮೇವಾಡದ ನಿಶಾರದೀನ ಮನೆತನ ಚಿತ್ರಕಲೆಯನ್ನು ಮುಂದುವರೆಸಿತು. ಈ ಚಿತ್ರಗಳು ಸಾಹಿತ್ಯಿಕ ಮತ್ತು ಸಂಗೀತ ಸ್ವರೂಪಗಳಿಂದ ಅತ್ಯಂತ ಪ್ರಭಾವಿತವಾಗಿವೆ. ಪ್ರಕೃತಿಯೊಡನೆ ಅಸಾಧಾರಣ ಒಲವು, ಭೂ ದೃಶ್ಯಗಳು, ಮನುಷ್ಯ ಚಿತ್ರಗಳು, ವೃಕ್ಷ ವಿಶೇಷತೆಗಳು, ಗಾಢವಾದ ಎಲೆಗುಂಪು, ಸೂಕ್ಷ್ಮವಾದ ಅಲಂಕಾರದ ಸ್ವರೂಪ, ಹಾಡುವ ಹಕ್ಕಿ, ನಲಿದಾಡುವ ಮೃಗ ಮುಂತಾದವುಗಳ ಚಿತ್ರ ಕಾಣಬಹುದಾಗಿದೆ.

**ಕಾಂಗ್ರಾ ರಮ್ಯ ಚಿತ್ರಕಲೆ:**

ಕಾಂಗ್ರಾ ಕಣಿವೆಯಲ್ಲಿ ಅಭಿವೃದ್ಧಿಗೊಂಡ ಚಿತ್ರಕಲೆಯನ್ನು ಕಾಂಗ್ರಾ ಚಿತ್ರಕಲೆ ಎಂದು ಕರೆಯಲಾಗಿದೆ. ಕಾಂಗ್ರಾ ಕಣಿವೆ ಹಿಮಾಚಲ ಪ್ರದೇಶದ ಉತ್ತರ ಭಾಗದಲ್ಲಿದೆ. ಕಾಂಗ್ರಾ ಎಂದರೆ ಅಗ್ನಿಕುಂಡಗಳು ಅಥವಾ ಬೆಂಕಿ ಮಡಕೆಗಳು. ಮೊಘಲ ಆಸ್ಥಾನಿಕ ಕಲಾವಿದರಲ್ಲಿ ಕೆಲವರು ಔರಂಗಜೇಬನ ಉಪಟಳ ತಾಳಲಾರದೆ ಕಾಂಗ್ರಾ ಕಣಿವೆಯ ಸಾಮಂತರ ಆಶ್ರಯಕ್ಕೆ ಬಂದರು. ಈ ಕಲಾವಿದರ ವಿಶಿಷ್ಟ ಕಲೆಯೇ ಕಾಂಗ್ರಾ ರಮ್ಯ ಕಲೆ.

ಈ ಚಿತ್ರಗಳಲ್ಲಿ ಬೆಟ್ಟಗುಡ್ಡಗಳು, ಹಳ್ಳಕೊಳ್ಳ, ಸುಂದರ ಪ್ರಾಕೃತಿಕ ಚಿತ್ರಣ ಯುವತಿಯರ ಅಂಗಸೌಷ್ಠವಕ್ಕೆ ಪ್ರಾಧಾನ್ಯತೆ ನೀಡಲಾಗಿತ್ತು. ಸೂಕ್ಷ್ಮ ಕುಂಚಗಳಿಂದ, ಸಿಯಾಲ್‌ಕೋಡೆಯ ದಪ್ಪ ಕಾಗದದ ಮೇಲೆ ರಚಿಸಲಾದ ಈ ಚಿತ್ರಗಳು ಜೀವಂತಿಕೆಯಿಂದ ಕೂಡಿದ್ದವು.

ಪ್ರಮುಖ ಚಿತ್ರಕಾರರೆಂದರೆ ಕಿಷನ್‌ಲಾಲ, ರಾಮ್‌ದಯಾಳ, ಗುರು ಸಹಾಯ.

**ಸಂಗೀತ:**

**ಸಂಗೀತಕ್ಕೆ ಮೊಘಲರ ಕೊಡುಗೆಗಳು:**

ಮೊಘಲರ ಚಿತ್ರಕಲೆ ಪ್ರಮುಖ ಅಂಶಗಳನ್ನು ಕ್ರೋಢೀಕರಿಸುವುದಾದರೆ,

1) ಇವರ ಕಾಲದ ಚಿತ್ರಕಲೆ ಸೂಕ್ಷ್ಮ ವರ್ಣಚಿತ್ರಗಳನ್ನು ಒಳಗೊಂಡಿತ್ತು.

2) ಇಲ್ಲಿ ಬೇಟೆ, ಕಾಳಗ, ಯುದ್ದ, ಮುತ್ತಿಗೆ, ಪಕ್ಷಿ, ಮರಗಿಡ ಮುಂತಾದ ಅಂಶವಿತ್ತು.

3) ಇದು ಜನಸಾಮಾನ್ಯರ ಜೀವನವನ್ನು ಸಂಪೂರ್ಣವಾಗಿ ನಿರಾಕರಣೆ ಮಾಡಿತ್ತು.

4) ಭಾವಚಿತ್ರ ರಚನೆಗೆ ಪ್ರಾಮುಖ್ಯತೆ, ಅರೆಬೆಸ್ಕೋ (ಪ್ರಾಣಿ ಸಸ್ಯ ಚಿತ್ರ)

ಅಕ್ಬರನ ಪ್ರೋತ್ಸಾಹದ ಫಲವಾಗಿ 'ನ್ಯಾಶನಲ್ ಇಂಡಿಯನ್ ಸ್ಕೂಲ್ ಆಫ್ ಪೇಂಟಿಂಗ್' ಎಂಬ ಪಂಥ ಉಗಮವಾಯಿತು.

ಔರಂಗಜೇಬನನ್ನು ಹೊರತು ಪಡಿಸಿದರೆ ಉಳಿದ ಮೊಘಲ್ ಸುಲ್ತಾನರು ಸಂಗೀತದಲ್ಲಿ ಆಸಕ್ತಿ ಹೊಂದಿದ್ದರು. ಬಾಬರ್ ಸಂಗೀತಕ್ಕೆ ಸಂಬಂಧಿಸಿದಂತಹ ಕೃತಿ ರಚನೆ ಮಾಡಿದ್ದನು. ಮಾಂಡುವಿನಲ್ಲಿ ಸೆರೆಯಾದ ಯುದ್ದ ಖೈದಿಗಳನ್ನು ಕೊಲ್ಲಲು ಆದೇಶ ನೀಡಿದಾಗ ಅದರಲ್ಲಿ ಸಂಗೀತಗಾರನೊಬ್ಬ ಇದ್ದಾನೆ ಎಂಬ ಅಂಶ ತಿಳಿದು ಹೂಮಾಯೂನ್ ಎಲ್ಲರನ್ನು ಬಿಟ್ಟಿದ್ದ. ಸೋಮವಾರ ಮತ್ತು ಬುಧವಾರ ಹುಮಾಯೂನ್ ಸಂಗೀತ ಆಲಿಸುತ್ತಿದ್ದ.

ಅಕ್ಬರ್ ಅಪಾರ ಆಸಕ್ತಿ ಹೊಂದಿದ್ದು ಹಿಂದೂ, ಇರಾನ್, ಕಾಶ್ಮೀರಿ ಸಂಗೀತಗಾರರಿರುತ್ತಿದ್ದರು. ಅವರನ್ನು 07 ಗುಂಪಾಗಿ ವಿಭಾಗಿಸಿ ವಾರದಲ್ಲಿ 1 ತಂಡ ಪ್ರತಿ ದಿನ ರಂಜಿಸಬೇಕಿತ್ತು.

'ತಾನ್ಸೇನ್' ಈ ಕಾಲದ ಪ್ರಖ್ಯಾತ ಸಂಗೀತಗಾರ (ಮಿರ್ಜಾ ಬಿರುದು) ಬಾಬಾರಾಮ್ ದಾಸ್, ಮತ್ತೊಬ್ಬ ಖ್ಯಾತ ಸಂಗೀತಗಾರ 'ಸೂರ್‌ದಾಸ್'.

ಷಾಜಹಾನ್ ಉತ್ತಮ ಸಂಗೀತಗಾರರಾಗಿದ್ದರು. ಇವರು ಸಾರಾಗಿ ಮತ್ತು ಬಿನ್ ರಾಗದಲ್ಲಿ ಪಾಂಡಿತ್ಯ ಹೊಂದಿದ್ದರು.

ಇವರ ಕಾಲದ ಉತ್ತಮ ಸಂಗೀತ ಕೃತಿಗಳೆಂದರೆ ದಾಮೋದರ ಮಿತ್ರನ 'ಸಂಗೀತದರ್ಪಣ' ಮತ್ತು ಅಹೋಬಲನ ಸಂಗೀತ ಪಾರಿಜಾತ.

ಹೀಗೆ ಮೊಘಲರ ಕಾಲದಲ್ಲಿ ಸಂಗೀತವು ತನ್ನದೇ ಆದ ಸ್ಥಾನಮಾನ ಪಡೆದಿತ್ತು.

**ವಿದೇಶಗಳಲ್ಲಿ ಭಾರತೀಯ ಸಾಂಸ್ಕೃತಿಕ ವಿಸ್ತರಣೆ:**

ಪ್ರಾಚೀನ ಭಾರತೀಯರು ಬಹುಪುರಾತನ ಕಾಲದಿಂದಲೂ ಯೂರೋಪ್, ಮಧ್ಯ, ಪಶ್ಚಿಮ ಮತ್ತು ಆಗ್ನೇಯ ಏಷ್ಯಾ ದೇಶಗಳೊಡನೆ ಸಾಂಸ್ಕೃತಿಕ ಮತ್ತು ವಾಣಿಜ್ಯ ಸಂಬಂಧ ಹೊಂದಿದ್ದರು. ಇರಾನ್, ಇರಾಕ್, ಟಿಬೇಟ್, ಚೀನಾ, ಬರ್ಮಾ, ಸಿಲೋನ್ ದೇಶಗಳೊಡನೆ ಭಾರತದ ಸಾಂಸ್ಕೃತಿಕ ಹೆದ್ದಾರಿ ತೆರೆದುಕೊಂಡಿತ6ತು.

ನಮ್ಮ ಸಂಸ್ಕೃತಿ ಬೇರೆ ದೇಶದಲ್ಲಿ ಪ್ರಚಾರವಾಗಿ ಅಲ್ಲೆಲ್ಲ ಭಾರತೀಯ ವಸಾಹತುಗಳು ಏರ್ಪಟ್ಟವು. ಈ ರೀತಿಯಾದ ವಿಸ್ತರಣೆಯನ್ನು 'ಬೃಹತ್ ಭಾರತ' ಎಂದು ಕರೆಯಲಾಗಿದೆ.

**ಸಾಂಸ್ಕೃತಿಕ ವಿಸ್ತರಣೆಗೆ ಕಾರಣಗಳು:**

1) ಭಾರತದ ಸಂಸ್ಕೃತಿಗೆ ವಿಶ್ವಮಾನ್ಯತೆ ಇದ್ದು, ಸತ್ಯ, ಅಹಿಂಸೆ ಸೋದರತ್ವದಂತಹ ಗುಣಗಳಿಗೆ ಮಾರುಹೋಗಿ ಆಗ್ನೇಯ ಏಷ್ಯಾದ ಬುಡಕಟ್ಟು ಜನ ಆಕರ್ಷಿತರಾಗಿ ಭಾರತೀಯರಾಗಿ ಪರಿವರ್ತನೆ ಹೊಂದಿದರು.

2) ವಿದೇಶಗಳಿಗೆ ಹೊರಟ ಮತಪ್ರಚಾರಕರು ಮತ್ತು ಬೌದ್ಧಭಿಕ್ಷುಗಳು ಸಾಂಸ್ಕೃತಿಕ ರಾಯಭಾರಿಗಳಂತೆ ಇಡೀ ಏಷ್ಯಾದಲ್ಲಿ ಜಯಭೇರಿ ಬಾರಿಸಿದರು.

3) ಸಿರಿಯಾ, ಗ್ರೀಸ್, ರೋಮ್ ಮತ್ತು ಏಷ್ಯಾ ದೇಶಗಳೊಡನೆ ವ್ಯಾಪಾರ ಸಂಬಂಧ ಹೊಂದಿದ್ದ ಭಾರತೀಯ ವರ್ತಕರು ಅಲ್ಲೇ ನೆಲೆ ನಿಂತು ಭಾರತೀಯ ಸಂಸ್ಕೃತಿ ಪ್ರಚಾರ ಮಾಡಿದರು. 10 ಅನ್ವೇಷಣ ಗುಣ ಹೊಂದಿದ್ದ ನಾವಿಕರು ಪ್ರಚಾರ ಮಾಡಿದರು.

## ಮಧ್ಯ ಏಷ್ಯಾದಲ್ಲಿ ಭಾರತೀಯ ಸಂಸ್ಕೃತಿ ವಿಸ್ತರಣೆ:

ಮಧ್ಯ ಏಷ್ಯಾದಲ್ಲಿ ಬೌದ್ಧ ಧರ್ಮವು ಭಾರತೀಯ ಸಂಸ್ಕೃತಿಯನ್ನು ಜೀವಂತವಾಗಿರಿಸಿತು.

ವಿದೇಶಿಯರಾದ ಇಂಡೋ ಗ್ರೀಕರು, ಪಲ್ಲವರು, ಯೂಚಿಗಳೂ ಸಹ ಹಿಂದೂ ಸಂಸ್ಕೃತಿಯಿಂದ ಪ್ರಭಾವಿತರಾಗಿದ್ದರು. ಅವರು ಬ್ಯಾಕ್ಟ್ರೀಯಾದಲ್ಲಿ ಬೌದ್ಧ ಧರ್ಮದ ಪ್ರಚಾರ ಮಾಡಿದರು. ಬ್ಯಾಕ್ಟ್ರೀಯವನ್ನಾಳಿದ ಮಿನಾಂದರ್ ದೊರೆ ಬೌದ್ಧ ಮತಾವಲಂಬಿಯಾಗಿದ್ದು 'ಮಿಲಿಂದಪನ್ಹ' ಎಂಬ ಬೌದ್ಧ ಗ್ರಂಥವನ್ನು ಬರೆದಿದ್ದಾನೆ. ಹ್ಯೂಯೆನ್‌ತ್ಸಾಂಗ್ ಭಾರತಕ್ಕೆ ಬರುವ ಮುನ್ನ ಮಧ್ಯ ಏಷ್ಯಾದಲ್ಲಿ ಬೌದ್ಧ ಧರ್ಮದ ಪ್ರಭಾವದಿಂದಾಗಿ ಸ್ತೂಪಗಳು ವಿಹಾರಗಳು ನಿರ್ಮಾಣವಾದವು. ವಿನೂತನ ಗಾಂಧಾರ ಶಿಲ್ಪಕಲೆ ರೂಢಿಗೆ ಬಂತು.

## ಭಾರತ ಮತ್ತು ಚೀನಾ:

ಕ್ರಿ.ಶ.1ನೇ ಶತಮಾನದಲ್ಲೇ ಭಾರತದ ಬೌದ್ಧ ಧರ್ಮ ಚೀನಾ ಪ್ರವೇಶಿಸಿತು. ಚೀನಾದಲ್ಲಿ ಕಶ್ಯಪಮಾತಾಂಗ ಎಂಬ ಬೌದ್ಧ ಭಿಕ್ಷುವು ಬೌದ್ಧಧರ್ಮ ಪ್ರಚಾರ ಮಾಡಿದನು. ಬೌದ್ಧಗ್ರಂಥಗಳು ಚೀನೀ ಭಾಷೆಗೆ ಸಲುಲಭವಾಗಿ ಭಾಷಾಂತರವಾದವು. ಫಾಹಿಯಾನ್ ಮತ್ತು ಹ್ಯೂಯಾನ್‌ತ್ಸಾಂಗರ ಭೇಟಿ, ಇವರು ಇಲ್ಲಿಯ ಗ್ರಂಥಗಳ ನಕಲನ್ನು ಚೀನಾಕ್ಕೆ ಒಯ್ದರು.

'ವುತಿ' ಎಂಬ ದೊರೆ ಬೌದ್ಧಧರ್ಮವನ್ನು ರಾಜ್ಯ ಧರ್ಮವೆಂದು ಅಂಗೀಕರಿಸಿ 'ಚೀನಾದ ಅಶೋಕ' ಎಂದು ಹೆಸರಾದನು.

ಸ್ತೂಪ, ವಿಹಾರ, ಗುಹಾಲಯಗಳು ಚೀನಾದಲ್ಲಿ ನಿರ್ಮಾಣವಾದವು.

## ಭಾರತ ಮತ್ತು ಟಿಬೇಟ್:

ಕ್ರಿ.ಶ.2ನೇ ಶತಮಾನದಲ್ಲಿ ಬೌದ್ಧಧರ್ಮ ಟಿಬೇಟ್ಟಿಗೆ ಕಾಲಿಟ್ಟಿತು. ರಾಜಸಾಂನ್‌ತ್ಸಾನ್ ಭಾರತೀಯ ವರ್ಣಮಾಲೆ ಆಚರಣೆಗೆ ತಂದನು. 'ಮಹಾಯಾನ್ ಪಂಥ' ಜನಪ್ರಿಯವಾಯಿತು.

## ಭಾರತೀಯ ಧರ್ಮಗಳು:

### ಹಿಂದೂ ಧರ್ಮ:

ಸಾಮಾನ್ಯ ಲಕ್ಷಣಗಳು ಹಾಗೂ ಸಾಮಾನ್ಯ ನಂಬಿಕೆಗಳು: ಹಿಂದೂ ಧರ್ಮವು ವಿಶ್ವದ ಪ್ರಮುಖ ಧರ್ಮಗಳಲ್ಲಿಯೇ ಒಂದು ಮಹತ್ವದ ವಿಶಿಷ್ಟವಾದ, ವಿಶಾಲವಾದ ಏಕೈಕ ಧರ್ಮ. ಹಿಂದೂ ಧರ್ಮವು ಪಾರಮಾರ್ಥಿಕ ಹಾಗೂ ಪ್ರಾಪಂಚಿಕೆ ಈ ಎರಡೂ ಸಂಗತಿಗಳಲ್ಲಿ ಸಮಾನ ಪ್ರಾತಿನಿಧ್ಯ ನೀಡಿದ ಶ್ರೇಷ್ಠ ಧರ್ಮವಾಗಿದ್ದು ಅತ್ಯಂತ ಪುರಾತನ ಹಾಗೂ ಸಂಕೀರ್ಣವಾದುದಾಗಿದೆ. ಡಾ. ಎಸ್.ರಾಧಾಕೃಷ್ಣನ್‌ರವರು ವರ್ಣಾಶ್ರಮ ಪದ್ಧತಿಯು ಹಿಂದೂ ಧರ್ಮವು ವಿಶ್ವಕ್ಕೆ ಕೊಡಮಾಡಿದ ಶ್ರೇಷ್ಠ ಕೊಡುಗೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ವ್ಯಕ್ತಿಯ ನಡೆ, ನುಡಿ, ಆಚಾರ, ವಿಚಾರ, ರೀತಿ, ನೀತಿಗಳು, ರೂಢಿ ಸಂಪ್ರದಾಯಗಳ ಸಂಕೇತವೇ ಹಿಂದೂ ಪರಂಪರೆಯಾಗಿರುತ್ತದೆ.

ಹಿಂದೂ ಧರ್ಮದ ಗುಣಲಕ್ಷಣಗಳು ಹಾಗೂ ಸಾಮಾನ್ಯ ನಂಬಿಕೆಗಳು ಈ ಕೆಳಗಿನಂತಿವೆ.

1) ಹಿಂದುತ್ವವು ಒಂದು ಜೀವನ ವಿಧಾನವಾಗಿದೆ: ಹಿಂದೂ ಧರ್ಮವು ಕೇವಲ ಒಂದು ಧರ್ಮವಾಗಿರದೇ ಪ್ರತಿಯೊಬ್ಬ ಮಾನವನು ಅನುಸರಿಸಿಕೊಂಡು ಬರಬೇಕಾದ ಧರ್ಮವಾಗಿರುವುದರಿಂದ ಇದನ್ನು ಜೀವನ ಮಾರ್ಗ, ಜೀವನ ಧರ್ಮ ಎಂದು ಕರೆಯುತ್ತಾರೆ. ಡಾ.ಎಸ್.ರಾಧಾಕೃಷ್ಣನ್ ಹೇಳಿರುವಂತೆ ಹಿಂದುತ್ವವು ಒಂದು ನಿರಂತರವಾದ ಸಾಮಾಜಿಕ ಪ್ರಕ್ರಿಯೆಯಾಗಿದೆ. ಅನಾದಿಕಾಲದಿಂದಲೂ ಬೆಳೆದು ಬಂದ ಅತ್ಯಂತ ಪುರಾತನವಾದ ಹಲವಾರು ಮಹಾಪುರುಷರ ಜೀವನ ಆದರ್ಶಗಳ ಆಧಾರದ ಮೇಲೆ ಇದು ನಿಂತಿದೆ.

2) ಹಿಂದೂ ಧರ್ಮಕ್ಕೆ ಧರ್ಮ ಸಿದ್ಧಾಂತ ಇರುವುದಿಲ್ಲ.

3) ಹಿಂದೂ ಧರ್ಮವು ಸಂಕೀರ್ಣವಾದುದು.

4) ಹಿಂದೂ ಧರ್ಮವು ಪುರಾತನವಾದುದು.

5) ಇದು ಸಾಮಾಜಿಕ ಮತ್ತು ಧಾರ್ಮಿಕ ಸಹಿಷ್ಣುತೆ ಹೊಂದಿರುತ್ತದೆ.

6) ಹಿಂದೂಗಳು ಮೂರ್ತಿ ಹಾಗೂ ಪ್ರಕೃತಿ ಆರಾಧಕರು.

7) ವೈವಿಧ್ಯತೆಯಲ್ಲಿ ಏಕತೆಯ ತತ್ವ.

8) ಕರ್ಮಸಿದ್ಧಾಂತ ನಂಬಿಕೆ.

9) ಹಿಂದೂ ಧರ್ಮಕ್ಕೆ ನಿರ್ದಿಷ್ಟವಾದ ಧರ್ಮಗ್ರಂಥಗಳಿರುವುದಿಲ್ಲ.

10) ಜಾತಿಯ ಪ್ರಾಧಾನ್ಯತೆ.

ಹಿಂದೂ ಧರ್ಮದ ಸಾಮಾನ್ಯ ನಂಬಿಕೆಗಳು: ಹಿಂದೂ ಧರ್ಮವು ಆಂಗಿಕವಾಗಿ ಅರಳಿದ ಮತ್ತು ಗಮನಾರ್ಹ ಜನಾಂಗೀಯ ಹಾಗೂ ಸಾಂಸ್ಕೃತಿಕ ವೈವಿಧ್ಯದಿಂದ ಗುರುತಿಸಬಹುದಾದ ಒಂದು ವಿಶಾಲವಾದ ಪ್ರದೇಶದಲ್ಲಿ ಹರಡಿದ ಒಂದು ಧಾರ್ಮಿಕ ಮುಖ್ಯವಾಹಿನಿಯಾಗಿದೆ. ಈ ಮುಖ್ಯವಾಹಿನಿಯು ಧರ್ಮದ ಒಳಗಿನ ನಾವೀನ್ಯತೆಯಿಂದ ಹಿಂದೂ ಪದರದಲ್ಲಿನ ಬಾಹ್ಯ ಸಂಪ್ರದಾಯಗಳು ಅಥವಾ ಪಂಥಗಳ ಸಮ್ಮಿಲನದಿಂದ ಅರಳಿತು. ಪರಿಣಾಮವಾಗಿ ಅಸಂಖ್ಯಾತ ಸಣ್ಣ ಸರಳ ಪಂಥಗಳಿಂದ ಪ್ರಾರಂಭವಾಗಿ ಇಡೀ ಭಾರತ ಪ್ರಪಂಚಾದ್ಯಂತ ಹರಡಿ, ಲಕ್ಷಾಂತರ ಅನುಯಾಯಿಗಳಿರುವ ಪ್ರಮುಖ ಧರ್ಮವಾಗಿ ವ್ಯಾಪಿಸಿದೆ. ಇದು ಧಾರ್ಮಿಕ ಸಂಪ್ರದಾಯಗಳ ಅಗಾಧವಾದ ವೈವಿಧ್ಯ ಉಂಟಾಗುವ ಪರಿಣಾಮವಾಗಿ ಬೌದ್ಧ, ಜೈನ ಧರ್ಮಗಳಿಂದ ಪ್ರತ್ಯೇಕವಾದ ಒಂದು ಸ್ವತಂತ್ರ ಅಸ್ತಿತ್ವವನ್ನು ಪಡೆದು ಧರ್ಮವಾಗಿ ಗುರುತಿಸಲ್ಪಟ್ಟಿದೆ. ಹಿಂದೂ ನಂಬಿಕೆಗಳಲ್ಲಿನ ಪ್ರಮುಖ ಸಂಗತಿಗಳೆಂದರೆ ಧರ್ಮ (ನೀತಿ ತತ್ವಗಳು) ಮತ್ತು ಕರ್ತವ್ಯಗಳು, ಸಂಸಾರ (ಜನನ ಬದುಕು ಮರಣ ಮತ್ತು ಹೊಸ ಹುಟ್ಟಿನ) ಮುಂದುವರಿಯುವ ಆವರ್ತ, ಕರ್ಮ, ಕ್ರಿಯೆ ಮತ್ತು ಅಟನಂತರದ ಪ್ರತಿಕ್ರಿಯೆ / ಪಾಪ ಪುಣ್ಯಗಳೆಂಬ ಕರ್ಮಗಳು ಹಾಗೂ ಅವುಗಳ ಕರ್ಮಫಲಗಳು. ಮೋಕ್ಷ (ಸಂಸಾರದಿಂದ ಬಂಧವಿಮುಕ್ತಿ) ಮತ್ತು ವಿವಿಧ

ಯೋಗಗಳು, ಪಂಥಗಳು ಮತ್ತು ಆಚರಣೆಗಳನ್ನು ಒಳಗೊಂಡಿದೆ. ಆದರೆ ಹಿಂದೂ ಧರ್ಮದ ನಂಬಿಕೆಗಳು ಇಷ್ಟು ಸೀಮಿತವಾಗಿರದೇ ವಿಶಾಲ, ವಿಶಿಷ್ಟ, ಭವ್ಯ ಪರಂಪರೆಯಿಂದ ಒಳಗೊಂಡಿದುದಾಗಿದೆ.

**ಪುರುಷಾರ್ಥಗಳು:**

ಆಚರಣೆ ಹಾಗೂ ನೀತಿ ತತ್ತ್ವ-ಪುರುಷಾರ್ಥವೆಂಬುದು ಭಾರತೀಯ ತತ್ವಶಾಸ್ತ್ರದಲ್ಲಿ ಮಾನವನು ಅನುಸರಿಸಬೇಕಾದ ಜೀವನ ತತ್ವಗಳು ಎಂದು ಹೇಳಬಹುದು. ಅಂದರೆ ಮನುಷ್ಯನಾಗಿ ಹುಟ್ಟಿದ ಮೇಲೆ ಸಾಧಿಸಬೇಕಾದುದು ಹಾಗೂ ಗಳಿಸಬೇಕಾದುದರ ಬಗ್ಗೆ ಪುರುಷರ್ಥಗಳು ಉಲ್ಲೇಖಿಸುತ್ತವೆ. ಇವು ನಾಲ್ಕು. ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ. ಧರ್ಮವೆಂದರೆ ಆಚಾರ ಪ್ರತಿಯೊಬ್ಬ ವ್ಯಕ್ತಿಯೂ ನೈತಿಕತೆಯ ಆಧಾರದಲ್ಲಿ ಧರ್ಮವನ್ನು ಆಚರಣೆ ಮಾಡಬೇಕು. ಈ ಪದ ವ್ಯಕ್ತಿಯ ಸಹಜ ಕರ್ತವ್ಯಗಳನ್ನೂ ಒಳಗೊಳ್ಳುತ್ತದೆ. ಸಮಾಜ ಜೀವನದ ಸಹಬಾಳ್ವೆಗೆ ಅನುರೂಪತೆಗೆ ಇದು ಅವಶ್ಯ. ಅರ್ಥವೆಂದರೆ ಧನ ಹಾಗೂ ಭೋಗ ವಸ್ತುಗಳು. ಸಮಾಜದಲ್ಲಿ ವ್ಯಕ್ತಿಗೆ ತನ್ನ ಕುಟುಂಬವನ್ನು ಪೋಷಿಸಲು ಧನ, ಕನಕಾದಿಗಳು ಅಗತ್ಯ. ಲೌಕಿಕ ಜೀವನದ ಅತ್ಯಂತ ಅವಶ್ಯಕ ವಸ್ತುಗಳಲ್ಲಿ ಒಂದಾದ ಇದು ಧರ್ಮದ ಅನುಗುಣವಾಗಿಯೇ ಸಂಚಯನಗೊಳ್ಳಬೇಕು. ದುರಾಸೆಗಳಾಗಲೀ, ಮೋಸಗಳಾಗಲೀ ಅರ್ಥದ ಸಂಪಾದನೆಗೆ ಮಾಧ್ಯಮವಾಗಬಾರದು. ಮೂರನೆಯದು ಕಾಮ. ಕಾಮವೆಂದರೆ ಬಯಕೆಗಳು. ವ್ಯಕ್ತಿ ನಿಸರ್ಗದತ್ತವಾಗಿ ಪೂರೈಸಿಕೊಳ್ಳಬೇಕು. ಮೋಕ್ಷವೆಂದರೆ ಹುಟ್ಟು ಸಾವುಗಳಿಂದ ಬಿಡುಗಡೆ ಹೊಂದಿ ಬ್ರಹ್ಮಾನಂದದಲ್ಲಿ ನೆಲೆ ನಿಲ್ಲುವುದು. ಸಾಮಾನ್ಯವಾಗಿ ವ್ಯಕ್ತಿಯ ಚಿಂತನೆ ಆಧ್ಯಾತ್ಮಿಕದ ಕಡೆಗೆ ಅಂತಿಮವಾಗಿ ವಾಲಬೇಕು. ಹಾಗಿದ್ದರೆ ಮಾತ್ರ ಜೀವನದ ಸಾರ್ಥಕ್ಯ ಪಡೆದಂತಾಗುತ್ತದೆ. ಇದರ ಒಟ್ಟಾರೆ ಅರ್ಥ, ಪರಿಮಿತಿಗಳು ಲೌಕಿಕ ಜೀವನದ ಆದರ್ಶಗಳನ್ನು ಸೈದ್ಧಾಂತಿಕವಾಗಿ ತಿಳಿಸುತ್ತವೆ. ಹೀಗೆ ಭಾರತೀಯ ಸಮಾಜದಲ್ಲಿ ವ್ಯಕ್ತಿಯ ಜೀವನದ ಗುರಿಗಳೇನು ಮತ್ತು ಅವುಗಳ ಸ್ವರೂಪವೇನು ಎಂದು ತಿಳಿಸುವ ಅಂಶಗಳೇ ಪುರುಷಾರ್ಥಗಳು ಎಂದು ಹೇಳಬಹುದು.

ಸಹಜವಾಗಿಯೇ ಮಾನವರು ಬದುಕಿನಲ್ಲಿ ಧ್ಯೇಯಗಳನ್ನು ಇಟ್ಟುಕೊಂಡಿರುತ್ತಾರೆ. ಅದನ್ನು ತಲುಪಲು ಶ್ರಮಿಸುವುದು ಯುಕ್ತವಾದದ್ದೇ ಎಂಬುದನ್ನು ಕಂಡುಕೊಂಡವರು ಈ ಹೊತ್ತು ನಾವು ಹಿಂದಿರುಗಿ ನೋಡಿದಾಗ ಹಿಂದೂಧರ್ಮವನ್ನು ಇಡಿಯಾಗಿ ಅದರ ವಿಪುಲ ಸಾಹಿತ್ಯ ಸಂಕೀರ್ಣ ಕ್ರಿಯಾಕರ್ಮಗಳು, ಜನಪದ ವಿಧಿವಿಧಾನಗಳು, ಸಮೃದ್ಧವಾದ ಕಲೆ, ಇತ್ಯಾದಿಗಳ ಸಮೇತವಾಗಿ ಪರಿಗಣಿಸಿ ಅದರ ಸಾರಾಂಶವನ್ನು ಒಂದು ವಾಕ್ಯದಲ್ಲಿ ಹೇಳಬಹುದಾದರೆ ಅದು ಅಪೇಕ್ಷಿಸುವುದನ್ನು ನೀವು ಹೊಂದಬಹುದು ಎಂದಾಗುತ್ತದೆ.

ಇದು ಭರವಸೆಯೇನೋ ಸರಿ, ಆದರೆ ಸಮಸ್ಯೆಯ ಉರುಳು ಮತ್ತೇ ನಮ್ಮ ಕುತ್ತಿಗೆಗೆ ಬಂದು ಬೀಳುತ್ತದೆ. ಏಕೆಂದರೆ ನಮಗೆ ಏನು ಬೇಕು ಎಂಬುದಕ್ಕೆ ಸರಳ ಉತ್ತರ ಕೊಡಬಹುದು. ಆದರೆ ಸರಿಯಾದ ಉತ್ತರವನ್ನು ನಾವು ಅವಿಷ್ಕರಿಸಿಕೊಳ್ಳಬೇಕು. ಜನರ ಅಪೇಕ್ಷೆಗಳು ನಾಲ್ಕು ಎನ್ನುತ್ತದೆ ಹಿಂದೂ ಧರ್ಮ.

ಮೊದಲನೆಯದಾಗಿ ಜನರಿಗೆ ಸುಖ ಸಂತೋಷಗಳು ಬೇಕು. ಅದು ಸಹಜ. ಮಾನವನ ಹುಟ್ಟಿರುವುದೇ ನೋವು ನಲಿವುಗಳ ಕುದಿಪಾಕದ ಮೂಸೆಯೊಂದಿಗೆ. ಇದನ್ನು ಉಪೇಕ್ಷಿಸಿ ಆ ಮೂಸೆಯಲ್ಲೇ ಕೈಯಿಟ್ಟುಕೊಂಡಿದ್ದರೆ ನಾವು ಕ್ಷಿಪ್ರದಲ್ಲೇ ನಾಶವಾಗುತ್ತೇವೆ.

ಪಾರಲೌಕಿಕ ಜೀವನ ವಿರೋಧಿ ಇತ್ಯಾದಿಯಾಗಿ ಟೀಕಿಸಲ್ಪಟ್ಟಿರುವ ಹಿಂದೂ ಧರ್ಮ ಸುಖಾಭಿಲಾಷಿಗಳನ್ನು ಹೀಗಳೆಯುವುದಿಲ್ಲ. ಸುಖವೇ ಪರಮೋತ್ಕೃಷ್ಟ ಎಂದೇನೂ ಅದು ಭಾವಿಸುವುದಿಲ್ಲವಾದರೂ ಸುಖಾಭಿಲಾಷಗಳನ್ನು ಅದು ಕೀಳುಗಳೆಯುವುದಿಲ್ಲ. ಸುಖ ಬೇಕೆನ್ನುವವನಿಗೆ ಅದೂ ಒಂದು ಪುರುಷಾರ್ಥ. ಅದರಲ್ಲೇನೂ ತಪ್ಪಿಲ್ಲ ಎಂದೇ ಹೇಳುತ್ತದೆ. ಈ ಪ್ರಪಂಚ ಸೌಂದರ್ಯದಿಂದ ತುಂಬಿ ತುಳುಕುತ್ತಿದೆ. ಇಲ್ಲಿ ಬೇಕಾದಷ್ಟು ಇಂದ್ರಿಯ ಗ್ರಾಹ್ಯವಾಗುವ ಆನಂದವಿದೆ. ಈ ಆನಂದವು ಸ್ತರದಿಂದ ಸ್ತರಕ್ಕೆ ಹೆಚ್ಚುವ ಇನ್ನೂ ಅನೇಕ ಲೋಕಗಳಿವೆ. ಈ ಲೋಕಗಳನ್ನೂ ಕಾಲಾನುಕ್ರಮದಲ್ಲಿ ನಾವು ಆನಂದಿಸಬಹುದು.

## ಹಿಂದೂ ಆಚರಣೆಗಳು ಮತ್ತು ತತ್ವಗಳು:

ಹಿಂದೂ ಆಚರಣೆಗಳು ಮುಖ್ಯವಾಗಿ ದೇವರ ಅರಿವನ್ನು ಅರಸುವ ಮತ್ತು ಕೆಲವೊಮ್ಮೆ ದೇವರನ್ನು ಬೇಡುವುದನ್ನೂ ಸಹ ಒಳಗೊಂಡಿರುತ್ತದೆ. ಹಾಗಾಗಿ ಹಿಂದೂ ಧರ್ಮವು ದಿನನಿತ್ಯದ ಜೀವನದ ನಡುವೆಯೂ ಒಬ್ಬರಿಗೆ ದೈವತ್ವದ ಬಗ್ಗೆ ಚಿಂತಿಸಲು ನೆರವಾಗುವ ಉದ್ದೇಶದಿಂದ ಅನೇಕ ಆಚರಣೆಗಳನ್ನು ವೃದ್ಧಿಪಡಿಸಿದೆ. ಹಿಂದೂಗಳು ಮನೆಯಲ್ಲಿ ಅಥವಾ ದೇವಸ್ಥಾನದಲ್ಲಿ ಪೂಜೆ ಆರಾಧನೆಗಳಲ್ಲಿ ಭಾಗವಹಿಸಬಹುದು. ಸಾಮಾನ್ಯವಾಗಿ ಹಿಂದೂಗಳಲ್ಲಿ ಮೂರ್ತಿ ಆರಾಧನೆ ರೂಢಿಯಲ್ಲಿದ್ದು ತಮ್ಮ ಇಷ್ಟ ದೇವತೆಗಳಿಗೆ ಸಮರ್ಪಿತವಾಗಿರುವ ಮೂರ್ತಿಗಳಿಂದ ಕೂಡಿದ ದೇವರ ಮನೆಯನ್ನು ನಿರ್ಮಿಸಿರುತ್ತಾರೆ. ದೇವಸ್ಥಾನಗಳಿಗೆ ಭೇಟಿ ನೀಡುತ್ತಾರೆ. ದೇವರು ಸರ್ವಾಂತರ್ಯಾಮಿಯಾಗಿರುವುದರಿಂದ ಮೂರ್ತಿಯನ್ನು ದೇವರ ಅಭಿವ್ಯಕ್ತಿಯೆಂದು ಪರಿಗಣಿಸಲಾಗುತ್ತದೆ. ಮೂರ್ತಿಯನ್ನು ಬರಿಯ ಕಲ್ಲು ಅಥವಾ ಕಟ್ಟಿಗೆಯಾಗಿ ಭಾವಿಸದೇ ದೈವತ್ವದ ಪ್ರಕಟವಾದ ರೂಪವಾಗಿ ಭಾವಿಸಬೇಕೆಂದು ಪದ್ಮ ಪುರಾಣವು ಹೇಳುತ್ತದೆ.

ಹಿಂದೂ ಧರ್ಮವು ಕಲೆ, ವಾಸ್ತುಶಾಸ್ತ್ರ, ಸಾಹಿತ್ಯ ಮತ್ತು ಪೂಜೆಯಲ್ಲಿ ಧಾರ್ಮಿಕತೆಯನ್ನು ಚಿತ್ರಿಸಲು ಸಂಕೇತ ಸಮೂಹ ಮತ್ತು ವಿಗ್ರಹ ನಿರ್ಮಾಣಶಾಸ್ತ್ರದ ವಿಕಸಿತ ವ್ಯವಸ್ಥೆಯನ್ನು ಹೊಂದಿದೆ. ಈ ಸಂಕೇತಗಳು ತಮ್ಮ ಅಂತ6ರಾರ್ಥವನ್ನು, ಧರ್ಮಗ್ರಂಥಗಳು, ಪುರಾಣ, ಸಂಗ್ರಹಗಳು ಅಥವಾ ಸಾಂಸ್ಕೃತಿಕ ಸಂಪ್ರದಾಯಗಳಿಂದ ಪಡೆಯುತ್ತವೆ. ಪರಬ್ರಹ್ಮವನ್ನು ನಿರೂಪಿಸುವ ಓಂ ವರ್ಣ ಮತ್ತು ಶುಭವನ್ನು ಸಂಕೇತಿಸುವ ಸ್ವಸ್ತಿಕ ಚಿಹ್ನೆಗಳು ಹಿಂದೂ ಧರ್ಮವನ್ನು ಪ್ರತಿನಿಧಿಸುತ್ತವೆ. ಹಿಂದೂ ಧರ್ಮವು ಕಮಲ, ಚಕ್ರ, ವೀಣೆಯನ್ನು ಒಳಗೊಂಡಂತೆ ಹಲವು ಸಂಕೇತಗಳನ್ನು ನಿರ್ದಿಷ್ಟ ದೇವತೆಯೊಂದಿಗೆ ಪ್ರತಿನಿಧಿಸುತ್ತದೆ. ಮಂತ್ರಗಳು, ಅವುಗಳ ಅರ್ಥ, ಶಬ್ದ ಮತ್ತು ಪಠನ ಶೈಲಿಯ ಮೂಲಕ ಒಬ್ಬ ಭಕ್ತನ ಮನಸ್ಸನ್ನು ದೇವರ ಚಿಂತನೆಗಳ ಮೇಲೆ ಕೇಂದ್ರೀಕರಿಸಲು ಅಥವಾ ದೇವತೆಗಳ ಪ್ರತಿ ತನ್ನ ಭಕ್ತಿಯನ್ನು ವ್ಯಕ್ತಪಡಿಸಲು ನೆರವಾಗುವ ವಿಜ್ಞಾಪನೆಗಳಾಗಿವೆ.

## ಜೈನ ಧರ್ಮ:

ಜೈನ ಧರ್ಮವು ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಇದು 24 ತೀರ್ಥಂಕರರನ್ನು ಹೊಂದಿದ್ದು, ಮೊದಲ ತೀರ್ಥಂಕರನಾದ ವೃಷಭನಾಥನು ಜೈನ ಧರ್ಮ ಸ್ಥಾಪಿಸಿದರೆಂದು ನಂಬಲಾಗಿದೆ. 23ನೇ ತೀರ್ಥಂಕರರಾದ ಪಾರ್ಶ್ವನಾಥ ಮತ್ತು 24ನೇ ತೀರ್ಥಂಕರರಾದ 'ಮಹಾವೀರ' ಪ್ರಮುಖರಾಗಿದ್ದಾರೆ.

ಇವರ ಪವಿತ್ರ ಚಿಹ್ನೆ ಸ್ವಸ್ತಿಕ್.

## ವರ್ಧಮಾನ ಮಹಾವೀರ:

24ನೇ ತೀರ್ಥಂಕರನಾದ ಇವರು ವೈಶಾಲಿ ಸಮೀಪದ ಕುಂದಗ್ರಾಮದಲ್ಲಿ ಕ್ರಿ.ಪೂ. 599ರಲ್ಲಿ ಜನಿಸಿದರು. ಮಹಾವೀರನಿಗೆ ವೈಶಾಖದ 10ನೇ ದಿನ ಬಿಹಾರದ 'ಜೃಂಭಿಕಾ' ಗ್ರಾಮದಲ್ಲಿ ಜ್ಞಾನೋದಯವಾಯಿತು. ಕೈವಲ್ಯ ಎಂಬ ಆಧ್ಯಾತ್ಮಿಕ ಜ್ಞಾನ ಪಡೆದನು. ಕೇವಲಿನ್ ಎಂದರೆ (ಸರ್ವಜ್ಞ) ಜಿನ (ಇಂದ್ರಿಯ ನಿಗ್ರಹಿಸಿದವನು). 72ನೇ ವಯಸ್ಸಿನಲ್ಲಿ ಕ್ರಿ.ಪೂ.527ರಲ್ಲಿ ಬಿಹಾರದ ರಾಜಗೃಹ ಸಮೀಪದ ಪಾವಾ ಎಂಬಲ್ಲಿ ನಿರ್ವಾಣ ಹೊಂದಿದನು.

### ತತ್ವಗಳು:

ಪಾರ್ಶ್ವನಾಥನಿಂದ ಮಹಾವೀರನಿಂದ ಮತ್ತು ಅವರ ಅನುಯಾಯಿಗಳಿಂದ ಬೋಧಿಸಲ್ಪಟ್ಟ ತತ್ವಗಳೇ ಜೈನಧರ್ಮದ ತತ್ವಗಳು. ಇವುಗಳನ್ನು ಜೈನರ ಪವಿತ್ರ ಗ್ರಂಥಗಳಾದ '12 ಅಂಗಗಳಲ್ಲಿ' ಕಾಣಬಹುದಾಗಿದೆ. ಇವರು ವೇದಗಳ ಅಧಿಕಾರವಾಣಿಯನ್ನು ತಿರಸ್ಕರಿಸಿದರು. ವೇದಗಳಲ್ಲಿ ಹೇಳಿರುವುದೆಲ್ಲಾ ಸತ್ಯ ಎಂದು ನಂಬಲಿಲ್ಲಾ. ಪ್ರಾಣಿ ಬಲಿ ಖಂಡಿಸಿದರು. ಪ್ರಕೃತಿಯ ಪ್ರತಿಯೊಂದು ವಸ್ತುವಿನಲ್ಲೂ ಜೀವಾತ್ಮವಿದೆ ಎಂದು ನಂಬಿದ್ದರು.

ಇವರು ಹಿಂದೂಗಳ ಕರ್ಮಸಿದ್ದಾಂತ ಒಪ್ಪಿಕೊಂಡಿದ್ದರು. ಇವರ ಪ್ರಕಾರ, ಮಾನವನ ಪುನರ್ಜನ್ಮ ಮತ್ತು ಕಷ್ಟಕೋಟಲೆಗೆ ಅವನ ಜನ್ಮ ಜನ್ಮಾಂತರದ ಕಷ್ಟಗಳಿಗೆ ಕಾರಣ ಅವನ ಕರ್ಮಗಳು. ಇವುಗಳಿಂದ ಮುಕ್ತಿ ಪಡೆಯುವುದೇ 'ನಿರ್ವಾಣ'.

**ಮಹಾವೀರನ ಪಂಚಶೀಲ ತತ್ವಗಳು:**

1) ಸತ್ಯ

2) ಅಹಿಂಸೆ (ಹಿಂಸೆ ಮಾಡದಿರುವುದು)

3) ಆಸ್ಥೇಯ (ಕಳ್ಳತನ ಮಾಡದಿರುವುದು)

4) ಅಪರಿಗ್ರಹ (ಅವಶ್ಯಕತೆಗಿಂತ ಹೆಚ್ಚು ಸಂಪತ್ತು ಹೊಂದದಿರುವುದು)

5) ಬ್ರಹ್ಮಚರ್ಯ ಪಾವಿತ್ರ್ಯತೆ (ಮಹಾವೀರನ ಪ್ರಮುಖ ತತ್ವ)

## ರತ್ನತ್ರಯ ಅಥವಾ ತ್ರಿ–ರತ್ನಗಳು:

ರತ್ನತ್ರಯಗಳು ಜೈನರ ಶ್ರೇಷ್ಠ ಧಾರ್ಮಿಕ ತತ್ವಗಳಾಗಿವೆ. ಇವುಗಳ ಪಾಲನೆಯೇ 'ನಿರ್ವಾಣಕ್ಕೆ ದಾರಿ'. ಅವುಗಳೆಂದರೆ,

1) ಸಂಮ್ಯಕ್ ಜ್ಞಾನ (ಒಳ್ಳೆಯ ಜ್ಞಾನ)

2) ಸಂಮ್ಯಕ್ ನಂಬಿಕೆ

3) ಸಂಮ್ಯಕ್ ನಡತೆ

ಇವುಗಳನ್ನು ಸಾಧಿಸಬೇಕಾದರೆ ಸಾಧಕರು ಕಠಿಣ ತಪಸ್ಸುಗಳನ್ನು ಮತ್ತು ಮಾರ್ಗಗಳನ್ನು ಅನುಸರಿಸಬೇಕು. ತನ್ನ ದೇಹವನ್ನು ದಂಡಿಸಬೇಕು. ಇಂದ್ರಿಯ ವ್ಯಾಮೋಹ ತ್ಯಜಿಸಿ ಪ್ರಾಪಂಚಿಕ ಬಂಧಗಳಿಂದ ಮುಕ್ತವಾಗಬೇಕು. ಆದರೆ ಈ ತತ್ವಗಳು ಸಾಮಾನ್ಯ ಜನರಿಗೆ ಕಠಿಣವಾದುದರಿಂದ ಸಾಮಾನ್ಯರಿಗಾಗಿ ಅಣುವೃತಗಳು ಅಥವಾ ಪಂಚಮಹಾ ವೃತಗಳನ್ನು ಪ್ರತಿಪಾದಿಸಿದರು. (ಸತ್ಯ, ಅಹಿಂಸೆ, ಆಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ).

ಮಹಾವೀರನಿಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇರಲಿಲ್ಲಾ. ಆದರೆ ಆತ್ಮದ ಅಸ್ತಿತ್ವದಲ್ಲಿ ನಂಬಿಕೆ ಇತ್ತು. ಇವನು ನಿರ್ವಾಣಕ್ಕಾಗಿ ಅಥವಾ ಮೋಕ್ಷ ಸಾಧನೆಗಾಗಿ ಸನ್ಯಾಸತ್ವ ಅಥವಾ ಕಠಿಣ ತಪಸ್ಸನ್ನು ಪ್ರತಿಪಾದಿಸಿದನು. ಇವನಿಗೆ ಗಣಾಧರರೆಂಬ 11 ಜನ ಶಿಷ್ಯರಿದ್ದರು.

## ಜೈನಧರ್ಮದ ಪಂಥಗಳು:

ಮಹಾವೀರನಿಂದ ಬೋಧಿಸಲ್ಪಟ್ಟ ಜೈನಧರ್ಮವು ಕಾಲ ಕ್ರಮೇಣದಲ್ಲಿ ಇಬ್ಭಾಗವಾಗಿ 'ಶ್ವೇತಾಂಬರ ಮತ್ತು ದಿಗಂಬರ' ಪಂಥಗಳು ಹುಟ್ಟಿಕೊಂಡವು.

ಶ್ವೇತಾಂಬರ ಪಂಥವು ಉದಾರವಾದಿ ಪಂಥವಾದರೆ, ದಿಗಂಬರ ಪಂಥವು ಸಂಪ್ರದಾಯವಾದಿ ಪಂಥವಾಯಿತು.

ಶ್ವೇತಾಂಬರರು ಪಾರ್ಶ್ವನಾಥನ ಅನುಯಾಯಿಗಳಾದರೆ, ದಿಗಂಬರರು ಮಹಾವೀರನ ಅನುಯಾಯಿಗಳು.

ಚಂದ್ರಗುಪ್ತ ಮೌರ್ಯನ ಆಳ್ವಿಕೆಯ ಕೊನೆಗಾಲದಲ್ಲಿ ಭೀಕರವಾದ ಕ್ಷಾಮ ತೋರಿದಾಗ, ಜೈನರ ಒಂದು ಪಂಗಡವು ಭದ್ರಬಾಹುವಿನೊಡನೆ ದಕ್ಷಿಣ ಭಾರತಕ್ಕೆ ಬಂದು ಶ್ರವಣಬೆಳಗೊಳದಲ್ಲಿ ನೆಲೆಸಿತು. ಇವರೆಲ್ಲಾ ಜೈನಧರ್ಮದ ತತ್ವಗಳನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದರು. 12 ವರ್ಷದ ಕ್ಷಾಮದ ನಂತರ ಈ ಜೈನರು ಮತ್ತೇ ಉತ್ತರ ಭಾರತಕ್ಕೆ ವಲಸೆ ಹೋದಾಗ ಅಲ್ಲೇ ನೆಲೆಸಿದ್ದ ಜೈನರ ಆಚರಣೆಗೂ ಇವರ ಆಚರಣೆಗೂ ಅಜಗಜಾಂತರ ವ್ಯತ್ಯಾಸವಿತ್ತು. ಹಾಗಾಗಿ ಉತ್ತರ ಭಾರತದಲ್ಲೇ ಇದ್ದವರು ಶ್ವೇತಾಂಬರರಾದರೆ ದಕ್ಷಿಣಕ್ಕೆ ಬಂದಿದ್ದವರು ದಿಗಂಬರರಾದರು.

'ಆಗಮ ಸಿದ್ಧಾಂತ' ಜೈನರ ಪವಿತ್ರ ಗ್ರಂಥ. ಇದು 45ರಿಂದ 50 ಸಂಪುಟಗಳನ್ನು ಒಳಗೊಂಡಿದೆ.

ಮಹಾವೀರನ ಮೂಲತತ್ವವನ್ನೊಳಗೊಂಡ ಸಿದ್ಧಾಂತ 'ಪೂರ್ವ'ಗಳನ್ನು 14 ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಇದರಲ್ಲಿ ಶ್ವೇತಾಂಬರ ಮತ್ತು ದಿಗಂಬರರು 12 ಅಂಗಗಳನ್ನು ಇಬ್ಬರೂ ಮೊದಲ ಮತ್ತು ಪ್ರಧಾನ ಧಾರ್ಮಿಕ ಗ್ರಂಥಗಳೆಂದು ಒಪ್ಪಿಕೊಂಡಿದ್ದಾರೆ.

**ಜೈನ ಧರ್ಮದ ಕೊಡುಗೆಗಳು:**

1) ಜೈನ ಧರ್ಮೀಯರು ತಮ್ಮ ಧರ್ಮ ಪ್ರಚಾರಕ್ಕಾಗಿ ಸಂಸ್ಕೃತ ಮತ್ತು ಪಾಳಿ ಭಾಷೆಗಿಂತ ಹೆಚ್ಚಾಗಿ ಆಯಾಯ ಪ್ರದೇಶದ ಭಾಷೆ ಬಳಸಿ ಬೋಧಿಸಿದರು.

2) ಮಹಾವೀರನು ಹೆಚ್ಚಾಗಿ 'ಅರ್ಧಮಾಗಧಿ' ಭಾಷೆಯಲ್ಲಿ ಬೋಧನೆ ಮಾಡಿದನು.

3) ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಜೈನರೇ ಅಸ್ತಿಭಾರ ಹಾಕಿದರು. (ಪಂಪ, ರನ್ನ, ಜನ್ನ, ಪೊನ್ನ)

4) ಜೈನರ ರತ್ನತ್ರಯಗಳು ಮತ್ತು ಅಣುವ್ರತಗಳು ಪರಿಶುದ್ಧವಾದ ಜೀವನಕ್ಕೆ ಪ್ರಾಮುಖ್ಯತೆ ನೀಡಿದವು.

5) 'ಅಹಿಂಸಾ ಪರಮೋಧರ್ಮ' ಇವರ ಅಮರ ತತ್ವ.

## ಬೌದ್ಧ ಧರ್ಮ:

ಬೌದ್ಧ ಧರ್ಮದ ಉದಯ ಮತ್ತು ಪ್ರಸಾರದೊಂದಿಗೆ ಭಾರತ ಮತ್ತು ಏಷ್ಯಾದ ಅನೇಕ ರಾಷ್ಟ್ರಗಳ ಇತಿಹಾಸದಲ್ಲಿ ಉಜ್ವಲ ಅಧ್ಯಾಯವೊಂದು ಆರಂಭವಾಯಿತು. ಗೌತಮ ಬುದ್ಧ ಇದರ ಸ್ಥಾಪಕ. (ಜನನ ಕ್ರಿ.ಪೂ.583 ಲುಂಬಿನಿವನ). ಜಾತಕ ಕಥೆಗಳ ಪ್ರಕಾರ ಸಿದ್ಧಾರ್ಥ ಅಥವಾ ಗೌತಮನು ವಿಹಾರಕ್ಕೆ ಹೊರಟಾಗ ರೋಗಿ, ಮುದುಕ, ಶವ, ಸನ್ಯಾಸಿ ಇವುಗಳನ್ನು ನೋಡಿ ಮಾನವನ ಜೀವನದ ಮರ್ಮವನ್ನು ತಿಳಿದು ಸನ್ಯಾಸಿಯಾಗಲು ಪ್ರೇರೇಪಿಸಿ ಪ್ರಾಪಂಚಿಕ ಜೀವನ ತ್ಯಜಿಸುವ ನಿರ್ಧಾರವನ್ನು ಮಾಡಿದನು. ಹೆಂಡತಿ, ಮಗು, ತಂದೆ, ತಾಯಿ, ರಾಜ್ಯವನ್ನು ತ್ಯಜಿಸಿದನು. ಇದೇ ಮಹಾಪರಿತ್ಯಾಗ.

ನಂತರ ತನ್ನ 35ನೇ ವಯಸ್ಸಿನಲ್ಲಿ ಗಯಾದ ಬಳಿಯ ಆಲದ ಮರ (ಅಶ್ವತ್ಥ ಮರ, ಬೋಧಿವೃಕ್ಷ)ದ ಕೆಳಗೆ ಬುದ್ಧನಿಗೆ ಜ್ಞಾನೋದಯವಾಯಿತು. ಬುದ್ಧ ಎಂದರೆ 'ಜ್ಞಾನ' ತಥಾಗತ (ಸತ್ಯ ಅರಿತವನು) ಎಂದರ್ಥ. ನಂತರ ತನ್ನ ಉಳಿದ ಜೀವನವನ್ನು ಜನ ಕಲ್ಯಾಣಕ್ಕಾಗಿ ಬಳಸಿದರು. ಬನಾರಸ್‌ನ ಸಮೀಪದ ಸಾರನಾಥದಲ್ಲಿ ಪ್ರಥಮ ಪ್ರವಚನ ನೀಡಿದರು. ಇದೇ ಧರ್ಮ ಚಕ್ರ ತಿರುಗುವಿಕೆ. ನಂತರ 80ನೇ ವಯಸ್ಸಿನಲ್ಲಿ ಉತ್ತರಪ್ರದೇಶದ ಕುಶಿನಗರದಲ್ಲಿ 'ಪರಿನಿರ್ವಾಣ' ಹೊಂದಿದನು.

## ಬೌದ್ಧ ಧರ್ಮದ ತತ್ವಗಳು:

ಗೌತಮಬುದ್ಧನ ಉದ್ದೇಶ ಹೊಸ ಧರ್ಮ ಸ್ಥಾಪನೆಯಾಗಿರಲಿಲ್ಲ. ಆದರೆ ಅವನು ಬೋಧಿಸಿದ ಮಾರ್ಗ ಅವನ ಮರಣದ ತರುವಾಯ ಹೊಸಧರ್ಮದವಾಗಿ ಮಾರ್ಪಟ್ಟಿತು. ಬುದ್ಧನು ತನ್ನ ಜೀವಿತ ಕಾಲದಲ್ಲಿ ಬೋಧಿಸಿದಂತಹ ಧರ್ಮ ಮತ್ತು ಆದರ್ಶಗಳೇ ಬೌದ್ಧ ಧರ್ಮದ ತತ್ವಗಳಾದವು.

ಈ ತತ್ವಗಳನ್ನು ಬೌದ್ಧರ ಧರ್ಮಗ್ರಂಥಗಳಾದ 'ತ್ರಿಪಿಟಕ'ಗಳಲ್ಲಿ ಕಾಣಬಹುದು.

1) ವಿನಯ 2) ಸುತ್ತ 3) ಅಭಿದಮ್ಮ ಪಿಟಕ ಈ 3 ಬೌದ್ಧರ ಪವಿತ್ರ ಗ್ರಂಥಗಳು. ಬುದ್ಧನ ತತ್ವಗಳಲ್ಲಿ ಧಾರ್ಮಿಕತೆಗಿಂತ ಸಾಮಾಜಿಕತೆಗೆ ಹೆಚ್ಚಿನದಾದಂತಹ ಮಹತ್ವ ದೊರಕಿತು.

ಇವರ 4 ಮೂಲ ತತ್ವಗಳೆಂದರೆ,

1) ಸತ್ಯ

2) ಅಹಿಂಸೆ (ನೋವು ಮಾಡದಿರುವುದು)

3) ಆಸ್ಥೇಯ (ಕಳ್ಳತನ ಮಾಡದಿರುವುದು)

4) ಬ್ರಹ್ಮಚರ್ಯೆ (ಪಾವಿತ್ರ್ಯತೆ) ಬೋಧಿಸುವುದು.

**ಬುದ್ಧನ 4 ಆರ್ಯಸತ್ಯಗಳು ಅಥವಾ 4 ಶ್ರೇಷ್ಠ ತತ್ವಗಳು:**

1) ಪ್ರಾಪಂಚಿಕ ಜೀವನವು ದು:ಖಮಯವಾಗಿದೆ.

2) ಆಸೆಯೇ ದು:ಖಕ್ಕೆ ಮೂಲ ಕಾರಣ.

3) ಆಸೆಯನ್ನು ನಿಗ್ರಹಿಸುವುದರಿಂದ ಪುನರ್ ಜನ್ಮವನ್ನು ಕೊನೆಗಾಣಿಸಬಹುದು.

4) ಆಸೆಯನ್ನು ಕೊನೆಗಾಣಿಸಲು ಅಷ್ಟಾಂಗ ಮಾರ್ಗ ಅನುಸರಿಸಬೇಕು.

**ಅಷ್ಟಾಂಗ ಮಾರ್ಗ:**

ಬುದ್ಧನ ಪ್ರಕಾರ ಅಷ್ಟಾಂಗ ಮಾರ್ಗಗಳೆಂದರೆ,

1) ಒಳ್ಳೆಯ ನಂಬಿಕೆ

2) ಒಳ್ಳೆಯ ಆಲೋಚನೆ

3) ಒಳ್ಳೆಯ ಮಾತು

4) ಒಳ್ಳೆಯ ನಡತೆ

5) ಒಳ್ಳೆಯ ಪ್ರಯತ್ನ

6) ಒಳ್ಳೆಯ ಧ್ಯಾನ

7) ಒಳ್ಳೆಯ ಜೀವನೋಪಾಯ

8) ಒಳ್ಳೆಯ ಮನಸ್ಥಿತಿ.

**ನಿರ್ವಾಣ:**

ಬುದ್ಧನ ಪ್ರಕಾರ ನಿರ್ವಾಣವೆಂದರೆ 'ಎಲ್ಲಾ ಆಸೆಗಳಿಂದ ಮತ್ತು ದು:ಖಗಳಿಂದ ಮುಕ್ತನಾಗಿರುವುದು' ಎಂದರ್ಥ.

ಮಾನವನು ತನ್ನ ಅಸ್ತಿತ್ವವನ್ನು, ತನ್ನತನವನ್ನು ಕಳೆದುಕೊಳ್ಳುವುದು ಅಥವಾ ಸಾವನ್ನಪ್ಪುವುದು ನಿರ್ವಾಣವಲ್ಲ. ಜೀವಿಯು ಜೀವಿಸಿದ್ದಾಗಲೇ ಆಸೆ, ವ್ಯಾಮೋಹದಿಂದ ದೂರವಾಗಿ, ದು:ಖದಿಂದ ಮುಕ್ತವಾಗಿ ಜೀವಿಸುವುದೇ ನಿರ್ವಾಣ ಪದವಿ.

ನಿರ್ವಾಣ ಸಾಧನೆಗೆ ಬುದ್ಧನು 'ಮಧ್ಯಮ ಮಾರ್ಗವನ್ನು' ಬೋಧನೆ ಮಾಡಿದನು. ಇದಕ್ಕಾಗಿ ತೀವ್ರ ತಪಸ್ಸುಗಳಾಗಲೀ, ದೇಹ ದಂಡನೆಯಾಗಲೀ, ಸಂಸ್ಕಾರವಾಗಲೀ ಬೇಕಿಲ್ಲ. ವ್ಯಕ್ತಿಯ ಸರಳ ಮಾರ್ಗ, ಸುಲಭ, ಆದರ್ಶ ಜೀವನಕ್ಕೆ ಮತ್ತು ನೈತಿಕ ನಿಯಮಗಳಿದ್ದರೆ ಸಾಕೆಂದನು. ಜೈನ ಧರ್ಮಿಯರಂತೆ ಅಹಿಂಸಾ ತತ್ವಕ್ಕೆ ಒತ್ತು ಕೊಟ್ಟನು. ಸಕಲ ಜೀವಿಗಳ ಬಗೆಗೆ ಅನುಕಂಪ ತೋರಿಸಬೇಕೆಂಬುದೇ ಇವನ ಉದ್ದೇಶವಾಗಿತ್ತು.

ಮಾನವನ ಎಲ್ಲಾ ಪುನರ್ಜನ್ಮ ಕಷ್ಟಗಳಿಗೆ ಅವನ ಕರ್ಮಗಳೇ ಕಾರಣ ಎಂದು ನಂಬಿದ್ದನು. ಮಾನವನ ಉದ್ಧಾರ ಅವನ ಕೈಯಲ್ಲಿದೆಯೇ ಹೊರತು ಬೇರೆಯವರಲ್ಲಿಲ್ಲ ಎಂಬುದೇ 'ನಿರ್ವಾಣ'ದ ಉದ್ದೇಶವಾಗಿತ್ತು.

## ಬೌದ್ಧಧರ್ಮದ ಪಂಥಗಳು – ಹೀನಯಾನ ಮತ್ತು ಮಹಾಯಾನ:

ಬುದ್ಧನ ಮರಣದ ತರುವಾಯ ಒಂದು ಶತಮಾನದ ಅವಧಿಯಲ್ಲಿ ಬೌದ್ಧ ಧರ್ಮದಲ್ಲಿ ಹಲವಾರು ಪಂಥಗಳು ಹುಟ್ಟಿಕೊಂಡವು. 4ನೇ ಬೌದ್ಧ ಸಮ್ಮೇಳನದಲ್ಲಿ (ಕ್ರಿ.ಶ.102) ಬೌದ್ಧ ಧರ್ಮವು ಹೀನಾಯಾನ ಮತ್ತು ಮಹಾಯಾನ ಎಂಬ 2 ಪಂಗಡಗಳಾಗಿ ವಿಭಜನೆಯಾಯಿತು.

**ಹೀನಾಯಾನ:**

ಬುದ್ಧನನ್ನು ದೇವರು ಎಂದು ಭಾವಿಸದೇ ಕೇವಲ ಅವನ ಆದರ್ಶ ತತ್ವಗಳನ್ನು ಚಾಚೂ ತಪ್ಪದೇ ಪಾಲಿಸುವವರು.

**ಮಹಾಯಾನ:**

ಬುದ್ಧನನ್ನು ದೈವತ್ವಕ್ಕೆ ಏರಿಸಿ ಅವನನ್ನು ಪೂಜಿಸುವವರು.

**ಹೀನಾಯಾನ ಮತ್ತು ಮಹಾಯಾನಕ್ಕಿರುವ ವ್ಯತ್ಯಾಸಗಳೆಂದರೆ:**

**ಹೀನಾಯಾನ:**

1) ಇದು ವ್ಯಕ್ತಿಯನ್ನು ಅರ್ಹಂ ತತ್ವಕ್ಕೆ ಅಥವಾ ಬುದ್ಧನಿಗಿಂತ ಕೆಳಗಿನ ಸ್ಥಾನಕ್ಕೆ ಏರಿಸಲು ಪ್ರಯತ್ನಿಸುತ್ತದೆ. ಸ್ಥಾವಿರಾದಿನ್ – ಪ್ರಾಚೀನ ಶಾಲೆ.

2) ಇದು ಸನ್ಯಾಸತ್ವಕ್ಕೆ ಪ್ರಾಧಾನ್ಯತೆ ನೀಡಿ ತನ್ನ ವೈಯಕ್ತಿಕ ಉದ್ಧಾರಕ್ಕಾಗಿ ಶ್ರಮಿಸಬೇಕೆಂದು ತಿಳಿಸುತ್ತದೆ.

3) ಬುದ್ಧನ ಪುನರ್ಜನ್ಮ ಸ್ವೀಕರಿಸಿಲ್ಲ.

4) ಬುದ್ಧ ಪೂಜೆ ನಿಷೇಧ. ಬುದ್ಧನನ್ನು ಕೇವಲ ಶ್ರೇಷ್ಠ ಮಾನವನೆಂದು ಪರಿಗಣನೆ (ಪಾದ ಮತ್ತು ಪದ್ಮಗಳಿಗೆ ಗೌರವ.)

5) ಗ್ರಂಥಗಳು ಪಾಳಿ ಭಾಷೆಯಲ್ಲಿದೆ.

6) ಸಾಂಪ್ರದಾಯಿಕ.

7) ಕರ್ಮ ಮಾರ್ಗ.

**ಮಹಾಯಾನ:**

1) ಇದು ವ್ಯಕ್ತಿಯನ್ನು ಬುದ್ಧತ್ವಕ್ಕೆ ಏರಿಸುವ ಗುರಿ ಹೊಂದಿರುತ್ತದೆ. ಮಹಾಸಾಗಿಕಾಸ್ – ಪ್ರಾಚೀನ ಶಾಲೆ.

2) ಇದು ವ್ಯಕ್ತಿ ತಾನು ನಿರ್ಮಾಣವನ್ನು ಸಾಧಿಸುವುದಕ್ಕಿಂತ ಮಿಗಿಲಾಗಿ ಬೇರೆಯವರು ನಿರ್ವಾಣ ಸಾಧಿಸಲು ನೆರವಾಗಬೇಕು ಎನ್ನುತ್ತದೆ.

3) ಬುದ್ಧನ ಪುನರ್ಜನ್ಮ ಸ್ವೀಕಾರ.

4) ಬುದ್ಧನನ್ನು ಅಮರತ್ವಕ್ಕೆ ಮತ್ತು ದೈವತ್ವಕ್ಕೆ ಏರಿಸಿತು. ಬುದ್ಧ ಮತ್ತು ಬೋಧಿಸತ್ವ ಪೂಜೆ ಜಾರಿ.

5) ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿದೆ.

6) ಸುಧಾರಿತ.

7) ಭಕ್ತಿ ಮಾರ್ಗ.

**ಬೌದ್ಧ ಧರ್ಮದ ಕೊಡುಗೆಗಳೆಂದರೆ:**

1) ಇದು ಭಾರತಕ್ಕೆ ಅತ್ಯಂತ ಸರಳವಾದ, ಜನಸಾಮಾನ್ಯರಿಗೆ ಅರ್ಥವಾಗುವಂತಹ, ಅರ್ಥವಿಲ್ಲದ, ವ್ಯರ್ಥ ಸಂಸ್ಕಾರಗಳಿಂದ ಮುಕ್ತವಾದ ಜನಪ್ರಿಯ ಧರ್ಮವನ್ನು ಕೊಡುಗೆಯಾಗಿ ನೀಡಿತು.

2) ಭಾರತೀಯ ಜನರ ಜೀವನಕ್ಕೆ ಆದರ್ಶ ಮತ್ತು ನೈತಿಕ ನಿಯಮ ನೀಡಿತು.

3) ಇವರಿಂದ ಪ್ರತಿಪಾದಿಸಲ್ಪಟ್ಟ ಅಹಿಂಸಾ ಧರ್ಮವು ವೈದಿಕ ಧರ್ಮಿಯರಿಂದ ಸ್ವೀಕೃತವಾಯಿತು.

4) ಸನ್ಯಾಸಿ ಮಠದ ವ್ಯವಸ್ಥೆ ಜಾರಿಯಾಯಿತು.

5) ವಿಗ್ರಹಾರಾಧನೆ ಬೌದ್ಧ ಧರ್ಮದಿಂದ ಪ್ರಾರಂಭವಾಯಿತು.

## ಕ್ರೈಸ್ತ ಧರ್ಮ:

ಪ್ರಪಂಚದಲ್ಲಿ ಕ್ರೈಸ್ತ ಧರ್ಮವು ಒಂದು ಪ್ರಮುಖವಾದಂತಹ ಧರ್ಮವಾಗಿದ್ದು, ವಿಶ್ವದ ಜನಸಂಖ್ಯೆಯಲ್ಲಿ ಶೇ.33ರಷ್ಟು ಅನುಯಾಯಿಗಳನ್ನು ಹೊಂದಿದೆ. ಆದ್ದರಿಂದ ಇದನ್ನು ಪ್ರಪಂಚದ ಧರ್ಮವೆಂದು ಕರೆಯಲಾಗಿದೆ. ಇದರ ಸ್ಥಾಪಕ 'ಯೇಸುಕ್ರಸ್ತ'. ಧರ್ಮ ಚಿಹ್ನೆ ಶಿಲುಬೆ.

ಯಹೂದಿಗಳ ಹಳೆ ಒಡಂಬಡಿಕೆ ಅಥವಾ ಹೀಬ್ರೂ ಬೈಬಲ್ ಅನ್ನು ಕ್ರೈಸ್ತ ಧರ್ಮ ಒಪ್ಪಿಕೊಂಡಿದೆ. 'ಜರುಸಲೇಂ' ಇವರ ಧಾರ್ಮಿಕ ಕೇಂದ್ರ. ಯಹೂದಿಗಳ ಪ್ರವಾದಿ 'ಮೋಸಸ್' ದೇವರಿಂದ ಪಡೆದುಕೊಂಡಂತಹ 10 ದೈವಾಜ್ಞೆಗಳಿವೆ. ಇವನ್ನು ನಂತರ ಕ್ರೈಸ್ತ ಧರ್ಮದಲ್ಲಿ ಸೇರಿಸಲಾಯಿತು. ಅವುಗಳೆಂದರೆ,

(ಪ್ರೀತಿ, ಸೇವೆ, ತ್ಯಾಗ, ಸಮಾನತೆ, ನ್ಯಾಯ, ಕರುಣೆ, ಕ್ಷಮಾಗುಣ, ನಿಷ್ಠೆ, ಮಾನವೀಯತೆ ಮತ್ತು ಭ್ರಾತೃತ್ವ)

## ಯೇಸು ಕ್ರಿಸ್ತ:

ಕ್ರಿ.ಪೂ.4 ಡಿಸೆಂಬರ್ 25ರಂದು ಬೆತ್ಲಹೆಮ್‌ನಲ್ಲಿ ಇವರು ಜನಿಸಿದರು. ಇವರು ಜನಿಸಿದಾಗ ಮಿನುಗಿದ ನಕ್ಷತ್ರವೇ ಪೂರ್ವ ನಕ್ಷತ್ರವಾಗಿದೆ. ಇವನ ಗುರು 'ಜಾನ್ ಬ್ಯಾಪ್ಟಿಸ್ಟ್'. ಇವರು ತಮ್ಮ ಸರಳ ಬೋಧನೆಗಳಿಂದ ಜನರೆಡೆಗೆ ಆಕರ್ಷಿತರಾದರು. ತನ್ನ 12 ಜನ ಶಿಷ್ಯರೊಡನೆ ತನ್ನ ಸಂದೇಶಗಳನ್ನು ದೃಷ್ಟಾಂತ ರೂಪದಲ್ಲಿ ವಿವರಿಸಿದರು. ಇವರ ಕೆಲವು ಬೋಧನೆಗಳು ಸಾಂಪ್ರದಾಯಿ ಯಹೂದಿಗಳ ಕಾನೂನನ್ನು ಪ್ರಶ್ನೆ ಮಾಡಿದವು. ತಮ್ಮ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳಿಂದ 'ಜೀಸಸ್' ಕ್ರಿಸ್ತನಾದನು. ಕ್ರಿಸ್ತ ಎಂದರೆ ಉದ್ಧಾರಕ.

ಪ್ರೀತಿ, ಮಾನವೀಯತೆ ದೇವರ ಇಚ್ಛೆಗೆ ಶರಣಾಗುವವರಿಗೆ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂದು ಹೇಳಿದನು. ಇವೆಲ್ಲವೂ ಯಹೂದಿಗಳ ಧರ್ಮ ಗುರುಗಳಿಗೆ ಹಿಡಿಸದೇ ಈತನು ಸುಳ್ಳು ಪ್ರವಾದಿಯೆಂದು ಖಂಡನೆ ಮಾಡಿದರು. ಇವನನ್ನು ಧರ್ಮ ನಿಂಧಕನೆಂದು ಆರೋಪಿಸಿ ಮರಣ ದಂಡನೆ ವಿಧಿಸಲಾಯಿತು.

'ಮೌಂಟ್ ಕ್ಯಾಲ್ವರಿ' ಎಂಬಲ್ಲಿ ಇವರನ್ನು ಶಿಲುಬೆಗೆ ಏರಿಸಲಾಯಿತು. (ಕ್ರಿ.ಶ.30 ಏಪ್ರಿಲ್ 3) ಶುಕ್ರವಾರ ಇದನ್ನು ಪ್ರತೀ ವರ್ಷ ಗುಡ್ ಫ್ರಾಯ್ಡೆ ಎಂದು ಆಚರಿಸಲಾಗುತ್ತಿದೆ. ಮರಣದ 3 ದಿನಗಳ ನಂತರ (ಭಾನುವಾರ) ಲಯೇಸು ಜೀವಂತವಾಗಿ ಕಾಣಿಸಿಕೊಂಡರೆಂದು, ಈ ದಿನವನ್ನು ನಾವು 'ಈಸ್ಟರ್ ಭಾನುವಾರ' ಎದು ಆಚರಣೆ ಮಾಡುತ್ತೇವೆ.

## ಜೀಸಸ್ / ಯೇಸುಕ್ರಸ್ತನ ಬೋಧನೆಗಳು:

ಯೇಸುಕ್ರಿಸ್ತನ ಬೋಧನೆಗಳು ಕ್ರಿಸ್ತ ಧರ್ಮದ ಪವಿತ್ರ ಗ್ರಂಥವಾದ ಬೈಬಲ್‌ನಲ್ಲಿವೆ. ಅದರಲ್ಲಿ 2 ಭಾಗಗಳಿದ್ದು,

1) ಹಳೆಯ ಒಡಂಬಡಿಕೆ (ಯಹೂದಿಗಳ ಪವಿತ್ರ ಗ್ರಂಥ)

2) ಹೊಸ ಒಡಂಬಡಿಕೆ

ಹೊಸ ಒಡಂಬಡಿಕೆಯಲ್ಲಿ ಯೇಸುವಿನ 4 ಜನ ಶಿಷ್ಯರು ಸಂಗ್ರಹಿಸಿದಂತಹ ದೈವ ವಾಣಿಗಳಿವೆ. ಈ 4 ಜನ ಶಿಷ್ಯಂದಿರೆಂದರೆ ಸಂತ ಮಾರ್ಕ್, ಲ್ಯೂಕ್, ಮ್ಯಾಥ್ಯೂ, ಜಾನ್.

**ಇವರ ದೈವ ವಾಣಿಗಳು:**

1) ಯೇಸುವು ಏಕದೇಶದ ಅಸ್ತಿತ್ವನ್ನು ಬೋಧಿಸಿದನು. ನಾವೆಲ್ಲರೂ ಆತನ ಮಕ್ಕಳು. ದೇವರು ಸರ್ವವ್ಯಾಪಿ ದಯಾಮಯಿ.

2) ಯೇಸುವು ದೇವರ ಪಿತೃತ್ವ ಮತ್ತು ಮಾನವರ ಭ್ರಾತೃತ್ವ ಸಾರಿದನು.

3) ಕ್ಷಮಾಗುಣದಲ್ಲಿ ಯೇಸುವು ನಂಬಿಕೆಯನ್ನಿಟ್ಟಿದ್ದನು. ನಿನ್ನ ನೆರೆಹೊರೆಯವರನ್ನು, ಶತ್ರುಗಳನ್ನು, ನಿನ್ನನ್ನು ಹಿಂಸಿಸುವವರನ್ನು ಪ್ರೀತಿಸು, ದೇವರಲ್ಲಿ ಮೊರೆಯಿಡು ಎಂದನು.

4) ಇವರ ಪ್ರಕಾರ ದಯೆ, ಪರಿಶುದ್ಧ ಆತ್ಮ, ಪ್ರಾಮಾಣಿಕತೆ ಮತ್ತು ಕರ್ತವ್ಯದಲ್ಲಿ ಬದ್ಧತೆಗಳು ಸ್ವರ್ಗಕ್ಕೆ ದಾರಿ ಎಂದರು.

5) ಒಬ್ಬ ವ್ಯಕ್ತಿ ಪರಿಪೂರ್ಣನಾಗಲು ಪ್ರಾಪಂಚಿಕ ಶ್ರೀಮಂತಿಕೆಯನ್ನು ತ್ಯಜಿಸಬೇಕು ಎಂದರು.

6) ಜನಸೇವೆಯೇ ಭಗವಂತನ ಸೇವೆ.

7) ಯೇಸು ತನ್ನ ಪ್ರಸಿದ್ಧವಾದ ಉಪದೇಶ 'ಪರ್ವತ ಪ್ರವಚನ'ದಲ್ಲಿ ತನ್ನ ಅನುಯಾಯಿಗಳಿಗೆ ಈ ರೀತಿ ಹೇಳಿದ್ದಾನೆ.

1. ದರಿದ್ರರೇ ಭಾಗ್ಯಶಾಲಿಗಳು, ದೇವರ ರಾಜ್ಯವು ಅವರದೇ ಆಗಿರುತ್ತದೆ.
2. ದು:ಖಿಗಳೇ ಭಾಗ್ಯಶಾಲಿಗಳು, ಅವರು ಭಗವಂತನಿಂದ ಸಂತೈಸಲ್ಪಡುತ್ತಾರೆ.

8) ಪ್ರೀತಿ ಕರುಣೆಯ ಸಂದೇಶ ನೀಡಿದ ಯೇಸು 'ವ್ಯಭಿಚಾರ ಮಾಡದಿರುವುದು, ಕದಿಯದಿರುವುದು, ಹಿರಿಯರನ್ನು ಗೌರವಿಸುವುದು, ಪದ್ಧತಿಗೆ ಸರಳ ಮಾರ್ಗ ಎಂದನು.

9) ದೇವರ, ರಾಜ್ಯದಲ್ಲಿ ಬಡವ, ಶ್ರೀಮಂತ, ಉಚ್ಚ, ನೀಚನೆಂಬ ಯಾವುದೇ ತಾರತಮ್ಯವಿಲ್ಲ ಎಂದನು.

10) ಕ್ಷಮಾಪಣ ಗುಣವಿದ್ದವನು ಸದಾ ಭಗವಂತನಿಗೆ ಹತ್ತಿರ ಎಂದನು.

**ಕ್ರೈಸ್ತ ಧರ್ಮದ ಪಂಗಡಗಳು:**

ಕ್ರೈಸ್ತ ಧರ್ಮದ ಇತಿಹಾಸದಲ್ಲಿ ಕಾಲಾಂತರದಲ್ಲಿ ಒಂದು ಪ್ರಮುಖವಾದ ಬೆಳವಣಿಗೆ ಉಂಟಾಯಿತು. ಇದನ್ನು ಧರ್ಮ ಸುಧಾರಣಾ ಚಳುವಳಿ ಎಂದು ಕರೆಯುತ್ತಾರೆ. ಇದು ರೋಮನ್ ಕ್ಯಾಥೋಲಿಕ್ ಚರ್ಚ್‌ನಲ್ಲಿದ್ದ ಹಲವಾರು ದೋಷಗಳನ್ನು ನಿವಾರಿಸಲು ರೋಮಿನ್ ಚರ್ಚಿನ ಒಳಗೆ ನಡೆದಂತಹ ಧಾರ್ಮಿಕ ಚಳುವಳಿ. ಇದು ಜರ್ಮನ್‌ನಲ್ಲಿ ಮಾರ್ಟಿನ್‌ಲೂಥರನಿಂದ ಪ್ರಾರಂಭವಾಯಿತು. ಇಲ್ಲಿ ಕ್ರೈಸ್ತ ಧರ್ಮ 2 ಪಂಗಡಗಳಾಗಿ ಒಡೆಯಿತು. ಅವುಗಳೆಂದರೆ,

1) ರೋಮನ್ ಕ್ಯಾಥೋಲಿಕ್‌ರು (ಪೋಪ್‌ನಲ್ಲಿ ನಂಬಿಕೆ ಇಟ್ಟವರು).

2) ಪ್ರೊಟೆಸ್ಟೆಂಟರು.

## ಇಸ್ಲಾಂ ಧರ್ಮ:

ಇಸ್ಲಾಂ ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದು. ಈ ಧರ್ಮವು ಏಷ್ಯಾ ಖಂಡದ ನೈರುತ್ಯ ಭಾಗದಲ್ಲಿರುವ ಅರೇಬಿಯಾದಲ್ಲಿ ಉದಯಿಸಿತು. ಅರಬ್ಬರು ಈ ನೆಲದ ಮೂಲ ನಿವಾಸಿಗಳು. ಪ್ರಾರಂಭದಲ್ಲಿ 360ಕ್ಕೂ ಹೆಚ್ಚು ವಿಗ್ರಹಗಳನ್ನು ಪೂಜೆ ಮಾಡುತ್ತಿದ್ದ ಇವರು, ಪ್ರಾಣಿ ಬಲಿ ಮತ್ತು ಕುರುಡು ನಂಬಿಕೆಗಳನ್ನು ಹೊಂದಿದ್ದರು. ಇವೆಲ್ಲದರ ಮಧ್ಯೆ ಇವರನ್ನು ಒಂದುಗೂಡಿಸಿದ್ದೇ 'ಮೆಕ್ಕಾದ ಕಾಬಾ ಶಿಲೆ'.

ಅಬ್ರಾಂನು ಕ್ರಿ.ಶ.6ನೇ ಶತಮಾನದಲ್ಲಿ ದೇವದೂತನಾದ ಗೇಬ್ರಿಯಲ್‌ನಿಂದ ಪಡೆದುಕೊಂಡ ಶಿಲೆಯನ್ನು ಪೂಜಿಸಲು 'ಕಾಬಾ ದೇವಾಲಯ' ನಿರ್ಮಿಸಿದನು. ಇಂತಹ ಸಮಯದಲ್ಲಿ ಅರಬ್ಬರಿಗೆ ನಿರ್ದಿಷ್ಟ ಧಾರ್ಮಿಕ ಚೌಕಟ್ಟುಗಳಿರಲಿಲ್ಲ. ಈ ವೇಳೆ ಮಹಮ್ಮದ್ ಪೈಗಂಬರ್‌ನು 'ಇಸ್ಲಾಂ ಧರ್ಮವನ್ನು' ಸ್ಥಾಪಿಸಿದನು.

ಈ ಧರ್ಮದ ಚಿಹ್ನೆ ಅರ್ಧಚಂದ್ರ ಮತ್ತು ನಕ್ಷತ್ರ. ಇವರ ಧಾರ್ಮಿಕ ಕೇಂದ್ರ ಮಸೀದಿ. ಮತ್ತು ಪವಿತ್ರ ಗ್ರಂಥ ಖುರಾನ್. ಇದು ಜಗತ್ತಿನ 2ನೇ ಅತೀ ದೊಡ್ಡ ಧರ್ಮ.

## ದೇವರು ಮತ್ತು ಆಚರಣೆಗಳು:

ಪ್ರವಾದಿ ಮಹಮ್ಮದ್ ಪೈಗಂಬರನು ಸಾಮಾನ್ಯ ಮನುಷ್ಯನಂತೆ ಕ್ರಿ.ಶ.570ರಲ್ಲಿ ಮೆಕ್ಕಾದಲ್ಲಿ ಕನಿಸಿದನು. ಪ್ರತೀ ಕ್ಷಣ ಇವನು ಅರಬ್ಬರ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಮನೆ ಮಾಡಿದ್ದ ನ್ಯೂನತೆಗಳನ್ನು ಕುರಿತಾಗಿ ಚಿಂತಿಸುತ್ತಿದ್ದನು. 'ಹಿರಾ' ಎಂಬ ಬೆಟ್ಟದ ಗುಹೆಯಲ್ಲಿ ಧ್ಯಾನ ಮಾಡುತ್ತಾ ಸಮಾಧಿ ಸ್ಥಿತಿಯಲ್ಲಿದ್ದಾಗ ಭಗವಂತನ ವಾಣಿಗಳನ್ನು ಗೇಬ್ರೀಯಲ್ ಎಂಬ ದೇವದೂತ ಪೈಗಂಬರನಿಗೆ ಉಪದೇಶಿಸಿದನು. ನಂತರ ಇವರ ಶಿಷ್ಯರು ಇವನ್ನು ಖುರಾನ್‌ನಲ್ಲಿ ದಾಖಲಿಸಿದರು.

ಮಹಮ್ಮದನು ಭಗವಂತ ತನ್ನ ಸಂದೇಶಗಳನ್ನು ಜನರಿಗೆ ಸಾರಲು ತನ್ನನ್ನು ಆಯ್ಕೆ ಮಾಡಿಕೊಂಡಂತೆ ಭಾವಿಸಿದನು. 'ಅಲ್ಲಾ ಒಬ್ಬನೇ ದೇವರು, ಮಹಮ್ಮದ್ ಆತನ ಪ್ರವಾದಿ' ಎಂದು ಘೋಷಿಸಿದನು.

ಮೆಕ್ಕಾದ ಜನರು ಆಚರಿಸುತ್ತಿದ್ದ ಮೂರ್ತಿ ಪೂಜೆ, ಬಹು ದೇವತಾರಾಧನೆ, ಮೂಢನಂಬಿಕೆಗಳನ್ನು ಟೀಕಿಸಿದನು. ಈತ ಅಲ್ಲಾನಲ್ಲಿ ನಂಬಿಕೆ, ಸತ್ಯ ಮತ್ತು ಪರಿಶುದ್ಧ ಜೀವನವನ್ನು ಪ್ರತಿಪಾದಿಸಿದನು. ಅಲ್ಲಾನು ಶಿಷ್ಯ ರಕ್ಷಕ ದುಷ್ಟ ಶಿಕ್ಷಕ ಎಂದನು. ದೇವರ ಇಚ್ಛೆಗೆ ಶರಣಾಗುವವರೆಲ್ಲಾ ಮುಸ್ಲಿಂರು ಎಂದನು. ಅಲ್ಲಾ ದಯಾಮಯಿ, ಜ್ಞಾನಿ, ಸರ್ವಶಕ್ತಿ ಎಂದನು.

ಆದರೆ ಮೆಕ್ಕಾದಲ್ಲಿ 363 ದೇವಾಲಯಗಳ ಪೂಜೆ ನಡೆಯುತ್ತಿದ್ದು ಅವುಗಳ ಪೂಜೆಯಿಂದ ಬರುವ ಆದಾಯದ ಮೇಲೆ ಜನರು ಬದುಕುತ್ತಿದ್ದರು. ಆದ್ದರಿಂದ ಮಹಮದನಿಗೆ ವಿರೋಧಿಗಳಾದ ಅವರು ಇವನನ್ನು ದ್ವೇಷಿಸಲಾರಂಭಿಸಿದರು. ಮಹಮದ್ ಪೈಗಂಬರನನ್ನು ಕೊಲ್ಲಲು ಸಂಚು ಹೂಡಿದಾಗ ಪೈಗಂಬರ್ ಸುಮಾರು 200 ಅನುಯಾಯಿಗಳೊಡನೆ ಮೆಕ್ಕಾದಿಂದ ಮದೀನಕ್ಕೆ ಪ್ರಯಾಣ ಮಾಡಿದ. ಈ ರೀತಿ ಪ್ರಯಾಣ ಮಾಡಿದ ದಿನವಾದ ಕ್ರಿ.ಶ.622ನ್ನು 'ಹಿಜಿರಾ ಶಕೆ' ಎಂದು ಕರೆಯಲಾಗುತ್ತದೆ.

ಕ್ರಿ.ಶ. 632ರಲ್ಲಿ ಪೈಗಂಬರ್ ತೀರಿಕೊಂಡಾಗ ಖಲೀಫರು ಧರ್ಮಗುರುಗಳಾಗಿ ಮುನ್ನಡೆದರು.

ಹಿಜಿರಾ ಶಕೆ ಕ್ರಿ.ಶ.622ರಲ್ಲಿ 'ಉಮರ್ ಖಲೀಫ್'ನಿಂದ ಪ್ರಾರಂಭವಾಯಿತು. ಇವರ ಪ್ರಕಾರ 1 ವರ್ಷಕ್ಕೆ 354 ದಿನ. 12 ತಿಂಗಳು. ಸೌರಮಾನ ಪಂಚಾಂಗಕ್ಕಿಂತ 11 ದಿನ ಕಡಿಮೆ. ಇದರ ಪ್ರಕಾರ ಪ್ರತಿದಿನ ಸೂರ್ಯಾಸ್ತದೊಡನೆ ಮತ್ತು ತಿಂಗಳು ಚಂದ್ರ ಕಾಣಿಸುವಿಕೆಯಿಂದ ಪ್ರಾರಂಭವಾಗುತ್ತದೆ. ಹಾಗಾಗಿ ಇವರ ಪ್ರಮುಖ ಹಬ್ಬಗಳಾದ ರಂಜಾನ್, ಈದ್, ಬಕ್ರಿದ್, ಮೊಹರಂಗಳು ಸೂರ್ಯಾಸ್ತ ಮತ್ತು ಚಂದ್ರ ಕಾಣಿಸುವುದರಿಂದ ಲೆಕ್ಕ ಹಾಕಲ್ಪಡುತ್ತವೆ.

### ಇಸ್ಲಾಂ ಪ್ರಮುಖವಾದ ನೈತಿಕ ತತ್ವಗಳೆಂದರೆ:

1) ಜಗತ್ತಿನಲ್ಲಿ ಯಾರು ಪಾಪಿಗಳಲ್ಲ. ಒಳ್ಳೆಯದನ್ನು ಮಾಡಿದವರೆಗೆ ಅಲ್ಲಾಹ್ ಸ್ವರ್ಗದಲ್ಲಿ ಸ್ಥಳವನ್ನು ಕಾಯ್ದಿರಿಸುತ್ತಾನೆ. ಇಲ್ಲವಾದರೆ ನರಕದಲ್ಲಿ ಶಿಕ್ಷಿಸುತ್ತಾನೆ.

2) ಮದ್ಯಪಾನ, ಜೂಜಾಡುವುದು ಮತ್ತು ವ್ಯಭಿಚಾರವನ್ನು ವರ್ಜಿಸಬೇಕೆಂದು ಹಾಗೂ ಹಂದಿ ಮಾಂಸವನ್ನು ಸೇವಿಸಬಾರದೆಂದು ತಿಳಿಸಿದನು.

3) ಇಸ್ಲಾಂ ಧರ್ಮ ಸಮಾನತೆ ಮತ್ತು ವಿಶ್ವ ಭ್ರಾತೃತ್ವದಂತಹ ಪ್ರಜಾಪ್ರಭುತ್ವ ತತ್ವವನ್ನು ಒಳಗೊಂಡಿದೆ.

4) ಮಹಿಳೆಯರನ್ನು ಮತ್ತು ತಂದೆ ತಾಯಿಯರನ್ನು ಗೌರವಿಸುವುದು, ಸೇವಕರಲ್ಲಿ ಕರುಣೆ ಮತ್ತು ಪ್ರಾಣಿದಯೆಗಳನ್ನು ಕುರಾನ್ ಪ್ರತಿಪಾದಿಸಿದೆ.

5) ವಿವಾಹ ವಿಚ್ಛೇದನ, ಬಹುಪತ್ನಿತ್ವ ಮತ್ತು ವಿಧವಾ ವಿವಾಹಕ್ಕೆ ಕುರಾನ್ ಅವಕಾಶ ಕಲ್ಪಿಸಿದೆ.

**ಇಸ್ಲಾಂ ಪಂಚ ಸ್ತಂಭಾ ಕೃತಿಗಳು:**

ಇಸ್ಲಾಂ ನಂಬುವಂತಹ ಶ್ರದ್ಧಾವಂತ ಮುಸ್ಲಿಂನಿಗೆ ಐದು ಪ್ರಮುಖ ಕರ್ತವ್ಯಗಳಿವೆ.

1) ಕಲೀಮಾ

2) ನಮಾಜ್

3) ಜಕಾತ್

4) ರೋಜಾ

5) ಹಜ್

ಈ 5 ಆಚರಣೆಗಳನ್ನು ಪ್ರತಿಯೊಬ್ಬ ಮುಸ್ಲಿಂ ಆಚರಿಸಬೇಕು.

**1) ಕಲೀಮಾ:**

ಕಲೀಮಾ ಎಂದರೆ ನಂಬಿಕೆ. ಇದರ ಪ್ರಕಾರ 'ದೇವರು ಒಬ್ಬನೇ ಅವನೇ ಅಲ್ಲಾಹು'. ಈತನನ್ನು ಪ್ರತಿಯೊಬ್ಬರು ನಂಬಬೇಕು. ಮೊಹಮದ್ ಅಲ್ಲಾಹುವಿನ ಪ್ರತಿನಿಧಿ. ಅಲ್ಲಾ ಬಿಟ್ಟರೆ ಬೇರೆ ದೇವರಿಲ್ಲಾ ಎಂಬುದು ಕುರಾನಿನ ಪ್ರಮುಖ ಸಂದೇಶವಾಗಿದೆ.

**2) ನಮಾಜ್:**

ನಮಾಜ್ ಎಂದರೆ ಪ್ರಾರ್ಥನೆ. ದಿನಕ್ಕೆ 5 ಬಾರಿ ಪ್ರಾರ್ಥನೆ ಮಾಡಿ ತನ್ನನ್ನು ಪರಿಶುದ್ಧಗೊಳಿಸಿಕೊಳ್ಳಬೇಕು. ಸೂರ್ಯೋದಯಕ್ಕೆ ಮುಂಚೆ, ಮಧ್ಯಾಹ್ನ, ಸಂಜೆ ಸೂರ್ಯಾಸ್ತದ ವೇಳೆಗೆ ಮತ್ತು ಮಲಗುವ ಮುನ್ನ ಮೆಕ್ಕಾದ ಕಡೆಗೆ ಮುಖಮಾಡಿ ಪ್ರಾರ್ಥಿಸಬೇಕು ಮತ್ತು ಪ್ರತೀ ಶುಕ್ರವಾರ ಮಸೀದಿಗೆ ಹೋಗಿ ಪ್ರಾರ್ಥಿಸಬೇಕು.

**3) ಜಕಾತ್:**

ಜಕಾತ್ ಎಂದರೆ ಬಡವರಿಗೆ ದಾನ ಮಾಡುವುದು. ತಗನ್ನ ಗಳಿಕೆಯ ಶೇ.2.5ರನ್ನು ಧಾರ್ಮಿಕ ಉನ್ನತಿಗಾಗಿ ಮತ್ತು ಬಡವರಿಗೆ ಸಹಾಯ ನೀಡಬೇಕು. ಇದರ ಉದ್ದೇಶ ಬಡವ ಮತ್ತು ಶ್ರೀಮಂತರ ನಡುವೆ ಆರ್ಥಿಕ ಸಮಾನತೆ ತರುವುದಾಗಿದೆ. ದಾನ ನೀಡದೇ ಸತ್ತರೆ ಅದು ಋಣವಾಗಿ ಉಳಿಯುತ್ತದೆ. ಭಿಕ್ಷಾಟನೆ ನಿಷೇಧ.

**4) ರೋಜಾ:**

ರೋಜಾ ಎಂದರೆ ಉಪವಾಸ. ಪ್ರತಿಯೊಬ್ಬ ಮುಸ್ಲಿಂನು ತನ್ನ ಆತ್ಮಶುದ್ಧಿಗೋಸ್ಕರ ರಂಜಾನ್ ತಿಂಗಳಿನಲ್ಲಿ 29ರಿಂದ 30 ದಿನಗಳ ಕಾಲ ಪ್ರಾತ: ಕಾಲದಿಂದ ಸೂರ್ಯಾಸ್ತದವರೆಗೆ ಉಪವಾಸ ಆಚರಿಸಬೇಕು. ಅಲ್ಲಾ ರಂಜಾನ್ ಸಮಯದ 1 ರಾತ್ರಿ ಕುರಾನ್ ತಿಳಿದನೆಂಬ ನಂಬಿಕೆ ಇದೆ. ಉಪವಾಸದ ಅಲ್ಲಾ ರಂಜಾನ್ ಸಮಯದ 1 ರಾತ್ರಿ ಕುರಾನ್ ತಿಳಿಸಿದನೆಂಬ ನಂಬಿಕೆ ಇಟ್ಟುಕೊಂಡು, ಉಪವಾಸದ ಕೊನೆ ದಿನ 'ಈದ್–ಉಲ್–ಫಿತರ್' ಆಚರಣೆ ಹೊಸ ವಸ್ತ್ರ ಧರಿಸಿ ಅಭಿನಂದಿಸುತ್ತಾರೆ. 'ಉಪವಾಸ ಅಲ್ಲಾನ ಅರಮನೆಯ ಬಳಿಗೆ ಕೊಂಡೊಯ್ಯುತ್ತದೆ ಎಂಬುದು ನಂಬಿಕೆ.

**5) ಹಜ್:**

ಹಜ್ ಎಂದರೆ ಪವಿತ್ರ ಮೆಕ್ಕಾ ಯಾತ್ರೆ. ನಿಜವಾದ ಮುಸ್ಲಿಂನು ತನ್ನ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಪುಣ್ಯ ಸ್ಥಳ ಮೆಕ್ಕಾಗೆ ಯಾತ್ರೆ ಮಾಡಬೇಕು. ಅಂತವರಿಗೆ ಸ್ವರ್ಗದ ಬಾಗಿಲು ತೆರೆಯುತ್ತದೆಂಬ ನಂಬಿಕೆ ಇದೆ. ಇದು ಅಲ್ಲಾಗೆ ಶರಣಾಗತಿಯ ನವೀಕರಣಕ್ಕಾಗಿ ಕೈಗೊಳ್ಳುವ ಯಾತ್ರೆ. ಮೆಕ್ಕಾ ಯಾತ್ರೆಯು ಜೀವನದ ಪರಿಪೂರ್ಣತೆಯ ಸಂಕೇತ. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಬಾಗಿಲು ತೆರೆದಿರುತ್ತದೆ. ಹಜ್ ಯಾತ್ರೆ ಕೈಗೊಂಡ ಮುಸ್ಲಿಂನು ತನ್ನ ತಪ್ಪುಗಳಿಗೆ ಪಶ್ಚಾತ್ತಾಪ ಪಡಬೇಕು. 7 ಸಲ ಕಾಬಾ ಶಿಲೆ ಪ್ರದಕ್ಷಿಣೆ ಹಾಕಿ ನಮಸ್ಕರಿಸಬೇಕು.

ಹೀಗೆ ಪ್ರಮುಖವಾದ 5 ಆಧಾರ ಸ್ತಂಭಗಳನ್ನು ಖುರಾನ್ ತಿಳಿಸುತ್ತದೆ.

## ಸಿಖ್ಖ ಪಂಥ: ತತ್ವಗಳು ಆಚರಣೆಗಳು ಹಾಗೂ ವಿಕಾಸ:

ಗುರುನಾನಕರಿಂದ (ಕ್ರಿ.ಶ.1469–1538) ಪ್ರಾರಂಭವಾಗಿ ಗುರು ಗೋವಿಂದ ಸಿಂಗ್ (ಕ್ರಿ.ಶ.1666–1708)ನಲ್ಲಿ ಕೊನೆಗೊಂಡ ಗುರುಪರಂಪರೆಯಿಂದ ಸ್ಥಾಪಿತವಾದ ಮತವೇ ಸಿಖ್ಖ. ಸಿಖ್ಖರ ಪ್ರಥಮ ಗುರುಗಳಾದ ಗುರುನಾನಕರು ತಮ್ಮ ಚಿಂತನೆಗಳಿಗೆ ಮೂರ್ತರೂಪ ಕೊಡಲು ಅಂಗದ ಎಂಬಾತನನ್ನು ಮುಂದೆ ತಂದರು. ಅಂಗದನ ನಂತರ ಬಂದ 3 ಜನ ನಾನಕರ ಭಕ್ತರು ಮತಕ್ಕೆ ವಿಶಿಷ್ಟ ರೂಪವನ್ನು ನೀಡಿದರು. ಗುರುನಾನಕರು ರಚಿಸಿರುವ 'ಗುರುಬಾನಿ' ಎಂದು ಪ್ರಖ್ಯಾತವಾದ ಧಾರ್ಮಿಕ ಸಾಹಿತ್ಯ ರಚನೆಗಳಲ್ಲಿ ಸಿಖ್ಖ ದರ್ಶನ ಅಡಗಿದೆ. ಇತರ ಒಂಬತ್ತು ಗುರುಗಳು ತಮ್ಮ ಶಬ್ದ (ಸ್ತೋತ್ರ)ಗಳಲ್ಲಿ ಅದನ್ನು ಪ್ರತಿಪಾದಿಸಿದ್ದಾರೆ. ಐದನೆಯ ಗುರುವಾದ ಗುರು ಅರ್ಜುನ ಬಂಧುವೂ ಆತನ ಸಮಕಾಲೀನನೂ ಆದ ಭಾಯ್‌ಗುರುದಾಸ್ (ಕ್ರಿ.ಶ.1554–1606) ಎಂಬ ಪಂಡಿತೋತ್ತಮ ಹಾಗೂ ಸಿಖ್ ಪಂಥಾಗ್ರೇಸರ ಈ ಮತವನ್ನು ತನ್ನ ವ್ಯಾಖ್ಯೆಗಳಲ್ಲಿ ವಿಸ್ತರಿಸಿದ್ದಾರೆ.

1539–1606ರ ಅವಧಿಯಲ್ಲಿ ಪ್ರಕಟವಾದ ಗ್ರಂಥ ಸಾಹಿಬ್ ಎಂದ ಸಿಖ್ಖರ ಪವಿತ್ರ ಗ್ರಂಥ ಹಾಡುಗಳಿಂದ ತುಂಬಿದೆ. ಅದರ ಪ್ರತಿಯೊಂದು ಸಾಲೂ ಹಾಡಲು ಯೋಗ್ಯವಾಗಿದೆ. ಗುರುನಾನಕರೂ ಇತರ ಸಿಖ್ಖ ಗುರುಗಳು ಕವಿತೆಯನ್ನೋ, ಹಾಡನ್ನೋ, ತಮ್ಮ ಮನೋಭಾವವನ್ನು ಪ್ರಕಟಿಸುವ ಮಾಧ್ಯಮವನ್ನಾಗಿ ಆರಿಸಿಕೊಂಡಿರುವುದು ಗಮನಾರ್ಹವಾದ ಸಂಗತಿ. ಕವಿತೆ ಮತ್ತು ಹಾಡುಗಾರಿಕೆಗಳ ವಿಚಾರಕ್ಕೆ ಭಾವ ಸೌಂದರ್ಯ ಸಂಕ್ಷಿಪ್ತತೆ ಮತ್ತು ಶಕ್ತಿ ಇವಿಷ್ಟನ್ನೂ ಅಳವಡಿಸಿಕೊಡುತ್ತವೆ. ಅಲ್ಲದೇ ಅದನ್ನು ಓದುವವನು, ಹಾಡುವವನೂ ಅಥವಾ ಕಿವಿಗೊಟ್ಟು ಕೇಳುವವನೂ ಸಹ ಆನಂದಭರಿತನಾಗುತ್ತಾನೆ. ಆತನ ಮನಸ್ಸು ಪವಿತ್ರವಾಗುತ್ತದೆ. ಪದ್ಯದಲ್ಲಡಗಿರುವ ವಿಚಾರವೆಲ್ಲವೂ ಆತನ ಬುದ್ಧಿ ಸಂಪೂರ್ಣವಾಗಿ ಗ್ರಹಿಸಲಾಗದಿದ್ದರೂ ಆ ಸ್ತೋತ್ರದ ಪ್ರತಿಯೊಂದು ಸಾಲೂ ಅನೇಕಾರ್ಥಗಳನ್ನು ಒಳಗೊಂಡು ದಗ್ರಾಹ್ಯವಾಗಿದ್ದರೂ ಕೂಡ ಆತನ ಮನಸ್ಸಿನ ಮೇಲೆ ಅವುಗಳ ಪರಿಣಾಮ ಬಹು ಗಾಢವಾದುದು, ಸ್ಫೂರ್ತಿದಾಯಕವಾದುದು. ಆತನ ಆತ್ಮ ಭಕ್ತಿ ರಸದಲ್ಲೂ ಆನಂದದಲ್ಲೂ ಮುಳುಗಿ ಹೋಗುತ್ತದೆ.

ಸಿಖ್ ಗುರುಗಳ ಸ್ತೋತ್ರ ಸಾಹಿತ್ಯವಾದ ಗುರುಬಾನಿಯಲ್ಲಿರುವ ದಾರ್ಶನಿಕ ಹಾಗೂ ಧಾರ್ಮಿಕ ವಿಚಾರ ತರ್ಕಲಬ್ಧವಾದುದಲ್ಲ, ದೈವಿಕವಾದ ಅಂತ:ಸ್ಫೂರ್ತಿಯಿಂದ ಹುಟ್ಟಿದುದು. ಗುರುನಾನಕನೇ ಹೇಳಿದ್ದಾನೆ ಪ್ರಭುವಿನ ವಾಣಿ ನನಗೆ ಕೇಳಿ ಬಂದ ಹಾಗೆ ನಾನು ಹೇಳುತ್ತಿದ್ದೇನೆ ಎಂದು ಜೀವಾತ್ಮ ಆತ್ಮದೊಡನೆ ಶ್ರುತಿಗೂಡಿದಾಗ ಹುಟ್ಟುವ ಅಂತಜ್ಯೋ೯ತಿಯಿಂದ ಜನಿತವಾದವು. ಈ ಹಾಡುಗಳು ದೈವ ಪ್ರೇರಿತ ಹೃದಯದ ಉದ್ಗಾರಗಳು. ದಿವ್ಯ ದರ್ಶನ ಎಂಬ ಹೆಸರಿಗೆ ತಕ್ಕವು. ಗುರುನಾನಕನ ದರ್ಶನ ಎಂಬುದು ಆತನ ಧಾರ್ಮಿಕ ಭಾವನೆ ಮತ್ತು ನೈತಿಕ ಭಾವನೆಗಳಿಗಿಂತ ಭಿನ್ನವಾದುದಲ್ಲ. ಜ್ಞಾನ, ಸತ್ಯ, ಶ್ರೇಯಸ್ಸು ಮತ್ತು ದೈವ ಅವೆಲ್ಲ ಆತನ ಮನಸ್ಸಿನಲ್ಲಿ ಒಂದೇ ಆಗಿದ್ದವು. 'ಸತ್‌ನಾಂ' ಎಂದರೆ ಯಾವುದು ಅತ್ಯಂತ ಪವಿತ್ರವೋ ಅದರ ಹೆಸರಿನೊಡನೆಯೂ ಸದಾಚರದೊಡನೆಯೂ 'ಸತ್' ಅಂದರೆ ಸತ್ಯವು ಮಿಳಿತವಾಗಿದೆ. ಈ ರೀತಿಯಲ್ಲಿ ಜೀವನದ ಪರಮ ಪ್ರಕೃಷ್ಟ ಮೌಲ್ಯಗಳಾದ ಸತ್ಯ ಮತ್ತು ಶ್ರೇಯಸ್ಸು ಒಂದರಲ್ಲೇ ಸಂಗತವಾಗಿದೆ.

# ಘಟಕ – 2

# ಭಾರತೀಯ ಸಮಾಜಗಳ ಪರಿವರ್ತನೆಯತ್ತ ಪ್ರಮುಖವಾದ ವೈಚಾರಿಕ ಸಿದ್ಧಾಂತಗಳು

## (19ನೇ ಶತಮಾನದ ಪ್ರಾರಂಭದಿಂದಾದ ಸುಧಾರಣೆಗಳು)

**1) ಸಾಮಾಜಿಕ ಮತ್ತು ಧಾರ್ಮಿಕ ದೋಷಗಳ ನಿರ್ಮೂಲನೆ:**

ಆಧುನಿಕ ಭಾರತದ ಇತಿಹಾಸದಲ್ಲಿ 19ನೇ ಶತಮಾನವನ್ನು ಭಾರತೀಯ ಪುನರುಜ್ಜೀವನ ಕಾಲವೆಂದು ಕರೆಯಲಾಗಿದೆ. ಪಾಶ್ಚಿಮಾತ್ಯ ಉದಾರವಾದಿ ತತ್ವಗಳು ಶತಶತಮಾನಗಳ ಗಾಢ ನಿದ್ರೆಯಿಂದ ಭಾರತವನ್ನು ಎಚ್ಚರಗೊಳಿಸಿದವು. ಇಲ್ಲಿ ಸಮಾಜದ ದೋಷಗಳ ನಿರ್ಮೂಲನೆಗೆ ಹಲವಾರು ಮಹನೀಯರು ಹೋರಾಡಿ ಭಾರತದ ಪುನರುಜ್ಜೀವನಕ್ಕೆ ಕಾರಣರಾದರು. ಅಂತವರುಗಳೆಂದರೆ,

### 1. ರಾಜಾರಾಮ ಮೋಹನ್‌ರಾಯ್:

ಇವರನ್ನು ಭಾರತೀಯ ಪುನರುಜ್ಜೀವನದ ಉಷಾ: ತಾರೆ ಎನ್ನುತ್ತಾರೆ. ಜಗತ್ತಿನ ಅನೇಕ ಮಹಾಧರ್ಮಗಳ ಧರ್ಮಗ್ರಂಥಗಳನ್ನು ಅಭ್ಯಸಿಸಿ, 1828ರಲ್ಲಿ ಬ್ರಹ್ಮ ಸಮಾಜವನ್ನು ಸ್ಥಾಪಿಸಿದರು. ಇವರು ಏಕೇಶ್ವರ ತತ್ವ ಬೋಧಿಸಿ, ಹಲವು ದೇವರುಗಳ ಪೂಜೆ ಮತ್ತು ನಂಬಿಕೆಗಳನ್ನು ಖಂಡಿಸುತ್ತಾ ಸುಧಾರಣಾ ಚಳುವಳಿ ಆರಂಭಿಸಿದರು. ಇವರ ತತ್ವಗಳು ಹಿಂದೂ ಸಮಾಜವನ್ನು ಬೇರು ಸಹಿತ ಅಲುಗಾಡಿಸಿದವು. ಆಂಗ್ಲ ವಿದ್ಯಾಭ್ಯಾಸದ ಮೂಲಕವೇ ಭಾರತ ಪ್ರಗತಿ ಸಾಧಿಸಬೇಕು ಎಂದು ನಂಬಿದ್ದರು.

'ಸಂವಾದ ಕೌಮುದಿ' ಎಂಬ ಬಂಗಾಲ ನಿಯತಕಾಲಿಕೆ ಸ್ಥಾಪಿಸಿದರು. ಇವರ ಸಹಕಾರದಿಂದ 'ಬೆಂಟಿಕ್'ನು 1829ರಲ್ಲಿ ಸತಿ ಸಹಗಮನ ನಿಷೇಧಿಸಿದನು.

ಬ್ರಹ್ಮಸಮಾಜದ ತತ್ವಗಳೆಂದರೆ,

1) ಸತಿ ಸಹಗಮನ ನಿಷೇಧ

2) ಬಹುಪತ್ನಿತ್ವ ನಿಷೇಧ

3) ವಿಧವಾ ವಿವಾಹಕ್ಕೆ ಪ್ರೋತ್ಸಾಹ

ಇವರನ್ನು ಮೊಟ್ಟ ಮೊದಲ 'ಸರ್ವಧರ್ಮ ಸಮನ್ವಯಾಚಾರ್ಯ' ಎಂದಿದ್ದಾರೆ.

ಬ್ರಹ್ಮ ಸಮಾಜವು ಪ್ರಮುಖವಾಗಿ ದೇವರು ಒಬ್ಬನೇ. ಪ್ರತೀ ಧರ್ಮದಲ್ಲೂ ಸತ್ಯವಿದೆ. ಮೂರ್ತಿಪೂಜೆ ಮತ್ತು ಆಚರಣೆಗಳೆಲ್ಲಾ ಅರ್ಥಹೀನ, ಸಾಮಾಜಿಕ ಅನಿಷ್ಟಗಳು ಧರ್ಮದೊಂದಿಗೆ ಯಾವುದೇ ಸಂಬಂಧ ಹೊಂದಿಲ್ಲಾ ಎಂದು ಬೋಧಿಸಿತು.

### 2. ಪ್ರಾರ್ಥನಾ ಸಮಾಜ:

ಡಾ. ಆತ್ಮರಾಮ ಪಾಂಡುರಂಗ (1867ರಲ್ಲಿ)ರಿಂದ ಪ್ರಾರಂಭವಾಯಿತು. ಬ್ರಹ್ಮ ಸಮಾಜದಂತೆ ಏಕದೇವತಾರಾಧನೆ ಮತ್ತು ಸಾಮಾಜಿಕ ಸುಧಾರಣೆಗಳು ಇದರ ಗುರಿಯಾಗಿದ್ದವು. ಬ್ರಹ್ಮ ಸಮಾಜದಂತೆ ಇವರು ತಮ್ಮನ್ನು ಹಿಂದೂ ಧರ್ಮದ ಹೊರಗೆ ಹೊಸ ಧರ್ಮದ ಪಂಗಡದವರೆಂದು ಭಾವಿಸದೆ ಅದರೊಳಗಿನ ಪಂಥವಾಗಿ ಪರಿಗಣಿಸಿದರು.

ಅಂತರ್ಜಾತಿ ವಿವಾಹ, ಸಹಭೋಜನಾ, ವಿಧವಾ ವಿವಾಹ, ಸ್ತ್ರೀಯರ ವಿಮೋಚನೆ, ಅಸ್ಪೃಶ್ಯರ ಉದ್ಧಾರ ಮುಂತಾದ ಸಾಮಾಜಿಕ ಸುಧಾರಣೆಗಳತ್ತ ಗಮನ ಹರಿಸಿದ್ದರು. ನ್ಯಾಯಮೂರ್ತಿ ಮಹಾದೇವ ರಾನಡೆ ಇದರ ಯಶಸ್ವಿಗೆ ಕಾರಣರಾಗಿದ್ದರು. ಇವರು ವಿಧವಾ ವಿವಾಹ ಸಂಘ ಸ್ಥಾಪಿಸಿದ್ದರು.

ಬ್ರಹ್ಮ ಸಮಾಜ ಮತ್ತು ಪ್ರಾರ್ಥನಾ ಸಮಾಜಗಳು ಪಾಶ್ಚಿಮಾತ್ಯ ವಿಚಾರಧಾರೆಗೆ ಭಾರತದ ಉತ್ತರಗಳಾಗಿದ್ದವು.

### 3. ಆರ್ಯ ಸಮಾಜ:

ಇದರ ಸ್ಥಾಪಕರಾದ ದಯಾನಂದ ಸರಸ್ವತಿಯವರು ಗುಜರಾತಿನಲ್ಲಿ ಜನಿಸಿ, ಉನ್ನತ ವ್ಯಾಸಂಗವನ್ನು ಕಾಶಿಯಲ್ಲಿ ಮಾಡಿ, ಸಂಸ್ಕೃತ ಸಾಹಿತ್ಯದಲ್ಲಿ ಪ್ರಚಂಡ ಪಾಂಡಿತ್ಯವನ್ನು ಹೊಂದಿದ್ದ ಇವರು ಜನತೆಗೆ ವೇದಗಳ ಅಧ್ಯಯನಕ್ಕೆ ಕರೆ ಇತ್ತರು. ಹಿಂದೂ ಸಮಾಜವನ್ನು ಸುಧಾರಿಸಲು 'ವೇದಗಳಿಗೆ ಹಿಂತಿರುಗಿ' ಎಂದು ಕರೆಯಿಟ್ಟರು.

ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ತೊಳೆದರು. ವಿಗ್ರಹಾರಾಧನೆ ಮತ್ತು ಬಹುದೇವತಾರಾಧನೆ ಖಂಡಿಸಿದರು. 'ಸತ್ಯಾರ್ಥ ಪ್ರಕಾಶ'ವೆಂಬ ಗ್ರಂಥ ರಚಿಸಿದರು. ಜೊತೆಗೆ ಹಿಂದೂಗಳಲ್ಲದವರನ್ನು ಹಿಂದೂಗಳಾಗಿ ಪರಿವರ್ತಿಸಲು 'ಶುದ್ಧಿ' ಚಳುವಳಿ ಪ್ರಾರಂಭಿಸಿದರು.

### 4. ಥಿಯೊಸೊಫಿಕಲ್ ಸೊಸೈಟಿ: ಬ್ರಹ್ಮವಿದ್ಯಾ ಸಮಾಜ:

ಹೆಚ್.ಸಿ. ಬ್ಲವಟ್‌ಸ್ಕಿ ಮತ್ತು ಕರ್ನಲ್ ಹೆಚ್.ಸಿ. ಆಲ್ಕಾಟ್‌ರವರಿಂದ ಈ ಸೊಸೈಟಿ ಸ್ಥಾಪಿತವಾಯಿತು. ಇವರಿಬ್ಬರೂ 1879ರಲ್ಲಿ ಭಾರತಕ್ಕೆ ಬಂದು 1886ರಲ್ಲಿ ಮದ್ರಾಸ್‌ನ ಅಡ್ಯಾರ್‌ನಲ್ಲಿ ತಮ್ಮ ಸಂಸ್ಥೆಯ ಕೇಂದ್ರ ಕಾರ್ಯಾಲಯ ಏರ್ಪಡಿಸಿದರು. ನಂತರ ಇದು ಅನಿಬೆಸೆಂಟ್‌ರವರಿಂದ ಇದು ಹೊಸ ಚೈತನ್ಯದಿಂದ ಮುನ್ನುಗಿತು.

ಇದರ ಪ್ರಮುಖ ಉದ್ದೇಶ ಪುರಾತನ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದು. ಮತ್ತು ಹಳೆಯ ಸಂಸ್ಕಾರಗಳಿಗೆ ಹೊಸದಾದ ಅರ್ಥ ನೀಡುವುದು. ಇದರ ಮೂಲಕವಾಗಿ ಆತ್ಮಗೌರವ ಮೂಡಿ, ಪರಂಪರಾ ವಿಷಯವಾಗಿ ಹೆಮ್ಮೆ, ಭವಿಷ್ಯದಲ್ಲಿ ನಂಬಿಕೆ, ದೇಶಭಕ್ತಿಯ ಅಲೆ ತಾನಾಗಿಯೇ ಬರುತ್ತದೆಂದಿದ್ದರು.

ಇವರು ಕಾಶಿಯಲ್ಲಿ ಕೇಂದ್ರೀಯ ಹಿಂದೂ ಶಾಲೆ ನಿರ್ಮಿಸಿದ್ದರು.

### 5. ರಾಮಕೃಷ್ಣಾಶ್ರಮ:

ಸ್ವಾಮಿ ವಿವೇಕಾನಂದರು ತಮ್ಮ ಪರಮಗುರುಗಳಾದ ರಾಮಕೃಷ್ಣ ಪರಮಹಂಸರ ಜ್ಞಾಪಕಾರ್ಥವಾಗಿ 1896ರಲ್ಲಿ ಈ ಸಂಸ್ಥೆ ಸ್ಥಾಪಿಸಿದರು. ರಾಮಕೃಷ್ಣರಿಗೆ ಸರ್ವಧರ್ಮಗಳ ಮೂಲಭೂತ ಐಕ್ಯತೆಯಲ್ಲಿ ಅಚಲವಾದ ನಂಬಿಕೆಯಿತ್ತು. ರಾಮಕೃಷ್ಣರ ಶಿಷ್ಯರಲ್ಲಿ ಸ್ವಾಮಿ ವಿವೇಕಾನಂದರು ಗಣ್ಯರು. ರಾಮಕೃಷ್ಣರ ತತ್ವಗಳನ್ನು ಪ್ರಬಲವಾಗಿ ಪ್ರತಿಪಾದಿಸಿ ಇವುಗಳನ್ನು ದೇಶ ವಿದೇಶಗಳಲ್ಲಿ ಜನಪ್ರಿಯಗೊಳಿಸಿದರು. 1893ರ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ರಾಮಕೃಷ್ಣಾಶ್ರಮವು ಭಾರತದ ಪುರಾತನ ಸಾಂಸ್ಕೃತಿಕ ಪರಂಪರೆಯಿಂದ ಸ್ಫೂರ್ತಿ ಪಡೆದಿತ್ತು. ಪರಿಶುದ್ಧವಾದ ವೇದಾಂತ ತತ್ವಗಳೇ ಇದಕ್ಕೆ ಆಸ್ತಿಭಾರಗಳು. ಮಾನವನಲ್ಲಿ ಹುದುಗಿರುವ ಆಧ್ಯಾತ್ಮಿಕ ಭಾವನೆಗಳನ್ನು ಉಳಿಸಿ ಬೆಳೆಸುವುದೇ ಇದರ ಗುರಿಯಾಗಿತ್ತು. ಎಲ್ಲಾ ಧರ್ಮಗಳ ಮೂಲಭೂತ ಗುರಿ ಒಂದೇ ಎಂಬುದು ಇವರ ವಾದ.

ಸಮಾಜ ಸೇವೆಗೆ ಮಹತ್ವ ನೀಡಿತು. 'ಜನಸೇವೆಯೇ ಜನಾರ್ಧನ ಸೇವೆ ಎನ್ನುತ್ತಾ ಹಿಂದೂ ಸಂಸ್ಕೃತಿಯ ಪುನರುತ್ಥಾನವಾಗುವಲ್ಲಿ ಪ್ರಮುಖ ಪಾತ್ರದಾರಿ ಆಯಿತು.

### ಅಲಿಘರ್ ಚಳುವಳಿ:

ಸರ್ ಸೈಯದ್ ಅಹಮದ್ ಖಾನ್‌ರವರು ಈ ಸುಧಾರಣಾ ಚಳುವಳಿಯ ನಾಯಕರು. ಮುಸ್ಲಿಂರು ತಮ್ಮ ಧಾರ್ಮಿಕ, ಶೈಕ್ಷಣಿಕ, ರಾಜಕೀಯ ನೀತಿ ನಿಯಮಗಳನ್ನು ಬದಲಾಯಿಸಿಕೊಂಡು ಪೂರ್ವ ಮತ್ತು ಪಶ್ಚಿಮಗಳ ಸಂಗಮಕ್ಕೆ ದಾರಿ ಮಾಡಿಕೊಡಬೇಕೆಂದು ಇವರು ಕರೆಯಿತ್ತರು. ಇದಕ್ಕಾಗಿ 1875ರಲ್ಲಿ ಅಲಿಘಡದಲ್ಲಿ 'ಆಂಗ್ಲೋ-ಮುಸ್ಲಿಂ' ಶಾಲೆ ತೆರೆದರು. ಇದೇ ಅಲಿಘಡ ಮುಸ್ಲಿಂ ವಿಶ್ವ ವಿದ್ಯಾಲಯವಾಯಿತು. ಇವರು 'ಘೋಷಾ' ಪದ್ದತಿ ನಿರ್ಮೂಲನಕ್ಕೆ ಮತ್ತು ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹವಿತ್ತರು.

**ಅಹಮದೀಯ ಚಳುವಳಿ:**

ಮಿರ್ಜಾಗುಲಾಮ ಅಹಮದ್ ಇವರಿಂದ ಸ್ಥಾಪಿತವಾಯಿತು. ಇವರು 'ಘೋಷಾ' ಪದ್ಧತಿಯ ನಿಷೇಧವನ್ನು ವಿರೋಧಿಸಿದರು. ಬಹುಪತ್ನಿತ್ವ ಮತ್ತು ವಿವಾಹ ವಿಚ್ಛೇದನಕ್ಕೆ ಸಂಬಂಧಪಟ್ಟ ಇಸ್ಲಾಮಿಕ್ ಕಾನೂನುಗಳನ್ನು ಪ್ರತಿಪಾದಿಸಿದರು.

ಹೀಗೆ ಹಲವಾರು ಸುಧಾರಕರು ಸಾಮಾಜಿಕವಾದ ಮತ್ತು ಧಾರ್ಮಿಕವಾದ ದೋಷಗಳ ನಿರ್ಮೂಲನೆಗೆ ಹೋರಾಡಿದರು.

**ಸರ್ವರಿಗೂ ವೇದಗಳು – ಜಾತ್ಯತೀತ ಸಮಾಜ:**

ಸಂಸ್ಕೃತ ಸಾಹಿತ್ಯದಲ್ಲಿ ಪ್ರಚಂಡ ಪಾಂಡಿತ್ಯವನ್ನು ಹೊಂದಿದ್ದ ದಯಾನಂದ ಸರಸ್ವತಿಯವರು ಜನತೆಗೆ ವೇದಗಳನ್ನು ಅಧ್ಯಯನ ಮಾಡುವಂತೆ ಕರೆಯಿತ್ತರು. 'ವೇದಗಳಿಗೆ ಹಿಂತಿರುಗಿ' ಎಂಬುದು ಅವರು ಕೊಟ್ಟ ಕರೆಯಾಗಿತ್ತು.

ಸರ್ವರಿಗೂ ವೇದಗಳು ತಲುಪಿ ಜಾತ್ಯತೀತವಾದ ಸಮಾಜ ನಿರ್ಮಾಣ ಇವರ ಹಂಬಲವಾಗಿತ್ತು.

ಇವರ ಪ್ರಕಾರ ವೇದಗಳ ಕಾಲದ ಸಮಾಜವು ಪರಿಶುದ್ಧ, ಪವಿತ್ರವು ಆಗಿತ್ತು. ಆದರೆ ಅದು ಕಾಲಾನುಗತದಲ್ಲಿ ಅವನತಿ ಹೊಂದಿತು.

ಹಿಂದೂಗಳಲ್ಲದವರನ್ನು ಹಿಂದೂಗಳಾಗಿ ಪರಿವರ್ತಿಸಲು 'ಶುದ್ಧಿ' ಚಳುವಳಿಯನ್ನಾರಂಭಿಸಿದರು. ಇದು ನಿಸ್ಸಂಶಯವಾಗಿ ಮತ್ತು ಧಾರ್ಮಿಕವಾಗಿ ಭಾರತೀಯರನ್ನು ಐಕ್ಯಗೊಳಿಸುವ ಘನ ಉದ್ದೇಶವನ್ನು ಹೊಂದಿತ್ತು.

ಆಧುನಿಕ ಕಾಲದ ಎಲ್ಲಾ ಸಿದ್ಧಾಂತ ಮತ್ತು ತತ್ವಗಳು ವೇದಗಳಲ್ಲಿ ಕಂಡುಬರುತ್ತವೆ. ವೇದಗಳು ಎಲ್ಲಾ ಸತ್ಯವನ್ನು ಹೊಂದಿವೆ. ಇವು ಸರ್ವಜ್ಞಾನದ ಮೂಲಾಧಾರಗಳು ಎಂಬುದು ಅಚಲ ನಂಬಿಕೆಯಾಗಿತ್ತು. ಇವರು ಹಿಂದೂ ಸಮಾಜದ ಚೈತನ್ಯದಾಯಕ ಶಕ್ತಿಯಾಗಿದ್ದರು.

ವೇದಗಳು ಸರ್ವರಿಗೂ ತಲುಪಬೇಕೆಂಬುದೇ ಇವರ ಆರ್ಯ ಸಮಾಜದ ಉದ್ದೇಶವಾಗಿತ್ತು.

**ಸೇವೆ:**

19ನೇ ಶತಮಾನದ ದ್ವಿತಿಯಾರ್ಧದಲ್ಲಿ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಹೊಸಯುಗದ ಪರಿವರ್ತನೆ ಕಂಡುಬಂದಿತು. ಸಮಾಜೋಧಾರ್ಮಿಕ ಚಳುವಳಿಯ ಈ ಕಾಲಘಟ್ಟದಲ್ಲಿ ಅಜ್ಞಾನ–ಮೂಢನಂಬಿಕೆಗಳನ್ನು ಹೋಗಲಾಡಿಸಲು ಅನೇಕ ಪ್ರಯತ್ನ ಆರಂಭವಾಗಿದ್ದವು. ಈ ಹಂತದಲ್ಲಿ ಹಲವು ಸಾಮಾಜಿಕ ಸೇವಾ ಕಾರ್ಯಗಳು ನಡೆದವು. ಅವುಗಳನ್ನು ಕ್ರಮವಾಗಿ ಈ ಕೆಳಗಿನಂತೆ ನೋಡಬಹುದು.

**1) ಧರ್ಮ ಸಭಾ:**

ಇದೊಂದು ಸಂಪ್ರದಾಯ ಸುಧಾರಣಾ ಸಂಸ್ಥೆಯಾಗಿದ್ದು, ರಾಧಾಕಾಂತ ದೇವ 1830ರಲ್ಲಿ ಪ್ರಾರಂಭಿಸಿದರು. ಸ್ತ್ರೀ ಶಿಕ್ಷಣ, ಪಾಶ್ಚಾತ್ಯ ಶಿಕ್ಷಣಗಳಿಗೆ ಈ ಸಭೆಯು ಪ್ರೋತ್ಸಾಹ ನೀಡಿತು.

**2) ಸೇವಾ ಸದನ:**

ಪಾರ್ಸಿ ಸಮಾಜ ಸುಧಾರಕ ಬೆಹರಾಮ್‌ಜಿಯವರು ಶಿಕ್ಷಣ, ಆರೋಗ್ಯ ಮತ್ತು ವೈದ್ಯಕೀಯ ಸೇವೆಯನ್ನು ನೀಡುವಲ್ಲಿ 1885ರಲ್ಲಿ ಈ ಸಂಸ್ಥೆಯನ್ನು ಪ್ರಾರಂಭಿಸಿದರು.

**3) ಭಾರತೀಯ ಸೇವಾ ಸಂಘ:**

ಗೋಪಾಲಕೃಷ್ಣ ಗೋಖಲೆಯವರು ಕೆಳವರ್ಗದ ಜನರನ್ನು ಮೇಲೆತ್ತುವ ಕಾರ್ಯಕ್ಕಾಗಿ 1915ರಲ್ಲಿ ಈ ಸಂಸ್ಥೆಯನ್ನು ಪ್ರಾರಂಭಿಸಿದರು.

**4) ಭಾರತೀಯ ಸಾಮಾಜಿಕ ಸಮ್ಮೇಳನ:**

ಎಂ.ಜಿ. ರಾನಡೆ ಮತ್ತು ರಘುನಾಥ 1887ರಲ್ಲಿ ಬಾಲ್ಯವಿವಾಹ ನಿಷೇಧ, ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿದರು.

**5) ದೇವ ಸಮಾಜ:**

ಶಿವನಾರಾಯಣ ಅಗ್ನಿಹೋತ್ರಿ 1887ರಲ್ಲಿ ದೇವಶಾಸ್ತ್ರ ಪುಸ್ತಕ ಬರೆದರು. ಮತ್ತು ದೇವ ಸಮಾಜವನ್ನು ಹುಟ್ಟುಹಾಕಿ ಆಧ್ಯಾತ್ಮಿಕತೆಯತ್ತ ಪ್ರಾಧಾನ್ಯತೆಯನ್ನು ನೀಡಿದರು.

**6) ಸತ್ಯಶೋಧಕ ಸಮಾಜ:**

ಜ್ಯೋತಿಬಾ ಫುಲೆಯವರು ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿದರು. ಸ್ತ್ರೀಯರ, ಕೆಳವರ್ಗದ ಉದ್ಧಾರಕ್ಕಾಗಿ ಶ್ರಮಿಸಿದರು. ಸಮಾಶಜದಲ್ಲಿಯ ಜಾತೀಯತೆಯನ್ನು ವಿರೋಧಿಸಿದರು.

**7) ಲೋಕಹಿತವಾದಿ:**

ಗೋಪಾಲ ಹರಿ ದೇಶಮುಖ 1880ರಲ್ಲಿ ನ್ಯಾಯಾಧೀಶರಾಗಿ ಕೆಲಸ ನಿರ್ವಹಿಸಿದರು. ಅವರು ಪಾಶ್ಚಿಮಾತ್ಯ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದರು. ಭಾರತ ಸ್ವಾವಲಂಬನೆಯಾಗಬೇಕು ಎಂಬುದನ್ನು ದೃಢವಾಗಿ ಬೆಂಬಲಿಸಿದರು. ಲೋಕಹಿತವಾದಿ ಸಂಘದ ಮೂಲಕ ಸಾಮಾಜಿಕ ಸುಧಾರಣೆ, ಸೇವೆಯಲ್ಲಿ ತೊಡಗಿದರು.

**8) ರಾಧಾಸ್ವಾಮಿ ಚಳುವಳಿ:**

1861ರಲ್ಲಿ ಶಿವ ದಯಾಳ ಸಾಹೇಬರು ಪ್ರಾರಂಭಿಸಿದರು. ಈ ಚಳುವಳಿಯ ಮೂಲಕ ಸಾಮಾಜಿಕ ಕ್ಷೇತ್ರದಲ್ಲಿ ದುರ್ಬಲರನ್ನು ಎತ್ತಿ ಹಿಡಿಯುವ ಮತ್ತು ಧಾರ್ಮಿಕ ಅಜ್ಞಾನಗಳಿಗೆ ಬಲಿಯಾಗುತ್ತಿರುವ ಜನತೆಯನ್ನು ಎಚ್ಚರಗೊಳಿಸುವಲ್ಲಿ ನಿರತರಾದರು.

**9) ಭಾರತ ಧರ್ಮ ಮಹಾಮಂಡಲ:**

ಪಂಡಿತ ದೀನ ದಯಾಳ ಶರ್ಮಾ 1890ರಲ್ಲಿ ಸಾಂಪ್ರದಾಯಿಕ ಪದ್ಧತಿಗಳ ಸುಧಾರಣೆಗೆ ಈ ಸಂಸ್ಥೆಯನ್ನು ಪ್ರಾರಂಭಿಸಿದರು.

**10) ಗುರುದ್ವಾರ ಸುಧಾರಣಾ ಚಳುವಳಿ:**

1920ರಲ್ಲಿ ಗುರುದ್ವಾರಗಳನ್ನು ಲಂಚಕೋರ ಮಹಂತರ ಕೈಯಿಂದ ಬಿಡುಗಡೆಗೊಳಿಸುವುದು ಈ ಚಳುವಳಿಯ ಉದ್ದೇಶವಾಗಿತ್ತು. ಮುಂದೆ ಇದೇ ಅಕಾಲಿದಳವಾಯಿತು.

**11) ಯುವ ಬಂಗಾಳಿ ಚಳುವಳಿ:**

ಡಿರೋಜಿಯನ ಚಳುವಳಿ ಎಂತಲೂ ಕರೆಯುವ ಈ ಚಳುವಳಿಯನ್ನು ಹೆನ್ರಿ ಲೂಯಿಸ್ ಡಿರೋಜಿಯನ್ ಪ್ರಾರಂಭಿಸಿದರು. ಈ ಚಳುವಳಿಯು ಬಂಗಾಳದಲ್ಲಿ ಕ್ರಾಂತಿಕಾರಕ ಸುಧಾರಣೆಗಳನ್ನು ಮಾಡಿತು.

**12) ದೇವಸ್ಥಾನ ಪ್ರವೇಶ ಚಳುವಳಿ:**

ದಕ್ಷಿಣ ಭಾರತದ ಕೇರಳದಲ್ಲಿ 1936ರಲ್ಲಿ ತಿರುವಾಂಕೂರು ದೊರೆ ಸರ್ಕಾರಿ ಒಡೆತನದಲ್ಲಿರುವ ಎಲ್ಲ ದೇವಾಲಯಗಳಿಗೆ ಸರ್ವರಿಗೂ ಪ್ರವೇಶಿಸುವಂತೆ ಅವಕಾಶ ನೀಡಿ ಕಾನೂನು ಹೊರಡಿಸಿದರು. ಮುಂದೆ ಇದು ದೊಡ್ಡ ಚಳುವಳಿಯಾಗಿ ನಡೆಯಿತು.

## ದಲಿತ ವರ್ಗಗಳ ದಾಸ್ಯ ವಿಮೋಚನೆ:

ಆಧುನಿಕ ವಿದ್ಯಾಭ್ಯಾಸದ ವಿಸ್ತರಣೆಯಿಂದಾಗಿ ಅತಿ ಹಿಂದುಳಿದ ಮತ್ತು ದಲಿತ ಜಾತಿಗಳು ಎಚ್ಚರಗೊಂಡು ಸಮಾನತೆಗಾಗಿ ಸಂಘ ಸಂಸ್ಥೆ ಕಟ್ಟಿಕೊಮಡು ಚಳುವಳಿ ನಡೆಸಿ ದಾಸ್ಯ ವಿಮೋಚನೆಗೆ ಪ್ರಯತ್ನಿಸಿದ್ದು 20ನೇ ಶತಮಾನದ ಮೊದಲರ್ಧ ಭಾಗದ ಪ್ರಮುಖವಾದ ಲಕ್ಷಣವಾಗಿತ್ತು.

ಇದರ ಪ್ರಮುಖವಾದ ಉದ್ದೇಶಗಳೆಂದರೆ,

1) ಮೇಲ್ಜಾತಿಯವರ ಅಸಹನೆ, ಅಹಂಕಾರ ಮತ್ತು ದೌರ್ಜನ್ಯದಿಂದ ಬೇಸತ್ತು.

2) ಸ್ವಾಭಾವಿಕವಾದ ಸ್ಥಾನಮಾನ ಒತ್ತಾಯಿಕೆಗೆ.

3) ಧಾರ್ಮಿಕ ಮತ್ತು ಶೈಕ್ಷಣಿಕ ಸ್ವಾತಂತ್ರ್ಯಕ್ಕೆ.

1920ರ ದಶಕದ ಮಧ್ಯಭಾಗದಲ್ಲಿ ಅಖಿಲ; ಭಾರತ ಮಟ್ಟದಲ್ಲಿ ಅಸ್ಪೃಶ್ಯ ಜನರ ಉದ್ಧಾರಕ್ಕಾಗಿ ಕೆಲಸ ಮಾಡಲು ಹಲವಾರು ಸಂಘ ಸಂಸ್ಥೆಗಳು ಜನ್ಮ ತಾಳಿದವು. ಡಾ.ಬಿ.ಆರ್.ಅಂಬೇಡ್ಕರ್‌ರವರು ಮೇಲ್ಜಾತಿಯವರ ದಬ್ಬಾಳಿಕೆಯಿಂದ ರಕ್ಷಿಸಲು 'ಆಲ್ ಇಂಡಿಯಾ ಡಿಪ್ರೆಸ್ಡ್ ಕ್ಲಾಸಿಸ್ ಫೆಡರೇಷನ್' ಅನ್ನು ಸ್ಥಾಪಿಸಿದರು. ಇದೇ ಸಮಯದಲ್ಲಿ ಡಿಪ್ರೆಸ್ಡ್ ಕ್ಲಾಸ್ ಲೀಗ್ ಮತ್ತು ಅಸೋಸಿಯೇಷನ್ ಸ್ಥಾಪನೆಯಾದವು.

ಗಾಂಧೀಜಿಯವರು ಭಾರತೀಯ ರಾಜಕೀಯ ರಂಗವನ್ನು ಪ್ರವೇಶಿಸಿದ ಮೇಲೆ ಇವರ ಉದ್ಧಾರಕ್ಕಾಗಿ ಹೆಚ್ಚಿನ ಕಾಳಜಿ ಬಂತು. ಅನಂತರ ಅಸ್ಪೃಶ್ಯತೆಯ ನಿವಾರಣೆಯು ರಾಷ್ಟ್ರೀಯ ಚಳುವಳಿಯ ಭಾಗವಾಗಿತ್ತು.

1917ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅಸ್ಪೃಶ್ಯ ಜಾತಿಗಳ ಜನರ ಮೇಲೆ ಸಂಪ್ರದಾಯದಂತೆ ಹೇರಿದ್ದ ಎಲ್ಲಾ ನ್ಯಾಯಬಾಹಿರ ಅಸಮಾನತೆ ಮತ್ತು ಕೀಳು ಭಾವನೆ ಕೊನೆಗಾಣಿಸಲು ಕರೆ ನೀಡಿತು. 1921 ಮತ್ತು 22ರಲ್ಲಿ ಇದಕ್ಕೆ ತಕ್ಕುದಾದ ಕಾರ್ಯಯೋಜನೆ ರೂಪಿಸಿತು.

ರಾಷ್ಟ್ರೀಯ ಕಾಂಗ್ರೆಸ್ ಮಾತ್ರವಲ್ಲದೇ ಅಸ್ಪೃಶ್ಯರ ದಾಸ್ಯ ವಿಮೋಚನೆಗಾಗಿ ಇನ್ನೂ ಹಲವಾರು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. 'ಇಂಡಿಯನ್ ನ್ಯಾಶನಲ್ ಸೋಷಿಯಲ್ ಕಾನ್ಫರೆನ್ಸ್' ಜಾರಿಗೆ ಬಂತು. 1928ರಲ್ಲಿ ಇದು ಹಿಂದೂ ಸಮಾಜದ ಐಕ್ಯತೆಗೆ ಅಡ್ಡಿಯಾಗಿರುವ ಅಸ್ಪೃಶ್ಯತೆಯ ಪಿಡುಗುಗಳನ್ನು ನಿವಾರಿಸಲು ಸಹಭೋಜನ ಮತ್ತು ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹಿಸಿತು.

1932ರಲ್ಲಿ ಗಾಂಧೀಜಿಯವರು 'ಹರಿಜನ ಸೇವಕ ಸಂಘ' ಸ್ಥಾಪಿಸಿ ಅಸ್ಪೃಶ್ಯರ ಉದ್ಧಾರಕ್ಕಾಗಿ ಹಲವಾರು ಕಾರ್ಯಕ್ರಮ ಕೈಗೊಂಡರು. ಆದರೆ ಇದರ ಕಾರ್ಯ ವೈಖರಿಗೆ ಬೇಸತ್ತು ಅಂಬೇಡ್ಕರ್ ಹೊರ ಬಂದರು.

ಎಷ್ಟೆಲ್ಲಾ ಚಳುವಳಿಗಳು ನಡೆದರೂ ಸಂಪೂರ್ಣವಾದ ದಾಸ್ಯದ ಸಂಕೋಲೆಯಿಂದ ಬಿಡುಗಡೆ ಸಾಧ್ಯವಾಗಲಿಲ್ಲ. ಇದರಿಂದಾಗಿ ಹೊಸ ರಾಜ್ಯಾಂಗ ನಿರ್ಮಾಪಕರು ಅಸ್ಪೃಶ್ಯರ ಹಿತಾಸಕ್ತಿ ಕಾಪಾಡಲು ರಾಜ್ಯಾಂಗದಲ್ಲಿ ಕೆಲವೊಂದು ವಿಶೇಷ ವಿಧಿನಿಯಮ ಸೇರಿಸುವುದು ಅನಿವಾರ್ಯವಾಯಿತು.

## ದ್ವಿರಾಷ್ಟ್ರ ಸಿದ್ಧಾಂತ ಮತ್ತು ಇಸ್ಲಾಮಿಕ ವೈರತ್ವ:

ಭಾರತದ ಲಾರ್ಡ್ ಕರ್ಜನ್ 1905ರಲ್ಲಿ ನಿವೃತ್ತಿಯಾದಾಗ, ಲಾರ್ಡ್ ಮಿಂಟೋ ಅಧಿಕಾರಾರೋಹಣ ಮಾಡಿದರು. ದೇಶದಲ್ಲಿಯ ವಿದ್ರೋಹ ವಾತಾವರಣವನ್ನು ಕಡಿಮೆಗೊಳಿಸಲು ಯೋಜನೆ ರೂಪಿಸಿದರು. 1905ರ ಸಮಯದಲ್ಲಿ ಭಾರತದಲ್ಲಿ ಹಿಂದೂ, ಮುಸ್ಲಿಂರ ಮಧ್ಯೆ ಯಾವ ಘರ್ಷಣೆಗಳು ಇರಲಿಲ್ಲ. ಮುಸ್ಲಿಂರು ಅನೇಕ ಸಂಖ್ಯೆಯಲ್ಲಿ ರಾಷ್ಟ್ರೀಯ ಆಂದೋಲನಗಳಲ್ಲಿ ಭಾಗವಹಿಸುತ್ತಿದ್ದರು.

ಮುಸ್ಲಿಂರ ಈ ಪ್ರವೃತ್ತಿಯನ್ನು ಬ್ರಿಟೀಷರು ಸಹಿಸದಾದರು. 1905-06ರಲ್ಲಿ ಭಾರತದಲ್ಲಿ ಸಂವಿಧಾನಾತ್ಮಕ ತಿದ್ದುಪಡಿಯ ಚರ್ಚೆಗಳು ಪ್ರಾರಂಭಗೊಂಡಿದ್ದವು. ಈ ಸಮಯವನ್ನು ಸರಿಯಾಗಿ ಬಳಸಿಕೊಂಡ ಆಗಾಖಾನ್‌ರು ಮುಸ್ಲಿಂ ಪ್ರತ್ಯೇಕತೆಯ ಮಾರಕ ಬೀಜವನ್ನು ಭಾರತದ ರಾಜಕಾರಣದಲ್ಲಿ ಪ್ರತ್ಯೇಕ ಮತದಾರರ ರೂಪದಲ್ಲಿ ಬಿತ್ತಿದರು.

**ಭಾರತದಲ್ಲಿ ಕೋಮುವಾದದ ಉಗಮಕ್ಕೆ ಕಾರಣಗಳು:**

1) ಬ್ರಿಟೀಷರ ಒಡೆದು ಆಳುವ ನೀತಿ: ಬ್ರಿಟೀಷರು ಹಿಂದೂಗಳ ಜನಪ್ರಿಯತೆಯನ್ನು ಸಹಿಸದೆ ಮುಸ್ಲಿಂರನ್ನು ಅಲ್ಪಸಂಖ್ಯಾತರೆಂದು ಬಗೆದು ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸುತ್ತಾ ಅವರನ್ನು ಹಿಂದೂಗಳಿಂದ ದೂರ ಇಟ್ಟರು. ಉದಾ: ಅಲಿಘರ ಚಳುವಳಿಯ ಪ್ರೋತ್ಸಾಹ, ಬಂಗಾಳ ವಿಭಜನೆ, ಮಿಂಟೋ ಮುಸ್ಲಿಂರಿಗೆ ಪ್ರತ್ಯೇಕ ಮತೀಯ ಚುನಾವಣಾ ಕ್ಷೇತ್ರ ನೀಡಿದ್ದು, ಎರಡು ಕೋಮುಗಳ ನಡುವೆ ಭಿನ್ನಾಭಿಪ್ರಾಯಕ್ಕೆ ದಾರಿ ಮಾಡಿತು.

2) ಭಿನ್ನ ಧರ್ಮಗಳು: ಹಿಂದೂ ಮುಸ್ಲಿಂ ತಾತ್ವಿಕವಾಗಿ ತೀರ ಭಿನ್ನ ಧರ್ಮಗಳು ಆಗಿದ್ದು, ಆಚರಣೆಗಳು ಸಹ ತೀರಾ ರುದ್ದವಾಗಿದ್ದುದು ಸಹ ಕಾರಣವಾಯಿತು.

3) ಮುಸ್ಲಿಂರ ಹಿಂದುಳಿದಿರುವಿಕೆ: ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಸ್ಲಿಂರು ಹಿಂದೂಗಳಿಗಿಂತ ಹಿಂದುಳಿದಿದ್ದರು. ಮೊಘಲ ಸಾಮ್ರಾಜ್ಯದ ಪತನದ ನಂತರ ಮುಸ್ಲಿಂರಿಗೆ ದುಸ್ಥಿತಿ ಬಂದಿತು. ಇದು ಮುಸ್ಲಿಂರಲ್ಲಿ ಪ್ರತ್ಯೇಕ ಭಾವನೆ ಬೆಳೆಯಲು ಇದು ಕಾರಣವಾಯಿತು.

4) ಹಿಂದೂ ಧರ್ಮದ ಪುನರುತ್ಥಾನ: ಹಿಂದೂ ಸುಧಾರಣಾವಾದಿಗಳು ಪ್ರಾಚೀನ ಕಾಲವನ್ನು ಸುವರ್ಣಯುಗ ಎಂದು ಕರೆದಿದ್ದು ಮುಸ್ಲಿಂರಿಗೆ ನೋವುಂಟಾಯಿತು. ಹಿಂದೂ ಸಂಸ್ಕೃತಿ ಇಸ್ಲಾಂಗಿಂತ ಶ್ರೇಷ್ಠ ಎಂಬ ಮಾತು. ಸ್ವಾಮಿ ಶ್ರದ್ಧಾನಂದರ ಶುದ್ಧಿ ಚಳುವಳಿಗಳು ಅತಿಯಾದ ಭಿನ್ನಾಭಿಪ್ರಾಯಗಳು ಏರ್ಪಾಡಾಗಲು ಪ್ರಾರಂಭವಾಯಿತು. ಹಿಂದೂ ಧರ್ಮದಲ್ಲಾದ ನವೋದಯವು ಮುಸ್ಲಿಂರಲ್ಲಿ ಪ್ರತ್ಯೇಕತೆ ಮತ್ತು ಕೋಮುವಾದ ಕೆರಳಿಸಿತು. ಗೋಹತ್ಯೆ ನಿಷೇಧ ಚಳುವಳಿ, ದೇವನಾಗರಿ ಲಿಪಿಗೆ ಮಾನ್ಯತೆ ಮುಂತಾದವುಗಳಿಂದ ಪ್ರತ್ಯೇಕತೆಯನ್ನು ರೂಢಿಸಿಕೊಂಡರು.

5) ಸರ್ ಸೈಯದ್ ಪಾತ್ರ: ಸರ್ ಸೈಯದ್ ಅಹಮದ್ ಖಾನರು 'ಭಾರತದ ಕೋಮುವಾದದ ಪಿತಾಮಹ' ಕೋಮುವಾದದ ಉಕ್ಕಿನ ಮನುಷ್ಯ ಎಂದೇ ಕರೆಯಲಾಗುತ್ತದೆ. ಅವರು ಆರಂಭಿಸಿದ ಅಲಿಘರ ಚಳುವಳಿ ಮುಸ್ಲಿಂರ ಸಂಘಟನೆ ಐಕ್ಯತೆ, ಶೈಕ್ಷಣಿಕ ಪ್ರಗತಿ ಹಾಗೂ ಕೋಮುವಾದಕ್ಕೆ ಕಾರಣವಾಯಿತು. ಅಲಿಘರ್ ಕಾಲೇಜು ಮತೀಯ ಭಿನ್ನತೆ ಬೋಧಿಸುವ ಕೇಂದ್ರವಾಯಿತು. ಇವರು ಬ್ರಿಟೀಷ್ ಆಳ್ವಿಕೆಗೆ ನಿಷ್ಠೆ ತೋರಿ ಹಿಂದೂ ಮುಸ್ಲಿಂರ ಮಧ್ಯೆ ವೈರತ್ವ ಹೆಚ್ಚುಗೊಳಿಸಿದರು.

## ದ್ವಿರಾಷ್ಟ್ರ ಸಿದ್ಧಾಂತ ಉಗಮ:

ಮಹಮದ್ ಇಕ್ಬಾಲ್ ಮುಸ್ಲಿಂರಿಗೆ ಪ್ರತ್ಯೇಕವಾದ ರಾಷ್ಟ್ರ ಪಾಕಿಸ್ತಾನ ಬೇಕೆಂಬ ಬೇಡಿಕೆಯನ್ನು ಮೊದಲು 1930ರ ಅಲಹಾಬಾದ್ ಮುಸ್ಲಿಂ ಲೀಗ್ ಸಭೆಯ ಮುಂದೆ ಇಟ್ಟನು. ಪಂಜಾಬ್, ಆಫ್ಘಾನಿಸ್ತಾನ, ಕಾಶ್ಮೀರ, ಸಿಂಧ, ಬಲೂಚಿಸ್ತಾನ ಇವುಗಳ ಮೊದಲ ನಾಲ್ಕು ಅಕ್ಷರ, ಕಡೆಯ ಪ್ರಾಂತ್ಯದ ಸ್ತಾನ ಸೇರಿಸಿ 'ಪಾಕಿಸ್ತಾನ' ಎಂದು ರಹಮತ ಆಲಿ ಕರೆದನು. ಈತ ಮುಸ್ಲಿಂರ ಧರ್ಮ, ಸಂಸ್ಕೃತಿ, ಸಂಪ್ರದಾಯ, ವಿವಾಹ, ಉತ್ತರಾಧಿಕಾರತ್ವದ ಕಾನೂನು, ಸಾಹಿತ್ಯ, ಚರಿತ್ರೆ, ಆಚರಣೆಗಳೆಲ್ಲವೂ ಭಿನ್ನವಾಗಿವೆ. ಅವರ ಭೋಜನ, ಉಡುಗೆ, ಅಡುಗೆ ಕ್ಯಾಲೆಂಡರ್‌ಗಳು ಒಂದೇ ರಾಷ್ಟ್ರದಲ್ಲಿರಲು ಸಾಧ್ಯವಿಲ್ಲ ಎಂದು ಹೇಳುತ್ತಾನೆ.

ಮಹಮದ್ ಆಲಿ ಜಿನ್ನಾ 1940ರ ಲಾಹೋರ್ ಅಧಿವೇಶನದಲ್ಲಿ ಪ್ರತ್ಯೇಕ ರಾಷ್ಟ್ರದ ಕುರಿತು ಒತ್ತಿ ಹೇಳಿದರು. ಇವರು ಮಾರ್ಚ್ 23, 1940ರಂದು ಲಾಹೋರ್‌ನಲ್ಲಿ ದ್ವಿರಾಷ್ಟ್ರ ಸಿದ್ಧಾಂತ ಮಂಡಿಸಿದರು. ಮುಸ್ಲಿಂ ಲೀಗ್ ಇದನ್ನು ಅಂಗೀಕಾರ ಮಾಡಿತು. ಇವರು ಕಾಶ್ಮೀರ, ಅಸ್ಸಾಂ, ಬಲೂಚಿಸ್ತಾನ, ಹೈದರಾಬಾದ್, ಪಂಜಾಬ್, ಸಿಂದ್, ವಾಯುವ್ಯ ಗಡಿ ಪ್ರಾಂತ್ಯಗಳು ಈ ಹೊಸ ರಾಷ್ಟ್ರಕ್ಕೆ ಸೇರಬೇಕೆಂದು ಹೇಳಿಕೆ ಇತ್ತನು. ಮಹಮದ್ ಆಲಿ ಜಿನ್ನಾರ ಈ ಸಿದ್ಧಾಂತಕ್ಕೆ ಮಣಿದು ಬ್ರಿಟೀಷರು 1947ರ ಆಗಸ್ಟ್ 14ರಂದು ಪಾಕಿಸ್ತಾನ ರಾಷ್ಟ್ರದ ನಿರ್ಮಾಣ ಮಾಡಿ, ಪ್ರತ್ಯೇಕ ಮುಸ್ಲಿಂ ರಾಷ್ಟ್ರಕ್ಕೆ ನಾಂದಿ ಹಾಡಿದರು.

ಭಾರತ ಮತ್ತು ಪಾಕಿಸ್ತಾನ ಎಂದು ದ್ವಿರಾಷ್ಟ್ರ ರಚನೆಗೆ ಮುಖ್ಯವಾಗಿ ಕಾರಣರಾದವರು ಬ್ರಿಟೀಷರು. ತಮ್ಮ ಅಡಿಪಾಯ ಗಟ್ಟಿಗೊಳಿಸಿಕೊಳ್ಳಲು ಬ್ರಿಟೀಷರು ಹಿಂದೂ ಮುಸ್ಲಿಂರ ಮಧ್ಯೆ ಬಿರುಕು ತಂದರು. ಅದೇ ಮುಂದೆ ಎರಡು ರಾಷ್ಟ್ರಗಳಾಗಿ ಒಡೆಯುವ ಮಟ್ಟಕ್ಕೆ ಮುಂದುವರೆಯಿತು.

## ಹಿಂದುತ್ವ ಮತ್ತು ದೇಶಭಕ್ತಿ:

ಹಿಂದುತ್ವ ಪದವನ್ನು 1923ರಲ್ಲಿ ವಿ.ಡಿ. ಸಾವರಕರ್ ಮೊದಲಿಗೆ ಪ್ರಯೋಗಿಸಿದರು. ಇದು ಹಿಂದು ರಾಷ್ಟ್ರೀಯತಾವಾದದ ಪ್ರಬಲ ವಿಧವಾಗಿದೆ. ಹಿಂದೂ ಪದವನ್ನು ಸಪ್ತಹಿಂದೂ ಎಂಬ ನದಿಯಿಂದಾಗಿ ಪರ್ಶಿಯಾದಲ್ಲಿ ಬಳಸಲಾಯಿತು. ಹಿಂದೂ ಎಂದರೆ ಭಾರತೀಯ ಎಂಬುದನ್ನು ಸೂಚಿಸುತ್ತದೆ. ಈಗ ಇದು ಧರ್ಮವನ್ನು ಸೂಚಿಸುವ ಪದವಾಗಿದೆ. ಹಿಂದೂತ್ವವು ತನ್ನಲ್ಲಿ ಬೌದ್ಧ, ಜೈನ, ಸಿಖ್, ಆರ್ಯ, ದ್ರಾವಿಡರನ್ನು ಒಳಗೊಂಡಿದೆ. ಇದು ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಕೋಮುವಾದವಾಗಿ ಬೆಳೆಯಿತು.

ಭಾರತದಲ್ಲಿ 19ನೇ ಶತಮಾನದಲ್ಲಿ ಮುಸ್ಲಿಂ ಕೋಮುವಾದ ಬೆಳೆಯುತ್ತಿದ್ದ ಜೊತೆಜೊತೆಗೆ ಹಿಂದೂ ಕೋಮು ಸಂಘಟನೆಯು ಬೆಳೆಯಲಾರಂಭಿಸಿತು. 1870ರ ಸುಮಾರು ಹಿಂದೂ ಜಮೀನದಾರರು, ಲೇವಾದೇವಿಗಾರರು ಮತ್ತು ಮಧ್ಯಮವರ್ಗದವರು ಮುಸ್ಲಿಂ ವಿರೋಧಿ ಭಾವನೆಗಳನ್ನು ಬೆಳೆಸಿಕೊಳ್ಳಲಾರಂಭಿಸಿದರು. ಇದು ಮುಂದೆ ಹಿಂದುತ್ವ ಬೆಳೆಯಲು ಅಡಿಪಾಯ ಹಾಕಿದಂತಾಯಿತು.

ಹಿಂದುತ್ವ ಎಂದರೆ ಇದು ಒಂದು ಸಿದ್ಧಾಂತ. ಇದು ಹಿಂದೂ ರಾಷ್ಟ್ರದ ಅಧಿಪತ್ಯ ಸಾಧಿಸಲು, ಹಿಂದುಳಿದ ಜೀವನಶೈಲಿಯನ್ನು ಉನ್ನತಿಗೆ ಏರಿಸುವ ಗುರಿಯನ್ನು ಹೊಂದಿದೆ.

**ಹಿಂದುತ್ವದ ಸಂಘಟನೆಗಳು:**

1) ಕೆ.ಬಿ.ಹೆಗ್ಗಡೆಯವರು ರಾಷ್ಟ್ರೀಯ ಸ್ವಯಂ ಸೇವಕತ ಸಂಘವನ್ನು 1925ರಲ್ಲಿ ಪ್ರಾರಂಭಿಸಿದರು.

2) ಭಾರತೀಯ ಜನ ಸಂಘ

3) ಅಖಿಲ ಭಾರತೀಯ ವಿದ್ಯಾರ್ಥಿ ಪರಿಷದ್

4) ಭಾರತೀಯ ಮಜದೂರ್ ಸಂಘ

5) ಭಾರತೀಯ ಕಿಸಾನ್ ಸಂಘ

## ಹಿಂದುತ್ವ–ದೇಶಪ್ರೇಮ–ರಾಷ್ಟ್ರೀಯ ಆಂದೋಲನವಾಗಿ ಬೆಳೆದುದು:

ಹಿಂದೂ ಮಹಾಸಭಾ ಮುಸ್ಲಿಂ ಲೀಗ್ ವಿರುದ್ದವಾಗಿ ಹುಟ್ಟಿತು ಮತ್ತು ದ್ವಿರಾಷ್ಟ್ರ ಸಿದ್ಧಾಂತ ವಿರೋಧಿಸಿ ಪ್ರಜಾಪ್ರಭುತ್ವ ಮಾದರಿಯ ಅಖಂಡ ರಾಷ್ಟ್ರದ ಸ್ಥಾಪನೆ ಪ್ರೋತ್ಸಾಹಿಸಿತು. ಧಾರ್ಮಿಕ ಸುಧಾರಣೆ, ರಾಜಕೀಯ ಹಕ್ಕುಗಳನ್ನು ಕಾಪಾಡುವುದು ಹಿಂದೂ ಮಹಾಸಭಾದ ಗುರಿ. ಇದು ಪ್ರತ್ಯೇಕ ಮತದಾರ ಕ್ಷೇತ್ರದ 'ರುದ್ದ ಧ್ವನಿ ಎತ್ತಿತು'. ಜಂಟಿ ಮತದಾನ ಕ್ಷೇತ್ರ, ಅಲ್ಪಸಂಖ್ಯಾತರಿಗೆ ಸೀಮಿತ ಅವಧಿಯವರೆಗೆ ವಿಶೇಷ ಸವಲತ್ತುಗಳಿಗೆ ಬೆಂಬಲ ನೀಡಿತು. ಕೋಮು ಆಧಾರದ ಮೇಲೆ ಸರ್ಕಾರಿ ಸೇವೆಗಳಲ್ಲಿ ನೌಕರಿ ಪ್ರವೇಶ ರದ್ದು ಮಾಡಿ ಪರೀಕ್ಷೆ ನಡೆಸಬೇಕೆಂದು ಹೇಳಿತು. ಹಿಂದೂತ್ವವು ಎಂದೂ ದೇಶ ವಿಭಜನೆಯನ್ನು ಪ್ರೋತ್ಸಾಹಿಸಲಿಲ್ಲ.

## ದ್ರಾವಿಡ ಚಳುವಳಿ:

19ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ನಡೆದ ಮಹತ್ವದ ಚಳುವಳಿಗಳಲ್ಲಿ ದ್ರಾವಿಡ ಚಳುವಳಿ ಒಂದು. ಉತ್ತರ ಭಾರತ ಆರ್ಯನ್‌ರದ್ದು. ದಕ್ಷಿಣ ಭಾರತ ದ್ರಾವಿಡರದ್ದು ಎಂಬ ಉಕ್ತಿಯ ಮೇಲೆ ನಡೆದ ಈ ಚಳುವಳಿಯು ದಕ್ಷಿಣ ಭಾರತದಲ್ಲಿ ಕ್ರಾಂತಿಕಾರಕ ಸ್ಥಿತಿಯನ್ನು ಏರ್ಪಾಡು ಮಾಡಿತು.

ಈ ಆಂದೋಲನವು ಪ್ರತ್ಯೇಕವಾಗಿ ತಮಿಳುನಾಡಿಗೆ ಮಾತ್ರವಾಗಿರದೆ ಒಂದು ಹಂತದಲ್ಲಿ ತಮಿಳು ನೇತೃತ್ವದ ದಕ್ಷಿಣ ಭಾರತವೇ ಉತ್ತರ ಭಾರತದಿಂದ ಸಿಕ್ಕದು ಪ್ರತ್ಯೇಕಗೊಳ್ಳಬೇಕೆಂಬ ಗುರಿ ಹೊಂದಿತ್ತು. ಸ್ವಾತಂತ್ರ್ಯ ಪೂರ್ವದಿಂದಲೂ ಈ ಆಂದೋಲನ ನಡೆದಿದ್ದು, ಇದು ಬ್ರಾಹ್ಮಣೇತರ ಮತ್ತು ಬ್ರಾಹ್ಮಣ ವಿರೋಧಿ ಚಳುವಳಿ ಎಂತಲೂ, ಆತ್ಮಾಭಿಮಾನ ಚಳುವಳಿ ಎಂತಲೂ ಕರೆಯಲಾಗುತ್ತದೆ.

ಪೆರಿಯಾರ್ ರಾಮಸ್ವಾಮಿ ಈ ಚಳುವಳಿಯ ಜನಕರಾಗಿದ್ದು, ಅವರ ಉದ್ದೇಶ ನಿಸ್ವಾರ್ಥದಿಂದ ಕೂಡಿತ್ತು. ಸಮಾನ ಮಾನವ ಹಕ್ಕುಗಳನ್ನು ಹಿಂದುಳಿದ ಜಾತಿಗಳಿಗೆ ಕಲ್ಪಿಸುವ ಮುಖ್ಯ ಉದ್ದೇಶದೊಂದಿಗೆ ಮತ್ತು ಹಿಂದುಳಿದ ಜಾತಿಗಳ ಜನತೆಯಲ್ಲಿ ಆತ್ಮಾಭಿಮಾನ ಬೆಳೆಸಲು ಈ ಚಳುವಳಿಯನ್ನು ಪೆರಿಯಾರ್ ಹುಟ್ಟುಹಾಕಿದರು. ಪೆರಿಯಾರ್ ಅವರ ಸಿದ್ಧಾಂತವೇನೆಂದರೆ 'ನಮ್ಮ ನಾಡಿನಿಂದ ಶ್ರೇಷ್ಠ ಕನಿಷ್ಠ ಮುಕ್ತವಾದಾಗ ಮಾತ್ರ ನಾವು ಆತ್ಮಾಭಿಮಾನದ ಬಗ್ಗೆ ಚಿಂತಿಸಲು ಸಾಧ್ಯ. ಮನುಷ್ಯ ಆತ್ಮಾಭಿಮಾನ ಬೆಳೆಸಿಕೊಂಡರೆ ಮಾತ್ರ ಸಂಚುಗಾರರ ಆಡಳಿತದಿಂದ ಮುಕ್ತಿ ಹೊಂದಬಯಸುತ್ತಾನೆ'. ಈ ಉದ್ದೇಶದೊಂದಿಗೆ ಭಾರತದಲ್ಲಿ ದ್ರಾವಿಡ ಚಳುವಳಿಯನ್ನು ಪ್ರಾರಂಭಿಸಿದರು.

ಪೆರಿಯಾರ್ ಸಲಹೆಯಂತೆ 1967ರಲ್ಲಿ ಅಧಿಕಾರಕ್ಕೆ ಬಂದ ಅಣ್ಣಾದೊರೈ ಹಿಂದೂ ವಿವಾಹ ಕಾಯ್ದೆಗೆ ತಿದ್ದುಪಡಿ ತಂದು ಬ್ರಾಹ್ಮಣ ಅರ್ಚಕರಿಲ್ಲದ, ತಾಳಿ ಕಡ್ಡಾಯವಲ್ಲದ ಮದುವೆಗಳಿಗೆ ಕಾನೂನಿನ ಬೆಂಬಲ ಒದಗಿಸಿದರು. 1968ರಲ್ಲಿ ಇದಕ್ಕೆ ರಾಷ್ಟ್ರಪತಿಯವರಿಂದ ಅಂಕಿತವು ದೊರೆಯಿತು. ಈ ರೀತಿಯಾಗಿ ದ್ರಾವಿಡ ಚಳುವಳಿಯು ದಕ್ಷಿಣ ಭಾರತದಾದ್ಯಂತ ಬೆಳೆಯಿತು.

## ಭೂದಾನ ಚಳುವಳಿ-1951:

ಆಚಾರ್ಯ ವಿನೋಭಾ ಭಾವೆ ಈ ಚಳುವಳಿಯ ಹರಿಕಾರರು. ಇದು ಮೊದಲು ಪೋಚಂಪಲ್ಲಿಯಲ್ಲಿ ಆರಂಭವಾಗಿ ಪೋಚಂಪಲ್ಲಿ ಭೂದಾನ ಎಂದು ಹೆಸರಾಯಿತು. ಅತಿ ಹೆಚ್ಚು ಜಮಿನ್ದಾರರು ಸ್ವಯಂಪ್ರೇರಣೆಯಿಂದ ಭೂಮಿಯನ್ನು ಭೂ ರಹಿತ ಜನರಿಗೆ ದಾನ ಮಾಡಲು ವಿನೋಬಾ ಭಾವೆ ಈ ಚಳುವಳಿ ಆರಂಭಿಸಿದರು.

ಈ ರೀತಿಯಾಗಿ ಪಡೆದ ಭೂಮಿಯನ್ನು ಬಡವರು ಯಾರಿಗೂ ಮಾರುವಂತಿರಲಿಲ್ಲ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಬಳಸುವಂತಿರಲಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಭೂಮಿ ಮರು ವಶಪಡಿಸಿಕೊಳ್ಳಲಾಗುತ್ತಿತ್ತು. ಈ ಚಳುವಳಿಯಿಂದಾಗಿ ಹಲವು ಸರ್ಕಾರಗಳು ಭೂದಾನ ಕಾಯಿದೆಯನ್ನು ಆರಂಭಿಸಿದವು. ಮಹಾರಾಷ್ಟ್ರ ಸರ್ಕಾರ ರಾಜ್ಯ ಭೂದಾನ ಕಾಯಿದೆಯ 25ನೆಯ ವಿಧಿಯಂತೆ ಭೂ ರಹಿತರು ಭೂ ದಾನದಿಂದ ಪಡೆದ ಭೂಮಿಯನ್ನು ಅವರ ಉಪಜೀವನಕ್ಕಾಗಿ ಕೃಷಿ ಮಾಡುವ ಮೂಲಕ ಬಳಸಬೇಕು. ಮತ್ತು ಕೃಷಿ ಮಾಡದೆ ಹೋದರೆ ಅವರಿಂದ ಭೂಮಿಯನ್ನು ಮರು ವಶ ಪಡಿಸಿಕೊಳ್ಳುವುದರ ಕುರಿತು ಹೇಳುತ್ತದೆ.

ವಿನೋಭಾ ಭಾವೆಯವರು ದೇಶಾದ್ಯಂತ ಸುತ್ತಿ ಈ ಚಳುವಳಿಯನ್ನು ಪ್ರಚಾರ ಮಾಡಿದರು. ಕೃಷಿಕರು ಯಂತ್ರಗಳನ್ನು, ಎತ್ತುಗಳನ್ನು ಬಳಸದಂತೆ ಕರೆ ನೀಡಿದರು. ಇದನ್ನೇ ರಿಷಿಕೆತಿ ಎಂದು ಕರೆದರು. ತಾತ್ವಿಕವಾಗಿ ವಿನೋಭಾ ಭಾವೆಯವರು ಮಹಾತ್ಮಾ ಗಾಂಧಿಯವರಿಂದ ಪ್ರೇರಿತರಾಗಿದ್ದರು.

ಮೊದಲ ಭೂ ದಾನ ಮಾಡಿದ ಜಮೀನ್ದಾರ4ರು ವೆದ್ರೆ ರಾಮಚಂದ್ರ ರೆಡ್ಡಿ ಇವರಿಗೆ ಭೂ ದಾನ ಪ್ರಶಸ್ತಿ ನೀಡಲಾಯಿತು. ಇವರು 100 ಎಕರೆ ಭೂಮಿಯನ್ನು ದಾನ ಮಾಡಿದರು. ಮುಂದೆ 1 ಎಕರೆ ಭೂಮಿ ದಾನವಾಗಲು ಕಾರಣರಾದರು. ರಾಜ್ ಬಹದ್ದೂರ್ ಗಿರಿವರ ನಾರಾಯಣ ಸಿಂಘ, ರಾಂಖಾದ ರಾಜಾ ಇವರು 111101 ಇಕರೆ ಭೂಮಿಯನ್ನು ದಾನ ಮಾಡಿದರು. ಈ ಚಳುವಳಿಯು ಮುಂದೆ ಗ್ರಾಮದಾನ ಚಳುವಳಿಯಾಗಿ ಅಭಿವೃದ್ಧಿಯಾಯಿತು. ಮೊದಮೊದಲು ಸ್ವಯಂ ಪ್ರೇರಣೆಯಿಂದ ದಾನ ಮಾಡಬೇಕೆಂದು ಇದ್ದ ಚಳುವಳಿಯು ನಂತರ 1/6ರಷ್ಟು ಮಾಡಲೇಬೇಕೆಂಬ ಬೇಡಿಕೆಯೊಂದಿಗೆ ಮುಂದುವರಿಯಿತು. ಭೂ ರಹಿತ ಎಷ್ಟೋ ಬಡವರಿಗೆ ಈ ಚಳುವಳಿಯು ಸ್ವಾವಲಂಬನೆಯ ಜೀವನಕ್ಕೆ ದಾರಿ ಆಯಿತು.

# ಘಟಕ – 3

# ಕದಂಬದಿಂದ ಹೊಯ್ಸಳರವರೆಗೆ

**ಕರ್ನಾಟಕದ ಪುರಾತನ ಸಂಪ್ರದಾಯಗಳು, ಕನ್ನಡ ಭಾಷಾ ಹಾಗೂ ಸಾಹಿತ್ಯ, ಕನ್ನಡ ನಾಡಿನ ವ್ಯಾಪ್ತಿ, ರಾಜ್ಯ ಜಿಲ್ಲೆಗಳ ಗೆಜೆಟಿಯರ್‌ಗಳು, ಕರ್ನಾಟಕದಲ್ಲಿನ ವಸ್ತು ಸಂಗ್ರಾಲಯಗಳು, ಐತಿಹಾಸಿಕ ದಾಖಲೆಗಳು, ಸ್ಮಾರಕಗಳ ಸುರಕ್ಷತೆ ಮತ್ತು ಸಂರಕ್ಷಣೆ, ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾ ಕಾರ್ಯ, ಕರ್ನಾಟಕದಲ್ಲಿನ ವಿಶ್ವ ಪರಂಪರೆಯ ಸ್ಥಳಗಳು, ಕದಂಬರಿಂದ ಹೊಯ್ಸಳರವರೆಗೆ ವಾಸ್ತು ಶಿಲ್ಪಕ್ಕೆ ಕೊಡುಗೆ, ಸಾಹಿತ್ಯ ಧರ್ಮ.**

### ಕನ್ನಡ ಭಾಷೆ ಹಾಗೂ ಸಾಹಿತ್ಯ:

ಭಾರತದ ಇತರ ಭಾಗಗಳಂತೆ ಕರ್ನಾಟಕವು ಕೂಡ ಭಾರತದ ಚರಿತ್ರೆಯನ್ನು ರೂಪಿಸುವಲ್ಲಿ ಮತ್ತು ಧರ್ಮ ದರ್ಶನ ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅದರ ಬೆಳವಣಿಗೆಯನ್ನು ಪೋಷಿಸುವಲ್ಲಿ ತನ್ನದೇ ಆದ ಪಾತ್ರ ನಿರ್ವಹಿಸಿದೆ. ಕರ್ನಾಟಕದ ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರ ರಾಜ್ಯಗಳು ದಕ್ಷಿಣ ಭಾರತದ ಇತಿಹಾಸದ ಸಾಂಸ್ಕೃತಿಕ ವೈಭವಕ್ಕೆ ವಿಶಿಷ್ಟ ಕೊಡುಗೆಗಳನ್ನು ಸಲ್ಲಿಸಿವೆ. ಈವರೆಗೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಏಳು ಮಂದಿಗೆ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟಿದೆ.

### ಕರ್ನಾಟಕ ಶಬ್ದದ ಪ್ರಾಚೀನತೆ:

ಮಹಾಭಾರತದ ಭೀಷ್ಮಪರ್ವದಲ್ಲಿ ‘ಕರ್ನಾಟಕ ಮಹಿಷಕಾ ವಿಕಲ್ಪ ಮೂಷಕಸ್ತಥಾ, ಝಿಲ್ಲಿಕಾ: ಕುನ್ತಲಾಶ್ಚೈವ ಸೌಹೃದಾ ನಭಕಾನನ’ ಎಂದು ಹೇಳಿದೆ. ಇದು ಕರ್ನಾಟಕದ ಮೊದಲ ಉಲ್ಲೇಖ ಎಂದು ಹೇಳಬಹುದು. ಕರ್ನಾಟಕ ಇಂದಿನ ಕರ್ನಾಟಕದ ದಕ್ಷಿಣ ಭಾಗ ಮಹಿಷಿಕಾ ಇಂದಿನ ಮೈಸೂರು ಜಿಲ್ಲೆಯ ಸುತ್ತಮುತ6ತಲ ಪ್ರದೇಶ ಎಂದು ಹೇಳಬಹುದು. ಇದನ್ನು ಬಿಟ್ಟರೆ ಸುಮಾರು 4–5ನೇ ಶತಮಾನದ ಕೃತಿಗಳಾದ ಶೂದ್ರಕ ಕವಿಯ ಮೃಚ್ಛಕಟಿಕಾ, ವಿಷ್ಣುಧರ್ಮೋತ್ತರ ಪುರಾಣ, ಸುಮಾರು ಆರನೆಯ ಶತಮಾನದ ಕೃತಿಗಳಾಗಿವೆ. ವರಾಹಮಿಹಿರನ ಬೃಹತ್ ಸಂಹಿತೆ, ಭಾಗವತ ಪುರಾಣ, ಎಂಟನೇ ಶತಮಾನದ ಮಾರ್ಕಂಡೇಯ ಪುರಾಣ, 9ನೇ ಶತಮಾನದ ಮತಂಗನ ಬೃಹದ್ದೇಶೀ ಇನ್ನೂ ಮುಂತಾದ ಕೃತಿಗಳಲ್ಲಿ ಕರ್ನಾಟಕದ ಉಲ್ಲೇಖವಿದೆ. ಉದ್ಯೋತನ ಸೂರಿ ಎಂಬ ಕವಿಯ ‘ಕುವಲಯ ಮಾಲಾ ಕಥಾ’ ಎಂಬ ಪ್ರಾಕೃತ ಕೃತಿಯಲ್ಲಿ. (ಕ್ರಿ.ಶ.779) ತಮಿಳಿನ ಶಿಲಪ್ಪದಿಗಾರಂ (ಕ್ರಿ.ಶ.600) ಕೃತಿಗಳಲ್ಲಿ ಕರ್ನಾಟಕದ ಉಲ್ಲೇಖವಿದೆ. ಕ್ರಿ.ಶ.9–10ನೇ ಶತಮಾನಕ್ಕೆ ಸೇರಿದಂತೆ ಅನೇಕ ಕೃತಿಗಳಲ್ಲಿ ಕನ್ನಡ ಭಾಷೆ ಬಳಸಲಾಗಿದೆ.

ಶಾಸನಗಳ ವಿಚಾರಕ್ಕೆ ಬಂದರೆ ಕದಂಬರ ಶಾಂತಿವರ್ಮನ ಕ್ರಿ.ಶ.450ರ ಬೀರೂರು ತಾಮ್ರ ಶಾಸನದಲ್ಲಿ ಸಮಸ್ತ ಕರ್ನಾಟಕ ಎಂಬ ಪದದ ಬಳಕೆಯಾಗಿದೆ. ಕ್ರಿ.ಶ.633ರ ಗಂಗರ ದೊರೆ ಭೂವಿಕ್ರಮನ ಶಾಸನದಲ್ಲಿ ಕನ್ನಾಟ ಎಂಬುದನ್ನು ಕನ್ನಡ ಭಾಷೆಯ ಅರ್ಥದಲ್ಲಿ ಬಳಸಿದೆ. ರಾಷ್ಟ್ರಕೂಟರ ದೊರೆ ದಂತಿದುರ್ಗನ ಕ್ರಿ.ಶ.753ರ ಸಾಮನಗಢಾ ತಾಮ್ರ ಶಾಸನದಲ್ಲಿ ಕರ್ನಾಟಕ ಬಲಮಚಿನ್ತಯಮ್ ಅಜೇಯಮ್ ಎಂದು ಕನ್ನಡ ರಾಜರ ಸೇನೆಯನ್ನು ವರ್ಣಿಸಿದೆ. ತಮಿಳಿನ ಪಾಂಡ್ಯರಾಜನ ಕ್ರಿ.ಶ.770ರ ವೇಳ್ವಿಕ್ಕುಡಿ ತಾಮ್ರ ಶಾಸನದಲ್ಲಿ ಕರುನಾಡಗರ್ ಎಂಬ ಶಬ್ದದ ಪ್ರಯೋಗವಿದೆ. ಇನ್ನು ಕೆಲವು ಪ್ರಾಚೀನ ತಮಿಳು ಶಾಸನಗಳಲ್ಲಿ ಕನ್ನಾಟ, ಕನ್ನಾಟಕ, ಕನ್ನಾಡಗರುಂ ಎಂಬ ಉಲ್ಲೇಖಗಳು ಕಂಡು ಬರುತ್ತವೆ. ಕನ್ನಡ ಭಾಷೆಯನ್ನು ಕರ್ನಾಟಕ ಭಾಷೆ ಎಂದು ಹೇಳಿರುವುದನ್ನು ಕ್ರಿ.ಶ.500ರ ನಂತರದ ಅನೇಕ ಕೃತಿಗಳಲ್ಲಿ ಕಾಣಬಹುದು. ಇದರಿಂದ ಕರ್ನಾಟಕ ಕರ್ಣಾಟಕ, ಕರುನಾಡು, ಕರುನಾಡಗರ ಎಂಬುವುದನ್ನು ಒಂದು ಪ್ರದೇಶಕ್ಕೆ ಒಂದು ಭಾಷೆಗೆ ಮತ್ತು ಒಂದು ಜನಾಂಗಕ್ಕೆ ಬಳಸಿರುವುದು ಕಂಡುಬರುತ್ತದೆ. ಕರುನಾಡು ಎಂಬುದರಿಂದ ಕರ್ನಾಟಕ ಶಬ್ದ ರೂಪ ತಳೆದಿದೆ ಎಂದು ವಿದ್ವಾಂಸರು ಹೇಳುತ್ತಾರೆ.

## ಕನ್ನಡ ಭಾಷೆಯ ಬೆಳವಣಿಗೆ:

ಕನ್ನಡ ಭಾಷೆಯು ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ಪಂಚ ದ್ರಾವಿಡ ಭಾಷೆಗಳಲ್ಲಿ ಒಂದು. ಮೂಲ ದ್ರಾವಿಡ ಭಾಷೆ ಅಸ್ತಿತ್ವದಲ್ಲಿತ್ತು. ಕ್ರಿ.ಪೂ.ದ ಮೊದಲನೆಯ ಸಾವಿರ ವರ್ಷಗಳ ಅವಧಿಯಲ್ಲಿ ಮೂಲ ದ್ರಾವಿಡದಿಂದ ತಮಿಳು, ಕನ್ನಡ ಭಾಷೆಗಳು ಬೇರೆಯಾದವು. ನಂತರ ಕ್ರಿ.ಪೂ.ದ ಕೊನೆಗೆ ಅಥವಾ ಕ್ರಿ.ಶ. ಆರಂಭದ ಹೊತ್ತಿಗೆ ಕನ್ನಡ ಭಾಷೆಯು ತಮಿಳಿನಿಂದ ಬೇರ್ಪಟ್ಟಿತು. ಶೇಕಡಾ 60ರಷ್ಟು ದ್ರಾವಿಡ ಭಾಷೆಯ ಶಬ್ದಗಳು ಕನ್ನಡ ಭಾಷೆಯಲ್ಲಿವೆ.

ಕ್ರಿ.ಪೂ.1ನೆಯ ಶತಮಾನಕ್ಕೆ ಸೇರಿದ ಶಾತವಾಹನರ ರಾಜ ಹಾಲನ ಗಾಥಾಸಪ್ತಶತಿ ಎಂಬ ಪ್ರಾಕೃತ ಗ್ರಂಥದಲ್ಲಿ ಕನ್ನಡ ಭಾಷೆ ರೂಪುಗೊಂಡಿರಬಹುದು.

ಕ್ರಿ.ಶ.2 ಅಥವಾ ಕ್ರಿ.ಶ.3ನೇ ಶತಮಾನದ ವೇಳೆಗೆ ಕನ್ನಡವು ವ್ಯಾವಹಾರಿಕ ಭಾಷೆಯಾಗಿ ರೂಪುಗೊಂಡಿತ್ತು. ಈಜಿಪ್ಟನ್ ಅಕ್ಸಿರಿಂಕಸ್ ಎಂಬಲ್ಲಿ ನಡೆದ ಸಂಶೋಧನೆಯಲ್ಲಿ ದೊರೆತ ಕ್ರಿ.ಶ.2ನೇ ಶತಮಾನದ ಗ್ರೀಕ್ ಪ್ರಹಸನದಲ್ಲಿ (ಬೇರೆ, ಕೊಂಚ, ಮಧುಪಾತ್ರ, ಹಾಕಿ, ಕಳ್, ಮಗ, ತಾ, ಬಾ, ಒಪ್ಪು, ತೆರಕಂ) ಮೊದಲಾದ ಕನ್ನಡ ಶಬ್ದಗಳಿವೆ ಎಂದು ತಿಳಿದು ಬರುತ್ತದೆ. ಕ್ರಿ.ಶ. ಒಂದನೆಯ ಶತಮಾನದ ಹಾಲರಾಜನ ಗಾಥಾಸಪ್ತಶತಿ ಪ್ರಾಕೃತ ಕಾವ್ಯದಲ್ಲಿ ಪೊಟ್ಟ, ತೀರ, ತುಪ್ಪ, ಪಳ್ಳಿ ಎಂಬ ಕನ್ನಡ ಶಬ್ದಗಳಿವೆ. ಕ್ರಿ.ಶ.450ರ ಹಲ್ಮಿಡಿ ಶಾಸನವೇ ಕನ್ನಡ ಭಾಷೆಯ ಮೊದಲ ಶಾಸನ. ಇದರಲ್ಲಿ ಸಂಸ್ಕೃತ ಮತ್ತು ಕನ್ನಡ ಪದಗಳ ಮಿಶ್ರಣರೂಪ ಕಂಡುಬರುತ್ತದೆ. ಕ್ರಿ.ಶ. 800ರ ಗಂಗರ ದೊರೆ ಶಿಮಾರನ ಗಜಾಷ್ಟಕವೆಂಬ ಅನುಪಲಬ್ದ ಕೃತಿಯ ಬಗ್ಗೆ ಹೇಳುವ ಶಾಸನದಲ್ಲಿ ಓವನಿಗೆ ಒನಕೆವಾಡು ಎಂಬ ಕನ್ನಡ ಜಾನಪದ ಹಾಡಿನ ರೂಪಗಳನ್ನು ಹೇಳಿದೆ. ಒಂದು ಭಾಷೆಯಲ್ಲಿ ಜನಪದ ಹಾಡುಗಳು ರೂಪುಯಗೊಳ್ಳಬೇಕಾದರೆ ಆ ವೇಳೆಗೆ ಕನ್ನಡ ಭಾಷೆ ಸಮೃದ್ಧವಾಗಿಯೇ ಬೆಳೆದಿರಬಹುದು. ಕ್ರಿ.ಪೂ.3ನೇ ಶತಮಾನಕ್ಕೆ ಸೇರಿದ ಕಜರ್ನಾಟಕದಲ್ಲಿ ದೊರೆತ ಅಶೋಕನ ಪ್ರಾಕೃತ ಶಾಸನದಲ್ಲಿ 'ಇಸಿಲ' ಎಂಬ ಪದ ಕನ್ನಡ ಶಬ್ದವೆಂದು, ಅದು ಒಂದು ಊರಿನ ಹೆಸರೆಂದು ತಿಳಿದುಬರುತ್ತದೆ. ಕನ್ನಡ ಭಾಷೆಯನ್ನು ಅದರ ವ್ಯಾಕರಣ ಲಕ್ಷಣಗಳಿಗೆ ಅನುಗುಣವಾಗಿ ಪೂರ್ವದ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ವಿಭಾಗಿಸಲಾಗುತ್ತಿದೆ.

ಕನ್ನಡ ಸಾಹಿತ್ಯೋದಯ ಕ್ರಿ.ಪೂ.3ರಿಂದ ಹಿಡಿದು ಕ್ರಿ.ಶ.1–2ನೇ ಶತಮಾನದ ಹೊತ್ತಿಗೆ ಬೌದ್ಧ ಕವಿಗಳು ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡಿದ್ದರೆಂದೂ, ಆದರೆ ಕನ್ನಡ ನಾಡಿನಲ್ಲಿ ಬೌದ್ಧಮತದ ಪ್ರಭಾವವು ಕಡಿಮೆ ಆದಂತೆ ಆ ಗ್ರಂಥಗಳೆಲ್ಲಾ ನಾಶವಾಯಿತೆಂದೂ ವಿದ್ವಾಂಸರು ಹೇಳುತ್ತಾರೆ. ಕನ್ನಡ ಸಾಹಿತ್ಯ ಚರಿತ್ರೆಗೆ 1500 ವರ್ಷಗಳ ಇತಿಹಾಸವಿದೆ. ಕನ್ನಡ ಭಾಷೆ ಲಿಖಿತವಾಗಿ ಮೊದಲು ಗೋಚರಿಸಿದ್ದು ಕ್ರಿ.ಶ.450ರಲ್ಲಿ ರಚನೆಯಾದ ಹಲ್ಮಿಡಿ ಶಾಸನದಲ್ಲಿ. ಕದಂಬ ದೊರೆ ಕಾಕುಸ್ಥವರ್ಮನ ಕಾಲಕ್ಕೆ ಸೇರಿದ ಹಲ್ಮಿಡಿ ಶಾಸನ ಕನ್ನಡದಲ್ಲಿ ದೊರೆತ ಮೊಟ್ಟ ಮೊದಲ ಶಾಸನವಾಗಿದೆ. ಇದರಲ್ಲಿ ಆಳ ಕದಂಬನೆಂಬ ರಾಜನು ವಿಜಯ ಅರಸನಿಗೆ ಎರಡು ಗ್ರಾಮಗಳನ್ನು ದತ್ತಿಯಾಗಿ ನೀಡಿದ ಸಂಗತಿ ಇದೆ. ಸಂಸ್ಕೃತಿ ಬೇರಿನಿಂದ ಕನ್ನಡ ಹುಟ್ಟಿಕೊಂಡಿತು ಎಂದು ಇದರಿಂದ ತಿಳಿಯುತ್ತದೆ. ಕ್ರಿ.ಶ. 480ರ ಸಿರಗುಂಡ ಶಾಸನ ಎರಡನೆಯ ಶಾಸನ ಚಿತ್ರದುರ್ಗದ ತಮಟಕದಲ್ಲಿನ ಶಾಸನ ಇದೇ ಕಾಲದ್ದು.

ಇದಾದ ನಂತರ ಬಾದಾಮಿ ಐಹೊಳೆ ಶ್ರವಣಬೆಳಗೊಳದಲ್ಲಿ ಕ್ರಿ.ಶ.6–7ನೇ ಶತಮಾನಕ್ಕೆ ಸೇರಿದ ಕಾವ್ಯಮಯವಾದ ಅನೇಕ ಶಾಸನಗಳು ದೊರೆತಿವೆ. ಇದರಿಂದ ಕ್ರಿ.ಶ.3–4ನೇ ಶತಮಾನದ ಹೊತ್ತಿಗೆ ಕನ್ನಡದಲ್ಲಿ ಕಾವ್ಯಗಳ ರಚನೆ ಆಗಿತ್ತೆಂದು ಖಚಿತವಾಗಿ ಹೇಳಬಹುದು. ಕ್ರಿ.ಶ.7ನೇ ಶತಮಾನದಲ್ಲಿ ರಚನೆಯಾದ ತ್ರಿಪದಿ ರೂಪದ ಬಾದಾಮಿ ಶಾಸನವು ಕಪ್ಪೆ ಆರ್ಯಭಟ್ಟನೆಂಬ ಕನ್ನಡಿಗನ ವೀರತ್ವವನ್ನು ಈ ರೀತಿ ವರ್ಣಿಸಿದೆ.

**ಸಾಧುಗೆ ಸಾಧು ಮಾದುರ್ಯಂಗೆ ಮಾಧುರ್ಯಂ**

**ಬಾಧಿಪ್ಪ ಕಲಿಗೆ ಕಲಿಯುಗ ವಿಪರಿತನ್, ಮಾಧವನೀತನ್ ಪೆರನಲ್ಲ...........**

ಕ್ರಿ.ಶ.800ರಲ್ಲಿ ರಚನೆಯಾದ ಮಾವಳ್ಳಿ ಶಾಸನ ಕನ್ನಡ ಸಾಹಿತ್ಯ ಗುಣಗಳನ್ನು ಹೊಂದಿದ್ದ ಕಾರಣ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಐಹೊಳೆ ಶಾಸನದಲ್ಲಿ ಕೆಲವು ಕನ್ನಡ ಪದಗಳನ್ನು ಗುರುತಿಸಬಹುದು. ಆರಂಭದ ಶಾಸನಗಳು ಗದ್ಯ ರೂಪದಲ್ಲಿದ್ದರೆ, 10ನೇ ಶತಮಾನದ ನಂತರದ ಶಾಸನಗಳು ಪದ್ಯ ಶಾಸನಗಳು. ಹೀಗೆ ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗೆ ಆರಂಭಿಕ ಮೆಟ್ಟಿಲುಗಳಾದವು. ಧರ್ಮವೇ ಕನ್ನಡ ಸಾಹಿತ್ಯ ರಚನೆಗೆ ಮೂಲ ಪ್ರೇರಣೆಯಾಗಿದೆ.

ರಾಷ್ಟ್ರಕೂಟರ ಚಕ್ರವರ್ತಿ ನೃಪತುಂಗನ (ಕ್ರಿ.ಶ.815-877) ಆಸ್ಥಾನದಲ್ಲಿದ್ದ ಶ್ರೀವಿಜಯನೆಂಬ ಕವಿಯು ರಚಿಸಿರುವ ಕವಿರಾಜಮಾರ್ಗವೆಂಬ ಅಲಂಕಾರ ಗ್ರಂಥವೇ ಕನ್ನಡದ ಮೊದಲ ಉಪಲಬ್ದ ಗ್ರಂಥ. ಈ ಕೃತಿಯಲ್ಲಿ ಕನ್ನಡ ನಾಡಿನ ವಿಸ್ತಾರ, ಕನ್ನಡ ಭಾಷೆಯ ವಿಶೇಷಗಳು, ಕನ್ನಡ ಜನರ ಹಿರಿಮೆ ಗರಿಮೆ ಮೊದಲಾದವರ ಬಗ್ಗೆ ಬಹಳ ಅಮೂಲ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಕಾವ್ಯಗಳ ಲಕ್ಷಣಗಳೇನು, ಅದು ಹೇಗಿರಬೇಕು ಎಂಬುದನ್ನು ಇದರಲ್ಲಿ ವಿವರಿಸಿದೆ. ಅಂದರೆ ಇದಕ್ಕಿಂತ ಸುಮಾರು 200-300 ವರ್ಷಗಳ ಹಿಂದೆಯೇ ಕನ್ನಡದಲ್ಲಿ ಗದ್ಯ, ಪದ್ಯ, ಕಾವ್ಯಗಳ ರಚನೆ ಆಗಿರಬೇಕು.

ಪೂರ್ವಾಚಾರ್ಯರು, ಪುರಾಣ ಕವಿಗಳು, ಚಿರಂತನಾಚಾರ್ಯರು, ಕವಿವೃಷಭರು, ಪರಮಕವಿ ಪ್ರಧಾನರು (ಕಾವ್ಯ, ಪುರಾಣ, ವ್ಯಾಕರಣ, ಅಲಂಕಾರ, ಮೊದಲಾದ ಗದ್ಯ ಪದ್ಯ ಗ್ರಂಥಗಳನ್ನು ರಚಿಸಿದ ಕವಿಗಳು ಆಚಾರ್ಯರು) ಇದ್ದರೆಂದು ಕವಿರಾಜಮಾರ್ಗದಲ್ಲೇ ಹೇಳಿದ ಪರಮ ಶ್ರೀವಿಜಯ ವಿಮಲೋದಯ ನಾಗಾರ್ಜುನ, ಜಯಭಂಧು, ದುರ್ವಿನೀತ ಮೊದಲಾದ ಕವಿಗಳ ಹೆಸರುಗಳನ್ನು ಇದರಲ್ಲಿ ಹೇಳಿದೆ. ತುಂಬಲೂರಾಚಾರ್ಯ ಅಥವಾ ಶ್ರೀವರ್ಧದೇವ ಎಂಬುವವನು ಚೂಡಾಮಣಿ ಎಂಬ ದೊಡ್ಡ ಗ್ರಂಥವನ್ನು ರಚಿಸಿದ್ದು ಅದು ಉಪಲಬ್ದವಿಲ್ಲ. ಶ್ಯಾಮಕುಂದಾಚಾರ್ಯ, ಸೈಗೊಟ್ಟು ಶಿವಮಾರ. ಅಸಗ ಗುಣನಂದಿ, ಗುಣವರ್ಮ ಮೊದಲಾದ ಅನೇಕ ಕವಿಗಳು ಈ ಕಾಲದಲ್ಲಿದ್ದರು. ಶಿವಕೋಟ್ಯಾಚಾರ್ಯ ಅಥವಾ ಬ್ರಾಜಿಷ್ಣು ಎಂಬುವನಿಂದ ರಚಿತವಾದ ವಡ್ಡಾರಾಧನೆ ಕನ್ನಡದಲ್ಲಿ ಉಪಲಬ್ದವಾದ ಮೊದಲ ಗದ್ಯ ಗ್ರಂಥವಾಗಿದೆ. ಇದರ ರಚನಾ ಕಾಲ ಕ್ರಿ.ಶ.920 ಎಂದು ಹೇಳುತ್ತಾರೆ. ಆದರೆ ಈ ಕಾಲದ ಬಗ್ಗೆ ಖಚಿತತೆ ಇಲ್ಲ.

ಕನ್ನಡದ ಮೊದಲನೇ ಕವಿ ಅಥವಾ ಆದಿಕವಿ ಪಂಪ. ಈತನು ಇಂದಿನ ಆಂಧ್ರಪ್ರದೇಶದ ಕರೀಮನಗರ ಜಿಲ್ಲೆಯ ವೇಮುಲವಾಡದಿಂದ ಆಳುತ್ತಿದ್ದ ರಾಷ್ಟ್ರಕೂಟರ ಸಾಮಂತ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದನು. ಪಂಪನು ಕ್ರಿ.ಶ.940 ಮತ್ತು ಕ್ರಿ.ಶ.950ರಲ್ಲಿ ಕ್ರಮವಾಗಿ ಆದಿಪುರಾಣ ಮತ್ತು ಪಂಪಭಾರತ ಅಥವಾ ವಿಕ್ರಮಾರ್ಜುನ ವಿಜಯ ಎಂಬ ಎರಡು ಚಂಪೂಕಾವ್ಯಗಳನ್ನು ರಚಿಸಿದನು. ಇವೇ ಕನ್ನಡ ಸಾಹಿತ್ಯದ ಮೊದಲನೇ ಕಾಶವ್ಯಗಳೆಂದು ಪ್ರಸಿದ್ಧವಾಗಿವೆ.

## ಕನ್ನಡ ಶಾಸನಗಳು ಮತ್ತು ಅವುಗಳ ಮಹತ್ವ:

ಭಾರತದಲ್ಲೇ ಹೆಚ್ಚು ಶಾಸನಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವು ಎರಡನೆಯ ಸ್ಥಾನದಲ್ಲಿದೆ. ತಮಿಳುನಾಡು ಶಾಸನಗಳ ಸಂಖ್ಯೆಯಲ್ಲಿ ಹೆಚ್ಚಿದ್ದರೂ, ಅವುಗಳಲ್ಲಿ ಕನ್ನಡ ಶಾಸನಗಳಲ್ಲಿ ಕಂಡುಬರುವ ಇತಿಹಾಸ, ಸಂಸ್ಕೃತಿ, ಸಾಹಿತ್ಯದ ಸಮೃದ್ದತೆ ಇಲ್ಲ. ಕ್ರಿ.ಪೂ. 280-300ರ ಅಶೋಕನ ಶಾಸನಗಳಿಂದ ಹಿಡಿದು ಮೈಸೂರು ಅರಸರವರೆಗೆ ಸುಮಾರು 30000ಕ್ಕೂ ಹೆಚ್ಚು ಶಾಸನಗಳು ಕರ್ನಾಟಕದಲ್ಲಿ ದೊರಕ್ಕಿದ್ದು, ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಪ್ರಮುಖ ಘಟನೆಗಳನ್ನು ದಾಖಲಿಸಿವೆ. ಶಾಸನಗಳು ನೀಡುವ ವಿವರಗಳು ಅತ್ಯಂತ ವಿಶ್ವಾಸಾರ್ಹವಾಗಿದೆ. ಕನ್ನಡ ಶಾಸನಗಳಲ್ಲಿ ಇತಿಹಾಸದ ಅಂಶಗಳ ಜೊತೆಗೆ ಸಂಸ್ಕೃತಿ ಸಾಹಿತ್ಯದ ವಿಚಾರಗಳು ಹೊರಹೊಮ್ಮಿವೆ. ಈ ಶಾಸನಗಳು ಎಪಿಗ್ರಾಫಿಯಾ ಕರ್ನಾಟಿಕಾ, ಎಪಿಗ್ರಾಫಿಯಾ ಇಂಡಿಕಾ, ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಶಾಸನ ಸಂಪುಟಗಳಲ್ಲಿ ಪ್ರಕಟವಾಗಿವೆ. ಇನ್ನೂ ಅನೇಕ ಹೊಸ ಶಾಸನಗಳು ಸಿಗುತ್ತಲೇ ಇವೆ.

ಕರ್ನಾಟಕವು ಕ್ರಿ.ಪೂ.272-236ರಲ್ಲಿ ಅಶೋಕನ ಸಾಮ್ರಾಜ್ಯಕ್ಕೆ ಸೇರಿದ ವಿಚಾರ ಕರ್ನಾಟಕದ ಬ್ರಹ್ಮಗಿರಿ, ಸಿದ್ದಾಪುರ, ಕೊಪ್ಪಳ, ಮಸ್ಕಿ, ಸನ್ನತಿ, ಉದೇಗೊಳ್ಳ, ನಿಟ್ಟೂರು ಮೊದಲಾದ ಕಡೆ ಇರುವ ಅವನ ಪ್ರಕೃತಿ ಶಾಸನಗಳಿಂದ ತಿಳಿದುಬರುತ್ತದೆ. ಕದಂಬರ ಸಾಮ್ರಾಜ್ಯ ಸ್ಥಾಪನೆ ವಿಚಾರ ತಾಳಗುಂದ ಶಾಸನದಲ್ಲಿದೆ. ಗಂಗ

ಸಾಮ್ರಾಜ್ಯ ಇತಿಹಾಸದ ವಿಚಾರಗಳು ಹಳೆಯ ಮೈಸೂರು ಭಾಗದಲ್ಲಿ ದೊರಕಿರುವ ಅವರ ಅನೇಕ ತಾಮ್ರಶಾಸನಗಳು, ತಲಕಾಡು, ಶ್ರವಣಬೆಳಗೊಳ ಮೊದಲಾದ ಕಡೆ ಇರುವ ಪ್ರಮುಖ ಶಿಲಾಶಾಸನಗಳಿಂದ ತಿಳಿದುಬರುತ್ತದೆ.

ಬಾದಾಮಿಯ ಚಾಲುಕ್ಯ ಸಾಮ್ರಾಜ್ಯದ ಇತಿಹಾಸ ಬಾದಾಮಿ ಮಹಾಕೂಟ, ಐಹೊಳೆ ಮೊದಲಾದ ಪ್ರಮುಖ ಶಿಲಾ ಶಾಸನಗಳಲ್ಲಿ ಹಾಗೂ ಅನೇಕ ತಾಮ್ರಶಾಸನಗಳಲ್ಲಿ ದಾಖಲಾಗಿದೆ. ರಾಷ್ಟ್ರಕೂಟರ ಇತಿಹಾಸವನ್ನು ಹೇಳುವ ಅನೇಕ ತಾಮ್ರ ಶಾಸನಗಳಿವೆ. ಕಲ್ಯಾಣದ ಚಾಲುಕ್ಯರ ಇತಿಹಾಸಕ್ಕೆ ಸಂಬಂಧಿಸಿದ ಸುಮಾರು ಒಂದು ಸಾವಿರ ಶಿಲಾಶಾಸನಗಳಿವೆ.

ಯಾದವರು ಅಥವಾ ಸೇವುಣರ ಇತಿಹಾಸವನ್ನು ಹೇಳುವ ಸುಮಾರು 500 ಶಿಲಾಶಾಸನಗಳು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿವೆ. ಹೊಯ್ಸಳರಿಗೆ ಸಂಬಂಧಿಸಿದ ಸುಮಾರು ಸಾವಿರಕ್ಕೂ ಹೆಚ್ಚು ಶಾಸನಗಳಿವೆ. ಬೇಲೂರು ಶಿಲಾಶಾಸನವು ಹೊಯ್ಸಳರ, ವಿಷ್ಣುವರ್ಧನನ ಇತಿಹಾಸವನ್ನು ತಿಳಿಸುತ್ತದೆ. ಹೊಯ್ಸಳರ ಇತಿಹಾಸವು ಹೆಚ್ಚಾಗಿ ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಅರಸೀಕೆರೆ ಸೇರಿದಂತೆ ಮಂಡ್ಯ, ಮೈಸೂರು, ಚಿಕ್ಕಮಗಳೂರು, ಹಾಸನ ಮೊದಲಾದ ಜಿಲ್ಲೆಗಳಲ್ಲಿ ಹರಡಿರುವ ಅವರ ಅನೇಕ ದೊಡ್ಡ ದೊಡ್ಡ ಶಿಲಾಶಾಸನಗಳಿಂದಲೇ ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಇಗಿಹಾಸಕ್ಕೆ ಸಂಬಂಧಿಸಿದ ಸುಮಾರು 5000 ಶಾಸನಗಳಿವೆ. ಮೈಸೂರು ಒಡೆಯರ ಕಾಲದ ಅನೇಕ ತಾಮ್ರ ಶಾಸನಗಳಿವೆ.

## ಕನ್ನಡ ನಾಡಿನ ವ್ಯಾಪ್ತಿ:

ಕರ್ನಾಟಕದ ಇತಿಹಾಸವು ಅತ್ಯಂತ ಪುರಾತನವಾದುದು. ಇದು ಹಲವಾರು ವೈವಿಧ್ಯತೆಗಳಿಂದ ಕೂಡಿದ ಕನ್ನಡಿಗರು, ಕಲೆ, ಸಾಹಿತ್ಯ ಧರ್ಮಗಳಲ್ಲಿ ಸಾಧಿಸಿದ ಅದ್ಭುತ ಸಾಧನೆಗಳಿಂದ ಭಾರತದಲ್ಲಿ ಅದು ವಿಶಿಷ್ಟ ಸ್ಥಾನ ಹೊಂದುವಂತಾಗಿದೆ. ಕರ್ನಾಟಕವು ಆರ್ಯ ದ್ರಾವಿಡ ಸಂಸ್ಕೃತಿಗಳ ಆಂತರ್ಯಗೊಂಡ ಮೊದಲ ದಕ್ಕನ್ನಿನ ನಾಡಾಗಿದೆ. ರಾಮಾಯಣದಲ್ಲಿ ಬರುವ ವಾಲಿ ಸುಗ್ರೀವರು ಕದನ ಹೂಡಿದ ಸ್ಥಳವೇ ಇಂದಿನ ಕಿಷ್ಕಿಂದ ವನವೆಂದು ಹೇಳಲಾಗುತ್ತದೆ. ರಾಮನು ರಾವಣನನ್ನು ಸಂಧಿಸಿದ ಸ್ಥಳವೇ ಇಂದಿನ ಜಟಿಂಗ ರಾಮೇಶ್ವರ. ಪರಶುರಾಮರು ತಪಸ್ಸುಗೈದ ಸ್ಥಳವೇ ಇಂದಿನ ಗೋಕರ್ಣ. ಪಾಂಡವರು ಅಜ್ಞಾತವಾಸ ನಡೆಸಿದ ಕೈವಾರವನ್ನು ಏಕಚಕ್ರಾನಗರ ಎಂದು ಕರೆಯುತ್ತಿದ್ದರು. ಹಾವೇರಿ ಜಿಲ್ಲೆಯ ಹಾನಗಲ್ ವಿರಾಟ್ ಪಾಂಡವರು ರಾಜಧಾನಿಯಾಗಿತ್ತು. ಹೀಗೆ ಕರ್ನಾಟಕವು ಪೌರಾಣಿಕ ಇತಿಹಾಸಗಳಲ್ಲಿ ತನ್ನ ಹೆಸರನ್ನು ಉಳಿಸಿಕೊಂಡಿದೆ. ಉತ್ತರ ಮತ್ತು ದಖನ್ನಿನ ಭಿನ್ನ ಸಂಸ್ಕೃತಿಗಳನ್ನು ರೂಢಿಸಿಕೊಂಡ ಕನ್ನಡಿಗರ ಸಾಧನೆಗಳು ವೈಶಿಷ್ಟ್ಯವಾದವುಗಳು.

ಪ್ರಾಚೀನ ಕಾಲದಿಂದಲೂ ಕರ್ನಾಟಕದ ಇತಿಹಾಸವು ಅತ್ಯಂತ ವಿಶಾಲ ವ್ಯಾಪ್ತಿಯನ್ನು ಹೊಂದಿತ್ತು. ಮೌರ್ಯರ ಕಾಲದಲ್ಲಿ ಕರ್ನಾಟಕವು ಇಡೀ ದಕ್ಷಿಣ ಭಾರತವನ್ನೇ ಒಳಗೊಂಡಿತ್ತು. ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಇಡೀ ದಖನ್ ಪ್ರಸ್ಥಭೂಮಿಯನ್ನೇ ಹರಡಿಕೊಂಡಿತ್ತು. ಆಗ ಕರ್ನಾಟಕವು ಮಹಾರಾಷ್ಟ್ರದ ನಾಸಿಕ್, ಪೈತಾನ್, ಎಲ್ಲೋರದವರೆಗೆ ಹಬ್ಬಿತ್ತು. ಶಾತವಾಹನರ ಕಾಲದಲ್ಲಿ ಆಂಧ್ರದ ಹಲವು ಭಾಗಗಳವರೆಗೆ ವ್ಯಾಪಿಸಿತ್ತು. ಪುಣೇ, ಕುರುಂದವಾಡ್, ಮೀರಜ್, ಬಾಂಬೆಗಳು ಕರ್ನಾಟಕದ ಭಾಗಗಳಾಗಿದ್ದವು. ದಕ್ಷಿಣದಲ್ಲಿ ನೀಲಗಿರಿ, ಕೋಯಮತ್ತೂರು, ಸೇಲಂ ಪ್ರದೇಶಗಳು ಕರ್ನಾಟಕದ ಭಾಗಗಳೇ ಆಗಿದ್ದವು. ಪೂರ್ವದಲ್ಲಿ ಸೇಲಂ ಉತ್ತರದಲ್ಲಿ ಕೃಷ್ಣಾನದಿ ಅದರ ಮೇರೆಗಳಾಗಿದ್ದವು. ಪಶ್ಚಿಮದಲ್ಲಿ ಖಾಂಡ್ಲಿವಿಯಿಂದ ತಮಿಳುನಾಡಿನ ಚಂದ್ರಗಿರಿಯವರೆಗಿನ ಸಂಪೂರ್ಣ ಕರಾವಳಿ ಕರ್ನಾಟಕಕ್ಕೆ ಸೇರಿತ್ತು. ಹೊರ ಭಾಗಗಳಿಂದ ಕರ್ನಾಟಕವನ್ನಾಳಿದ ಯಾದವರು ಶಾತವಾಹನರು ಕರ್ನಾಟಕದವರಾಗಿದ್ದರು. ತಮಿಳು ಗ್ರಂಥದಲ್ಲಿ ಮೈಸೂರಿನ ಹೆಸರಾದ ಮಹೀಷಕನಾಡನ್ನು ಎರುಮೈನಾಡು (ಎಮ್ಮೆಗಳ)ನಾಡೆಂದು ಕರೆದಿದೆ. ಬೃಹತ್ ಸಂಹಿತೆ, ಅಷ್ಟಾಧ್ಯಾಯಗಳಲ್ಲಿ ಕರ್ನಾಟಕ ಎಂಬ ಗೋತ್ರದ ಉಲ್ಲೇಖವಿದೆ. ನಾಟಕಗಾರ್ತಿ ವಿಜ್ಜಿಕೆ ತನ್ನನ್ನು ಕರ್ನಾಟಕ ರಾಜಪ್ರಿಯೆ ಎಂದು ಕರೆದುಕೊಂಡಿದ್ದಾಳೆ.

ಅಮೋಘವರ್ಷನು ಕವಿರಾಜ ಮಾರ್ಗದಲ್ಲಿ ಪ್ರಾಚೀನ ಕರ್ನಾಟಕದ ಎಲ್ಲೆಯನ್ನು ವಿವರಿಸುತ್ತಾ ಅದು ಉತ್ತರದ ಗೋದಾವರಿ ನದಿಯಿಂದ ದಕ್ಷಿಣದ ಕಾವೇರಿ ನದಿಯವರೆಗೆ ಹಬ್ಬಿತ್ತೆಂದು ತಿಳಿಸಿದ್ದಾನೆ. ವಿಜಯನಗರದ ಕಾಲದಲ್ಲಿ ಅದು ಕೃಷ್ಣಾ ನದಿಯಿಂದ ಹಿಡಿದು ಇಡೀ ದಕ್ಷಿಣ ಭಾರತವನ್ನೊಳಗೊಂಡಿತ್ತು. ಹೈದರ ಮತ್ತು ಟಿಪ್ಪು

ಸಹ ಕರ್ನಾಟಕದ ಸಮಗ್ರತೆಗಾಗಿ ಶ್ರಮಿಸಿದರು. ಆದರೆ ಬ್ರಿಟೀಷರ ಒಡೆದು ಆಳುವ ನೀತಿಯಿಂದ ಕರ್ನಾಟಕದ ಬಹುಭಾಗಗಳು ಅನ್ಯರಾಜ್ಯಗಳಲ್ಲಿಯೂ ಸೇರಿಕೊಂಡವು. ಕನ್ನಡಿಗರ ನಿರಂತರ ಹೋರಾಟದಿಂದ ಏಕೀಕೃತ ಮೈಸೂರು ನವೆಂಬರ್ 1956ರಲ್ಲಿ ಅಸ್ತಿತ್ವಕ್ಕೆ ಬಂದಿತು. ಮುಂದೆ ಮೈಸೂರಿಗೆ ನವೆಂಬರ್ 1, 1973ರಂದು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು.

ಭೌಗೋಳಿಕ ನೆಲೆ ಕರ್ನಾಟಕವು ಭೌಗೋಳಿಕವಾಗಿ ದಖನ್ ಪ್ರಸ್ಥಭೂಮಿಯ ನೈರುತ್ಯದ ಬಹುಭಾಗವನ್ನು ಹೊಂದಿದೆ. ಪಶ್ಚಿಮದಲ್ಲಿ ಕರಾವಳಿಯ ಒಂದು ಭಾಗವೂ ಕರ್ನಾಟಕಕ್ಕೆ ಸೇರಿದೆ. ಅದು 11.30 ಡಿಗ್ರಿಯಿಂದ 18.45 ಡಿಗ್ರಿಯ ಉತ್ತರ ಅಕ್ಷಾಂಶ ಮತ್ತು 74.12 ಡಿಗ್ರಿಯಿಂದ 78.30 ಡಿಗ್ರಿಯ ಪೂರ್ವ ರೇಖಾಂಶದವರೆಗೆ ಹಬ್ಬಿದೆ. ಅದು ಉತ್ತರದಲ್ಲಿ ಮಹಾರಾಷ್ಟ್ರ ದಕ್ಷಿಣದಲ್ಲಿ ಕೇರಳ, ತಮಿಳುನಾಡು ಪಶ್ಚಿಮದಲ್ಲಿ, ಅರಬ್ಬೀ ಸಮುದ್ರ, ಗೋವಾ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶಗಳಿಂದ ಸುತ್ತುವರಿಯಲ್ಪಟ್ಟಿದೆ. ಕರ್ನಾಟಕವು ಒಟ್ಟು 1,91,791 ಚ.ಕಿ.ಮೀ. ಉದ್ದಗಲವಾಗಿ ಹರಡಿತು. ಇದು ಸುಮಾರು 350 ಮೈಲಿ ಉದ್ದದ ಕರಾವಳಿ ತೀರವನ್ನು ಹೊಂದಿದೆ. ಸಮುದ್ರಮಟ್ಟಕ್ಕಿಂತ ಸುಮಾರು 2000 ಅಡಿಗಳಷ್ಟು ಅಥವಾ 900ರಿಂದ 1200 ಮೀಟರ್‌ಗಳಷ್ಟು ಎತ್ತರದಲ್ಲಿದೆ. ಪ್ರಸ್ಥಭೂಮಿಯ ಎರಡೂ ಅಂಚುಗಳಲ್ಲಿ ಎರಡು ಬೆಟ್ಟದ ಸಾಲುಗಳಿವೆ. ಕರ್ನಾಟಕದವು ಒಟ್ಟು 30 ಜಿಲ್ಲೆಗಳನ್ನು ಹೊಂದಿದ್ದು, ಬೆಂಗಳೂರು ಅದರ ಅಧಿಕೃತ ರಾಜಧಾನಿಯಾಗಿದೆ.

## ರಾಜ್ಯ ಹಾಗೂ ಜಿಲ್ಲೆಗಳ ಗೆಜೆಟಿಯರ್‌ಗಳು:

ಗ್ಯಾಸೆಟೀಯರ್ ಎಂಬುದು ಆಧುನಿಕ ಕಾಲದ ಒಂದು ಪ್ರಕಟಣೆ. ಇಂಥ ಸಂಕಲನಗಳು ಹಿಂದೆ ಇರಲಿಲ್ಲ ಅಥವಾ ಭಾರತೀಯ ಮನಸ್ಸಿನಲ್ಲಿ ಇಂಥದ್ದೊಂದರ ಕಲ್ಪನೆ ಇರಲೇ ಇಲ್ಲವೆಂದಲ್ಲ. ವಾಯು ಪುರಾಣದಲ್ಲಿರುವ ಭೌಗೋಳಿಕ ವಿವರಣೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವ ಭೂಮಿ, ಹವಾಮಾನ, ಸಂಪನ್ಮೂಲ, ಆಡಳಿತ ವಿಭಾಗಗಳು ಹಾಗೂ ತೆರಿಗೆಗಳ ಬಗೆಗಿನ ವಿವರ ಸಂಸ್ಕೃತದಲ್ಲಿರುವ ವರಾಹಮಿಹಿರನ ಬೃಹತ್ ಸಂಹಿತಾ ಅಥವಾ ಸೋಮೇಶ್ವರನ ಮಾನಸೊಲ್ಲಾಸ ಇವುಗಳಲ್ಲಿರುವ ಮಾಹಿತಿ ಇವೆಲ್ಲವು ಗೆಜೆಟಿಯರನಲ್ಲಿ ಕಂಡುಬರುವ ವಿವರಗಳನ್ನು ತಕ್ಕಮಟ್ಟಿಗೆ ಹೋಲುತ್ತವೆ. ಸ್ಥಳ ಪುರಾಣಗಳು ಮತ್ತು ಪಾಶ್ಚಾತ್ಯ ಪ್ರವಾಸಿಗಳು ಒದಗಿಸುವ ಕಥನಗಳು ಇದೇ ಗುಂಪಿಗೆ ಸೇರುತ್ತವೆ. ವಿಜಯ ನಗರದ ಬಗ್ಗೆ ಪಾಯಿಸ್, ನುನಿಸ್ ಮತ್ತು ಅಬ್ದೂಲ್ ರಜಾಕರ ಕಥನಗಳನ್ನು ಈ ಸಂದರ್ಭದಲ್ಲಿ ಇಲ್ಲಿ ಜ್ಞಾಪಿಸಬಹುದು. ಆದರೆ ಉತ್ಕೃಷ್ಟ ಉದಾಹರಣೆಯೆಂದರೆ ಅಬ್ದುಲ ಫಜಲ್‌ನ ಐನ್–ಎ–ಅಕ್ಬರಿ (ಅಕ್ಬರನ ಸಂಸ್ಥೆಗಳು) ಅಲ್ಲಿ ಅವನು ವಿವರಿಸಿದ ಐನ್‌ಗಳೇ ಗ್ಯಾಸೆಟಿಯರ್‌ನಲ್ಲಿ ಇರತಕ್ಕಂಥ ವಿವರಗಳು.

ಒಂದು ನಾಡು ಇಲ್ಲವೇ ಪ್ರದೇಶವನ್ನು ಅದರ ಎಲ್ಲ ಮುಖಗಳ ಪರಿಚಯ ಮಾಡಿಕೊಡುವ ಉದ್ದೇಶ ಗ್ಯಾಸೆಟಿಯರ್‌ನದು. ನೆಲ, ಭೌಗೋಳಿಕ ಸ್ಥಿತಿಗತಿ, ಪಶು ಸಂಪತ್ತು, ಸಸ್ಯ ಸಂಪತ್ತು, ಮತ್ತು ಇತರ ನೈಸರ್ಗಿಕ ಲಕ್ಷಣಗಳು ಮತ್ತು ಸಂಪನ್ಮೂಲಗಳು, ಜನತೆ, ಮತ, ಧರ್ಮಗಳು, ಜಾತಿಗಳು, ಇತಿಹಾಸ, ಆಡಳಿತ, ಮಳೆ, ಬೆಳೆ, ವಾಣಿಜ್ಯ, ಕೈಕಸುಬುಗಳು, ಸಾರಿಗೆ ಸಂಪರ್ಕ ಸಾಧನಗಳು, ಬೇರೆ ಬೇರೆ ಹಂತಗಳಲ್ಲಿನ ಆಡಳಿತ ವ್ಯವಸ್ಥೆ ಹಾಗೂ ಅವುಗಳಲ್ಲಿ ವಿಕಸನ ಮತ್ತು ಒಂದು ನಾಡು ಮತ್ತು ಅಲ್ಲಿನ ಜನತೆಯನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಇನ್ನಾವುದೇ ವಿಧದ ಮಾಹಿತಿ ಇವೆಲ್ಲವೂ ಗ್ಯಾಸೆಟಿಯರ್‌ನಲ್ಲಿ ಸಮಾವೇಶವಾಗುತ್ತದೆ. ಇಂಥ ಜ್ಞಾನದ ಮಹತ್ವವನ್ನು ವಿಶೇಷವಾಗಿ ಒತ್ತಿ ಹೇಳಬೇಕಾದುದೇನೂ ಇಲ್ಲ. ಒಂದು ಪ್ರದೇಶದ ಬಗ್ಗೆ ಒಂದು ವಿಶ್ವಕೋಶವಾಗಬೇಕೆಂಬುದೇ ಗ್ಯಾಸೆಟಿಯರ್‌ನ ಆಕಾಂಕ್ಷೆ. ಬ್ರಿಟೀಷರು ಈ ದೇಶವನ್ನು ಆಳಲು ಆರಂಭಿಸಿದಾಗ ಈ ದೇಶದಲ್ಲಿ ತಾವು ನೇಮಿಸಿದ ಆಡಳಿತಗಾರರಿಗೆ ಈ ನಾಡಿನ ಪರಿಚಯ ಚೆನ್ನಾಗಿರಬೇಕೆಂದು ಅವರು ಬಯಸಿದರು. ಹೀಗಾಗಿ ಇಂಪೀರಿಯಲ್‌ಗಳಲ್ಲಿ ಪ್ರಕಟಿಸಿದರು. ಸಂಸ್ಥಾನಗಳು ಇಂಥ ಪ್ರಕಟಣೆಗಳನ್ನು ಹೊರತರುವಂತೆ ಅವರನ್ನು ಪ್ರೇರೇಪಿಸಲಾಯಿತು. ಹಾಗಾಗಿಯೇ ಮೈಸೂರು ಗ್ಯಾಸೆಟಿಯರ್‌ನ ಮೂರು ಅವೃತ್ತಿಗಳಾದವು. ಎರಡು ಬಿ.ಎಲ್.ರೈಸ್ (1877 ಮತ್ತು 1897) ಹಾಗೂ ಒಂದು ಸಿ.ಹಯವದನ ರಾವ್ (1927–30ರ ನಡುವೆ) ಅವರುಗಳು ಸಂಪಾದಿಸಿದ ಆವೃತ್ತಿಗಳು. ಇದರ ನಂತರ ಭಾರತದ ಹೊಸ ರಾಜ್ಯದ ಒಂದು ಸಮಗ್ರ ಗ್ಯಾಸೆಟಿಯರ್ ಪ್ರಕಟಿಸುವ ಯತ್ನವಾಗಿದೆ.

ಧಾರವಾಡ ಜಿಲ್ಲಾ ಗ್ಯಾಸೆಟಿಯರ್‌ನ್ನು ಮುಂಬೈ ಸರ್ಕಾರದಿಂದ ಖರೀದಿಸಿ, ಕರ್ನಾಟಕ ಸರ್ಕಾರವು ಅದನ್ನು 1959ರಲ್ಲಿ ಬಿಡುಗಡೆ ಮಾಡಿತ್ತು. ಇದರ ನಂತಗರ ಕೊಡಗು ಜಿಲ್ಲೆಯ ಗ್ಯಾಸೆಟಿಯರ್ 1965ರಲ್ಲಿ ಹೊರಬಂತು. ಅದರ ಸಂಕಲನಕಾರರಾದ ದಿವಂಗತ ಶ್ರೀ ಬಿ.ಎನ್.ಶ್ರೀಸತ್ಯನ್ ಅವರು ಇನ್ನೂ ಐದು (ಚಿತ್ರದುರ್ಗ, ವಿಜಯಪುರ, ಕೋಲಾರ, ಮಂಡ್ಯ ಮತ್ತು ಕಲ್ಬುರ್ಗಿ) ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಹೊರತಂದರು. ಮುಂದೆ ಮುಖ್ಯ ಸಂಪಾದಕರಾದ ಶ್ರೀ ಕೆ.ಅಭಿಶಂಕರ್ ಅವರು ಈ ಕಛೇರಿಯಲ್ಲಿ ಆಗಲೇ ದುಡಿದವರಾಗಿದ್ದು, ಮುಂದಿನ ಒಂಭತ್ತು ಜಿಲ್ಲಾ ಸಂಪುಟಗಳನ್ನು ಹೊರತರಲು ಕಾರಣಿಕರ್ತರಾದರು.

## ಕರ್ನಾಟಕದಲ್ಲಿನ ವಸ್ತು ಸಂಗ್ರಹಾಲಯಗಳು ಐತಿಹಾಸಿಕ ದಾಖಲೆಗಳು ಸ್ಮಾರಕಗಳ ಸುರಕ್ಷತೆ ಮತ್ತು ಸಂರಕ್ಷಣೆ:

1956ರಲ್ಲಿ ಕರ್ನಾಟಕದ ಏಕೀಕರಣವಾದಾಗ ಧಾರವಾಡದ ಕನ್ನಡ ಅಧ್ಯಯನ ಕೇಂದ್ರದ ಕಲಾ ಮತ್ತು ಪುರಾತತ್ವ ವಸ್ತು ಸಂಗ್ರಹಾಲಯ ರಾಜ್ಯಕ್ಕೆ ಸೇರಿತು. ಅಂದಿನಿಂದ ಸರ್ಕಾರಿ ಮತ್ತು ಖಾಸಗಿ ವಲಯದ ಅನೇಕ ವಸ್ತು ಸಂಗ್ರಹಾಲಯಗಳು ಅಸ್ತಿತ್ವಕ್ಕೆ ಬಂದಿದೆ. 30ಕ್ಕಿಂತ ಹೆಚ್ಚು ವಸ್ತು ಸಂಗ್ರಹಾಲಯಗಳನ್ನು ಪಡೆದಿರುವುದು ಕರ್ನಾಟಕದ ಒಂದು ಹೆಮ್ಮೆಯ ಸಂಗತಿಯಾಗಿದೆ.

ರಾಜ್ಯ ಸರ್ಕಾರದ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆಯ ಮಾರ್ಗದರ್ಶನದಲ್ಲಿ ಒಂದು ಕಲಾಶಾಲೆಯು ಸೇರಿದಂತೆ ವಸ್ತು ಸಂಗ್ರಹಾಲಯಗಳು ಎಂದು ವರ್ಗೀಕರಿಸಲಾಗಿರುವ 11 ಸಂಸ್ಥೆಗಳಿವೆ. ಭಾರತದ ಪುರಾತತ್ವ ವಿಭಾಗದ ಮೇಲ್ವಿಚಾರಣೆಯಲ್ಲಿ 5 ವಸ್ತು ಸಂಗ್ರಹಾಲಯಗಳೂ, 5 ಶಿಲ್ಪಶಾಲೆ (ಕಲ್ಪ್ಚರ್ ಷೆಡ್)ಗಳೂ ಇವೆ. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯು ಬೆಂಗಳೂರಲ್ಲಿ ಮುಖ್ಯ ಕಛೇರಿ ಇರುವ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ವಸ್ತು ಸಂಗ್ರಹಾಲಯದ ನಾಯಕತ್ವದಲ್ಲಿ ಮೂರು ಸಂಸ್ಥೆಗಳನ್ನು ಹೊಂದಿದೆ. ರಾಜ್ಯದಲ್ಲಿ 3 ವಿಶ್ವವಿದ್ಯಾಲಯ ವಸ್ತುಸಂಗ್ರಹಾಲಯಗಳು ಅನೇಕ ಖಾಸಗಿ ವಸ್ತುಸಂಗ್ರಹಾಲಯಗಳು ಇರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

1) ಸರ್ಕಾರಿ ವಸ್ತು ಸಂಗ್ರಹಾಲಯ ಬೆಂಗಳೂರು: ಸಾರ್ವಜನಿಕರು ದಾನ ಮಾಡಿದ ಮಾದರಿಗಳನ್ನು ಇಟ್ಟುಕೊಂಡು 1865ರಲ್ಲಿ ಬಾಡಿಗೆ ಕಟ್ಟಡವೊಂದರಲ್ಲಿ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯ ಕಾರ್ಯಾರಂಭ ಮಾಡಿತು. ಪಾಶ್ಚಿಮಾತ್ಯ ದೇಶಗಳಲ್ಲಿ ಅನುಸರಿಸುವ ಮಾದರಿಯಲ್ಲಿ ಸರ್ಕಾರವು ಕಬ್ಬನ್ ಪಾರ್ಕಿನಲ್ಲೊಂದು ಪ್ರತ್ಯೇಕ ಕಟ್ಟಡವನ್ನು ಕಟ್ಟಿಸಿತು. ವಸ್ತುಸಂಗ್ರಹಾಲಯವು 1819ರಲ್ಲಿ ಹೊಸ ಕಟ್ಟಡಕ್ಕೆ ವರ್ಗಾವಣೆಯಾಗಿ 1880ರಲ್ಲಿ ಕಾರ್ಯಾರಂಭಿಸಿತು.

2) ಮಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯ: ಮಂಗಳೂರಿನ ಶ್ರೀಮಂತಿನಿ ಬಾಯಿ ಸ್ಮಾರಕ ವಸ್ತುಸಂಗ್ರಹಾಲಯವು ಪ್ರವಾಸಿಗಳಿಗೆ ಒಂದು ಪ್ರಮುಖ ಆಕರ್ಷಣೆಯಾಗಿದೆ.

3) ಶಿವಮೊಗ್ಗ ಜಿಲ್ಲಾ ವಸ್ತು ಸಂಗ್ರಹಾಲಯ: ಜಿಲ್ಲಾ ಕೇಂದ್ರವಾದ ಶಿವಮೊಗ್ಗದಲ್ಲಿ ವಸ್ತುಸಂಗ್ರಹಾಲಯ ಬೇಕೆಂಬ ಒತ್ತಾಯ ಬಲವಾಗಿತ್ತು. ಅನೇಕ ಸ್ಥಳೀಯ ಜನರ ಮತ್ತು ಅಂದಿನ ಡೆಪ್ಯುಟಿ ಕಮೀಷನರ್ ಆಗಿದ್ದ ಎಚ್.ಎಲ್.ನಾಗೇಗೌಡರ ಸಹಾಯ ಮತ್ತು ಉತ್ಸಾಹದಿಂದ ಶಿವಮೊಗ್ಗ ನಗರದ ಇಂದಿನ ಗ್ರಂಥ ಭಂಡಾರದ ಕಟ್ಟಡದಲ್ಲಿ 1962ರಲ್ಲಿ ವಸ್ತುಸಂಗ್ರಹಾಲಯವೊಂದನ್ನು ಪ್ರಾರಂಭಿಸಲಾಯಿತು.

4) ಕಲ್ಬುರ್ಗಿ ವಸ್ತು ಸಂಗ್ರಹಾಲಯ: ಕಲ್ಬುರ್ಗಿಯ ಸೇಡಂ ರಸ್ತೆಯಲ್ಲಿರುವ ಸಮಾಧಿಗಳನ್ನು ಪ್ರಾಂತೀಯ ವಸ್ತುಸಂಗ್ರಹಾಲಯಕ್ಕೋಸ್ಕರ ನವೀಕರಿಸಲಾಯಿತು. ಚಿತ್ತಾಪುರ ತಾಲ್ಲೂಕಿನ ಸನ್ನತಿ ನಿವೇಶನವನ್ನು 1965ರಲ್ಲಿ ಕಂಡುಹಿಡಿಯಲಾಯಿತು. ಈ ನಿವೇಶನದ ಮೇಲ್ಮೈ ಶೋಧನೆಯಿಂದ ದೊರೆತ ಜೇಡಿಮಣ್ಣಿನ ಬೊಂಬೆಗಳು, ಶಿಲಾಮೂರ್ತಿಗಳು ಮತ್ತು ಶಾಸನಗಳನ್ನು ಈ ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ. 1973–74ರ ವರ್ಷಾವಧಿಯಲ್ಲಿ ಕ್ರಿ.ಪೂ.2ನೆಯ ಶತಮಾನದಿಂದ ಕ್ರಿ.ಶ.11ನೇ ಶತಮಾನದವರೆಗಿನ ಅಪಾರವಾದ ಶಿಲ್ಪಗಳು, ನಾಣ್ಯಗಳು ಪ್ರಾಗೈತಿಹಾಸಿಕ ಆಯುಧಗಳನ್ನು ಈ ವಸ್ತುಸಂಗ್ರಹಾಲಯದಲ್ಲಿ ಸೇರಿಸಲಾಯಿತು.

5) ಬಸವಕಲ್ಯಾಣದ ವಸ್ತುಸಂಗ್ರಹಾಲಯ: ಈ ವಸ್ತುಸಂಗ್ರಹಾಲಯದಲ್ಲಿರುವ ಶಾಸನಗಳು, ಶಿಲ್ಪಗಳು ಮುಂತಾದ ವಸ್ತುಗಳ ಮಾದರಿಯಲ್ಲಿ ಬಹುಪಾಲು ಸಂಪದ್ಯುಕ್ತ ಸಂಸ್ಕೃತಿ ಪರಂಪರೆಯನ್ನು ಪಡೆದಿರುವ ಈ ಪ್ರಾಂತದಿಂದಲೇ ಬಂದಿವೆ.

6) ಮಡಿಕೇರಿ ವಸ್ತುಸಂಗ್ರಹಾಲಯ: 1971ರಲ್ಲಿ ಪ್ರಾರಂಭವಾದ ಮಡಿಕೇರಿ ವಸ್ತುಸಂಗ್ರಹಾಲಯವು ಸದ್ಯದಲ್ಲಿ ಹಳೆಯ ಚರ್ಚ್ ಒಂದರಲ್ಲಿದೆ. ತೀರ್ಥಂಕರರ ವಿಗ್ರಹಗಳು ಹೆಚ್ಚಾಗಿರುವ ಅನೇಕ ಶಿಲ್ಪಗಳು ಕೊಡಗಿನ ದೊರೆಗಳಿಗೆ ಸೇರಿದ ಅಸಂಖ್ಯವಾದ ನಾಣ್ಯಗಳು ಮತ್ತು ಹಸ್ತಪ್ರತಿಗಳು ಈ ವಸ್ತುಸಂಗ್ರಹಾಲಯದಲ್ಲಿವೆ.

7) ಚಿತ್ರದುರ್ಗ ವಸ್ತುಸಂಗ್ರಹಾಲಯ: ಚಿತ್ರದುರ್ಗದ ಸ್ಥಳೀಯ ಪ್ರಾಚೀನ ಅವಶೇಷಗಳ ವಸ್ತುಸಂಗ್ರಹಾಲಯವು ದಿ.ಹಲ್ಲೂರು ಶ್ರೀನಿವಾಸ ಜೋಯಿಸ್ ಅವರ ವೈಯಕ್ತಿಕ ಪ್ರಯತ್ನಗಳ ಫಲವಾಗಿದೆ. 1947ರಲ್ಲಿ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ಇಲಾಖೆಯವರು ಚಂದ್ರವಳ್ಳಿ ನಿರ್ದೇಶನ ಉತ್ಖನನ ನಡೆಸಿದಾಗ ದೊರೆತ ಪ್ರಾಚೀನ ಅವಶೇಷಗಳು ಮಾತ್ರ ಇಲ್ಲಿದ್ದವು.

8) ಕಿತ್ತೂರು ವಸ್ತುಸಂಗ್ರಹಾಲಯ: ವಿದ್ಯಾಮಂತ್ರಿಗಳಾಗಿದ್ದ ಎಸ್.ಆರ್.ಕಂಠಿಯವರ ಅಪಾರ ಆಸಕ್ತಿಯ ಕಾರಣ ಕಿತ್ತೂರಿನ ರಾಣಿ ಚೆನ್ನಮ್ಮನ ಸ್ಮಾರಕವಾಗಿ ವಸ್ತುಸಂಗ್ರಹಾಲಯವೊಂದು 1967ರಲ್ಲಿ ಅಸ್ತಿತ್ವಕ್ಕೆ ಬಂದಿತು.

9) ಹಾಸನ ವಸ್ತುಸಂಗ್ರಹಾಲಯ: ನಗರದ ಮಧ್ಯದ ಮಹಾರಾಜಾ ಪಾರ್ಕ್‌ನಲ್ಲಿರುವ ನಗರಸಭೆಯವರು ನೀಡಿರುವ ಸಣ್ಣ ಕಟ್ಟಡವೊಂದರಲ್ಲಿ ಹಾಸನ ಜಿಲ್ಲಾ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಯಿತು. ಹೊಯ್ಸಳರ ಕಾಲದ ವಿಶ್ವ ಪ್ರಸಿದ್ಧವಾದ ಬೇಲೂರು, ಹಳೇಬೀಡುಗಳ ಕಲೆ ಶಿಲ್ಪಗಳ ಬಗೆಗೆ ಪರಿಚಯ ನೀಡುವುದೇ ಈ ವಸ್ತುಸಂಗ್ರಹಾಲಯದ ಉದ್ದೇಶ.

10) ರಾಯಚೂರು ವಸ್ತುಸಂಗ್ರಹಾಲಯ: ರಾಯಚೂರಿನ ನಗರ ಸಭೆಯವರು ಒದಗಿಸಿರುವ ನಗರ ಪಾರ್ಕಿನ ಮಧ್ಯೆ ಇರುವ ಹಳೆಯ ಮುನ್ಸಿಪಲ್ ವಿಶ್ರಾಂತಿ ಗೃಹದಲ್ಲಿ ಈ ವಸ್ತುಸಂಗ್ರಹಾಲಯವಿದೆ.

11) ವೆಂಕಟಪ್ಪ ಕಲಾಶಾಲೆ: ಅಂತರ್ ರಾಷ್ಟ್ರೀಯ ಪ್ರಸಿದ್ಧಿ ಪಡೆದ ಕಲಾವಿದರಾದ ದಿವಂಗತ ಕೆ.ವೆಂಕಟಪ್ಪನವರ ಸೋದರಳಿಯ ರಾಮರಾಜು ಅವರು ವೆಂಕಟಪ್ಪನವರ ಕಲಾಕೃತಿಗಳನ್ನು ರಾಜ್ಯ ಸರ್ಕಾರಕ್ಕೆ ಕೊಡುಗೆಯಾಗಿ ನೀಡಿದಾಗ ರಾಜ್ಯ ರಾಜಧಾನಿಯಲ್ಲಿ ಕಲಾಶಾಲೆಯೊಂದನ್ನು ಸ್ಥಾಪಿಸುವ ರಾಜ್ಯ ಸರ್ಕಾರದ ಕನಸು ಕಾರ್ಯರೂಪಕ್ಕೆ ಬಂದಿತು. ಕೆ.ವೆಂಕಟಪ್ಪನವರ ಪ್ರಸಿದ್ಧ ವರ್ಣಚಿತ್ರಗಳು, ಪ್ಲಾಸ್ಟರ್ ಆಫ್ ಪ್ಯಾರೀಸ್ ಕೃತಿಗಳ ಮತ್ತು ಸಂಗೀತ ವಾದ್ಯಗಳ ಸಂಗ್ರಹವನ್ನೂ ಮೂಲವಾಗಿಟ್ಟುಕೊಂಡು 1966ರಲ್ಲಿ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದ ಪಕ್ಕದಲ್ಲಿ ಒಂದು ಕಲಾಶಾಲೆಯನ್ನು ಸ್ಥಾಪಿಸಲಾಯಿತು.

## ಐತಿಹಾಸಿಕ ದಾಖಲೆಗಳು ಸ್ಮಾರಕಗಳ ಸುರಕ್ಷತೆ ಮತ್ತು ಸಂರಕ್ಷಣೆ:

ಯಾವುದೇ ದೇಶದ ಚರಿತ್ರೆಯ ರಚನೆಗೆ ಅಥವಾ ಕ್ರಮಬದ್ಧ ಅಧ್ಯಯನಕ್ಕೆ ಮೂಲಾಧಾರಗಳು ಅಥವಾ ದಾಖಲೆಗಳು ಅತ್ಯಗತ್ಯ. ದಾಖಲೆಗಳಿಲ್ಲದೆ ಪ್ರಮಾಣಬದ್ಧವಾದ ಇತಿಹಾಸ ರಚನೆ ಸಾಧ್ಯವಿಲ್ಲ. ಆಧಾರಗಳೇ ಇತಿಹಾಸದ ಜೀವಾಳ. ಇವು ಆಧಾರಸ್ತಂಭಗಳು. ಇವು ಇತಿಹಾಸವೆಂಬ ಭವ್ಯ ಸೌಧ ನಿರ್ಮಾಣದ ಕಚ್ಚಾ ಸಾಮಗ್ರಿಗಳಿದ್ದಂತೆ. ಇವು ವಸ್ತುವಿನ ಚರಿತ್ರೆಯ ರಚನೆಗೆ ಮಾಹಿತಿ ನೀಡುವುದರ ಜೊತೆಗೆ ಇತಿಹಾಸವನ್ನು ವಿಜ್ಞಾನವಾಗಿಸುತ್ತವೆ. ಕರ್ನಾಟಕದ ಐತಿಹಾಸಿಕ ದಾಖಲೆಗಳು ಈ ಕೆಳಗಿನಂತಿವೆ.

### ಸಾಹಿತ್ಯ ಆಧಾರಗಳು:

ಕರ್ನಾಟಕ ಐತಿಹ್ಯ ರಚನೆಗೆ ಸಾಹಿತ್ಯ ಆಧಾರಗಳು ಪ್ರಮುಖವಾಗಿವೆ. ಇವುಗಳನ್ನು ದೇಶೀಯ ಸಾಹಿತ್ಯದ ಆಧಾರಗಳು ಮತ್ತು ವಿದೇಶಿ ಸಾಹಿತ್ಯದ ಆಧಾರಗಳು ಎಂದು 2 ಭಾಗಗಳಾಗಿ ವಿಂಗಡಿಸಲಾಗಿದೆ.

ದೇಶೀಯ ಸಾಹಿತ್ಯ ಆಧಾರಗಳು ಪಾಳಿ, ಪ್ರಾಕೃತ, ಸಂಸ್ಕೃತ, ಕನ್ನಡ, ತೆಲುಗು, ಮರಾಠಿ ಮತ್ತು ತಮಿಳು ಭಾಷೆಗಳಲ್ಲಿ ರಚನೆಯಾದ ಸಾಹಿತ್ಯಿಕ ದಾಖಲೆಗಳು. ಐತಿಹಾಸಿಕ ಮಾಹಿತಿಯನ್ನು ಒಳಗೊಂಡಿದ್ದು ಆಯಾ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ತಿಳಿಸುತ್ತವೆ.

**ಧಾರ್ಮಿಕ ಸಾಹಿತ್ಯ:**

ವೇದಗಳು, ಬ್ರಾಹ್ಮಣಕಗಳು, ಪುರಾಣಗಳು, ಕಾವ್ಯಗಳು ಧಾರ್ಮಿಕ ಸಾಹಿತ್ಯದ ಗುಂಪಿಗೆ ಸೇರುತ್ತದೆ. ಇವು ಇತಿಹಾಸವನ್ನು ಗುರಿಯಾಗಿಟ್ಟುಕೊಂಡು ಬರೆದ ರಚನೆಗಳಲ್ಲ. ಆದರೂ ಇವು ಐತಿಹಾಸಿಕ ಅಂಶಗಳನ್ನು ಒಳಗೊಂಡಿವೆ. ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರ ಬಗ್ಗೆ ಪುರಾಣಗಳಲ್ಲಿ ಮಾಹಿತಿ ಸಿಗುತ್ತದೆ. ರಾಮಾಯಣ, ಮಹಾಭಾರತ ಕಾವ್ಯಗಳಲ್ಲಿ ಕರ್ನಾಟಕದ ನುಡಿ, ಜನಪದ, ಭೂಗೋಳದ ಉಲ್ಲೇಖ ದೊರೆಯುತ್ತದೆ. ಪ್ರಾಚೀನ ತಮಿಳು ಕಾವ್ಯಗಳಾದ ಶಿಲಪ್ಪಾಧಿಕಾರಂ, ತೋಲ್ಕಾಪಿಯಂ, ತಿರುಕ್ಕೊರಳ್, ರಾಜಶೇಖರನ ಕಾವ್ಯಮೀಮಾಂಸೆ, ಮಾರ್ಕಂಡೇಯ ಪುರಾಣ, ಪಾಣಿನಿಯ ಅಷ್ಟಾಧ್ಯಾಯಿ, ನೃಪತುಂಗನ ಕವಿರಾಜಮಾರ್ಗಗಳಲ್ಲಿ ಪ್ರಾಚೀನ ಕರ್ನಾಟಕ ಭೂಗೋಳ, ಕರ್ನಾಟಕತ್ವದ ಮೂಲ ಮತ್ತು ಪ್ರಾಚೀನತೆ, ಕನ್ನಡ ಭಾಷಾ ಉಗಮ ಮತ್ತು ವಿಕಾಸ ತಿಳಿಯಲು ನೆರವಾಗುತ್ತದೆ. ಬೌದ್ಧ ಕೃತಿಗಳಾದ ದೀಪವಂಶ ಮತ್ತು ಮಹಾವಂಶಗಳು ಅಶೋಕ ಚಕ್ರವರ್ತಿ ಬೌದ್ಧ ಧರ್ಮ ಪ್ರಚಾರಕ್ಕೆಂದು ಬನವಾಸಿ ಮತ್ತು ಮೈಸೂರುಗಳಿಗೆ ಮತ ಪ್ರಚಾರಕರನ್ನು ಕಳುಹಿಸಿದ್ದನೆಂದು ತಿಳಿಸುತ್ತವೆ. ಕರ್ನಾಟಕ ಪದದ ಉತ್ಪತ್ತಿ, ಅದರ ಪ್ರಾಚೀನತೆ, ಬುಡಕಟ್ಟುಗಳ ಪ್ರಭಾವ, ವಿದೇಶಗಳೊಡನೆ ಭಾರತದ ಸಂಬಂಧವನ್ನು ತಿಳಿಯಲು ರಾಮಾಯಣ, ಮಹಾಭಾರತ ಕಾವ್ಯಗಳು ನೆರವಾಗುತ್ತವೆ. ಅಲ್ಲದೆ ವೇದಗಳು, ಉಪನಿಷತ್‌ಗಳು, ಪ್ರಾಚೀನ ಸಂಸ್ಕೃತ ಹಾಗೂ ಸಂಘಂ ಕೃತಿಗಳು ಇತಿಹಾಸ ಅಧ್ಯಯನಕ್ಕೆ ಸಹಾಯಕವಾಗಿವೆ.

ಐತಿಹಾಸಿಕ ಸಾಹಿತ್ಯ:

ಐತಿಹಾಸಿಕ ಸಾಹಿತ್ಯಗಳು ರಾಜರ ಆಸ್ಥಾನ ಲೇಖಕರಿಂದ ರಚಿತ ರಾಜಾವಳಿಗಳು, ವೃತ್ತಾಂತಗಳು, ಆತ್ಮಚರಿತ್ರೆಗಳು, ನಾಟಕಗಳು, ಕಾದಂಬರಿ, ವ್ಯಾಕರಣ, ಗಣಿತ, ಜೀವನಚರಿತ್ರೆ, ರಾಜನೀತಿ, ವಿಶ್ವಕೋಶ, ಕಾವ್ಯ, ವಚನ, ಕೌಫಿಯತ್, ಪತ್ರಾಗಾರ ಮೊದಲಾದ ಪ್ರಕಾರಗಳಲ್ಲಿ ದೊರೆತಿದೆ.

ಮೌರ್ಯರ ಕಾಲದಲ್ಲಿ ರಚನೆಯಾದ ಪ್ರಾಕೃತ, ಸಂಸ್ಕೃತ, ಜೈನ ಮತತು ಬೌದ್ಧ ಕೃತಿಗಳಲ್ಲಿ ದಕ್ಷಿಣ ಭಾರತದ ಅದರಲ್ಲೂ ಕರ್ನಾಟಕದ ಪ್ರಸ್ತಾಪವಿದೆ. ಕೌಟಿಲ್ಯನ ಅರ್ಥಶಾಸ್ತ್ರವು ದಖನ್‌ನ ಮೌರ್ಯರ ಆಡಳಿತವನ್ನು ತಿಳಿಸುತ್ತದೆ. ಭದ್ರಬಾಹು ರಚಿಸಿದ ಭದ್ರಬಾಹು ಚರಿತ, ಕಲ್ಪಸೂತ್ರವು ಚಂದ್ರಗುಪ್ತ ಮೌರ್ಯನು ಶ್ರವಣಬೆಳಗೊಳಕ್ಕೆ ಬಂದು ನೆಲೆಸಿ ಇಲ್ಲೇ ನಿರ್ವಾಣ ಹೊಂದಿದನೆಂದು ಹೇಳುತ್ತವೆ.

ಶಾತವಾಹನ ದೊರೆ ಹಾಲನು ಪ್ರಾಕೃತದಲ್ಲಿ ಬರೆದ ಗಾಥಾಸಪ್ತಶತಿ ಕೃತಿಯಲ್ಲಿ ಅನೇಕ ಕನ್ನಡ ಪದಗಳು ಇರುವುದರಿಂದ ಕರ್ನಾಟಕದ ಬಿಜಾಪುರ, ಬನವಾಸಿ, ಚಿತ್ರದುರ್ಗಗಳವರೆಗೆ ಶಾತವಾಹನ ಸಾಮ್ರಾಜ್ಯ ವಿಸ್ತರಿಸಿತ್ತೆಂದು ತಿಳಿಯುತ್ತದೆ. ಅವನ ಲೀಲಾವತಿ ಗ್ರಂಥವು ಸಿಲೋನ್ ದಂಡಯಾತ್ರೆಯನ್ನು ಕುರಿತು ಹೇಳುತ್ತದೆ. ಗುಣಾಢ್ಯನ ಬೃಹತ್ ಕಥೆ, ವಾಯುಪುರಾಣ ಶಾತವಾಹನರ ಬಗ್ಗೆ ಮಾಹಿತಿ ನೀಡುತ್ತವೆ.

ಶಂಕರ ಲಹರಿಗಳು, ರಾಮಾನುಜರ ವೇದಾಂತ ಸಾರ, ವೇದಾಂತ ದೀಪಿಕ, ಬಸವಣ್ಣನ ವಚನಗಳು, ಭೀಮಕವಿಯ ಬಸವ ಪುರಾಣ, ಮಧ್ವಾಚಾರ್ಯರ ಭಾಷ್ಯಗಳು, ವಿಶಿಷ್ಟಾದ್ವೈತ, ದ್ವೈತ ಸಿದ್ಧಾಂತಗಳ ಬಗ್ಗೆ ತಿಳಿಯಲು ನೆರವಾಗುತ್ತವೆ. 12ನೇ ಶತಮಾನದಲ್ಲಿ ಶಿವಶರಣರು ಹಾಗೂ ಬಸವೇಶ್ವರರು ರಚಿಸಿದ ವಚನಗಳು ಆಗಿನ ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತವೆ.

ವಿಜ್ಜಿಕೆಯ ಕೌಮುದಿ ಮಹೋತ್ಸವ ಸಂಸ್ಕೃತ ನಾಟಕವು ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ತಿಳಿಸುತ್ತದೆ. ಸತ್ಯಾಶ್ರಯನ ಆಸ್ಥಾನದಲ್ಲಿದ್ದ ರನ್ನನು ಬರೆದ ಅಜಿತಪುರಾಣದಲ್ಲಿ ಇಮ್ಮಡಿ ತೈಲಪನಿಗೆ ಸಂಬಂಧಿಸಿದ ಮಾಹಿತಿ ಮತ್ತು ಗದಾಯುದ್ಧದಲ್ಲಿ ಚಾಲುಕ್ಯ ಸಂತತಿಯ ಉಗಮದ ಕುರಿತು ಮಾಹಿತಿಗಳಿವೆ. ಹರ್ಷನ ಹರ್ಷಚರಿತೆ, ದಂಡಿಯ ದಶಕುಮಾರ ಚರಿತೆ, ಅವಂತಿ ಸುಂದರ ಕಥಾಗಳು ಚಾಲುಕ್ಯರ ಬಗ್ಗೆ ಪ್ರಸ್ತಾಪಿಸುತ್ತವೆ. ಆರನೇ ವಿಕ್ರಮಾದಿತ್ಯನ ಆಸ್ಥಾನ ಕವಿ ಬಿಲ್ಹಣನು ರಚಿಸಿದ ವಿಕ್ರಮಾಂಕದೇವಚರಿತಂ 6ನೇ ವಿಕ್ರಮಾದಿತ್ಯನ ಜೀವನ ಸಾಧನೆಗಳನ್ನು ತಿಳಿಯಲು ನೆರವಾಗುತ್ತವೆ. 2ನೇ ಸೋಮೇಶ್ವರನ ಕಾಲದ ಯಶಸ್ಥಿಲಕ, ಚಂಪು ಮತ್ತು ವಿಜ್ಞಾನೇಶ್ವರನ ಮಿತಾಕ್ಷರ ಸಂಹಿತೆಗಳು ಕಲ್ಯಾಣಿ ಚಾಲುಕ್ಯರ ಕಾಲದ ಸಾಮಾಜಿಕ ಜೀವನ ಮತ್ತು ನ್ಯಾಯ ನಿಬಂಧನೆಗೆ ಸಂಬಂಧಿಸಿದ ಮಾಹಿತಿ ನೀಡುತ್ತವೆ.

ಗಂಗರ ರಾಜನೀತಿ ಅವರ ಆರ್ಥಿಕ ಸಾಮಾಜಿಕ ಧಾರ್ಮಿಕ ಸ್ಥಿತಿಗಳನ್ನು ತಿಳಿಯಲು ಚಾಮುಂಡರಾಯನ ಚಾಮುಂಡರಾಯ ಪುರಾಣ, ಶ್ರೀಪುರುಷನ ಗಜಶಾಸ್ತ್ರ, 2ನೇ ಶಿವಮಾರನ ಗಜಾಷ್ಟಕ, ಸೇತುಬಂಧ ಶಿವಮಾರ ತರ್ಕಗಳು ನೆರವಾಗುತ್ತವೆ.

ಅಮೋಘವರ್ಷನ ಕವಿರಾಜಮಾರ್ಗವು ಕನ್ನಡ ಭಾಷೆಯ ಬೆಳವಣಿಗೆ, ಕನ್ನಡನಾಡಿನ ಭೌಗೋಳಿಕ ಎಲ್ಲೆಯನ್ನು ಮತ್ತು ಸಮಕಾಲೀನ ಸಾಮಾಜಿಕ ಸ್ಥಿತಿಗತಿ ತಿಳಿಯಲು ನೆರವಾಗುತ್ತದೆ. ಶಿವಕೋಟ್ಯಾಚಾರ್ಯನ ವಡ್ಡಾರಾಧನೆ, ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯವು ಪಂಪನ ಪೋಷಕ ಇಮ್ಮಡಿ ಅರಿಕೇಸರಿಯ ಸಾಹಸವನ್ನು ವರ್ಣಿಸುತ್ತವೆ. ಪಂಪ ಭಾರತವು ರಾಷ್ಟ್ರಕೂಟರ ಕಾಲದ ಸಾಮಾಜಿಕ, ಧಾರ್ಮಿಕ ಪರಿಸ್ಥಿತಿ ತಿಳಿಯಲು ನೆರವಾಗುತ್ತದೆ.

ರಾಜಾದಿತ್ಯನ ವ್ಯವಹಾರ ಗಣಿತವು ದೇವಗಿರಿಯ 5ನೇ ಭಿಲ್ಲಣ ಮತ್ತು ಹೊಯ್ಸಳ ದೊರೆ 2ನೇ ಬಲ್ಲಾಳನ ನಡುವೆ ಆದ ಸೊರಟೂರು ಕದನವನ್ನು ತಿಳಿಯಲು ಸಹಕಾರಿಯಾಗುತ್ತದೆ. ನಾಗಚಂದ್ರನ ರಾಮಚಂದ್ರ ಚರಿತ ಪುರಾಣ, ಹರಿಹರನ ರಗಳೆಗಳು, ಗಿರಿಜಾ ಕಲ್ಯಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ ಸಿದ್ದರಾಮ ಪುರಾಣ, ರುದ್ರಭಟ್ಟನ ಜಗನ್ನಾಥ ವಿಜಯ, ಜನ್ನನ ಯಶೋಧರ ಚರಿತೆ, ನಂಜುಂಡನ ಕುಮಾರ ರಾಮನ ಕಥೆ, 2ನೇ ವಿದ್ಯಾ ಚಕ್ರವರ್ತಿಯ ಗದ್ಯಕರ್ಣಾಮೃತ, ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ ಕೃತಿಗಳಲ್ಲಿ ಹೊಯ್ಸಳರ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಮಾಹಿತಿ ದೊರೆಯುತ್ತದೆ.

ವಿಜಯನಗರ ಸಾಮ್ರಾಜ್ಯದ ಇತಿಹಾಸ ತಿಳಿಯಲು ಅಸಂಖ್ಯಾತ ಕೃತಿಗಳು ಲಭ್ಯವಾಗಿವೆ. ಬುಕ್ಕರಾಯನ ಸೊಸೆ ಗಂಗಾಂಬಿಕೆ ಬರೆದ ಮಧುರಾ ವಿಜಯಂ ಕಂಪಣ್ಣನ ದಕ್ಷಿಣದ ದಿಗ್ವಿಜಯಗಳನ್ನು ಮತ್ತು ಆಗಿನ ಧಾರ್ಮಿಕ ದುಸ್ಥಿತಿಯನ್ನು ವಿವರಿಸುತ್ತದೆ. ನಂಜುಂಡನ ಕುಮಾರ ರಾಮನ ಕಥೆ, ವಿದ್ಯಾರಣ್ಯರ ರಾಜಕಾಲ ನಿರ್ಣಯ, ವಿದ್ಯಾರಣ್ಯ ಕಾಲಜ್ಞಾನ, ವಿದ್ಯಾರಣ್ಯ ವೃತ್ತಾಂತ, ವೇದಾಂತದೇಶಿಕರ ಯಾದವಾಭ್ಯುದಯಂ, ರಾಜನಾಥ ಡಿಂಡಿಮನ ಸಾಳ್ವಾಭ್ಯುದಯಂ, ವೀರಭದ್ರನ ಜೈಮಿನಿ ವಿಜಯಂ, ನಂದಿ ಮಲ್ಲಯಯ್ಯನ ವರಾಹ ಪುರಾಣಗಳು, ತುಳು ಸಂತತಿಯ ಮೇಲೆ ಬೆಳಕು ಚೆಲ್ಲುತ್ತವೆ.

ಸಮಕಾಲೀನ ಮುಸ್ಲಿಂ ಚರಿತ್ರೆಕಾರರು ಬರೆದ ಪರ್ಶಿಯನ್ ವೃತ್ತಾಂತಗಳು, ಬಹಮನಿ ಸುಲ್ತಾನರು ಹಾಗೂ ಬಿಜಾಪುರದ ಆದಿಲ್‌ಷಾಹಿಗಳ ಇತಿಹಾಸ ತಿಳಿಯಲು ನೆರವಾಗುತ್ತವೆ. ಅವುಗಳೆಂದರೆ ಇಸಾಮಿಯ ಫತ್ಹ್–ಉಸ್–ಸಲಾತಿನ್, ತಬ ತಬನ ಬರ್ಹಾನ್–ಇ–ಮಾಸಿರ್, ಫೆರಿಸ್ತಾನ ತಾರೀಖ–ಇ–ಫೆರಿಸ್ತಾ, ಷಿರಾಜಿಯ ತುಜಕಿರಾತ್–ಉಲ್–ಮುಲ್ಕ, ಮಹಮ್ಮದ್ ಗವಾನನ ಮಾನಿಜರುಲ್ ಇನ್ಸಾ, ಸುಲ್ತಾನ 2ನೇ ಇಬ್ರಾಹಿಂನ ಕಿತಾಬ–ಇ–ನವರಸ್‌ಗಳು.

2. ವಿದೇಶಿಯರ ಬರವಣಿಗೆಗಳು: ವಿದೇಶಿಯ ಬರವಣಿಗೆಗಳ ಜೊತೆಗೆ ವಿದೇಶಿ ರಾಯಭಾರಿಗಳು ವರ್ತಕರು, ಧರ್ಮಪ್ರಚಾರಕರು, ವಿದ್ವಾಂಸರ ಉಲ್ಲೇಖಗಳು ಇತಿಹಾಸ ರಚನೆಗೆ ಬಹು ಉಪಯುಕ್ತವಾಗಿವೆ. ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಬಂದಿದ್ದ ಗ್ರೀಕ್ ಸೇನಾಧಿಕಾರಿ ಸಲ್ಯೂಕಸ್‌ನ ರಾಯಭಾರಿ ಮೆಗಾಸ್ಥನೀಸ್ ತನ್ನ ಇಂಡಿಕಾ ಗ್ರಂಥದಲ್ಲಿ ದಕ್ಷಿಣ ಭಾರತದ ಹಲವು ವಿವರಣೆಗಳನ್ನು ನೀಡಿದ್ದು ಇದರಲ್ಲಿ ಪಾಂಡ್ಯ ರಾಜ್ಯದ ಬಗ್ಗೆ ಉಲ್ಲೇಖ ಸಿಗುತ್ತವೆ. ಗ್ರೀಕ್ ಅನಾಮಧೇಯ ರಚಿಸಿದ ಪೆರಿಪ್ಲಸ್ ಆಫ್ ಎರಿತ್ರಿಯನ್ ಸಿ ಗ್ರಂಥವು ಶಾತವಾಹನರ ರಾಜಧಾನಿ ಪೈಥಾನ್, ತಗಾರ ನಾಸಿಕ್ ಗೋವರ್ಧನ ವೈಜಯಂತಿಪುರ ಹಾಗೂ ಪ್ರಮುಖ ಬಂದರುಗಳಾದ ಸೊಪಾರ, ಕಲ್ಯಾಣ, ಬ್ರೋಚ್, ತಮಿಳುನಾಡಿನ ಅನೇಕ ಬಂದರುಗಳು ವ್ಯಾಪಾರ ಕೇಂದ್ರಗಳು ಹಾಗೂ ಪ್ರಾಚೀನ ಪಟ್ಟಣಗಳನ್ನು ಉಲ್ಲೇಖಿಸಿದೆ. ಪ್ಲಿನಿ ತನ್ನ ಪ್ರಾಕೃತಿಕ ಭೂಗೋಳ ಎಂಬ ಕೃತಿಯಲ್ಲಿ ಕ್ರಿ.ಶ.75ರಲ್ಲಿ ಕರ್ನಾಟಕ ಹಾಗೂ ಈಜಿಪ್ಟ್ ಗ್ರೀಕ್ ರೋಮನ್ ಸಾಮ್ರಾಜ್ಯದೊಂದಿಗೆ ಹೊಂದಿದ್ದ ವಾಣಿಜ್ಯ ಹಾಗೂ ಸಾಂಸ್ಕೃತಿಕ ಸಂಬಂಧವನ್ನು ವಿವರಿಸಿದ್ದಾನೆ. ಅಲೆಗ್ಸಾಂಡ್ರಿಯಾ ಪಟ್ಟಣದಲ್ಲಿ ನೆಲೆಸಿದ್ದ ಗ್ರೀಕ್ ವಿದ್ವಾಂಸ ಟಾಲೆಮಿಯು ತನ್ನ ಭೂಗೋಳಶಾಸ್ತ್ರ ಗ್ರಂಥದಲ್ಲಿ ಪ್ರಾಚೀನ ನಗರಗಳಾದ ಬನವಾಸಿ, ಬಾದಾಮಿ, ಪಟ್ಟದಕಲ್ಲು, ಪುನ್ನಾಟಗಳು ಪಶ್ಚಿಮ ದೇಶಗಳೊಂದಿಗೆ ಹೊಂದಿದ್ದ ವಾಣಿಜ್ಯ ಸಂಪರ್ಕದ ಬಗ್ಗೆ ಹೇಳಿದ್ದಾನೆ. ಕಾರ್ಕಾಸ್‌ನ ಕೃತಿ 'ಕ್ರಿಶ್ಚಿಯನ್ ಟೋಮೋಗ್ರಫಿ'ಯಿಂದ ಭಾರತದ ತೀರ ಪ್ರದೇಶಗಳ ಬಗ್ಗೆ ತಿಳಿಯಬಹುದಾಗಿದೆ.

ವೈಭವಯುತವಾಗಿ ಬಾಳಿದ ವಿಜಯನಗರ ಸಾಮ್ರಾಜ್ಯವು ಅನೇಕ ವಿದೇಶಿ ಪ್ರವಾಸಿಗಳನ್ನು, ವರ್ತಕರನ್ನು, ಮತ ಪ್ರಚಾರಕರನ್ನು ಬರಮಾಡಿಕೊಂಡಿತ್ತು. ಅವರೆಂದರೆ ನಿಕೋಲೋ ಡಿ ಕಾಂಟಿಯ –1420 (ಕೃತಿ–ಇಂಡಿಯಾ ಪಿಫ್ಟಿಂಥ್ ಸೆಂಚುರಿ) ಪರ್ಶಿಯಾದ ಅಬ್ದುಲ್ ರಜಾಕ್‌ರ 1443 (ಕೃತಿ–ಹಿಸ್ಟರಿ ಆಫ್ ಪರ್ಶಿಯಾ), ಪೋರ್ಚುಗಲ್‌ನ ಡುರೆಟ, ಬಾರ್ಬೋಸಾ, ಡೂಮಿಂಗೋ ಪಯಾಸ್, ರಷ್ಯಾದ ನಿಕೆಟಿನ್ (1480) ನ್ಯೂನಿಜ್ (1535), ಇಟಲಿಯ ಫೆಡ್ರಿಕ ಸೀಸರ (1567)ರು ಪ್ರಮುಖರು. ಅವರು ವಿಜಯನಗರ ಸಾಮ್ರಾಟರ ಆಸ್ಥಾನ ರಾಜಧಾನಿ, ಆರ್ಥಿಕ ಸಮೃದ್ಧಿ, ರಾಯರ ಮತ್ತು ಬಹಮನಿ ಸುಲ್ತಾನರ ನಡುವೆ ಆಗುತ್ತಿದ್ದ ಯುದ್ಧಗಳು, ಹಬ್ಬಗಳ ಆಚರಣೆ, ತಾಳಿಕೋಟೆ ಕದನ, ವಿನಾಶ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳ ಬಗೆಗೆ ವಿಫುಲವಾಗಿ ಬರೆದಿದ್ದಾರೆ.

## ಪುರಾತತ್ವ ಆಧಾರಗಳು:

ಪುರಾತತ್ವ ಅವಶೇಷಗಳ ಅಧ್ಯಯನವನ್ನು ಆರ್ಕಿಯಾಲಜಿ ಎನ್ನುತ್ತೇವೆ. ಆರ್ಕಿಯಾಲಜಿ ಎಂದರೆ ಪ್ರಾಚೀನ ವಸ್ತುಗಳ ವಿಜ್ಞಾನ ಎಂದರ್ಥ. ಪುರಾತತ್ವ ಆಧಾರಗಳು ಲಿಖಿತ ಆಧಾರಗಳು ದೃಢಪಡಿಸದ ಎಷ್ಟೋ ಅಂಶಗಳನ್ನು ದೃಢಪಡಿಸುತ್ತವೆ. ಭೂ ಉತ್ಖನನಗಳು, ಶಾಸನಗಳು, ನಾಣ್ಯಗಳು ಮತ್ತು ಸ್ಮಾರಕಗಳು ಪುರಾತತ್ವ ಅಥವಾ ಪ್ರಾಕ್ತನ ಆಧಾರಗಳಾಗಿವೆ.

## ಭೂ ಉತ್ಖನನಗಳು:

ಇತಿಹಾಸ ಪೂರ್ವ ಯುಗದ ಮಾನವನ ಜೀವನ ಕ್ರಮ ತಿಳಿಯಲು ಪ್ರಾಕ್ತನ ಆಧಾರಗಳಿಂದ ಸಾಧ್ಯ. 19ನೇ ಶತಮಾನದ ಅಂತ್ಯದಲ್ಲಿ ನಡೆದ ಭೂ ಉತ್ಖನನಗಳಿಂದ ಹಾಗೂ ಸಂಶೋಧನೆಗಳಿಂದ ದಖನ್ ಪ್ರದೇಶವು ಶಿಲಾಯುಗದ ಮಾನವನ ವಾಸಸ್ಥಾನವಾಗಿತ್ತೆಂದು ತಿಳಿದುಬಂದಿದೆ. ದಕ್ಷಿಣ ಭಾರತದ ಕರ್ನೂಲ್, ಕಡಪ, ಅನಂತಪುರ, ಗೋದಾವರಿ, ಮಧುರೈ, ಮಲಭಾರ, ಅಮರಾವತಿ, ಪೈತಾನ್, ನಾಗಾರ್ಜುನಕೊಂಡ, ಪಾಂಡಿಚೇರಿಗಳಲ್ಲಿ ನಡೆದ ಸಂಶೋಧನೆಗಳಿಂದ ಹಳೇ ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ಹೊಸ ಶಿಲಾಯುಗದ ಮಾನವನ ಕುರುಹುಗಳು ಪತ್ತೆಯಾಗಿವೆ.

ಇತ್ತೀಚೆಗೆ ಪುರಾತತ್ವ ಇಲಾಖೆ ಹಂಪಿ, ತಲಕಾಡು, ನಿಡಗಟ್ಟ, ಸನ್ನತಿ, ಹಳೆಬೀಡುಗಳಲ್ಲಿ ಉತ್ಖನನ ನಡೆಸಿ ಹೊಸ ಅಂಶಗಳನ್ನು ಬೆಳಕಿಗೆ ತಂದಿದೆ. ಈ ಉತ್ಖನನಗಳಿಂದ ದೊರೆತ ಲೋಹಗಳು, ವಸ್ತುಗಳು, ಧಾನ್ಯ, ಮಡಿಕೆಗಳು, ಆಯುಧಗಳು ಆದಿ ಮಾನವನ ಜೀವನ ಕ್ರಮ ತಿಳಿಯಲು ಸಹಾಯಕವಾಗಿವೆ. ಇವುಗಳ ಪತ್ತೆ ಕಾರ್ಯದಲ್ಲಿ ಬಿ.ಎಲ್.ರೈಸ್, ಡಾ.ಶೇಷಾದ್ರಿ, ನಾಗರಾಜರಾವ್, ಎಂ.ಟೈಲರ್, ಬ್ರೂಸಫುಟ, ವಿದ್ವಾಂಸರು ಬಹಳಷ್ಟು ಶ್ರಮಿಸಿದ್ದಾರೆ. ಬ್ರೂಸಫುಟರನ್ನು ಪ್ರಾಗೈತಿಹಾಸಿಕ ಪಿತಾಮಹರೆಂದು ಕರೆಯಲಾಗಿದೆ. ಹಂಪಿಯಲ್ಲಿ ಅರಮನೆ, ವಸತಿ ಗೃಹಗಳು ಹಾಗೂ ಕೋಟೆಯನ್ನು ಪತ್ತೆ ಮಾಡಲಾಗಿದೆ.

## ಶಾಸನಗಳು:

ಶಾಸನಗಳು ಇತಿಹಾಸ ರಚನೆಗೆ ಅತ್ಯಂತ ಉಪಯುಕ್ತ ಆಧಾರಗಳಾಗಿವೆ. ಶಾಸನಗಳ ಅಧ್ಯಯನವನ್ನು ಎಫಿಗ್ರಫಿ ಎನ್ನುವರು. ಶಾಸನಗಳನ್ನು ಕಲ್ಲು ಬಂಡೆಗಳ ಮೇಲೆ, ಕಂಬಗಳ ಮಳೆ, ಗುಹೆಗಳಲ್ಲಿ, ದೇವಾಲಯದ ಗೋಡೆಗಳ ಮೇಲೆ, ಕಬ್ಬಿಣ, ಬೆಳ್ಳಿ, ತಾಮ್ರ, ಲೋಹಗಳ ಫಲಕಗಳ ಮೇಲೆ ಕೆತ್ತಲಾಗಿದೆ. ಶಾಸನಗಳು ಹೆಚ್ಚಾಗಿ ಕನ್ನಡದಲ್ಲಿವೆ. ತಾಮ್ರ ಶಾಸನಗಳು ಹೆಚ್ಚಾಗಿ ಬ್ರಾಹ್ಮಿ ಮತ್ತು ಪಾಲಿ ಲಿಪಿಯಲ್ಲಿವೆ. ಅವು ಪಾಳಿ, ಪ್ರಾಕೃತ, ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಮರಾಠಿ, ಮಲಯಾಳಂ ಮೊದಲಾದ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು, ದಾನ, ದತ್ತಿ, ಧಾರ್ಮಿಕ, ಪ್ರಶಸ್ತಿ ಶಾಸನಗಳು, ವೀರರ ಸ್ಮರಣಾರ್ಥ, ಆಡಳಿತಾತ್ಮಕ, ಸಾಹಿತ್ಯಿಕ ಶಾಸನಗಳು ಎಂಬ ನಾನಾ ಪ್ರಕಾರಗಳಿವೆ. ದಕ್ಷಿಣ ಭಾರತದಲ್ಲಿ 50000ಕ್ಕೂ ಅಧಿಕ ಶಾಸನಗಳು ದೊರೆತಿದ್ದು, ಅವುಗಳಲ್ಲಿ ಕರ್ನಲ್ ಮೆಕೆಂಜಿ 900 ಶಾಸನಗಳನ್ನು ಇಲಿಯಟ್ 6000 ಶಾಸನಗಳನ್ನು ಸಂಪಾದಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಶಾಸನಗಳನ್ನು ಬಿ.ಎಲ್.ರೈಸ್ ಮತ್ತು ಡಾ.ಫ್ಲೀಟ್‌ರು ಇಂಡಿಯನ್ ಅಂಟಕ್ವೆರಿಯಲ್ಲಿ ಪ್ರಕಟಿಸಿದ್ದಾರೆ.

**ಕೆಲವು ಉಪಯುಕ್ತ ಶಾಸನಗಳು:**

1) ಅಶೋಕನ ಶಾಸನಗಳು: ಕರ್ನಾಟಕ ಇತಿಹಾಸ ರಚನೆಗೆ ದೊರೆತಿರುವ ಶಾಸನಗಳ ಪೈಕಿ ಅಶೋಕನ ಶಾಸನಗಳೇ ಅತ್ಯಂತ ಪುರಾತನವಾದವು. ಅವು ಬ್ರಾಹ್ಮಿ ಲಿಪಿಯಲ್ಲಿದ್ದು, 1837ರಲ್ಲಿ ಮೊದಲ ಬಾರಿಗೆ ಜೇಮ್ಸ್ ಪ್ರಿನ್ಸೆಸ್‌ರು ಓದಿ ಪತ್ತೆ ಮಾಡಿದರು. ಕರ್ನಾಟಕದಲ್ಲಿ ಅಶೋಕನ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಜಟಿಂಗ ರಾಮೇಶ್ವರ, ಸಿದ್ದಾಪುರ, ಬ್ರಹ್ಮಗಿರಿ, ರಾಯಚೂರು ಜಿಲ್ಲೆಯ ಗವಿಮಠ, ಮಸ್ಕಿ, ಪಾಲ್ಕಿಗುಂಡಂ, ಕೊಪ್ಪಳ, ಗುಲ್ಬರ್ಗ ಜಿಲ್ಲೆಯ ಸನ್ನತಿ ಹಾಗೂ ಆಂದ್ರದ ಎರ್ರಗುಂಡಿಗಳಲ್ಲಿ ದೊರೆತಿವೆ.

2) ಶಾತವಾಹನರ ಶಾಸನಗಳು: ಗೌತಮಿ ಬಾಳಶ್ರೀಯ ನಾಸಿಕ್ ಶಾಸನವು ಗೌತಮಿಪುತ್ರ ಶಾತಕರ್ಣಿಯ ಸಾಧನೆಗಳು ಹಾಗೂ ನಾಗಳಿಕಳ ನಾನಾಘಾಟ ಶಾಸನವು 1ನೇ ಶಾತಕರ್ಣಿಯ ಸಾಧನೆಗಳನ್ನು ತಿಳಿಯಲು ನೆರವಾಗುತ್ತವೆ.

3) ಕದಂಬ ಶಾಸನಗಳು: ಮಯೂರವರ್ಮನ ಸಾಧನೆಗಳನ್ನು ಪ್ರಾಕೃತ ಭಾಷೆಯ ಚಂದ್ರವಳ್ಳಿ ಶಾಸನವು ತಿಳಿಸುತ್ತದೆ. ಕದಂಬರ ಮೂಲ ತಿಳಿಯಲು ಕಾಕುತ್ಸವರ್ಮನ ತಾಳಗುಂದ ಶಾಸನವು ಸಹಕಾರಿಯಾಗಿದೆ. ಕ್ರಿ.ಶ.450ರಲ್ಲಿ ರಚಿತ ಬೇಲೂರು ತಾಲ್ಲೂಕಿನ ಹಲ್ಮಿಡಿ ಶಾಸನವು ಕನ್ನಡದಲ್ಲಿ ಮೊದಲು ದೊರೆತ ಶಾಸನವಾಗಿದೆ.

4) ಗಂಗರ ಶಾಸನಗಳು: ಮನ್ನೆ ಶಾಸನ ಹಾಗೂ ಶ್ರವಣಬೆಳಗೊಳ ಶಾಸನಗಳು, ದುರ್ವಿನೀತನ ಹೆಬ್ಬಟ್, ಭೂವಿಕ್ರಮನ ಹಲ್ಲಿಗೇರಿ ಶಾಸನಗಳು ಗಂಗರ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

5) ಚಾಲುಕ್ಯರ ಶಾಸನಗಳು: 1ನೇ ಪುಲಿಕೇಶಿಯ ಬಾದಾಮಿಯ ಗುಹಾ ಶಾಸನ, ಮಂಗಳೇಶನ ಮಹಾಕೂಟ ಶಾಸನಗಳು ಆರಂಭದ ಚಾಲುಕ್ಯರ ಬಗ್ಗೆ ಮಾಹಿತಿ ನೀಡುತ್ತವೆ. ಬಾದಾಮಿ ಶಾಸನದಲ್ಲಿ ಶಕ ವರ್ಷ (ಕ್ರಿ.ಶ.543) ನಮೂದಿಸಿದ್ದು, ಅದು ಕಾಲಗಣನೆಗೆ ನಿಖರತೆ ಒದಗಿಸುತ್ತದೆ.

6) ರಾಷ್ಟ್ರಕೂಟರ ಶಾಸನಗಳು: ಎಲ್ಲೋರ ಶಾಸನವು ರಾಷ್ಟ್ರಕೂಟ ವಂಶದ ಸ್ಥಾಪಕ ದಂತಿದುರ್ಗನ ಬಗ್ಗೆಯೂ, 1ನೇ ಅಮೋಘವರ್ಷನ ಸಂಜಾನ ತಾಮ್ರ ಶಾಸನವು ಹಾಗೂ ಧ್ರುವನ ಜೆಟಾವಯಿ ಶಾಸನಗಳು, 3ನೇ ಗೋವಿಂದನು ಉತ್ತರ ಭಾರತದ ಕನೂಜ, ಗೂರ್ಜರರು, ಪಾಲರು, ಪ್ರತಿಹಾರರ ಮೇಲೆ ಸಾಧಿಸಿದ ವಿಜಯಗಳನ್ನು ಹಾಗೂ 3ನೇ ಕೃಷ್ಣನ ಜಬ್ಬಲ್ಪುರದ (ಬುಂದೇಲಖಂಡ) ಜೂರಾ ಕನ್ನಡ ಶಾಸನವು ಅವನ ಸಾಧನೆಯನ್ನು ತಿಳಿಯಲು ನೆರವಾಗುತ್ತವೆ.

7) ಹೊಯ್ಸಳರ ಶಾಸನಗಳು: ಹೊಯ್ಸಳ ದೊರೆ ವಿಷ್ಣುವರ್ಧನನು ಚೋಳರನ್ನು ತಲಕಾಡಿನಲ್ಲಿ ಸೋಲಿಸಿದ್ದನ್ನು ಬೇಲೂರು ಶಾಸನವು ಹಾಗೂ 6ನೇ ವಿಕ್ರಮಾದಿತ್ಯನನ್ನು ಸೋಲಿಸಿ ರಾಜ್ಯ ವಿಸ್ತರಿಸಿದನೆಂದು ಅವನ ಕನ್ನೇಗಾಲ ಶಾಸನಗಳು ಹೇಳುತ್ತವೆ.

8) ವಿಜಯನಗರ ಕಾಲದ ಶಾಸನಗಳು: ವಿಜಯನಗರ ಕಾಲಕ್ಕೆ ಸೇರಿದ ಸುಮಾರು 9000 ಶಾಸನಗಳು ದೊರೆತಿವೆ. ಹರಿಹರದ ಬಾಗೇಪಲ್ಲಿ ಶಾಸನವು (1336) ವಿಜಯನಗರದ ಸ್ಥಾಪನೆ ಬಗ್ಗೆ ತಿಳಿಸುತ್ತದೆ.

ಶಾಸನಗಳಿಂದ ರಾಜರ ದಿಗ್ವಿಜಯಗಳು, ರಾಜರ ಹೆಸರು, ಸಾಮ್ರಾಜ್ಯದ ವಿಸ್ತಾರ, ಎಲ್ಲೆಗಳನ್ನು ತಿಳಿಯಬಹುದು. ಕಾಲಗಣನೆ ಲೆಕ್ಕ ಹಾಕಬಹುದು. ರಾಜರ ಧರ್ಮ ಮತ್ತು ಮತಾಚರಣೆ ಅಂಶಗಳು, ಭಾಷಾ ಪ್ರಗತಿ, ರಾಜರ ಸಾಮ್ರಾಜ್ಯದ ಮೇರುಗಳು ಹಾಗೂ ವಿದೇಶಗಳೊಡನೆ ಇದ್ದ ಸಂಬಂಧ, ಆಯಾ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಹಾಗೂ ಸಾಂಸ್ಕೃತಿಕ ಸ್ಥಿತಿಗಳು, ರಾಜ ಸಂತತಿಗಳ ವಂಶಾನುಕ್ರಮಣಿಕೆ, ರಾಜಾಜ್ಞೆಗಳು ಮುಂತಾದ ಐತಿಹಾಸಿಕ ಮಾಹಿತಿಗಳನ್ನು ತಿಳಿಯಬಹುದು.

## ನಾಣ್ಯಗಳು:

ಇತಿಹಾಸ ರಚನೆಗೆ ನಾಣ್ಯಗಳು ಶಾಸನಗಳಷ್ಟೇ ಮೌಲ್ಯವುಳ್ಳವು. ನಾಣ್ಯಗಳ ಅಧ್ಯಯನವನ್ನು ನ್ಯೂಮಿಸ್‌ಮ್ಯಾಟಿಕ್ಸ್ ಎನ್ನುವರು. ರಾಜರು ಅವುಗಳನ್ನು ಚಿನ್ನ, ಬೆಳ್ಳಿ, ತಾಮ್ರ ಮತ್ತು ಸೀಸ ಮೊದಲಾದ ಲೋಹಗಳಲ್ಲಿ ಟಂಕಿಸಿದ್ದರು. ಅವುಗಳು ಪಣ, ಸುವರ್ಣ, ಧರಣ, ಗದ್ಯಾಣ, ಹೊನ್ನು, ಪಗೋಡ, ಜಿತಾಲ್,

ದಮ್ಮ, ಹಗ, ಹಣ, ವೀಸಾ, ಅರೆವೀಸ ಎಂಬ ಹೆಸರುಗಳಿಂದ ಹೊರಬಂದವು. ಕ್ರಿ.ಶ.ಯುಗಾರಂಭದಿಂದಲೇ ದಕ್ಷಿಣ ಭಾರತದಲ್ಲಿ ರೋಮನ್ನರ ಬೆಳ್ಳಿಯ ನಾಣ್ಯಗಳು ಚಲಾವಣೆಗೆ ಬಂದವು.

ಶಾತವಾಹನರು ಸೀಸದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರು. ಅವುಗಳ ಮೇಲೆ ರಾಜರ ಹೆಸರುಗಳನ್ನು ಅವರ ಪ್ರಶಸ್ತಿಗಳನ್ನು ಕೆತ್ತಲಾಗಿದೆ. ಅವರ ನಾಣ್ಯಗಳ ಮೇಲೆ ಹಡಗಿನ ಗುರುತಿದ್ದು ಸಮುದ್ರ ವ್ಯಾಪಾರವನ್ನು ಸೂಚಿಸುತ್ತದೆ. ಕದಂಬರು ಪದ್ಮಟಂಕ ಎಂಬ ಚಿನ್ನದ ನಾಣ್ಯಗಳನ್ನು ಟಂಕಿಸಿದ್ದರು. ಗಂಗರ ನಾಣ್ಯದ ಮೇಲೆ ಗಜ ಲಾಂಛನವನ್ನು, ಚಾಲುಕ್ಯರ ನಾಣ್ಯದ ಮೇಲೆ ವರಾಹ ಲಾಂಛನವನ್ನು, ರಾಷ್ಟ್ರಕೂಟರ ನಾಣ್ಯದ ಮೇಲೆ ಗರುಡ ಲಾಂಛನವನ್ನು ಮುದ್ರಿಸಲಾಗಿದೆ. ಹೊಯ್ಸಳ ದೊರೆ ವಿಷ್ಣುವರ್ಧನನ ನಾಣ್ಯಗಳ ಮೇಲೆ ಅವನ ಬಿರುದುಗಳಾದ ಕಂಚಿಗೊಂಡ, ಮಲೆಪರೊಳ್ ಗಂಡ, ತಡುಕಾಡುಗೊಂಡಗಳನ್ನು ಮುದ್ರಿಸಲಾಗಿದೆ. ಅವರ ನಾಣ್ಯದ ಒಂದು ಮುಖದಲ್ಲಿ ಶಾರ್ದೂಲ (ಹುಲಿ)ವಿದೆ. ವಿಜಯನಗರ ರಾಜರ ನಾಣ್ಯಗಳ ಮೇಲೆ ಅವರ ಬಿರುದುಗಳಾದ ಪ್ರೌಢ ದೇವರಾಯ, ಪ್ರತಾಪ ಕೃಷ್ಣರಾಯಗಳನ್ನು, ವೆಂಕಟೇಶ್ವರ, ಬಾಲಕೃಷ್ಣ, ಹನುಮಂತ ದೇವರ ಚಿತ್ರಗಳನ್ನು ಬಿಡಿಸಲಾಗಿದೆ. ಅವರು ಚಿನ್ನದ ನಾಣ್ಯಗಳನ್ನು ಹೊರಡಿಸಿದ್ದು ಅದು ವಿಜಯನಗರ ಸಾಮ್ರಾಜ್ಯದ ಶ್ರೀಮಂತಿಕೆಯನ್ನು ಸಾರುತ್ತವೆ. ಹೈದರ್ ನಾಣ್ಯದ ಮೇಲೆ ಶಿವ, ಪಾರ್ವತಿ ಚಿತ್ರಗಳಿದ್ದು ಅದು ಅವನ ಧಾರ್ಮಿಕ ಸಹಿಷ್ಣುತೆಯನ್ನು ತಿಳಿಸುತ್ತದೆ. ಮೈಸೂರಿನ ಒಡೆಯರು ಕಂಠೀರಾಯ ಪಗೋಡದ ನಾಣ್ಯಗಳನ್ನು ಹೊರಡಿಸಿದರು. ಅವು ಗಂಡಬೇರುಂಡ ಚಿತ್ರ ಹೊಂದಿವೆ. ಕೆಳದಿ ನಾಯಕರು ವಿಜಯನಗರ ನಾಣ್ಯಗಳನ್ನೇ ಮುಂದುವರಿಸಿದರು.

ನಾಣ್ಯಗಳ ಮೇಲಿನ ಬರಹಗಳಿಂದ ಅದನ್ನು ಚಲಾವಣೆಗೆ ತಂದ ರಾಜರ ಹೆಸರು, ಆಳ್ವಿಕೆಯ ಕಾಲ, ರಾಜ ಸಂತತಿಗಳು, ರಾಜ ಲಾಂಛನ, ಕಲಾಭಿರುಚಿ ಮೊದಲಾದ ಅಂಶಗಳನ್ನು ತಿಳಿಯಬಹುದಾಗಿದೆ. ನಾಣ್ಯಗಳು ಕಲಾ ತಾಂತ್ರಿಕತೆ, ಲೋಹ ಪ್ರಗತಿ, ಹಾಗೂ ವಿದೇಶಗಳೊಂದಿಗಿನ ವ್ಯಾಪಾರ ಸಂಬಂಧವನ್ನು ತಿಳಿಸುತ್ತವೆ.

**ಸ್ಮಾರಕಗಳು:**

ಸ್ಮಾರಕಗಳು ಇತಿಹಾಸ ರಚನೆಗೆ ಪ್ರತ್ಯಕ್ಷದರ್ಶಿ ಆಧಾರಗಳಾಗಿವೆ. ಅವು ಅಂದಿನ ಜನ ಜೀವನದ ನೈಜ ಪ್ರತಿಬಿಂಬಗಳಾಗಿ ಇಂದಿಗೂ ನಮ್ಮ ಕಣ್ಣಮುಂದೆ ನಿಂತಿವೆ. ಸ್ಮಾರಕಗಳು ಒಂದು ರಾಷ್ಟ್ರದ ಸಂಸ್ಕೃತಿಯ ಪ್ರತೀಕ. ಸ್ಮಾರಕಗಳಲ್ಲಿ ಇತರೆ ಆಧಾರಗಳಲ್ಲಿ ಕಂಡುಬರುವ ನ್ಯೂನತೆಗಳಾಗಲೀ, ಉತ್ಪ್ರೇಕ್ಷೆಗಳಾಗಲೀ ಕಂಡುಬರುವುದಿಲ್ಲ. ಆದ್ದರಿಂದ ಶಾಸನಗಳು ಮತ್ತು ನಾಣ್ಯಗಳಷ್ಟೇ ಸ್ಮಾರಕಗಳು ಇತಿಹಾಸ ರಚನೆಗೆ ಸಹಕಾರಿಯಾಗುತ್ತವೆ. ದೇವಾಲಯಗಳು, ಅರಮನೆಗಳು, ಸ್ತೂಪಗಳು, ಗುಹೆಗಳು, ಬಸದಿಗಳು, ಕೋಟೆಗಳು, ಗೋರಿಗಳು, ಮಸೀದಿಗಳು, ಚರ್ಚುಗಳು, ಚಿತ್ರಕಲೆ, ಮೂರ್ತಿಶಿಲ್ಪಗಳು, ಪ್ರಮುಖ ಸ್ಮಾರಕಗಳಾಗಿವೆ. ಅವು ಆಯಾ ಕಾಲದ ಜನರ ವೇಷಭೂಷಣ, ಉಡುಗೆ ತೊಡುಗೆ, ರೂಢಿ ಪದ್ಧತಿಗಳು, ಆಧ್ಯಾತ್ಮಿಕತೆ, ಶೃಂಗಾರ ಭಾವನೆ, ಆರಾಧನೆ, ಆಚಾರ, ವಿಚಾರ, ಸಂಗೀತ, ನೃತ್ಯ, ಅಭಿರುಚಿ, ಸಾಮಾಜಿಕ ಧಾರ್ಮಿಕ ಹಾಗೂ ಆರ್ಥಿಕ ಸ್ಥಿತಿಗಳನ್ನು ತಿಳಿಯಲು ನೆರವಾಗುತ್ತವೆ.

ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು ನಮ್ಮ ನಾಡಿನ ಉದ್ದಕ್ಕೂ ಸುಂದರ ದೇವಾಲಯಗಳನ್ನು ನಿರ್ಮಿಸಿದರು. ಗಂಗರು ಶ್ರವಣಬೆಳಗೊಳದಲ್ಲಿ ಜಗತ್ ಪ್ರಸಿದ್ಧ ಏಕಶಿಲಾ ಗೊಮ್ಮಟನ ಮೂರ್ತಿ ನಿರ್ಮಿಸಿದರು. ಬಾದಾಮಿ ಚಾಲುಕ್ಯರು ನಿರ್ಮಿಸಿದ ಬಾದಾಮಿಯ ಗುಹೆಗಳು ಶಿಲ್ಪಕಲೆ ಮತ್ತು ಚಿತ್ರಕಲೆಗೆ ಪ್ರಸಿದ್ಧವಾಗಿವೆ. ಪಟ್ಟದಕಲ್ಲು ಮತ್ತು ಐಹೊಳೆ ದೇವಾಲಯಗಳು ವೇಸರಶೈಲಿಯನ್ನು ವೈಭವೀಕರಿಸಿವೆ. ಅಜಂತಾ ಗುಹೆಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಿಸಿದ ಚಿತ್ರಕಲೆ ಇದೆ. ರಾಷ್ಟ್ರಕೂಟರು ಎಲ್ಲೋರ ಮತ್ತು ಅಜಂತಾಗಳಲ್ಲಿ ಗುಹಾಲಯಗಳನ್ನು ನಿರ್ಮಿಸಿದರು. ಎಲ್ಲೋರದ ಕೈಲಾಸನಾಥ ದೇವಾಲಯವು ಪ್ರಪಂಚದ ಮಹಾ ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಬೇಲೂರು, ಹಳೇಬೀಡು, ಸೋಮನಾಥಪುರ, ತಲಕಾಡುಗಳಲ್ಲಿ, ಹೊಯ್ಸಳರ ದೇವಾಲಯಗಳಿವೆ. ಹೊಯ್ಸಳ ಶಿಲ್ಪಕಲೆಯಲ್ಲಿ ಸಮಕಾಲೀನ ನೃತ್ಯ, ಉಡುಗೆ, ತೊಡುಗೆ, ಆಭರಣ, ಸಂಗೀತ ವಾದ್ಯಗಳನ್ನು ಕಾಣಬಹುದು. ಬೇಲೂರಿನ ಶಿಲಾಬಾಲಕಿಯರು ಅಂದಿನ ಶಿಲ್ಪಿಗಳ ಕೈಚಳಕ, ಭಕ್ತಿ, ತ್ಯಾಗ, ಧರ್ಮನಿಷ್ಠೆಗಳನ್ನು ಪ್ರತಿಬಿಂಬಿಸಿದ್ದಾರೆ.

ಸ್ಮಾರಕಗಳು ಪುರಾತನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವುದರ ಮೂಲಕ ಗತಕಾಲದ ಸಾಹಿತ್ಯ, ಸಂಸ್ಕೃತಿ, ಪರಂಪರೆ, ಇತಿಹಾಸದ ಅಧ್ಯಯನಕ್ಕೆ ಮಾರ್ಗದರ್ಶಿಯಾಗಿವೆ ಎನ್ನಬಹುದು. ನಮ್ಮ ಸಮೃದ್ಧ ಹಾಗೂ ಶ್ರೀಮಂತ ಪರಂಪರೆಯನ್ನು ಮುಂದಿನ ಪೀಳಿಗೆಗಾಗಿ ಉಳಿಸುವ, ಇತಿಹಾಸವನ್ನು ತಿಳಿಸಿಕೊಡುವ ಕಾರ್ಯ ಪರಿಣಾಮಕಾರಿಯಾಗಿ ನಡೆಯಬೇಕಿದೆ. ಹಿಂದೆ ಆಳಿದ ಅನೇಕ ಅರಸರು, ಸುಲ್ತಾನರು ಇತಿಹಾಸದ ಸಾಕಷ್ಟು ಕುರುಹುಗಳನ್ನು ಇಲ್ಲಿ ಬಿಟ್ಟಿದ್ದಾರೆ. ಅವುಗಳನ್ನು ರಕ್ಷಿಸಿ ಮುಂದಿನ ಜನಾಂಗಕ್ಕೆ ನೀಡಬೇಕಾದರೆ ಸಮಾಜದ ಪ್ರತಿಯೊಬ್ಬರ ಸಹಕಾರ ಬೇಕು.

ದೇವಾಲಯಗಳು ಆಗಿನ ಕಾಲದ ಧಾರ್ಮಿಕ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತವೆ. ಒಟ್ಟಾರೆಯಾಗಿ ಕರ್ನಾಟಕದ ಸ್ಮಾರಕಗಳು ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಯಲು ಹೆಚ್ಚು ಮಾಹಿತಿಯನ್ನು ಒದಗಿಸುತ್ತವೆ. ಫರ್ಗ್ಯುಸನ್, ಪರ್ಸಿಬ್ರೌನರು ಸ್ಮಾರಕಗಳ ಮಹತ್ವವನ್ನು ಹೊಗಳಿದ್ದಾರೆ.

ಭೂ ಉತ್ಖನನಗಳು, ಶಾಸನಗಳು, ಸ್ಮಾರಕಗಳು, ಹಾಗೂ ನಾಣ್ಯಗಳ ಜೊತೆಗೆ ಕರ್ನಾಟಕದ ಐತಿಹ್ಯವನ್ನು ತಿಳಿಯಲು ಕಡತಗಳು (ಕಪ್ಪು ಬಟ್ಟೆಯ ಮೇಲೆ ಬಿಳಿ ಬಣ್ಣದಲ್ಲಿ ಬರೆದ ದಾಖಲೆಗಳು), ಕೈಫಿಯತಗಳು ಮತ್ತು ಬಖೈರಗಳು (ವರದಿ) ಪ್ರಮುಖ ಮಾಹಿತಿಯನ್ನು ಒದಗಿಸುತ್ತವೆ.

## ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾ ಕಾರ್ಯ:

ಭಾರತದ ಇತಿಹಾಸದ ಅಧ್ಯಯನದ ಸಂದರ್ಭದಲ್ಲಿ ಪ್ರಾಚ್ಯವಸ್ತು ಮೂಲಾಧಾರವು ಮಹತ್ವದ ಪಾತ್ರವಹಿಸುತ್ತದೆ. ಹಿಂದಿನ ಕಾಲದಲ್ಲಿ ಜನರು ಬಳಸುತ್ತಿದ್ದ ಕಟ್ಟಡಗಳು, ಶಾಸನಗಳು, ಮುದ್ರೆಗಳು, ನಾಣ್ಯಗಳು, ಮಡಿಕೆ, ಆಭರಣ, ಉಪಕರಣಗಳು, ಹೀಗೆ ದಿನನಿತ್ಯ ಬಳಸುವ ಪದಾರ್ಥಗಳನ್ನು ಸಂಶೋಧನೆಯಿಂದ ಗುರುತಿಸಿ ಅಂದಿನ ಜನಜೀವನವನ್ನು ತಿಳಿದುಕೊಳ್ಳುವುದೇ ಪ್ರಾಚ್ಯವಸ್ತು ಸರ್ವೇಕ್ಷಣೆಯ ಮೂಲ ಉದ್ದೇಶ. ಸರ್.ವಿಲಿಯಂ ಜೋನ್ಸರವರು ಪ್ರಾಚ್ಯವಸ್ತು ಅಧ್ಯಯನವನ್ನು ಮೊಟ್ಟ ಮೊದಲು ಪ್ರಾರಂಭಿಸಿದರು. ಕ್ರಿ.ಶ.1784ರಲ್ಲಿ 'ರಾಯಲ್ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ ತಮ್ಮ ಹಾಗೂ ಮುಂದಿನ ಸಂಶೋಧನಕಾರರಿಗೆ ಮಾರ್ಗದರ್ಶಿಯಾದರು.

ಡಾ.ಮಾರ್ಷಲ್, ಡಾ.ಆರ್.ಡಿ.ಬ್ಯಾನರ್ಜಿ, ಡಾ.ಸಹಾನಿ ಇವರ ನೇತೃತ್ವದಲ್ಲಿ 1921–22ರಲ್ಲಿ ನಡೆದ ಸಂಶೋಧನೆಯಿಂದ ಭಾರತ ನಾಗರೀಕತೆಯ ಪ್ರಾಚೀನ ಚರಿತ್ರೆಯ ಕುರುಹುಗಳಾದ ಹರಪ್ಪಾ ಮತ್ತು ಮೊಹೆಂಜೋದಾರೋ ನಗರಗಳು ಪತ್ತೆಯಾದವು. ಡಾ.ಸ್ಪೂನರ್‌ರವರ ನೇತೃತ್ವದಲ್ಲಿ ಪಾಟಲೀಪುತ್ರದಲ್ಲಿ ಸಂಶೋಧನೆ ನಡೆಯಿತು.

ಭಾರತದ ಪುರಾತತ್ವ ಸರ್ವೇಕ್ಷಣವು ದೇಶದ ಎಲ್ಲೆಡೆಯಲ್ಲಿ ಐತಿಹಾಸಿಕ ನಿವೇಶನಗಳಲ್ಲಿ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲು ತೀರ್ಮಾನಿಸಿತು. ಅಂತಹ ನಾಲ್ಕು ವಸ್ತು ಸಂಗ್ರಹಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಐತಿಹಾಸಿಕ ಪ್ರಸಿದ್ಧಿ ಪಡೆದ ಹಳೇಬೀಡು, ಹಂಪಿ, ವಿಜಾಪುರ, ಮತ್ತು ಶ್ರೀರಂಗಪಟ್ಟಣಗಳಲ್ಲಿ ಸ್ಥಾಪಿಸಲಾಯಿತು. ಈಗ ಶಿಲ್ಪಕಲಾಶಾಲೆಗಳಿರುವ ಬಾದಾಮಿ ಮತ್ತು ಐಹೊಳೆಗಳಲ್ಲಿ ಮತ್ತೆರಡು ನಿವೇಶನ ವಸ್ತುಸಂಗ್ರಹಾಲಯಗಳನ್ನು ಮುಂದೆ ಸ್ಥಾಪಿಸುವ ಯೋಜನೆಯಿದೆ.

ಇತ್ತೀಚೆಗೆ ಕಲಾವಸ್ತು ಸಂಪತ್ತನ್ನು ಕಳ್ಳತನ ಮಾಡುವುದು ಹೆಚ್ಚಾಗುತ್ತಿದೆ. ಹೀಗಾಗಿ ಭಾರತದ ಪುರಾತತ್ವ ಸರ್ವೇಕ್ಷಣವು ಮುಖ್ಯ ನಿವೇಶನಗಳಿಂದ ಶಿಲ್ಪಗಳನ್ನು ಸಂಗ್ರಹಿಸಿ ವಿಶೇಷವಾಗಿ ನಿರ್ಮಿಸಲಾದ ಶಿಲ್ಪ ಶಾಲೆಗಳಲ್ಲಿ ಇಟ್ಟು ಅವನ್ನು ಪುರಾತತ್ವ ವಿಭಾಗದ ಅಧಿಕಾರಿಯೊಬ್ಬರ ಉಸ್ತುವಾರಿಗೆ ಒಪ್ಪಿಸುವ ಯೋಜನೆಯೊಂದನ್ನು ಮಾಡಿಕೊಂಡಿದೆ. ಕರ್ನಾಟಕ ರಾಜ್ಯದಲ್ಲಿ ಪಟ್ಟದಕಲ್ಲು, ಲಕ್ಕುಂಡಿ, ಬೆಳಗಾವಿಯಲ್ಲಿ ಇಂಥ ಶಿಲ್ಪ ಸಂಗ್ರಹ ಗೃಹಗಳಿವೆ. ಇತ್ತೀಚೆಗೆ ಬನವಾಸಿಯಲ್ಲೂ ಒಂದು ಶಿಲ್ಪಸಂಗ್ರಹ ಗೃಹವನ್ನು ಪ್ರಾರಂಭಿಸಲಾಗಿದೆ. ಐಹೊಳೆ, ಪಟ್ಟದಕಲ್ಲು ಮತ್ತು ಬಾದಾಮಿಗಳಲ್ಲಿ ಮುಖ್ಯಸ್ಥರಾದ ಡಾ.ಎಸ್.ಆರ್.ರಾವ್ ಅವರು ಕೈಗೊಂಡ ಸೊಗಸಾದ ರಕ್ಷಣಾತ್ಮಕ ಕಾರ್ಯಗಳಿಂದ ಪ್ರಾಚೀನ ಚಾಲುಕ್ಯರ ಕಾಲದ ಅಪೂರ್ವ ಶಿಲ್ಪಗಳು ಬೆಳಕಿಗೆ ಬಂದವು.

## ಕರ್ನಾಟಕದಲ್ಲಿ ವಿಶ್ವ ಪರಂಪರೆಯ ಸ್ಥಳಗಳು:

ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯಿಂದ ಶ್ರೀಮಂತವಾಗಿರುವ ಕರ್ನಾಟಕದಲ್ಲಿ ಹಲವು ನಗರಗಳೂ, ಪಟ್ಟಣಗಳು, ಗ್ರಾಮಗಳು, ಜಲಪಾತಗಳು, ಗಿರಿಧಾಮಗಳು, ಇತರ ಪ್ರೇಕ್ಷಣೀಯ ಸ್ಥಳಗಳೂ ಇವೆ. ಪಾರಂಪರಿಕ ತಾಣವಾದ ಕರ್ನಾಟಕದ ಕೆಲವು ಪ್ರದೇಶಗಳನ್ನು ವಿಶ್ವ ಪಾರಂಪರಿಕ ತಾಣದ ವ್ಯಾಪ್ತಿಗೆ ಸೇರಿಸಲಾಗಿದೆ.

### ಹಂಪೆ:

ಬೆಂಗಳೂರಿನಿಂದ 360 ಕಿ.ಮೀ. ಮತ್ತು ಹೊಸಪೇಟೆಯಿಂದ 10 ಕಿ.ಮೀ. ದೂರದಲ್ಲಿರುವ ಹಂಪೆ ಇಂದು ತುಂಗಭದ್ರಾ ನದಿ ತೀರದಲ್ಲಿರುವ ಒಂದು ಸಣ್ಣ ಹಳ್ಳಿ. ಹಿಂದೆ ಇದು ಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಹಂಪೆಯ ಅವಶೇಷಗಳು ಒಂಬತ್ತು ಚದರ ಮೈಲಿಗಳ ವಿಸ್ತಾರವಾದ ಪ್ರದೇಶದಲ್ಲಿ ಹರಡಿವೆ. ಈ ಪ್ರದೇಶದಲ್ಲೆಲ್ಲಾ ಮರಗಿಡಗಳಿಲ್ಲದೇ ಬರಿಯ ಗುಡ್ಡಗಳು ಹಳೆಯ ನಗರದಲ್ಲಿ ಒಂದರ ಹಿಂದೆ ಒಂದರಂತೆ ಕೋಟೆಯ ಗೋಡೆಗಳನ್ನು ನೋಡಬಹುದು. ಕಣಿವೆ ಪ್ರದೇಶದಲ್ಲಿ ನಿರ್ಜನವಾದ ಹಾಳಾದ ಬೀದಿಗಳೂ, ಭಗ್ನವಾದ ಅರಮನೆಗಳೂ, ದೇವಾಲಯಗಳು ಕಂಡುಬರುತ್ತವೆ. ದಂತಕಥೆಗಳ ಪ್ರಕಾರ ಈ ಸ್ಥಳವು ರಾಮಾಯಣದ ಪ್ರಮುಖ ವ್ಯಕ್ತಿಗಳೊಂದಿಗೆ ಸಂಬಂಧ ಹೊಂದಿದೆ. ಇದನ್ನು ರಾಮಾಯಣಕಾಲದ ಕಿಷ್ಕಿಂಧೆಯೆಂದು ಪರಿಗಣಿಸಿದ್ದು ಎಂಟನೆಯ ಶತಮಾನದ ಒಂದು ಶಾಸನದಲ್ಲಿ ಪಂಪಾಕ್ಷೇತ್ರವೆಂದು ಕರೆಯಲ್ಪಟ್ಟಿದೆ. ಇಲ್ಲಿರುವ ಪಂಪಾ ವಿರೂಪಾಕ್ಷ ದೇವಾಲಯವು ಕಲ್ಯಾಣಿ ಚಾಲುಕ್ಯರ ಕಾಲದ್ದು. ಕಲ್ಯಾಣದ ಚಾಲುಕ್ಯರ ಹಾಗೂ ಹೊಯ್ಸಳರ ಕಾಲದಲ್ಲಿ ಇದು ಒಂದು ಸಮೃದ್ಧವಾದ ಕೇಂದ್ರವಾಗಿದ್ದಿತು. ಒಂದನೆಯ ಹರಿಹರನು ಇದನ್ನು 1336ರಲ್ಲಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ವಿಜಯನಗರ ಸಾಮ್ರಾಜ್ಯದ ಅವಶೇಷಗಳಲ್ಲಿ ಬಹಳಷ್ಟು ಕಮಲಾಪುರದಿಂದ ಹಂಪಿಗೆ ಹೋಗುವ ರಸ್ತೆಯಲ್ಲಿ ಕಾಣಸಿಗುತ್ತವೆ. ಇಲ್ಲಿ ಮೊಟ್ಟಮೊದಲು ಸಿಗುವ ಸ್ಮಾರಕ ಕಮಲಾಪುರ, ಕಂಪಿಲಿ ರಸ್ತೆಯಲ್ಲಿರುವ ಗಾಣಿಗಿತ್ತಿ ಜಿನಾಲಯ. ಈ ಜೈನ ದೇವಾಲಯವನ್ನು ಇರುಗಪ್ಪನೆಂಬ ಜೈನ ದಂಡನಾಯಕ ಕ್ರಿ.ಶ.1385ರಲ್ಲಿ ನಿರ್ಮಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಕಮಲಾಪುರ, ಹಂಪಿ ರಸ್ತೆಯ ಉತ್ತರಕ್ಕಿರುವ ರಾಣಿಯರ ಸ್ನಾನಗೃಹ 15.2 ಮೀ. ಉದ್ದವಿದ್ದು 1.8 ಮೀ. ಆಳವಿದೆ. ಇದು ಇಂಡೋ, ಸಾರ್ಸೆನಿಕ ಶೈಲಿಯ ಕಟ್ಟಡ. ಮಹಾನವಮಿ ದಿಬ್ಬವು ಕೃಷ್ಣದೇವರಾಯನು ಓರಿಸ್ಸಾದ ಮೇಲೆ ಜಯಶೀಲನಾಗಿ ಬಂದಾಗ ಕಟ್ಟಿಸಿದ ದೊಡ್ಡ ಶಿಲಾವೇದಿಕೆ. ಹಂಪೆಯ ಮಧ್ಯದಲ್ಲಿರುವ ಕಮಲ್ ಮಹಲ್ ಗಾರೆಯ ಲೇಪವಿರುವ ಎರಡು ಮಹಡಿಗಳ ಕಟ್ಟಡ. ಹಜಾರ ರಾಮಸ್ವಾಮಿ ದೇವಾಲಯ, ರಂಗನಾಥ ಸ್ವಾಮಿ ದೇವಾಲಯ, ಪಟ್ಟದ ಎಲ್ಲಮ್ಮ ದೇವಾಲಯ, ಉದ್ದಾನ ವೀರಭದ್ರಸ್ವಾಮಿ ದೇವಾಲಯ, ಕೃಷ್ಣಸ್ವಾಮಿ ದೇವಾಲಯ, ವಿರೂಪಾಕ್ಷ ದೇವಾಲಯ, ವಿಜಯ ವಿಠಲಸ್ವಾಮಿ ದೇವಾಲಯ, ಅಚ್ಯುತರಾಯಸ್ವಾಮಿ ದೇವಾಲಯಗಳು ಇಲ್ಲಿನ ಪ್ರಮುಖ ದೇವಾಲಯಗಳಾಗಿವೆ. ರಾಜಾರಾಮಸ್ವಾಮಿ ದೇವಾಲಯದ ಈಶಾನ್ಯದಲ್ಲಿ ದಿವಾನ್‌ಖಾನೆ ಅಥವಾ ಸಾರ್ವಜನಿಕ ಕಛೇರಿ ಇದೆ. ವಿರೂಪಾಕ್ಷ ದೇವಾಲಯದ ಬಳಿಯಿರುವ ಹೇಮಕೂಟ ಪರ್ವತದ ಮೇಲೆ ಬಾದಾಮಿ ಚಾಲುಕ್ಯರ ಕಾಲದ ಒಂದು ದೇವಾಲಯವು ಕದಂಬ ನಾಗರಶೀಖರಗಳುಳ್ಳ ಕೆಲವು ದೇವಾಲಯಗಳೂ ಇವೆ. ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಹಂಪಿಯ ಕವಿ ಹರಿಹರ, ಪುರಂದರದಾಸ, ಕನಕದಾಸ, ವ್ಯಾಸತೀರ್ಥ, ಲಕ್ಕಣ್ಣ, ದಂಡೇಶ, ಮೊದಲಾದವರ ಜೀವನ ಸಾಧನೆಗಳಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಇದನ್ನು ಒಂದು ರೀತಿಯ ವಸ್ತುಸಂಗ್ರಹಾಲಯವೆಂದು ಕರೆಯಲಾಗಿದೆ.

### ಪಟ್ಟದಕಲ್ಲು:

ಪಟ್ಟದಕಲ್ಲು ರಾಜ್ಯದಲ್ಲೇ ಪ್ರಮುಖವಾದ ಪ್ರವಾಸಿ ಕೇಂದ್ರವಾಗಿದ್ದು, ಇದು ಬಾದಾಮಿಗೆ ಈಶಾನ್ಯಕ್ಕೆ 22 ಕಿ.ಮೀ. ಹಾಗೂ ಬೆಂಗಳೂರಿನಿಂದ 514 ಕಿ.ಮೀ. ದೂರದಲ್ಲಿದ್ದು, ಮಲಪ್ರಭಾ ನದಿಯ ಎಡದಂಡೆಯ ಮೇಲಿದೆ. ಇದು ದೇವಾಲಯಗಳಿಗೂ, ಶಾಸನಗಳಿಗೂ ಪ್ರಖ್ಯಾತವಾಗಿರುವ ಚಾಲುಕ್ಯ ಕಲಾಕೇಂದ್ರ. ನದಿಯ ದಂಡೆಯ ಸುತ್ತಲೂ ಹೇರಳವಾಗಿ ದೊರಕಿರುವ ಕಲ್ಲಿನ ಆಯುಧಗಳಿಂದಲೂ ಮತ್ತು ದೊಡ್ಡ ಕಲ್ಲುಗಳಿಂದ ಮಾಡಿದ ಗೋರಿಗಳಿಂದಲೂ, ಇದು ಇತಿಹಾಸ ಪೂರ್ವಕಾಲದಲ್ಲಿ ಜನಜನಿತವಾದ ಪ್ರದೇಶವಾಗಿತ್ತೆಂದು

ಗೊತ್ತಾಗುತ್ತದೆ. ಸಂಗಮೇಶ್ವರನ ಮತ್ತು ಜೈನ ದೇವಾಲಯಗಳ ಸಮೀಪದಲ್ಲಿ ನಡೆದ ಉತ್ಖನನಗಳಿಂದ, ಸುಟ್ಟ ಇಟ್ಟಿಗೆಗಳಿಂದ ನಿರ್ಮಿತವಾದ ಕಟ್ಟಡಗಳು ಬೆಳಕಿಗೆ ಬಂದಿದ್ದು, ಚಾಲುಕ್ಯರ ಕಾಲಕ್ಕಿಂತ ಪ್ರಾಚೀನವಾದ ಕಾಲಕ್ಕೆ ಅವು ಸೇರುತ್ತವೆ. ಪ್ರಾಚೀನಕಾಲದಲ್ಲಿ ಈ ಸ್ಥಳದ ಹೆಸರು ಕಿಸುವೊಳಲ್ (ಕೆಂಪು ಪೊಟ್ಟಣ) ಅಥವಾ ಪಟ್ಟದ ಕಿಸುವೊಳಲ್ ಎಂಬುದಾಗಿ ಇದ್ದಿತೆಂದು ಇಲಲಿನ ಶಾಸನಗಳು ತಿಳಿಸುತ್ತವೆ. ಕ್ರಿ.ಶ.1540ರ ಸಾಹಿತ್ಯಕೃತಿ ಹಮ್ಮೀರ ಕಾವ್ಯ ಈ ಸ್ಥಳವನ್ನು ಪಟ್ಟಶಿಲಾಪುರ ಮತ್ತು ಹಮ್ಮೀರಪುರ ಎಂದು ಉಲ್ಲೇಖಿಸುತ್ತದೆ. ಈ ನಗರವು ಬಾದಾಮಿ ಚಾಲುಕ್ಯರ ಕಾಲದಲ್ಲಿ ತನ್ನ ಅತ್ಯುತ್ತಮ ಸ್ಥಿತಿಯನ್ನು ಮುಟ್ಟಿತು ಮತ್ತು ಇದು ಅವರ ರಾಜಧಾನಿಯಾಗಿದ್ದಿತು. ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದ ಶಾಸನಗಳಲ್ಲಿ, 1500ರ ಸಿಂಗಿರಾಜ ಪುರಾಣ ಸಾಹಿತ್ಯ ಕೃತಿ ಮತ್ತು ಹಮ್ಮೀರ ಕಾವ್ಯಗಳಲ್ಲಿ ಈ ಸ್ಥಳದಲ್ಲಿ ಚಾಲುಕ್ಯ ರಾಜರು ಪಟ್ಟಭಿಷಿಕ್ತರಾಗುತ್ತಿದ್ದರೆಂದು ಹೇಳಲಾಗಿದೆ. ಈ ಸ್ಥಳವು ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರ ಕಾಲದಲ್ಲಿಯೂ ಪ್ರಮುಖ ಸ್ಥಳವಾಗಿ ಮುಂದುವರೆಯಿತು. ಅನಂತರ ಇದು ಕಿಸುಕಾಡು-70 ಎಂಬ ಸಣ್ಣ ಪ್ರಾಂತ್ಯದ ಮುಖ್ಯ ನಗರವಾಗಿತ್ತು. ದೇವಾಲಯಗಳ ವಾಸ್ತುಶಿಲ್ಪ ದೃಷ್ಟಿಯಿಂದ ಗಮನಾರ್ಹ ಸಂಗತಿಯೆಂದರೆ ಚಾಲುಕ್ಯರ ಕಾಲದಲ್ಲಿ ದ್ರಾವಿಡ ಮತ್ತು ನಾಗರಶೈಲಿಯ ದೇವಾಲಯಗಳು ಅಕ್ಕಪಕ್ಕದಲ್ಲೇ ನಿರ್ಮಾಣಗೊಂಡಿವೆ. ಇಲ್ಲಿ ಹತ್ತು ಪ್ರಮುಖ ದೇವಾಲಯಗಳಿದ್ದು 9 ಶೈವ ಮತ್ತು ಒಂದು ಜೈನಧರ್ಮಕ್ಕೆ ಸೇರಿದ್ದು. ಇವೆಲ್ಲವೂ ನದಿಯ ಉತ್ತರ ದಂಡೆಯ ಮೇಲಿದ್ದು ವಾಸ್ತು ಗ್ರಂಥಗಳ ಪ್ರಕಾರ ಇದು ಪವಿತ್ರವಾದ ಸ್ಥಳ. ಪಟ್ಟದಕಲ್ಲಿನಲ್ಲಿ ಅತ್ಯಂತ ದೊಡ್ಡ ದೇವಾಲಯವೆಂದರೆ ವಿಶಾಲವಾದ ಪ್ರಾಕಾರದಿಂದ ಕೂಡಿದ ವಿರೂಪಾಕ್ಷ ದೇವಾಲಯ. ಈ ದೇವಾಲಯವನ್ನು ಎರಡನೆಯ ವಿಕ್ರಮಾದಿತ್ಯನ ಪತ್ನಿಯಾದ ಲೋಕಮಹಾದೇವಿಯು ವಿಕ್ರಮಾದಿತ್ಯನ ಕಂಚಿ ವಿಜಯದ ನೆನಪಿಗಾಗಿ ಕಟ್ಟಿದಳೆಂದು ಪ್ರತೀತಿ ಇದೆ.

## ಬನವಾಸಿಯ ಕದಂಬರು:

ಕ್ರಿ.ಶ.4ನೇ ಶತಮಾನದ ಮಧ್ಯಭಾಗದಲ್ಲಿ ಕನ್ನಡಿಗರ ರಾಜ್ಯವೊಂದು ತಲೆ ಎತ್ತಿತು. ಈ ರಾಜವಂಶದ ಹೆಸರೇ ಕದಂಬ. ಮಯೂರ ಶರ್ಮ ಈ ರಾಜ್ಯದ ಸಂಸ್ಥಾಪಕ. ಇವರ ರಾಜಧಾನಿ ಬನವಾಸಿ. ಇವರು ಸುಮಾರು 250 ವರ್ಷಗಳ ಕಾಲ ರಾಜ್ಯವನ್ನಾಳಿದರು. ಇವರ ರಾಜ್ಯವು ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಮತ್ತು ಹಾಸನ ಜಿಲ್ಲೆ.

ಶಿವಮೊಗ್ಗ ಜಿಲ್ಲೆಯ ತಾಲಗುಂದದಲ್ಲಿ ದೊರೆತಿರುವ ಕಾಕುಸ್ಥವರ್ಮನ ಶಾಸನ ಕದಂಬರ ಮೂಲದ ಬಗ್ಗೆ ವಿವರಣೆಯನ್ನು ನೀಡುತ್ತದೆ. ಇವರ ಕಾಲದಲ್ಲಿ ಹಲ್ಮಿಡಿ ಶಾಸನ (ಕ್ರಿ.ಶ.450) ರಚನೆಯಾಗಿತ್ತು.

## ಧಾರ್ಮಿಕ ಸ್ಥಿತಿಗತಿ:

ಮೂಲತಃ ಕದಂಬ ದೊರೆಗಳು ವೈದಿಕ ಧರ್ಮೀಯರು. ಈ ವಂಶದ ಮೂಲಪುರುಷ ಮಯೂರಶರ್ಮ ಬ್ರಾಹ್ಮಣನಾಗಿದ್ದ. ಶರ್ಮ ಎಂಬ ಉಪನಾಮ ತ್ಯಜಿಸಿ ಕ್ಷತ್ರಿಯರ 'ವರ್ಮ' ಎಂಬ ಉಪನಾಮ ಧರಿಸಿದ. ಇಲ್ಲಿ ವೈದಿಕದ ಜೊತೆ ಜೈನ ಮತ್ತು ಬೌದ್ಧಧರ್ಮಗಳು ಅಸ್ತಿತ್ವದಲ್ಲಿದ್ದವು.

ಶಿವನು ಕದಂಬರ ಆರಾಧ್ಯದೈವ. ಜೈನ ಸಂಪ್ರದಾಯಕ್ಕೂ ಕದಂಬರು ಪ್ರೋತ್ಸಾಹ ನೀಡಿದ ವಿಷಯ ಹಲಸಿ ತಾಮ್ರಪಟಗಳಿಂದ ತಿಳಿಯುತ್ತದೆ. ಬನವಾಸಿ ಇವರ ಬೌದ್ಧ ಕೇಂದ್ರವಾಗಿದ್ದು, ಕದಂಬರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಇವರ ಸಮಾಜದಲ್ಲಿ ಕಾಲಾಮುಖರು, ಕಾಪಾಲಿಕ, ಗೊರವರು ಮುಂತಾದ ಶೈವರಿದ್ದರು. ಮೃಗೇಶವರ್ಮನು ಜೈನ ಧರ್ಮಕ್ಕೆ ದಾನ ದತ್ತಿಗಳನ್ನು ನೀಡಿದ್ದನು. ಬನವಾಸಿಯಲ್ಲಿ 3 ಬೌದ್ಧಸ್ತೂಪಗಳು ಕಂಡುಬಂದಿದ್ದು, ಕದಂಬರಲ್ಲಿ ನಾಗಪೂಜೆ ಚಾಲ್ತಿಯಲ್ಲಿತ್ತೆಂದು ತಿಳಿದಿದೆ.

## ಸಾಹಿತ್ಯ:

ಕದಂಬರಾಜರು ವಿದ್ಯಾವಂತರೂ, ವಿದ್ಯಾಪ್ರೇಮಿಗಳು ಹಾಗೂ ವಿದ್ಯಾಪೋಷಕರೂ ಆಗಿದ್ದರು. ಅಗ್ರಹಾರಗಳು, ಬ್ರಹ್ಮಪುರಿ, ಮಠಗಳು ಮತ್ತು ಘಟಿಕಾಸ್ಥಾನಗಳು ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದವು. ಶಿಕಾರಿಪುರ ತಾಲ್ಲೂಕಿನ ಕುಪ್ಪಟೂರು ಸಕಲ ವಿದ್ಯೆಗಳ ಕೇಂದ್ರ. ವೇದ, ಉಪನಿಷತ್ತು, ಮೀಮಾಂಸ, ಇತಿಹಾಸ, ನಾಟಕ, ವಾತ್ಸಾಯನ, ಕಾಮಸೂತ್ರ, ಭರತನಾಟ್ಯ, ಗಣಿತಶಾಸ್ತ್ರ, ಜ್ಯೋತಿಷ್ಯ, ವ್ಯಾಕರಣ, ತರ್ಕಶಾಸ್ತ್ರ, ಧರ್ಮಶಾಸ್ತ್ರ ಮೊದಲಾದವುಗಳಲ್ಲಿ ಪಾರಂಪರಾಗತ ವಿದ್ವಾಂಸರಿದ್ದರು.

## ವಾಸ್ತುಶಿಲ್ಪ ಮತ್ತು ಶಿಲ್ಪಕಲೆ:

ಕರ್ನಾಟಕದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಬುನಾದಿ ಹಾಕಿಕೊಟ್ಟ ಕೀರ್ತಿಯು ಬನವಾಸಿ ಕದಂಬರಿಗೆ ಸಲ್ಲುತ್ತದೆ. ಕ್ರಿ.ಶ.4ನೇ ಶತಮಾನದಿಂದ 6ನೇ ಶತಮಾನದವರೆಗೂ ಆಳಿದ ಕದಂಬರು ಸರಳ ಹಾಗೂ ಸುಂದರ ದೇವಾಲಯಗಳನ್ನು ಸೃಷ್ಟಿ ಮಾಡಿದರು. ಇವುಗಳಲ್ಲಿ ಮುಖ್ಯವಾಗಿ, ತಾಳಗುಂದ, ಹಲಸಿ ಮತ್ತು ಬನವಾಸಿಯಲ್ಲಿವೆ.

ಇವರ ವಾಸ್ತುಶಿಲ್ಪದ ವಿಶೇಷಗಳೆಂದರೆ,

1) ಗರ್ಭಗುಡಿ

2) ಅಂತರಾಳ ಮಂಟಪ

3) ಘಂಟಾ ಮಂಟಪ

4) ಸಭಾ ಮಂಟಪ

5) ನೃತ್ಯ ಮಂಟಪ

ತಾಳಗುಂದದ ಪ್ರಣವೇಶ್ವರ ಸ್ವಾಮಿ ದೇವಾಲಯವು ಕದಂಬರ ಪ್ರಾರಂಭಿಕ ವಾಸ್ತುಶೈಲಿಗೆ ಉದಾಹರಣೆಯಾಗಿದೆ. ನುಣುಪಾದ ಕಲ್ಲನ್ನು ಬಳಸಿಕೊಂಡು ಕಟ್ಟಿರುವ ಈ ದೇವಾಲಯದಲ್ಲಿ ಅಲಂಕೃತ ಕಂಬಗಳು ಹಾಗೂ ವಿಗ್ರಹಗಳು ಗಮನ ಸೆಳೆಯುತ್ತವೆ.

ಬನವಾಸಿಯಲ್ಲಿನ ಮಧುಕೇಶ್ವರ ದೇವಾಲಯವು 6 ಮಂಟಪಗಳನ್ನು ಒಳಗೊಂಡಿದ್ದು, ಗರ್ಭಗುಡಿಯಿಂದ ಕೂಡಿದೆ. ಇಲ್ಲಿಯ ನಂದಿ ವಿಗ್ರಹ ಮತ್ತು ಕಂಬಗಳು ರಮಣೀಯವಾಗಿವೆ.

ಹಲಸಿಯ ಜೈನ ಬಸದಿ ಮೃಗೇಶವರ್ಮನಿಂದ ನಿರ್ಮಿಸಲ್ಪಟ್ಟಿತು. ಇಲ್ಲಿನ ಕಲ್ಲೇಶ್ವರ ದೇವಾಲಯ ಕದಂಬರ ವಾಸ್ತುಶಿಲ್ಪಕಲೆಯ ಮತ್ತೊಂದು ಹಂತವನ್ನು ಸೂಚಿಸುತ್ತದೆ.

ಯಲಹಟ್ಟಿಯ ಶಿವನ ದೇವಾಲಯದಲ್ಲಿ ಮೆಟ್ಟಿಲುಗಳಂತೆ ಮೇಲೇರಿರುವ ಪಿರ್‍ಯಾಮಿಡ್ ಆಕಾರದ ಶಿಖರವನ್ನು ಕಟ್ಟಿದ್ದಾರೆ. ಇದು ಕದಂಬ ವಾಸ್ತುಶಿಲ್ಪದ ವಿಶೇಷ ಲಕ್ಷಣ.

## ಶಿಲ್ಪಕಲೆ:

ಜಂಬೆಹಳ್ಳಿ ದೇವಾಲಯ (ಹಾಸನ)ದ ದುರ್ಗಾ ಶಿಲ್ಪಾಕೃತಿ ವಿಶಿಷ್ಟವಾಗಿದೆ. ಚತುರ್ಮುಖ ಮಹಿಷಿ ಮರ್ಧಿನಿಯಂತೆ ಕಾಣುವ ಈ ದುರ್ಗಾಶಿಲ್ಪವು ಕದಂಬ ಶಿಲ್ಪಕಲೆಗೆ ಉತ್ತಮ ಉದಾಹರಣೆಯಾಗಿದೆ.

ಘನಾಕೃತಿ ಕಂಬಗಳು, ಅಷ್ಟಸ್ರಾಕೃತಿ ಕಂಬಗಳು ಇವರ ವಿಶೇಷ ಹಾಸನದ ದೊಡ್ಡಗದ್ದವಳ್ಳಿ ಲಕ್ಷ್ಮೀ ದೇವಿ ದೇವಾಲಯವು ಕದಂಬ ವಿಮಾನಕ್ಕೆ ಮಾದರಿಯಂತಿದೆ.

## ತಲಕಾಡಿನ ಗಂಗರು:

ಕರ್ನಾಟಕದ ದಕ್ಷಿಣ ಭಾಗಗಳನ್ನು ಸುಮಾರು 6 ಶತಮಾನಗಳ ಕಾಲ ಆಳಿದ ಗಂಗರು ನಮ್ಮ ನಾಡಿನ ಇತಿಹಾಸದಲ್ಲಿ ಮಹತ್ವದ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ. ಇವರು ಕದಂಬರ ಸಮಕಾಲೀನರಾಗಿದ್ದು, ಕ್ರಿ.ಶ.350ರಿಂದ 550ರವರೆಗೆ ಸ್ವತಂತ್ರ ಅರಸರಾಗಿಯೂ ನಂತರ 10ನೇ ಶತಮಾನದವರೆಗೆ ಚಾಳುಕ್ಯ ಮತ್ತು ರಾಷ್ಟ್ರಕೂಟರ ಬಲಶಾಲಿ ಸಾಮಂತರಾಗಿಯೂ ಆಡಳಿತ ನಡೆಸಿದರು.

ಇವರನ್ನು 'ಗಂಗವಾಡಿ 96000' ಎಂದು ಕರೆಯಲಾಗುತ್ತಿತ್ತು. ಇವರ ರಾಜ್ಯ ಇಂದಿನ ಕೋಲಾರ, ತುಮಕೂರು, ಬೆಂಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ ಒಳಗೊಂಡಿತ್ತು. ರಾಜಧಾನಿಗಳು (ಪ್ರಾರಂಭದಲ್ಲಿ ಕೋಲಾರ (ಕುವಳಾಲಪುರ), ಮೈಸೂರಿನ ತಲಕಾಡು, ಚನ್ನಪಟ್ಟಣದ ಮಾಕುಂದ, ಬೆಂಗಳೂರಿನ ಮಣ್ಣೆ, ರಾಜಲಾಂಭನ ಆನೆ (ಮದರ್ಗ).

'ದಡಿಗ' ಈ ರಾಜ್ಯದ ಸ್ಥಾಪಕನಾಗಿದ್ದು, ಇವನ ನಂತರ ಮಾಧವ, ದುರ್ವಿನೀತ, ಶ್ರೀಪುರುಷ, 2ನೇ ಶಿವಮಾರ, 4ನೇ ರಾಚಮಲ್ಲ, ರಕ್ಕಸಗಂಗ ಮುಂತಾದವರು ಆಳಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

## ಧಾರ್ಮಿಕ ಸ್ಥಿತಿಗತಿ:

ಗಂಗರ ಕಾಲದಲ್ಲಿ ಧಾರ್ಮಿಕ ಸೌಹಾರ್ದ ಮನೋಭಾವವು ಎದ್ದು ಕಾಣುತ್ತಿತ್ತು. ಇವು ಸರ್ವಧರ್ಮ ಸಹಿಷ್ಣುಗಳಾಗಿದ್ದು ಶೈವರು, ವೈಷ್ಣವರು, ಜೈನ, ಬೌದ್ಧ, ಸರ್ಪಾರಾಧಕರು, ಪಾಶುಪತರು ಇದ್ದರು.

ಇಲ್ಲಿ ಜೈನ ಧರ್ಮವು ಪ್ರಬಲವಾದ ಧರ್ಮವಾಗಿತ್ತು. ಗಂಗರಸ ಮತ್ತು ಮಂತ್ರಿಗಳು ಜೈನ ಬಸದಿಗೆ ವಿಶೇಷ ದಾನದತ್ತಿ ನೀಡಿದ್ದಾರೆ. ಶ್ರವಣಬೆಳಗೊಳ, ಕಂಬದಹಳ್ಳಿ ಮುಂತಾದೆಡೆ ಅನೇಕ ಜೈನ ದೇಗುಲ ಸ್ಥಾಪನೆಯಾದವು. ವಿಪುಲ ಜೈನ ಸಾಹಿತ್ಯ ರಚನೆಯಾಯಿತು.

ಶೈವ ಮತ್ತು ವೈಷ್ಣವ ಪಂಗಡಗಳು ಪ್ರಬಲವಾಗಿದ್ದವು. ತಲಕಾಡು ಮತ್ತು ಮಣ್ಣೆಯಲ್ಲಿ ಅನೇಕ ಶಿವದೇವಾಲಯ ಕಟ್ಟಲಾಗಿದೆ. ಗಂಗರ ಶಾಸನಗಳು ಅನಂತ ಪದ್ಮನಾಭನ ಸ್ತುತಿಯಿಂದ ಪ್ರಾರಂಭವಾಗುವುದರಿಂದ ವೈಷ್ಣವ ಪಂಥವು ಜನಪ್ರಿಯವಿತ್ತು ಎಂದು ತಿಳಿಯುತ್ತದೆ. ದುರ್ವಿನೀತ ಮತ್ತು ಶ್ರೀಪುರುಷರು ಅನೇಕ ಹಳ್ಳಿಗಳನ್ನು ಬ್ರಾಹ್ಮಣರಿಗೆ ದತ್ತಿಯಾಗಿ ನೀಡಿದ್ದರು. ಬೌದ್ಧಧರ್ಮ ಗಂಗ ಮತ್ತು ಕದಂಬರ ಕಾಲದಲ್ಲಿ ಕುಗ್ಗಿತು.

## ಸಾಹಿತ್ಯ:

ಇವರ ಕಾಲದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳು ಪ್ರಗತಿ ಹೊಂದಿದವು. ಕವಿ ಭಾರವಿಯು ದುರ್ವಿನೀತನ ಆಸ್ಥಾನದಲ್ಲಿದ್ದನು. ಭರವಿಯ ಕಿರಾತಾರ್ಜುನಕ್ಕೆ ದುರ್ವಿನೀತನು ಭಾಷ್ಯ ಬರೆದನು ಮತ್ತು ಗುಣಾಢ್ಯನ ಬೃಹತ್‌ಕಥಾವನ್ನು ಪ್ರಾಕೃತದಿಂದ ಸಂಸ್ಕೃತಕ್ಕೆ ಭಾಷಾಂತರಿಸಿದನು.

ಶ್ರೀ ಪುರುಷನು ಗಜಶಾಸ್ತ್ರ, ಪೂಜ್ಯಪಾದರ ಶಬ್ದಾವತಾರ, ವಾದೀಭಸಿಂಹ ಗದ್ಯಚಿಂತಾಮಣಿ, 2ನೇ ಶಿವಮಾರ ಗಜಾಷ್ಟಕ ಅಥವಾ ಗಜಶತಕ (ಕವಿತೆ), ಚಾವುಂಡರಾಯನ ಚಾವುಂಡರಾಯ ಪುರಾಣ (ಜೈನ ತೀರ್ಥಂಕರರ ವಿವರಣೆ) 1ನೇ ನಾಗವರ್ಮನ ಛಂದೋಂಬುಧಿ, 1ನೇ ಗುಣವರ್ಮನ ಹರಿವಂಶ, ಶೂದ್ರಕ ಹೀಗೆ ಗಂಗರ ಕಾಲದಲ್ಲಿ ಸಾಹಿತ್ಯ ಸಾಕಷ್ಟು ಪ್ರಗತಿಯಲ್ಲಿತ್ತು.

## ಗಂಗರ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ:

ಇವರ ಕಾಲದಲ್ಲಿ ಶಿಲ್ಪಕಲೆ ಮತ್ತು ವಾಸ್ತುಶಿಲ್ಪ ಹೆಚ್ಚಿನ ಪ್ರಗತಿಯನ್ನು ಸಾಧಿಸಿತು. ಪಲ್ಲವರ ಶೈಲಿಯಿಂದ ಸ್ಫೂರ್ತಿಗೊಂಡು ಗಂಗರು ಸುಂದರ ದೇವಾಲಯ, ಬಸದಿಗಳನ್ನು ಕಲ್ಲಿನಲ್ಲಿ ಕಟ್ಟಿದರು.

ತಲಕಾಡಿನ ಅರ್ಕೇಶ್ವರ, ಪಾತಾಳೇಶ್ವರ, ಮರುಳೇಶ್ವರ, ಕೋಲಾರದ ಕೋಲಾರಮ್ಮ ದೇವಾಲಯ, ಮಣಿಯ ಕಪಿಲೇಶ್ವರ, ನರಸಮಂಗಲದ ಶಿವಾಲಯ, ಬೇಗೂರು ನಾಗೇಶ್ವರ ಮುಂತಾದವು ಪ್ರಸಿದ್ಧವಾದವು. ಚಂದ್ರಗಿರಿಯ ಶಾಂತಿನಾಥ ಬಸದಿ, ಚಂದ್ರಪ್ರಭ, ಮತ್ತು ಚಾವುಂಡರಾಯ ಬಸದಿ ಪ್ರಮುಖವಾಗಿವೆ.

ಜೈನ ಬಸದಿಗಳಲ್ಲಿ ತೀರ್ಥಂಕರರ ವಿಗ್ರಹ ಇಡಲಾಗಿದೆ. ಚಾವುಂಡರಾಯ ಬಸದಿಯಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮುಖಮಂಟಪ ಇಡಲಾಗಿದೆ.

ಗೋಮ್ಮಟೇಶ್ವರ ಮೂರ್ತಿಯು 58 ಅಡಿ ಎತ್ತರವಿದೆ. ಇದನ್ನು ಚಾವುಂಡರಾಯ ಕೆತ್ತಿಸಿದನು. ಇದು ಏಕಶಿಲಾ ವಿಗ್ರಹವಾಗಿದ್ದು ಇದರ ಶಿಲ್ಪಿ ಅರಿಷ್ಟನೇಮಿ. ಇದನ್ನು ಕ್ರಿ.ಶ.981ರಲ್ಲಿ ನಿರ್ಮಿಸಲಾಗಿದೆ.

ಚಿಕ್ಕಬಳ್ಳಾಪುರದಲ್ಲಿ ಭೋಗನಂಧೀಶ್ವರ ದೇವಾಲಯ (ಗರ್ಭಗೃಹ, ನವರಂಗ, ಮಕರತಲೆ, ಯಕ್ಷಕ ಸಂಗೀತ ಗುಂಪು).

ಕೋಲಾರದ ರಾಮೇಶ್ವರ ದೇವಾಲಯ, ಸುತ್ತೂರಿನ ನಾರಾಯಣ ಸ್ವಾಮಿ, ವರುಣ ಕ್ಷೇತ್ರದ ಮಹಾಲಿಂಗೇಶ್ವರ ದೇವಾಲಯ, ಕೆ.ಆರ್.ಪೇಟೆ ಸಂಗಮೇಶ್ವರ ಇತ್ಯಾದಿ.

## ಬಾದಾಮಿ ಚಾಳುಕ್ಯರು:

ಸುಮಾರು 200 ವರ್ಷಗಳ ಕಾಲ (540–757) ಕರ್ನಾಟಕವನ್ನು ಆಳಿದ ಚಾಳುಕ್ಯ ವಂಶ ಭಾರತದ ಪ್ರಾಚೀನ ಪ್ರಬಲ ರಾಜಮನೆಗಳಲ್ಲೊಂದು. ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂದ್ರ, ಒರಿಸ್ಸಾ, ತಮಿಳುನಾಡಿನ ಭೂ ಭಾಗಗಳು ಚಾಳುಕ್ಯರ ಅಧೀನಕ್ಕೊಳಪಟ್ಟಿದ್ದವು. ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದ ಕಾವೇರಿ ನದಿಯವರೆಗೂ ಇವರ ಸಾಮ್ರಾಜ್ಯ ಹಬ್ಬಿತು. ಬಾದಾಮಿ (ಬಾಗಲಕೋಟೆ) ಇವರ ರಾಜಧಾನಿಯಾಗಿದ್ದು, ಇವರ ರಾಜ ಲಾಂಛನ ವರಾಹ.

ಜಯಸಿಂಹನು ಚಾಳುಕ್ಯ ಮನೆತನದ ಮೂಲಪುರುಷ. ಇವನ ನಂತರ ರಣರಾಗ, 1ನೇ ಪುಲಿಕೇಶಿ, 1ನೇ ಕೀರ್ತಿವರ್ಮ, ಮಂಗಳೇಶ, 2ನೇ ಪುಲಿಕೇಶಿ, 1ನೇ ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯ, 2ನೇ ವಿಕ್ರಮಾದಿತ್ಯ, ಇಮ್ಮಡಿ ಕೀರ್ತಿವರ್ಮ, ಹೀಗೆ ಹಲವಾರು ರಾಜರು ಆಳಿ ತಮ್ಮದೇ ಆದಂತಹ ಕೊಡುಗೆಗಳನ್ನು ನೀಡಿದರು.

## ಧಾರ್ಮಿಕ ಸ್ಥಿತಿಗತಿ:

ಚಾಳುಕ್ಯರ ಧರ್ಮ ವೈಶಾಲ್ಯತೆಯಿಂದಾಗಿ ಹಲವಾರು ಧರ್ಮಗಳು ಒಟ್ಟಿಗೆ ಉಸಿರಾಡುತ್ತಿದ್ದವು. ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಗಳು ಅಸ್ತಿತ್ವದಲ್ಲಿದ್ದವು. ಬಾದಾಮಿ ಐಹೊಳೆಗಳಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಸ್ಮಾರಕಗಳು ಮತ್ತು ಶಿಲ್ಪಗಳು ದೊರೆತಿವೆ. 2ನೇ ಮತ್ತು 3ನೇ ಗುಹೆಗಳ ನಡುವೆ ನೈಸರ್ಗಿಕ ಗವಿ ಇದ್ದು 'ಬೋಧಿಸತ್ವ ಪದ್ಮ ಪಾಣಿ' ಎಂಬ ಬೌದ್ಧ ಧರ್ಮದ ಉಬ್ಬುಶಿಲ್ಪವಿದೆ. ಐಹೊಳೆಯಲ್ಲಿ ಬೌದ್ಧ ಚೈತನ್ಯವಿದೆ. ಹ್ಯೂಯೆನ್‌ತ್ಸಾಂಗನು 10 ಸಾವಿರ ಬೌದ್ಧರಿದ್ದರೆಂದು ದಾಖಲಿಸಿದ್ದಾನೆ.

ಬೌದ್ಧಧರ್ಮಕ್ಕಿಂತ ಜೈನಧರ್ಮವು ಉನ್ನತ ಸ್ಥಿತಿಯಲ್ಲಿತ್ತು. ಬಾದಾಮಿ ಮತ್ತು ಐಹೊಳೆಗಳಲ್ಲಿ ಜೈನಗುಹೆಗಳು ನಿರ್ಮಾಣಗೊಂಡಿವೆ. ಚಾಳುಕ್ಯ ಸಾಮಂತರು ಮತ್ತು ಮಾಂಡಲೀಕರು ಜೈನಧರ್ಮವನ್ನು ಘೋಷಿಸಿದ್ದರು. ಹಲವಾರು ಜೈನ ಸ್ಮಾರಕ ಮತ್ತು ಶಾಸನಗಳಿಂದ ಗಮನಿಸಬಹುದಾಗಿದೆ. ಬಡವರಲ್ಲಿ ಮತ್ತು ನಿರ್ಗತಿಕರಲ್ಲಿ ಜೈನಧರ್ಮದ ಬಗ್ಗೆ ಅಪಾರ ಪ್ರೀತಿಗಳಿದ್ದವು. ಕೊಪ್ಪಳವೂ ಕೂಡ ಜೈನ ಕೇಂದ್ರವಾಗಿತ್ತು. ಶೇ.30ರಷ್ಟು ಜನರು ಜೈನರಾಗಿದ್ದಾರೆ.

ಶೈವಧರ್ಮವೂ ಪ್ರಧಾನ ಧರ್ಮವಾಗಿದ್ದು ಪಾಶುಪತ ಮತ್ತು ಕಾಳಾಮುಖಗಳು ಚಾಲುಕ್ಯ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು. ಬಾದಾಮಿಯ 1ನೇ ಶೈವಗುಹೆಯಾಗಿದ್ದ ಇದನ್ನು ಮಂಗಳೇಶನು ಕಟ್ಟಿಸಿದನು. ಇವನು ಶೈವಧರ್ಮದ ಅನುಯಾಯಿಯಾಗಿದ್ದು ಮಹಾಕೂಟೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿದನು.

ಚಾಳುಕ್ಯ ದೊರೆಗಳಲ್ಲಿ ಅನೇಕರು ವೈಷ್ಣವರಾಗಿದ್ದ ತಮ್ಮನ್ನು ಪರಮಭಾಗವತರೆಂದು ಕರೆದುಕೊಂಡಿದ್ದಾರೆ. ಇವರ ಲಾಂಛನ ವರಾಹ. ಇದು ವೈಷ್ಣವ ಧರ್ಮದ ಸಂಕೇತವಾಗಿದೆ. 2ನೇ ಗುಹೆ ವೈಷ್ಣವ ಗುಹೆಯಾಗಿದೆ. ಗೋಡೆ ಮೇಲೆ ವರಾಹ, ವಾಮನ ವಿಷ್ಣುವಿನ ಅನೇಕ ಮೂರ್ತಿಗಳಿವೆ. 3ನೇ ಗುಹೆಯೂ ವೈಷ್ಣವ ಗುಹೆಯೇ ಆಗಿದೆ.

### ಸಾಹಿತ್ಯದ ಬೆಳವಣಿಗೆ:

ಈ ಕಾಲದಲ್ಲಿ ರಚನೆಯಾದ ಸುಂದರ ಕನ್ನಡ, ಸಂಸ್ಕೃತ ಶಾಸನಗಳು ಮತ್ತು ಕೃತಿಗಳನ್ನು ಗಮನಿಸಿದರೆ ಸಾಹಿತ್ಯ ಕ್ಷೇತ್ರದಲ್ಲಾದ ಪ್ರಗತಿಯನ್ನು ಅಳೆಯಬಹುದು.

1) ರವಿಕೀರ್ತಿಯ ಐಹೊಳೆ ಶಾಸನವು ಸಂಸ್ಕೃತ ಸಾಹಿತ್ಯ ಪ್ರೌಢಿಮೆ ಸಾರುತ್ತದೆ.

2) ಮಂಗಳೇಶನ ಗುಹಾಶಾಸನ.

3) ಕಪ್ಪೆ ಅರೆಭಟ್ಟನ ತ್ರಿಪದಿ ಶಾಸನ.

2ನೇ ಪುಲಿಕೇಶಿಯ ಸೊಸೆ ವಿಜಯಭಟ್ಟಾರಿಕೆ ವಿದ್ಯಾವಂತ ಮಹಿಳೆಯಾಗಿದ್ದು 'ಕೌಮುದಿ ಮಹೋತ್ಸವ' ಎಂಬ ಸಂಸ್ಕೃತ ನಾಟಕ ಬರೆದಿದ್ದಾಳೆ. ಮತ್ತು ಶಿವಭಟ್ಟಾರಕನು 'ಹರಪಾರ್ವತೀಯ' ಸಂಸ್ಕೃತ ನಾಟಕ ರಚಿಸಿದ್ದನು.

## ವಾಸ್ತುಶಿಲ್ಪ ಮತ್ತು ಶಿಲ್ಪಕಲೆ:

ದಕ್ಷಿಣ ಭಾರತದ ದೇವಾಲಯಗಳ ಪರಂಪರೆಯಲ್ಲಿ ಬಾದಾಮಿ ಚಾಳುಕ್ಯರು ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭಿಸಿದರು. ಐಹೊಳೆ, ಪಟ್ಟದಕಲ್ಲು, ಬಾದಾಮಿಯಲ್ಲಿ ರೂಪುಗೊಂಡ ದೇವಾಲಯಗಳು ಚಾಳುಕ್ಯರ ಒಂದು ನೂತನ ಶೈಲಿಯ ವಿಕಾಸವನ್ನು ತೋರಿಸುತ್ತವೆ. 1 ಗರ್ಭಗುಡಿಯಿಂದ ಕೂಡಿದ ಸಣ್ಣಗುಡಿಗಳಿಂದ ಹಿಡಿದು ಸಂಕೀರ್ಣ ಬೃಹತ್ ದೇವಾಲಯಗಳು ಇಲ್ಲಿ ನಿರ್ಮಾಣಗೊಂಡವು.

**ಚಾಳುಕ್ಯರ ದೇವಾಲಯದ ಪ್ರಮುಖ ಲಕ್ಷಣಗಳೆಂದರೆ:**

1) ಸಾದಾ ಮತ್ತು ಚಿಕ್ಕದಾದ ತಳವಿನ್ಯಾಸ.

2) ಚಚ್ಚೌಕಾರದ ಗರ್ಭಗೃಹ ಮತ್ತು ಶಿಖರ.

3) ದೇವಾಲಯದ ಒಳಭಾಗದಲ್ಲಿ ಗರ್ಭಗೃಹದ ಸುತ್ತ ಪ್ರದಕ್ಷಿಣಪಥ.

4) ಸಭಾಮಂಟಪ ಮತ್ತು ಮುಖಮಂಟಪ.

5) ಲಾಳದಾಕಾದ ತಲವಿನ್ಯಾಸ (ಕೆಲವು ಕಡೆ).

6) ದೇವಾಲಯಗಳು 3.4 ಅಡಿ ಎತ್ತರದ ಜಗತಿ ಮೇಲೆ ನಿಂತಿರುವುದು.

7) ಗೋಡೆಗಳು ಹೊಯ್ಸಳರ ದೇಗುಲದಂತೆ ಕುಸುರಿ ಕಲೆಯಿಂದ ಕೂಡಿದ್ದು.

8) ಗಜಪುಷ್ಠಾಕಾರದ ತಳವಿನ್ಯಾಸದ ದೇವಾಲಯಗಳಿವೆ. ಉದಾ: ಐಹೊಳೆಯ ದುರ್ಗಾ ದೇವಾಲಯ.

9) ಒಂದೇ ಸ್ಥಳದಲ್ಲಿ ದ್ರಾವಿಡ, ರೇಖಾಸಾಗರ ಮತ್ತು ಕದಂಬಸಾಗರ ಶಿಖರಗಳುಳ್ಳ ದೇವಾಲಯ ನಿರ್ಮಾಣ.

10) ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಬೋಧಿಗೆ ಶಿಲ್ಪ ಅಳವಡಿಕೆ.

11) ತ್ರಿಕೂಟ ದೇವಾಲಯದ ಕಟ್ಟಡ ಕಲೆ. ಕಬಂಬಗಳ ಮೇಲೆ ಪದಕಗಳ ಮಾದರಿಯ ಅಲಂಕಾರಗಳಲ್ಲಿ ಹಂಸ, ಮಕರ, ಹೂಬಳ್ಳಿ, ಪಕ್ಷಿ, ಮಾನವ ಇತ್ಯಾದಿಗಳನ್ನು ಕೆತ್ತಲಾಗಿದೆ.

ಪಟ್ಟದಕಲ್ಲಿನ ದೇವಾಲಯಗಳು ದ್ರಾವಿಡ ಮತ್ತು ನಾಗರಶೈಲಿ ಎರಡರಲ್ಲೂ ನಿರ್ಮಾಣವಾದ್ದರಿಂದ ಇದನ್ನು 'ದೇವಾಲಯ ವಾಸ್ತುಶೈಲಿಗಳ ಪ್ರಯೋಗಶಾಲೆ' ಎಂದು ಕರೆಯಲಾಗಿದೆ.

ಚಾಳುಕ್ಯರ ದೇವಾಲಯಗಳು ಉತ್ತರ ಕರ್ನಾಟಕದಲ್ಲಿ ಹೇರಳವಾಗಿ ಸಿಗುತ್ತವೆ. ಗೋಕಾಕ್‌ನ ಶಿವದೇವಾಲಯ, ಕೊಲ್ಲಾಪುರದ ಮಹಾಲಕ್ಷ್ಮೀ, ಬಾದಾಮಿ, ಐಹೊಳೆ, ಪದ್ದಟಕಲ್ಲು, ಲಕ್ಕುಂಡಿ ಇತ್ಯಾದಿ.

## ಬಾದಾಮಿಯಲ್ಲಿ:

ಚಾಳುಕ್ಯರು ಬಾದಾಮಿಯಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳಿಗೆ ಸಂಬಂಧಿಸಿದ 4 ಗುಹೆಗಳನ್ನು ಕೊರೆಸಿ ರಾಜ್ಯದಲ್ಲಿ ಹೊಸ ಕಲಾ ಪರಂಪರೆ ಬೆಳೆಸಿದರು.

1ನೇ ಗುಹೆ: ಶೈವ ಗುಹೆ. ಇಲ್ಲಿ ಮುಖಮಂಟಪ, ರಂಗಮಂಟಪ, ಗರ್ಭಗೃಹಗಳಿವೆ. 18 ಕೈಗಳ ನಟರಾಜನ ಶಿಲ್ಪವಿದೆ.

2ನೇ ಗುಹೆ: ವೈಷ್ಣವ ಗುಹೆ. ಗೋಡೆ ಮೇಲೆ ವರಾಹ, ವಿಷ್ಣುವಿನ ಚಿತ್ರಗಳಿವೆ.

3ನೇ ಗುಹೆ: ವೈಷ್ಣವ ಗುಹೆ. ಅತ್ಯಂತ ದೊಡ್ಡ ಗುಹೆ. ಮಂಗಳೇಶನಿಂದ ನಿರ್ಮಾಣ.

4ನೇ ಗುಹೆ: ಜೈನ ಗುಹೆ. ಇಲ್ಲಿ ಯಕ್ಷ ಯಕ್ಷಿಣಿಯರ ಶಿಲ್ಪಗಳಿವೆ. ಆದಿನಾಥ ಸ್ವಾಮಿಗೆ ಚಾಮರ ಬೀಸುತ್ತಿರುವ ದೃಶ್ಯವಿದೆ.

ಗುಹಾಂತ ಜಿನಾಲಯ, ಭೂತನಾಥ ದೇವಾಲಯ, ತ್ರಿಮೂರ್ತಿ ದೇವಾಲಯ, ಬನಶಂಕರಿ, ಮಹಾಕೂಟದ ಮಹಾಕೂಟೇಶ್ವರ ದೇವಾಲಯ (ನಂದಿ ವಿಗ್ರಹ).

## ಪಟ್ಟದ ಕಲ್ಲಿನಲ್ಲಿ:

ಶಿವ, ವಿಷ್ಣು ದೇವಾಲಯ, ಪಾಪನಾಥ ದೇವಾಲಯ (ರೇಖಾನಾಗ ಶೈಲಿ – ಇಲ್ಲಿ ರಾಮಾಯಣ ಕಥೆ ಕೆತ್ತಲಾಗಿದೆ. ಏಕಶಿಲಾ ನಂದಿ), ವಿರೂಪಾಕ್ಷ ದೇವಾಲಯ (ದ್ರಾವಿಡ ಶೈಲಿ), ಮಲ್ಲಿಕಾರ್ಜುನ ದೇವಾಲಯ (18 ಕಂಬ ಹೊಂದಿದೆ), ಸಂಗಮೇಶ್ವರ ದೇವಾಲಯ, ಗಳಗನಾಥ ದೇವಾಲಯಗಳಿವೆ. ಇದನ್ನು 'ವಿಶ್ವಪರಂಪರೆ ಕೇಂದ್ರ' ಎಂದು ಗುರುತಿಸಲಾಗಿದೆ.

## ಐಹೊಳೆಯಲ್ಲಿ:

1) ಲಾಡಖಾನ್ ದೇವಾಲಯ: ಶಿವಾಲಯವಾಗಿದೆ. ಇಲಲಿ ಸಮತಟ್ಟಾದ ಮೇಲ್ಛಾವಣಿ ಇದ್ದು ಚೌಕಾಕಾರದ ಕಂಬಗಳಿವೆ. ರತಿ, ಮನ್ಮಥರ ಶಿಲ್ಪಗಳು.

2) ದುರ್ಗಾ ದೇವಾಲಯ: ಬೌದ್ಧರ ಚೈತ್ಯಾಲಯಗಳ ಮಾದರಿ. ನಾಗರ ಶೈಲಿಯ ಶಿಖರ, ಹಿಂಭಾಗ ದುಂಡಾಗಿದೆ. ಶಿಖರ ದೇಗುಲದ ಮಧ್ಯಭಾಗದಲ್ಲಿದೆ.

3) ಹುಚ್ಚಿಮಲ್ಲಿ ಗುಡಿ ಇತ್ಯಾದಿ.

## ರಾಷ್ಟ್ರಕೂಟರು:

ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಚಾಲುಕ್ಯರನ್ನು ಪದಚ್ಯುತಿಗೊಳಿಸಿ ಕ್ರಿ.ಶ.8ನೇ ಶತಮಾನದ ಮಧ್ಯಭಾಗದಿಂದ 10ನೇ ಶತಮಾನದ ಅಂತ್ಯದವರೆಗೆ ದಕ್ಷಿಣ ಭಾರತದಲ್ಲಿ ಪ್ರಬಲವಾದಂತಹ ಆಳ್ವಿಕೆ ನಡೆಸಿದರು.

ರಾಜಧಾನಿ–ಬಿಜಾಪುರ ಜಿಲ್ಲೆಯ ಮಳಖೇಡ ಅಥವಾ ಮಾನ್ಯಖೇಟ.

ಲಾಂಛನ–ಗರುಡ.

ಧ್ವಜವನ್ನು–ಪಾಳಿ ಎನ್ನಲಾಗುತ್ತಿತ್ತು.

ದಂತಿದುರ್ಗನು ರಾಷ್ಟ್ರಕೂಟ ವಂಶದ ಮೂಲಪುರುಷನಾಗಿದ್ದು ಈತನೇ ರಾಷ್ಟ್ರಕೂಟರ ಪ್ರಥಮ ದೊರೆ. ಇವನ ನಂತರ 1ನೇ ಕೃಷ್ಣ, 2ನೇ ಗೋವಿಂದ, ಧ್ರುವ, 3ನೇ ಗೋವಿಂದ, ಅಮೋಘವರ್ಷ ನೃಪತುಂಗ, 2ನೇ ಕೃಷ್ಣ, 3ನೇ ಇಂದ್ರ, 3ನೇ ಕೃಷ್ಣ ಮುಂತಾದವರು ಆಳ್ವಿಕೆ ನಡೆಸಿದರು.

## ಧಾರ್ಮಿಕ ಸ್ಥಿತಿಗತಿ:

ಇಲ್ಲಿ ವೈದಿಕ ಧರ್ಮವು ಪ್ರಮುಖವಾದ ಧರ್ಮವಾಗಿದ್ದರೂ ಕೂಡ ಅಮೋಘವರ್ಷನ ಆಳ್ವಿಕೆಯಲ್ಲಿ ಜೈನ ಧರ್ಮವು ರಾಜಾಶ್ರಯ ಪಡೆದಿತ್ತು. ಕೊಲ್ಲಾಪುರದ ಮಹಾಲಕ್ಷ್ಮಿಗೆ ತನ್ನ ಕೈಬೆರಳನ್ನು ಕತ್ತರಿಸಿ ಅರ್ಪಿಸಿದ್ದು, ಆತ ಹಿಂದೂ ಧರ್ಮದ ಮೇಲಿಟ್ಟ ನಂಬಿಕೆಯಾಗಿತ್ತು. ಉಳಿದ ಅರಸರು ವೈದಿಕ ಆರಾಧಕರಾಗಿದ್ದರು. ಶಿವ, ವಿಷ್ಣು, ಮಹಾಲಕ್ಷ್ಮೀ, ಸೂರ್ಯ, ಶಾರದೆ, ನಾಗದೇವತೆಗಳ ಪೂಜೆಗಳು ಹೆಚ್ಚು ಪ್ರಚಲಿತವಾಗಿದ್ದವು. ಇಸ್ಲಾಂ ಧರ್ಮದವರು ಪಶ್ಚಿಮ ತೀರದಲ್ಲಿ ಮಸಿದಿ ಕಟ್ಟಿಕೊಳ್ಳಲು ರಾಷ್ಟ್ರಕೂಟ ಅರಸರು ಅನುಮತಿ ನೀಡಿದ್ದರು.

## ಸಾಹಿತ್ಯ:

ಇವರ ಕಾಲದಲ್ಲಿ ಕನ್ನಡ ಸಾಹಿತ್ಯ ವಿಫುಲವಾಗಿ ಬೆಳೆಯಿತು. ಅನೇಕ ತಾಮ್ರ ಶಾಸನಗಳು, ಶಿಲಾ ಶಾಸನಗಳು, ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟವು. ಕನ್ನಡದ ಪ್ರಥಮ ಕೃತಿ 'ಕವಿರಾಜಮಾರ್ಗ'ವು ಈ ಕಾಲದಲ್ಲಿ ರಚಿಸಲ್ಪಟ್ಟಿತು. ಇದು ಶ್ರೀವಿಜಯನ ಕೃತಿಯಾಗಿದೆ.

ಕನ್ನಡದ ಕವಿಚಕ್ರವರ್ತಿಗಳಲ್ಲಿ ಪ್ರಥಮರೆನ್ನಲಾದ ಪೊನ್ನ 3ನೇ ಕೃಷ್ಣನ ಆಸ್ಥಾನದಲ್ಲಿ ಇದ್ದನು. ಈತ ಉಭಯ ಕವಿ ಚಕ್ರವರ್ತಿ ಬಿರುದು ಪಡೆದಿದ್ದನು.

ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿ ಪಂಪ ಆಶ್ರಯ ಪಡೆದಿದ್ದನು. ಶಾಕಟಾಯನನು ಶಬ್ದಾಶಾಸನ ಎಂಬ ಕೃತಿಯನ್ನು ರಚಿಸಿದನು.

**ಇವರ ಕಾಲದಲ್ಲಿ ರಚಿತವಾದ ಸಾಹಿತ್ಯಗಳೆಂದರೆ:**

ನೃಪತುಂಗ (ಶ್ರೀವಿಜಯ) – ಕವಿರಾಜಮಾರ್ಗ

ಪಂಪ (ಆದಿಕವಿ) – ವಿಕ್ರಮಾರ್ಜುನ

ವಿಜಯ (ಪಂಪ ಭಾರತ) – ಆದಿಪುರಾಣ

ಪೊನ್ನ – ಶಾಂತಿನಾಥ ಪುರಾಣ (16ನೇ ತೀರ್ಥಂಕರ)

ಶಿವಕೋಟ್ಯಾಚಾರ್ಯ – ವಡ್ಡಾರಾಧನೆ

ತ್ರಿವಿಕ್ರಮ – ನಳಚಂಪು

ಹಲಾಯುಧ – ಮಿತ್ರ ಸಂಜೀವಿನಿ ಮತ್ತು ಕವಿರಹಸ್ಯ

ಜಿನಸೇನಾಚಾರ್ಯ – ಹರಿವಂಶ

ಶಂಕರಾಚಾರ್ಯ – ಆನಂದಲಹರಿ, ಸೌಂದರ್ಯಲಹರಿ, ವಿವೇಕಚೂಡಾಮಣಿ

ಮಹಾವೀರಾಚಾರ್ಯ – ಗಣಿತಸಾರ ಸಂಗ್ರಹ

ನಾಗಚಂದ್ರನು ಪಂಪನನ್ನು ಕುರಿತು 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದಿದ್ದಾನೆ.

## ಕಲೆ ಮತ್ತು ವಾಸ್ತುಶಿಲ್ಪ:

ಪ್ರಾಚೀನ ಭಾರತದ ಉನ್ನತ ಕಲಾ ಚೆಲುವನ್ನು ಅರಿಯಲು ರಾಷ್ಟ್ರಕೂಟರ ಕಲಾಕೃತಿಗಳ ಅವಲೋಕನ ಅತ್ಯಾವಶ್ಯಕವಾಗಿದೆ. ಕಲಾಭಿಮಾನಿಗಳಾದ ರಾಷ್ಟ್ರಕೂಟರ ಕಾಲದಲ್ಲಿ ಕಲೆ ತನ್ನ ಸಂಪೂರ್ಣ ಶ್ರೀಮಂತಿಕೆಯನ್ನು ಪಡೆದುಕೊಂಡಿತು.

**ಇವರ ದೇವಾಲಯ ಲಕ್ಷಣಗಳೆಂದರೆ;**

1) ನಕ್ಷತ್ರಾಕಾರದ ಅಡಿಪಾಯದ ಮೇಲೆ ಅಲಂಕಾರಿಕ ದೇವಾಲಯಗಳ ನಿರ್ಮಾಣ.

2) ಕೆಲವು ದೇವಾಲಯಗಳು ಎತ್ತರದ ಜಗತಿ ಮೇಲೆ ನಿರ್ಮಾಣಗೊಂಡಿವೆ.

3) ಪ್ರವೇಶ ದ್ವಾರದಲ್ಲಿ ಅಲಂಕಾರಿಕ ಕೆತ್ತನೆಗೆ ಅವಕಾಶ ಕಲ್ಪಿಸಿದೆ.

4) ಆಯತಾಕಾರದ ದೇವಾಲಯದ ನಿರ್ಮಾಣ.

5) ಸುಂದರ ಕಂಬಗಳ ಮತ್ತು ಜಲಾಂದರಗಳ ಅಳವಡಿಕೆ.

6) ದ್ವಿಕೂಟ ಮತ್ತು ತ್ರಿಕೂಟ ದೇವಾಲಯ ನಿರ್ಮಾಣ.

7) ಬೌದ್ಧ, ಜೈನ, ಹಿಂದೂ ದೇವಾಲಯ ನಿರ್ಮಾಣ.

8) ಕೆಂಪು ಮತ್ತು ಕಪ್ಪು ಕಲ್ಲುಗಳನ್ನು ಆಲಯಗಳ ನಿರ್ಮಾಣದಲ್ಲಿ ಬಳಕೆ.

9) ಚಾಳುಕ್ಯ ವಾಸ್ತುಶೈಲಿ ಮುಂದುವರಿಕೆ.

**ಇವರ ಪ್ರಮುಖ ವಾಸ್ತುಶಿಲ್ಪಗಳೆಂದರೆ:**

1) ಎಲ್ಲೋರಾದ ಕೈಲಾಸನಾಥ ದೇವಾಲಯ: ಒಂದೇ ದೊಡ್ಡ ಬಂಡೆಗಲ್ಲಿನಲ್ಲಿ ಕೊರೆದು ನಿರ್ಮಿಸಲಾಗಿದೆ. (1ನೇ ಕೃಷ್ಣ). ಇದು ಮಹಾರಾಷ್ಟ್ರದಲ್ಲಿದೆ. ಉದ್ದ 276 ಅಡಿ, ಅಗಲ 154 ಅಡಿ, 4 ಭಾಗಗಳಿದ್ದು ಮುಖ್ಯಗುಡಿ, ಮಹಾದ್ವಾರ, ನಂದಿಮಂಟಪ ಮತ್ತು ಹಜಾರ. ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿರುವ ದೃಶ್ಯ ಮತ್ತು ಶಿವ ಪಾರ್ವತಿ ಪಗಡೆಯಾಡುತ್ತಿರುವ ದೃಶ್ಯಗಳಿವೆ. ಎ.ವ್ಹಿ.ಸ್ಮಿತ್ ಪ್ರಪಂಚದ ಆಶ್ಚರ್ಯಗಳಲ್ಲಿ ಒಂದಾಗಿದೆ ಎಂದಿದ್ದಾರೆ.

2) ದಶಾವತಾರ ಗುಹೆ: 2 ಅಂತಸ್ತಿನ ಈ ದೇವಾಲಯ ದಂತವರ್ಮನ ಶಾಸನವನ್ನು ಹೊಂದಿದೆ. ಕೆಳಂತಸ್ತಿನಲ್ಲಿ 14 ಕಂಬಗಳಿದ್ದರೆ ಮೇಲಿನ ಸಾಲಿನಲ್ಲಿ 54 ಕಂಬಗಳಿವೆ. ಶಿವ ಮತ್ತು ವಿಷ್ಣುವಿನ ಅವತಾರಗಳಿಗೆ ಸಂಬಂಧಿಸಿದ 10 ಅವತಾರ ಶಿಲ್ಪಗಳಿವೆ. ಉದಾ: ಶಿವತಾಂಡವ ನೃತ್ಯ, ಹಿರಣ್ಯಕಶಿಪು, ನೀಲಕಂಠ ಗುಹೆ.

3) ಎಲಿಫೆಂಟಾ: ಇದರ ಮೊದಲ ಹೆಸರು ಗೊವಕಪುರಿ. ಬೃಹದಾಕಾರದ ಕಲ್ಲಿನ ಆನೆ ನೋಡಿದ ಪೋರ್ಚುಗೀಸರು ಎಲಿಫೆಂಟಾ ಎಂದು ಹೆಸರಿಟ್ಟರು. ಇಲ್ಲಿ 7 ಗುಹೆಗಳಿವೆ. ಮಧ್ಯದ ಗುಹೆಯಲ್ಲಿನ ತ್ರಿಮೂರ್ತಿ ವಿಗ್ರಹ ದೊಡ್ಡದು. ಇಲ್ಲಿ ಶಿವ ಪಾರ್ವತಿ ಕಲ್ಯಾಣ ದೃಶ್ಯ ಕೆತ್ತಲಾಗಿದೆ. ರಾವಣ ಕೈಲಾಸ ಪರ್ವತ ಎತ್ತುತ್ತಿರುವ ದೃಶ್ಯವಿದೆ. ಶಿವನ 3 ರೂಪಗಳಾದ ಭಯಂಕರ ಭೈರವ, ಶಾಂತಶಿವರೂ ಮತ್ತು ಅರ್ಧನಾರೀಶ್ವರ ರೂಪಗಳಿವೆ.

4) ಮಾನ್ಯಖೇಟದ ಜಿನ ದೇವಾಲಯಗಳು.

5) ಐಹೊಳೆಯ ಜಿನ ದೇವಾಲಯಗಳು.

## ಕಲ್ಯಾಣದ ಚಾಳುಕ್ಯರು:

ಇಂದಿನ ಬೀದರ್ ಜಿಲ್ಲೆಯ ಕಲ್ಯಾಣದಿಂದ ಕ್ರಿ.ಶ.973ರಿಂದ 1156ರವರೆಗೆ ರಾಜ್ಯವಾಳಿದ ಚಾಳುಕ್ಯರೇ ಕಲ್ಯಾಣಿ ಚಾಳುಕ್ಯರು.

2ನೇ ತೈಲಪನು ಕಲ್ಯಾಣಿ ಚಾಳುಕ್ಯರ ಸ್ಥಾಪಕ. ರಾಷ್ಟ್ರಕೂಟರ ಸಾಮಂತರಾಗಿದ್ದ ಇವರು ರಾಷ್ಟ್ರಕೂಟ ದೊರೆ ಕರ್ಕನನ್ನು ಮೂಲೆಗೊತ್ತಿ ರಾಷ್ಟ್ರಕೂಟ ರಾಜ್ಯವನ್ನು ವಶಪಡಿಸಿಕೊಂಡು ಆಳ್ವಿಕೆ ಶುರು ಮಾಡಿದರು.

ಇವನ ನಂತರ ಸತ್ಯಾಶ್ರಯ, 5ನೇ ವಿಕ್ರಮಾದಿತ್ಯ, 2ನೇ ಜಯಸಿಂಹ, 1ನೇ ಸೋಮೇಶ್ವರ, 2ನೇ ಸೋಮೇಶ್ವರ, 6ನೇ ವಿಕ್ರಮಾದಿತ್ಯ, 4ನೇ ಸೋಮೇಶ್ವರ ಹೀಗೆ ಹಲವಾರು ರಾಜರಾಳಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

## ಸಾಹಿತ್ಯಿಕ ಕೊಡುಗೆಗಳು:

ಇವರ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯ ಅಗಾಧವಾಗಿ ಬೆಳೆಯಿತು. ಸಾಹಿತ್ಯ ಪ್ರಿಯರಾಗಿದ್ದ ಇವರು ಅನೇಕ ವಿದ್ವಾಂಸರಿಗೆ ರಾಜಾಶ್ರಯವನ್ನು ನೀಡಿ ಸಾಹಿತ್ಯ ವೃದ್ಧಿಗೆ ಸಹಕರಿಸಿದರು. ಸತ್ಯಾಶ್ರಯನ ಆಸ್ಥಾನದಲ್ಲಿದ್ದ ರನ್ನ ಮಹಾಕವಿಯಾಗಿದ್ದ. ಸಾಹಸ ಭೀಮ ವಿಜಯ ಗ್ರಂಥ ರಚಿಸಿದನು. ಅಜಿತನಾಥ ಪುರಾಣ ಇವನ ಮತ್ತೊಂದು ಮೇರು ಕೃತಿಯಾಗಿದೆ. ರತ್ನತ್ರಯರಲ್ಲಿ ಒಬ್ಬನಾದ ಈತನಿಗೆ 'ಕವಿ ಚಕ್ರವರ್ತಿ' ಎಂಬ ಬಿರುದಿತ್ತು.

**ಈ ಕಾಲದಲ್ಲಿ ರಚಿತವಾದ ಪ್ರಮುಖ ಕೃತಿಗಳೆಂದರೆ;**

1) ದುರ್ಗಸಿಂಹನ – ಪಂಚತಂತ್ರ.

2) ಬಿಲ್ಹಣನ – ವಿಕ್ರಮಾಂಕದೇವಚರಿತ (ಕಾಶ್ಮೀರಿ ಕವಿ).

3) ವಿಜ್ಞಾನೇಶ್ವರನ – ಮಿತಾಕ್ಷರ ಸಂಹಿತೆ – 6ನೇ ವಿಕ್ರಮಾದಿತ್ಯ ಮತ್ತು ಕಲ್ಯಾಣದ ಬಗ್ಗೆ.

4) 3ನೇ ಸೋಮೇಶ್ವರ – ಮಾನಸೋಲ್ಲಾಸ, ಅಭಿಲಾಷಿತಾರ್ಥ ಚಿಂತಾಮಣಿ.

5) ನಾಗಚಂದ್ರ – ಮಲ್ಲಿನಾಥ ಪುರಾಣ, ರಾಮಚಂದ್ರಚರಿತ ಪುರಾಣ.

6) ಶ್ರೀಧರಾಚಾರ್ಯ – ಜಾತಕತಿಲಕ (ಕನ್ನಡದ ಮೊದಲ ಜ್ಯೋತಿಷ್ಯ ಗ್ರಂಥ).

7) 2ನೇ ಜಗದೇಕಮಲ್ಲ – ಸಂಗೀತ ಚೂಡಾಮಣಿ.

8) ದಯಾಪಾಲ – ರೂಪಸಂಧಿ.

9) ನಯಸೇನ – ಧರ್ಮಾಮೃತ.

ದೇವರದಾಸಿಮಯ್ಯನ ವಚನಗಳು, ಧನಂಜಯರ ನಾಮಮಾಲೆ, 2ನೇ ಚಾವುಂಡರಾಯನ ಲೋಕೋಪಕಾರ.

ಹೀಗೆ ವಿಪುಲವಾದಂತಹ ಸಾಹಿತ್ಯಿಕ ಕೃತಿಗಳು ಈ ಕಾಲದಲ್ಲಿ ರಚಿತವಾದವು.

## ಕಲೆ ಮತ್ತು ವಾಸ್ತುಶಿಲ್ಪ:

ಬಾದಾಮಿ ಚಾಲುಕ್ಯರು ಹಾಕಿದ ಭದ್ರವಾದ ಸಾಂಸ್ಕೃತಿಕ ಬುನಾದಿ ಮೇಲೆ ಮುನ್ನಡೆದ ಕಲ್ಯಾಣಿ ಚಾಲುಕ್ಯರು ಭಾರತೀಯ ಸಂಸ್ಕೃತಿಗೆ ವಿಶಿಷ್ಟವಾದ ಕೊಡುಗೆಗಳನ್ನು ನೀಡಿದ್ದಾರೆ.

**ಇವರ ಶಿಲ್ಪಕಲಾ ಲಕ್ಷಣಗಳೆಂದರೆ;**

1) ಬಾದಾಮಿ ಚಾಲುಕ್ಯರಂತೆ ಎತ್ತರವಾದ ಜಗತಿ ಮೇಲೆ ದೇವಾಲಯ ನಿರ್ಮಾಣ ಕಂಡುಬರುವುದಿಲ್ಲ.

2) ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲನ್ನು ದೇವಾಲಯಗಳ ನಿರ್ಮಾಣದಲ್ಲಿ ಬಳಕೆಗೆ ತಂದರು.

3) ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪ, ಗೋಡೆಯಲ್ಲಿ ಜಾಲಂದ್ರ, ಕಾಂಡಭಾಗದಲ್ಲಿ ಚಚ್ಚೌಕಾರದ ಕಂಬ ವಿನ್ಯಾಸ ಜಾರಿ ಮಾಡಿದರು.

4) ಗರ್ಭಗೃಹದ ಮೇಲೆ 30ರಿಂದ 40 ಅಡಿ ಎತ್ತರದ ನಕ್ಷತ್ರಾಕಾರದ ಶಿಖರ.

5) ಮೆದುಗಲ್ಲಿನ ಬಳಕೆ.

6) ಬಾಗಿಲುಗಳು ಮುಂಭಾಗದ ಬದಲು ಪಕ್ಕದಲ್ಲಿರುವುದು ವೈಶಿಷ್ಟ್ಯ.

7) ಸೂಕ್ಷ್ಮ ಕೆತ್ತನೆಯ ಕೆಲಸ.

8) ಶಿವನ ದೇವಾಲಯ ಮತ್ತು ಜೈನ ಬಸದಿಗಳ ನಿರ್ಮಾಣ.

**ಪ್ರಮುಖ ದೇವಾಲಯಗಳೆಂದರೆ:**

1) ಇಟಗಿಯ ಮಹಾದೇವ ದೇವಾಲಯ: 6ನೇ ವಿಕ್ರಮಾದಿತ್ಯನ ಸೇನಾಪತಿ ಮಹಾದೇವ ಕಟ್ಟಿಸಿದನು. ಬಳಪದ ಕಲ್ಲಿನ ಬಳಕೆ, ಸೂಕ್ಷ್ಮ ಕೆತ್ತನೆ ಮತ್ತು ಪರಿಪೂರ್ಣ ದೇವಾಲಯ.

2) ಲಕ್ಕುಂಡಿಯ ದೇವಾಲಯಗಳು: ಲಕ್ಕುಂಡಿಯಲ್ಲಿ ಕಾಶಿ ವಿಶ್ವೇಶ್ವರ (ದ್ವಿಕೂಟ), ಬ್ರಹ್ಮಜಿನಾಲಯ, ಮಾಣಿಕ್ಯೇಶ್ವರ, ಅಮೃತೇಶ್ವರ, ಮುಖ್ಯ ದೇವಾಲಯಗಳು, ದೇವಾಲಯದ ಮೇಲೆ ಸುರುಳಿ, ಸಿಂಹಗಳು, ಎಲೆಗಳು, ಯಕ್ಷರು, ರಸಿಕ ದಂಪತಿಗಳ ಚಿತ್ರಗಳಿವೆ.

3) ಡಂಬಳದ ದೊಡ್ಡ ಬಸಪ್ಪ ದೇವಾಲಯ: ನಕ್ಷತ್ರಾಕಾರದ ತಲವಿನ್ಯಾಸ ಹೊಂದಿರುವ ಈ ದೇವಾಲಯವನ್ನು 12ನೇ ಶತಮಾನದಲ್ಲಿ ಕಟ್ಟಲಾಗಿದೆ.

4) ಬೇವೂರಿನ ಸೋಮೇಶ್ವರ.

5) ಗದುಗಿನ ತ್ರಿಕೂಟೇಶ್ವರ.

6) ಬಾದಾಮಿಯ ಎಲ್ಲಮ್ಮ ದೇವಾಲಯ (ವೇಸರ ಶೈಲಿಯ ವಿಮಾನ ಹೊಂದಿದೆ).

7) ರೋಣದ ದೇವಾಲಯ.

8) ಕಲ್ಕೇರಿ ದೇವಾಲಯ.

9) ಗಳಗನಾಥನ ಗಳಗೇಶ್ವರ.

ಹೀಗೆ ಸುಮಾರು 100ಕ್ಕಿಂತಲೂ ಹೆಚ್ಚು ಜಾಗಗಳಲ್ಲಿ ಕಲ್ಯಾಣಿ ಚಾಲುಕ್ಯರ ದೇವಾಲಯಗಳು ಕಂಡು ಬಂದಿವೆ.

## ಹೊಯ್ಸಳರು:

ಆರಂಭದಲ್ಲಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿದ್ದ ಇವರು, ಚಾಲುಕ್ಯರ ಅವನತಿಯ ನಂತರ 11ನೇ ಶತಮಾನದ ಆದಿಭಾಗದಿಂದ 14ನೇ ಶತಮಾನದ ಮಧ್ಯಭಾಗದವರೆಗೆ ಆಳ್ವಿಕೆ ನಡೆಸಿದರು.

'ಸಳ'ನಿಂದ ಸ್ಥಾಪಿತವಾದ ಇದು ನೃಪಕಾಮ, ವಿನಯಾದಿತ್ಯ, ವಿಷ್ಣುವರ್ಧನ, 1ನೇ ನರಸಿಂಹ, 2ನೇ ವೀರಬಲ್ಲಾಳ, 3ನೇ ವೀರಬಲ್ಲಾಳ ಹೀಗೆ ಹಲವಾರು ರಾಜರು ಆಳಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

**ಧಾರ್ಮಿಕ ಸ್ಥಿತಿ:**

ಹೊಯ್ಸಳರ ಕಾಲವು ಸಾಮಾಜಿಕ ಚಳುವಳಿಯ ಕಾಲವೂ ಆಗಿತ್ತು. ಇಲ್ಲಿನ 4 ಧರ್ಮಗಳೆಂದರೆ, 1) ಶೈವ 2)ವೈಷ್ಣವ 3) ಜೈನ 4) ವೀರಶೈವ.

ಶೈವ ಮತ್ತು ವೈಷ್ಣವಗಳೆರಡು ಬ್ರಾಹ್ಮಣ ಧರ್ಮದ 2 ಪಂಗಡಗಳಾಗಿದ್ದು, ಇಂತಹ ಮಡಿವಂತಿಕೆಯಿಂದ ಹೊರಬಂದು 'ವೀರಶೈವ' ಧರ್ಮಕ್ಕೆ ಬುನಾದಿ ಹಾಕಿದವರು ಬಸವಣ್ಣನವರು. ಬಳ್ಳಿಗಾವೆಯಲ್ಲಿ ಕಾಳಾಮುಖ ಶೈವ ಪಂಥ ಪ್ರಚಲಿತದಲ್ಲಿತ್ತು. 2ನೇ ಬಲ್ಲಾಳನ ಮಂತ್ರಿ ಚಂದ್ರಮೌಳಿ ಶಿವಭಕ್ತನಾಗಿದ್ದನು.

ರಾಮಾನುಜಾಚಾರ್ಯರು ತಮಿಳುನಾಡು ತೊರೆದು ಹೊಯ್ಸಳ ರಾಜ್ಯದಲ್ಲಿ ಆಶ್ರಯ ಪಡೆದ ಮೇಲೆ ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರಚಾರ ದೊರೆಯಿತು. ದೊರೆ ವಿಷ್ಣುವರ್ಧನ ಜೈನ ಧರ್ಮ ತೊರೆದು ವೈಷ್ಣವ ಧರ್ಮ ಸ್ವೀಕರಿಸಿದನು. ಇದಕ್ಕಾಗಿ 5 ದೇವಾಲಯ ನಿರ್ಮಾಣ.

1) ವಿಜಯ ನಾರಾಯಣ – ಬೇಲೂರು.

2) ಕೀರ್ತಿ ನಾರಾಯಣ – ತಲಕಾಡು.

3) ಚೆಲುವ ನಾರಾಯಣ – ಮೇಲುಕೋಟೆ.

4) ವೀರ ನಾರಾಯಣ – ಕೊಂಡುರು.

5) ವಿಜಯ ನಾರಾಯಣ – ಗದಗದಲ್ಲಿ ಸ್ಥಾಪಿಸಿದನು.

ಜೈನ ಧರ್ಮವು ಇವರ ಕಾಲದಲ್ಲಿ ಪ್ರಬಲವಾದ ಧರ್ಮವಾಗಿತ್ತು. ಈ ಧರ್ಮ ಸ್ಥಾಪನೆಯಾಗಿದ್ದೇ ಜೈನ ಮುನಿ ಪ್ರೇರಣೆಯಿಂದ. ಪ್ರಜೆಗಳಿಗೆ ಇಚ್ಛೆ ಬಂದ ಧರ್ಮ ಅನುಸರಿಸುವ ಸ್ವಾತಂತ್ರ್ಯವಿತ್ತು. ದೇವನೊಬ್ಬ ನಾಮ ಹಲವು ನಂಬಿಕೆಯಾಗಿತ್ತು.

## ಸಾಹಿತ್ಯದ ಅಭಿವೃದ್ಧಿ:

ಈ ಕಾಲದಲ್ಲಿ ಕನ್ನಡ ಸಾಹಿತ್ಯವು ಅನೇಕ ವೈವಿದ್ಯಗಳಿಂದ ವ್ಯಾಪಕವಾಗಿ ಬೆಳೆಯಿತು. ಹೊಯ್ಸಳ ರಾಜರು ಬಹುಮಂದಿ ಶ್ರೇಷ್ಟ ಕನ್ನಡ ಕವಿಗಳಿಗೆ ಆಶ್ರಯ ನೀಡಿ ಸಾಹಿತ್ಯ ಕೃಷಿಗೆ ನೆರವಾಗಿದ್ದರು.

1ನೇ ಬಲ್ಲಾಳನ ಕಾಲದಲ್ಲಿ ನಾಗಚಂದ್ರನು ಅಭಿನವ ಪಂಪನೆಂದೇ ಪ್ರಸಿದ್ದನಾಗಿದ್ದನು.

ಪ್ರಥಮ ಕನ್ನಡದ ಕವಯಿತ್ರಿ ಎನಿಸಿದ ಕಂತಿಯು 'ಕಂತಿ ಹಂಪನ ಸಮಸ್ಯೆಗಳು' ಎಂಬ ಗ್ರಂಥ ಬರೆದರು.

ವಿಷ್ಣುವರ್ಧನನ ಕಾಲದಲ್ಲಿ ರಾಜಾದಿತ್ಯನು 'ಕ್ಷೇತ್ರ ಗಣಿತ, ವ್ಯವಹಾರ ಗಣಿತ, ಲೀಲಾವತಿ' ಎಂಬ ಕೃತಿ ರಚಿಸಿದರೆ, ನಯಸೇನನು 'ಧರ್ಮಾಮೃತ' ಕೃತಿಯನ್ನು ರಚಿಸಿದನು.

1ನೇ ವೀರಬಲ್ಲಾಳನ ಕಾಲದಲ್ಲಿ 3 ಜೈನ ಕವಿಗಳಿದ್ದರು. ನೇಮಿಚಂದ್ರ, ಜನ್ನ ಮತ್ತು ಅಚಣ್ಣ. ಜನ್ನನ ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣ ಪ್ರಮುಖವಾದವು.

2ನೇ ನರಸಿಂಹನ ಕಾಲದಲ್ಲಿ ಕೇಶಿರಾಜ 'ಶಬ್ದಮಣಿದರ್ಪಣ' ರಚನೆ ರಾಮಾನುಜಾಚಾರ್ಯರ ವೇದಾಂತ ಸಾರ, ವೇದಾಂತ ಸಂಗ್ರಹ, ವೇದಾಂತ ದೀಪಿಕೆ.

**ಇಲ್ಲಿ ರಚಿತ ಪ್ರಮುಖ ಕೃತಿಗಳೆಂದರೆ:**

ರಾಮಾನುಜಾಚಾರ್ಯ: ಶ್ರೀಭಾಷ್ಯ, ವೇದಾಂತ ಸಾರ, ವೇದಾಂತ ಸಂಗ್ರಹ.

ಹರಿಹರ: ಗಿರಿಜಾ ಕಲ;ಯಾಣ, ಪಂಪಾ ಶತಕ, ಬಸವದೇವರಾಜ ರಗಳೆ, ನಂಬಿಯಣ್ಣನ ರಗಳೆ.

ರಾಘವಾಂಕ: ಹರಿಶ್ಚಂದ್ರ ಕಾವ್ಯ, ವೀರೇಶ ಚರಿತೆ, ಸೋಮನಾಥ ಚರಿತೆ, ಸಿದ್ದರಾಮ ಪುರಾಣ.

ಜನ್ನ: ಯಶೋಧರ ಚರಿತೆ, ಅನಂತನಾಥ ಪುರಾಣ.

ನೇಮಿನಾಥ: ಲೀಲಾವತಿ, ನೇಮಿನಾಥ ಪುರಾಣ.

ನಯಸೇನ: ದರ್ಮಾಮೃತ.

## ಹೊಯ್ಸಳರ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ:

ನಾಡಿನ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೊಯ್ಸಳರ ಕೊಡುಗೆ ಅಮೋಘ ಮತ್ತು ವಿಶಿಷ್ಟವೂ ಆಗಿದೆ. ಉತ್ಕೃಷ್ಟ ಕಲೆ ಅವರ ದೇವಾಲಯಗಳಲ್ಲಿ ಅರಳಿ ನಿಂತಿದೆ.

ಪ್ರಾರಂಭದಲ್ಲಿ ಹೊಯ್ಸಳರು ತಮ್ಮ ದೇವಾಲಯಗಳನ್ನು ಚಾಳುಕ್ಯ ಶೈಲಿಯಲ್ಲಿ ನಿರ್ಮಿಸಿದರು. ಮುಂದೆ 12ನೇ ಶತಮಾನದ ಪ್ರಾರಂಭದಿಂದ ಹೊಯ್ಸಳರ ಶೈಲಿ ಮತ್ತು ವೇಸರ ಶೈಲಿ ಎಂದು ಕರೆಯಲ್ಪಡುವ ವಿಶಿಷ್ಟ ವಾಸ್ತುಶಿಲ್ಪ ಶೈಲಿಯಲ್ಲಿ ದೇವಾಲಯಗಳನ್ನು ಕಟ್ಟಿದರು.

**ಹೊಯ್ಸಳ ಅಥವಾ ವೇಸರ ಶೈಲಿಯ ಗುಣಲಕ್ಷಣಗಳು:**

1) ಹೊಯ್ಸಳ ದೇವಾಲಯಗಳನ್ನು ಭೂ ಮಟ್ಟದಿಂದ ಸುಮಾರು 5 ಅಡಿ ಎತ್ತರದ ನಕ್ಷತ್ರಾಕಾರದ ಜಗತಿ ಮೇಲೆ ಕಟ್ಟಲಾಗಿದೆ.

2) ಜಗತಿಯು ದೇವಾಲಯಕ್ಕಿಂತ ಹೆಚಚ್ಚು ವಿಸ್ತಾರವಾಗಿರುತ್ತದೆ. ಪ್ರದಕ್ಷಿಣಾ ಪಥವು ದೇವಾಲಯ ಜಗತಿಯ ಅಂಚಿನ ಭಾಗದಲ್ಲಿರುತ್ತದೆ.

3) ಸೂಕ್ಷ್ಮ ಕೆತ್ತನೆಯ ಕೆಲಸಕ್ಕೆ ಉತ್ತಮ ಗುಣಮಟ್ಟದ ಸ್ವಲ್ಪ ಹಸಿರು ಮತ್ತು ಕಪ್ಪು ನೀಲಿ ಛಾಯೆಯ ಬಳಪದ ಕಲ್ಲನ್ನು ಬಳಸಲಾಗಿದೆ.

4) ಇವರ ದೇವಾಲಯದಲ್ಲಿ ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ, ವಿಮಾನಗಳು ಮುಖ್ಯ ಅಂಗಗಳು.

5) ಬೆಳಕನ್ನು ಒದಗಿಸಲು ಕಲ್ಲಿನಲ್ಲಿ ಕೆತ್ತಿದ ಜಾಲಂಧ್ರಗಳು (ಕಿಟಕಿಗಳು).

6) ಗಾರೆಯನ್ನು ಬಳಸದೇ ಕಟ್ಟಿರುವುದು ವೈಶಿಷ್ಟ್ಯ.

7) ಗರ್ಭಗುಡಿ ಮೇಲೆ ಶಿಖರವಿದ್ದು, ನಕ್ಷತ್ರಾಕಾರದಲ್ಲಿ ಮೆಟ್ಟಿಲು, ಮೆಟ್ಟಿಲಾಗಿ ಏರುತ್ತದೆ. ಶಿಖರದ ಮೇಲ್ಭಾಗದಲ್ಲಿ ಕಳಸವಿರುತ್ತದೆ.

8) ಗೋಡೆಯನ್ನು ಸಮತಟ್ಟಾದ ಪಟ್ಟಿಗಳಾಗಿ ವಿಂಗಡಿಸಿ, ಗೋಡೆಗಳ ಮೇಲೆ ಆನೆಗಳ ಚಿತ್ರ. ನಂತರದ ಸಾಲಲ್ಲಿ ಹಂಸ, ಆನೆ, ಕುದುರೆ ಮತ್ತು ರಾಮಾಯಣ, ಮಹಾಭಾರತ ಘಟನಾ ಶಿಲ್ಪಗಳಿವೆ.

9) ಮಹಾದ್ವಾರ ಮತ್ತು ಗರ್ಭಗೃಹದ 2 ಬದಿಗಳಲ್ಲಿ ದ್ವಾರಪಾಲಕರನ್ನು ಕೆತ್ತಲಾಗಿದೆ.

10) ವೈವಿಧ್ಯಮಯವಾದ ಸುಮಧುರ ಕಂಬಗಳು ಇಲ್ಲಿನ ಆಕರ್ಷಣೆ. ಇವು ಕನ್ನಡಿಯಂತೆ ಹೊಳೆಯುತ್ತಿದ್ದು, ಕೆಲವು ವರ್ತುಲಾಕೃತಿಯಲ್ಲೂ ಇನ್ನೂ ಕೆಲವು ಗಂಟೆಯಾಕಾರದಲ್ಲಿಯೂ ಇವೆ.

11) 1ರಿಂದ 5 ಗರ್ಭಗುಡಿಗಳಿರುವ ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟ ದೇವಾಲಯಗಳನ್ನು ನಿರ್ಮಿಸಲಾಗಿತ್ತು.

## ಹೊಯ್ಸಳರ ಪ್ರಮುಖ ದೇವಾಲಯಗಳು:

1) ಬೇಲೂರಿನ ಚನ್ನಕೇಶವ ದೇವಾಲಯ: ಇದು ಹೊಯ್ಸಳರ ಬಹು ಪ್ರಸಿದ್ಧ ದೇವಾಲಯವಾಗಿದ್ದು, 1117ರಲ್ಲಿ ವಿಷ್ಣುವರ್ಧನನು ತಲಕಾಡನ್ನು ಆಕ್ರಮಿಸಿದ ಚೋಳರನ್ನು ಸೋಲಿಸಿದರ ಸವಿನೆನಪಿಗಾಗಿ ಈ ದೇವಾಲಯ ಕಟ್ಟಿದನೆಂದು ಹೇಳಲಾಗಿದೆ. ನಕ್ಷತ್ರಾಕಾರದ ಜಗತಿಯ ಮೇಲೆ ನಿರ್ಮಿಸಲಾಗಿದ್ದ 178 ಅಡಿ ಉದ್ದ 156 ಅಡಿ ಅಗಲದ ವಿಸ್ತೀರ್ಣವನ್ನು ಹೊಂದಿದೆ. ಗೋಡೆಗಳ ಕೆಳಗಿನ ಪಟ್ಟಿಕೆಯಲ್ಲಿ ವಿವಿಧ ಭಂಗಿಗಳಲ್ಲಿ ಆನೆ, ಕುದುರೆ, ರಾಮಾಯಣ, ಮಹಾಭಾರತದ ಚಿತ್ರ, 40 ಸುಂದರ ಮದನಿಕೆಯರ ವಿಗ್ರಹಗಳಿವೆ. (ಜಕಣಾಚಾರಿ ಮತ್ತು ಡಕಣಾಚಾರಿ ಎಂಬ ಶಿಲ್ಪಿಗಳು ನಿರ್ಮಿಸಿದರೆಂಬ ಪ್ರತೀತ). ದರ್ಪಣ ಸುಂದರಿ, ಕೊಳಲು ನುಡಿಸುತ್ತಿರುವ ಸುಂದರ ಅದ್ಭುತವಾಗಿವೆ.

2) ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ: 1121ರಲ್ಲಿ ವಿಷ್ಣುವರ್ಧನನ ದಂಡನಾಯಕ ಕೇತಮಲ್ಲನು ನಿರ್ಮಿಸಿದನು. 2 ಗರ್ಭಗೃಹಗಳ ಈ ದ್ವಿಕೂಟ ದೇವಾಲಯವು 5 ಅಡಿ ಎತ್ತರದ ನಕ್ಷತ್ರಾಕಾರದ ಜಗತಿ ಮೇಲೆ ನಿಂತಿದೆ. ಬೃಹತ್ ಪ್ರಮಾಣದ 2 ನಂದಿ ವಿಗ್ರಹದ ಮಂಟಪಗಳಿವೆ. 8 ಸಾಲು ಪಟ್ಟಿಕೆಗಳಲ್ಲಿ ಆನೆಗಳು, ಸಿಂಹಗಳು, ಸುರುಳಿಗಳು, ಅಶ್ವಾರೋಹಿ ಮೂರ್ತಿಗಳು, ಪ್ರಾಣಿಪಕ್ಷಿಗಳ ಚಿತ್ರಗಳಿವೆ.

ಕೇದಾರೋಜನೆಂಬ ಶಿಲ್ಪಿ ಈ ನಿರ್ಮಾಣದ ಸಾರಥ್ಯ ವಹಿಸಿದ್ದನು.

3) ಸೋಮನಾಥಪುರ ಕೇಶವ ದೇವಾಲಯ: ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನಲ್ಲಿರುವ ಸೋಮನಾಥಪುರ ಹೊಯ್ಸಳ ಕಾಲದ ಕೇಶವ ದೇವಾಲಯವೆಂದೇ ಪ್ರಸಿದ್ಧಿ ಪಡೆದಿದೆ. 3ನೇ ನರಸಿಂಹನ ದಂಡನಾಯಕ ಸೋಮನಾಥನು 1268ರಲ್ಲಿ ನಿರ್ಮಿಸಿದನು. 3 ಅಡಿ ಎತ್ತರದ ನಕ್ಷತ್ರಾಕಾರದ ಜಗತಿ ಮೇಲೆ ಇದು ನಿಂತಿದೆ. ಇದೊಂದು ತ್ರಿಕೂಟ ದೇವಾಲಯ. 3 ಗರ್ಭ ಗೃಹಗಳ ಮೇಲೂ ಹೊಯ್ಸಳ ಅಥವಾ ವೇಸರ ಶೈಲಿಯ ಶಿಖರಗಳಿದ್ದು ನಕ್ಷತ್ರಾಕಾರವಾಗಿಯೇ ಮೇಲೆರುತ್ತಾ ಕಿರಿದಾಗುತ್ತದೆ. ಇಲ್ಲಿಯೂ ಸಹ ಆನೆ ಮತ್ತು ಕುದುರೆಗಳ ಸಾಲುಗಳು ಪಟ್ಟಿಕೆಗಳಲ್ಲಿ ಕಂಡುಬರುತ್ತದೆ. (ಪ್ರಧಾನ ಶಿಲ್ಪಿ – ಮಲ್ಲತಮ್ಮ).

**ಹೊಯ್ಸಳರ ಇತರೆ ಪ್ರಮುಖ ದೇವಾಲಯಗಳೆಂದರೆ:**

1) ಜಿನನಾಥ ಬಸದಿ – ಶ್ರವಣಬೆಳಗೊಳ (ಶಾಂತಲೆ).

2) ಕೀರ್ತಿ ನಾರಾಯಣ – ತಲಕಾಡು – ವಿಷ್ಣುವರ್ಧನ.

3) ಕಪ್ಪೆಚನ್ನಿಗ – ಬೇಲೂರು – ವಿಷ್ಣುವರ್ಧನ.

4) ಕೇಶವ – ಮೊಸಳೆ– ರಾಯಣ್ಣ ದಂಡನಾಯಕ.

5) ತ್ರಿಕೂಟೇಶ್ವರ – ಗೊರೂರು – ವಿಜಯಾದಿತ್ಯ.

6) ಲಕ್ಷ್ಮೀನರಸಿಂಹ – ಹಾರ್ನಹಳ್ಳಿ.

7) ಲಕ್ಷ್ಮೀದೇವಿ – ದೊಡ್ಡಗದ್ದೆವಳ್ಳಿ.

8) ಚೆಲುವನಾರಾಯಣ – ಮೇಲುಕೋಟೆ.

9) ಪಂಚಲಿಂಗೇಶ್ವರ – ಗೋವಿಂದನಹಳ್ಳಿ.

10) ಪಾರ್ಶ್ವನಾಥ – ಹಳೇಬೀಡು.

11) ಹರಿಹರೇಶ್ವರ – ಹರಿಹರ.

12) ಮೂಲಸಂಗಮೇಶ್ವರ – ಬೆಳ್ಳೂರು.

13) ಆದಿನಾಥ – ಚಿಕ್ಕಹಣಸೋಗೆ.

**ಭಾರತದಲ್ಲಿ ಬೆಳೆದ ವಿವಿಧ ವಾಸ್ತುಶೈಲಿಗಳೆಂದರೆ:**

**1) ನಾಗರ ಶೈಲಿ:**

ಉತ್ತರ ಭಾರತದ ಶೈಲಿಯಾಗಿದ್ದು, ಬಾಗಿದ ರೇಖೆಯ ಆಕಾರದ ಶಿಖರ ಹಾಗೂ ಅದರ ಮೇಲೆ ಶೃಂಗದ ಸಂಕೇತಗಳನ್ನೊಳಗೊಂಡ ಕಳಸ. ಉದಾ: ಒರಿಸ್ಸಾದ ಭುವನೇಶ್ವರ.

**2) ದ್ರಾವಿಡ ಶೈಲಿ:**

ದಕ್ಷಿಣ ಭಾರತದ ಶೈಲಿಯಾಗಿದ್ದು, ಶಿಖರಗಳು ಮೆಟ್ಟಿಲುಗಳಂತೆ ಮೇಲೇರಿ ಕ್ರಮವಾಗಿ ಕಿರಿದಾಗುತ್ತಾ ಹೋಗುತ್ತದೆ. ಉದಾ: ಬೃಹದೇಶ್ವರ ದೇವಾಲಯ (ತಂಜಾವೂರು.)

**3) ವೇಸರ ಶೈಲಿ:**

ಶಿಖರಗಳಿಲ್ಲದ ಮಟ್ಟಸವಾದ ಮೇಲ್ಛಾವಣಿ. ಇದರ ಪ್ರಮುಖ ಲಕ್ಷಣ ದ್ರಾವಿಡ ಮತ್ತು ನಾಗರ ಶೈಲಿಯ ಮಿಶ್ರಣ ಇದಾಗಿದೆ. ಉದಾ: ಸೋಮನಾಥಪುರದ ಕೇಶವ ದೇವಾಲಯ.

ಕ್ರಿ.ಶ.740ರಲ್ಲಿ ಪಲ್ಲವ ರಾಜ್ಯವನ್ನು ಗೆದ್ದ 2ನೇ ವಿಕ್ರಮಾದಿತ್ಯನು ಕಂಚಿಯಿಂದ ದ್ರಾವಿಡ ಶೈಲಿಯ ನಿಷ್ಣಾತಕರನ್ನು ಕರೆತಂದು ದ್ರಾವಿಡ ಶೈಲಿಯಲ್ಲಿ ದೇವಾಲಯಗಳನ್ನು ನಿರ್ಮಿಸಿದನು.

# ಘಟಕ – 3

# ವಿಜಯನಗರ ಸಾಮ್ರಾಜ್ಯ ಮತ್ತು ನಂತರ ವಿಜಯನಗರ ಸಾಮ್ರಾಜ್ಯ ಉಗಮ:

ಮಹಮದೀಯರ ದಾಳಿಗಳಿಂದ ಹಿಂದೂ ಧರ್ಮವನ್ನು ಮತ್ತು ಹಿಂದೂ ಸಂಸ್ಕೃತಿಯನ್ನು ರಕ್ಷಿಸಲೆಂದು ಜನ್ಮ ತಾಳಿದ ಸಾಮ್ರಾಜ್ಯ ಇದಾಗಿದೆ. ಆದ್ದರಿಂದಲೇ ವಿಜಯನಗರ ಸಾಮ್ರಾಜ್ಯವನ್ನು ದಕ್ಷಿಣ ಭಾರತದ ರಕ್ಷಣಾ ಗೋಡೆ ಎಂದೇ ಕರೆಯಲಾಗುತ್ತದೆ. ಕ್ರಿ.ಶ.1336ರಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರ ಸಾಮ್ರಾಜ್ಯವು ದಖನ್ನಿನ ಕಟ್ಟ ಕಡೆಯ ವೈಭವ ಸಾಮ್ರಾಜ್ಯವಾಗಿ ಮೆರೆಯಿತು. ಇದರ ಸಾಧನೆಗಳು 'ರಾಬರ್ಟ್ ಸಿವೆಲ್'ರ 'ಮರೆತ ಸಾಮ್ರಾಜ್ಯ' ಎಂಬ ಕೃತಿಯಲ್ಲಿ ಕಾಣಬಹುದಾಗಿದೆ.

**ಇವರ ಮೂಲ:**

ಸ್ಥಾಪಕರಾದ ಹರಿಹರ ಮತ್ತು ಬುಕ್ಕರ ಮೂಲನಿವಾಸದ ಬಗ್ಗೆ 3 ವಾದಗಳಿವೆ.

1) ತೆಲುಗು ಮೂಲ

2) ಕಂಪಿಲಿ ಮೂಲ

3) ಕನ್ನಡ ಮೂಲ

ಪಿ.ಬಿ.ದೇಸಾಯಿ, ಹೆರಾಸ್, ಸಾಲತೊರೆಯವರ ಪ್ರಕಾರ ಹರಿಹರ ಬುಕ್ಕರು ಶುದ್ಧ ಕನ್ನಡಿಗರು. ಅವರು ವಿದೇಶಿಯರಲ್ಲ. ಇವರು ಹೊಯ್ಸಳರೊಂದಿಗೆ ರಕ್ತ ಸಂಬಂಧ ಹೊಂದಿದ್ದರು. ಹೊಯ್ಸಳರು ತಮ್ಮ ರಾಜ್ಯವನ್ನು ಮಹಮದೀಯರಿಂದ ರಕ್ಷಿಸಿಕೊಳ್ಳಲು ಹರಿಹರನನ್ನು ಉತ್ತರ ಗಡಿಗಳ ರಕ್ಷಣೆಗೆ ರಾಜ್ಯಪಾಲರಾಗಿ ನೇಮಿಸಿದರು. ಮೂರನೇ ಬಲ್ಲಾಳ ಮರಣ ಹೊಂದಿದಾಗ ಅವನ ಮಗ ವಿರೂಪಾಕ್ಷ ಅಸಮರ್ಥನಾಗಿದ್ದರಿಂದ ಶೃಂಗೇರಿ ಮಠಾಧಿಕಾರಿ ವಿದ್ಯಾರಣ್ಯರ ಪ್ರೇರಣೆಯಿಂದ 1336ರಲ್ಲಿ ಹರಿಹರ ಬುಕ್ಕರು ಸ್ಥಾಪಿಸಿದರೆಂದು ವಾದಿಸಿದ್ದಾರೆ.

ಇದಕ್ಕೆ ಪೂರಕ ಆಧಾರಗಳೆಂದರೆ,

1) ಪೆರಿಸ್ಥಾರು, ವಿಜಯನಗರದ ಅರಸರನ್ನು ಕರ್ನಾಟಕದ ರಾಯರೆಂದಿದ್ದಾರೆ.

2) ಕೃಷ್ಣರಾಯನ ಬಿರುದು 'ಶ್ರೀ ಕರ್ನಾಟಕ ಮಹೀಷ ಕನ್ನಡದೇ'.

3) ಇವರ ನಾಣ್ಯಗಳಲ್ಲಿ 'ವಿಜಯ ವಿರುಪಾಕ್ಷ' ಎಂಬ ಕನ್ನಡ ಅಂಕಿತವಿದೆ.

4) ಚಾಲುಕ್ಯರಂತೆ ಇವರ ಲಾಂಛನ 'ವರಾಹ'. ಈ ಮೇಲಿನ ಪುರಾವೆಗಳಿಂದ ವಿಜಯನಗರದ ಸಂಸ್ಥಾಪಕರು ಕನ್ನಡದವರೆಂದೇ ಸಾಬೀತಾಗಿದೆ.

## ವಿಜಯನಗರದ ಸ್ಥಾಪನೆಯ ಉದ್ದೇಶಗಳು:

ವಿಜಯನಗರ ಸಾಮ್ರಾಜ್ಯವೇನು ಅಧಿಕಾರಶಾಹೀ ಮನೋಭಾವದಿಂದ, ರಾಜ ವಿಸ್ತರಣೆಗಾಗಿ ಒಮ್ಮೆಲೆ ಉಗಮವಾದದ್ದಲ್ಲ. ಇದರ ಸ್ಥಾಪನೆ ಹಿಂದಿನ ಉದ್ದೇಶಗಳು ಅರ್ಥಗರ್ಭಿತ.

1) ಮಹಮದೀಯರ ದಾಳಿಯ 'ರುದ್ಧ ಹಿಂದೂ ಧರ್ಮದ ಸಂಸ್ಕೃತಿ ಮತ್ತು ಆಚಾರ ವಿಚಾರಗಳ ರಕ್ಷಣೆಗೆ ಇದು ಸ್ಥಾಪಿತವಾಯಿತು.

2) ಖಿಲ್ಜಿಯ ದಂಡನಾಯಕ ಮಲೀಕಾಫರನು ದೇವಗಿರಿ, ವಾರಂಗಲ್, ದ್ವಾರಸಮುದ್ರದ ಮೇಲೆ ದಾಳಿ ಮಾಡಿದನು. ಈ ದಾಳಿಯ ಪ್ರತೀಕಾರವೇ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಎನ್ನಲಾಗುತ್ತದೆ.

3) ಮಲಿಕ್ ಕಾಫರನು ಹಿಂದೂ ದೇವಾಲಯಗಳ ನೆಲ ಸಮ ಮಾಡಿ ಆ ಜಾಗದಲ್ಲಿ ಮಸೀದಿಗಳ ನಿರ್ಮಾಣ ಮಾಡಿದನು. ಹಿಂದೂ ಧಾರ್ಮಿಕ ನೆಲೆಗಟ್ಟಿಗೆ ಪೆಟ್ಟಾದ ದೃಷ್ಟಿಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾಯಿತು.

4) ಹಿಂದೂ ಧರ್ಮ ರಕ್ಷಣೆಗೆ ಕಟಿಬದ್ಧವಾಗಿ ನಿಂತಿದ್ದ ಮೂರನೇ ಬಲ್ಲಾಳನು ಹಿಂದೂ ಧರ್ಮ ಗಂಡಾಂತರದಲ್ಲಿದೆ ಎಂದು ಅರಿತು ಶೃಂಗೇರಿಯ ವಿದ್ಯಾರಣ್ಯರ ಆಶೀರ್ವಾದ ಪಡೆದು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿದನು. ಆದರೆ ಮುಸ್ಲಿಂ ವಿದ್ರೋಹಿಗಳಿಂದ ಕೊಲೆಯಾದ ನಂತರ ಅವನ ಸೇವೆಯಲ್ಲಿದ್ದ ಹರಿಹರ ಬುಕ್ಕರು ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿ ಬಲ್ಲಾಳನ ಆಸೆಯನ್ನು ಈಡೇರಿಸಿದರು.

5) ದಕ್ಷಿಣ ಭಾರತದಲ್ಲಿ ಪ್ರಬಲ ರಾಜಮನೆತನವಿಲ್ಲದೆ ರಾಜ್ಯ ಕ್ಷೇತ್ರಗಳು ಹರಿದು ಹಂಚಿ ಹೋಗಿದ್ದವು. ಇವುಗಳ ಏಕೀಕರಣದ ಉದ್ದೇಶದೊಂದಿಗೆ ಸ್ಥಾಪನೆಯಾಯಿತು.

6) ಹಿಂದೂ ಕಲೆ ಸಾಹಿತ್ಯವನ್ನು ಪುನರುಜ್ಜೀವನಗೊಳಿಸುವಂತಹ ಉದ್ದೇಶ ಇವರದ್ದಾಗಿತ್ತು.

ಹೀಗೆ ಹಲವಾರು ಮೂಲ ಉದ್ದೇಶಗಳೊಂದಿಗೆ ವಿಜಯನಗರ ಸಾಮ್ರಾಜ್ಯ ರಚನೆಯಾಯಿತು.

**ರಾಜಕೀಯ ಇತಿಹಾಸ:**

ವಿಜಯನಗರ ಸಾಮ್ರಾಜ್ಯವು ಮೂಲತ: ಹರಿಹರ; ಬುಕ್ಕರಾಯ, ಕೆಂಪಣ್ಣರಾಯ, ಮಾರಪ್ಪ, ಮತ್ತು ಮುದ್ದಪ್ಪ ಎಂಬ ಐದು ಮಂದಿ ಸಂಗಮ ಸಹೋದರರಿಂದ ಸಂಘಟಿಸಲ್ಪಟ್ಟಿತು. ಆದರೆ ವಾಸ್ತವವಾಗಿ ಹರಿಹರ ಬುಕ್ಕರೇ ಈ ಸಾಮ್ರಾಜ್ಯದ ಸ್ಥಾಪಕರು. ಈ ಸಾಮ್ರಾಜ್ಯವನ್ನು ನಾಲ್ಕು ರಾಜವಂಶಗಳು ಆಳಿದವು. ಅವುಗಳೆಂದರೆ,

1) ಸಂಗಮ ವಂಶ

2) ಸಾಳುವ

3) ತುಳು

4) ಅರವೀಡು

**ವಿದ್ಯಾರಣ್ಯರು:**

ಇವರು ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪ್ರೇರಣೆ ಕೊಟ್ಟಂತಹ ಹಿಂದೂ ಗುರು, ವೈಷ್ಣವ ಸಂತರು ಹೌದು.

ವಿದ್ಯಾರಣ್ಯ ಎಂದೇ ಹೆಸರಾದ ಇವರು ಶೃಂಗೇರಿ ಮಠದ ಜಗದ್ಗುರುಗಳಾಗಿದ್ದರು.

ಅದ್ವೈತ ಸಿದ್ಧಾಂತವನ್ನು ಬೋಧಿಸಿದರು.

ದಖನ್ ಮೇಲೆ ಮುಸ್ಲಿಂರ ದಾಳಿಯಿಂದ ಮನನೊಂದ ಈ ರಾಜ್ಯಗುರು ಹರಿಹರ ಮತ್ತು ಬುಕ್ಕರಿಗೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಆರ್ಥಿಕವಾಗಿ ಸಹಾಯ ನೀಡಿದರು. ಇವರು ಬರೆದ ವಿದ್ಯಾರಣ್ಯ ವೃತ್ತಾಂತ, ವಿದ್ಯಾರಣ್ಯ ಕಾಲಜ್ಞಾನ, ಶಂಕರ ವಿಜಯ. ವಿಜಯನಗರ ಸಾಮ್ರಾಜ್ಯವನ್ನು ಅರಿಯಲು ಸಂಪೂರ್ಣ ಸಹಾಯ ಮಾಡುತ್ತವೆ.

**ಹರಿಹರ:**

ಹರಿಹರನು ಸಂಗಮ ವಂಶದ ಮೊದಲ ದೊರೆ. ತನ್ನ ಸೋದರರ ನೆರವಿನಿಂದ ರಾಜ್ಯ ಕಟ್ಟಿದನು. ಹೊಯ್ಸಳರ ಸಾಮಂತರಾಗಿ ಅವರ ಅನೇಕ ಸಣ್ಣಪುಟ್ಟ ಸಾಮಂತರನ್ನು ಸೋಲಿಸಿ ರಾಜ್ಯ ಕಟ್ಟಿದನು.

ಇವನು ಪ್ರಥಮ ಬಾರಿಗೆ ಮಹಮದೀಯರ ದಾಳಿಯನ್ನು ಸಮರ್ಥವಾಗಿ ಎದುರಿಸಿದನು. ಇದೇ ಕಾಲದಲ್ಲಿ ಸ್ಥಾಪನೆಯಾದ ಬಹುಮನಿ ಸಾಮ್ರಾಜ್ಯದೊಡನೆ 20 ವರ್ಷಕಾಲ ಯುದ್ಧ ಮಾಡಿದನು. ಪೂರ್ವ ಪಶ್ಚಿಮ ಕರಾವಳಿಯಲ್ಲಿ ರಾಜ್ಯವನ್ನು ವಿಸ್ತರಿಸಿ 'ಪೂರ್ವ ಪಶ್ಚಿಮ ಸಮುದ್ರಾಧೀಶ್ವರ' ಎಂದು ಬಿರುದು ಪಡೆದನು. ಭಾಷೆಗೆ ತಪ್ಪದ ರಾಯರ ಗಂಡ, ಹರಿಹರ ರಾಯರ ವಿಭಾಡ ಇವರ ಬಿರುದುಗಳು.

ಇವನ ಕಾಲದಲ್ಲಿ ವೇದಗಳ ಮೇಲೆ ಬಾಷ್ಯ ರಚನೆಯಾಗಿದ್ದರಿಂದ ಇವನಿಗೆ 'ವೇದಮಾರ್ಗ' ಸ್ಥಾಪನಾಚಾರ್ಯ ಎಂಬ ಬಿರುದು ಇತ್ತು. ಇವನು ತನ್ನ ಸಹೋದರರ ಆಡಳಿತದಲ್ಲಿ ಪಾಲು ನೀಡಿದ್ದು ವಿಶೇಷ.

## 1ನೇ ಬುಕ್ಕರಾಯ:

ಇವನು ಹರಿಹರನ ಸಹೋದರ. ಇವನು ತೆಲಂಗಾಣದ ರಾಜ್ಯಪಾಲನಾಗಿ ಅಪಾರ ಆಡಳಿತದ ಅನುಭವ ಪಡೆದಿದ್ದನು. ವೀರ ಸೇನಾನಿ ಮತ್ತು ದಕ್ಷ ಆಡಳಿತಗಾರ.

* ಕೊಂಡುವಿಡು ರೆಡ್ಡಿಗಳನ್ನು ಸೋಲಿಸಿ ಆಂಧ್ರಕೋಟೆ ಜಯಿಸಿದನು.
* ಬಹುಮನಿ 1ನೇ ಮಹಮ್ಮದನ್ನು ಹಿಮ್ಮೆಟ್ಟಿಸಿ ಗೋವಾ ಪಡೆದನು.
* ಮಲಬಾರಿನ ರಾಜನನ್ನು ಸೋಲಿಸಿ ಕಪ್ಪು ಕಾಣಿಕೆ ಪಡೆದನು.
* ಇವನ ಮಹಾಸಾಧನೆ ಎಂದರೆ 'ಮಧುರೈ' ಸುಲ್ತಾನನನ್ನು ಸೋಲಿಸಿದ್ದು.

ಇವರ ಕಂಚಿ, ಶ್ರೀರಂಗ ದೇವಸ್ಥಾನ ಲೂಟಿ ಮಾಡಿ ಹಿಂಸಿಸುತ್ತಿದ್ದನು. ಹಾಗಾಗಿ ಶ್ರೀರಂಗ ವಿಗ್ರಹವನ್ನು ತಂದು ಪುನ: ಶ್ರೀರಂಗದಲ್ಲೇ ಸ್ಥಾಪಿಸಿದನು. ಇವನು ಶ್ರೀಲಂಕಾ, ಚೀನಾ, ಶಿಲೋನ್ ಬಳಿ ರಾಯಭಾರಿ ಕಳುಹಿಸಿದನು. ವೇದಗಳ ಮೇಲೆ ಭಾಷ್ಯ ಇವನಿಂದ ಮುಗಿಯಿತು. ವೇದ ಪ್ರವರ್ತಕವೆನ್ನುತ್ತೇವೆ.

## ಇಮ್ಮಡಿ ದೇವರಾಯ (1424–1446):

ಎರಡನೇ ದೇವರಾಯನು ಸಂಗಮ ವಂಶದಲ್ಲೇ ಪ್ರಸಿದ್ಧವಾದ ದೊರೆ. ವಿಜಯನಗರ ಸಾಮ್ರಾಜ್ಯವು ಇವನ ಕಾಲದಲ್ಲಿ ಸರ್ವತೋಮುಖವಾದ ಬೆಳವಣಿಗೆಯನ್ನು ಕಂಡಿತು. ಇವನ ಮತ್ತೊಂದು ಹೆಸರು 'ಗಜಬೇಂಟೆಕಾರ'.

**ದಂಡೆಯಾತ್ರೆಗಳು:**

1) ಇವನು ಕೊಂಡುವೀಡು ರಾಜ್ಯವನ್ನು ಜಯಿಸಿ ಅದನ್ನು ತನ್ನ ರಾಜ್ಯಕ್ಕೆ ಸೇರಿಸಿದನು.

2) ಕಪಿಲೇಂದ್ರ ಗಜಪತಿ ಸೋಲಿಸಿ ರೆಡ್ಡಿಗಳ ರಾಜ್ಯ ರಕ್ಷಿಸಿದನು.

3) ಬಹುಮನಿ ಸುಲ್ತಾನರೊಂದಿಗೆ ಹಲವು ಯುದ್ಧ ಮಾಡಿ ಮಹಮದ್‌ಷಾಹನನ್ನು ಸೋಲಿಸಿದನು.

4) ದೇವರಾಯನ ಸೇನಾಪತಿ ಲಕ್ಕಣ್ಣ ಶಿಲೋನ ರಾಜನಿಂದ ಕಪ್ಪು ಕಾಣಿಕೆಯನ್ನು ಸಂಗ್ರಹಿಸಿ 'ದಕ್ಷಿಣ ಸಮುದ್ರಾದಿಪತಿ' ಎಂಬ ಬಿರುದು ಪಡೆದನು.

**ರಾಜ್ಯ ವಿಸ್ತಾರ:**

ಗುಲ್ಬರ್ಗಾದಿಂದ ಸಿಂಹಳ, ಬಂಗಾಳದಿಂದ ಮಲಬಾರಿನವರೆಗೆ ವಿಸ್ತರಿಸಿತು. 'ಪರ್ಷಿಯಾದ ಅಬ್ದುಲ್ ರಜಾಕ (1442)' ಇವನ ಆಸ್ಥಾನಕ್ಕೆ ಭೇಟಿ ನೀಡಿದ್ದ.

**ಕಲೆ ಸಾಹಿತ್ಯ:**

ದೇವರಾಯನೇ ಸ್ವತ: ಬ್ರಹ್ಮಸೂತ್ರ ಮತ್ತು ಮಹಾನಾಟಕ ಸುಧಾನಿಧಿ ರಚಿಸಿದ್ದಾನೆ. 'ಚಾಮರಸ ಮತ್ತು ಕುಮಾರವ್ಯಾಸ' ಈತನ ಆಸ್ಥಾನ ಕವಿಗಳು.

ಹಂಪಿಯ ಹಜಾರ ರಾಮಸ್ವಾಮಿ ದೇವಾಲಯ ಇವನ ನಿರ್ಮಾಣದಲ್ಲೊಂದು 'ಲಕ್ಷ ಸೈನ್ಯ ಹೊಂದಿದ್ದ ಈತ ಹಿಂದೂ ಸೈನಿಕರಿಗೆ ತರಬೇತಿ ಕೊಡಲು ಮುಸ್ಲಿಂರನ್ನು ಸೈನ್ಯಕ್ಕೆ' ಸೇರಿಸಿಕೊಂಡಿದ್ದ.

## ಕೃಷ್ಣದೇವರಾಯ (1509–1529):

ಶ್ರೀ ಕೃಷ್ಣದೇವರಾಯನು ವಿಜಯನಗರದ ಅರಸರಲ್ಲೇ ಶ್ರೇಷ್ಠನಾದ ದೊರೆ. ಇವನ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲೇ ಅಪೂರ್ವಕಾಲವಾಗಿತ್ತು. ಇದನ್ನು 'ದಕ್ಷಿಣ ಭಾರತದ ಸಾಂಸ್ಕೃತಿಕ ಸಮ್ಮಿಲನ ಕಾಲ' ಎನ್ನಲಾಗುತ್ತದೆ.

**ಸಾಧನೆಗಳು:**

1) ಬಿಜಾಪುರ ಸುಲ್ತಾನನೊಂದಿಗೆ ಯುದ್ದ 1509ರಲ್ಲಿ ವಿಜಾಪುರದ ಯುಸೆಫ್ ಆದಿಲ್‌ಶಾಹ ಮತ್ತು ಬಹುಮನಿ ಮಹಮದ್ ಷಾಹ ಒಗ್ಗಟ್ಟಾಗಿ ಆಕ್ರಮಣ ಮಾಡಿದ್ದರು. ಇವರನ್ನು ದೋನಿ ಕದನದಲ್ಲಿ ಸೋಲಿಸಿದ.

2) ಏಳು ಲಕ್ಷ ಸೈನಿಕರೊಂದಿಗೆ ಹೊರಟು ಕೃಷ್ಣಾ, ತುಂಗಭದ್ರಾ ನದಿಗಳ 'ದೋ–ಅಬ್' ಪ್ರದೇಶ ವಶಪಡಿಸಿಕೊಂಡರು.

3) ಗುಲ್ಬರ್ಗಾ ಮತ್ತು ಬೀದರ್ ಮುತ್ತಿ ಅವರ ಬಂಧನದಲ್ಲಿ 'ವಲಿವುಲ್ಲಾ'ನನ್ನು ಬಿಡಿಸಿ ಬಹುಮನಿ ಸಿಂಹಾಸನದ ಮೇಲೆ ಕೂರಿಸಿದನು. ಹಾಗಾಗಿ ಇವರಿಗೆ 'ಯವನರಾಜ' ಪ್ರತಿಸ್ಥಾಪನಾಚಾರ್ಯ ಎಂಬ ಬಿರುದು ಬಂತು.

4) ಉಮ್ಮತ್ತೂರಿನ ಪಾಳೆಗಾರ ಗಂಗರಾಜನನ್ನು ಸೋಲಿಸಿದನು.

5) ಪೋರ್ಚುಗೀಸರೊಂದಿಗೆ ಉತ್ತಮ ಸಂಬಂಧ ಹೊಂದಿದ್ದ ಇವನು ವೈಸರಾಯ್ ಅಲ್ಬುಕರ್ಕನಿಗೆ ವಿಜಾಪುರ ಸುಲ್ತಾನನಿಂದ ಗೋವವನ್ನು, ಜಾಮೋರಿನ ದೊರೆಯಿಂದ ಕ್ಯಾಲಿಕಟ್ ಗೆಲ್ಲಲು ಸಹಾಯ ಮಾಡಿದನು.

6) ಕಳಿಂಗ ಮತ್ತು ಆಂಧ್ರದಲ್ಲಿನ ದಿಗ್ವಿಜಯದಲ್ಲಿ ಶರಣಾದ ಪ್ರತಾಪರುದ್ರನ ಮಗಳಾದ ಜಗನ್‌ಮೋಹಿನಿಯನ್ನು ಲಗ್ನವಾದನು.

7) ಗೋಲ್ಕಂಡ ಜಯ, ರಾಯಚೂರ ಕಾಳಗ, ಗುಲ್ಬರ್ಗಾ ಕಾಳಗ, ಇವೆಲ್ಲವು ಇವರ ಹಿರಿಮೆಗೆ ಸಾಕ್ಷಿ.

8) ಶ್ರೀಲಂಕಾಕ್ಕೂ ಮುತ್ತಿಗೆ ಹಾಕಿ ರಾಜವಿಜಯಬಾಹು ಜಾಗದಲ್ಲಿ ಮಗ ಬುವನೈಕ್ಯ ಬಾಹುವನ್ನು ಅಧಿಕಾರಕ್ಕೆ ತಂದರು.

**ರಾಜ್ಯ ವಿಸ್ತಾರ:**

ಉತ್ತರದಲ್ಲಿ ಕೃಷ್ಣಾ ಗೋಧಾವರಿ ನದಿಯಿಂದ ದಕ್ಷಿಣದ ಕನ್ಯಾಕುಮಾರಿ, ಪಶ್ಚಿಮದ ಅರಬ್ಬೀ ಸಮುದ್ರದಿಂದ ಪೂರ್ವದ ವಿಶಾಖಪಟ್ನಂವರೆಗೂ ಹಬ್ಬಿತು.

**ಧರ್ಮ:**

ವೈಷ್ಣವರು, ಕೃಷ್ಣನ ಆರಾಧಕರು. ಸರ್ವಧರ್ಮ ಪ್ರೋತ್ಸಾಹಕರಾಗಿದ್ದರು. (ಬಾರ್ಬೋಸ್ ಪ್ರಕಾರ)

**ಕಲೆ ಮತ್ತು ವಾಸ್ತುಶಿಲ್ಪ:**

ಇವರು ಲಲಿತಕಲೆಗಳಾದ ಚಿತ್ರಕಲೆ ಮತ್ತು ಸಂಗೀತವನ್ನು ಪ್ರೋತ್ಸಾಹಿಸಿದರು. ಇವರು ಅರಮನೆಯ ಗೋಡೆ ಮತ್ತು ಬಾಗಿಲು ಮೇಲೆ ವರ್ಣಚಿತ್ರ ಬಿಡಿಸಲಾಗಿದೆ.

ಫೈಯನ್ ಪ್ರಕಾರ ಅರಮನೆಯ 1 ಭಾಗ ದಂತದಿಮದ ನಿರ್ಮಾಣವಾಗಿತ್ತು. ಹಂಪಿಯ ವಿರೂಪಾಕ್ಷ ದೇವಾಲಯದ ನವರಂಗ ಮಂಟಪ, ಗೋಪುರ ನಿರ್ಮಿಸಿದರು. ಕಂಚಿಯಲ್ಲೂ ಮಂಟಪ ನಿರ್ಮಿಸಿದ್ದರು.

**ಸಾಹಿತ್ಯ:**

ರಾಯರು ಸ್ವತ: ತೆಲುಗು ಮತ್ತು ಕನ್ನಡದಲ್ಲಿ ಪಮಡಿತರಾಗಿದ್ದರು. ಹಾಗಾಗಿ ಇವರನ್ನು ಕನ್ನಡವಲ್ಲಭ ಆಂಧ್ರಭೋಜ ಎಂದು ಕರೆಯುತ್ತಾರೆ.

**ಇವರ ಕೃತಿಗಳು:**

ತೆಲುಗಿನಲ್ಲಿ – ಅಮುಕ್ತ ಮೌಲ್ಯದ.

ಸಂಸ್ಕೃತದಲ್ಲಿ – ರಸಮಂಜರಿ, ಜಾಂಬವತಿ ಕಲ್ಯಾಣ, ಉಷಾಪರಿಣಯ. ಇವನ ಆಸ್ಥಾನದಲ್ಲಿ ಅಷ್ಟದಿಗ್ಗಜರೆಂಬ 8 ಕವಿಗಳಿದ್ದರು. ಉದಾ: ಅಲ್ಲಸಾನಿ ಪೆದ್ದಣ್ಣ, ತೆನಾಲಿ ರಾಮಕೃಷ್ಣ, ನಂದಿ ತಮ್ಮಣ್ಣ ಇತ್ಯಾದಿ.

ಈ ಕಾಲದಲ್ಲಿ ಖ್ಯಾತ ತಿಮ್ಮಣ್ಣ ಕವಿಯು ಮಹಾಭಾರತದ 10 ಪರ್ವಗಳನ್ನು ಬಿಟ್ಟು ಉಳಿದ 8 ಪರ್ವಗಳನ್ನು ರಚಿಸಿದನು. ಅದೇ 'ಕರ್ನಾಟಕ ಕೃಷ್ಣರಾಯ ಭಾರತ ಕಥಾಮಂಜರಿ'. ಹೀಗೆ ಕೃಷ್ಣದೇವರಾಯನ ಕಾಲ ಅದ್ವಿತೀಯವೆನಿಸಿದೆ.

## ಅಳಿಯ ರಾಮರಾಯ:

ರಾಮರಾಯನು ದಕ್ಷ ಆಡಳಿತಗಾರ, ರಾಜನೀತಿಜ್ಞ ಮತ್ತು ಸಮರ್ಥ ಸೇನಾನಿ. ಇವರ ಪ್ರತಿಭೆಯನ್ನು ಕಂಡು ಕೃಷ್ಣದೇವರಾಯನು ತನ್ನ ಮಕ್ಕಳಾದ 'ತಿರುಮಲಾಂಬೆ ಮತ್ತು ಮಂಗಳಾಂಬೆ'ಯನ್ನು ಕೊಟ್ಟು ಮದುವೆ ಮಾಡಿ ಅಳಿಯನನ್ನಾಗಿ ಮಾಡಿಕೊಂಡಿದ್ದ.

ಮೊದಲು ಇವನು ಸದಾಶಿವರಾಯನ ರಾಜಪ್ರತಿನಿಧಿಯಾಗಿದ್ದನು. ನಂತರ 1551ರಿಂದ ನೇರವಾಗಿ ಆಳಿದನು. ಸಾಂಪ್ರದಾಯಿಕ ಆಡಳಿತ ಬಿಟ್ಟು ಅಸಂಖ್ಯಾತ ಮುಸ್ಲಿಂರನ್ನು ಸೈನ್ಯದಲ್ಲಿ ಸೇರಿಸಿಕೊಂಡನು. ಕೆಲವು ಹೆಚ್ಚುವರಿ ತೆರೆಗೆ ರದ್ದುಪಡಿಸಿ ಸೇನಾ ಬಲವನ್ನು ಹೆಚ್ಚಿಸಿದನು.

ಸಿಂಹಳ ರಾಜನಿಂದ ಬಲಾತ್ಕಾರವಾಗಿ ಕಪ್ಪು ಕಾಣಿಕೆ ವಸೂಲಿ ಮಾಡಿದನು. ಮಲಬಾರಿನಲ್ಲಿ ಕ್ಯಾಥೋಲಿಕ್‌ರ ಮತಾಂತರ ನೀತಿ ತಡೆಗಟ್ಟಿದನು. ದಕ್ಷಿಣ ರಾಜ್ಯಗಳ ಮೇಲೆ ಸೈನಿಕ ದಾಳಿ ಕೈಗೊಂಡನು. ಪೋರ್ಚುಗೀಸರಿಂದಲೂ ಕಪ್ಪು ಕಾಣಿಕೆ ಸಂಗ್ರಹಿಸಿದ್ದು ಇವರ ವಿಶೇಷ.

## ತಾಳಿಕೋಟೆ ಕದನ:

**ಕದನಕ್ಕೆ ಕಾರಣಗಳು:**

**1) ರಾಮರಾಯನ ವಿದೇಶಾಂಗ ನೀತಿ:**

ಐದು ಸಂತತಿಗಳಾಗಿ ವಿಭಜನೆಯಾಗಿದ್ದ ಬಹುಮನಿ ಸಾಮ್ರಾಜ್ಯವನ್ನು ರಾಮರಾಯ ತನ್ನ ರಾಜ್ಯ ವಿಸ್ತರಣೆಗಾಗಿ ಶಾಹಿ ರಾಜ್ಯಗಳ ಕಲಹ ಮತ್ತು ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕಿ 'ವಿಭಜಿಸಿ ಆಳುವ ನೀತಿ' ಅನುಸರಣೆ. ವಜ್ರದಿಂದ ವಜ್ರ ಕತ್ತರಿಸುವ ನೀತಿ ಇವನಿಗೆ ಮುಳುವಾಗಿ ಪರಿಣಮಿಸಿತು. ಕೊನೆಯಲ್ಲಿ ಎಲ್ಲಾ ಸಂತತಿಗಳು ಒಟ್ಟಾಗಿ ಇವನ ಮೇಲೆ ಆಕ್ರಮಣ ಮಾಡಿದರು.

**2) ಮತೀಯ ಕಾರಣ:**

ವಿಜಯನಗರ ಮತ್ತು ಬಹುಮನಿ ಸಾಮ್ರಾಜ್ಯ ಇವೆರಡೂ ಕೂಡ ವಿಭಿನ್ನವಾದ ಮತೀಯ ರಾಜ್ಯಗಳು. ಒಂದು ಹಿಂದೂ ಸಂಸ್ಕೃತಿಗಾಗಿ ಮತ್ತೊಂದು ಇಸ್ಲಾಂ ಧರ್ಮಕ್ಕಾಗಿ ಇದ್ದಂತವು. ಹಾಗಾಗಿ ಧರ್ಮ ಕಲಹವೇ ಇದಕ್ಕೆ ಮತ್ತೊಂದು ಪ್ರಮುಖವಾದ ಕಾರಣವಾಗಿತ್ತು.

**3) ವಿಜಯನಗರ ಸೈನ್ಯದಲ್ಲಿ ಮುಸ್ಲಿಂರ ಸೇರ್ಪಡೆ:**

ಇಲ್ಲಿ ಸುಮಾರು 3 ಸಾವಿರದಷ್ಟು ಮುಸ್ಲಿಂ ಸೈನಿಕರು ವಿಜಯನಗರ ಸೈನ್ಯಕ್ಕೆ ರಾಮರಾಯನಿಂದ ನೇಮಕವಾಗಿದ್ದರು. ಇವರು ರಾಜಕೀಯದ ಆಂತರಿಕ ಗುಟ್ಟನ್ನೆಲ್ಲಾ ಅರಿತು ಎಲ್ಲವನ್ನೂ ಷಾಹಿ ಸುಲ್ತಾನರಿಗೆ ತಿಳಿಸಿದ್ದರಿಂದ.

**4) ಆರ್ಥಿಕ ಕಾರಣ:**

ಕರ್ನಾಟಕದ ಅತ್ಯಂತ ಶ್ರೀಮಂತ ಸಾಮ್ರಾಜ್ಯವಾದ ಇದು ವಿಜೃಂಭಣೆಯಿಮದ ಇದ್ದದ್ದು ಬಹುಮನಿ ಸುಲ್ತಾನರ ಕಣ್ಣು ಕುಕ್ಕಿತು. ಸಂಪತ್ತಿನ ಸೂರೆಯ ಉದ್ದೇಶ.

**5) ತತ್‌ಕ್ಷಣದ ಕಾರಣ:**

ರಾಮರಾಯನು ಇಸ್ಲಾಂ ರಾಯಭಾರಿಗಳಿಗೆ ಅವಮಾನ ಮಾಡಿದ್ದು. ಅಂದರೆ ರಾಯಚೂರಿನ 'ದೋಅಬ್' ಪ್ರದೇಶವನ್ನು ಮರಳಿ ಕೇಳಲು ಬಂದ ಸಂದರ್ಭದಲ್ಲಿ ಅವರನ್ನು ಅವಮಾನ ಮಾಡಿದ್ದನು.

ಹೀಗೆ ಹಲವಾರು ಕಾರಣಗಳಿಂದಾಗಿ ತಾಳಿಕೋಟೆ ಮತ್ತು ರಕ್ಕಸತಂಗಡಿ ಕದನ 1565ರಲ್ಲಿ ಜನವರಿ 23ರಿಂದ ಪ್ರಾರಂಭವಾಗಿ 27 ದಿನಗಳ ಕಾಲ ನಡೆಯಿತು. ರಾಮರಾಯ, ತಿರುಮಲ ಮತ್ತು ವೆಂಕಟಾದ್ರಿ ನೇತೃತ್ವದ ವಿಜಯನಗರವು ವೀರಾವೇಶದಿಂದ ಹೋರಾಡಿತು. ಆದರೆ ರಾಮರಾಯನ ಕೊಲೆಯೊಂದಿಗೆ ಯುದ್ಧ ಅಂತ್ಯವಾಯಿತು. ಸುಮಾರು 5 ತಿಂಗಳ ಕಾಲ ಸಂಪತ್ತಿನ ಸೂರೆ ಮಾಡಲಾಯಿತು. ವೈಭವದ ವಿಜಯನಗರ ಕಣ್ಮರೆಯಾಯಿತು. ಹೀಗಾಗಿಯೇ 'ರಾಬರ್ಟ್ ಸಿವೆಲ್' ಇದನ್ನು ಮರೆತು ಹೋದ ಸಾಮ್ರಾಜ್ಯ ಎಂದು ಕರೆಯುತ್ತಾರೆ.

**ಇಲ್ಲಿ ಯುದ್ಧದ ಸೋಲಿಗೆ ಕಾರಣಗಳೆಂದರೆ:**

1) ರಾಮರಾಯನು ಹೆಚ್ಚು ಮುಸ್ಲಿಂರನ್ನು ಸೈನ್ಯಕ್ಕೆ ಸೇರಿಸಿಕೊಂಡದ್ದು.

2) ಆಂತರಿಕವಾಗಿ ಶೈವ ಮತ್ತು ವೈಷ್ಣವರ ನಡುವಿನ ಬಿಕ್ಕಟ್ಟು.

3) ರಾಮರಾಯನ ನೀತಿಗಳು.

4) ಮುಸ್ಲಿಂರ ಐಕ್ಯತೆ.

## ತಾಳಿಕೋಟೆ ಯುದ್ಧದ ಪರಿಣಾಮಗಳು:

1) ರಾಜಕೀಯ ಪರಿಣಾಮ: ಈ ಯುದ್ಧದಿಂದಾಗಿ ಹಿಂದೂ ಧರ್ಮದ ಭದ್ರತೆಗೆ ಹುಟ್ಟಿದಂತಹ ದಕ್ಷಿಣ ಭಾರತದ ಕಟ್ಟ ಕಡೆಯ ಶ್ರೀಮಂತ ವಿಜಯನಗರ ಸಾಮ್ರಾಜ್ಯ ಕಣ್ಮರೆಯಾಯಿತು. ಹಂಪೆ ಹಾಳು ಕೊಂಪೆಯಾಯಿತು. ಅನೇಕ ಪಾಳೆಯಗಾರರು ಸ್ವತಂತ್ರ ರಾಜ್ಯವನ್ನು ಕಟ್ಟಿದರು.

2) ಸಣ್ಣ ರಾಜ್ಯಗಳ ಪ್ರಾಬಲ್ಯ: ಭವ್ಯ ಸಾಮ್ರಾಜ್ಯದ ಕಣ್ಮರೆಯ ನಂತರ ಇವರ ಸಾಮಂತರಾದಂತಹ ಚಿತ್ರದುರ್ಗ, ಕೆಳದಿ, ಮಧುರೈ, ಯಲಹಂಕದ ಗೌಡರು, ಮೈಸೂರಿನ ಒಡೆಯರು, ಹೈದರ್ ಮತ್ತು ಟಿಪ್ಪು ಪ್ರಬಲರಾದರು.

3) ಶಾಹಿ ರಾಜ್ಯಗಳ ಮೇಲೆ ಪ್ರಭಾವ: ಸುಲ್ತಾನರಲ್ಲಿ ಆಂತರಿಕ ಕಚ್ಚಾಟ ಪ್ರಾರಂಭವಾಗಿ ಅವರ ಒಕ್ಕಟ್ಟು ಮುರಿದು ಬಿದ್ದು, ಮೊಘಲರು ಅವರ ರಾಜ್ಯಗಳನ್ನು ಆಕ್ರಮಿಸಿದರು.

4)ಪೋರ್ಚುಗೀಸರ ವ್ಯವಹಾರದ ಮೇಲೆ ಪ್ರಭಾವ ಬೀರಿತು.

5) ಅಪಾರ ಪ್ರಮಾಣದ ವಿಜಯನಗರದ ಆಸ್ತಿ ಮುಸ್ಲಿಂ ಪಾಲಾಯಿತು.

6) ವಿಜಯನಗರದ ಸಾಂಸ್ಕೃತಿಕ ಚಟುವಟಿಕೆಗಳು ತಗ್ಗಿದವು.

7) ಮರಾಠರ ಪ್ರಾಬಲ್ಯತೆ ಆಯಿತು.

ಹೀಗೆ ತಾಳಿಕೋಟೆ ಯುದ್ಧವು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಹಲವಾರು ಬದಲಾವಣೆ ತಂದಿತು.

## 1) ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ:

ಒಂದು ರಾಜ್ಯದ ಶಕ್ತಿ ಮತ್ತು ಸ್ಥಿರತೆ ಅದರ ಆಡಳಿತವನ್ನು ಅವಲಂಬಿಸಿರುತ್ತದೆ. ಇಲ್ಲಿಯ ರಾಜರು ಕಾಲದ ಬದಲಾವಣೆಗಳಿಗನುಸಾರವಾಗಿ ವಿಶಾಲವಾದ ಸಾಮ್ರಾಜ್ಯ ಕಟ್ಟಿ ತಮ್ಮ ಪ್ರಜೆಗಳಿಗೆ ಶಾಂತಿ, ನೆಮ್ಮದಿ ಮತ್ತು ರಕ್ಷಣೆ ಒದಗಿಸಲು ಆಡಳಿತ ವ್ಯವಸ್ಥೆಯನ್ನು ಸರಿದೂಗಿಸಿ ಧರ್ಮದಿಂದ ರಾಜ್ಯವನ್ನಾಳಿದರು.

**ಕೇಂದ್ರಾಡಳಿತ:**

ವಿಜಯನಗರ ಸಾಮ್ರಾಜ್ಯದಲ್ಲಿ ರಾಜ್ಯ ಪ್ರಭುತ್ವವಿತ್ತು. ಕೇಂದ್ರದ ಆಡಳಿತ ರಾಜನಲ್ಲಿ ಕೇಂದ್ರೀಕೃತವಾಗಿತ್ತು. ಇಲ್ಲಿ ರಾಜಪ್ರಭುತ್ವವಿದ್ದರೂ ಕೂಡ ನಿರಂಕುಶ ಪ್ರಭುತ್ವವಿರಲಿಲ್ಲ. ರಾಜನ ಕರ್ತವ್ಯ ಧರ್ಮವನ್ನು ರಕ್ಷಿಸುವುದಾಗಿತ್ತು. ಅಮುಕ್ತಮೌಲ್ಯದಲ್ಲಿ ಕೃಷ್ಣದೇವರಾಯನು ಹೇಳಿರುವಂತೆ 'ರಾಜನು ಧರ್ಮದ ಚೌಕಟ್ಟಿನಲ್ಲಿ ಅಧಿಕಾರ ನಡೆಸಬೇಕು' ರಾಜನು ಯಾವಾಗಲೂ ಪ್ರಜಾರಕ್ಷಣಾ ತತ್ಪರನಾಗಿದ್ದು ಪ್ರಜೆಗಳ ದು:ಖ ನಿವಾರಿಸುವ ಪ್ರಜಾಹಿತಾಸಕ್ತನಾಗಿರಬೇಕು. ಆಡಳಿತದಲ್ಲಿ ಸಹಕರಿಸಲು ಮಂತ್ರಿಮಂಡಲವಿರುತ್ತಿತ್ತು. ಇವರಲ್ಲಿ ದಂಡನಾಯಕ, ಸಾಮಂತ, ರಾಜ, ಪುರೋಹಿತ, ಮಹಾಪ್ರಧಾನಿ ಪ್ರಮುಖರು. ಅರಸನು ಸಾಮಾನ್ಯವಾಗಿ ತನ್ನ ಉತ್ತರಾಧಿಕಾರಿಯನ್ನು ನಿರ್ಧರಿಸಿ ಆತನಿಗೆ ಯುವರಾಜ ಎಂದು ಪಟ್ಟಕಟ್ಟುತ್ತಿದ್ದನು. ರಾಜನ ಹಿರಿಯ ಮಗನೇ ಸಾಮಾನ್ಯವಾಗಿ ಹಕ್ಕುದಾರನಾಗಿರುತ್ತಿದ್ದನು. ಮಂತ್ರಿಗಳ ಸಮಾಲೋಚನೆಗೆ 'ದಿವಾನ್‌ಖಾನ್' ಎಂಬ ಸಚಿವಾಲಯವಿರುತ್ತಿತ್ತು. ಇದರ ಕಾರ್ಯದರ್ಶಿಗೆ 'ರಾಯಸ' ಎನ್ನುತ್ತಿದ್ದರು.

**ಪ್ರಾಂತ್ಯಾಡಳಿತ:**

ಆಡಳಿತದ ಅನುಕೂಲಕ್ಕಾಗಿ ಅನೇಕ ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಮುಳುವಾಯಿ (ಮುಳುಬಾಗಿಲು), ಮಂಗಳೂರು 'ರಾಜ್ಯ' ಎಂಬ ಪದಗಳು ಕಂಡುಬಂದಿವೆ. ಇಲ್ಲಿ 2 ರೀತಿಯ ಪ್ರಾಂತ್ಯಗಳಿದ್ದ (ಸೀಮೆ), ಒಂದು, ರಾಜನೇ ತನ್ನ ನೇರ ರಾಜಪ್ರತಿನಿಧಿ ಅಥವಾ ಯುವರಾಜರ ಮೂಲಕ ಆಳುತ್ತಿದ್ದ ಪ್ರಾಂತ್ಯ ಮತ್ತು ಸಾಮಂತರಿಗೆ ವಹಿಸಿ ಆಳುತ್ತಿದ್ದ ಪ್ರಾಂತ್ಯ. ರಾಜ್ಯವನ್ನು ಮತ್ತೇ ವಿಷಯ (ವೇಂಟೆ), ಸೀಮೆ (ನಾಡು), ಕಂಪನ (ಕೆಲವೇ ಭಾಗದ ಗ್ರಾಮಗಳುಳ್ಳ ಕಡೆಯ ವಿಭಾಗ), ಇದರ ಕೆಳಗೆ ಗ್ರಾಮಗಳಿದ್ದವು. ವಿವಿಧ ಇಲಾಖಾ ಮುಖ್ಯಸ್ಥರನ್ನು 'ಸಂಪ್ರತಿ' ಎನ್ನುತ್ತಿದ್ದರು.

**ಗ್ರಾಮಾಡಳಿತ:**

ಚೋಳರಂತೆ ಇಲ್ಲಿಯೂ ಕೂಡ ಗ್ರಾಮಗಳಲ್ಲಿ ಸ್ಥಳೀಯ ಸ್ವಾಯತ್ತತಾ ಸರ್ಕಾರ ಸ್ಥಾಪನೆಯಾಗಿತ್ತು. ಗ್ರಾಮ ರಾಜ್ಯದ ಪ್ರಾಥಮಿಕ ಆಡಳಿತ ಘಟಕವಾಗಿತ್ತು. ಅದರ ನೆರವಿಗೆ ಹಿರಿಯರ ಗ್ರಾಮಸಭೆ ಇತ್ತು. ಗ್ರಾಮದ ಮುಖ್ಯಸ್ಥನೇ ಗೌಡ. ಇವರ ನೆರವಿಗೆ ಶಾನುಭೋಗ, (ಕರಣಕ) ಎಂಬ ಗ್ರಾಮ ಲೆಕ್ಕಿಗ ಸಹಾಯಕನಿದ್ದನು. ಅಗ್ರಹಾರಗಳು ಬ್ರಾಹ್ಮಣರ ಆಡಳಿತದಲ್ಲಿದ್ದವು.

**ಸೇನಾಡಳಿತ:**

ಇದು ಕಾಲದಳ, ಅಶ್ವ ಪಡೆ, ಗಜ ಪಡೆ, ಪಿರಂಗಿ ಪಡೆ ಎಂಬ 4 ಪಡೆಯಿಂದ ಕೂಡಿತ್ತು. ಸೇನಾಪತಿ ಸೈನ್ಯದ ಮುಖ್ಯಸ್ಥನಾಗಿದ್ದ. ಅಬ್ದುಲ್ ರಜಾಕ್ ಪ್ರಕಾರ 11 ಲಕ್ಷ ಸೈನ್ಯವಿತ್ತು. ಆದರೆ ಬಹುವಾಗಿ ಗಜಪಡೆ ಮೇಲೆ ಅವಲಂಬಿತವಾಗಿತ್ತು. 'ಯುದ್ಧ ಮತ್ತು ಒಪ್ಪಂದ' ಇವೆರಡೂ ಕೂಡ ರಾಜನಿಗೆ ಸೇರಿತ್ತು.

**ನ್ಯಾಯಾಡಳಿತ:**

ರಾಜನೇ ಸರ್ವೋಚ್ಚ ತೀರ್ಪುಗಾರ. ಪರಂಪರಾನುಗತ ಧರ್ಮಶಾಸ್ತ್ರಗಳಂತೆ ಅವನು ನಿಷ್ಪಕ್ಷಪಾತ ನ್ಯಾಯದಾನ ಮಾಡುತ್ತಿದ್ದನು. ಪ್ರಾಂತ್ಯಗಳಲ್ಲಿ ರಾಜಪಾಲರು, ಸಾಮಂತರು, ದಂಡನಾಯಕರು, ಗ್ರಾಮಸಭೆಗಳು, ನ್ಯಾಯರಕ್ಷಣಾ ಕಾರ್ಯ ಮಾಡುತ್ತಿದ್ದರು. ವಿಶೇಷವೆಂದರೆ ಬ್ರಾಹ್ಮಣರಿಗೆ ಮರಣದಂಡನೆ ಇರಲಿಲ್ಲ. (ಗಡಿಪಾರು, ನೀರಲ್ಲಿ ಮುಳುಗಿಸುವುದು.)

**ತೆರಿಗೆ:**

ಭೂ ಕಂದಾಯ ರಾಜ್ಯದ ಪ್ರಮುಖ ಆದಾಯ. 1/6 ಭಾಗ ಕಂದಾಯ ದವಸ ಮತ್ತು ನಗದಾಗಿ ಕೊಡಬೇಕಿತ್ತು. ಕೆಲವು ವೇಳೆ 1/2 ಆಗುತ್ತಿತ್ತು. ಭೂಕಂದಾಯವನ್ನು 'ಶಿಸ್ತು' ಎನ್ನುತ್ತಿದ್ದರು.

**ನಾಣ್ಯಗಳು:**

ಬಂಗಾರ, ಬೆಳ್ಳಿ, ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರು. ಅವರ ಬಂಗಾರದ ವರಹ ನಾಣ್ಯ 52.7 ಗ್ರಾಂ ತೂಗುತ್ತಿತ್ತು. ಇದರ ಜೊತೆ ಗದ್ಯಾಣ, ವೀಸ, ಹಗ, ಜಿತಾಲ್ ನಾಣ್ಯ ಚಲಾವಣೆಯಲ್ಲಿದ್ದವು. ಇವುಗಳ ಮೇಲೆ ಲಕ್ಷ್ಮೀ ವೆಂಕಟೇಶ ಹನುಮಾನ್ ಚಿತ್ರಗಳಿದ್ದವು.

**ನಾಯಂಕರ ಪದ್ದತಿ:**

ರಾಜರು ಗೆದ್ದ ಪ್ರದೇಶಗಳನ್ನು ಆಯಾ ರಾಜರಿಗೆ ಹಿಂದಿರುಗಿಸಿ ಅವರಿಂದ 'ಪೊಗದಿ ಅಥವಾ ಕಪ್ಪ' ವಸೂಲು ಮಾಡುತ್ತಿದ್ದದ್ದೇ ನಾಯಂಕರ ಪದ್ದತಿ.

**ಸಾಮಾಜಿಕ ವ್ಯವಸ್ಥೆ:**

ವಿಜಯನಗರ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಗಮನಿಸುವುದಾದರೆ, ಇದು ಚಾತುರ್‌ವರ್ಣ ಅಥವಾ ವರ್ಣಾಶ್ರಮ ಪದ್ದತಿಯ ಮೇಲೆ ರೂಪುಗೊಂಡಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಗಗಳಿದ್ದವು. ಪ್ರಮುಖವಾಗಿ ನೋಡುವುದಾದರೆ,

* ಬ್ರಾಹ್ಮಣ ಸಮಾಜವು ಗೌರವಾನ್ವಿತರಾಗಿದ್ದು ಅವರನ್ನು ಸರಿಯಾಗಿ ನೋಡಿಕೊಂಡರೆ ರಾಜ್ಯ ಸುಸ್ಥಿತಿಯಲ್ಲಿರುವುದೆಂದು ರಾಜರು ನಂಬಿದ್ದರು. (ಭೂಮಿ ದಾನ ಅವರಿಗಿತ್ತು).

* ಜಾತಿ ಪದ್ದತಿ ಕಠಿಣವಾಗಿದ್ದು, ಶೂದ್ರರು ಊರಿನ ಹೊರ ಭಾಗದಲ್ಲಿ ಜೀವನ ನಡೆಸಿ ಊರಿನ ಕೆಲಸದಲ್ಲಿ ನಿರತರಾಗಿರುತ್ತಿದ್ದರು.

* ಸ್ತ್ರೀಯರಿಗೆ ಸಮಾಜದಲ್ಲಿ ಉನ್ನತವಾದ ಸ್ಥಾನವಿತ್ತು. ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಅವರು ಭಾಗವಹಿಸುತ್ತಿದ್ದರು.

* ಅರಮನೆಯಲ್ಲಿ ಲೆಕ್ಕ ಪತ್ರದ ಬರವಣಿಗೆ, ವ್ಯಾಪಾರ ವಹಿವಾಟು ನಿರ್ವಹಣೆ ಸ್ತ್ರೀಯರಿಂದ ನಡೆಯುತ್ತಿತ್ತು.

* ಸ್ತ್ರೀ ಪುರುಷರು ಹತ್ತಿ ಮತ್ತು ರೇಷ್ಮೆ ಉಡುಪುಗಳನ್ನು ಧರಿಸುತ್ತಿದ್ದರು. ಸ್ತ್ರೀಯರು ಸೀರೆ ಕುಪ್ಪಸವನ್ನು, ಗಂಡಸರು ಪಂಚೆ, ನಿಲುವಂಗಿ ಮತ್ತು ರೂಮಾಲು ಧರಿಸುತ್ತಿದ್ದರು. ಇಬ್ಬರೂ ಆಭರಣ ಪ್ರಿಯರಾಗಿದ್ದರು.

* ಉಚ್ಛ ವರ್ಗದವರಲ್ಲಿ ಸತಿಸಹಗಮನ ಪದ್ದತಿ ರೂಢಿಯಲ್ಲಿತ್ತು.

* ದೇವದಾಸಿ ಪದ್ದತಿ ವ್ಯಾಪ್ತಿಯಿಂದಾಗಿ ವೇಶ್ಯಾ ವ್ಯವಸಾಯ ವ್ಯಾಪಕವಾಗಿತ್ತು.

* ಶ್ರೀಗಂಧ, ಚಂದನ, ಕಸ್ತೂರಿ, ಪನ್ನೀರು, ಮುಂತಾದ ಅಂಗರಾಗಗಳ ಬಳಕೆಯಿತ್ತು. 'ರಾಯರ ಕಾಲದ ರಸಿಕತೆ' ಖ್ಯಾತವಾಗಿತ್ತು.

* ಹೋಳಿ, ದಸರಾದಂಥ ಹಬ್ಬಗಳ ಆಚರಣೆ ಇತ್ತು.

ಹೀಗೆ ಸಾಮಾಜಿಕ ವ್ಯವಸ್ಥೆಯು ನಿರ್ದಿಷ್ಟವಾಗಿ ರೂಪುಗೊಂಡಿತ್ತು.

**ಆರ್ಥಿಕ ಸ್ಥಿತಿ:**

ಈ ಸಾಮ್ರಾಜ್ಯವು ಅತ್ಯಂತ ಶ್ರೀಮಂತ ಸಾಮ್ರಾಜ್ಯವಾಗಿದ್ದು ಆರ್ಥಿಕ ಸಮೃದ್ಧಿಯಿಂದ ಕೂಡಿದ ಜನಭರಿತ ರಾಜ್ಯವಾಗಿತ್ತು. ಬಂದಂತಹ ಎಲ್ಲಾ ವಿದೇಶೀ ಪ್ರವಾಸಿಗರು ಇದನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಬಹುಪಾಲು ಜನರು ಕೃಷಿಯನ್ನು ಅವಲಂಬಿಸಿದ್ದು, ಅಕ್ಕಿ, ಜೋಳ, ಕಬ್ಬು, ಹತ್ತಿ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಕೆರೆಕಟ್ಟೆ ಕಾಲುವೆಗಳು ಬೆಳೆಗಳಿಗೆ ನೀರು ಹಾಯಿಸುತ್ತಿದ್ದರು.

ಕೈಗಾರಿಕೆಗಳು ಪ್ರಗತಿಯಲ್ಲಿದ್ದು ಗಾಣಿಗ, ಬಟ್ಟೆ ನೇಯ್ಗೆ, ಹೆಂಡ ಇಳಿಸುವ ಮುಂತಾದ ಗೃಹ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ವ್ಯಾಪಾರವು ಅರಬ್ ಮಧ್ಯವರ್ತಿಗಳ ಮೂಲಕ ನಡೆಯುತ್ತಿತ್ತು. ನಂತರ ಇದು ಪೋರ್ಚುಗೀಸರ ಪಾಲಾಯಿತು.

'ಪಾಯಸ್' ಹೇಳುವಂತೆ 'ಮುತ್ತು ರತ್ನಗಳನ್ನು ರಾಜಧಾನಿಯ ಬೀದಿಗಳಲ್ಲಿ, ಮಗ್ಗುಲಲ್ಲಿ ರಾಶಿ ಹಾಕಿ ಮಾರುತ್ತಿದ್ದರು'. ರೋಮ್‌ನಷ್ಟೇ ಇದು ದೊಡ್ಡದೆಂದು ಹೇಳುತ್ತಾನೆ.

ಮಂಗಳೂರು, ಭಟ್ಕಳ, ಹೊನ್ನಾವರ, ಕಡಲೂರು, ತೂತುಕುಡಿ ಮುಂತಾದವು ಪ್ರಮುಖ ವಾಣಿಜ್ಯ ಬಂದರುಗಳಾಗಿದ್ದು, ಸುಮಾತ್ರ, ಅರೇಬಿಯಾ, ಪರ್ಷಿಯಾದೊಂದಿಗೆ ನಿಕಟವಾದ ಸಂಬಂಧ ಹೊಂದಿದ್ದವು.

ಗದ್ಯಾಣ, ಪಗೋಡ, ದುಡ್ಡು, ಜಿತಾಲ್, ಪಣ ಮತ್ತು ಹಗ ವಿಜಯನಗರದ ಮುಖ್ಯ ನಾಣ್ಯಗಳು.

ಹೀಗೆ ಆರ್ಥಿಕವಾಗಿ ಸಮೃದ್ಧಿಯನ್ನು ಕಂಡ ಸಾಮ್ರಾಜ್ಯವಾಗಿತ್ತು.

**ಧಾರ್ಮಿಕ ಸ್ಥಿತಿಗತಿ:**

ವಿಜಯನಗರ ಸಾಮ್ರಾಜ್ಯವು ಮುಸಲ್ಮಾನರ ದಾಳಿಯಿಂದ ಹಿಂದೂ ಧರ್ಮವನ್ನು ರಕ್ಷಿಸಲು ಸ್ಥಾಪಿತವಾಯಿತು. ಆದರೂ ಸಮಾಜದ ವಿಭಿನ್ನ ಧರ್ಮಗಳ ಬಗ್ಗೆ ಸಹನೆ ಮತ್ತು ಸಹಾನುಭೂತಿ ತೋರುತಿತ್ತು. ಇವರು ಹಿಂದೂಗಳಾಗಿದ್ದು ಬಹುಸಂಖ್ಯಾತ ಪ್ರಜೆಗಳು ಹಿಂದೂಗಳಾಗಿದ್ದರೂ ಕೂಡ ಮುಸ್ಲಿಂ, ಜೈನ, ಕ್ರೈಸ್ತ ಧರ್ಮದ ಅನುಯಾಯಿಗಳೊಂದಿಗೆ ಶಾಂತಿಯುತವಾಗಿ ಬಾಳುತ್ತಿದ್ದರು.

ಶ್ರವಣಬೆಳಗೊಳದ ಶಾಸನದ ಪ್ರಕಾರ '1ನೇ ಬುಕ್ಕರಾಯನು ಜೈನ ಧರ್ಮದ ಮತ್ತು ವೈಷ್ಣವರಲ್ಲಿ ಉಂಟಾದ ಭೇದವನ್ನು ಪರಿಹರಿಸಿ ಸಾಮರಸ್ಯ ಮೂಡಿಸಿದನೆಂದು ತಿಳಿಸುತ್ತದೆ. 2ನೇ ದೇವರಾಯನು ಪುರಾಣ ಮತ್ತು ಖುರಾನನ್ನು ಒಂದೇ ವೇದಿಕೆಯ ಮೇಲಿಟ್ಟು ಗೌರವಿಸಿದನು.'

ಗೋಬ್ರಾಹ್ಮಣ ಪ್ರತಿಪಾಲನಾಚಾರ್ಯ, ವೈದಿಕ ಮಾರ್ಗಸಂಸ್ಥಾಪನಾಚಾರ್ಯ, ಮುಂತಾದ ಸಾಮ್ರಾಟರ ಬಿರುದುಗಳು ಇವರ ಧಾರ್ಮಿಕತೆಯ ರಕ್ಷಣೆಗೆ ಕೈಗನ್ನಡಿಯಾಗಿವೆ. ಇವರು ಶೈವರಾದರೂ, ವೈಷ್ಣವ ವರಾಹ ಲಾಂಛನವನ್ನು ಸ್ವೀಕರಿಸಿದ್ದರು.

ಸಾಮ್ರಾಜ್ಯದ ಗಣ್ಯ ಅಧಿಕಾರಿಗಳ ಸ್ಥಾನಕ್ಕೆ ಜಾತಿ, ಮತದ ಭೇದ ಭಾವವಿಲ್ಲದೇ ಆಯ್ಕೆ ಮಾಡುತ್ತಿದ್ದರು. ಬರ್ಬೋಸ್ ಹೇಳುವಂತೆ ಯಾವ ಧರ್ಮವನ್ನಾದರೂ ಅನುಸರಿಸುವ ಸ್ವಾತಂತ್ರ್ಯವಿತ್ತು.

ಜೈನ ಮತ್ತು ಬೌದ್ಧ ಧರ್ಮವು ಈ ಕಾಲದಲ್ಲಿ ಹೆಚ್ಚು ಮಟ್ಟಿಗೆ ಪ್ರಸಾರವಾಯಿತು.

ಶೈವ ಹರಿಹರ ಬುಕ್ಕರು ಅದ್ವೈತ ಸಿದ್ಧಾಂತದ ಅನುಸಾರಕರು. ಸಾಳುವ ಮತ್ತು ತುಳುವ ಅರಸರು ಶ್ರೀವೈಷ್ಣವರಾಗಿದ್ದರು. (ವಿಶಿಷ್ಟಾದ್ವೈತ ನಂಬಿಕೆ).

ಇಸ್ಲಾಂ ಸೈನಿಕರಿಗೆ ಸೈನ್ಯದಲ್ಲಿ ಅವಕಾಶ, ಮಸೀದಿ ನಿರ್ಮಾಣ, ಕ್ರೈಸ್ತ ಮತದ ಪೋರ್ಚುಗೀಸರೊಂದಿಗೆ ಉತ್ತಮ ಸಂಬಂಧ.

ಹೀಗೆ ಧಾರ್ಮಿಕ ನೀತಿ ಉಚ್ಚ ಸ್ಥಿತಿಯಲ್ಲಿತ್ತು.

**ಸಾಹಿತ್ಯ:**

ಸಾಹಿತ್ಯ ಕ್ಷೇತ್ರದಲ್ಲಿ ವಿಜಯನಗರ ಸಾಮ್ರಾಜ್ಯವು ಮಹೋನ್ನತ ಪ್ರಗತಿಯನ್ನು ಸಾಧಿಸಿತು. ಸಾಹಿತ್ಯದ ದೃಷ್ಟಿಯಿಂದ ಈ ಕಾಲವನ್ನು 'ಅಗಸ್ಟಸ್ ಮತ್ತು ಎಲಿಜಬೆತ್'ರ ಕಾಲಕ್ಕೆ ಹೋಲಿಸಲಾಗಿದೆ. ಸಾಮ್ರಾಜ್ಯ ಸ್ಥಾಪನೆಯ ಜೊತೆ ಚದುರಿ ಹೋಗಿದ್ದ ಪ್ರಾಚೀನ ಧರ್ಮಗ್ರಂಥಗಳನ್ನು ಸಂಕಲಿಸಿ ಅವುಗಳ ಅರ್ಥವನ್ನು ಜನಸಾಮಾನ್ಯರಿಗೆ ತಿಳಿಸುವುದು ಇದರ ಉದ್ದೇಶವಾಗಿತ್ತು. ಎಲ್ಲಾ ಭಾಷಾ ಸಾಹಿತ್ಯಕ್ಕೂ ಸಮಾನ ಅವಕಾಶ ನೀಡಿದ ರಾಜರುಗಳಲ್ಲಿ ಕೆಲವರು ತಾವೇ ಕವಿಗಳಾದದ್ದೂ ಉಂಟು. ಈ ಕಾಲದಲ್ಲಿ ಸಂಸ್ಕೃತ, ಕನ್ನಡ ಮತ್ತು ತೆಲುಗಿನಲ್ಲಿ ವಿಫುಲವಾದ ಸಾಹಿತ್ಯ ಸೃಷ್ಟಿಯಾಯಿತು.

**ಸಂಸ್ಕೃತ ಸಾಹಿತ್ಯ:**

1) ಸಾಯನಾಚಾರ್ಯ: ಆಯುರ್ವೇದ, ಸುಭಾಷಿತ, ಸುಧಾನಿಧಿ.

2) ಮಾದದರ: ಸಿದ್ದಾರ್ಥ ಪ್ರಕಾಶ.

3) ಗಂಗಾಂಬಿಕೆ: ಮಧುರಾ ವಿಜಯಂ.

4) ಕೃಷ್ಣದೇವರಾಯ: ಜಾಂಬವತಿ ಕಲ್ಯಾಣ, ರಸಮಂಜರಿ, ಉಷಾಪರಿಣಯ ಇತ್ಯಾದಿ.

**ಕನ್ನಡ ಸಾಹಿತ್ಯ:**

1) ಚಾಮರಸ – ಪ್ರಭುಲಿಂಗಲೀಲೆ

2) ಕುಮಾರವ್ಯಾಸ – ಗದುಗಿನ ಭಾರತ

3) ರತ್ನಾಕರವರ್ಣಿ – ಭರತೇಶ ವೈಭವ

4) ಲಕ್ಷ್ಮೀಶನ – ಜೈಮಿನಿ ಭಾರತ

5) ನರಹರಿ – ತೊರೆವ ರಾಮಾಯಣ

6) ಕನಕದಾಸ – ಮೋಹನ ತರಂಗಿಣಿ, ಹರಿಭಕ್ತಿಸಾರ, ನಳಚರಿತೆ, ಶಾಸನ ಇತ್ಯಾದಿ.

**ತೆಲುಗು ಸಾಹಿತ್ಯ:**

1) ಕೃಷ್ಣದೇವರಾಯ – ಅಮುಕ್ತಮೌಲ್ಯದ

2) ಶ್ರೀನಾಥನ – ಹರಿವಿಲಾಸ.

ಕೃಷ್ಣ ದೇವರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜರೆಂಬ ಎಂಟು ಕವಿಗಳಿದ್ದು ಇವರ ಸಾಹಿತ್ಯ ಪ್ರೋತ್ಸಾಹಕ್ಕೆ ಸಾಕ್ಷಿಯಾಯಿತು.

**ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಮತ್ತು ಚಿತ್ರಕಲೆ:**

**ಕಲೆ:**

ವಿಜಯನಗರದ ಕಲೆ ಧಾರ್ಮಿಕ ಅಂಶಗಳ ಆಧಾರವುಳ್ಳದ್ದಾಗಿದೆ. ವಿಜಯನಗರದ ಅರಸರು ಕಟ್ಟಡಗಳ ಪ್ರಸಿದ್ಧ ನಿರ್ಮಾಪಕರಲ್ಲದೆ ಕಲಾ ಸೌಂದರ್ಯದ ಕಾರ್ಯಶಕ್ತಿಯ ಪ್ರೇರಕರೂ ಆಗಿದ್ದರು. ವಿಜಯನಗರ ಅರಸರು ಪರಂಪರಾನುಗತವಾಗಿ ಬಂದಿದ ಚಾಲುಕ್ಯ, ಚೋಳ ಮತಗ್ತು ಹೊಯ್ಸಳ ವಿನ್ಯಾಸಗಳನ್ನು ಕಲೆಗೆ ಅಳವಡಿಸಿಕೊಂಡರು. ಆದ್ದರಿಂದ ಈ ಕಾಲದಲ್ಲಿ ದ್ರಾವಿಡ ಶೈಲಿಯು ಮುಂದುವರೆಯಿತು.

**ಚಿತ್ರಕಲೆ:**

ಚಿತ್ರಕಲೆ ಬೆಳೆಸುವಲ್ಲಿ ವಿಜಯನಗರದ ಅರಸರು ಆಸಕ್ತಿ ಹೊಂದಿದ್ದರು. ಅರಸರು ಚಿತ್ರಕಲಾ ಕೌಶಲ್ಯತೆಗೆ ಉದಾರಾಶ್ರಯ ನೀಡಿದರು. ಹಂಪೆಯ ವಿರೂಪಾಕ್ಷ ದೇವಾಲಯ, ಲೇಪಾಕ್ಷಿಯ ವೀರಭದ್ರ, ಆನೆಗೊಂದಿಯ ಹಚ್ಚಪ್ಪಯ್ಯ ಮಠ, ಕಂಚಿಯ ವರದರಾಜ ದೇವಾಲಯಗಳಲ್ಲಿ ಇವರ ಚಿತ್ರಕಲಾ ಅಂಶಗಳು ಕಂಡುಬರುತ್ತವೆ. ಶ್ರೀರಂಗರ ಕಾಳಹಸ್ತಿಯಲ್ಲಿ ಈ ಕಾಲದ ಕಲೆ ನೋಡಬಹುದು ಮತ್ತು ಕಿನ್ನಾಳ ಕಲೆ ಇಲ್ಲಿಯ ಪ್ರಸಿದ್ದವಾದ ಕಲೆಯಾಗಿದೆ.

1) ಲೇಪಾಕ್ಷಿಯ ಚಿತ್ರಕಲೆ: ವಿಜಯನಗರದ ಚಿತ್ರಕಲೆಯಲ್ಲಿ ಇದು ಪ್ರಮುಖವಾಗಿದ್ದು, ವೀರಭದ್ರ ದೇವಾಲಯದ ಆವರಣದಲ್ಲಿ ಹಸಿರು, ಹಳದಿ, ನೀಲಿ, ಕೆಂಪು ಬಣ್ಣಗಳಲ್ಲಿ ದೇವತೆಗಳು, ಸಾಮಂತರು, ಸುಂದರ ಸ್ತ್ರೀಯರು, ಹೂಬಳ್ಳಿಯ ದೃಶ್ಯಗಳು ಚಿತ್ರವಾಗಿವೆ.

ಪೌರಾಣಿಕ ದೃಶ್ಯಗಳೆಂದರೆ,

1. ಗಿರಿಜಾ ಕಲ್ಯಾಣ

2. ರಾಮ ಪಟ್ಟಾಭಿಷೇಕ

3. ಮೋಹಿನಿ ಭಸ್ಮಾಸುರ

4. ದ್ರೌಪದಿ ಕಲ್ಯಾಣ

5. ರಂಭಾ ಊರ್ವಶಿ ಚಿತ್ರ, ನೃತ್ಯಭಾವಗಳು

6. ಅರ್ಜುನನ ತಪೋದೃಶ್ಯ, ವಿಷ್ಣುವಿನ ದಶಾವತಾರ ಚಿತ್ರಿಸಲ್ಪಟ್ಟಿದೆ. (ತಾಂಜಾವೂರ್ ಶೈಲಿ, ಕುಂಭ ಶೈಲಿ, ಜೈನ ಶೈಲಿ ಮಿಶ್ರಣವಾಗಿವೆ.)

ವಿಜಯನಗರದ ಅರಮನೆ ಬಾಗಿಲು ಮತ್ತು ಗೋಡೆಗಳ ಮೇಲೆ ವಿವಿಧ ಬಗೆಯ ವರ್ಣಚಿತ್ರ ಆಕರ್ಷಿತವಾಗಿದ್ದವು.

2) ಕಿನ್ನಾಳ ಕಲೆ: ಕೊಪ್ಪಳದಿಂದ 10 ಕಿ.ಮೀ. ದೂರದಲ್ಲಿರುವ ಕಿನ್ನಾಳ ಎಂಬ ಊರಿನಿಂದ ಪ್ರಚಾರಕ್ಕೆ ಬಂದ ಕಲೆ ಇದಾಗಿದ್ದು, ಇದೊಂದು ಅಪ್ಪಟ ಜಾನಪದ ಕಲೆಯಾಗಿ ಪ್ರಸಿದ್ಧಿ ಬಂದಿತು. ಕರಕೌಶಲಕ್ಕೆ ಪ್ರಸಿದ್ಧವಾದ ಇದು ಗುಡಿಕಾರರಿಂದ ಅಭಿವೃದ್ಧಿಯಾಯಿತು. ಗೋಡೆ ಅಲಂಕಾರ, ಫಲಕ, ಪೀಠೋಪಕರಣಗಳಲ್ಲಿ ಮನಮೋಹಕವಾಗಿ ಚಿತ್ರಿಸಲಾಗಿದೆ. ಅಷ್ಟ ದಿಕ್ಪಾಲಕರ ಗೋಡೆ, ಅಷ್ಟ ಭುಜಾಕೃತಿ ಪ್ರಭಾವಳಿ ಚೌರೆ, ಕುರ್ಚಿ ಸೊಗಸಾಗಿವೆ. ಅರಮನೆಯ ಅಂತ:ಪುರ ಶಯನ ಗೃಹ ಸಿಂಗಾರಿ ಇವರಾಗಿತ್ತು.

ಒಟ್ಟಾರೆಯಾಗಿ ಇವರ ಕಾಲದ ಚಿತ್ರಕಲೆಯು ಭಾವಪೂರ್ಣವೂ, ಸುಂದರವೂ, ಮತ್ತು ವ್ಯವಸ್ಥಿತವೂ ಆಗಿತ್ತು.

## ವಿಜಯನಗರ ಸಾಮ್ರಾಜ್ಯದ ಶಿಲ್ಪ ಕಲೆ:

ವಿಜಯನಗರದ ಶಿಲ್ಪಕಲೆಯನ್ನು ವಿದೇಶೀ ಪ್ರವಾಸಿಗರಾದ ಪಾಯಸ್ ಮತ್ತು ನ್ಯೂನಿಜ್‌ರವರು ಮುಕ್ತ ಕಂಠದಿಂದ ಹೊಗಳಿದ್ದಾರೆ. ಇಲ್ಲಿಯ ಕಲ್ಲಿನ ರಥ, ವಿರೂಪಾಕ್ಷ ಮತ್ತು ವಿಠಲ ಮತ್ತು ಹಜಾರರಾಮನ ದೇವಾಲಯಗಳಲ್ಲಿ ಅಂದಿನ ಶಿಲ್ಪಕಲೆಯ ಚಾಣಾಕ್ಯತೆ ವ್ಯಕ್ತವಾಗಿದೆ. ಅವುಗಳನ್ನು ನೋಡುವುದಾದರೆ,

1) ಶೃಂಗೇರಿಯ ವಿದ್ಯಾಶಂಕರ ದೇವಾಲಯ: ಕ್ರಿ.ಶ.1356–58ರಲ್ಲಿ ನಿರ್ಮಾಣವಾದ ವಿದ್ಯಾಶಂಕರ ದೇವಾಲಯದಲ್ಲಿ ಹೊಯ್ಸಳ ಮತ್ತು ದ್ರಾವಿಡ ಶೈಲಿಯ ಚಿತ್ರ ಮತ್ತು ಶಿಲ್ಪ ಕೆತ್ತನೆಗಳಿವೆ. ಶ್ರೀ ಶಂಕರಾಚಾರ್ಯರ ಜೀವನಕ್ಕೆ ಸಂಬಂಧಿಸಿದ ಕೆತ್ತನೆಗಳಿವೆ. ಶೈವ ಪ್ರತಿಮೆಗಳನ್ನೇ ಒಳಗೊಂಡಿರುವ 61 ಗುಂಪು ಭಿತ್ತಿ ವಿಗ್ರಹಗಳಿವೆ. ದೇವಾಲಯದ ಪೂರ್ವಪಶ್ಚಿಮದ ಕೊನೆಗಳು ದುಂಡಾಗಿ ಮತ್ತು ಮೂಲೆಗಳು ಬಹುಕೋನರೂಪವಾಗಿ, ವಿಮಾನ ಮೆಟ್ಟಿಲುಗಳನ್ನುಳ್ಳದ್ದಾಗಿ ಇದೆ. ದೇಗುಲದ ಕಟ್ಟಡ ಎತ್ತರ ಜಗುಲಿ ಮೇಲಿದೆ. ಇದರಲ್ಲಿ ಆನೆ, ಕುದುರೆ, ಸಿಂಹ ಶಿಲ್ಪಕಲಾಕೃತಿ ತುಂಬಿವೆ. 12 ಕಂಬಗಳು 12 ರಾಶಿ ಹೋಲುತ್ತದೆ. ದ್ರಾವಿಡ ಶೈಲಿ, ಹೊಯ್ಸಳರ ಮಾದರಿಯ ಶಿಖರವಿದೆ.

2) ಹಂಪೆಯ ಚಿತ್ರಕಲೆ: ವಿಜಯನಗರ ಸಾಮ್ರಾಜ್ಯದ ಹಂಪೆಯಲ್ಲಿನ ಕಲ್ಲಿನ ರಥ, ಬಸವಲಿಂಗ, ನರಸಿಂಹ ವಿಗ್ರಹ, ರಾಯತುಲಾಭಾರ ಶಿಖರ, ಕಡಲೆಕಾಳು ಗಣಪ, ಸಾಸಿವೆ ಕಾಳು ಗಣಪ, ಮುಂತಾದವು ಶಿಲ್ಪಕಲೆ ಪ್ರತಿಬಿಂಬಿಸುತ್ತವೆ. ಇವು ಛಾವಣಿಯವರೆಗೆ ಸಂಪೂರ್ಣ ಶಿಲೆ ಅನಂತರ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣವಾಗಿದೆ. ಮಂಟಪಗಳು ದ್ರಾವಿಡ ಶೈಲಿಯಲ್ಲಿ ನಿರ್ಮಾಣ. ದೇವಾಲಯದ ಗೋಡೆಗಳ ಮೇಲೆ ರಾಮಾಯಣ ಮತ್ತು ಮಹಾಭಾರತದ ದೃಶ್ಯಗಳು ಕಂಡು ಬರುತ್ತವೆ. ಕ್ರಿ.ಶ.1835ರ ಗಾಣಗಿತ್ತಿ ದೇವಾಲಯ ಕದಂಬ ವಿಮಾನದ ಸಮತಲ ರೇಖಾತ್ಮಕ ಶೈಲಿಗೆ ಉದಾಹರಣೆ. ಏಕಶಿಲೆಯ ನಾಗಲಿಂಗ, ಕಾರ್ಕಳ ಮತ್ತು ವೇಣೂರಿನ ಗೊಮ್ಮಟೇಶ್ವರ ಹೀಗೆ ಹಂಪೆಯ ಶಿಲ್ಪಕಲೆ ವಿನೂತನವಾಗಿ ಕಂಡುಬರುತ್ತದೆ.

## ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪ:

ವಿಜಯನಗರದ ಅರಸರು ಕಟ್ಟಡಗಳ ಪ್ರಸಿದ್ಧ ನಿರ್ಮಾಪಕರು. ಇವರು ನಿರ್ಮಾಣ ಮಾಡಿದ

ಕಟ್ಟಡಗಳು ವರ್ಣರಂಜಿತವಾಗಿದ್ದು, ಮಹಾವೈಭವದಿಂದ ಕೂಡಿದ್ದವು. ಈ ಕಾಲದಲ್ಲಿ ಇದರ ಸಜೀವ ಅಲಂಕರಣದಲ್ಲಿ ಭಾರತೀಯ ವಾಸ್ತುಶಿಲ್ಪವು ಒಂದು ಹೊಸ ಮುಖವನ್ನೇ ಪಡೆಯಿತು. ಜೈನ, ಶೈವ, ವೈಷ್ಣವ ದೇವಾಲಯಗಳು ಪರಸ್ಪರ ಅಕ್ಕಪಕ್ಕದಲ್ಲಿರುವುದು ಇದರ ವೈಶಿಷ್ಟ್ಯ.

**ಇವರ ವಾಸ್ತುಶಿಲ್ಪದ ಪ್ರಮುಖ ಲಕ್ಷಣಗಳೆಂದರೆ:**

1) ಕಂಬಗಳಿಂದ ಕೂಡಿದ ಮಂಟಪ, ಮತ್ತು ಕಂಬ ಸಾಲುಗಳಿಂದ ಕೂಡಿದಂತಹ ದೇವಾಲಯ (ಕೆಲವು ಕಂಬ ಚೌಕಾಕಾರವಾಗಿವೆ.)

2) ಕಂಬಗಳ ಶಿಲೆಯ ಕಾಂಡ ಮಧ್ಯದ ಆಸರೆಯಾಗಿ ಪರಿಣಮಿಸಿ ಅದರ ಸುತ್ತಮುತ್ತ ಅನೇಕ ವಿಗ್ರಹ ಕೆತ್ತಲಾಗಿದೆ.

3) ಕಂಬದ ತುದಿ (ಬೋದಿಗೆ)ಯಲ್ಲಿ ಕೆಳಮುಖವಾಗಿರುವ ಕಮಲದ ಮೊಗ್ಗನ್ನು ತೋರಿಸಲಾಗಿದೆ.

ಇಲ್ಲಿ ಪ್ರಮುಖ ವಾಸ್ತುಶಿಲ್ಪಗಳೆಂದರೆ, ಹಂಪೆಯ ವಿರೂಪಾಕ್ಷ, ಹಜಾರರಾಮಸ್ವಾಮಿ, ವಿಠಲಸ್ವಾಮಿ, ಕಮಲಮಹಲ್, ಗಜಶಾಲೆ, ಟಂಕಶಾಲೆ, ಮೂಡಬಿದ್ರೆಯ ಬಸದಿ, ಕಂಚಿ ಕಾಮಾಕ್ಷಿ, ಲೇಪಾಕ್ಷಿಯ ವೀರಭದ್ರ ದೇವಾಲಯ, ಶೃಂಗೇರಿಯ ವಿದ್ಯಾಶಂಕರ ಪ್ರಮುಖವಾದವು.

## ವಿರೂಪಾಕ್ಷ ದೇವಾಲಯ:

ಇದು ವಿಜಯನಗರ ಸ್ಥಾಪನೆಯ ಪೂರ್ವದಲ್ಲೇ ನಿರ್ಮಾಣವಾಗಿದ್ದು ಇದರ ಮಹಾರಂಗ ಮಂಟಪ ಮತ್ತು ಮಹಾದ್ವಾರಗಳ ಮೇಲೆ ಗೋಪುರಗಳ ನಿರ್ಮಾಣ ಕಾರ್ಯ ಕೃಷ್ಣದೇವರಾಯನ ಕಾಲದಲ್ಲಾಯಿತು. (ಪಟ್ಟಾಭಿಷೇಕದ ನೆನಪಿಗೆ 1509–10).

## ವಿಠಲ ಸ್ವಾಮಿ ದೇವಾಲಯ:

ವಿಷ್ಣುವಿಗೆ ಸಮರ್ಪಿತವಾದ ಈ ದೇವಾಲಯವು ಸಂಪೂರ್ಣವಾಗಿ ಒಂದೇ ಒಂದು ಬೃಹತ್ ಶಿಲೆಯಲ್ಲಿ ನಿರ್ಮಾಣವಾಗಿದೆ. ಇದನ್ನು ಬಹುಕೋನಗಳುಳ್ಳ ಪಾಯದ ಮೇಲೆ ಕಟ್ಟಲಾಗಿದೆ. ಕಲ್ಯಾಣ ಮತ್ತು ಫಲಪೂಜಾ ಮಂಟಪಗಳಿವೆ. ಏಕಶಿಲೆಯ ಕಲ್ಲಿನ ರಥ ಇದರ ಮುಂಭಾಗವಿದೆ.

* ಇವರು ತಮ್ಮ ರಚನೆಗಳ ಶಕ್ತಿ ತಾಳಿಕೆಗಳನ್ನು ಹೆಚ್ಚಿಸಲು ಬಿರುಸಾದ ಗ್ರಾನೈಟ್ (ಬೆಣಚುಕಲ್ಲು) ಬಳಸುತ್ತಿದ್ದರು. ಜೊತೆಗೆ ಸಭಾಮಂಟಪ, ಕಲ್ಯಾಣ ಮಂಟಪ, ವಸಂತ ಮಂಟಪ ರಚಿಸುತ್ತಿದ್ದರು. (ಇವು ಚೌಕಾಕಾರದ ಪೀಠದ ಮೇಲೆ ನಿಂತಿವೆ.)

* ಗೋಪುರಗಳ ಜೊತೆಗೆ, ಗರ್ಭಗುಡಿಯು ರಚನೆಯಾಗುತ್ತಿತ್ತು. ಹಜಾರರಾಮ ಮಂದಿರದಲ್ಲಿ ಸೀತಾದೇವಿಯ ಪ್ರತ್ಯೇಕ ಗರ್ಭಗುಡಿಯಿದೆ.

* ಪ್ರತೀ ಕಂಬದ ಮೇಲೂ ಮುಂಗಾಲನ್ನು ಎತ್ತಿ ನಿಂತ ಕುದುರೆ ಅಥವಾ ಮಕರ ಕಾಣಬರುತ್ತದೆ.

* ವಿಠಲಸ್ವಾಮಿ ಮಂದಿರದಲ್ಲಿ ಸಪ್ತಸ್ವರದ ಕಲ್ಲುಗಳಿವೆ. (ಕಂಬ)

* ಹಂಪೆಯ ಕಮಲ್‌ಮಹಲ್, ಗಜಶಾಲೆ ಮುಸ್ಲಿಂ ಶೈಲಿಯಲ್ಲಿವೆ.

* ಶಿಲ್ಪಗಳಲ್ಲಿ ಕೋಲಾಟದ ದೃಶ್ಯಗಳಿವೆ. ಹೀಗೆ ವಾಸ್ತುಶಿಲ್ಪವೂ ಜಗತ್ತಿಗೆ ಒಂದು ವಿನೂತನ ಶೈಲಿಯನ್ನು ಪರುಚಯಿಸಿತು.

## ಸಂಗೀತ ಮತ್ತು ನೃತ್ಯ:

ಸಂಗೀತ ನೃತ್ಯ, ನಾಟಕದ ಕ್ಷೇತ್ರದಲ್ಲೂ ಈ ಕಾಲ ಗಣ್ಯ ಸಾಧನೆಯ ಅವಧಿಯಾಗಿತ್ತು. ಪ್ರವಾಸಿಗರ ವರದಿಗಳು, ದೇವಾಲಯದಲ್ಲಿನ ನೃತ್ಯಭಂಗಿಯ ಮೂರ್ತಿಗಳು ಇವರು ಕಲಾಪ್ರಿಯರೆಂಬುದನ್ನು ತೋರಿಸುತ್ತವೆ.

ನರ್ತನ ಮತ್ತು ಸಂಗೀತ ಇವೆರಡೂ ಸಹೋದರ ಕಲೆಗಳಾಗಿದ್ದು ಸಂಗೀತವು ಭಾವವನ್ನು ಉಕ್ಕಿಸಿದರೆ ನರ್ತನವು ಆ ಭಾವ ದೈಹಿಕ ಅಭಿವ್ಯಕ್ತಿಯಾಗಿದೆ. ಈ ಕಾಲದ ರಾಗಮಂಜರಿ, ಚಂದ್ರೋದಯ, ರಾಗಮಾಲಾ ಮುಂತಾದ ಸಂಗೀತ ಗ್ರಂಥಗಳು ಸಂಗೀತ ಶಾಸ್ತ್ರಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು.

ಹಂಪಿಯಲ್ಲಿ ಮಾಧವನಿಗಾಗಿ ನೃತ್ಯ, ಗಾಯನ ಮತ್ತು ವಾದ್ಯಗಳಿಗೆ ಸರಿಹೊಂದುವಂತಹ 25 ಅಂಕಣಗಳ 1 ರಂಗಮಂಟಪ ಕಟ್ಟಿಸಿದ್ದರು ಎಂದು ಶಾಸನದಿಂದ ತಿಳಿದುಬರುತ್ತದೆ.

ಈ ಕಾಲದ ಹರಿದಾಸ ಚಳುವಳಿಯ ಪ್ರಮುಖರಾದಂತಹ ಪುರಂದರದಾಸ ಮತ್ತು ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಕರ್ನಾಟಕ ಸಂಗೀತಕ್ಕೆ ಅತ್ಯಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ವಿಜಯನಗರ ಆಸ್ಥಾನದ ನರ್ತಕಿಯರನ್ನು ಕುರಿತು ವಿದೇಶಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕೃಷ್ಣದೇವರಾಯ ಸ್ವತ: ವೈಣಿಕರಾಗಿದ್ದು ಎಲ್ಲಾ ದೇವಾಲಯದಲ್ಲೂ ಓಲಗದ ವ್ಯವಸ್ಥೆ ಇತ್ತೆಂದು ತಿಳಿಯುತ್ತದೆ.

ಶಿಲ್ಪಗಳಲ್ಲಿ ಕೋಲಾಟದ ನೃತ್ಯಗಳಿದ್ದು, ಕೃಷ್ಣದೇವರಾಯನು ಬರೆದ 'ಜಾಂಬವತಿ ಕಲ್ಯಾಣ' ಸಂಸ್ಕೃತ ನಾಟಕ ನಟಿಸಲಾಗಿತ್ತಂತೆ. ಇಲ್ಲಿ ಯಕ್ಷಗಾನವೂ ಜನಪ್ರಿಯವಾಗಿದ್ದು 'ಉನ್ಮತರಾಘವ ಮತ್ತು ತಾಯಿಕುಂಡ' ನಾಡಕ ಪ್ರಸಿದ್ಧವಾದವು. ಹೀಗೆ ಸಂಗೀತ ಮತ್ತು ನೃತ್ಯ ಪ್ರಸಿದ್ಧಿ ಪಡೆದಿದ್ದವು.

## ವಿದೇಶಿಯರೊಂದಿಗೆ ವ್ಯಾಪಾರ ಸಂಬಂಧ:

ವಿಜಯನಗರದ ಅರಸರು ವಿದೇಶಿಯರೊಂದಿಗೆ ಉನ್ನತವಾದ ಸಂಬಂಧ ಹೊಂದಿದ್ದು, ಇವರು ಅರಬ್, ಚೀನಾ, ಪೋರ್ಚುಗೀಸ್, ಬರ್ಮಾ, ದಕ್ಷಿಣ ಆಫ್ರಿಕಾ, ಪರ್ಷಿಯಾದೊಂದಿಗೆ ವ್ಯಾಪಾರ ಸಂಬಂಧ ನಡೆಸುತ್ತಿದ್ದರು. ಮುಖ್ಯವಾದ ಆಮದು ವಸ್ತುಗಳೆಂದರೆ, ಆನೆ, ಕುದುರೆ, ತಾಮ್ರ, ಹವಳ, ಪಾದರಸ, ರೇಷ್ಮೆ ಇತ್ಯಾದಿ. ರಫ್ತು ವಸ್ತುಗಳೆಂದರೆ, ಶ್ರೀಗಂಧ, ಹತ್ತಿ, ಸಕ್ಕರೆ, ಬಟ್ಟೆ ಇತ್ಯಾದಿ. ಮಾಲ್ದೀವಸ್ ದ್ವೀಪದಲ್ಲಿ ತಯಾರಾದಂತಹ ಹಡಗುಗಳನ್ನು ಇವರು ಬಳಸುತ್ತಿದ್ದರು. ವಿಜಯನಗರದ ಜನರು ಹಡಗು ಕಟ್ಟುವ ಕಲೆಯನ್ನು ಪೋರ್ಚುಗೀಸರಿಗಿಂತ ಮೊದಲೇ ತಿಳಿದಿದ್ದರು.

'ಐಹೊಳೆಯ ಪಿನೂರ್ವರು' ಎಂಬ ಬೃಹತ್ ವ್ಯಾಪಾರಿ ಸಂಸ್ಥೆಯು ಅರಬ್ಬೀ ಸಮುದ್ರದ ಮೂಲಕ 'ಅರೇಬಿಯಾ, ಪರ್ಷಿಯಾ, ಮುಂತಾದ ಪ್ರದೇಶಗಳೊಂದಿಗೆ ವ್ಯಾಪಾರ ವಹಿವಾಟು ನಡೆಸುತ್ತಿತ್ತು.

ಇಲ್ಲಿಗೆ ಬೇಟಿ ನೀಡಿದ ವಿದೇಶಿಯರೆಂದರೆ,

1) 'ನಿಕೋಲಸ್ ಕಾಂಟ್ (ಇಟಲಿ)' – 1ನೇ ದೇವರಾಯನ ಆಸ್ಥಾನಕ್ಕೆ (1420) ಸಾಮ್ರಾಜ್ಯ 60 ಮೈಲಿ ಸುತ್ತಳತೆ ಇದೆ. 5 ಲಕ್ಷ ಜನಸಂಖ್ಯೆ, 90000 ಯೋಧರಿದ್ದಾರೆ.

2) ಅಬ್ದುಲ್ ರಜಾಕ್ (ಪರ್ಶಿಯಾ) – 2ನೇ ದೇವರಾಯನ ಆಸ್ಥಾನಕ್ಕೆ (1443). ಕೃತಿ – ಹಿಸ್ಟರಿ ಆಫ್ ಪರ್ಶಿಯಾ (ವಿಜಯನಗರದಂತಹ ನಗರ ಈ ಭೂಮಿ ಮೇಲೆ ಇರಲಾರದು – 7 ಸುತ್ತಿನ ಕೋಟೆಗಳಿವೆ.)

3) ಬಾರ್ಬೋಸ್ ಮತ್ತು ಪಯಾಸ್ – ಕೃಷ್ಣದೇವರಾಯನ ಆಸ್ಥಾನಕ್ಕೆ.

4) ನ್ಯೂನಿಚ್ – ಅಚ್ಯುತರಾಯನ ಆಸ್ಥಾನಕ್ಕೆ.

5) ನಿಕಟನ್ – ರಷ್ಯಾ.

6) ಫೆಡ್ರಿಕ್ ಸೀಸರ್ – ಇಟಲಿ – ರಾಮರಾಯನ ಆಸ್ಥಾನಕ್ಕೆ.

1) ನಿಕೋಲೋಕಾಂಟಿ: ಇಟಲಿ ದೇಶದವರು. 1ನೇ ದೇವರಾಯನ ಆಸ್ಥಾನಕ್ಕೆ ಭೇಟಿ. ಇವರ ಪ್ರಕಾರ 'ಹಂಪಿ ದೊಡ್ಡ ನಗರ, ಕಡಿದಾದ ಬೆಟ್ಟಗಳ ಮಧ್ಯೆ ಸ್ಥಾಪಿತರವಾಗಿದೆ. 5 ಲಕ್ಷ ಜನಸಂಖ್ಯೆ ಮತ್ತು 90000 ಯೋಧರಿದ್ದಾರೆ. ಸತಿಸಹಗಮನ ಮತ್ತು ಬಹುಪತ್ನಿತ್ವ ರೂಢಿಯಲ್ಲಿವೆ. ಮಹಾನವಮಿ ಹಬ್ಬ ಆಚರಣೆಯಲ್ಲಿದೆ.

2) ಅಬ್ದುಲ್ ರಜಾಕ್: ಪರ್ಷಿಯಾ. 2ನೇ ದೇವರಾಯನ ಆಸ್ಥಾನಕ್ಕೆ ಭೇಟಿ. ಹಿಸ್ಟರಿ ಆಫ್ ಪರ್ಷಿಯಾ ಕೃತಿ. ಹಿಂದೂಸ್ಥಾನದಲ್ಲೇ ಶ್ರೇಷ್ಠ ಆಸ್ಥಾನ 7 ಸುತ್ತಿನ ಕೋಟೆ ಇದ್ದು ಇಂತಹ ನಗರವು ಭೂಮಿಯ

ಮೇಲಿರಲಾರದ ಮತ್ತು ಕಣ್ಣುಗಳು ಇಂತಹ ನಗರ ನೋಡಿಲ್ಲ. ಕಿವಿಗಳು ಇಂತಹ ನಗರದ ಬಗ್ಗೆ ಕೇಲಿಲ್ಲ ಎಂದಿದ್ದಾನೆ. ರಸ್ತೆಗಳಲ್ಲಿ ಜನ, ದನ, ಆನೆಗಳೇ ತುಂಬಿದ್ದು ದಾರಿ ಸಿಗುವುದು ಕಷ್ಟ ಎಂದಿದ್ದಾನೆ. 300 ಬಂದರು, 12000 ರಕ್ಷಣಾ ಪಡೆ, ಅಂಗಡಿ ಬೀದಿಗಳಲ್ಲಿ ವಜ್ರ ವೈಡೂರ್ಯ ಮಾರಾಟ, ರತ್ನ ಖಚಿತ ಸಿಂಹಾಸನ, ವಿದೇಶಿಯರಿಗೆ ಮುಕ್ತ ಪ್ರವಾಸದ ಅವಕಾಶ.

3) ನಿಕೆಟನ್: ರಷ್ಯಾದವನು. ವಿಜಯನಗರ ಮತ್ತು ಬಹುಮನಿ ರಾಜ್ಯಗಳ ನಡುವೆ ಅನೇಕ ಯುದ್ದಗಳಾದವು. ಇಲ್ಲಿ 1 ಲಕ್ಷ ಪದಾತಿ ಮತ್ತು 50000 ಅಶ್ವಪಡೆಯಿತ್ತು.

4) ಬಾರ್ಬೋಸಾ (ಪೋರ್ಚುಗೀಸ್): ಕೃಷ್ಣದೇವರಾಯನ ಆಸ್ಥಾನಕ್ಕೆ ವಿಜಯನಗರ ಭವ್ಯ ಶ್ರೀಮಂತ ನಗರವಾಗಿತ್ತು. ವಿಶಾಲವಾದ ಅರಮನೆ, ಬೀದಿ ದೇವಾಲಯಗಳಿಂದ ಕಂಗೊಳಿಸುತ್ತಿತ್ತು. ವಜ್ರದ ಗಣಿ ಇದೆ. ರಾಜ ಕರುಣಾಮಯಿ. ಅರಮನೆ ಬಾಗಿಲುಗಳಲ್ಲಿ ಸ್ತ್ರೀಯರು ಕಾಯುತ್ತಿದ್ದರು. ರಾಯರು ನಿಧನರಾದಾಗ 500 ಸ್ತ್ರೀಯರ ದಹನವಾಯಿತು. ಭಟ್ಕಳ ಪ್ರಮುಖ ಬಂದರು.

5) ಪೇಸ್, ಪೋರ್ಚುಗಲ್: 1520ರಲ್ಲಿ, ಅರಸನ ವ್ಯಕ್ತಿತ್ವ, ವೇಶಭೂಷಣದ ಬಗ್ಗೆ ವರ್ಣನೆ ನರಸಿಂಹರಾಜ್ಯದ ಬೀದಿಗಳು ಜನಭರಿತ. ಅರಮನೆ ದಂತದ ಕಂಬಗಳಿಂದ ಕೂಡಿತ್ತು. ಮಾನವ ನಿರ್ಮಿತದಲ್ಲಾ ದೇವ ನಿರ್ಮಿತ. ಜನತೆಗೆ ಧಾರ್ಮಿಕ ಸ್ವಾತಂತ್ರ್ಯ, ಹಸು ಹತ್ಯೆ ಇಲ್ಲಾ, ಪೂಜಿಸುತ್ತಿದ್ದರು. ಒರಿಸ್ಸಾ ಗಜಪತಿಯೊಂದಿಗೆ ಯುದ್ಧ, ರಾಜಧಾನಿ ರೋಮ್ ನಗರದಷ್ಟೇ ಸುಂದರ.

6) ನ್ಯೂನಿಜ್: ಪೋರ್ಚುಗಲ್ ಅಚ್ಯುತರಾಯನ ಆಸ್ಥಾನಕ್ಕೆ. ವಿಜಯನಗರದ ರಾಜಕೀಯ ಆರ್ಥಿಕ ಸ್ಥಿತಿಗಳ ಬಗ್ಗೆ. ಸಿಂಹಾಸನದಲ್ಲಿ ಕುರಾನಿನ ಪೂಜೆ, ಮಹಾನವಮಿ ಹಬ್ಬದ ಆಚರಣೆ.

7) ಫೆಡ್ರಿಕ್ ಸೀಸರ್: ಇಟಲಿ, ತಾಳಿಕೋಟೆ ಕದನದ ಸ್ಥಿತಿ, ಪರಿಣಾಮ, ಶತ್ರುಗಳ ವಿಧ್ವಂಸಕ ಕೃತಿ ಬಗ್ಗೆ ಉಲ್ಲೇಖ, ಹಂಪಿಯಲ್ಲಿ ಮನೆಗಳಿವೆ ಆದರೆ ನರಪಿಳ್ಳೆಗಳಿಲ್ಲ ಎಂದಿದ್ದಾನೆ.

ಈ ಎಲ್ಲ ವಿದೇಶೀ ಪ್ರವಾಸಿಗರು ವಿಜಯನಗರ ಸಾಮ್ರಾಜ್ಯದ ಕುರಿತು ಈ ಮೇಲಿನಂತೆ ಉಲ್ಲೇಖಿಸಿದ್ದಾರೆ.

**ಧಾರ್ಮಿಕ ಪಂಗಡಗಳ ಉಗಮ:**

ಕರ್ನಾಟಕವು ಹಲವು ಧರ್ಮಗಳ ಕೇಂದ್ರ. ಮಾರಿ, ಮಸಣಿ, ಉಕ್ಕಲಾತಿ ಮುಂತಾದ ಗ್ರಾಮದೇವತೆಗಳ ಸ್ಥಳೀಯ ಸಂಪ್ರದಾಯಗಳು ಇಲ್ಲಿದ್ದವು. ಇವರುಗಳ ಜೊತೆಗೆ ಶೈವ, ವೈಷ್ಣವ, ಬೌದ್ದ, ಜೈನ ಈ ನಾಲ್ಕು ಚತುಸ್ಯಮಯಗಳು ಆರಂಭವಾದವು. (ಪ್ರಾಚೀನ ಶೈವ ಮಂದಿರ – ತಾಳಗುಂದ, ಪ್ರಾಚೀನ ವೈಷ್ಣವ ಗುಡಿ – ಬಾದಾಮಿ, ಐಹೊಳೆಯ ಜೈನಗವಿ – ಪ್ರಾಚೀನ ಜೈನ ಪ್ರಾರ್ಥನಾಗಾರ). ನಂತರದ ಶತಮಾನದಲ್ಲಿ 4 ಖ್ಯಾತ ಧರ್ಮಪ್ರವರ್ತಕರುಗಳ ಚಟುವಟಿಕೆಯಿಂದ ವಿಶೇಷ ಧಾರ್ಮಿಕ ಬದಲಾವಣೆಗಳು ಉಂಟಾದವು. (ಶಂಕರ, ರಾಮಾನುಜ, ಬಸವ, ಮಧ್ವಾಚಾರ್ಯರೇ ಪ್ರವರ್ತಕರು.)

**ಶಂಕರಾಚಾರ್ಯ:**

'ಅದ್ವೈತ' ಸಿದ್ಧಾಂತದ ಪ್ರತಿಪಾದಕರಾದ ಶಂಕರಾಚಾರ್ಯರು ಕ್ರಿ.ಶ.788ರಲ್ಲಿ ಕೇರಳದ ಕಾಲಟಿಯಲ್ಲಿ ಜನಿಸಿದರು. ಇವರು 'ಗೋವಿಂದ ಭಗವತ್ಪಾದರ' ಬಳಿ ವೇದಾಧ್ಯಯನ ನಡೆಸಿದರು. ಗುರುಗಳ ಆಸೆಯಂತೆ ವೇದ, ಉಪನಿಷತ್ ಮತ್ತು ಭಗವದ್ಗೀತೆಗಳಿಗೆ ಭಾಷ್ಯ ರಚಿಸಿದರು. ಹಿಂದೂ ಅಂಧಾಚರಣೆ ಖಂಡಿಸುತ್ತಾ ನೇಪಾಳದಿಂದ ರಾಮೇಶ್ವರಂವರೆಗೂ ಕಾಲ್ನಡಿಗೆಯಲ್ಲಿ ಸಂಚರಿಸಿದರು. ಈ ಸಮಯದಲ್ಲಿ ಅನೇಕ ಜೈನ, ಬೌದ್ದ, ಕಪಾಲಿ, ಧರ್ಮಗುರುಗಳನ್ನು ವಾದದಲ್ಲಿ ಸೋಲಿಸಿದರು. ಇವರು ತಮ್ಮ ವೇದಾಂತ ಪ್ರಚಾರಕ್ಕೆ 4 ಮಠ ಸ್ಥಾಪಿಸಿದರು.

1) ಉತ್ತರ ಪ್ರದೇಶದ ಬದರಿಯ ಜ್ಯೋತಿರ್ ಮಠ.

2) ಗುಜರಾತಿನ ದ್ವಾರಕಾ ಕಾಳಿಕಾ ಮಠ.

3) ಒರಿಸ್ಸಾದ ಪುರಿ 'ಗೋವರ್ಧನ ಮಠ'.

4) ಕರ್ನಾಟಕದ ಶೃಂಗೇರಿಯ 'ಶಾರದಾ ಮಠ.'

ಇದಲ್ಲದೇ ಕಂಚಿಯ ಕಾಮಕೋಟಿ ಪೀಠ, ಗೋಕರ್ಣ ಶ್ರೀಶೈಲದಲ್ಲೂ ಮಠಗಳನ್ನು ಸ್ಥಾಪಿಸಿದರು.

ಒಂದೇ ದೇವರಮೂರ್ತಿ ಮತ್ತು ಕಲ್ಪನೆಯ ಆರಾಧನೆಯ ಬಗ್ಗೆ ಶಂಕರರು ಆಗ್ರಹ ತೋರಲಿಲ್ಲ. ಶಿವ, ವಿಷ್ಣು, ಗಣೇಶ, ಕುಮಾರ, ಸೂರ್ಯ, ಶಕ್ತಿ ಈ ಆರು ದೇವತೆಗಳ ಸಾಮೂಹಿಕ ಆರಾಧನೆಗೆ ಮಹತ್ವ ನೀಡಿದ್ದರಿಂದ 'ಷಣ್ಮತಸ್ಥಾಪನಾಚಾರ್ಯ' ಎಂದು ಬಿರುದು ಪಡೆದರು. ಅದ್ವೈತ ಸಿದ್ಧಾಂತವು 4 ಪ್ರಮುಖವಾದ ಅಂಶಗಳನ್ನು ಹೊಂದಿದ್ದು,

1) ಬ್ರಹ್ಮ (ಈಶ್ವರ) ಒಬ್ಬನೇ ಸತ್ಯ.

2) ಜಗತ್ತು ಸುಳ್ಳು ಅಥವಾ ಮಾಯೆ.

3) ಆತ್ಮವು ಬ್ರಹ್ಮನ ಅಧೀನ.

4) ಜೀವಾತ್ಮ ಮತ್ತು ಬ್ರಹ್ಮ ಎರಡೂ ಒಂದೇ.

ಬೌದ್ಧರ ಮಾಯಾವಾದದ ಕಲ್ಪನೆಯನ್ನು ಶಂಕರರು ತಮ್ಮ ಈ ತಾತ್ವಿಕವಾದ ಪ್ರತಿಪಾದನೆಗೆ ಬಳಸಿಕೊಂಡರು. ಇದರಿಂದ ಶಂಕರರು 'ಪಚ್ಚನ್ನ ಬುದ್ಧ'ರೆಂಬ ಟೀಕೆಗೂ ಒಳಗಾದರು.

ಒಟ್ಟಾರೆ ಬ್ರಹ್ಮನೇ ಸತ್ಯ. ಇದು ಯಾವುದೇ ರೂಪ, ಆಕಾರ ವಿಶೇಷಣೆಗೆ ಒಳಪಡದು. ಹಾಗಾಗಿ ಶಂಕರರು 'ಅಹಂ ಬ್ರಹ್ಮಾಸ್ಮಿ (ನಾನೇ ಬ್ರಹ್ಮ) ಎಂದು ಪ್ರತಿಪಾದಿಸಿದರು. ಇವರು ಭಕ್ತಿ ಮತ್ತು ಜ್ಞಾನ 2 ಮಾರ್ಗಗಳನ್ನು ಅನುಸರಿಸಿದರು. ಜ್ಞಾನಮಾರ್ಗಕ್ಕೆ ಹೆಚ್ಚು ಒತ್ತು ನೀಡಿದರು.

ಇವರ ಕೃತಿಗಳು: ಬ್ರಹ್ಮಸೂತ್ರ, ಉಪನಿಷತ್, ಭಗವದ್ಗೀತೆ–ಭಾಷ್ಯ ಬರೆದರು. ಆನಂದ ಲಹರಿ, ಸೌಂದರ್ಯ ಲಹರಿ, ವೇದಾಂತ ಸಾರ, ಗೀತಾ ಭಾಷ್ಯ, ಭಜಗೋವಿಂದಂ – ಗೀತೆ.

ಇವರನ್ನು ವೈದಿಕ ತತ್ವಚಿಂತನಾ ಪಿತಾಮಹ ಎನ್ನುವರು.

### ಶ್ರೀ ರಾಮಾನುಜಾಚಾರ್ಯ (1017–1137):

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರಾದ ರಾಮಾನುಜಾಚಾರ್ಯರು, ಮದ್ರಾಸಿನ ಪೆರಂಬದೂರಿನಲ್ಲಿ 1017ರಲ್ಲಿ ಜನಿಸಿದರು. ಇವರು ಯಾದವ ಪ್ರಕಾಶರಿಂದ ವೇದ ಉಪನಿಷತ್ತು ಅಧ್ಯಯನ ಮಾಡಿದರು. ನಂತರ ತನ್ನ ಗುರುಗಳೊಂದಿಗೆ ತಾತ್ವಿಕ ಭಿನ್ನಾಭಿಪ್ರಾಯ ಹೊಂದಿ ಅಲ್ಲಿಂದ ಹೊರಬಂದರು. ಮುಂದೆ 'ಯಾಮುಸಾರ' ಸಾದ್ವಿಕತೆ ದೊರೆತು ಅಸವರಿಂದ 'ವೈಷ್ಣವ ದೀಕ್ಷೆ' ಪಡೆದರು. ನಂತರ ಯುಮುಸಾರ ಪಂಥದ ಪ್ರಚಾರ ಸಹಿಸದ ಚೋಳರಾಜನು ಶೈವನಾಗಿ ರಾಮಾನುಜ ಮತ್ತು ಅವರ ಶಿಷ್ಯರನ್ನು ಹಿಂಸಿಸಿದನು. ಈ ಕಿರುಕುಳ ಸಹಿಸಲಾರದೇ ಇವರು ಕರ್ನಾಟಕಕ್ಕೆ ಬಂದು ಹೊಯ್ಸಳ ದೊರೆ ವಿಷ್ಣುವರ್ಧನನ ಆಶ್ರಯ ಪಡೆದು ಮೇಲುಕೋಟೆಯಲ್ಲಿ ನೆಲೆಸಿದರು.

ಇವರು ಪ್ರತಿಪಾದಿಸಿದ ಧರ್ಮ ವಿಶಿಷ್ಟಾದ್ವೈತ. ಇದರಲ್ಲಿನ 3 ಅಂಶಗಳೆಂದರೆ,

1) ಈಶ್ವರ ಮತ್ತು ಬ್ರಹ್ಮ

2) ಚಿತ್ ಅಥವಾ ಜೀವಾತ್ಮ

3) ಅಚಿತ್ ಅಥವಾ ಅಚೇತನ ಜಗತ್ತು

ಇಲ್ಲಿ ಬ್ರಹ್ಮನು ಮಾತ್ರ ಸತ್ಯ, ಶಾಶ್ವತ, ಚಿತ್ ಮತ್ತು ಅಚಿತ್ ಅವನ ವಿಶೇಷಣಗಳೆಂದರು. ರಾಮಾನುಜರು ಶ್ರೀ ವೈಷ್ಣವ ಸಂತರ ಮತ್ತು ಆಳ್ವಾರ್ ಕೀರ್ತನೆಗಳನ್ನು ಗ್ರಹಿಸಿ ಅದನ್ನು 5ನೆಯ ವೇದವೆಂದರು. ಶಂಕರರನ್ನು 'ಪ್ರಚ್ಛನ್ನ ಬುದ್ಧ'ನೆಂದು ಟೀಕಿಸಿದರು.

ಸಾಕಾರ ಬ್ರಹ್ಮನ ಆರಾಧನೆ ಪ್ರತಿಪಾದಿಸಿದ ಇವರು ಭಕ್ತಿಮಾರ್ಗ ಪ್ರತಿಪಾದಿಸಿದರು. ಉಪನಿಷತ್, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳು ತಮ್ಮ ಬೋಧನೆಯ ತಳಹದಿ ಎಂದರು. 'ವಿಷ್ಣುವೇ ಪರದೈವವೆಂದು ಬೋಧಿಸಿದ ಅವರು ಲಕ್ಷ್ಮೀಯನ್ನು ವಿಷ್ಣುವಿನ ಜೊತೆ ಪೂಜಿಸಬೇಕೆಂದರು.

ಶಂಕರಾಚಾರ್ಯರ ಮಾಯಾವಾದವನ್ನು ಇವರು ಖಂಡಿಸಿದರು. ಮೇಲುಕೋಟೆಯಲ್ಲಿ ದೀರ್ಘಕಾಲ ವಾಸವಾಗಿದ್ದ ಇವರು 'ಚೆಲುವನಾರಾಯಣಸ್ವಾಮಿ'ಯನ್ನು ಪ್ರತಿಷ್ಠಾಪಿಸಿದರು. ಇವರ ಪ್ರಭಾವದಿಂದಲೇ ಹೊಯ್ಸಳರ ಕಾಲದಲ್ಲಿ ಅನೇಕ ವೈಷ್ಣವ ಮಂದಿರಗಳ ರಚನೆಯಾಯಿತು. ವೇದಾರ್ಥ ಸಂಗ್ರಹ, ವೇದಾಂತಸಾರ ಮತ್ತು ಭಗವದ್ಗೀತೆ ಕುರಿತು ಭಾಷ್ಯ ಬರೆದಿದ್ದಾರೆ. ಅನೇಕ ಹೊಯ್ಸಳ ರಾಜರು, ವಿಜಯನಗರದ ಸಾಳ್ವ, ತುಳುವ ಅರವೀಡು ಮನೆತನಗಳು, ಮೈಸೂರು ಒಡೆಯರು ಶ್ರೀ ವೈಷ್ಣವರೇ.

## 3) ಮಧ್ವಾಚಾರ್ಯ (1238–1317):

ನಾರಾಯಣ ಭಟ್ಟ ಮತ್ತು ವೇದಾವತಿ ದಂಪತಿಗಳಿಗೆ ಉಡುಪಿ ಬಳಿಯ ಪಾಜಕದಲ್ಲಿ ಮಧ್ವಾಚಾರ್ಯ 1238ರಲ್ಲಿ ಜನಿಸಿದರು. ದೇವರ ಧ್ಯಾನದಿಂದಾಗಿ ಜನಿಸಿದ ಇವರನ್ನು 'ವಾಯುವಿನ ಅವತಾರವೆಂದು ನಂಬಲಾಯಿತು.' ಇವರ ಗುರು ಅಚ್ಯುತಪ್ರೇಕ್ಷ.

ದ್ವೈತ ಧರ್ಮವನ್ನು ಪ್ರತಿಪಾದಿಸಿದ ಇವರು ಧರ್ಮ ಪ್ರಚಾರಕ್ಕೆಂದು ಬದರಿಯಿಂದ ರಾಮೇಶ್ವರದವರೆಗೆ 2 ಬಾರಿ ದೇಶ ಪರ್ಯಟನೆ ಮಾಡಿದ್ದರು. ಬದರಿ, ಕಾಶಿ, ಹರಿದ್ವಾರ, ಕಳಿಂಗ, ಶ್ರೀರಂಗಂ ಹೀಗೆ ಹಲವೆಡೆ ಸಂಚರಿಸಿ, ವಾದ ವಿವಾದದಲ್ಲಿ ಹಲವರನ್ನು ಸೋಲಿಸಿ ಶಿಷ್ಯರಾಗಿಸಿಕೊಂಡರು. ದ್ವಾರಕೆಯಿಂದ ಕೃಷ್ಣ ಮತ್ತು ಬಲರಾಮ ವಿಗ್ರಹವನ್ನು ಉಡುಪಿ ಮತ್ತು ಮಲ್ಪೆಯಲ್ಲಿ ಪ್ರತಿಷ್ಠಾಪಿಸಿದರು. ಉಡುಪಿಯಲ್ಲಿ ಅಷ್ಟ ಮಠ ಸ್ಥಾಪಿಸಿ ಅವುಗಳಿಗೆ ಅಷ್ಟ ಪ್ರೇಕ್ಷಕರನ್ನು ನೇಮಿಸಿದರು.

**ಇವರ ಸಿದ್ಧಾಂತದ ತತ್ವಗಳೆಂದರೆ,**

1) ವಿಷ್ಣು ಪೂಜೆಗೆ ಆದ್ಯತೆ ನೀಡಿ ಅವನೇ ಸರ್ವೋತ್ತಮ ಎಂದರು. ಶಿವ ಮತ್ತು ಇತರ ದೇವತೆಗಳು ವಿಷ್ಣುಗಿಂತ ಕೆಳಗಿನವರೆಂದರು.

2) ಶಂಕರರು ಜಗತ್ತು ಸುಳ್ಳು ಎಂದರೆ ಇವರು ಸತ್ಯ ಎಂದರು.

ಇವರು ಪಂಚಭೇದಗಳ ಕಲ್ಪನೆ ಮಂಡಿಸಿದರು.

1) ಪರಮಾತ್ಮ ಮತ್ತು ಜೀವಾತ್ಮ

2) ಪರಮಾತ್ಮ ಮತ್ತು ಜಡವಸ್ತು

3) ಜೀವಾತ್ಮ ಮತ್ತು ಜಡವಸ್ತು

4) ಜಡವಸ್ತು ಮತ್ತು ಜಡವಸ್ತು

5) ಜೀವಾತ್ಮ ಮತ್ತು ಜೀವಾತ್ಮ.

ಹೀಗೆ ಒಂದಕ್ಕೊಂದು ಭೇದ ಹೊಂದಿವೆ ಎಂದು ತೋರಿಸಿದರು. ಇವರೂ ಕೂಡ ರಾಮಾನುಜರಂತೆ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿದರು.

4 ಮದ್ವರ ಮತದಲ್ಲಿ 9 ನವರತ್ನಗಳನ್ನು ಹೇಳಿದರು.

ಮದ್ವರ 'ದ್ವೈತ' ಸಂಪ್ರದಾಯವು ತ್ರಿರತ್ನಗಳಿಗೆ ಒತ್ತು ನೀಡಿತು. (ಈಶ್ವರ, ಜೀವಾತ್ಮ, ಜಡಪ್ರಪಂಚ). ಇಲ್ಲಿ ಬ್ರಹ್ಮ ಮತ್ತು ಜೀವಾತ್ಮ ಬೇರೆ ಬೇರೆ ಎಂಬುದೇ ಇವರ ವಾದ.

ಇವರ ಈ ಧರ್ಮವು ಮುಂದೆ ವಿಜಯನಗರದ ಕಾಲದಲ್ಲಿ ದಾಸಕೂಟದ ಬೆಳವಣಿಗೆಗೆ ಕಾರಣವಾಯಿತು. ಪುರಂದರದಾಸ ಮತ್ತು ಕನಕದಾಸರು ತಮ್ಮ ಕೀರ್ತನೆಗಳಿಂದ ಮದ್ವ ತತ್ವಗಳನ್ನು ಪ್ರಚಾರ ಮಾಡಿದರು.

ಮುಂದೆ ಬಂಗಾಳದ ಚೈತನ್ಯರಿಗೆ ಮಧ್ವರ ತತ್ವಗಳು ಮಾದರಿಯಾದವು. ಇಂದಿನ ಕೃಷ್ಣಪ್ರಜ್ಞಾಪಂಥ (ಇಸ್ಕಾನ್) ಇದೇ ಚೈತನ್ಯದ ವಿಚಾರದಿಂದ ಪ್ರಭಾವಿತ. ಸಂಪೂರ್ಣವಾಗಿ ಮಾಯವಾದವನ್ನು ಖಂಡಿಸಿದ ಇವರು 'ದೈವ ಮತ್ತು ಆತ್ಮ' ಬೇರೆ ಬೇರೆ ಎಂದರು.

ಕರ್ನಾಟಕದಲ್ಲಿ ಜನಿಸಿ ಭಕ್ತಿ ಪಂಥವನ್ನು ಪೋಷಿಸಿ ಭಾರತದ ಆಧ್ಯಾತ್ಮಿಕ ಚರಿತ್ರೆಯಲ್ಲಿ ಧ್ರುವತಾರೆಯಾದರು.

## 4) ಬಸವಣ್ಣನವರು (1132–1168) : ವೀರಶೈವ ಚಳುವಳಿ

ಸಾಮಾಜಿಕ ಕ್ಷೇತ್ರದಲ್ಲಿ ಕ್ರಾಂತಿಕಾರಿ ವಿಚಾರಗಳನ್ನು ಮುಂದಿಟ್ಟ ಬಸವಣ್ಣನವರು ಕ್ರಿ.ಶ.1132ರಲ್ಲಿ ಬಿಜಾಪುರ ಜಿಲ್ಲೆಯ ಬಾಗೇವಾಡಿ ಎಂಬಲ್ಲಿ ಜನಿಸಿದರು. ಐತಿಹ್ಯಗಳ ಪ್ರಕಾರ ಕೇವಲ 36 ವರ್ಷ ಬದುಕಿದ ಇವರು ವೀರಶೈವ ಧರ್ಮಕ್ಕೆ ತಮ್ಮದೇ ಆದ ಕೊಡುಗೆ ನೀಡಿದರು.

16ನೇ ವಯಸ್ಸಿನಲ್ಲಿ ಯಜ್ಞೋಪವೀತವನ್ನು ಕಿತ್ತೆಸೆದ ಇವರು ಕೂಡಲಸಂಗಮಕ್ಕೆ ತೆರಳಿ ಶೈವ ಗುರು 'ಈಶಾನ್ಯ ಗುರು (ಜಾತವೇದಮುನಿ)' ಬಳಿ ದೀಕ್ಷೆ ಪಡೆದರು. ಮುಂದೆ ಮಂಗಳವಾಡದ ಮಾಂಡಲಿಕ ಕಲಚೂರಿ ಬಿಜ್ಜಳನ ಆಸ್ಥಾನದಲ್ಲಿ ಕರಣಿಕರಾದರು. ಮುಂದೆ ಬಿಜ್ಜಳನ ಭಂಡಾರದ ಅಧಿಕಾರಿಯಾಗಿ ನೇಮಕಗೊಂಡರು.

ಬಸವೇಶ್ವರರು ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ರಂಗಗಳಲ್ಲಿ ವೈಚಾರಿಕ ಕ್ರಾಂತಿಯನ್ನುಂಟು ಮಾಡಿದ್ದರು. ಸಮಾಜದಲ್ಲಿ ರೂಢಿಯಲ್ಲಿದ್ದ ಜಾತಿ ಪದ್ದತಿ, ಅಸ್ಪೃಶ್ಯತೆ, ಮೂಢನಂಬಿಕೆ, ಬಹುದೇವತಾರಾಧನೆ, ಮೂರ್ತಿಪೂಜೆ, ಅಂಧಸಂಪ್ರದಾಯ, ಪ್ರಾಣಿಬಲಿಗಳ 'ರುದ್ದ ಬಿರುಗಳಿ ಎಬ್ಬಿಸಿ ಅವುಗಳ ರುದ್ದ ಹೋರಾಡುವ ಪಣ ತೊಟ್ಟರು'. ಜಾತಿಪದ್ದತಿಗೆ ಧರ್ಮಶಾಸ್ತ್ರಗಳ ಆಧಾರವಿಲ್ಲವೆಂದು ಸ್ಪಷ್ಟಪಡಿಸಿದರು. ಸಹಭೋಜನಕ್ಕೆ, ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಪ್ರಾಣಿ ಬಲಿಯನ್ನು ಖಂಡಿಸಿ 'ದಯವೇ ಧರ್ಮದ ಮೂಲ' ಎನ್ನುತ್ತಿದ್ದರು. ಇವರ ಪ್ರಮುಖ ಐತಿಹ್ಯವೆಂದರೆ,

### ಅನುಭವ ಮಂಟಪ ಸ್ಥಾಪನೆ:

ಬಿಜ್ಜಳನು ಸ್ವತಂತ್ರ ರಾಜನಾಗಿ ರಾಜಧಾನಿಯನ್ನು ಕಲ್ಯಾಣಕ್ಕೆ ವರ್ಗಾವಣೆ ಮಾಡಿದಾಗ ಬಸವಣ್ಣನವರು ತಮ್ಮ ವೀರಶೈವ ಧರ್ಮದ ಪ್ರಚಾರಕ್ಕಾಗಿ ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿದರು. ಇದೊಂದು ವಚನ ಮಂಟಪವಾಗಿದ್ದು ಇಲ್ಲಿ ಧಾರ್ಮಿಕ ಗೋಷ್ಠಿಗಳು ನಡೆಯುತ್ತಿದ್ದವು. ಇಲ್ಲಿ ಅನೇಕ ಶಿವಶರಣ ಶರಣೆಯರು ಸೇರಿ ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಜಾತಿ, ಲಿಂಗ, ಭೇದವಿಲ್ಲದೆ ಸೇರಬಹುದಿತ್ತು. ವೀರಶೈವ ಧರ್ಮದ ಸರಳ ತತ್ವವನ್ನು ಮತ್ತು ಧರ್ಮದ ಬಗ್ಗೆ ಜನರಿಗೆ ತಿಳಿಸುವುದೇ ಇದರ ಉದ್ದೇಶವಾಗಿತ್ತು. (ಅಲ್ಲಮಪ್ರಭು, ಅಕ್ಕಮಹಾದೇವಿ, ಲಕ್ಕಮ್ಮ) ಬಸವಣ್ಣನವರ ಸಾಮಾಜಿಕ ಕ್ರಾಂತಿ ಬಲವಾದಂತೆ ದಲಿತರಲ್ಲಿ ಪ್ರಬಲತೆಯ ಮನೋಭಾವ ಮಾಡಲು ಶುರುವಾಯಿತು. ಇದು ಮೇಲ್ವರ್ಗದವರ ಕೆಂಗಣ್ಣಿಗೆ ಗುರಿಯಾಗಿ, ನಂತರ ಮನನೊಂದ ಬಸವಣ್ಣನವರು ಕಲ್ಯಾಣ ತೊರೆದರು. ನಂತರ ಇವರು ಕ್ರಿ.ಶ.1167–68ರಲ್ಲಿ ಕೂಡಲಸಂಗಮದಲ್ಲಿ ಐಕ್ಯವಾದರೆಂದು ಇತಿಹಾಸವಿದೆ.

### ಇವರು ಪ್ರತಿಪಾದಿಸಿದ ಧರ್ಮವೇ ವೀರಶೈವ ಧರ್ಮ:

ಬಸವಣ್ಣನವರು ಶಿವನಲ್ಲದೇ ಅನ್ಯ ದೈವಕ್ಕೆ ಮಣಿಯಬಾರದೆಂಬ ತೀವ್ರ ಶಿವಭಕ್ತಿಯನ್ನು ಬೋಧಿಸಿದರು. ಇದರಿಂದ ಇವರ ಪಂಥ 'ವೀರಶೈವ' ಎನಿಸಿತು. ಹಾಗೂ ಶಕ್ತಿವಿಶಿಷ್ಟಾದ್ವೈತ ಎನಿಸಿತು. ಮೂಲತ: ಈ ಧರ್ಮ ಶಿವಣಾರಾಧ್ಯ, ಮರುಳಾರಾಧ್ಯ, ಏಕೋರಾಮ, ಪಂಚಿತಾರಾಧ್ಯ, ಮತ್ತು ವಿಶ್ವೇಶ್ವಾರಾಧ್ಯ ಎಂಬ ಪಂಚಾಚಾರ್ಯರಿಂದ ಸ್ಥಾಪಿತವಾಗಿತ್ತು. ಬಸವಣ್ಣನವರು ಇದಕ್ಕೆ ತಾತ್ವಿಕ ವಿರೋಧ ನೀಡಿದರು. ಜಾತಿ, ಲಿಂಗ ಭೇದವಿಲ್ಲದೇ ಎಲ್ಲರೂ ಶಿವಲಿಂಗ ಧರಿಸಬಹುದು. ಲಿಂಗ ಧರಿಸುವುದರಿಂದ ಇದನ್ನು 'ಲಿಂಗಾಯಿತ ಧರ್ಮ' ಎಂದೂ ಕರೆಯುವರು. ಇವರು ಪೂರ್ಣ ಸಸ್ಯಹಾರಿಗಳು. ಇವರ ತತ್ವಗಳೆಂದರೆ,

**1) ಏಕೀಶ್ವರತೆ:**

ಶಿವನ ಪೂಜೆಗೆ ಮಾತ್ರ ಅವಕಾಶ. ಶಿವನ ಆರಾಧನೆಯಲ್ಲಿ ಲಿಂಗ ಮತ್ತು ಅಂಗ ಎಂಬ 2 ಭಾಗಗಳಿದ್ದು ಅಂಗ (ಜೀವಾತ್ಮ) ಲಿಂಗೈಕ್ಯವಾಗುವುದೇ ಮೋಕ್ಷ.

**2) ಅಷ್ಟಾವರಣ ಪಾಲನೆ:**

ಅಂಗವು ಲಿಂಗದಲ್ಲಿ ಐಕ್ಯವಾಗಲು 8 ತತ್ವಗಳನ್ನು ಪಾಲಿಸಬೇಕು. 1. ಲಿಂಗಪೂಜೆ 2. ಗುರುವಿಗೆ ವಿಧೇಯ 3. ಜಂಗಮರಿಗೆ ಗೌರವ 4. ಹಣೆಗೆ ವಿಭೂತಿ 5. ರುದ್ರಾಕ್ಷಿ ಮಾಲೆ 6. ಪ್ರಸಾದ ಪಡೆಯುವುದು 7. ದೇವರಿಗೆ ನೈವೇದ್ಯ 8. ಪಂಚಾಕ್ಷರಿ ಮಂತ್ರ 'ಓಂ ನಮ: ಶಿವಾಯ' ಉಚ್ಚಾರಣೆ.

**3) ಪಂಚಾಚಾರಗಳ ಪಾಲನೆ:**

1. ಲಿಂಗಾಚಾರ 2. ಶಿವಾಚಾರ 3. ಸದಾಚಾರ 4. ಬೃತ್ಯಾಚಾರ 5. ಗಣಾಚಾರ.

**4) ಭಕ್ತಿ ಮಾರ್ಗದ ಪ್ರತಿಪಾದನೆ:**

ಭಕ್ತಿ ಭಂಡಾರಿ ಬಸವಣ್ಣ.

**5) ಮೂರ್ತಿಪೂಜೆಗೆ ವಿರೋಧ:**

ಎನ್ನಕಾಲೆ ಕಂಬ, ದೇಹವೇ ದೇಗುಲ, ಶಿರವೇ ಕಳಶವಯ್ಯ.

**6) ಕಾಯಕವೇ ಕೈಲಾಸ:**

ದುಡಿಯದೇ ಅನ್ನ ತಿನ್ನುವ ಹಕ್ಕಿಲ್ಲ.

**7) ಸದಾಚಾರಕ್ಕೆ ಮಾನ್ಯತೆ:**

ಆಚಾರವೇ ಸ್ವರ್ಗ ಅನಾಚಾರವೇ ನರಕ.

**8) ಮೂಢನಂಬಿಕೆಗೆ ವಿರೋಧ:**

ಸದ್ಗುಣ ಸಾರುವ ಸುಮಾರು 7000 ವಚನ ಬರೆದು, ವಚನ ಸಾಹಿತ್ಯ ಶ್ರೀಮಂತಗೊಳಿಸಿದರು. (ಇವರನ್ನು ಕರ್ನಾಟಕದ ಮಾರ್ಟಿನ್ ಲೂಥರ್ ಎನ್ನಲಾಗುತ್ತದೆ). ಹೀಗೆ ವೀರಶೈವ ಧರ್ಮ ಬಸವಣ್ಣನವರಿಂದ ಶ್ರೀಮಂತವಾಯಿತು.

**ವಚನ ಚಳುವಳಿ:**

ವಚನ ಎಂದರೆ ನುಡಿಗಳು. ಅನುಭವದ ಮಾತುಗಳು ಎಂದರ್ಥ. ವಚನಗಳಲ್ಲಿ ನೀತಿ, ಧರ್ಮ, ಆಧ್ಯಾತ್ಮ, ಸಾಮಾಜಿಕ ಕಳಕಳಿ, ಭಕ್ತಿ, ಮೊದಲಾದ ಮಾನವೀಯ ಮೌಲ್ಯ ಪ್ರತಿಪಾದಿಸಲಾಗಿದೆ. ಇವು ಗದ್ಯ ಮತ್ತು ಪದ್ಯ ಮಿಶ್ರಿತವಾದವುಗಳಿವೆ.

1) ಆಧ್ಯಾತ್ಮಕ ಅನುಭವ

2) ಲೌಕಿಕ ಅನುಭವ

3) ಸಹಜ ಸ್ಫೂರ್ತಿಯಿಂದ ಕೂಡಿರುವುದು

4) ಶಿವಲಿಂಗಾರ್ಚನೆಗೆ ಪ್ರಾಧಾನ್ಯತೆ

5) ಕಾಯಕ ತತ್ವದ ಪ್ರತಿಪಾದನೆ

6) ಜಾತಿ ಪದ್ಧತಿ ಖಂಡನೆ

7) ದೇಶಿ ಭಾಷೆ ಪ್ರಯೋಗ

**ಪ್ರಾರಂಭ:**

ಜೇಡರ ದಾಸಿಮಯ್ಯರೊಂದಿಗೆ 11ನೇ ಶತಮಾನದಿಂದ ವಚನ ಸಾಹಿತ್ಯವು ಆರಂಭವಾಯಿತು. ನಂತರ 12ನೇ ಶತಮಾನದಲ್ಲಿ ಇದು ಪ್ರವರ್ಧಮಾನಕ್ಕೆ ಬಂತು. ಇದನ್ನು ತೊಟ್ಟಿಲನೋಪಾದಿಯಲ್ಲಿ ಪೋಷಿಸಿ ಬೆಳೆಸಿದುದು ಅನುಭವ ಮಂಟಪ. ಈ ಅನುಭವ ಮಂಟಪದಲ್ಲಿ ಯಾವ ಭಿನ್ನ ಭೇದವಿಲ್ಲದೆ, ಉನ್ನತ ಕುಲದವರೆನ್ನದೇ ಕೀಳು ಜಾತಿಯವರೂ ಕೂಡ ಶಿವ ಶರಣರಾಗಿ ಭಾಗವಹಿಸಿದ್ದದ್ದು ಇಡೀ ಭಾರತದಲ್ಲಿ ಪ್ರಥಮ ಸಂಗತಿಯಾಗಿದೆ.

ಅನುಭವ ಮಂಟಪದಲ್ಲಿ ಅಲ್ಲಮ, ಬಸವಣ್ಣ, ಅಕ್ಕಮಹಾದೇವಿ, ನೀಲಾಂಬಿಕೆ, ಮಾದಾರ ಚನ್ನಯ್ಯ ಮುಂತಾದವರಿದ್ದರು.

ಇಲ್ಲಿ ರಚಿತವಾದ ವಚನಗಳನ್ನು ಸಕಲೇಶ ಮಾದರಸ ಸಂಗ್ರಹಿಸಿದನು. ಆದ್ದರಿಂದ ಇವನನ್ನು ವಚನ ಸಾಹಿತ್ಯ ಸಂಗ್ರಹಕಾರನೆನ್ನಲಾಗಿದೆ.

ಪ್ರಮುಖ ವಚನಕಾರರನ್ನು ನೋಡುವುದಾದರೆ,

1) ಜೇಡರ ದಾಸಿಮಯ್ಯ (1020): ಕಲ್ಯಾಣ ಇವರನ್ನು ವಚನ ಸಾಹಿತ್ಯದ ಪಿತಾಮಹನೆಂದು ಕರೆಯಲಾಗುತ್ತದೆ. ಕಲ್ಯಾಣಿ ಚಾಳುಕ್ಯರ ಆಸ್ಥಾನದಲ್ಲಿದ್ದನು. (150 ವಚನಗಳು ದೊರೆತಿವೆ). ಅಂಕಿತನಾಮ – ರಾಮನಾಥ.

2) ಶಂಕರ ದಾಸಿಮಯ್ಯ.

3) ಸಕಲೇಶ ಮಾದರಸ – ಕಲ್ಯಾಣ.

4) ಅಲ್ಲಮ ಪ್ರಭು: 1145–ಬಳ್ಳಿಗಾವೆ ಮತ್ತು ಕಲ್ಯಾಣ: ಬಳ್ಳಿಗಾವಿಯಲ್ಲಿ ಜನಿಸಿದ ಇವರು ದೇವಾಲಯದಲ್ಲಿ ಮದ್ದಳೆ ಕಾಯಕವನ್ನು ಮಾಡುತ್ತಿದ್ದರು. ನಂತರದಲ್ಲಿ ಮಹಾಯೋಗಿಯೂ, ಜ್ಞಾನಿಯೂ ಆಗಿ ಅನುಭವ ಮಂಟಪದ ಶೂನ್ಯ ಸಿಂಹಾಸನ ಪೀಠವನ್ನು ಅಲಂಕರಿಸಿದರು. ಇವರ ವಚನವನ್ನು 'ಬೆಡಗಿನ ವಚನ' ಎಂದು ಕರೆಯುತ್ತಾರೆ. ಇವರ ಅಂಕಿತ ನಾಮ – ಗುಹೇಶ್ವರ.

5) ಬಸವೇಶ್ವರರು: 1160–ಬಾಗೇವಾಡಿ, ಕಲ್ಯಾಣ ಕೂಡಲಸಂಗಮ: ಇವರು ರಚಿಸಿದ ವಚನಗಳನ್ನು ಕನ್ನಡ ಉಪನಿಷತ್ತುಗಳೆಂದು ಕರೆಯಲಾಗಿದೆ. ಸಿದ್ದಯ್ಯ ಪುರಾಣಿಕ್‌ರವರ ಪ್ರಕಾರ ವಚನ ಸಾಹಿತ್ಯ ಇವರ ಕಾಲದಲ್ಲಿ 'ನೆರೆ ಬಂದ ತೊರೆಯಂತೆ ಉಕ್ಕಿ ಹರಿಯಿತು'.

ಇವರ ವಚನ ಸಾಮಾನ್ಯ ಭಾಷೆಯಲ್ಲಿದ್ದು ಸತ್ಯ, ಸದಾಚಾರ, ವೈಚಾರಿಕತೆ ಮೌಢ್ಯಗಳ ಖಂಡನೆ ಇತ್ತು. ಉದಾ: ದೇವಲೋಕ, ಮರ್ತ್ಯಲೋಕ, ಎಂಬುದು ಬೇರಿಲ್ಲ ಕಾಣಿರೋ.

ಸತ್ಯ ನುಡಿದರೆ ದೇವಲೋಕ, ಮಿಥ್ಯವ ನುಡಿದರೆ ಮರ್ತ್ಯಲೋಕ.

ಆಚಾರವೇ ಸ್ವರ್ಗ ಅನಾಚಾರವೇ ನರಕ.

ವೇದ ಮತ್ತು ಶಾಸ್ತ್ರಗಳನ್ನು ಬಲವಾಗಿ ಟೀಕಿಸಿದ್ದಾರೆ. ಇವರ ವಚನದಲ್ಲಿ ಧರ್ಮ ಮತ್ತು ಕಾವ್ಯಧರ್ಮಗಳು ಸಮರಸವಾಗಿ ಬೆರೆತು ಹೃದಯಕ್ಕೆ ಆನಂದವನ್ನು ಮತ್ತು ಆತ್ಮಕ್ಕೆ ಶ್ರೇಯಸ್ಸನ್ನು ತಂದು ಕೊಡುತ್ತವೆ.

* ನುಡಿದರೆ ಮುತ್ತಿನ ಹಾರದಂತಿರಬೇಕು.
* ಉಳ್ಳವರು ಶಿವಾಲಯ ಮಾಡುವರು.
* ಲೋಕದ ಡೊಂಕ ನೀವೇಕೆ ತಿದ್ದುವಿರಿ.

ಹೀಗೆ ವಚನಗಳ ಮೂಲಕವೇ ಸಾಮಾಜಿಕ ಕಳಕಳಿ ವ್ಯಕ್ತಪಡಿಸಿದ್ದಾರೆ.

## 6) ಅಕ್ಕಮಹಾದೇವಿ (1160) ಉಡುತಡಿ, ಕಲ್ಯಾಣ ಶ್ರೀಶೈಲ:

ಅಕ್ಕಮಹಾದೇವಿ ಮಧ್ಯಯುಗದ ವಚನಕಾರ್ತಿಯರಲ್ಲಿ ಪ್ರಥಮಳಾಗಿದ್ದಾಳೆ. ಶಿವಮೊಗ್ಗ ಜಿಲ್ಲೆಯ ಉಡುತಡಿ ಜನ್ಮಸ್ಥಳ. ಬಾಲ್ಯದಿಂದಲೇ ವೈರಾಗ್ಯವನ್ನು ಬೆಳೆಸಿಕೊಂಡು ಮಹಾದೇವಿ 'ಶ್ರೀಶೈಲ ಮಲ್ಲಿಕಾರ್ಜುನ ದೇವರೇ' ತನ್ನ ಪತಿ ಎಂದು ಭಾವಿಸಿದ್ದಳು. ಭಾವನೆ 'ಅಂಗ ಸತಿ ಲಿಂಗ ಪತಿ' ಎಂಬ ವೀರಶೈವ ಸಿದ್ಧಾಂತಕ್ಕೆ ಅನುಗುಣವಾಗಿತ್ತು.

ನಂತರ ಇಷ್ಟಪತಿ ಶ್ರೀಶೈಲ ಮಲ್ಲಿಕಾರ್ಜುನನ ಸನ್ನಿಧಿ ಸೇರಲು ಹೊರಟು ಮಾರ್ಗದಲ್ಲಿ ಅನುಭವ ಮಂಟಪದ ಗೋಷ್ಠಿಗಳಲ್ಲಿ ಭಾಗವಹಿಸಿ 'ಅಕ್ಕ'ನೆಂದೇ ಪ್ರಸಿದ್ದ ಪಡೆದು ನಂತರ ಶ್ರೀಶೈಲದ ಚೆನ್ನಮಲ್ಲಿಕಾರ್ಜುನ ಲಿಂಗದಲ್ಲಿ ಐಕ್ಯಳಾದಳೆಂಬ ಪ್ರತೀತ ಇದೆ.

ಒಟ್ಟು 434 ವಚನಗಳು ಇಲಲಿಯವರೆಗೆ ಲಭ್ಯವಿದೆ. ಇವುಗಳ ಜೊತೆಗೆ 'ಯೋಗಾಂಗ ತ್ರಿವಿದಿ' ಎಂಬ ಕೃತಿ ರಚಿಸಿದ್ದಾಳೆ. ಇದರಲ್ಲಿ 67 ತ್ರಿಪದಿಗಳಿವೆ. ಇವರ ವಚನಗಳಲ್ಲಿ ಪ್ರಧಾನವಾಗಿ 'ವೈರಾಗ್ಯವು' ಕಂಡುಬರುತ್ತದೆ. ಸಾಮಾಜಿಕ ಕಳಕಳಿ ಅಥವಾ ಸಮಾನತೆ ವಿಚಾರ ಕಂಡು ಬರುವುದಿಲ್ಲ.

ಬೆಟ್ಟದ ಮೇಲೊಮದು ಮನೆಯ ಮಾಡಿ,

ಮೃಗಗಳಿಗಂಜಿದಡೆಂತಯ್ಯಾ'

ಇವರ ವಚನದಲ್ಲಿ ವೈರಾಗ್ಯ ಹೆಚ್ಚಾಗಿದ್ದು 'ಕರ್ನಾಟಕದ ವೈರಾಗ್ಯ ಶಿಖಾಮಣಿ' ಎನಿಸಿದ್ದಾರೆ.

ಇನ್ನಿತರ ಪ್ರಮುಖ ವಚನಕಾರರೆಂದರೆ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ, ಮಾದಾರ ಚನ್ನಯ್ಯ, ಗಾಣದ ಕನ್ನಪ್ಪ, ಮಾದಾರ ಕಾಳವ್ವ, ಸೂಳೆ ಕಾಯಕದ ಸಂಕವ್ವ, ಮದ್ದಳೆಯ ಅಲ್ಲಮಪ್ರಭು ಮುಂತಾದವರು.

ಹೀಗೆ ವಚನ ಸಾಹಿತ್ಯವು 11ನೇ ಶತಮಾನದಿಂದ ಪ್ರಾರಂಭವಾಗಿ ತನ್ನದೇ ಆದ ಛಾಪನ್ನು ಮೂಡಿಸಿದೆ.

### ಹರಿದಾಸ ಚಳುವಳಿ:

ಭಗವಂತನಾದ ಹರಿಯ (ವಿಷ್ಣು) ದಾಸರಾಗಿದ್ದುಕೊಂಡು, ಆತನೇ ಪರದೈವವೆಂದು ತಿಳಿದು ಅವನ ಸ್ಮರಣೆಯೇ ತನ್ನ ಮುಕ್ತಿಗೆ ಸಾಧನವೆಂದು ಪರಿಗಣಿಸಿ ನಡೆದುಕೊಳ್ಳುವವರನ್ನು 'ಹರಿದಾಸ'ರೆಂದು ಕರೆಯಲಾಗಿದೆ.

ಹರಿದಾಸರ ಕೀರ್ತನೆಗಳು ಕನ್ನಡ ಸಾಹಿತ್ಯಾಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡಿ 'ಕರ್ನಾಟಕ ಸಂಗೀತ ಪ್ರಗತಿ'ಗೂ ನಾಂದಿಯಾಗಿವೆ.

**ಹರಿದಾಸ ಚಳುವಳಿಯ ಸಾರ:**

ಮುಕ್ತಿಗೆ ಭಗವಂತನ ಅನುಗ್ರಹ ಅತ್ಯವಶ್ಯ. ಅದನ್ನು ಸರಳ ಸುಲಭ ಮಾರ್ಗವಾದ ಅನನ್ಯ ಭಕ್ತಿಯ ಮೂಲಕ ಪಡೆಯಬೇಕೆಂಬುದೇ ಸಾರ. ಹರಿದಾಸ ಚಳುವಳಿಯ 2 ಕೂಟಗಳೆಂದರೆ,

1) ವ್ಯಾಸ ಕೂಟ

2) ದಾಸ ಕೂಟ.

## 1) ವ್ಯಾಸ ಕೂಟ:

ವ್ಯಾಸಕೂಟಕ್ಕೆ ಸೇರಿದವರು, 'ಮಾಧ್ವ ಮಠಗಳ ಗುರು ಪರಂಪರೆಗೆ ಸೇರಿದವರು.' ಇಲ್ಲಿ ನರಹರಿ ತೀರ್ಥರು, ವ್ಯಾಸರಾಯರು, ವಾದಿರಾಜರು, ಶ್ರೀಪಾದಾರಾಯರು, ಪ್ರಮುಖರು.

**ನರಹರಿತೀರ್ಥ:**

ವ್ಯಾಸಕೂಟ ಪ್ರವರ್ತಕರಲ್ಲಿ ಮೊದಲಿಗರು. ಮಧ್ವಾಚಾರ್ಯರಿಂದ ದೀಕ್ಷೆ ಪಡೆದು ಅವರಿಗೆ ರಾಮ

ಸೀತೆ ವಿಗ್ರಹ ನೀಡಿದರು. ಒರಿಸ್ಸಾ ಮೂಲದವರಾದ ಇವರು ಉಡುಪಿಯಲ್ಲಿ ನೆಲೆಸಿ ಕನ್ನಡ ಕಲಿತು ಕೀರ್ತನೆ ರಚಿಸಿದರು. ಇವರ ಅಂಕಿತ ನಾಮ 'ಶ್ರೀ ರಘುಪತಿ'.

**ಶ್ರೀ ಪಾದರಾಯರು: (ರಂಗವಿಠಲ)**

ಬೆಂಗಳೂರಿನವರು. ಇವರು ಭ್ರಮರ ಗೀತೆ, ವೇಣು ಗೀತೆ, ಗೋಪಗೀತೆ ಮೊದಲಾದ 82 ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿದ್ದಾರೆ. ಇವರು ತಾಳಪ್ರಧಾನವಾದ ಮೂರು ಸುಳಾದಿ (ಪದಗಳು), ರಾಗಪ್ರಧಾನವಾದ ಉಗಾ–ಭೋಗಗಳೆಂಬ ಪದ ರಚಿಸಿದ್ದಾರೆ. ಸ್ವಾರ್ಥ ಅರ್ಚಕರನ್ನು ಹೊರದೂಡಿ ವಿಜಯನಗರ ಅರಸರಿಗೆ ನೆರವಾದರು.

**ಶ್ರೀ ವ್ಯಾಸರಾಯರು: (ಶ್ರೀ ಕೃಷ್ಣ – ಅಂಕಿತನಾಮ)**

ಮೈಸೂರಿನ ಬಳಿಯ ಸೋಸಲೆ ಇವರ ಹುಟ್ಟೂರು. ವೇದೋಪನಿಷತ್ತು, ತರ್ಕ, ವ್ಯಾಕರಣ, ಮೊದಲಾದ ಶಾಸ್ತ್ರದಲ್ಲಿ ಅಪಾರ ಪ್ರೌಢಿಮೆ ಗಳಿಸಿದ್ದರು. ಇವರು ವಿಜಯನಗರದ ಆಸ್ಥಾನದಲ್ಲಿದ್ದಾಗ ಕಳಿಂಗದೇಶದ ಬಸವಭಟ್ಟಚನೆಂಬ ಘನ ಪಂಡಿತನನ್ನು ಸೋಲಿಸಿದ್ದರು. ಮದನಪಲ್ಲಿ ಎಂಬಲ್ಲಿ ವಿಶಾಲ ಕೆರೆ ನಿರ್ಮಿಸಿದ್ದರು. ಇದನ್ನು 'ವ್ಯಾಸ ಸಮುದ್ರ' ಎಂದೇ ಕರೆಯಲಾಗಿದೆ. ಪುರಂದರದಾಸ ಮತ್ತು ಕನಕದಾಸರು ಇವರ ಶಿಷ್ಯರಾಗಿದ್ದರು.

**ವಾದಿರಾಜರು: (ಹಯವದನ – ಅಂಕಿತನಾಮ**

ಉಡುಪಿಯಲ್ಲಿ ಜನನ. ಇವರು ರುಕ್ಮಿಣಿ ವಿಜಯ, ಕೀಚಕವಧೆ ಮುಂತಾದ ಕನ್ನಡದ ಕೃತಿ ರಚಿಸಿದರು. ಉಡುಪಿಯ ಅಷ್ಟಮಠದ ಪರ್ಯಾಯ ಪದ್ಧತಿ 2 ವಾರದಿಂದ 2 ವರ್ಷಕ್ಕೆ ಬದಲಾವಣೆ. ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಯ ಶಿವಲಿಂಗವನ್ನು ಸ್ಥಾಪನೆ ಮಾಡಿದರು.

**ರಾಘವೇಂದ್ರರಾಯರು:**

ಕುಂಭಕೋಣಂನಲ್ಲಿ ಜನಿಸಿದ ಇವರು, ಮಹಾನ್ ಕವಿಯಿತ್ರಿ ರುಕ್ಮಿಣಿಬಾಯಿ ಅವರ ತಂದೆ, ಮಂತ್ರಾಲಯವನ್ನು ನಿರ್ಮಾಣ ಮಾಡಿದರು.

## 2) ದಾಸಕೂಟ:

ಹರಿದಾಸ ಚಳುವಳಿಯಲ್ಲಿ ಸಂತ ಕವಿಗಳು ಬಹುಮುಖ್ಯವಾದ ಪಾತ್ರವನ್ನು ವಹಿಸಿದ್ದರು. ಇವರು ಮಾದ್ವಮಠ ಅಧಿಪತಿಗಳಿಂದ ಹರಿದಾಸ ದೀಕ್ಷೆ ಪಡೆದರು. ಮಾಧ್ವಮಠ ಮತ್ತು ತತ್ವಗಳ ಪ್ರಮುಖರೆಂದರೆ, ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ವೈಕುಂಠದಾಸರು ಮತ್ತು ಪ್ರಸನ್ನವೆಂಕಟದಾಸರು. ಇವರಲ್ಲಿ ಕನಕದಾಸರು ಮಾತ್ರ ಶೂದ್ರ ವರ್ಗಕ್ಕೆ ಸೇರಿದವರಾಗಿದ್ದರು.

**ಪುರಂದರದಾಸರು:**

ಇವರು ಶಿವಮೊಗ್ಗ ಜಿಲ್ಲೆಯ ಪುರಂದರಗಢ ಗ್ರಾಮದವರು. ಮೂಲತ: ಶ್ರೀಮಂತ ಮನೆತನದವನಾದ ಈತ ನಾಸ್ತಿಕನಾಗಿದ್ದನು. ನಂತರ ಆಸ್ತಿಕನಾಗಿ ಬದಲಾಗಿ 'ಈಸಬೇಕು ಇದ್ದು ಜಯಿಸಬೇಕು. ಹೇಸಿಗೆ ಸಂಸಾರದಲ್ಲಿ ಆಸೆ ಇಲ್ಲದ ಹಾಗೆ' ಎಂದು ಕೀರ್ತನೆಯನ್ನು ಹಾಡುತ್ತಾ ನಗರದ ಬೀದಿಯಲ್ಲಿ ಹೊರಟರು. ನಂತರ ಹೆಂಡತಿಯೊಡನೆ ಬಂದು ವಿಜಯನಗರದಲ್ಲಿ ಕೃಷ್ಣದೇವರಾಯನ ಆಸ್ಥಾನದಲ್ಲಿ ನೆಲೆಸಿದರು. 'ವ್ಯಾಸರಾಯರಿಂದ ದೀಕ್ಷೆ ಪಡೆದು 'ಪುರಂದರದಾಸ' ಎಂಬ ನಾಮಧೇಯ ಪಡೆದು ದಾಸ ಪಂಥಕ್ಕೆ ಸೇರಿದರು.

ನಂತರ ಇವರು ಪಂಡರಿನಾಥ ತಲುಪಿ ವಿಠಲನ ಭಜನೆಯ್ಲಲಿ ತಲ್ಲೀನರಾಗಿ ಹಲವಾರು ಕೀರ್ತನೆ ರಚಿಸಿ ಹಾಡಿದರು. 475000 ಕೀರ್ತನೆ ರಚಿಸಿದ್ದಾರೆಂದು ಹೇಳಲಾಗಿದ್ದರು. 1ಸಾವಿರ ಮಾತ್ರ ನಮಗೆ ದೊರೆತಿವೆ. (ಪುರಂದರೋಪನಿಷತ್ ಎಂದು ವ್ಯಾಸರು ಕರೆದಿದ್ದಾರೆ). 'ದಾಸರೆಂದರೆ ಪುರಂದರದಾಸರಯ್ಯ' ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದ ಪ್ರಶಂಸೆ ಪಡೆದರು. (ನಾರದರ ಅವತಾರ ಎನ್ನಲಾಗುತ್ತಿದೆ.)

**ಕನಕದಾಸರು:**

ಧಾರವಾಡದ ಹಾವೇರಿ ಬಳಿಯ ಬಾಡ ಗ್ರಾಮದಲ್ಲಿ ಜನನ. ಮೂಲತ: ಕುರುಬರಾದ ಇವರು (ಶೈವ ಪಂಥಕ್ಕೆ ಸೇರಿದವರು). ಪಾಳೆಗಾರರ ಮಗನಾಗಿದ್ದ ಇವರಿಗೆ ಸಂಸ್ಕೃತ, ವೇದ ಪುರಾಣಗಳ ಅಧ್ಯಯನ ಲಭಿಸಿತ್ತು. ಅತೀವ ಭಕ್ತಿಭಾವವುಳ್ಳವನಾಗಿದ್ದ ಈತ ಒಮ್ಮೆ ಕನಸಿನಲ್ಲಿ ಕಂಡ ಆದಿಕೇಶವನ ಆದೇಶದಂತೆ ಊರಿನಲ್ಲಿ ಬಿದ್ದಿದ್ದ ಆದಿಕೇಶವನ ವಿಗ್ರಹವನ್ನು ಕಾಗಿನೆಲೆ ಎಂಬಲ್ಲಿ ಪ್ರತಿಷ್ಠಾಪಿಸಿದನು. ದೊರೆಯಾಗಿದ್ದವ ದಾಸನಾಗಿ ಬದಲಾದನು.

'ದೊರೆತನ ಬಿಡಿಸಿ ಸುಸ್ಥಿರಮಾರ್ಗ ತೋರಿಸಿದೆ,

ನರಮಾತ್ರದವನೆನದೆ, ಹರಿಯೆ'

ನಂತರ ತಿರುಪತಿಗೆ ಆಗಮಿಸಿದಾಗ 'ತಿರುಮಲ ತಾತಾಚಾರ್ಯ'ರಿಂದ ಹರಿದಾಸ ದೀಕ್ಷೆ ಪಡೆದರು. ಹೀಗೆ ಇವರ ಜೊತೆ ಅನೇಕ ಕುರುಬರು ವೈಷ್ಣವ ದೀಕ್ಷೆಯನ್ನು ಪಡೆದರು. ನಂತರ ಇವರು ವ್ಯಾಸರಾಯರ ಶಿಷ್ಯರಾಗಿ ಮುಂದುವರೆದರು.

ಕನಕನ ಕಿಂಡಿ ಇವರ ಭಕ್ತಿಯ ಪರಕಾಷ್ಠತೆಯನ್ನು ತೋರುತ್ತದೆ. ಇವರ ಕೀರ್ತನೆಗಳ ಅಂಕಿತ 'ಆದಿಕೇಶವ'.

ಇವರು ಕೀರ್ತನೆಗಳಲ್ಲದೇ ಮೋಹಿನಿತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ರಾಮಧ್ಯಾನ ಚರಿತೆ ಎಂಬ 4 ಕಾವ್ಯ ರಚಿಸಿದ್ದಾರೆ.

ಬೆಟ್ಟದಾ ಮೇಲೊಂದು ಮನೆ ಮಾಡಿ, ಕುಲಕುಲವೆಂದು ಹೊಡೆದಾಡದಿರಿ ಇವರ ಪ್ರಮುಖ ಕೀರ್ತನೆಗಳು.

**ವಿಜಯದಾಸರು:**

ಮಾನ್ವಿಯಲ್ಲಿ ಜನಿಸಿದ ಇವರು ವಾದಿರಾಜರ ಶಿಷ್ಯರಾದರು. ಪುರಂದರದಾಸರ ಕನಸಂತೆ 2500 ಕೀರ್ತನೆಗಳನ್ನು ರಚಿಸಿದರು. ವೇದ, ಉಪನಿಷತ್, ಭಾಗವತ ಮತ್ತು ಪುರಾಣಗಳಿಂದ ಆಯ್ದ ಘಟನಾವಳಿಗಳನ್ನು ಆಧರಿಸಿ ಕೀರ್ತನೆ ರಚಿಸಿದರು.

**ಜಗನ್ನಾಥದಾಸರು:**

ರಾಯಚೂರಿನಲ್ಲಿ ಹುಟ್ಟಿದ ಇವರು 600 ತ್ರಿಪದಿ ಮತ್ತು 200 ಕೀರ್ತನೆಗಳನ್ನು ರಚಿಸಿದ್ದಾರೆ. ಅಲ್ಲದೇ ಭಾಮಿನಿ ಷಟ್ಪದಿಯಲ್ಲಿ ಹರಿಕಥಾಮೃತಸಾರ ರಚಿಸಿದ್ದಾರೆ.

ಮಾನವ ನಾಗರೀಕನಾದಂತ ಅವನ ಸಾಮಾಜಿಕವಾದ ವ್ಯವಸ್ಥೆ ಕೂಡ ವಿಸ್ತೃತಗೊಳ್ಳುತ್ತದೆ. ಕಾಲಚಕ್ರದಲ್ಲಿ ಅದು ಸರಿದಂತೆ ಹಲವಾರು ಲೋಪದೋಷ ಮೂಡುವುದು ಸಹಜ. ಇಂತಹ ಹಳಿತಪ್ಪದ ಸಾಮಾಜಿಕ ವ್ಯವಸ್ಥೆಯನ್ನು ಸರಿದಾರಿಗೆ ತರುವಲ್ಲಿ ಹರಿದಾಸರು ಪ್ರಯತ್ನ ಮಾಡಿದರು.

ಹರಿದಾಸ ಸಾಹಿತ್ಯದಲ್ಲಿ ಅಂದಿನ ಸಮಾಜದ ಲೋಪದೋಷಗಳ ಚಿತ್ರ ದೊರೆಯುತ್ತದೆ. ವ್ಯಾಸರಾಯರು ಮದನಪಲ್ಲಿಯಲ್ಲಿ ನಿರ್ಮಿಸಿದ ಕೆರೆ ಅವರ ಸಾಮಾಜಿಕ ಕಾಳಜಿ ತೋರುತ್ತದೆ.

ಮೇಲು, ಕೀಳು ಭಾವನೆ ಹೋಗಲಾಡಿಸಲು ಕನಕದಾಸರು, 'ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನ್ನು ಬಲ್ಲಿರಾ ಆತ್ಮ ಯಾವ ಕುಲ, ಜೀವ ಯಾವ ಕುಲ, ಜಲವೇ ಸಕಲ ಕುಲಕ್ಕೆ ತಾಯಲ್ಲವೆ. ಅರ್ಥವರಿಯದ ಮಂತ್ರ ಪಠಿಸುವವರನ್ನು ಕುರಿತು ಕನಕರು ಹೀಗೆ ಟೀಕಿಸಿದ್ದಾರೆ.

'ಜಪವ ಮಾಡಿದರೇನು, ತಪವ ಮಾಡಿದರೇನು,

ಕಪಟಗುಣ ವಿಪರೀತವಿದ್ದವನು'

ಪುರಂದರರು: ಮನ:ಶುದ್ದಿಯಿಲ್ಲದೆ ಯಾವ ಮಂತ್ರೋಚ್ಚಾರಣೆಯು ಫಲ ನೀಡದು.

'ಮನಶುದ್ದಿಯಿಲ್ಲದವನಿಗೆ ಮಂತ್ರದ ಫಲವೇನು,

ತನು ಶುದ್ದಿಯಿಲ್ಲದವನಿಗೆ ತೀರ್ಥದ ಫಲವೇನು,

ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ,

ನಿಂದಲ್ಲಿ ಫಲವೇನು ಶ್ರೀಶೈಲದ ಕಾಗೆಯಂತೆ'

**ಪಾಶುಪತ ಪಂಥ:**

ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಲಕುಲೀಶ್, ಪಾಶುಪತ ಎಂಬ ಶೈವರು ಪ್ರಬಲರಾಗಿದ್ದರು. 'ಲಕುಲೀಶ' ಎಂಬ ಶುದ್ದ ಶಿವಸಾಧಕನು ಈ ಪಾಶುಪತ ಪಂಥವನ್ನು ಕ್ರಿ.ಶ.1ನೇ ಶತಮಾನದಲ್ಲಿ ಗುಜರಾತಿನಲ್ಲಿ ಸ್ಥಾಪಿಸಿದನು.

ಇವರು ಪಶುಪತಿ ಅಥವಾ ಶಿವನ ಆರಾಧಕರು, ಶುದ್ದ ಸಾತ್ವಿಕವಾದಿಗಳು. ಸನ್ಯಾಸಿಗಳು ಹಾಗೂ ಸ್ಥಾವರ ಲಿಂಗಾರಾಧಕರಾಗಿದ್ದರು. ಈ ಪಂಥ 12ನೇ ಶತಮಾನದಲ್ಲಿ ಪ್ರಭಾವಶಾಲಿಯಾಗಿತ್ತೆಂದು ಶಾಸನಗಳಿಂದ ತಿಳಿಯುತ್ತದೆ. ಇದು ಕಾಳಾಮುಖ ಪಂಥದೊಂದಿಗೆ ಹೆಚ್ಚಿನ ಹೋಲಿಕೆ ಸಿಗುತ್ತದೆ.

**ಕಾಳಾಮುಖ ಪಂಥ:**

ಮುಖಕ್ಕೆ ಕಪ್ಪು ಮಸಿಯ ಗೆರೆಗಳನ್ನು ಹಚ್ಚಿಕೊಳ್ಳುತ್ತಿದ್ದ ಶಿವನ ಆರಾಧಕರೇ ಕಾಳಾಮುಖರು. ಇವರು ಶೈವ ಗುರುಗಳು, ಯತಿಗಳು, ಸಂತರು. ದಿನಕ್ಕೆ 3 ಬಾರಿ ಭಸ್ಮ ಸ್ನಾನ ಮಾಡುತ್ತಿದ್ದರು. ಕ್ರಿ.ಶ.9ರಿಂದ 13ನೇ ಶತಮಾನದ ಸಮಯದಲ್ಲಿ ಹೆಚ್ಚು ಪ್ರಸಿದ್ದಿಗೆ ಬಂದರು.

ಕಾಳಾಮುಖ ಮತ್ತು ಪಶುಪತಿ ಪಂಥ ಶೈವಧರ್ಮದ 2 ಶಾಖೆಗಳು. ಇವರ ನಡುವೆ ಹೆಚ್ಚಿನದೇನು ವ್ಯತ್ಯಾಸವಿಲ್ಲವೆಂದು ಆರ್.ಜಿ.ಭಂಡಾರ್‌ಕರ್ ಹೇಳಿದ್ದಾರೆ. ಇವರ ಬಗೆಗೆ ಹೇಳುವ ಮೂಲ ಪ್ರಾಚೀನ ಶಾಸನ 'ಕಿಗ್ಗದ ಶಾಸನ'.

ಡಾ.ಕೃಷ್ಣಾರವರು ಕರ್ನಾಟಕಕ್ಕೆ ಕಾಶ್ಮೀರದಿಂದ ಬಂದರೆಂದು ಹೇಳುತ್ತಾರೆ.

ಹೊಯ್ಸಳ ದೊರೆ 2ನೇ ಬಲ್ಲಾಳನು ಕಾಳಾಮುಖರಿಗಾಗಿ ಗದುಗಿನ ತ್ರಿಕೂಟೇಶ್ವರ ದೇವಾಲಯ ನಿರ್ಮಿಸಿದ್ದನು. ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು ಈ ಪಂಥದ ಪ್ರಭಾವಕ್ಕೆ ಒಳಗಾಗಿದ್ದರು. ಬಳ್ಳಿಗಾವೆ ಕೋಡಿಮಠ ಪ್ರಸಿದ್ದ ಶೈವಗುರುಗಳ ಪೀಠವಾಗಿತ್ತು. 13ನೇ ಶತಮಾನದ ನಂತರ ಇವು ಅವನತಿ ಹೊಂದಿ ವೀರಶೈವ ಧರ್ಮದಲ್ಲಿ ವಿಲೀನವಾದವು. ಕಾಳಮುಖ ಪಂಥದ 6 ಪ್ರಮುಖ ಆಚರಣೆಗಳೆಂದರೆ,

1) ಮಾನವ ಕಪಾಲದಲ್ಲಿ ಆಹಾರ ಸೇವನೆ

2) ಶವಗಳ ಭಸ್ಮವನ್ನು ಮೇ ಮೇಲೆ ಬಳಿದುಕೊಳ್ಳುವುದು

3) ಶವಗಳ ಮಾಂಸ ಸೇವನೆ

4) ಮಧ್ಯಪಾನ

5) ಧಾಡಿ ಹಿಡಿಯುವಿಕೆ

6) ಯೋನಿ ಪೂಜೆ ಮತ್ತು ಲೈಂಗಿಕ ಸ್ವೇಚ್ಚಾಚಾರ

ಕಾಳಮುಖರು ತಪಸ್ವಿಗಳು, ಕುಲಪತಿಗಳು, ಆಯುರ್ವೇದ ಪಾಂಡಿತ್ಯರು, ವೇಧ ಆಗಮ ಜ್ಯೋತಿಷಿಗಳ ಪರಿಣಿತರಾಗಿ ರಾಜಾಶ್ರಯ ಪಡೆದಿದ್ದರು. ಬಳ್ಳಿಗಾವೆಯ ಕೋಡಿಮಠ ಇವರ ವಿದ್ಯೆಯ ಪ್ರಸಿದ್ದ ಕೇಂದ್ರ.

ಕಾಳಾಮುಖರ 2 ಪ್ರಮುಖ ಶಾಖೆಗಳೆಂದರೆ,

1) ಶಕ್ತಿ ಪರಿಷತ್

2) ಸಿಂಹ ಪರಿಷತ್

ಕ್ರಿ.ಶ.12ನೇ ಶತಮಾನದ ಅಂತ್ಯದ ವೇಳೆಗೆ ರೇವಣಸಿದ್ದ, ಮರುಳಸಿದ್ದ ಮೊದಲಾದವರ ಪ್ರಭಾವದಲ್ಲಿ ಚಿತಾಭಸ್ಮ, ಮದ್ಯಪಾನ ಬಿಟ್ಟು ಸಾತ್ವಿಕ ಮಾರ್ಗದ ವೀರಶೈವರೊಮದಿಗೆ ವಿಲೀನವಾದರು.

**ಶಾಕ್ತ ಪಂಥ:**

'ಶಾಕ್ತ' ಎಂದರೆ ಶಕ್ತಿ ದೇವತೆ. ಸ್ತ್ರೀಯರು ಶಕ್ತಿಯ ಪ್ರತೀಕ. ಅವಳು ಭೂ ತಾಯಿಯಾಗಿ, ಶಕ್ತಿದೇವತೆಯಾಗಿ, ಜಗನ್ಮಾತೆಯಾಗಿ ಆರಾಧಿಸಲ್ಪಟ್ಟಿದ್ದಾಳೆ.

'ಮಾತೃದೇವೋಭವ' ಎಂಬುದು ಭಾರತೀಯ ಪರಂಪರೆಯ ಆದರ್ಶವಾಗಿದ್ದ 'ಸ್ತ್ರೀ'ಯನ್ನು ದೈವತ್ವ ಸ್ಥಾನದಲ್ಲಿಟ್ಟು ಪೂಜಿಸುವ ಪದ್ಧತಿ ಅನಾದಿ ಕಾಲದಿಮದಲೂ ರೂಢಿಯಲ್ಲಿದೆ. ಸಿಂಧೂ ಜನರು ಮಾತೃದೇವತೆಯ ಪರಮ ಆರಾಧಕರು.

ಈ ಪಂಥವು ತ್ರಿದೇವತೆಗಳ ಆರಾಧಕರು.

1) ಕಾಳಿ (ಪಾರ್ವತಿ) 2) ಲಕ್ಷ್ಮೀ 3) ಸರಸ್ವತಿ

**1) ಕಾಳಿ ಆರಾಧನೆ:**

ಶಿವನ ಪತ್ನಿ, ಕಪ್ಪು ಬಣ್ಣವನ್ನು ಪ್ರತಿನಿಧಿಸುತ್ತಾಳೆ. ಕಾಳಿಕಾಂಬಳನ್ನು ಚಾಮುಂಡೇಶ್ವರಿ, ಮೂಕಾಂಬಿಕೆ, ಮಹೇಶ್ವರಿ, ದ್ರಾಕ್ಷಾಯಿಣಿ, ಅನ್ನಪೂರ್ಣೇಶ್ವರಿ ಮುಂತಾದ ಹೆಸರಿಂದ ಆರಾಧಿಸಲಾಗುತ್ತದೆ.

**2) ಲಕ್ಷ್ಮೀ ಆರಾಧನೆ:**

ಕೆಂಪು ಬಣ್ಣವನ್ನು ಪ್ರತಿನಿಧಿಸುತ್ತಾಳೆ. ಇವಳನ್ನು ಸಂತಾನವೃದ್ಧಿ, ಸಂಪತ್ತು ವೃದ್ಧಿ, ದುರ್ಗೆಯಾಗಿ ಆರಾಧಿಸಲಾಗುತ್ತಿತ್ತು. ಇವಳು ವಿಷ್ಣುವಿನ ಪತ್ನಿ. ಕೊಲ್ಲಾಪುರ ಲಕ್ಷ್ಮೀ ಆರಾಧನೆಯ ಪ್ರಮುಖ ಕೇಂದ್ರ.

**3) ಸರಸ್ವತಿ ಆರಾಧನೆ:**

ಬ್ರಹ್ಮನ ಪತ್ನಿ. ಬಿಳಿ ಬಣ್ಣವನ್ನು ಪ್ರತಿನಿಧಿಸುತ್ತಾಳೆ. ವಿದ್ಯಾದೇವತೆ, ಜ್ಞಾನದೇವತೆಯಾಗಿ ಸ್ತುತಿಸಲಾಗುತ್ತದೆ. ಶೃಂಗೇರಿ ಪ್ರಮುಖ ಆರಾಧನಾ ಕೇಂದ್ರ.

**4) ಗ್ರಾಮದೇವತೆ ರೂಪದಲ್ಲೂ ಪೂಜೆ:**

(ದುರ್ಗಿ, ಯಲ್ಲಮ್ಮ, ಮುತ್ಯಾಲಮ್ಮ, ಹುಲಿಯಮ್ಮ, ಪಾತಾಳಮ್ಮ ಇತ್ಯಾದಿ). ಶಕ್ತಿ ದೇವತೆಯನ್ನು 3 ಗುಣಗಳಿಂದ ವೈಭವೀಕರಿಸಲಾಗಿದೆ.

1) ಸಾತ್ವಿಕ ಗುಣ

2) ರಾಜಸ ಗುಣ

3) ತಾಮಸ ಗುಣ

ಸಾತ್ವಿಕ ಗುಣಗಳು – ಪಾರ್ವತಿ, ಲಕ್ಷ್ಮೀ, ಸರಸ್ವತಿಯಲ್ಲಿ ಗುರುತಿಸಲಾಗಿದೆ.

ರಾಜಸಗುಣಗಳು – ಚಾಮುಂಡೇಶ್ವರಿ, ದುರ್ಗಿಯಲ್ಲಿ ಗುರುತಿಸಲಾಗಿದೆ.

ತಾಮಸಗುಣಗಳು – ಕಾಳಿ, ಮಾರಿ ದೇವತೆಗಳಲ್ಲಿ ಗುರುತಿಸಲಾಗಿದೆ.

ಲಕ್ಷ್ಮೀ ಎಂದರೆ ಮುಖದಲ್ಲಿ ಲಕ್ಷಣವಾದ ಚಿನ್ಹೆಯುಳ್ಳವರು ಎಂದರ್ಥ. ಅವಳು ಸಂಪತ್ತನ್ನು ಕೊಡುವವಳಾದ್ದರಿಂದ 8 ರೂಪದಲ್ಲಿ ಆರಾಧಿಸಲ್ಪಡುತ್ತಾಳೆ. (ಧಾನ್ಯಲಕ್ಷ್ಮೀ, ಸಂತಾನಲಕ್ಷ್ಮೀ, ಭಾಗ್ಯಲಕ್ಷ್ಮೀ ಇತ್ಯಾದಿ).

ಸರಸ್ವತಿಯನ್ನು ಶಂಕರಾಚಾರ್ಯರು ಶಾರದೆ ಎಂದು ಆರಾಧಿಸಿದ್ದಾರೆ. ಶಕ್ತಿ ದೇವತೆಯನ್ನು ಸಪ್ತಮಾತೃಕೆ ರೂಪದಲ್ಲೂ ಆರಾಧಿಸಲಾಗುತ್ತದೆ.

1) ಬ್ರಾಹ್ಮೀ 2) ವೈಷ್ಣವಿ 3) ಮಹೇಶ್ವರಿ 4) ಚಾಮುಂಡಿ 5) ಕನ್ಯಾಕುಮಾರಿ 6) ವರಾಹಿ 7) ಇಂದ್ರಾಣಿ ಇತ್ಯಾದಿ.

## ಬಹುಮನಿ ಸಾಮ್ರಾಜ್ಯ: ಮೊಹಮದ್ ಗವಾನ್

ಬಹುಮನಿ ಸಾಮ್ರಾಜ್ಯವು ಕರ್ನಾಟಕದಲ್ಲಿ ಸ್ಥಾಪಿತವಾದಂತಹ ಮೊದಲ ಮುಸ್ಲಿಂ ಸಾಮ್ರಾಜ್ಯ. ಇದು ಹಿಂದೂ ಧರ್ಮಕ್ಕೆ ತಡೆಗೋಡೆಯಂತಿದ್ದು, ಇಸ್ಲಾಂ ಧರ್ಮ ಮತ್ತು ಸಂಸ್ಕೃತಿಯನ್ನು ಪ್ರಚಾರ ಮಾಡಿತು. ಮಹಮದ್ ಬಿನ್ ತುಘಲಕ್ ಕಾಲದಲ್ಲಿ ದಖನ್ನಿನಲ್ಲಿ ಉಂಟಾದ ರಾಜಕೀಯ ಪ್ರಕ್ಷೋಭೆಗಳ ಲಾಭ ಪಡೆದ 'ಹಸನ್‌ಗಂಗೂ' ಎಂಬ ಅಮೀರನು ಬಹುಮನಿ ಸಾಮ್ರಾಜ್ಯವನ್ನು ಕ್ರಿ.ಶ.1347ರಲ್ಲಿ ಸ್ಥಾಪಿಸಿದನು. ಇವನು ಬೀದರ್ ಅನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. (ಪ್ರಾರಂಭದ ರಾಜಧಾನಿ ಗುಲ್ಬರ್ಗಾ). (ಹಸನ್‌ಗಂಗೂ – ಪರ್ಷಿಯಾ ಮೂಲದವನೆಂದು, ಹಿಂದೂ ಮೂಲದವನೆಂದೂ ವಾದಗಳಿವೆ.)

ಹಸನ್‌ಗಂಗೂ ದಖನ್‌ನಲ್ಲಿ ದಂಗೆ ಎದ್ದ ಎಲ್ಲಾ ಮುಸ್ಲಿಂ ಸರದಾರರನ್ನು ಸೋಲಿಸಿ, ಮುಧೋಳ ಅಕ್ಕಲಕೋಟೆ, ಬಾಗಲಕೋಟೆ, ಬಿಜಾಪುರ, ಜಮಖಂಡಿ ಮುಂತಾದ ಸ್ಥಳಗಳನ್ನು ಆಕ್ರಮಿಸಿದನು. ಇವನ ರಾಜ್ಯ ಪಶ್ಚಿಮದಲ್ಲಿ ಗೋವಾದಿಂದ ಪೂರ್ವದ ಭೋಂಗಿರ್, ದಕ್ಷಿಣದ ಕೃಷ್ಣಾ ನದಿಯಿಂದ ಉತ್ತರದ ಪೇಣ, ಗಂಗಾ ನದಿಯವರೆಗೆ ಹಬ್ಬಿತ್ತು. ಇವನ ರಾಜ್ಯದಲ್ಲಿ 'ದೌಲತಾಬಾದ್, ಗುಲ್ಬರ್ಗಾ, ಬಿರಾರ್ ಮತ್ತು ಬೀದರ್ ಎಂಬ 4 ಪ್ರಾಂತ್ಯಗಳಿದ್ದವು. ಇವನು 2ನೇ ಅಲೆಕ್ಸಾಂಡರ್ ಎಂದು ತನ್ನನ್ನು ನಾಣ್ಯಗಳ ಮೇಲೆ ಟಂಕಿಸಿದನು. 'ಇಸಾಮಿ' ಇವನ ಆಸ್ಥಾನ ಕವಿ. ಇವನ ನಂತರ ಇವನ ಮಗ 1ನೇ ಮಹಮದ್ ಷಾ, 2ನೇ ಮಹಮದ್ ಷಾ ಆಳ್ವಿಕೆ ನಡೆಸಿದರು. ಆದರೆ ನಂತರ ಬಂದಂತಹ ಇವನ ಮೊಮ್ಮಗ 'ಫಿರೋಜ್ ಷಾ' ಬಹುಮನಿ ಸುಲ್ತಾನರಲ್ಲಿಯೇ ಶ್ರೇಷ್ಠ ಅರಸ ಎನಿಸಿಕೊಂಡನು.

ಇವನು ವಿಜಯನಗರದೊಂದಿಗೆ ಕ್ರಿ.ಶ.1398, 1406, 1417ರಲ್ಲಿ 3 ಯುದ್ಧಮಾಡಿ, ಮೊದಲೆರಡರಲ್ಲಿ ಹರಿಹರನನ್ನು ಸೋಲಿಸಿದನು.

ಫಿರೋಜನು ಕಲೆಗಳ ಆರಾಧಕನಾಗಿದ್ದನು. ಭೂಮಿತಿ, ಧರ್ಮಶಾಸ್ತ್ರ, ತರ್ಕಶಾಸ್ತ್ರ, ಪಂಡಿತನಾಗಿದ್ದನು. ದೌಲತಾಬಾದ್‌ನಲ್ಲಿ 1 ಖಗೋಳ ವೀಕ್ಷಣಾಲಯ ನಿರ್ಮಿಸಿದನು. ಗುಲ್ಬರ್ಗಾದ ಜುಮ್ಮಾ ಮಸೀದಿ, ಫಿರೋಜಾಬಾದ್ ನಗರವು ಇವನ ಕೊಡುಗೆ.

ನಂತರ ಬಂದಂತಹ ಉತ್ತರಾಧಿಕಾರಿಗಳು ಅತಿಯಾದ ಧರ್ಮನಿಷ್ಠೆಯಿಂದ ಅವರಲ್ಲೇ ದ್ವಂದ್ವ ಕಾಣಿಸಿ ಮುಂದೆ ಸಾಮ್ರಾಜ್ಯ ಘಾತಕವಾಗುವಂತೆ ಬೆಳೆಯಿತು. ಇಲ್ಲಿಂದಲೇ ಶಿಯಾ ಮತ್ತು ಸುನ್ನಿಗಳ ನಡುವೆ ಕಲಹ ಪ್ರಾರಂಭವಾಗಿತ್ತು. ಇಂತಹ ಸಮಯದಲ್ಲಿ ಚತುರ ಮಂತ್ರಿ, ಪ್ರಧಾನಿ, ಆಡಳಿತಗಾರ ಎಂದೇ ಖ್ಯಾತಿವೆತ್ತ ಮಹಮದ್ ಗವಾನ್‌ನ ಆಡಳಿತ ಶುರುವಾಯಿತು.

## ಮಹಮದ್ ಗವಾನ್:

ಪರ್ಶಿಯಾ ಮೂಲದವನಾದ ಈತ ಕ್ರಿ.ಶ.1445ರಲ್ಲಿ ವರ್ತಕನಾಗಿ ಬೀದರ್‌ಗೆ ಭೇಟಿ ನೀಡಿದ್ದನು. ನಂತರ 2ನೇ ಅಲ್ಲಾವುದ್ದೀನ್‌ನ ಸೇವೆಗೆ ಸೇರಿಕೊಂಡನು. ತನ್ನ ಪ್ರಾಮಾಣಿಕತೆ, ನಿಷ್ಠೆಗಳಿಂದ, ಸುಲ್ತಾನನ ಮೆಚ್ಚುಗೆ ಪಡೆದನು. 'ಹುಮಾಯೂನ್' ಕಾಲದಲ್ಲಿ ಪ್ರಧಾನಿಯಾಗಿ ನೇಮಕ. ಕೇವಲ ಮಂತ್ರಿಯಾಗಿ ಈ ವಂಶದ ಎಲ್ಲಾ ಅರಸರಿಗಿಂತಲೂ ಹೆಚ್ಚು ಘನವಂತಿಕೆಯ ವ್ಯಕ್ತಿಯಾಗಿದ್ದಾನೆ.

ಇವನ ಪ್ರಮುಖ ದಂಡಯಾತ್ರೆಗಳೆಂದರೆ,

1) ಇವನು ತೆಲಂಗಾಣದ ಜಲಾಲ್‌ಖಾನ್ ಮತ್ತು ಮಾಳ್ವ ಸುಲ್ತಾನರ ದಂಗೆಯಡಗಿಸಿದನು.

2) ವಿಜಯನಗರದ ಅಧೀನದಲ್ಲಿದ್ದ ಗೋವಾ ಗೆದ್ದು, ಬಹುಮನಿಗೆ ಸೇರಿಸಿದನು.

3) ಬೆಳಗಾವಿ ರಾಜರನ್ನು ಸೋಲಿಸಿ ಹುಬ್ಬಳ್ಳಿ ಮತ್ತು ಬಾಗಲಕೋಟೆ ಗೆದ್ದನು.

4) ಕಂಚಿ ರಾಮೇಶ್ವರ ದೇವಾಲಯ ಲೂಟಿ.

5) ಒರಿಸ್ಸಾದ ಹಿಂದೂ ದೇವಾಲಯ ಧ್ವಂಸ ಮಾಡಿ 'ಘಾಜಿ' ಬಿರುದು.

ಹೀಗೆ ಎಲ್ಲಾ ದಿಗ್ವಿಜಯಗಳಿಂದ 'ಲಷ್ಕರಿ' ಎಂಬ ಬಿರುದು ಮತ್ತು 'ಖ್ವಾಜಾ-ಇ-ಜಹಾನ್' ಬಿರುದು ಪಡೆದನು. ಇವನ ಕಾಲದಲ್ಲಿ ಕೇವಲ ಯುದ್ಧಮಾತ್ರವಲ್ಲಾ, ಆಡಳಿತ, ವಿದ್ಯೆಯಲ್ಲೂ ಅನೇಕ ರೀತಿ ಸುಧಾರಣೆಗಳು ಕಂಡವು. ಅವುಗಳೆಂದರೆ,

**ಆಡಳಿತ ಸುಧಾರಣೆಗಳು:**

ಪ್ರಮುಖವಾಗಿ ಗವಾನ್ ಒಬ್ಬ ಚತುರ ರಾಜನೀತಿಜ್ಞ. ಇವನ ಕಾಲದಲ್ಲಿ ಷಿಯಾ ಮತ್ತು ಸುನ್ನಿ ಪಂಗಡಗಳ ನಡುವಿನ ಘರ್ಷಣೆ ಕಡಿಮೆ ಮಾಡಿದನು. ಸ್ಥಳೀಯ ಸರ್ಕಾರವನ್ನು ಸುಧಾರಿಸಿ ಅವುಗಳ ಮೇಲೆ ಕೇಂದ್ರದ ಹತೋಟಿಯನ್ನು ಬಲಪಡಿಸಿದನು. ರಾಜ್ಯವನ್ನು 8 ತರಫ್‌ಗಳಾಗಿ ವಿಂಗಡಿಸಿ ತರಫ್‌ದಾರರ ನೇಮಕ ಮಾಡಿದನು. ಜಹಾಂಗೀರ್ ನೀಡುವ ಪದ್ಧತಿ ಬದಲಿಗೆ ವೇತನ ನೀಡುವ ಪದ್ಧತಿ ಜಾರಿಗೆ ತಂದನು. ನೀರಾವರಿ, ಮಾರುಕಟ್ಟೆ, ಕಂದಾಯ ಸುಧಾರಣೆ ಮಾಡಿದನು. ಇವು ಮುಂದೆ ಅಕ್ಬರ್ ಮತ್ತು ತೋದರ್‌ಮಲ್‌ರಿಗೆ ಮಾದರಿಯಾದವು.

**ವಿದ್ಯಾಪ್ರೇಮ:**

ಇವನು ವಿದ್ಯಾಪಕ್ಷಪಾತಿಯಾಗಿದ್ದು ಕ್ರಿ.ಶ.1472ರಲ್ಲಿ 'ಗವಾನ್ ಮದರಸ' ಎಂಬ ಮಹಾವಿದ್ಯಾಲಯ ಸ್ಥಾಪಿಸಿದನು. ಇದರ ನಿರ್ವಹಣೆಗೆ ವಿಫುಲ ದಾನದತ್ತಿ ನೀಡಿದ್ದನು. 3000 ಗ್ರಂಥಗಳುಳ್ಳ 1 ಗ್ರಂಥ ಭಂಡಾರವನ್ನು ನಿರ್ಮಿಸಿದನು. ಗವಾನನು ಅಧ್ಯಾಪಕನಾಗಿ ಕಾರ್ಯ ಮಾಡಿದ್ದನು. (ದಖನ್ನಿನ ಅದ್ವಿತೀಯ ಕಟ್ಟಡ). ಇವರ ಕೃತಿಗಳೆಂದರೆ, ರಿಯಾಜ್, ಉಲ್-ಇನ್ಶಾ, ದಿವಾನ್-ಇ-ಆಷರ್.

ಆದರೆ ಗವಾನ್‌ನ ಯಶಸ್ಸು ಉಳಿದ ಆಸ್ಥಾನಿಕರಿಗೆ ನುಂಗಲಾರದ ತುಪ್ಪವಾಗಿ ಪರಿಗಣಿಸಿ, ಅವನ 'ರುದ್ಧವೇ ಪಿತೂರಿ ಹೂಡಿ ರಾಜದ್ರೋಹದ ಆಪಾದನೆ ಮೇಲೆ 1481ರಲ್ಲಿ ಗಲ್ಲುಶಿಕ್ಷೆಯಾಗುವಂತೆ ಮಾಡಿದರು.'

ಒಟ್ಟಾರೆಯಾಗಿ ಒಬ್ಬ ದಕ್ಷ ಆಡಳಿತಗಾರ, ಚತುರ ರಾಜನೀತಿಜ್ಞ, ಉತ್ತಮ ದಿಗ್ವಿಜಯ ಶಾಲಿ, ಅಪ್ರತಿಮ ವೀರ ಈತನಾಗಿದ್ದ. ಸರಳ ಜೀವಿಯಾದ ಗವಾನ್ ಚಾಪೆಯ ಮೇಲೆಯೇ ಮಲಗುತ್ತಿದ್ದನು. ತನ್ನ ಅನ್ನವನ್ನು ತಾನೇ ಬೇಯಿಸಿ ತಿನ್ನುತ್ತಿದ್ದನು.

ಕ್ರಿ.ಶ. 1525ರಿಂದ ಈ ಸಾಮ್ರಾಜ್ಯ ಒಡೆದು 5 ರಾಜ್ಯ ಅಸ್ತಿತ್ವಕ್ಕೆ ಬಂದವು. ಅವುಗಳು,

1) ಬಿಜಾಪುರದ ಆದಿಲ್‌ಷಾಹಿ

2) ಬೀದರಿನ ಬರೀದ್‌ಷಾಹಿ

3) ಗೋಲ್ಕೊಂಡದ ಕುತುಬ್‌ಷಾಹಿ

4) ಅಹಮದ್‌ನಗರದ ನಿಜಾಮ್‌ಷಾಹಿ

**ಬಹುಮನಿಯರ ಕೊಡುಗೆಗಳು:**

ಮುಸ್ಲಿಂ ರಾಜತ್ವದ ಕಲ್ಪನೆಗಳಿಗನುಗುಣವಾಗಿ ರಾಜನೇ ಬಹುಮನೆ ರಾಜದಲ್ಲಿ ಆಡಳಿತದ ಪ್ರಮುಖನಾಗಿದ್ದು ಶ್ರೇಷ್ಠ ನ್ಯಾಯಾಧೀಶ, ಉಚ್ಚ ಸೇನಾಧಿಕಾರಿ ಹಾಗೂ ಧಾರ್ಮಿಕ ಪ್ರಮುಖನಾಗಿದ್ದನು.

ಆಡಳಿತದ ವಿಕೇಂದ್ರೀಕರಣ (8 ತರಫ್ ವಿಂಗಡಣೆ) ಮತ್ತು ಕೇಂದ್ರದಿಂದ ನೇರ ಆಡಳಿತಕ್ಕೆ ಇವರ ಪ್ರಮುಖ ಕೊಡುಗೆಯಾಗಿತ್ತು. ಸರ್ಕಾರಿ ವ್ಯವಸ್ಥೆಯ ಉದ್ದೇಶಕ್ಕಾಗಿ ಅಂದೇ ಅಂಚೆ ವ್ಯವಸ್ಥೆ ಸಂಘಟಿಸಿದ್ದರು.

## ಶಿಕ್ಷಣ ಮತ್ತು ಸಾಹಿತ್ಯ ಕೊಡುಗೆಗಳು:

ಮುಕ್ತಾಬ್‌ಗಳು ಶಿಕ್ಷಣ ಕೇಂದ್ರಗಳಾಗಿದ್ದು, ಎಲಿಚ್‌ಪುರ, ದೌಲತಾಬಾದ್, ಬೀದರ್ ಮತ್ತು ಗುಲ್ಬರ್ಗಾದಲ್ಲಿ ಅನೇಕ ಇಸ್ಲಾಮಿಕ್ ಶಾಲೆ ತೆರೆದಿದ್ದರು. ಗವಾನ್‌ನು ಬೀದರ್‌ನಲ್ಲಿ ಮದರಸಾ ಕಾಲೇಜು ನಿರ್ಮಿಸಿದನು. (3000 ಗ್ರಂಥ).

ಅರೇಬಿಕ್, ಉರ್ದು ಮತ್ತು ಪರ್ಷಿಯನ್ ಭಾಷೆಗಳ ಪೋಷಣೆಯಾಯಿತು. ಖ್ವಾಜಾ ಬಂದೇ ನವಾಜ್ ಬದ್ರುದ್ದೀನ್ ಖ್ಯಾತ ಕವಿಗಳು.

## ಕಲೆ ಮತ್ತು ವಾಸ್ತುಶಿಲ್ಪ:

ಕಲಾಭಿಮಾನಿಗಳಾದ ಬಹುಮನಿ ಸುಲ್ತಾನರು ಗುಲ್ಬರ್ಗಾ ಮತ್ತು ಬೀದರ್‌ನಲ್ಲಿ ಅನೇಕ ಕೋಟೆ ಕೊತ್ತಲು, ಅರಮನೆ, ಗೋರಿ ಮತ್ತು ಮಸೀದಿಗಳನ್ನು ನಿರ್ಮಿಸಿದರು. ಇಲ್ಲಿ ಹಿಂದೂ ಮುಸ್ಲಿಂ ಶೈಲಿಯ ಗಮನಾರ್ಹ ರಚನೆಗಳಿದ್ದು ಇದು 'ದಖ್ಖನಿ' ಶೈಲಿಯೆಂದೇ ಪ್ರಸಿದ್ಧಿ ಪಡೆದಿದೆ. ದೆಹಲಿ ಸುಲ್ತಾನರು ರೂಢಿಸಿಕೊಂಡಿದ್ದಂತಹ ಶೈಲಿಯನ್ನೇ ಇವರು ಸ್ಥಳೀಯ ವಾತಾವರಣಕ್ಕನುಗುಣವಾಗಿ ಬದಲಾವಣೆ ಮಾಡಿಕೊಂಡರು.

1ನೇ ಮಹಮದ್ ಷಾ ರಚಿಸಿದ್ದ ಗುಲ್ಬರ್ಗಾದ 'ಜಾಮೀ ಮಸೀದಿ' ಪ್ರಸಿದ್ಧವಾಯಿತು. 216 ಅಡಿ ಉದ್ದ 176 ಅಡಿ ಅಗಲವಾಗಿದೆ. 63 ಕಿರು ಗುಮ್ಮಟ ಹೊಂದಿದೆ. ಇದು ಸ್ಪೇನ್ ಕಾರ್ಡೋವಾ ಮಸೀದಿ ಹೋಲುತ್ತಿದೆ.

ಫಿರೋಜ್‌ನು 'ಫಿರೋಜಾಬಾದ್' ಎಂಬ ಹೊಸ ನಗರ ನಿರ್ಮಾಣ ಮಾಡಿದ್ದು ಒಂದು ದಾಖಲೆಯಾಗಿದೆ.

ಗುಲ್ಬರ್ಗಾದ ಬಳಿ ಸುಲ್ತಾನರ ಕೆಲವು ಸಮಾಧಿಗಳಿದ್ದು, ಅವು ಬೃಹತ್ ಗಾತ್ರದ ರಚನೆಗಳಾಗಿವೆ. ಹೊರಗೋಡೆಯಲ್ಲಿ ಸುಂದರ ಭೂಮಿತಿಯ ವಿನ್ಯಾಸ ಕೆತ್ತಲಾಗಿದೆ. ಬಂದೇನವಾಜರ ಸಮಾಧಿ ಪ್ರಮುಖವಾದುದು. ಇದು ಗುಲ್ಬರ್ಗಾದ ಗಣ್ಯ ರಚನೆಯಾಗಿದ್ದ ಗೋಡೆಗಳಲ್ಲಿ ಲಲಿತ ಕಲೆಗಳ ಬರವಣಿಗೆಯಿದೆ.

ಬೀದರ್‌ನ ಸೋಲಾ ಖಾಂಬ್ ಮಸೀದಿಯಲ್ಲಿ ಅರ್ಧಗೋಲಾಕೃತಿಯ ಗುಮ್ಮಟವಿದ್ದು ರೋಮ್ ಕಟ್ಟಡವನ್ನು ಹೋಲುತ್ತದೆ.

ಫೆರಿಸ್ತಾನ ಪ್ರಕಾರ 'ಮಹಮದೀಯ ಭಾರತದಲ್ಲೇ ಬೀದರ್ ಅತ್ಯಂತ ಸುಂದರ ನಗರವಾಗಿತ್ತು.'

ಗವಾನ್‌ನ 3 ಅಂತಸ್ತಿನ ಮದರಸಾ ಕಾಲೇಜು 242 * 222 ಅಡಿ ಅಗಲವಾಗಿದೆ.

ಬಿದರಿ ಮಿಶ್ರಲೋಹ ಕಲೆಯು ಹೂಜಿ, ಭರಣಿಗಳ ಮೇಲೆ ಹೂಬಳ್ಳಿಗಳಿಂದಲೂ, ಕುರಾನಿನ ಸಾಲುಗಳಲ್ಲಿ ಬೆಳ್ಳಿ ರೇಖೆಗಳಿಂದಲೂ ಸಿಂಗಾರ ಮಾಡಲಾಗಿದೆ.

ಹೀಗೆ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಬಹುಮನಿಷಾಹಿಗಳು ಅದ್ವಿತೀಯರೆನಿಸಿದ್ದರು.

## ಬಿಜಾಪುರದ ಆದಿಲಾಶಾಹಿಗಳು – ಸಾಹಿತ್ಯ ಮತ್ತು ವಾಸ್ತುಶಿಲ್ಪಕ್ಕೆ ಅವರ ಕೊಡುಗೆಗಳು:

ಯೂಸುಫ್ ಅದಿಲ್‌ಷಾನು ಬಿಜಾಪುರದ ಅದಿಲ್‌ಶಾಹಿ ವಂಶದ ಸ್ಥಾಪಕ. ಬಹುಮನಿಗಳ ಪತನದ ನಂತರ ಅಸ್ಥಿತ್ವಕ್ಕೆ ಬಂದ ದಖನ್‌ನ ಐದು ಷಾಹಿ ರಾಜರ ಪೈಕಿ ಬಿಜಾಪುರದ ಅದಿಲ್‌ಷಾಹಿಗಳು ಗಣ್ಯರಾಗಿದ್ದರು.

ಯುಸೆಫ್ ಅದಿಲ್‌ಶಾಹಿ ತುರ್ಕಿ ಮೂಲದವನಾಗಿದ್ದು ಷಿಯಾ ಪಂಥದವನು. ಬಹುಮನಿಯ ರಾಜಕೀಯ ಅರಾಜಕತೆಯ ಲಾಭ ಪಡೆದು ಈತ ಕ್ರಿ.ಶ.1489ರಲ್ಲಿ ಸ್ವತಂತ್ರ ಅದಿಲ್‌ಷಾಹಿ ವಂಶ ಸ್ಥಾಪಿಸಿದ. ಆದರೆ ರಾಯಚೂರು, ದೋಅಬ್ ಬಗ್ಗೆ ವಿಜಯನಗರಕ್ಕೂ, ಬಹುಮನಿಗಳಿಗೂ ಇದ್ದ ದೀರ್ಘಕಾಲದ ದ್ವಂದ್ವವನ್ನು ಇವನು ಮುಂದುವರಿಸಬೇಕಾಗಿ ಬಂದು ಕ್ರಿ.ಶ.1510ರಲ್ಲಿ ಕೃಷ್ಣದೇವರಾಯನೊಡನೆ ನಡೆದಂತಹ ಯುದ್ಧದಲ್ಲಿ ಮರಣ ಹೊಂದಿದನು. ಇವನಿಂದ ಪೋರ್ಚುಗೀಸರು ಗೋವಾವನ್ನು ವಶಪಡಿಸಿಕೊಂಡರು. ಇವನ ನಂತರ ಇಸ್ಮಾಯಿಲ್ ಅದಿಲ್‌ಶಹಾ, ಒಂದನೇ ಇಬ್ರಾಹಿಂ ಅದಿಲ್‌ಶಹಾ, ಮೂರನೇ ಇಬ್ರಾಹಿಂ ಅದಿಲ್‌ಶಹಾ ಆಳಿದರು.

ಇಬ್ರಾಹಿಂ–2 ಪ್ರಮುಖನಾಗಿದ್ದನು. ಇವನು 9 ವರ್ಷದವನಿದ್ದಾಗಲೇ ಅಧಿಕಾರಕ್ಕೆ ಬಂದು ಚಿಕ್ಕಮ್ಮ 'ಚಾಂದಬೀಬಿ' ನೆರವಿನಿಂದ ಆಡಳಿತ ನಡೆಸಿದನು. ಇವನು ಯುದ್ಧಕ್ಕಿಂತ ಶಾಂತಿ ಪ್ರಿಯ ಹಿಂದೂ ಪಕ್ಷಪಾತಿ, ತನ್ನ ಅರಮನೆ ಕೋಟೆ ಬಳಿ ನರಸಿಂಹ ದೇವಾಲಯ ನಿರ್ಮಿಸಿದನು. ಉರ್ದುವಿನಲ್ಲಿ ಕತಾಬ್–ಈ–ನವರಸ್' ಕೃತಿ ರಚಿಸಿದನು. ಇವನನ್ನು 'ಜಗದ್ಗುರು ಬಾದ್‌ಷಾ' ಎನ್ನುತ್ತಾರೆ. ಇವನು 'ಇಬ್ರಾಹಿಂ ರೋಜಾ' ನಿರ್ಮಿಸಿದನು.

ನಂತರ ಬಂದ ಮಹಮದ್ ಅದಿಲ್ ಷಾ ಮೊಘಲರ ಆಳ್ವಿಕೆ ಅಥವಾ ದಾಳಿ ಎದುರಿಸಬೇಕಾಯಿತು. ಶಿವಾಜಿ ತಂದೆ 'ಷಾಹಾಜಿ ಬೋಸ್ಲೆ' ಇವನ ಸೈನ್ಯಾಧಿಕಾರಿಯಾಗಿದ್ದ. ಜಗತ್ ಪ್ರಸಿದ್ಧ ಗೋಲಗುಮ್ಮಟ ಇವನ ಪ್ರಸಿದ್ಧ ಕಲೆ. ಜಮ್ಮಾ ಮಸೀದಿ, ಸಾದರ್ ಮಹಲ್, ಅಸಾರ ಮಹಲ್‌ಗಳನ್ನು ಈತ ನಿರ್ಮಿಸಿದನು.

ರಂಗಿನ್ ಮಹಲ್, ಶಿವಾಜಿಯ ದಾಳಿಯಿಂದಾಗಿ ತತ್ತರಿಸಿದ ಇದು ಔರಂಗಾಜೇಬ ದಾಳಿಯಿಂದ ಕ್ರಿ.ಶ.1686ರಲ್ಲಿ ಬಿಜಾಪುರ ಮೊಘಲ್ ಸಾಮ್ರಾಜ್ಯಕ್ಕೆ ಸೇರ್ಪಡೆಯಾಯಿತು.

## ಅದಿಲ್ ಷಾಹಿಗಳ ಸಾಹಿತ್ಯ ಮತ್ತು ವಾಸ್ತುಶಿಲ್ಪ ಕೊಡುಗೆಗಳು:

**ಸಾಹಿತ್ಯ:**

ಇವರು ಪರ್ಷಿಯನ್, ಉರ್ದು, ಮರಾಠಿ ಹಾಗೂ ಕನ್ನಡ ಸಾಹಿತ್ಯವನ್ನು ಪ್ರೋತ್ಸಾಹಿಸಿದರು. ಪರ್ಶಿಯನ್ ಆಡಳಿತ ಭಾಷೆಯಾಗಿತ್ತು. ಷರಿಸ್ತಾ ಮತ್ತು ಷಿರಾಜ್ ಪರ್ಷಿಯನ್ ಕವಿಗಳಾಗಿದ್ದರು. ಅಬ್ದುಲ್ ರಜಾಕ್, ಖಾದಿರ್, ಮುಸ್ಲಿಂ ಕವಿಗಳು.

ಅಬ್ದುಲ್‌ನು ಇಬ್ರಾಹಿಂ ನಾಮವನ್ನು ಬರೆದನು.

ಕನ್ನಡದಲ್ಲಿ ನರಹರಿಯು 'ತೊರೆವೆ ರಾಮಾಯಣ'ವನ್ನು ರಚಿಸಿದನು.

**ವಾಸ್ತುಶಿಲ್ಪ:**

ಅದಿಲ್ ಷಾಹಿಗಳು ಬಿಜಾಪುರವನ್ನು ಸುಂದರ ಸ್ಮಾರಕಗಳಿಂದ ಅಲಂಕಾರ ಮಾಡಿದ್ದರು. ಹಾಗಾಗಿ ಬಿಜಾಪುರವನ್ನು 'ದಕ್ಷಿಣ ಭಾರತದ ರಾಣಿ' ಎಂದೇ ಕರೆಯಲಾಗಿದೆ. ಇಲ್ಲಿ ಹಿಂದೂ ಮುಸ್ಲಿಂ ಶೈಲಿಯಾದ ಸೆರಾಸೆನಿಕ್ ಅಥವಾ ಪರ್ಷಿಯನ್ ಶೈಲಿಯಲ್ಲಿ ಸ್ಮಾರಕಗಳಿವೆ. ಇವರ ಕಲಾಸ್ಮಾರಕಗಳನ್ನು ಅರಮನೆ, ಮಸೀದಿ, ಗೋರಿ ಎಂದು 3 ಭಾಗಗಳಾಗಿ ವಿಂಗಡಿಸಬಹುದು.

**1) ಅರಮನೆಗಳು:**

ಬಿಜಾಪುರದಲ್ಲಿ 20ಕ್ಕೂ ಅಧಿಕ ಅರಮನೆಗಳಿವೆ.

* ಗಗನ್‌ಮಹಲ್ – ಗಗನ್‌ಮಹಲ್‌ನ ಕಮಾನು 62 ಅಡಿ ಅಗಲವಾಗಿದೆ.
* 2ನೇ ಇಬ್ರಾಹಿಂನ ಸಾತ್‌ಮಹಲ್.
* ಆನಂದ್ ಮಹಲ್.
* ಸಂಗೀತ ಮಹಲ್.
* ಅದಿಲ್‌ಷಾಹ್ ಮೆಹತರ್ ಮಹಲ್.

ಮಹಮದ್‌ನ ನ್ಯಾಯಾಲಯವಾದ 'ಅಸಾರ್ ಮಹಲ್'ನ ಗೋಡೆಗಳಲ್ಲಿ ಸುಂದರ ಕೆತ್ತನೆಗಳಿವೆ. ಇಲ್ಲಿ ಪೈಗಂಬರ್‌ನ ಗಡ್ಡದ ಕೇಶವನ್ನು ಇಡಲಾಗಿದೆ. ಪೈಗಂಬರ್‌ನ ಜನ್ಮದಿನದಂದು ಉರುಸ್ ಆಚರಣೆ ಮಾಡುತ್ತಾರೆ.

**2. ಮಸೀದಿಗಳು:**

ಬಿಜಾಪುರದಲ್ಲಿ 50ಕ್ಕೂ ಅಧಿಕ ಸಣ್ಣಪುಟ್ಟ ಮಸೀದಿಗಳಿವೆ. ಜಮ್ಮಾಮಸೀದಿ ಅತ್ಯಂತ ದೊಡ್ಡದು. 9100 ಅಡಿ ಸುತ್ತಳತೆ ಹೊಂದಿದೆ. 450 * 228 ಅಡಿ ಉದ್ದಗಲವಿದ್ದು, ದಕ್ಷಿಣ ಭಾರತದಲ್ಲೇ ಅತೀ ದೊಡ್ಡ ಮಸೀದಿ ಇದಾಗಿದೆ. 3000 ಮಂದಿ ಏಕಕಾಲದಲ್ಲಿ ನಮಾಜ್ ಮಾಡಬಹುದು.

**ಗೋರಿಗಳು:**

ಗೋಲಗುಮ್ಮಟ: ಇದು ಪ್ರಪಂಚದ 4ನೇ ಮತ್ತು ಭಾರತದ ಅತೀ ದೊಡ್ಡ ಗುಮ್ಮಟ. 18000 ಚದರಡಿ ವಿಸ್ತೀರ್ಣವಿದುದ, ರೋಮ್‌ನ 'ಪಾಂಥಯಾನ್' ಗುಮ್ಮಟವನ್ನು 2 ಅಡಿಗಳಿಂದ ಹಿಂದೆ ತಳ್ಳಿದೆ. ಇದನ್ನು ಮಹಮದ್ ಅದಿಲ್‌ಷಾನು ತನ್ನ ರಾಣಿ ಮತ್ತು ಮಕ್ಕಳ ಗೋರಿಗಳಿಗಾಗಿ ನಿರ್ಮಿಸಿದನು.

ಮಲ್ಲಿಕ್ ಸಂದಲ್ ಇದರ ನಿರ್ಮಾಣ ಶಿಲ್ಪಿ. ಇದು ಇಂಡೋಸಾರ್ಸೆನಿಕ್ ಶೈಲಿಯಲ್ಲಿದೆ. ಇದು 200 ಅಡಿ ಎತ್ತರವಾಗಿದ್ದು, ಒಳಗೆ ಪಿಸುಮಾತಿನ ಗ್ಯಾಲರಿಯಿದೆ. ಪಿಸುಗುಟ್ಟಿದರೂ 130 ಅಡಿ ಅಂತರದವರೆಗೆ ಸ್ಪಷ್ಟ ಕೇಳುತ್ತದೆ. 7 ಸಲ ಪ್ರತಿಧ್ವನಿಸುತ್ತದೆ.

ಇಬ್ರಾಹಿಂ ರೋಜ: ಇದನ್ನು 2ನೇ ಇಬ್ರಾಹಿಂ ತನ್ನ ರಾಣಿ ತಾಜ್‌ಸುಲ್ತಾನ್ ಮತ್ತು ಮಕ್ಕಳ ಗೋರಿಗಳಿಗಾಗಿ ನಿರ್ಮಿಸಿದನು. 400 ಚದರಡಿ ಸುತ್ತಳತೆ ಇದೆ. ಇದರ ಗೋಡೆಗಳ ಮೇಲೆ ಕಲ್ಲಿನಲ್ಲಿ ಕುರಾನಿನ ಸಾಲು ಕೆತ್ತಲಾಗಿದೆ. ಇದನ್ನು ದಕ್ಷಿಣ ಭಾರತದ 'ತಾಜ್‌ಮಹಲ್' ಎನ್ನುತ್ತಾರೆ.

ಬಾರಾಕಮಾನ: 2ನೇ ಅಲಿ ಅದಿಲ್‌ಷಾ ಗೋಲಗುಮ್ಮಟಕ್ಕಿಂತ ಎತ್ತರದ ಸ್ಮಾರಕ ನಿರ್ಮಿಸಲು ಯೋಜಿಸಿ 20 ಅಡಿ ಕಟ್ಟೆಯ ಮೇಲೆ 11 ಕಮಾನು ನಿರ್ಮಿಸಿದ್ದನು. ಆದರೆ ಪೂರ್ತಿ ಮಾಡದೇ ಮರಣ ಹೊಂದಿದನು.

## ಕರ್ನಾಟಕದಲ್ಲಿ ಸೂಫಿಗಳು:

ಸೂಫಿ ಪಂಥವು ಇಸ್ಲಾಂ ಧರ್ಮದ ಆಧ್ಯಾತ್ಮಿಕತೆಯ ಇನ್ನೊಂದು ಹೆಸರಾಗಿದೆ. ಸೂಫಿ ಪಂಥಕ್ಕೆ ಮೂಲಾಧಾರ ಖುರಾನ್. ಈ ಪಂಥವು ಮೆಕ್ಕಾ ನಗರದಲ್ಲಿ ಕ್ರಿ.ಶ.7ನೇ ಶತಮಾನದಲ್ಲಿ ಹುಟ್ಟಿಕೊಂಡಿತು. ಮುಸ್ಲಿಂ ಅರಸರು ಉತ್ತರ ಭಾರತದಲ್ಲಿ ರಾಜ್ಯ ಸ್ಥಾಪಿಸಿದ ಮೇಲೆ ಇದು ಭಾರತ ಪ್ರವೇಶಿಸಿತು.

ಹಜರತ್ ಕ್ವಾಜ ಮೊಯಿದ್ದೀನ್ ಚಿಸ್ತಿ, ಹಜರತ್ ಕ್ವಾಜ ನಿಜಾಮುದ್ದೀನ್, ನಾಸಿರುದ್ದೀನ್ ಚಿರಾಗ್, ಸಲೀಮ್ ಚಿಸ್ತಿ ಮೊದಲಾದವರು ಪ್ರಸಿದ್ದ ಸೂಫಿಗಳು.

ಅಲ್ಲಾವುದ್ದೀನ್ ಖಿಲ್ಜಿಯ ದಂಡಯಾತ್ರೆ ಸಮಯದಲ್ಲಿ ಸೂಫಿ ಪಂಥ ಕರ್ನಾಟಕಕ್ಕೆ ಪರಿಚಯವಾಯಿತು. ತರುವಾಯ ಬಹುಮನಿಯ ಅರಸರು ದಖನ್‌ನಲ್ಲಿ ರಾಜ್ಯವಾಳಿದಾಗ ಇದು ಹೆಚ್ಚಿನ ಪ್ರಚಾರ ಮತ್ತು ಗೌರವ ಪಡೆಯಿತು. ಬೀದರ್, ಕಲ್ಬುರ್ಗಿ, ವಿಜಯಪುರ, ರಾಯಚೂರು, ಮೊದಲಾದವು ಸೂಫಿ ಕೇಂದ್ರಗಳಾದವು. ಹೈದರ್ ಮತ್ತು ಟಿಪ್ಪು ಕಾಲದಲ್ಲಿ ಮೈಸೂರು ಭಾಗದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿತು.

**ಸೂಫಿ ಪಂಥದ ಮುಖ್ಯ ತತ್ವಗಳು:**

1) ದೇವರು ಒಬ್ಬನೇ. ಅವನು ಸರ್ವ ಶಕ್ತಿಶಾಲಿ. ಜನರೆಲ್ಲಾ ಅವನ ಮಕ್ಕಳು.

2) ಎಲ್ಲಾ ಮಾನವರು ಸಮಾನರು.

3) ಉದಾರವಾದ ಚಿಂತನೆ.

4) ಮುಕ್ತಿಗೆ ಆದ್ಯತೆ.

5) ಎಲ್ಲಾ ಧರ್ಮಗಳು ಮೂಲಭೂತವಾಗಿ ಒಳ್ಳೆಯವೇ.

6) ಧರ್ಮ ಸಹಿಷ್ಣುತೆ ಮತ್ತು ಹಿಂಣದೂ ಮುಸ್ಲಿಂ ಐಕ್ಯತೆ.

**ಸೂಫಿ ಪಂಥದ ಪ್ರಮುಖ ಪಂಗಡಗಳು:**

1) ಚಿಸ್ತಿ ಪಂಗಡ

2) ಸುಹಾವದಿ ಪಂಗಡ

3) ಖಾದರಿ

4) ಷತ್ತಾರಿ

ಬಂದೇ ನವಾಜ್ ಕಲ್ಬುರ್ಗಿಯ ಪ್ರಸಿದ್ದ ಸೂಫಿಯಾಗಿದ್ದನು. ಬೀದರ್‌ನ ಬರಿದ್ ಷಾಹಿಗಳು 'ಖಾದರಿ' ಎಂಬ ಸೂಫಿ ಪಂಥಕ್ಕೆ ಬೆಂಬಲ ನೀಡಿದರು. ಬಿಜಾಪುರದ ಆದಿಲ್‌ಷಾಹಿಗಳು 'ಚಿಸ್ತಿ' ಪಂಗಡ ಬೆಂಬಲಿಸಿದರು. ಹಿಂದೂ ಮುಸ್ಲಿಂ ಸೌಹಾರ್ದ ಸಂಕೇತವಾಗಿರುವ 2ನೇ ಇಬ್ರಾಹಿಂ ಚಿಸ್ತಿ ಸೂಫಿಗಳೊಂದಿಗೆ ಹೆಚ್ಚು ಬೆರೆತಿದ್ದನು. ಬಿಜಾಪುರದ ಸೂಫಿಗಳಲ್ಲಿ 'ಏಕ್ ಅಮೀನುದ್ದೀನ್' ಜಯಪ್ರಿಯನಾದನು. ಬಾಬಾ ಬುಡನ್ ಗಿರಿಯ ಹಜರತ್ ಷಾ, ಬೆಳಗಾವಿಯ ಹಜರತ್ ಸಯದ್ ಷಾ, ಇಸ್ಲಾಂ ದೈವವಾಣಿ ಸಾರಿದರು.

ಬಂದೇನವಾಜ್ ಕಲ್ಬುರ್ಗಿಯ ಪ್ರಮುಖ ಸಂತ. ಇವರು ನಿಜಾಮುದ್ದೀನ್ ಚಿಸ್ತಿಯ ಶಿಷ್ಯ (ದೇವರ ಸೇವಕ). ಇವರು ರಚಿಸಿದ ಚೌಪದಿಗಳನ್ನು 'ರುಬಯಾತ್'ಗಳೆಂದು ಕರೆಯುತ್ತಾರೆ. ವೀರಶೈವ ಸಾಧುಸಂತರಾದ ಸಿದ್ದಪ್ಪಯ್ಯರೊಂದಿಗೆ ಒಡನಾಟ ಹೊಂದಿದ್ದರು. 'ವೀರಶೈವರ ಅಲ್ಲಮಪ್ರಭು'ವಿನೊಂದಿಗೆ ಅಲ್ಲಾನ ಸಮೀಕರಣ ಮಾಡಿದರು. ಇವರನ್ನು ದಖನ್ ಉರ್ದು ಸಾಹಿತ್ಯದ ಪಿತಾಮಹ ಎನ್ನುತ್ತಾರೆ.

ವಿಜಯಪುರದಲ್ಲಿ ಅನ್ವರ್ ಉದ್ದೀನ್ ಮತ್ತು 2ನೇ ಇಬ್ರಾಹಿಂ ಇದ್ದರು. ಮುಸ್ಲಿಂ ಹಿಂದೂ ಸೌಹಾರ್ದತೆಗೆ ಕಾರಣೀಭೂತರು. ಶಿಶುನಾಳ ಶರೀಫ ಮತ್ತು ಕರೀಮ್‌ಖಾನ್ ಕೂಡ ಪ್ರಮುಖರು.

ಇವರಿಂದ ಖವ್ವಾಲಿಗಳು (ಭಾವಗೀತೆ), ಕೀರ್ತನೆಗಳು ಉರ್ದು ಮತ್ತು ಕನ್ನಡದಲ್ಲಿ ರಚಿತವಾದವು. ಜಮಾಲುದ್ದೀನ್ ರೂಮಿ, ಅಮೀರ್ ಖುಸ್ರು ಮುಂತಾದ ಕೀರ್ತನಕಾರರಿದ್ದರು.

**ಮಹಿಳಾ ಸೂಫಿಗಳು:**

14ನೇ ಶತಮಾನದ ತರುವಾಯದ ಕಾಲದಲ್ಲಿ ಮಹಿಳಾ ಸೂಫಿಗಳು ಇದ್ದ ಬಗ್ಗೆ ಮಾಹಿತಿ ಸಿಗುತ್ತದೆ. 'ಅಜರತ್ ಮಾ ಸಾಹೇಬ' ಮೊದಲ ಮಹಿಳಾ ಸೂಫಿ. ರುಂಮಾಬೀ, ಮಸ್ತಾನಬೀಬಿ, ಸೈದಾನಿ–ಬಿ, ಮುಂತಾದವರು.

**ಚಿಕ್ಕದೇವರಾಜ ಒಡೆಯರ್, ಕೆಳದಿ ಮತ್ತು ಚಿತ್ರದುರ್ಗದ ನಾಯಕರು, ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಯಲಹಂಕದ ನಾಡಪ್ರಭು, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್:**

**1) ಚಿಕ್ಕದೇವರಾಜ ಒಡೆಯರ್‌ರವರ ಕೊಡುಗೆಗಳು:**

ಕರ್ನಾಟಕ ಚಕ್ರವರ್ತಿ, ಅಪ್ರತಿಮ ವೀರ, ತೆಂಕಣ ರಾಜ ಎಂಬ ಬಿರುದುಗಳಿಂದ ರಾರಾಜಿಸಿದ ಮೈಸೂರಿನ ಅಪ್ರತಿಮ ದೊರೆ. 1873ರಲ್ಲಿ ಪಟ್ಟಕ್ಕೆ ಬಂದ ಇವರು ಮೈಸೂರು ಸಾಮ್ರಾಜ್ಯವನ್ನು ಸಮರ್ಥವಾಗಿ ನಡೆಸಿಕೊಂಡು ಬಂದ ಅರಸರು. ರಾಜ್ಯ ವಿಸ್ತಾರ, ಆಡಳಿತ ಸುಧಾರಣೆ, ರಾಜ್ಯದ ಸಂಪತ್ತಿನ ಹೆಚ್ಚಳ ಹೀಗೆ ಹಲವಾರು ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದರು. ಇವರ ಕೊಡುಗೆಗಳನ್ನು ನೋಡುವುದಾದರೆ,

1) ಇವರು ಮಧುರೈ ಚೊಕ್ಕನಾಥ ನಾಯಕನ ಮೇಲೆ ಯುದ್ದ ಮಾಡಿ, ಸೋಲಿಸಿ ಮಳಲಿ, ಸೇಲಂ, ಸತ್ಯಮಂಗಲ, ಅನಂತಗಿರಿಯನ್ನು ಪಡೆದರು.

2) ಕೆಳದಿಯ ಚೆನ್ನಮ್ಮಳ ಹೋರಾಟವನ್ನು ಹಿಂದೆ ಸರಿಸಿದರು.

3) ಮರಾಠರೊಂದಿಗೆ ಸೆಣಸಿ ಗೆದ್ದು 'ಅಪ್ರತಿಮವೀರ' ಬಿರುದು ಪಡೆದರು.

4) ಬೆಂಗಳೂರನ್ನು 3 ಲಕ್ಷಕ್ಕೆ ಮೊಘಲ್ ಸರ್ದಾರ ಖಾಸೀಂಖಾನ್‌ನಿಂದ ಕೊಂಡುಕೊಂಡರು.

5) ಮೈಸೂರಿನಲ್ಲಿ ಪ್ರಥಮ ಬಾರಿಗೆ ಅಂಚೆ ಮತ್ತು ಪೋಲಿಸ್ ಪದ್ದತಿಗಳನ್ನು ಜಾರಿಗೆ ತಂದರು.

6) 18 ಇಲಾಖೆಗಳುಳ್ಳ 'ಆಠಾರ ಕಛೇರಿ'ಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. (ಚಾವಡಿ ಪದ್ಧತಿ ಎನ್ನುವರು).

7) ಶ್ರೀರಂಗಪಟ್ಟಣದಲ್ಲಿ ಪ್ರಬಲ ಅಸ್ತ್ರ ತಯಾರಿಕೆಗೆ ಒತ್ತು ಕೊಟ್ಟರು.

8) ಅವರು ತೆರಿಗೆ ವಸೂಲಿಯನ್ನು ಕ್ರಮಬದ್ಧಗೊಳಿಸಿದರು. ಹಾಗಾಗಿ 9 ಕೋಟಿ ಹಣ ಉಳಿಯುವಂತೆ ಮಾಡಿದರು. ಇದರಿಂದಾಗಿ ಇವರಿಗೆ ನವಕೋಟಿನಾರಾಯಣ ಎಂಬ ಬಿರುದು ಬಂದಿತು.

9) ಅಳತೆ ಮತ್ತು ತೂಕಗಳನ್ನು ಕ್ರಮಬದ್ಧಗೊಳಿಸಿದರು.

10) ನಿಯಂತ್ರಿತ ಮಾರುಕಟ್ಟೆ ಸ್ಥಾಪಿಸಿ ಕೈಗಾರಿಕೆ ಮತ್ತು ವ್ಯಾಪಾರಗಳಿಗೆ ಪ್ರೋತ್ಸಾಹವನ್ನು ಕೊಟ್ಟರು.

11) ಚಿಕ್ಕದೇವರಾಜನಾಲೆ ಮತ್ತು ದೊಡ್ಡದೇವರಾಜನಾಲೆ ಮತ್ತು ಶ್ರವಣಬೆಳಗೊಳದ ಕೆರೆಗಳನ್ನು ನಿರ್ಮಿಸಿದರು.

12) ಗ್ರಾಮಾಡಳಿತಕ್ಕಾಗಿ 'ಬಾರ್ಬೋಲಾತಿ' ಪದ್ಧತಿ ಜಾರಿ. ಇದರಲ್ಲಿ 12 ಜನ ವೃತ್ತಿ ಕುಶಲ ಕರ್ಮಿಗಳಿದ್ದರು.

ಇವರು ವೈಷ್ಣವರಾಗಿದ್ದು, ಮೇಲುಕೋಟೆಯ ಚೆಲುವನಾರಾಯಣರ ಭಕ್ತರಾಗಿ ವೈರಮುಡಿ ಉತ್ಸವ ನಡೆಸಿದರು. ಹಾಗೂ ಚಿಕ್ಕದೇವರಾಜ ಬಿನ್ನಪಂ ಕೃತಿ ಬರೆದರು.

ಇವರು ಆದಾಯವನ್ನು ಕವಿಗಳ ಮೇಲೆ ಬಹಳವಾಗಿ ವ್ಯಯ ಮಾಡುತಯ್ತಿದ್ದರು. ಇವರ ಆಶ್ರಯದಲ್ಲಿ ಅನೇಕ ಬರಹಗಾರರಿದ್ದು, ತಿರುಮಲಾಚಾರ್ಯ, ಸಿಂಗಾರಚಾರ್ಯ, ಸಂಚಿಹೊನ್ನಮ್ಮ, ಲಕ್ಷ್ಮೀಶ, ಚಿಕ್ಕೋಪಾಧ್ಯಾಯ ಪ್ರಮುಖರು.

ಆಧುನಿಕ ಮೈಸೂರಿನ ನಿರ್ಮಾಪಕರೆನಿಸಿದ ಇವರನ್ನು ಸತ್ಯ ಶ್ರೀ ವೈಷ್ಣವ ಪ್ರಿಯ, ವೈಷ್ಣವ ಮತ ಪ್ರವರ್ತಕ, ನವಕೋಟಿ ನಾರಾಯಣ, ಮಹಾರಾಷ್ಟ್ರ ಭೂಪಾಲ, ಜಾಲರಿಪು ತೆಂಕಣ ರಾಜ ಎಂಬುದಾಗಿ ಕರೆಯುತ್ತಾರೆ.

**ಕೆಳದಿ ನಾಯಕರು (1499–1773):**

ವಿಜಯನಗರ ಸಾಮ್ರಾಜ್ಯ ಅವನತಿಯ ನಂತರ ಪ್ರಬಲಗೊಂಡ ಅವರ ಸಾಮಂತ ರಾಜ್ಯಗಳಲ್ಲಿ ಕೆಳದಿ ಸಂಸ್ಥಾನವು ಒಂದು. ಕ್ರ.ಶ.1499ರಲ್ಲಿ ಅಸ್ತಿತ್ವಕ್ಕೆ ಬಂದು ಸುಮಾರು 250 ವರ್ಷಗಳ ಆಳ್ವಿಕೆ ನಡೆಸಿ ವಿಜಯನಗರ ಅರಸರಂತೆ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಿತು. ಶಿವಮೊಗ್ಗದ ಕೆಳದಿ ಇವರ ರಾಜಧಾನಿ. ಗಂಡಭೇರುಂಡ ಇವರ ರಾಜ್ಯ ಲಾಂಛನ.

ಇದರ ಸಂಸ್ಥಾಪಕರು 'ಚೌಡಪ್ಪ ಮತ್ತು ಭದ್ರಪ್ಪ' ಎಂಬ ವೀರಶೈವ ಸಹೋದರರು. ಇವರು ಕಿರುಕುಳ ನೀಡುತ್ತಿದ್ದ ಬೇಟೆಗಾರರ ಮತ್ತು ಮುಸ್ಲಿಂರ ಮೇಲೆ ಶೌರ್ಯ ಪ್ರದರ್ಶಿಸಿದ್ದನ್ನು ಕೇಳಿದ ವಿಜಯನಗರದ ಕೃಷ್ಣದೇವರಾಯನು ಇವರಿಗೆ ಕೆಳದಿ ಉಸ್ತುವಾರಿ ನೀಡಿ ಮಾಂಡಲೀಕನಾಗಿ ಮಾಡಿಕೊಂಡನು.

ಇವರ ನಂತರ ಇವರ ಮಕ್ಕಳಾದ ಸದಾಶಿವನಾಯಕ, ದೊಡ್ಡ ಸಂಕಣ್ಣ ನಾಯಕ, ವೆಂಕಟಪ್ಪ ನಾಯಕ ಆಳಿದರು. ಇದರಲ್ಲಿ ರಾಜಾವೆಂಕಟಪ್ಪ ನಾಯಕ ಪ್ರಮುಖನಾಗಿದ್ದಾನೆ. ಈತನು ಧೈರ್ಯಶಾಲಿಯಾಗಿದ್ದು ವಿಜಾಪುರ ಸೈನ್ಯವನ್ನು ಹಾನಗಲ್‌ನಲ್ಲಿ ಸೋಲಿಸಿದನು. ಪೋರ್ಚುಗೀಸರು, ಗೆರುಸೊಪ್ಪೆಯ ಭದ್ರಾದೇವಿ ಮುಂತಾದವರನ್ನು ಸೋಲಿಸಿದನು. ಬ್ರಿಟೀಷ್ ಮತ್ತು ಪೋರ್ಚುಗೀಸ್ ನಡುವೆ ರಾಜತಾಂತ್ರಿಕ ಸಂಬಂಧ ಸ್ಥಾಪಿಸಿದನು. ಶೃಂಗೇರಿಯಲ್ಲಿ ಒಂದು ಮಠವನ್ನು ಸ್ಥಾಪಿಸಿ 'ಶೃಂಗೇರಿಯ ಪುನರ್‌ನಿರ್ಮಾಪಕ' ಎಂದು ಬಿರುದು ಪಡೆದನು.

ನಂತರ ಬಂದ ಶಿವಪ್ಪ ನಾಯಕ ಕೆಳದಿಯ ಅರಸರಲ್ಲೇ ಶ್ರೇಷ್ಠ ದೊರೆ. ಇವರ ಸಾಧನೆಗಳೆಂದರೆ,

1) ಇವನು ಬಾಲಂ ಪಾಳೇಗಾರರನ್ನು ಸೋಲಿಸಿ, ಸೊರಬ, ತುರುವೀಕೆರೆ, ಹಾಸನ, ಹೊಳೇನರಸೀಪುರ ಗೆದ್ದನು.

2) ಮಲಬಾರಿನಲ್ಲಿ ಡಚ್ಚರು, ಇಂಗ್ಲೀಷರನ್ನು ಸೋಲಿಸಿದನು.

3) ವಿಜಯನಗರದ ಅರಸ ಶ್ರೀರಂಗರಾಯನಿಗೆ ಆಶ್ರಯ.

4) ಮೈಸೂರಿನ ದೊಡ್ಡದೇವರಾಜರ ರುದ್ದ ಹೋರಾಟ.

5) ಭೂ ಸುಧಾರಣೆ ಜಾರಿಗೆ ತಂದನು. 'ಶಿವಪ್ಪ ನಾಯಕನ ಶಿಸ್ತು' ಎಂದೇ ಕರೆಯಲಾಗುತ್ತದೆ.

## ಚೆನ್ನಮ್ಮಾಜಿ:

ಕೆಳದಿ ಸಂಸ್ಥಾನದ ಶೂರ ಮಹಿಳೆ. ಬಿಜಾಪುರ ಸುಲ್ತಾನನೊಂದಿಗೆ ಮೈತ್ರಿ ಸಾಧಿಸಿ ರಾಜ್ಯದ ಗಡಿಗಳನ್ನು ಭದ್ರಪಡಿಸಿದಳು. ಹಾಸನದ ಬಳಿ ಮೈಸೂರಿನ ಸೈನ್ಯವನ್ನು ಸೋಲಿಸಿದಳು. ಔರಂಗಜೇಬ್‌ನಿಂದ ಸೋತ ಛತ್ರಪತಿ ರಾಜಾರಾಮನಿಗೆ ಕೆಳದಿಯಲ್ಲಿ ಆಶ್ರಯ ಕೊಟ್ಟು ಇದೇ ಕಾರಣಕ್ಕೆ ಔರಂಗಜೇಬ್‌ನೊಂದಿಗೆ ಹೋರಾಡಿದಳು.

ಚೆನ್ನಮ್ಮಾಜಿಯ ನಂತರದ ಅರಸರು ಅಶಕ್ತರಾಗಿದ್ದ ಕಾರಣ ಮರಾಠರ ನಿರಂತರ ದಾಳಿಗೆ ತುತ್ತಾಯಿತು. 1763ರಲ್ಲಿ ಹೈದರಾಲಿ ಬಿದನೂರನ್ನು ಮುತ್ತಿ ಮೈಸೂರಿಗೆ ಸೇರಿಸಿಕೊಂಡನು.

**ಕೆಳದಿ ಅರಸರ ಕೊಡುಗೆಗಳು:**

1) ಆಡಳಿತ: ಇವರು ವಿಜಯನಗರ ಅರಸರ ಆಡಳಿತ ಕ್ರಮವನ್ನು ಮುಂದುವರೆಸಿದರು. ಇವರು ಬೆಳ್ಳಿ, ಬಂಗಾರ, ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದರು. ವಿದೇಶದೊಮದಿಗೆ ವ್ಯಾಪಾರ ಸಂಬಂಧವಿತ್ತು. ಭೂಕಂದಾಯ ವ್ಯವಸ್ಥೆ ಶಿಸ್ತಾಗಿತ್ತು.

2) ಸಾಹಿತ್ಯ: ಲಿಂಗಣ್ಣನು 'ಕೆಳದಿನೃಪವಿಜಯ' ಮತ್ತು ಬಸವಪ್ಪ ನಾಯಕರು 'ಶಿವತತ್ವ ರತ್ನಾಕರ' ಕೃತಿ ರಚಿಸಿದರು.

3) ಧರ್ಮ: ವೀರಶೈವರಾದ ಇವರು ಧರ್ಮಸಹಿಷ್ಣುಗಳು. ಎಲ್ಲಾ ಧರ್ಮಕ್ಕೂ ಸಮಾನ ಆಶ್ರಯ ನೀಡಿದರು.

4) ಕಲೆ ಮತ್ತು ವಾಸ್ತುಶಿಲ್ಪ: ಇವರ ಪ್ರಮುಖ ದೇವಾಲಯಗಳು, ಕೊಲ್ಲೂರು, ಕೆಳದಿ, ಬಿದನೂರು, ಇಕ್ಕೇರಿಗಳಲ್ಲದೆ ಚೆನ್ನಗಿರಿಯ 7 ಸುತ್ತಿನ ಕೋಟೆ ಪ್ರಮುಖವಾಗಿದೆ. ವಿಜಯನಗರ ಅರಸರಂತೆ ಗೋಡೆರಹಿತ ಮಂಟಪಗಳ ನಿರ್ಮಾಣ ಮತ್ತು ತೂತುಗಳುಳ್ಳ ರಂಧ್ರಗಳ ಕಿಟಕಿ ನಿರ್ಮಾಣ ಇವರ ಶೈಲಿಯ ಲಕ್ಷಣವಾಗಿವೆ.

## ಚಿತ್ರದುರ್ಗದ ನಾಯಕರು ಅಥವಾ ಪಾಳೇಗಾರರು 1824:

ವಿಜಯನಗರದ ಕಾಲದಲ್ಲಿ ಅವರ ಸಾಮಂತರಾಗಿ ಅಸ್ತಿತ್ವಕ್ಕೆ ಬಂದ ಚಿತ್ರದುರ್ಗದ ಪಾಳೇಗಾರರು ಸುಮಾರು 211 ವರ್ಷ ಆಳಿದರು. ಇವರು ಬೇಡ ಕುಲಕ್ಕೆ ಸೇರಿದ್ದು ಅತ್ಯಂತ ಧೈರ್ಯ ಮತ್ತು ಸಾಹಸಕ್ಕೆ ಹೆಸರಾಗಿದ್ದರು. ಚಿತ್ರದುರ್ಗ ಇವರ ರಾಜಧಾನಿಯಾಗಿತ್ತು. ಚಂದ್ರವಳ್ಳಿ ಅಥವಾ ಫರೂಕಾಬಾದ್ ಚಿತ್ರದುರ್ಗದ ಪ್ರಾಚೀನ ಹೆಸರುಗಳು.

ವಾಲ್ಮೀಕಿ ವಂಶದವರೆಂದು ಕರೆದುಕೊಂಡಿರುವ ಇವರು ತಮ್ಮನ್ನು ಕಾಮಗೇತಿ ನಾಯಕರೆಂದು ಗುರುತಿಸಿಕೊಳ್ಳುತ್ತಿದ್ದರು. ದಾವಣಗೆರೆ ತಾಲ್ಲೂಕಿನ 'ಮತ್ತಿಯ ತಿಮ್ಮಣ್ಣ ನಾಯಕ' ಈ ವಂಶದ ಸ್ಥಾಪಕ. ಇವರ ಧೈರ್ಯ ಸಾಹಸ ಮೆಚ್ಚಿ ವಿಜಯನಗರದ ಸಾಳುವ ನರಸಿಂಹನು ಇವನಿಗೆ ಹೊಳಲಕೆರೆ, ಹಿರಿಯೂರನ್ನು ಕೊಟ್ಟು ಸಾಮಂತನನ್ನಾಗಿ ಮಾಡಿಕೊಂಡಿದ್ದನು. ಆದರೆ ಇವನು ಗುಲ್ಬರ್ಗಾ ಗೆದ್ದು ವಿಜಯನಗರಕ್ಕೆ ಅಗೌರವ ತೋರಿ ಬಂಧಿತನಾಗಿ ಅಲ್ಲೇ ಸತ್ತನು.

ತಿಮ್ಮಪ್ಪನ ನಂತರ ಬಂದ ರಾಜರುಗಳು ಸಮರ್ಥರಾಗಿರಲಿಲ್ಲ. (ಓಬಣ್ಣ ನಾಯಕ). ಕಸ್ತೂರಿ ರಂಗಪ್ಪ ನಾಯಕ, 3ನೇ ಮದಕರಿ, 4ನೇ ಮದಕರಿ ಇತ್ಯಾದಿ. ನಂತರ ಬಂದಂತಹ 5ನೇ ಮದಕರಿ ಸಮರ್ಥ ನಾಯಕನಾಗಿದ್ದನು. ಇವನು ಅಪ್ರತಿಮ ವೀರನಾಗಿದ್ದು ಅಪಾರ ಧೈರ್ಯ, ಸಾಹಸ ಹಾಗೂ ದೇಶಭಕ್ತಿಗೆ ಹೆಸರಾದವನು. 12 ವರ್ಷಕ್ಕೆ ಅಧಿಕಾರಕ್ಕೆ ಬಂದ ಈತ ಮರಾಠರ, ಹೈದರಾಲಿ ದಾಳಿ ತಪ್ಪಿಸಲು ಕೋಟೆಯನ್ನು

ಭದ್ರಪಡಿಸಿದ. ಚಿತ್ರದುರ್ಗಕ್ಕೆ 7 ಸುತ್ತಿನ ಕೋಟೆಯನ್ನು ನಿರ್ಮಿಸಿ ಕೋಟೆಯಲ್ಲಿ ಶಸ್ತ್ರಾಗಾರ ತಯಾರಿಕಾ ಘಟಕವನ್ನು ಸ್ಥಾಪಿಸಿ ಸಿಡ್ಡುಮದ್ದು, ಗುಂಡು ಸಂಗ್ರಹಿಸಿ ಸೈನಿಕರಿಗೆ ತರಬೇತಿ ನೀಡಿದ.

ರಾಯದುರ್ಗದ ಕೃಷ್ಣಪ್ಪ, ಹೈದರಾಲಿಯೊಡನೆ ಹೋರಾಟ ನಂತರ ಹೈದರಾಲಿಗೆ ಮಿತ್ರನಾದನು. ಕ್ರಿ.ಶ.1763ರಲ್ಲಿ ಹೈದರಾಲಿ ಬಿದನೂರಿನ ಮೇಲೆ ದಾಳಿ ಮಾಡಿದಾಗ ಮದಕರಿ ನಾಯಕ ಹೈದರಾಲಿಗೆ ಸಹಾಯ ಮಾಡಿದ. ಮರಾಠರು ಮೈಸೂರಿನ ಮೇಲೆ ದಾಳಿ ಮಾಡಿದಾಗ ಮದಕರಿ ತನ್ನ ಗೆರಿಲ್ಲಾ ಸೈನಿಕರಿಂದ ಮರಾಠರನ್ನು ಹಿಮ್ಮೆಟ್ಟಿಸಿದ್ದು, ಹೀಗೆ ಹಲವಾರು ಸಂದರ್ಭದಲ್ಲಿ ಹೈದರಾಲಿಗೆ ಸಹಾಯ ಮಾಡಿದ್ದ. ತದನಂತರ ಮದಕರಿ ಮರಾಠರನ್ನು ಸೇರಿಕೊಂಡ. ಇದರಿಂದ ಕುಪಿತನಾದ ಹೈದರಾಲಿ ಚಿತ್ರದುರ್ಗ ಕೋಟೆಗೆ ಆಕ್ರಮಣ ಮಾಡಿದಾಗ 'ಒನಕೆ ಓಬವ್ವ' ವೀರಾವೇಶ ತೋರಿ ಹೋರಾಡಿ ಗೆದ್ದಳು. ಒಳಸಂಚಿನಿಂದ ಮದಕರಿಯನ್ನು ಹೈದರಾಲಿ ಬಂಧಿಸಿದನು. ಈತ ಕ್ರಿ.ಶ.1779ರಲ್ಲಿ ನಿಧನನಾದನು. ಹೀಗೆ ಸೈನಿಕರ ವಿದ್ರೋಹದಿಂದ ಚಿತ್ರದುರ್ಗದ ಪತನವಾಗಿ ಹೈದರಾಲಿ ಕೈ ಸೇರಿತು.

ಒಟ್ಟಾರೆಯಾಗಿ ಚಿತ್ರದುರ್ಗವನ್ನು ಅಭೂತಪೂರ್ವ ಕೋಟೆಯಾಗಿ ಮದಕರಿ ನಾಯಕ ನಿರ್ಮಿಸಿದನು. ಈ ರಾಜ್ಯವು ಕಟ್ಟಣೆ ಕಲ್ಲುಗಳ ಗಣಿಗಾರಿಕೆಗೆ ಪ್ರಸಿದ್ಧವಾಗಿತ್ತು.

## ಯಲಹಂಕದ ನಾಡಪ್ರಭುಗಳು: 1400–1728

ವಿಜಯನಗರ ಅರಸರ ಸಾಮಂತರಾಗಿ ಯಲಹಂಕವನ್ನಾಳಿದ ಈ ಪ್ರಭುಗಳು ಕ್ರಿ.ಶ.1418ರಿಂದ 1728ರವರೆಗೆ ಆಳಿದರು. ಯಲಹಂಕ, ಬೆಂಗಳೂರು, ಮಾಗಡಿಗಳು ಇವರ ರಾಜಧಾನಿಗಳು. 'ಕೆಂಪಮ್ಮ' ಅವರ ಮನೆದೇವತೆ. ಕ್ರಿ.ಶ.1728ರಲ್ಲಿ ಒಡೆಯರ್ ದೊಡ್ಡಕೃಷ್ಣರು ಈ ಸಾಮ್ರಾಜ್ಯವನ್ನು ಅಂತ್ಯಗೊಳಿಸಿದರು. ಯಲಹಂಕ ನಾಡಪ್ರಭುಗಳ ಮೂಲಪುರುಷ 'ರಣಬೈರೇಗೌಡ'.

**1ನೇ ಕೆಂಪೇಗೌಡ:**

'ಬೆಂಗಳೂರು ಸಂಸ್ಥಾಪಕ' ಎಂದೇ ಬಿರುದಾಂಕಿತನಾದ ಈತ ಈ ವಂಶದ ಶ್ರೇಷ್ಠವೀರ. ಇವನು ಬೆಂಗಳೂರನ್ನು ಕ್ರಿ.ಶ.1537ರಲ್ಲಿ ಸ್ಥಾಪಿಸಿದನು. 4 ದಿಕ್ಕಿಗೆ 4 ವೀಕ್ಷಣಾ ಗೋಪುರ ನಿರ್ಮಿಸಿದನು. ಉತ್ತರಕ್ಕೆ ಯಲಹಂಕ, ದಕ್ಷಿಣಕ್ಕೆ ಲಾಲ್‌ಬಾಗ್, ಪೂರ್ವಕ್ಕೆ ಅಲಸೂರು, ಪಶ್ಚಿಮಕ್ಕೆ ಸೊಂಡೆಕೊಪ್ಪಗಳಿವೆ. ಇವರು ಕೆಂಪಮ್ಮನ ಹೆಸರಿನಲ್ಲಿ ಕೆಂಪಾಬುದಿ ಕೆರೆಯನ್ನು, ಮಾಗಡಿ ಕೋಟೆಯನ್ನು, ನಿರ್ಮಾಣ ಮಾಡಿದರು. ಶಿವಗಂಗೆಯಲ್ಲಿ ಗಂಗಾಧರೇಶ್ವರ ಗುಡಿ ನಿರ್ಮಿಸಿದರು. ಇದನ್ನು ದಕ್ಷಿಣ ಕಾಶಿ ಎನ್ನುತ್ತಾರೆ.

**2ನೇ ಕೆಂಪೇಗೌಡ:**

ಇವನು ಅನೇಕ ದೇವಾಲಯ, ಅಗ್ರಹಾರ ಮತ್ತು ಕೆರೆಗಳನ್ನು ನಿರ್ಮಿಸಿ ಬೆಂಗಳೂರನ್ನು ಸುಂದರಗೊಳಿಸಿದನು. ಮಾಗಡಿ ಇವನ ರಾಜಧಾನಿಯಾಯಿತು. ಇವನಿಂದ ಬಿಜಾಪುರದ ಸೇನಾನಿ 'ರಣದುಲ್ಲಾಖಾನ್' ಬೆಂಗಳೂರನ್ನು ಕಿತ್ತುಕೊಂಡನು. ಕುಣಿಗಲ್‌ನಲ್ಲಿ ಈತನ ಮಲತಾಯಿ ಕೃಷ್ಣಸಾಗರ ಎಂಬ ಜಲಾಶಯ ಕಟ್ಟಿದಳು.

ನಂತರ ಬಂದ 3ನೇ ಕೆಂಪೇಗೌಡ ಉದಾರಿ ಮತ್ತು ಧರ್ಮ ನಿಷ್ಠ. ಬರಗಾಲವಿದ್ದಾಗ ದೇವರನ್ನು ಪ್ರಾರ್ಥಿಸಿ ಮಳೆತಂದಿದ್ದರಿಂದ 'ಮಳೆಕೆಂಪರಾಯ' ಎಂದು ಬಿರುದು ಇತ್ತು. ಇವನು ಮಾಗಡಿಯಲ್ಲಿ ವೀರಭದ್ರಗುಡಿ ಮತ್ತು ಕೆಂಪಸಾಗರ ನಿರ್ಮಿಸಿದ್ದನು.

ಮೈಸೂರಿನ ನಂಜರಾಜ ಕ್ರಿ.ಶ.1728ರಲ್ಲಿ ಕೆಂಪವೀರಪ್ಪನನ್ನು ಬಂಧಿಸಿದ. ಇಲ್ಲಿಗೆ ಇವರ ಆಡಳಿತ ಅಂತ್ಯವಾಯಿತು.

## ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ:

ಕಿತ್ತೂರು ಬೆಳಗಾವಿ ಜಿಲ್ಲೆಯ ಒಂದು ಚಿಕ್ಕ ಸಂಸ್ಥಾನ. ದೇಸಾಯಿಗಳು ಇದನ್ನು ಆಳುತ್ತಿದ್ದರು. ದೇಸಾಯಿ ಮಲ್ಲಸರ್ಜನಿಗೆ 'ರುದ್ರಮ್ಮ ಮತ್ತು ಚೆನ್ನಮ್ಮ' ಎಂಬ ಪತ್ನಿಯರಿದ್ದರು. ಮಲ್ಲಸರ್ಜ ಕ್ರಿ.ಶ.1816ರಲ್ಲಿ

ತೀರಿಕೊಂಡಾಗ ಶಿವಲಿಂಗ ರುದ್ರಸರ್ಜ ಅದರ ಒಡೆಯನಾದನು. ಇವನು ಆಂಗ್ಲರಿಗೆ ನಿಷ್ಠೆಯಿಂದ ಇದ್ದನು. ಆದರೆ ಇವನು ಗಂಡುಸಂತಾನವಿಲ್ಲದೇ ಕ್ರಿ.ಶ.1824ರಲ್ಲಿ ನಿಧನರಾದಾಗ ಕಿತ್ತೂರು ಬಡವಾಯಿತು. ಆಗ ರಾಜ್ಯ ಸೂತ್ರವಿಡಿದ ಚೆನ್ನಮ್ಮ ಕಿತ್ತೂರು ಪರಕೀಯರ ಕೈಸೇರುವುದನ್ನು ತಪ್ಪಿಸಲು ಬಾಳಪ್ಪಗೌಡರ ಮಗ 'ಶಿವಲಿಂಗಪ್ಪ'ನನ್ನು ದತ್ತು ತೆಗೆದುಕೊಂಡರು. ಇದಕ್ಕೆ ಧಾರವಾಡದ ಕಲೆಕ್ಟರ್ 'ಥ್ಯಾಕರೆ' ದತ್ತುಪುತ್ರರಿಗೆ ಹಕ್ಕಿಲ್ಲವೆಂಬ ನೀತಿ ಜಾರಿ ಮಾಡಿ ಖಜಾನೆಗೆ ಬೀಗಮುದ್ರೆ ಹಾಕಿಸಿದನು. ಇದರಿಂದಾಗಿ 1824ರಲ್ಲಿ ಅಕ್ಟೋಬರ್‌ನಲ್ಲಿ ಯುದ್ಧವಾಯಿತು. 'ಥ್ಯಾಕರೆ' ಹತನಾದನು. ಆಗ ಅಮಟೂರು ಬಾಳಪ್ಪ, ಗುರುಸಿದ್ದಪ್ಪ, ರಾಯಣ್ಣ, ಚೆನ್ನಮ್ಮನಿಗೆ ನೆರವಾದರು.

ಚೆನ್ನಮ್ಮನಿಂದ ಆದ ಸೋಲಿನ ಅವಮಾನವನ್ನು ಸಹಿಸದ ಬ್ರಿಟೀಷರು ಬಾಂಬೆ, ಮರಾಠಾ ಮತ್ತು ಸ್ಥಳೀಯ ಸೈನ್ಯದ ನೆರವಿನಿಂದ 'ಚಾಪ್ಲಿನ್' ನೇತೃತ್ವದಲ್ಲಿ ದಾಳಿ ಮಾಡಿತು. ದೇಶದ್ರೋಹಿ ರಾಣಿ ರುದ್ರಮ್ಮ, ಮಲ್ಲಪ್ಪ ಶೆಟ್ಟಿ, ಮದ್ದಿನ ಸಂಗ್ರಹಕ್ಕೆ ಸಗಣಿ ನೀರು ಬೆರೆಸಿದರು. ಚೆನ್ನಮ್ಮ ಶತ್ರುವಿನ ವಶವಾದಳು. ಬೈಲಹೊಂಗಲದಲ್ಲಿ ಬಂಧಿಸಲಾಯಿತು. ಕ್ರಿ.ಶ.1829ರಲ್ಲಿ ನಿಧನವಾದಳು.

## ರಾಯಣ್ಣ ದಂಗೆ (1830):

ಈತ ಚೆನ್ನಮ್ಮಳ ನಿಷ್ಠಾವಂತ ಸೇವಕ. ಶಿವಲಿಂಗಪ್ಪನನ್ನು ಪುನ: ಕಿತ್ತೂರಿನ ಸಿಂಹಾಸನಕ್ಕೆ ತರುವುದೇ ಈತನ ಉದ್ದೇಶವಾಗಿತ್ತು. ಸೈನ್ಯಕಟ್ಟಿ, ಬಿಳಿಯರನ್ನು ಕೊಲೆಮಾಡಿ, ಅವರ ಮನೆಗಳಿಗೆ ಬೆಂಕಿ ಇಟ್ಟನು. ಇವನೊಂದಿಗೆ ನೇರಯುದ್ಧ ಅಸಾಧ್ಯವೆಂದು ಬ್ರಿಟೀಷರು ಇವನ ಮಿತ್ರ 'ಬಾಳಪ್ಪ ರಂಗಣ್ಣಗೌಡ'ರ ನೆರವಿನಿಂದ ಕ್ರಿ.ಶ.1831ರಲ್ಲಿ ಬಂಧಿಸಿ ನಂದಗಡದಲ್ಲಿ ಗಲ್ಲಿಗೇರಿಸಿದರು.

'ಕಿತ್ತೂರಿನ ಉಪ್ಪು ತಿಂದಿರುವೆ, ಅದರ ಋಣ ತೀರಿಸದೇ ಸಾಯಲಾರೆ' ಎನ್ನುತ್ತಿದ್ದ ಈತ ಪರಾಕ್ರಮಕ್ಕೆ ಮತ್ತೊಂದು ಹೆಸರಾಗಿದ್ದ.

## ಹೈದರಾಲಿ ಮತ್ತು ಟಿಪ್ಪು ಸುಲ್ತಾನ (1761–1799):

ಹೈದರಾಲಿಯು ಕರ್ನಾಟಕದ ಹಾಗೂ ಭಾರತದ ಇತಿಹಾಸದಲ್ಲೇ ಗಣ್ಯನಾದ ಒಬ್ಬ ವ್ಯಕ್ತಿ. ತನ್ನ ಕತೃತ್ವ ಶಕ್ತಿಯಿಂದಲೇ ಅಧಿಕಾರಕ್ಕೆ ಬಂದ. ಅವನು ಮೈಸೂರು ರಾಜ್ಯವನ್ನು ಅನೇಕ ಪಟ್ಟು ಬೆಳೆಸಿದನು. ಕ್ರಿ.ಶ.1760ರಿಂದ 1799ರವರೆಗೆ ಮಧ್ಯಂತರದಲ್ಲಿ ಮುಸ್ಲಿಂ ಪ್ರಭುತ್ವವು ಸ್ಥಾಪನೆಗೊಂಡು ಮೈಸೂರಿನ ಚರಿತ್ರೆಯಲ್ಲಿ ಉಜ್ವಲ ಅಧ್ಯಾಯವೊಂದು ಪ್ರಾರಂಭಗೊಂಡಿತು.

ದಳವಾಯಿ ನಂಜರಾಜನ ಸೇನೆಯಲ್ಲಿ ಸಾಧಾರಣ ಸೇನಾನಿಯಾಗಿದ್ದು, ಹೈದರ್ ಕ್ರಿ.ಶ.1749ರ ದೇವನಹಳ್ಳಿ ಯುದ್ಧದಲ್ಲಿ ಅಪಾರ ಶೌರ್ಯ ಮೆರೆದು, ನಂಜರಾಜನ ಪ್ರೀತಿಗೆ ಪಾತ್ರನಾದನು. ಕ್ರಿ.ಶ.1750ರಲ್ಲಿ ದಿಂಡಿಗಲ್‌ನ ಫೌಜುದಾರನಾಗಿ ನೇಮಕ. ನಂತರ ಬೆಂಗಳೂರಿನಲ್ಲಿ ಮರಾಠರ ಸೋಲಿಗೆ ಕಾರಣನಾಗಿ ರಾಜನ ಪ್ರೀತಿಗೆ ಪಾತ್ರನಾದನು. ಸೈನಿಕರಿಗೆ ಸಂಬಳ ಕೊಡಲಾಗದೇ ರಾಜಧಾನಿಯಲ್ಲಿ ಸೈನಿಕರ ಬಂಡಾಯ ಕಾಣಿಸಿಕೊಂಡಾಗ ನಂಜರಾಜನನ್ನು ನಿವೃತ್ತಿಗೊಳಿಸಿ ತಾನೇ ಅಧಿಕಾರಕ್ಕೆ ಬಂದು ನೆಪಮಾತ್ರಕ್ಕೆ ಕೃಷ್ಣರಾಜ ಒಡೆಯರನ್ನು ಅಧಿಕಾರದಲ್ಲಿಟ್ಟು ತಾನೇ ನಿರಂಕುಶ ಆಡಳಿತ ಶುರು ಮಾಡಿದನು. ನಂತರ ಮೊದಲು ಸಣ್ಣರಾಜ್ಯಗಳಾದ ಹೈದರಾಬಾದ್, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಮುದುಗಲ್, ಬಂಕಾಪುರ ಗೆದ್ದನು.

ನಂತರ ಕೇರಳದ ಮೇಲೆ ದಾಳಿ, ಚಿತ್ರದುರ್ಗದ ಆಕ್ರಮಣ, ಮರಾಠರೊಂದಿಗೆ ಕಾದಾಡಿ ಸಾಮ್ರಾಜ್ಯ ವಿಸ್ತರಿಸಿದನು. ಇವನ ಪ್ರಮುಖವಾದ ಹೋರಾಟಗಳೆಂದರೆ 'ಆಂಗ್ಲೋ–ಮೈಸೂರು' ಯುದ್ಧಗಳು.

## 1ನೆಯ ಆಂಗ್ಲೋ–ಮೈಸೂರು ಯುದ್ಧ (1767–1769):

ಕ್ರಿ.ಶ. 1767ರಲ್ಲಿ ನಿಜಾಮ ಮತ್ತು ಮರಾಠರೊಂದಿಗೆ ತ್ರಿಕೂಟ ರಚಿಸಿ ಹೈದರ್ ವಿರುದ್ಧ ಹೋರಾಟ (ಕೋಲ್‌ಸ್ಮಿತ್ ನಾಯಕತ್ವ). ಕ್ರಿ.ಶ.1769ರಲ್ಲಿ ಬ್ರಿಟೀಷರು ಹೈದರಾಲಿಗೆ ಶರಣಾಗಿ ಏಪ್ರಿಲ್ 4, 1769ರಂದು 'ಮದ್ರಾಸ್ ಒಪ್ಪಂದ'ವಾಯಿತು. ಹೀಗೆ ಭಾರತದ ಮಣ್ಣಲ್ಲಿಯೇ ಅಜಯರಾಗಿದ್ದ ಬ್ರಿಟೀಷರನ್ನು ಸೋಲಿಸಿದ ಮೊದಲ ದೇಶಿಯ ರಾಜ ಇವನಾದ.

## 2ನೇ ಆಂಗ್ಲೋ ಮೈಸೂರು ಯುದ್ಧ (1780–84):

ಬ್ರಿಟೀಷರ ವಿರುದ್ಧ ನಿಜಾಮ ಹಾಗೂ ಮರಾಠರು ಸ್ಥಾಪಿಸಿದ ಒಕ್ಕೂಟವನ್ನು 1780ರಲ್ಲಿ ಹೈದರ್ ಸೇರಿಸಿಕೊಂಡ. 'ತಡೆಯಲಾರದ ಪ್ರವಾಹದಂತೆ' 80000 ಸೈನಿಕರೊಂದಿಗೆ ನುಗ್ಗಿದ್ದ ಹೈದರ್ ಅರ್ಕಾಟ ಮುತ್ತಿಗೆ ಹಾಕಿದ. ಆದರೆ 1782ರಲ್ಲಿ ಬೆನ್ನುಪನ್ನಿ ಜಾಡ್ಯದಿಂದ ತೀರಿಕೊಂಡಾಗ ಟಿಪ್ಪು ಯುದ್ಧವನ್ನು ಮುಂದುವರೆಸಿದ. 1784ರಲ್ಲಿ 'ಮಂಗಳೂರು ಒಪ್ಪಂದ'ದೊಂದಿಗೆ ಯುದ್ಧ ಅಂತ್ಯ.

ಹೀಗೆ ಹೈದರಾಲಿಯು ಆಡಳಿತ ಚತುರನಾಗಿ ಆದಾಯವನ್ನು 40 ಲಕ್ಷದಿಂದ 1 ಕೋಟಿ 10 ಲಕ್ಷಕ್ಕೆ ಏರಿಸಿದನು. ಸಾಮ್ರಾಜ್ಯವನ್ನು 6 ಪೌಜ ಪ್ರಾಂತವಾಗಿ ವಿಂಗಡಿಸಿದ್ದನು. 'ಬಹುದೂರಿ' ಎಂಬ ನಾಣ್ಯ ಚಲಾವಣೆಗೆ ತಂದನು. ಗುತ್ತಿ, ಚಿತ್ರದುರ್ಗ, ಶ್ರೀರಂಗಪಟ್ಟಣ, ಬಿದನೂರಿನಲ್ಲಿ ಟಂಕ ಶಾಲೆ ತೆರೆದನು. ಶ್ರೀರಂಗಪಟ್ಟಣದಲ್ಲಿ ದರಿಯಾ ದೌಲತ್ ಅರಮನೆ, ಲಾಲ್‌ಬಾಗ್ ತೋಟ ನಿರ್ಮಿಸಿದನು.

## ಟಿಪ್ಪು ಸುಲ್ತಾನ್ (ಮೊದಲ ಹೆಸರು – ಫತೇ ಅಲಿಖಾನ್):

ಯುದ್ಧರಂಗವೆಂದರೆ ಇವನಿಗೆ ಆಟದ ಮೈದಾನದಂತಿತ್ತು. ಬಾಲ ಪಾಳೇಗಾರನನ್ನು ಚಿಕ್ಕವಯಸ್ಸಿನಲ್ಲೇ ಸೋಲಿಸಿದ್ದನು. ವಾಂಡಿವಾಷ್ ಯುದ್ಧದಲ್ಲಿ ಬ್ರಿಟೀಷರನ್ನು ಸೋಲಿಸಿದ್ದನು.

ಹೈದರ್‌ನ ಮರಣದ ನಂತರ ಮಂಗಳೂರು ಒಪ್ಪಂದದೊಂದಿಗೆ 2ನೇ ಆಂಗ್ಲೋ ಮೈಸೂರು ಯುದ್ಧ ಮುಕ್ತಾಯವಾಯಿತು.

1786–87ರಲ್ಲಿ ಮೈಸೂರು ಮರಾಠ ಯುದ್ಧದಲ್ಲಿ ಟಿಪ್ಪು ಗೆದ್ದು 1786ರಲ್ಲಿ ನಿಜಾಮ ಮತ್ತು ಮರಾಠರೊಂದಿಗೆ ಗಜೇಂದ್ರಗಡ ಒಪ್ಪಂದಕ್ಕೆ ಸಹಿ ಹಾಕಿದನು.

ನಂತರ ಟಿಪ್ಪು ವಿರುದ್ಧ ಕೊಡಗಿನಲ್ಲಿ ಜನದಂಗೆ ಎದ್ದರು. ಟಿಪ್ಪು ಈ ದಂಗೆ ಅಡಗಿಸಿ ಸಾವಿರಾರು ಹಿಂದೂ ಮತ್ತು ಕ್ರೈಸ್ತರನ್ನು ಬಲಾತ್ಕಾರವಾಗಿ ಇಸ್ಲಾಂಗೆ ಮತಾಂತರಿಸಿದನು. ದೊಂಡಿಯ ವಾಘ ಕೂಡ ಬಂಧಿತನಾದನು.

ಇವನು ಬಾಲಂ, ಸಾತಾಗಿರಿ ಮತ್ತು ಮುಜರಾಬಾದ್ ಕೋಟೆ ನಿರ್ಮಿಸಿದನು. ಬ್ರಿಟೀಷರೊಂದಿಗೆ ಟಿಪ್ಪುವಿನ ಕಾಳಗ:

## 3ನೇ ಆಂಗ್ಲೋ ಮೈಸೂರು ಯುದ್ಧ (1790–92):

ಲಾರ್ಡ್ ಕಾನ್‌ವಾಲೀಸನು ಟಿಪ್ಪುವನ್ನು ಸೋಲಿಸಲು ಮರಾಠ ಮತ್ತು ಹೈದ್ರಾಬಾದ್‌ನ ನಿಜಾಮನೊಂದಿಗೆ ತ್ರಿಕೂಟ ರಚಿಸಿ ಯುದ್ಧ ಸಾರಿದನು. ಇಲ್ಲಿ ಟಿಪ್ಪು ಸೋತು 1792ರಲ್ಲಿ ಶ್ರೀರಂಗಪಟ್ಟಣ ಒಪ್ಪಂದಕ್ಕೆ ಸಹಿ ಹಾಕಿದನು.

(ಅರ್ಧರಾಜ್ಯ ಬ್ರಿಟೀಷರಿಗೆ + 3 ಕೋಟಿ ಪರಿಹಾರ) (2 ಮಕ್ಕಳನ್ನು ಒತ್ತೆ ಇಟ್ಟನು.)

## 4ನೇ ಆಂಗ್ಲೋ ಮೈಸೂರು ಯುದ್ಧ (1799):

ಟಿಪ್ಪು ಫ್ರೆಂಚರ ಸಹಾಯ ಪಡೆದು 'ಜಾಕೋಬಿನ್' ಉಗ್ರವಾದಿ ಪಂಥದ ಸದಸ್ಯನಾದನು. ನೆಪೋಲಿಯನ್ ಬೊನೋಪಾರ್ಟ ಸಹಾಯ ಮಾಡಲು ಒಪ್ಪಿದ. 1798ರಲ್ಲಿ ವೆಲ್ಲೆಸ್ಲಿ ಸಹಾಯಕ ಸೈನ್ಯಪದ್ಧತಿ ಜಾರಿಗೆ ತಂದು ಮತ್ತು ಫ್ರೆಂಚರ ಸ್ನೇಹ ಬಿಡುವಂತೆ ಕೇಳಿದ. ಆದರೆ ಇದನ್ನು ಟಿಪ್ಪು ತಿರಸ್ಕರಿಸಿದಾಗ ಮತ್ತೇ ತ್ರಿಕೂಟ ರಚಿಸಿ ಯುದ್ಧ ಸಾರಿದರು. ಇಲ್ಲಿ 1799 ಮೇ 4ರಂದು ಮರಣ ಹೊಂದಿದನು.

ಇವನ ಸಾಮ್ರಾಜ್ಯ 62000 ಚದರ ಮೈಲಿ ವಿಸ್ತೀರ್ಣ ಹೊಂದಿದ್ದು 124 ತಾಲ್ಲೂಕು, 37 ಪ್ರಾಂತ್ಯದಿಂದ ಕೂಡಿತ್ತು.

ಇಲ್ಲಿ ಆಡಳಿತಕ್ಕಾಗಿ 7 ಮುಖ್ಯ ಇಲಾಖೆ ಮತ್ತು 20 ಕಛೇರಿಗಳಿದ್ದವು. ಟಿಪ್ಪು 12 ಟಂಕಶಾಲೆಗಳನ್ನು ತೆರೆದಿದ್ದನು. (ಚಿನ್ನ, ಬೆಳ್ಳಿ, ತಾಮ್ರದ ನಾಣ್ಯ). ಗಾಂಧೀಜಿಯವರು ಇವನ ಚರಿತ್ರೆ ಓದಿ ಈತನನ್ನು ಹಿಂದೂ ಮುಸ್ಲಿಂ ಏಕತೆಯ ಪ್ರತಿಪಾದಕ ಎಂದಿದ್ದರು.

ಇವರು ರೈತರಿಗೆ ತಕಾವಿ ಸಾಲ, ನೀರಾವರಿ ಸೌಲಭ್ಯ ಒದಗಿಸಿದ್ದನು. ರೇಷ್ಮೆ ಮತ್ತು ಸಕ್ಕರೆ ಕೈಗಾರಿಕೆಗಳು ಇವನ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದವು. ಹೀಗೆ ಟಿಪ್ಪುವಿನ ಜೀವನವೇ ಒಂದು ವೀರ ಕಾವ್ಯವಿದ್ದಂತಿದೆ.

# ಘಟಕ – 5

# ಆಧುನಿಕ ಮೈಸೂರು

## ಕೃಷ್ಣರಾಜ ಒಡೆಯರ್ ಇವರ ಕೊಡುಗೆಗಳು

## (1799–1831)

ಮೈಸೂರಿನಲ್ಲಿ ಏರ್ಪಟ್ಟಿದ್ದ ಮಧ್ಯಂತರ ಮುಸ್ಲಿಂ ಆಳ್ವಿಕೆಯು (1761ರಿಂದ 1799ರವರೆಗೆ) 1799ರಲ್ಲಿ ಟಿಪ್ಪುವಿನ ಮರಣದೊಂದಿಗೆ ಮುಕ್ತಾಯಗೊಂಡಿತು. ಜೂನ್ 22, 1799ರ ಶ್ರೀರಂಗಪಟ್ಟಣ ಒಪ್ಪಂದದಂತೆ ಮೈಸೂರನ್ನು 4 ಭಾಗಗಳಾಗಿ ವಿಂಗಡಿಸಿ 1 ಭಾಗವನ್ನು ಮೈಸೂರಿನ ಒಡೆಯರಿಗೆ ಕೊಡಲಾಯಿತು. ಜೂನ್ 30, 1799ರಂದು 5 ವರ್ಷದ ಮುಮ್ಮಡಿ ಕೃಷ್ಣರಾಜ ಒಡೆಯರ್ ಮೈಸೂರಿನ ರಾಯಭಾರತ್ವ ಪಡೆದರು. ಒಡೆಯರ್ ಆಳ್ವಿಕೆಯನ್ನು ಇಲ್ಲಿ 2 ಭಾಗಗಳಾಗಿ ವಿಂಗಡಿಸಲಾಯಿತು.

1) ದಿವಾನ್ ಪೂರ್ಣಯ್ಯರ ಆಳ್ವಿಕೆ

2) ರಾಜರ ನೇರ ಆಳ್ವಿಕೆ

ಅಪಾರ ಪ್ರತಿಭಾವಂತರಾದ ದಿವಾನ್ ಪೂರ್ಣಯ್ಯರವರು ಒಡೆಯರ್ ಬದಲಾಗಿ ತಾವೇ 'ಮಹಾರಾಣಿ ಲಕ್ಷ್ಮಮ್ಮಣಿ'ಯವರ ಸಹಾಯದಿಂದ ಆಡಳಿತ ಮಾಡಿದರು.

* ರಾಜಧಾನಿಯನ್ನು ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾವಣೆ ಮಾಡಿ ಮೈಸೂರು ಅರಮನೆ ಕಾರ್ಯ ಪ್ರಾರಂಭಿಸಿದರು.

* ಭೂ ಮಾಪನ ಮಾಡಿ ಕಂದಾಯ ಪರಿಷ್ಕರಣೆ ಮಾಡಿದರು.

* ರಾಜ್ಯದ ಸಿವಿಲ್ ಆಡಳಿತ ನೋಡಿಕೊಳ್ಳಲು 4 ಇಲಾಖೆ ರಚಿಸಿದರು.

* ಸೈನ್ಯ ಮತ್ತು ಪೋಲಿಸ್ ಪದ್ದತಿ ಪುನರ್ ಸಂಘಟಿಸಿದರು. ಕಂದಾಚಾರವೆಂಬ ಸೈನ್ಯ ಪದ್ದತಿ ಜಾರಿಗೆ ತಂದರು.

* ಇವರ ಕಾಲದಲ್ಲಿ ರಾಜ್ಯದ ಆದಾಯ ಹೆಚ್ಚಳವಾಯಿತು.

* 'ತಕಾವಿ' ಸಾಲ ಸೌಲಭ್ಯ ನೀಡಿದರು.

* ಕಾವೇರಿ ನದಿಗೆ ವೆಲ್ಲೆಸ್ಲಿ ಸೇತುವೆ ನಿರ್ಮಾಣ ಮಾಡಿದರು.

* ಸಿಡುಬು ರೋಗಕ್ಕೆ ಚಿಕಿತ್ಸೆ ಮೊದಲು ಜಾರಿಗೆ ತಂದರು.

ಹೀಗೆ ದಿವಾನ್ ಪೂರ್ಣಯ್ಯನವರ ಮುಮ್ಮಡಿ ಕೃಷ್ಣರಾಜರ ಹೆಸರನ್ನು ಇನ್ನು ಹೆಚ್ಚಿಸಿದರು.

1811ರಲ್ಲಿ ಮುಮ್ಮಡಿ ಕೃಷ್ಣರಾಜರೇ ಮೈಸೂರಿನ ಆಡಳಿತವನ್ನು ನೇರವಾಗಿ ವಹಿಸಿಕೊಂಡರು. ಬ್ರಿಟೀಷ್ ರೆಸಿಡೆಂಟ್ ವ್ಹಿ.ಹೆಚ್. ಕೋಲರವರು ಅರಸರಿಗೆ ನೆರವಾದರು.

**ಇವರ ಕೊಡುಗೆಗಳೆಂದರೆ:**

* ಇವರು ರಾಜ್ಯವನ್ನು 6 ಫೌಜುಗಳಾಗಿ ವಿಂಗಡಿಸಿ ಅವುಗಳಿಗೆ ಫೌಜುದಾರರ ನೇಮಕ ಮಾಡಿದರು. 125 ತಾಲ್ಲೂಕು ರಚಿಸಿ ಅಮಲ್ದಾರರ ನೇಮಕ ಮಾಡಿದರು. ಇದರ ಉದ್ದೇಶ ಆಡಳಿತದಲ್ಲಿ ಸರಾಗತೆ ತರುವುದಾಗಿತ್ತು. ರಾಜ್ಯದ ಆದಾಯ ವಾರ್ಷಿಕ 60 ಲಕ್ಷದಿಂದ 71 ಲಕ್ಷಕ್ಕೆ ಏರಿತು.

* ಇವರ ಪ್ರಮುಖ ಕೊಡುಗೆ 1829ರಲ್ಲಿ ಕಾವೇರಿಗೆ ಶಿವನ ಸಮುದ್ರದ ಬಳಿ 2 ಅಣೆಕಟ್ಟು ನಿರ್ಮಿಸಿದ್ದು.

ಇವರ ಕಾಲದಲ್ಲಿ ನಡೆದಂತಹ ಬಿದನೂರು (ನಗರ) ದಂಗೆಯು ಇವರ ಪ್ರಾಮುಖ್ಯತೆ ಕುಗ್ಗಿಸಿ ಮತ್ತೇ 1831–1881 ಕಮೀಷನರ ಆಳ್ವಿಕೆಗೆ ಒಳಪಡುವಂತಾಯಿತು. ಆದರೂ ಲಭ್ಯ ಅವಧಿಯಲ್ಲಿ ಒಡೆಯರು ಮಾಡಿದಂತಹ ಸಾಧನೆಗಳು ಅಪಾರ. ಅವುಗಳನ್ನು ನೋಡುವುದಾದರೆ,

1) ಬಿದನೂರು ದಂಗೆಯಿಂದ ಮೈಸೂರು ಪ್ರಾಂತ್ಯವನ್ನು ಮದ್ರಾಸಿನ ಪ್ರಾಂತ್ಯದಲ್ಲಿ ವಿಲೀನಗೊಳಿಸುವ ಬ್ರಿಟೀಷರ ಪ್ರಯತ್ನಕ್ಕೆ ತಡೆ ಮಾಡಿದ್ದು ಇವರ ಅತೀ ದೊಡ್ಡ ಸಾಧನೆಯಾಯಿತು.

2) ಇವರ ಈ ಸಾಧನೆಯನ್ನು ಮನಗಂಡು ಕರ್ನಾಟಕದ ನವೋದಯದ ಉಷಾತಾರೆ ಎಂದು ಹೆಸರಾಗಿದ್ದಾರೆ.

3) ವೈಷ್ಣವರಾದ ಇವರು ರಾಘವೇಂದ್ರ, ವ್ಯಾಸರಾಯ, ಶ್ರವಣಬೆಳಗೊಳ, ಶೃಂಗೇರಿಗಳಲ್ಲಿನ ವೈಷ್ಣವ ಮತ್ತು ಶೈವ ಮಠಗಳಿಗೆ ಉದಾರವಾದ ಧಾನ ದತ್ತಿ ನೀಡಿದರು. ಅಗ್ರಹಾರ ನಿರ್ಮಿಸಿದರು.

4) ಚಾಮುಂಡಿ ಬೆಟ್ಟದ ಚಾಮುಂಡೇಶ್ವರ ಮತ್ತು ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಗೋಪುರವನ್ನು ಇವರೇ ನಿರ್ಮಿಸಿದರು.

5) ಮೈಸೂರಿನ ಅಲೋಪತಿ ಆಸ್ಪತ್ರೆ, ಓರಿಯಂಟಲ್ ಲೈಬ್ರಿ, ಪಬ್ಲಿಕ್ ಲೈಬ್ರಿ ಮತ್ತು ಇಂಗ್ಲೀಷ್ ಶಾಲೆ ತೆರೆದರು.

6) 1861ರಲ್ಲಿ ಮೈಸೂರಿನ ಜಗನ್ಮೋಹಿನ ಅರಮನೆ ಕಟ್ಟಿದರು.

7) ಸಾಹಿತ್ಯ ದೃಷ್ಟಿಯಿಂದ ಇವರ ಕಾಲ ಸುವರ್ಣಯುಗವಾಗಿತ್ತು. ಇವರ ಸಾಹಿತ್ಯಿಕ ಕೊಡುಗೆಗಳು ಅಪಾರ.

* ಸ್ವತ: ಇವರೇ 59 ಕೃತಿ ರಚಿಸಿದ್ದಾರೆ. (ತತ್ವನಿಧಿ, ಭಾಗವತ).

* ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿ ಇವರ ಆಸ್ಥಾನ ಕವಿಯಾಗಿದ್ದನು. (ಇವರು ಶಕುಂತಲ, ರತ್ನಾವಳಿ, ಓಥಲೋ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು.)

* ಕೆಂಪುನಾರಾಯಣ ಮುದ್ರಾಮಂಜೂಷ ಎಂಬ ಕೃತಿ ಇವರ ಆಶ್ರಯದಲ್ಲೇ ರಚಿತವಾದದ್ದು.

* ದಾಸ ಸಾಹಿತ್ಯದ ಕರ್ತೃಗಳಾದ ಗೋಪಾಲದಾಸ ಮತ್ತು ವಿಜಯದಾಸರು ಇವರ ಆಸ್ಥಾನದಲ್ಲಿದ್ದರು.

* ವೀಣೆ ವೆಂಕಟ ಸುಬ್ಬಯ್ಯರು ಇವರ ಆಶ್ರಯದಲ್ಲಿದ್ದರು.

ಹೀಗೆ ಮುಮ್ಮಡಿ ಕೃಷ್ಣರಾಜರು ಸಾಹಿತ್ಯ, ಕಲೆ, ಸಂಸ್ಕೃತಿ, ಆಡಳಿತ, ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

## ಕರ್ನಾಟಕದಲ್ಲಿ ಬ್ರಿಟೀಷರ ವಿರುದ್ಧದ ಶಸ್ತ್ರಾಸ್ತ್ರ ದಂಗೆಗಳು (1769–1885):

ಬ್ರಿಟೀಷರ ವಿರುದ್ಧ ಶಸ್ತ್ರಾಸ್ತ್ರ ರಹಿತ ದಂಗೆ ಎದ್ದ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಈ ನಿಟ್ಟಿನಲ್ಲಿ ಹಲವಾರು ದಂಗೆಗಳು ನಡೆದಿದ್ದು ಅವುಗಳನ್ನೊಮ್ಮೆ ನೋಡುವುದಾದರೆ,

### 1) ಹೈದರಾಲಿ ಮತ್ತು ಟಿಪ್ಪುವಿನ ಹೋರಾಟ: 1769–99

ಹೈದರಾಲಿ ಪ್ರಥಮ ಬಾರಿಗೆ 1769ರ 1ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ವಿಜಯಿಯಾದನು. ಆದರೆ 2ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಹೋರಾಡುತ್ತಲೇ ಮರಣ ಹೊಂದಿದನು. ನಂತರ ಇವನ ಮಗ ಟಿಪ್ಪು 1792 ಮತ್ತು 1799ರಲ್ಲಿ 3 ಮತ್ತು 4ನೇ ಯುದ್ಧದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿ ನೆತ್ತರು ಹರಿಸಿದನು. ದೇಶೀಯ ಶಕ್ತಿಗಳು ಈ ಕಲಿಗಳಿಗೆ ಬೆಂಬಲ ಕೊಡದೇ ಇವರ ಹೋರಾಟ ವ್ಯರ್ಥವಾಯಿತು. ಆದರೆ ಮುಂದಿನ ದಂಗೆಗಳಿಗೆ ಸ್ಫೂರ್ತಿಯಾದರು.

**2) ದೊಂಡಿಯ ವಾಘ ದಂಗೆ: 1800**

ವಾಘನು ಮರಾಠಿ ವಂಶಸ್ಥ ಕೊಲ್ಲಾಪುರದ ಛತ್ರಪತಿಯ ಸೇವೆಯಲ್ಲಿದ್ದನು. ಅನಂತರ ಟಿಪ್ಪು ಸೇನೆಗೆ ಸೇರಿದನು. ಟಿಪ್ಪು ಇವನನ್ನು ಇಸ್ಲಾಂಗೆ ಮತಾಂತರಿಸಿ ಬಂಧನ ಮಾಡಿದನು. ಇಲ್ಲಿಂದ ತಪ್ಪಿಸಿಕೊಂಡ ಈತ 90000 ಅಶ್ವಪಡೆ ಮತ್ತು 50000 ಕಾಲುಪಡೆ ಕಟ್ಟಿ ಬ್ರಿಟೀಷರ ವಿರುದ್ದ ದಂಗೆ ಎದ್ದು ಮಲಬಾರ, ಕೆನರಾ, ರಾಣಿಬೆನ್ನೂರು ವಶಪಡಿಸಿಕೊಂಡನು. ನಿಜಾಮರ ಸಹಾಯದಿಂದ ವೆಲ್ಲೆಸ್ಲಿ ಇವನನ್ನು ಕೊಂದನು.

**3) ಕೊಪ್ಪಳ ದಂಗೆ: 1819**

ವೀರಪ್ಪ ಎಂಬ ಜಮೀನ್ದಾರ, ಬೀದರ್‌ನ ದೇಶ್‌ಮುಖ್, ಜಿನಾಮನ್ ವಿರುದ್ದ ದಂಗೆ ಎದ್ದಿದ್ದರು. 'ಸದರ್‌ಲ್ಯಾಂಡ್' ಇವರನ್ನು ಹತ್ತಿಕ್ಕಿದ.

**4) ಸಿಂದಗಿ ಬಂಡಾಯ: 1824**

ದಿವಾಕರ್ ದೀಕ್ಷಿತ ಮತ್ತು ಬಾಲಾಜಿ ಬ್ರಿಟೀಷರ ವಿರುದ್ದ ದಂಗೆ ಎದ್ದು ತಾವೇ ಸ್ವತ: ಕರ ಸಂಗ್ರಹಿಸಿದ್ದರು.

**5) ಕಿತ್ತೂರು ದಂಗೆ: 1824**

ಕರ್ನಾಟಕದ ಸಶಸ್ತ್ರ ಬಂಡಾಯದಲ್ಲಿ ಈ ದಂಗೆ ಅತೀ ಪ್ರಮುಖವಾದುದು. ಇದು ತೋರಿದ ಸ್ವಾಭಿಮಾನ ಶೌರ್ಯ, ದಿಟ್ಟಸಾಹಸ ಇದೇ ನಾಡಿಗೆ ಹೆಮ್ಮೆ ತಂದಿತ್ತು. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯ ವಿರುದ್ದ ಸಿಡಿದೆದ್ದ ಚೆನ್ನಮ್ಮ 'ಶಿವಲಿಂಗಪ್ಪ'ನನ್ನು ದತ್ತು ತೆಗೆದುಕೊಂಡು ರಾಜ್ಯಭಾರ ಮಾಡಲು ಅವಕಾಶ ನಿಡದ ಬ್ರಿಟೀಷರ ವಿರುದ್ದ ಹೋರಾಡಿ 'ಥ್ಯಾಕರೆ'ಯಂತಹ ಕಲೆಕ್ಟರರನ್ನು ಕೊಂದು ಜಯಶಾಲಿಯಾದಳು. ಆದರೆ ನಂತರ ಬಂದ ಕಮೀಷನರ್ ಚಾಂಪ್ಲಿನ್ 'ರಾಜದ್ರೋಹಿಗಳಾದ ರುದ್ರಪ್ಪ, ಮಲ್ಲಪ್ಪಶೆಟ್ಟಿ ಸಹಾಯ ಪಡೆದು ಕಿತ್ತೂರನ್ನು ವಶಪಡಿಸಿಕೊಂಡನು.

**6) ರಾಯಣ್ಣ ದಂಗೆ: 1830**

ಚೆನ್ನಮ್ಮಳ ಬಂಧನದ ನಂತರ ಅವಳ ನಿಷ್ಠಾವಂತ ಸೇವಕ ರಾಯಣ್ಣನು ಸೈನ್ಯ ಕಟ್ಟಿ ಬಿಳಿಯರ ವಿರುದ್ದ ದಂಗೆ ಎದ್ದು ಸಿಂಹಸ್ವಪ್ನವಾದನು. ಇವನನ್ನು ಅವನ ಸ್ನೇಹಿತ ಬಾಳಣ್ಣ ಲಿಂಗನಗೌಡರ ಸಹಾಯದಿಂದ ಬಂಧಿಸಿ 1831ರಲ್ಲಿ ಗಲ್ಲಿಗೇರಿಸಿದರು.

**7) ನಗರ ದಂಗೆ: 1830-31**

ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಸಾದರ್‌ಮಲ್ಲನು ಬೂದಿಬಸಪ್ಪ ಎಂಬ ಹೆಸರಿನಿಂದ ಅಲ್ಲಿನ ಜಂಗಮನ ರಾಜಮುದ್ರೆ ಅಪಹರಿಸಿ ತಾನೇ ಬಿದನೂರಿಗೆ ಉತ್ತರಾಧಿಕಾರಿ ಎಂದು ಯಾರೂ ಕಂದಾಯ ಕೊಡದಂತೆ ಘೋಷಿಸಿದ. ಒಡೆಯರ್ ಈ ದಂಗೆ ನಿಯಂತ್ರಿಸಲು ವಿಫಲವಾದಾಗ ಬ್ರಿಟೀಷರು ಇವನನ್ನು ನೇಣಿಗೆ ಹಾಕಿದರು.

**8) ಕೊಡಗು ಬಂಡಾಯ: 1835-37**

ಲಾರ್ಡ್‌ವಿಲಿಯಂ ಬೆಂಟಿಂಕ್‌ನು 1834ರಲ್ಲಿ ಕೊಡಗಿನ ಹಾಲೇರಿ ವಂಶಸ್ಥ ಚಿಕ್ಕವೀರರಾಜೇಂದ್ರನನ್ನು ಪದಚ್ಯುತಿಗೊಳಿಸಿ ಅದನ್ನು ಆಕ್ರಮಿಸಿದಾಗ ಅಪರಂಪಾರ ಮತ್ತು ಕಲ್ಯಾಣಸ್ವಾಮಿ ಇವರ ವಿರುದ್ದ ಹೋರಾಡಿದರು. ಆದರೆ ದೇಶದ್ರೋಹಿ ಬೋಪಣ್ಣ ಮತ್ತು ಪೊನ್ನಪ್ಪರವರಿಂದ ಇವರು ಬಂಧಿಸಲ್ಪಟ್ಟು ಗಲ್ಲಿಗೇರಿದರು.

## 1857ರಲ್ಲಾದ ಕರ್ನಾಟಕ ದಂಗೆಗಳು:

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಕರ್ನಾಟಕದಲ್ಲೂ ಬ್ರಿಟೀಷರ ವಿರುದ್ದ ಹಲವಾರು ಕ್ರಾಂತಿಕಾರಿ ಹೋರಾಟಗಳು ನಡೆದವು. ಅವುಗಳೆಂದರೆ,

**1) ಹಲಗಲಿ ಬೇಡರ ದಂಗೆ: 1857**

ಸಿಪಾಯಿ ದಂಗೆ (1857) ಹಿನ್ನೆಲೆಯಲ್ಲಿ ಬ್ರಿಟೀಷರು ಜಾರಿಗೆ ತಂದಂತಹ ನಿಶಸ್ತ್ರೀಕರಣ ಕಾಯ್ದೆ ವಿರೋಧಿಸಿ ಬಿಜಾಪುರದ ಮುಧೋಳ ತಾಲ್ಲೂಕಿನ ಹಲಗಲಿಯ ಬೇಡರು ಶಸ್ತ್ರಾಸ್ತ್ರ ಹೊಂದುವುದು ಅಜನ್ಮಸಿದ್ಧ ಹಕ್ಕೆಂದು ವಾಪಸ್ಸು ಮಾಡಲು ತಿರಸ್ಕರಿಸಿದಾಗ, ಕರ್ನಲ್ 'ಸೆಟನ್‌ಕರ್' ನೇತೃತ್ವದಲ್ಲಿ ಯುದ್ಧವಾಯಿತು. ಬೇಡರು ತಾವೇ ತಮ್ಮ ಗುಡಿಸಲಿಗೆ ಬೆಂಕಿ ಇಟ್ಟು ವೀರ ಮರಣವನ್ನಪ್ಪಿದರು. ಇಲ್ಲಿ 290 ಮಂದಿ ಬಲಿಯಾದರು.

**2) ಸುರಪುರ ದಂಗೆ: 1858**

ಗುಲ್ಬರ್ಗಾ (ಕಲ್ಬುರ್ಗಿ) ಜಿಲ್ಲೆಯ ಸುರಪುರದಲ್ಲಿ ಬೇಡರ ನಾಯಕ ರಾಜಾ ವೆಂಕಟಪ್ಪನು ತನ್ನ ಆಸ್ಥಾನದಲ್ಲಿ ಬ್ರಿಟೀಷ್ ರೆಸಿಡೆಂಟ್ ಇಟ್ಟುಕೊಳ್ಳಲು ನಿರಾಕರಿಸಿ ದಂಗೆ ಎದ್ದನು. ನಾನಾ ಸಾಹೇಬ್ ದೇಶ್‌ಮುಖ್ ಇವನಿಗೆ ಬೆಂಬಲವಿತ್ತರು. ಬ್ರಿಟೀಷ್ ಸೇನಾನಿ ನ್ಯೂಬೆರಿಯನ್ನು ಇವರು ಕೊಂದರು. ನಿಜಾಮನು ಇವರಿಗೆ ವಿರುದ್ಧವಾಗಿ ಬ್ರಿಟೀಷರಿಗೆ ಸಹಾಯ ಮಾಡಿದಾಗ ತಾನೇ ಗುಂಡು ಹಾರಿಸಿಕೊಂಡು ವೆಂಕಟಪ್ಪ ನಾಯಕ್ ಮರಣ ಹೊಂದಿದನು (ಕ್ಯಾಪ್ಟನ್ ಮಿಡ್‌ಹ್ಯಾಂ).

**3) ನರಗುಂದ ದಂಗೆ: 1857**

ನರಗುಂದದ ಬಾಬಾಸಾಹೇಬ ದತ್ತು ಪುತ್ರನ ಹಕ್ಕಿನ ವಿರುದ್ಧ ಮತ್ತು ಶಸ್ತ್ರಾಸ್ತ್ರಗಳನ್ನು ಮರಳಿ ನೀಡಲು ಒಪ್ಪದೇ ಬ್ರಿಟೀಷರ ವಿರುದ್ಧ ದಂಗೆ ಎದ್ದನು. ಇವರಿಗೆ ಡಂಬಳ, ಸೊರಟೂರು ದೇಸಾಯಿಗಳು ಬೆಂಬಲ ನೀಡಿದರು. ಇವರು 'ಮ್ಯಾನ್ಸನ್' ಎಂಬ ಬ್ರಿಟೀಷ್ ಅಧಿಕಾರಿಯನ್ನು ಕೊಂದು, ಬನಿಯಾ ಬಾಪು ಎಂಬ ವಿದ್ರೋಹಿಯಿಂದ ನೇಣಿಗೇರಿದರು.

**4) ಮುಂಡರಗಿ ದಂಗೆ: 1858**

ಭೀಮರಾವ್ ಇದರ ನಾಯಕ. ಇವರು ತಹಸೀಲ್ದಾರ್ ಆಗಿದ್ದು ಬ್ರಿಟೀಷರ ನೀತಿಯಿಂದ ಬೇಸತ್ತು ಹುದ್ದೆಗೆ ರಾಜೀನಾಮೆ ನೀಡಿ ಶಸ್ತ್ರಾಸ್ತ್ರ ಇಟ್ಟುಕೊಂಡು ಬ್ರಿಟೀಷರ ವಿರುದ್ಧ ದಂಗೆದ್ದರು. ಬ್ರಿಟೀಷ್ ಕಜಾನೆ ಲೂಟಿ ಮಾಡಿದರು.

ಒಟ್ಟಾರೆ ಕರ್ನಾಟಕದಲ್ಲಿ ನಡೆದ ಹೋರಾಟಗಳು ಪ್ರಾಯಶ: ವಿಫಲವಾದರೂ, ಅವರ ತ್ಯಾಗ ಬಲಿದಾನಗಳು ಮುಂದಿನ ಚಳುವಳಿಗೆ ಸ್ಫೂರ್ತಿಯಾದವು.

**ಕಮೀಷನರ್‌ಗಳ ಆಳ್ವಿಕೆ (1831–1881):**

ಬಿದನೂರು ದಂಗೆಯಿಂದ (1831) ಮೈಸೂರು ಪ್ರಾಂತ್ಯವನ್ನು ಲಾರ್ಡ್ ವಿಲಿಯಂ ಬೆಂಟಿಕನು ಒಡೆಯರಿಂದ ಕಿತ್ತುಕೊಂಡ ಬ್ರಿಟೀಷ್ ಕಮೀಷನರ್‌ಗಳ ಆಳ್ವಿಕೆಗೆ ಒಳಪಡಿಸಿದನು. ಇವರ ಆಳ್ವಿಕೆಯ ಕಾಲ ಮೈಸೂರಿನಲ್ಲಿ ಸುಧಾರಣೆಯ ಕಾಲವಾಗಿತ್ತು.

ಮೊದಲ ಕಮೀಷನರ್ 'ಬ್ರಿಗ್ಸ್'ನಿಂದ ಕೊನೆಯ ಕಮೀಷನರ್ ಜಿ.ಡಿ.ಗೋರ್ಡನ್‌ವರೆಗೂ ಹಲವಾರು ಸುಧಾರಣೆಗಳು ಆದವು. ಇವರಲ್ಲಿ ಮಾರ್ಕ್‌ಕಬ್ಬನ್ ಮತ್ತು ಬೌರಿಂಗ್ ಆಡಳಿತ ಅವಿಸ್ಮರಣೀಯ.

**ಕಬ್ಬನ್ ಕಾಲದಲ್ಲಾದ ಆಡಳಿತ ಸುಧಾರಣೆಗಳು:**

**1) ಆಡಳಿತ ಸುಧಾರಣೆ:**

* ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾವಣೆ.

* ಅಠಾರ ಕಛೇರಿಯನ್ನು ರದ್ದು ಮಾಡಿ 9 ಇಲಾಖೆ ಸ್ಥಾಪಿಸಿದರು. (ಕಂದಾಯ, ಅಂಚೆ, ಪೋಲಿಸ್ ಇತ್ಯಾದಿ). ಪ್ರತೀ ಇಲಾಖೆಗೂ ಒಬ್ಬ ಕಾರ್ಯದರ್ಶಿ ನೇಮಕ.

* 4 ಆಡಳಿತ ವಿಭಾಗದ ನಿರ್ಮಾಣ ಮಾಡಲಾಯಿತು. ಅವುಗಳು ಬೆಂಗಳೂರು, ಅಷ್ಟಗ್ರಾಮ, ಚಿತ್ರದುರ್ಗ ಮತ್ತು ನಗರ.

* 120 ತಾಲ್ಲೂಕು (ಅಮಲ್ದಾರ್ ನೇಮಕ) ಹೋಬಳಿ (ಶೇಕದಾರ) ಗ್ರಾಮಾಡಳಿತ (ಪಟಾಲ).

* ಆಡಳಿತದ ಲೆಕ್ಕಪತ್ರ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿರುವಂತೆ ಆಜ್ಞೆ ಹೊರಡಿಸಲಾಯಿತು.

**2) ಪೋಲಿಸ್ ಸುಧಾರಣೆಗಳು:**

ಅಮಲ್ದಾರರಿಗೆ ನಾಗರೀಕ ರಕ್ಷಣೆ ಜೊತೆ ಪೋಲಿಸ್ ಕಾರ್ಯ, ಪೋಲಿಸ್ ಸಿಬ್ಬಂದಿ ಹೆಚ್ಚಳ, ಜೈಲು ಸುಧಾರಣೆ, ಗ್ರಾಮದ ಜನತೆ ತಮ್ಮ ರಕ್ಷಣೆಗೆ ಬಂದೂಕು ಹೊಂದಲು ಅವಕಾಶ.

**3) ನ್ಯಾಯಾಂಗ ಸುಧಾರಣೆ:**

ಪ್ರತ್ಯೇಕ ನ್ಯಾಯಾಂಗ ಕಮೀಷನ್ ನೇಮಕ ಮಾಡಲಾಯಿತು. 85 ತಾಲ್ಲೂಕ್ ನ್ಯಾಯಾಲಯ ಸ್ಥಾಪನೆ ಮಾಡಲಾಯಿತು. ಗ್ರಾಮಪಂಚಾಯಿತಿಗೆ ಸಿವಿಲ್ ಮತ್ತು ಕ್ರಿಮಿನಲ್ ಕಾಸುಕೇಸು ಇತ್ಯರ್ಥಪಡಿಸುವ ಅಧಿಕಾರ ನೀಡಲಾಯಿತು.

**4) ಲೋಕೋಪಯೋಗಿ ಸುಧಾರಣೆ:**

* ರಾಜ್ಯದಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗಿದೆ.

* 309 ಸೇತುವೆಗಳ ನಿರ್ಮಾಣ.

* ಕೆರೆ ನಿರ್ಮಾಣ.

* ಕಬ್ಬನ್ ಪಾರ್ಕ್ ನಿರ್ಮಾಣ.

* 1859ರಲ್ಲಿ ರಾಜ್ಯದಲ್ಲೇ ಪ್ರಥಮ 'ಜೋಲಾರಪೇಟೆ ಮತ್ತು ಬೆಂಗಳೂರು ಮಧ್ಯೆ ರೈಲ್ವೆ (40 ಹಳಿ) ಸಂಪರ್ಕ ಕಲ್ಪಿಸಲಾಯಿತು.

**5) ಕಂದಾಯ:**

* 769 ಸಣ್ಣ ಪುಟ್ಟ ವಸ್ತುಗಳ ಮೇಲೆ ತೆರಿಗೆ ರದ್ದು ಪಡಿಸಲಾಯಿತು.

* ಆಕ್ಟ್ರೋ ಸುಂಕ ರದ್ದು ಮಾಡಿದರು.

* ಇವರು ಭೂಕಂದಾಯ ಪದ್ದತಿಗೆ ಬಚಾಯಿ (ದವಸರೂಪದ) ಪದ್ದತಿ ತೊಡೆದು ರೈತ್ವಾರಿ (ನಗದುರೂಪ) ಜಾರಿ ತಂದರು.

**6) ಶಿಕ್ಷಣ:**

* ಸಾರ್ವಜನಿಕ ಶಿಕ್ಷಣ ಇಲಾಖೆ ಸ್ಥಾಪನೆ ಮಾಡಲಾಯಿತು.

* 1858ರಲ್ಲಿ ಬೆಂಗಳೂರಿನಲ್ಲಿ ಪ್ರೌಢ ಶಾಲೆ, ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಒತ್ತು ನೀಡಲಾಯಿತು.

**7) ಅರಣ್ಯ ಇಲಾಖೆ**ಯನ್ನು ಸ್ಥಾಪಿಸಿ ಸಿಬ್ಬಂದಿ ನೇಮಿಸಿದರು. 1,60,000 ಎಕರೆ ಕಾಫಿ ತೋಟ ಅಭಿವೃದ್ದಿ.

**8) ಪ್ರಮುಖ ಪಟ್ಟಣ**ದಲ್ಲಿ ಆಸ್ಪತ್ರೆ ನಿರ್ಮಿಸಿದನು.

**9) ರಾಜ್ಯದಲ್ಲಿ** ಅಂಕಿಅಂಶ ಇಲಾಖೆ ತೆರೆಯಲಾಯಿತು.

ಹಾಗಾಗಿ ಕಬ್ಬನ್ ಕಾಲವನ್ನು ಪರಿವರ್ತನೆಯ ಕಾಲ ಎನ್ನಲಾಗುತ್ತದೆ.

## ಬೌರಿಂಗ್ (ಲೀವಿಂಗ್ ಬೆಂಥಾಂ ಬೌರಿಂಗ್) 1862–1870:

**ಆಡಳಿತ ಸುಧಾರಣೆ:**

* ಆಡಳಿತ ಗ್ರಾಮ 3ಕ್ಕೆ ಇಳಿಕೆ ಮಾಡಲಾಯಿತು. (ಅಷ್ಟಗ್ರಾಮ, ನಂದಿದುರ್ಗ, ಹೈದರ್‌ನಗರ).

* 1864ರಲ್ಲಿ ಮೈಸೂರಲ್ಲಿ ನಗರಸಭೆ ಸ್ಥಾಪನೆ. ಇದು ಸ್ಥಳೀಯ ಸರ್ಕಾರದ ಬೆಳವಣಿಗೆಗೆ ಸಹಕಾರಿಯಾಯಿತು.

* ರಾಜ್ಯವನ್ನು 8 ಜಿಲ್ಲೆಗಳಾಗಿ ವಿಂಗಡಿಸಿ ಡಿ.ಸಿ. ನೇಮಕ ಮಾಡಲಾಯಿತು.

**ನ್ಯಾಯಾಂಗ ಸುಧಾರಣೆ:**

* 1864ರಲ್ಲಿ ಬೆಂಗಳೂರಿನಲ್ಲಿ ಹೈಕೋರ್ಟ್ ಸ್ಥಾಪನೆ.

* 125 ಮುನ್ಸಿಪಲ್ ನ್ಯಾಯಾಲಯ ಸ್ಥಾಪನೆ ಮಾಡಿದರು.

* 1862ರ ದಂಡ ಸಂಹಿತೆ ಮತ್ತು ಕೋಡ್ ಆಫ್ ಕ್ರಿಮಿನಲ್ ಜಾರಿ.

**ಕಂದಾಯ ಸುಧಾರಣೆ:**

1863ರಲ್ಲಿ ಭೂಕಂದಾಯ ಇಲಾಖೆ ಪುನರ್ ವ್ಯವಸ್ಥೆ ಮಾಡಿದರು. 1868ರಲ್ಲಿ ಇನಾಂ ಕಮೀಷನ್ ಸ್ಥಾಪನೆ. ತಾಲ್ಲೂಕಿಗೊಂದು ನೋಂದಣಿ ಕಛೇರಿ ಸ್ಥಾಪನೆ.

**ಪೋಲಿಸ್ ಸುಧಾರಣೆ:**

* ಡಿ.ಐ.ಜಿ. ಮತ್ತು ಐ.ಜಿ.ಪಿ. ಹುದ್ದೆ ಸೃಷ್ಟಿ.

* 1861ರಲ್ಲಿ ಪೋಲಿಸ್ ಕಾಯ್ದೆ ಜಾರಿಗೆ.

* ಪೋಲಿಸರಿಗೆ ನಿರ್ದಿಷ್ಟ ವಿದ್ಯಾರ್ಹತೆ ಮತ್ತು ತರಬೇತಿ ಕಡ್ಡಾಯ ಮಾಡಲಾಯಿತು.

* 1863ರಲ್ಲಿ ಬೆಂಗಳೂರಿನ 'ಸೆಂಟ್ರಲ್ ಜೈಲ್' ಸ್ಥಾಪನೆ.

**ಶಿಕ್ಷಣ ಸುಧಾರಣೆ:**

* 1868ರಲ್ಲಿ ಕೇಂದ್ರ ಶಿಕ್ಷಣ ಇಲಾಖೆ ಸ್ಥಾಪನೆ.

* ಬಿ.ಎಲ್.ರೈಸ್ ನೇತೃತ್ವದಲ್ಲಿ ಹೋಬಳಿ ಶಾಲಾ ಯೋಜನೆ. 1864ರಲ್ಲಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು ಸ್ಥಾಪನೆ. ಬೆಂಗಳೂರು ಮ್ಯೂಸಿಯಂ ನಿರ್ಮಾಣ. ಸರ್ಕಾರಿ ಮುದ್ರಣಾ ಪ್ರಕಾಶನಕ್ಕೆ ಒತ್ತು ನೀಡಿದರು.

* ಬೆಂಗಳೂರಿನಲ್ಲಿ ಅಠರಾ ಕಛೇರಿ ನಿರ್ಮಾಣ ಮಾಡಿದರು.

* ಬೆಂಗಳೂರಿನಲ್ಲಿ ವಿಶೇಷ ಬೌರಿಂಗ್ ಆಸ್ಪತ್ರೆ ಸ್ಥಾಪಿಸಿದರು.

* ಶಿಕ್ಷಕ ತರಬೇತಿ ಕಾಲೇಜುಗಳು ನಿರ್ಮಾಣ.

* ಮುಜರಾಯಿ ಇಲಾಖೆ ಸ್ಥಾಪನೆ.

* ಇವರ ಪ್ರಮುಖ ಕೃತಿ 'ನೇಟಿವ್ ರೂಲರ್ಸ್ ಆಫ್ ಇಂಡಿಯಾ' ಇವರ ಪತ್ನಿ ಲೇಡಿ ಬೌರಿಂಗ್‌ರವರ ಕೃತಿ 'ದಿ ಈಸ್ಟರ್ನ್ ಎಕ್ಸ್‌ಪೀರಿಯನ್ಸ್'.

ಬೌರಿಂಗ್‌ರ ನಂತರ ರಿಚರ್ಡ್‌ಮೀಡ್, ಸಾಂಡರ್ಸ್ ಮತ್ತು ಗೋರ್ಡನ್‌ರವರು 1881ರವರೆಗೂ ಆಳಿದರು. 1881ರಲ್ಲಿ ಅಧಿಕಾರದ 'ಪುನರ್ದಾನ' 10ನೇ ಚಾಮರಾಜ ಒಡೆಯರ್‌ಗೆ ಆಯಿತು.

ಹೀಗೆ ಕಮೀಷನರ್‌ರ ಆಳ್ವಿಕೆಯ ಕಾಲವು ಬೆಳವಣಿಗೆಗೆ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಸುವರ್ಣಯುಗವಾಗಿತ್ತು ಎಂಬುದರಲ್ಲಿ ಯಾವುದೇ ಅಚ್ಚರಿಯಿಲ್ಲ.

## ಹೈದ್ರಾಬಾದ್–ಕರ್ನಾಟಕ ಪ್ರಾಂತ್ಯದಲ್ಲಿ ನಿಜಾಮರ ಆಳ್ವಿಕೆ:

ಮೊಘಲ್ ಸಾಮ್ರಾಟ್ ಔರಂಗಜೇಬನು ಬಿಜಾಪುರ ಮತ್ತು ಗೋಲ್ಕೊಂಡ ರಾಜ್ಯಗಳನ್ನು ಸೋಲಿಸಿ ಅವುಗಳನ್ನು ಮೊಘಲ್ ರಾಜ್ಯದಲ್ಲಿ ಸಮಿಲಿಸಿಕೊಂಡ ನಂತರ ದಖನ್‌ನಲ್ಲಿ 6 ಭಾಗಗಳು ಮೊಘಲರ ಅಧೀನಕ್ಕೆ ಬಂದವು. ಇದರಲ್ಲಿ ಹೈ.ಕ. ಎಂದು ಕರೆಯುವ 'ಕಲ್ಬುರ್ಗಿ, ಬೀದರ್ ಮತ್ತು ರಾಯಚೂರು' ಜಿಲ್ಲೆಗಳು ಸೇರಿದ್ದವು.

ಔರಂಗಜೇಬನ ಮರಣದ ನಂತರ 1713ರಲ್ಲಿ ನಿಜಾಂ ಉಲ್ ಮುಲ್ಕ್ ಹೈದ್ರಾಬಾದ್ ರಾಜ್ಯ ಸ್ಥಾಪಿಸಿದನು. ನಂತರದ ನಿಜಾಮ್ ಸಲಾಬತ್‌ಜಂಗ್ ಫ್ರೆಂಚರಿಗೆ ಉತ್ತರ ಕರ್ನಾಟಕ ಭಾಗವನ್ನು ನೀಡಿದ. ಕೊನೆಗೆ ಅವು ಬ್ರಿಟೀಷರ ಪಾಲಾದವು. 1769ರಲ್ಲಿ ನಿಜಾಮ ಬ್ರಿಟೀಷರೊಡನೆ ಸೇರಿ ಮೈಸೂರನ್ನು ವಶಪಡಿಸಿಕೊಳ್ಳಲು ನೆರವಾದ್ದರಿಂದ ರಾಯಚೂರು ನಿಜಾಮನಿಗೆ ಉಡುಗೊರೆ ಬಂತು. ಶ್ರೀರಂಗಪಟ್ಟಣ ಒಪ್ಪಂದದಂತೆ ಮೈಸೂರನ್ನು 4 ಭಾಗಗಳಾಗಿ ಮಾಡಲಾಗಿ ನಿಜಾಮನಿಗೆ 1 ಭಾಗ ನೀಡಲಾಯಿತು. ಇದರಲ್ಲಿ ಹಿಂದಿನ ಎಲ್ಲಾ ಹೈ.ಕ. ಭಾಗಗಳೂ ಮರಳಿ ಬಂದವು.

ಹೈ.ಕ. ಮೇಲಿನ ಭದ್ರತೆಗಾಗಿ ನಿಜಾಮನು ಬ್ರಿಟೀಷರಿಗೆ ನಿಷ್ಠೆಯಿಂದ ಇದ್ದನು. 1860ರ ವೆಂಕಟಪ್ಪನ ಮರಣದ ನಂತರ ಸುರಪುರ ಹೈದ್ರಾಬಾದ್ ಪ್ರಾಂತ್ಯಕ್ಕೆ ಸೇರಿತು.

**ಆಡಳಿತ:**

ಹೈ.ಕ.ದಲ್ಲಿ ಕಂದಾಯ ವ್ಯವಸ್ಥೆಯನ್ನು ಡಿ.ಸಿ.ಗಳು ತಹಸೀಲ್ದಾರ್ ಮೂಲಕ, ಗ್ರಾಮಗಳಲ್ಲಿ ಪಟೇಲರ ಮೂಲಕ ನಿಯಂತ್ರಿಸುತ್ತಿದ್ದರು.

ಬಟಾಯಿ ಪದ್ಧತಿ (ದವಸ ರೂಪ) ಮೊದಲು ನಂತರ ಕೂರಿಗೆಗೆ (4 ಎಕರೆ) 10ರಿಂದ 25 ರೂ. ಕಂದಾಯ ವಸೂಲಿ ಮಾಡುತ್ತಿದ್ದರು. ತದನಂತರ ಭೂಮಿ ಅಳತೆ ಮಾಡಿ ಗ್ರಾಮಗಳ ಎಲ್ಲಾ ಭೂಮಿಯ ಚಕ್ ಬಂದಿ ತಯಾರಿಸಲಾಯಿತು.

* ಕಂದಾಯ ಪಾವತಿಗೆ 'ಪಟ್ಟಾ ಪುಸ್ತಕ' ನೀಡಲಾಯಿತು. ಇದರಲ್ಲಿ ಕಂದಾಯ ಸಂಗ್ರಹದ ಎಲ್ಲಾ ವಿವರ ಬರೆಯಬೇಕಿತ್ತು.

* ಸಾಲರ್‌ಜಂಗ್‌ನ ಕಾಲದಲ್ಲಿ ಭೂ ಒಡೆತನದ ಹಕ್ಕಿನ ಪತ್ರವನ್ನು ಆಯಾ ರೈತರಿಗೆ ನೀಡಲಾಗಿತ್ತು.

* ನಿಜಾಮನು 1919ರಲ್ಲಿ ಭಾರತದಲ್ಲಿ ಮೊದಲಿಗೆ ಹೈದರಾಬಾದಿನಲ್ಲಿ ಭೂದಾಖಲೆ ಪದ್ಧತಿಯನ್ನು ಸುಧಾರಣೆ ಮಾಡಿದನು.

* 1937ರಲ್ಲಿ ಭೂ ದಾಖಲೆಯ ಪ್ರತ್ಯೇಕ ಇಲಾಖೆ ಸ್ಥಾಪಿಸಲಾಯಿತು.

## ದಿವಾನರ ಕಾಲದಲ್ಲಿ ಮೈಸೂರಿನಲ್ಲಾದ ಪ್ರಗತಿಗಳು:

1857ರ ಸಿಪಾಯಿ ದಂಗೆಯ ನಂತರ 1858ರಲ್ಲಿ ವಿಕ್ಟೋರಿಯಾ ರಾಣಿಯ ಸನ್ನದ್ದನ್ನು ಹೊರಡಿಸಲಾಯಿತು. ಇದರ ಪ್ರಕಾರ ದೇಶೀಯ ಸಂಸ್ಥಾನಗಳನ್ನು ಆಯಾ ರಾಜರಿಗೆ ಮರಳಿ ಕೊಡಲಾಯಿತು. ಇದರಂತೆ 1881ರಲ್ಲಿ 'ಇನ್ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್' ನೀತಿಗೆ ಒಳಪಟ್ಟು 10ನೇ ಚಾಮರಾಜರಿಗೆ ಅಧಿಕಾರ ಹಸ್ತಾಂತರಿಸಲಾಯಿತು.

ಇಲ್ಲಿಂದ ಒಡೆಯರ ಆಳ್ವಿಕೆ ಪ್ರಾರಂಭವಾಯಿತು. ಇವರು ತಮ್ಮ ಸಹಾಯಕ್ಕಾಗಿ ದಿವಾನರನ್ನು ನೇಮಕ ಮಾಡಿಕೊಂಡರು. ಇವರ ಕಾಲದಲ್ಲಿ ಅಭೂತಪೂರ್ವವಾದ ಬೆಳವಣಿಗೆಗಳನ್ನು ನಾವು ಕಾಣಬಹುದು. ಇವರ ಕಾಲಗಳಲ್ಲಾದ ಪ್ರಗತಿಯನ್ನೊಮ್ಮೆ ನೋಡುವುದಾದರೆ,

**1) ದಿವಾನ್ ರಂಗಾಚಾರ್ಲು:**

ಇವರು 10ನೇ ಚಾಮರಾಜ ಒಡೆಯರ್ ಕಾಲದಲ್ಲಿ ದಿವಾನರಾಗಿದ್ದು ಇವರ ಪ್ರಮುಖ ಕೊಡುಗೆಗಳೆಂದರೆ,

* 1881ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಸ್ಥಾಪನೆ ಮಾಡಿದ್ದು (144 ಸದಸ್ಯರು) ಒಂದು ದೇಶೀಯ ಸಂಸ್ಥಾನ ಇಂತಹ ಪ್ರಜಾಸಂಸ್ಥೆ ಹೊಂದಿದ್ದು ಇದೇ ಮೊದಲು.

* 1876–78ರಲ್ಲಿಯ ಕ್ಷಾಮದಿಂದ ಮೈಸೂರು ರಾಜ್ಯದ ಆದಾಯದಲ್ಲಿ ಇಳಿತ ಕಂಡಿತು. ಭೂಕಂದಾಯ ಇಳಿದು ಬ್ರಿಟೀಷರಿಗೆ 80 ಲಕ್ಷ ಸಾಲ ಕೊಡಬೇಕಾದಾಗ ಬಡ್ಡಿದರವನ್ನು 5ರಿಂದ 4ಕ್ಕೆ ಇಳಿಸಿದ ಕೀರ್ತಿ ಇವರದು.

* ಆಡಳಿತದಲ್ಲಿ ಭ್ರಷ್ಟಾಚಾರ ಕಡಿಮೆ ಮಾಡಿದರು ಮತ್ತು ದಕ್ಷ ಪ್ರಾಮಾಣಿಕರಿಗೆ ಗೌರವ ಮನ್ನಣೆ ನೀಡುತ್ತಿದ್ದರು.

* 1881ರಲ್ಲೇ ಮಹಾರಾಣಿ ಬಾಲಕಿಯರ ಪ್ರೌಢಶಾಲೆ ತೆರೆದರು. ಮೈಸೂರು ಸಾಕ್ಷರ ಸಂಘ ಸ್ಥಾಪನೆ.

* ಜಾನ್ ಮತ್ತು ಟೇಲರ್ ಕಂಪನಿ ಜೊತೆಗೂಡಿ ಕೋಲಾರದ ಚಿನ್ನದ ಗಣಿ ಕಾರ್ಯಾರಂಭ.

* ಇವರು 1883ರಲ್ಲಿ ಮರಣ. ಇವರ ನೆನಪಿಗೆ ಬೆಂಗಳೂರಿನಲ್ಲಿ ರಂಗಾಚಾರ್ಲು ಭವನ ನಿರ್ಮಾಣ.

**2) ದಿವಾನ್ ಕೆ.ಶೇಷಾದ್ರಿ ಅಯ್ಯರ್: 1883–1901**

ಇವರ ಪ್ರಮುಖ ಕೊಡುಗೆಗಳೆಂದರೆ,

* ಪ್ರಜಾಪ್ರತಿನಿಧಿ ಸಭೆಯ ಸುಧಾರಣೆ, 3 ವರ್ಷಕ್ಕೊಮ್ಮೆ ಚುನಾವಣೆ ಸದಸ್ಯರನ್ನು ಗೆಜೆಟ್‌ನಲ್ಲಿ ಪ್ರಕಟಿಸುವ ರೂಢಿ ಜಾರಿಗೆ ತಂದರು.

* 1898ರಲ್ಲಿ ಕೃಷಿ ಮತ್ತು ಸಂಖ್ಯಾಶಾಸ್ತ್ರ ಇಲಾಖೆ ಸ್ಥಾಪನೆ.

* 1899ರಲ್ಲಿ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಮೈಸೂರಿನಲ್ಲಿ ಏರ್ಪಡಿಸಿದ್ದರು.

* 1894 ಕೃಷಿ ಬ್ಯಾಂಕ್ ಸ್ಥಾಪನೆ.

* ಕೈಗಾರಿಕಾ ಪ್ರಗತಿ: ರಂಗಾಚಾರ್ಲು ಚಿನ್ನದ ಗಣಿಯನ್ನು ಕೋಲಾರದಲ್ಲಿ ಆರಂಭಿಸಿದರೆ ಅದು ಐಯ್ಯರ್ ಕಾಲದಲ್ಲಿ ಉತ್ಪಾದನೆ ಶುರುಮಾಡಿತು. ಬೆಂಗಳೂರಿನಲ್ಲಿ ಕಾಟನ್ ಉಣ್ಣೆ ರೇಷ್ಮೆ ಗಿರಣಿಗಳು ತೆರೆದವು. ಬೆಂಗಳೂರಿನ ಬಿನ್ನಿಮಿಲ್ ಪ್ರಾರಂಭ.

* ಸಾರಿಗೆ ಸಂಪರ್ಕಕ್ಕೆ ಮಹತ್ವ ನೀಡಿ ಹರಿಹರ ಬೆಂಗಳೂರು, ಶಿವಮೊಗ್ಗದಲ್ಲಿ ನಂಜನಗೂಡು ಭಾಗಗಳಿಗೆ ರೈಲ್ವೆ ಹಳಿ ಸಂಪರ್ಕ ಕಲ್ಪಿಸಿದರು.

* ನೀರಾವರಿಗಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಮಾರಿಕಣಿವೆ ವಾಣಿವಿಲಾಸ ಜಲಾಶಯ ನಿರ್ಮಾಣ (25) ಕೆರೆ ನಿರ್ಮಾಣ ಮಾಡಿದರು.

* 1889ರಲ್ಲಿ ಅಂಚೆ ಸೇವೆ, ನೌಕರರಿಗೆ ಜೀವ ವಿಮಾ ಯೋಜನೆ, ಮೈಸೂರಿನಲ್ಲಿ ಚಾಮರಾಜ ಮೃಗಾಲಯ (45 ಎಕರೆ).

* 1891ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ, ಲೋಕಲ್ ಮತ್ತು ತಾಲ್ಲೂಕ್ ಬೋರ್ಡ್ ಸ್ಥಾಪನೆ. ಓರಿಯೆಂಟಲ್ ಲೈಬ್ರರಿ, ಪುರಾತತ್ವ ಇಲಾಖೆ ಮತ್ತು ಬ್ರೂಸ್‌ಫುಟ್ ನೇತೃತ್ವದಲ್ಲಿ ಭೂಗರ್ಭಶಾಸ್ತ್ರ ಇಲಾಖೆ ತೆರೆದರು.

* ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ, ಶಿಷ್ಯವೇತನ, ತುಮಕೂರಿನ ಎಂಪೆರಿಯಸ್ ಗರ್ಲ್ಸ್ ಹೈಸ್ಕೂಲ್.

* 1894ರಲ್ಲಿ ಮೈಸೂರು ಬಾಲ್ಯ ವಿವಾಹ ನಿಷೇದ ಕಾಯ್ದೆ (8 ವರ್ಷ).

* ವಿವೇಕಾನಂದರಿಗೆ ಚಿಕಾಗೋ ಸಮಾವೇಶಕ್ಕೆ ತಲುಪಲು ಸಹಾಯ ಮಾಡಿದರು.

* ಶಿವನಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರ ತೆರೆದರು.

**3. ದಿವಾನ್ ಪಿ.ಎನ್. ಕೃಷ್ಣಮೂರ್ತಿ (1901–06):**

* 1903ರಲ್ಲಿ ಸ್ಥಳೀಯ ಮಂಡಳಿ ಕಾಯ್ದೆ ಜಾರಿ.

* ಕರಕುಶಲ ತರಬೇತಿಗೆ ಚನ್ನಪಟ್ಟಣದಲ್ಲಿ ತರಬೇತಿ ಕೇಂದ್ರ ತೆರೆದರು.

* ಮೈಸೂರು ನಗರಾಭಿವೃದ್ಧಿ ಮಂಡಳಿ ತೆರೆದರು.

* 1905ರಲ್ಲಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸ್ಥಾಪನೆ. ಇದೇ ಇಂದಿನ ಭಾರತೀಯ ವಿಜ್ಞಾನ ಸಂಸ್ಥೆ.

* 1905ರಲ್ಲಿ ಸಹಕಾರಿ ಸಂಘ ಮತ್ತು ಬ್ಯಾಂಕ್ ಸ್ಥಾಪನೆ.

**4) ವ್ಹಿ.ಪಿ. ಮಾಧವರಾವ್ (1906–1909):**

* 1907ರಲ್ಲಿ ಮೈಸೂರು ವಿಧಾನಪರಿಷತ್ ಸ್ಥಾಪನೆ (ದ್ವಿಸದನ ಶಾಸಕಾಂಗ).

* ಸೆಂಟ್ರಲ್ ಕೋ ಆಪ್‌ರೇಟ್ ಬ್ಯಾಂಕ್ ಸ್ಥಾಪನೆ.

* 1908ರಲ್ಲಿ ನ್ಯೂಸ್ ಪೇಪರ್ ರೆಗ್ಯೂಲೇಷನ್ ಆಕ್ಟ್ ಜಾರಿ ಮಾಡಿ ಪತ್ರಿಕಾ ಸ್ವಾತಂತ್ರ್ಯ ಮೊಟಕುಗೊಳಿಸಿದ್ದರು.

**5) ಟಿ. ಆನಂದ್‌ರಾವ್ (1909–1912):**

* 1910ರಲ್ಲಿ 41 ಲಕ್ಷ ಖರ್ಚು ಮಾಡಿ ಶಿಲ್ಪಿ 'ಹೆನ್ರಿ ಇರ್ವಿನ್'ರಿಂದ ಮೈಸೂರಿನ ಅರಮನೆ ನಿರ್ಮಿಸಿದರು. ರಾಜಾ ರವಿವರ್ಮರ ಚಿತ್ರಗಳಿಂದ ಅಲಂಕಾರ.

* 6 ಕೋಟಿ ಖರ್ಚು ಮಾಡಿ ಕಾವೇರಿ ನದಿಗೆ ಕನ್ನಂಬಾಡಿ ಅಣೆಕಟ್ಟು ನಿರ್ಮಿಸಲಾಯಿತು. ವಾಟರ್ ಬ್ಲಾಕ್ ಮತ್ತು ಸ್ವಯಂಚಾಲಿತ ಬಾಗಿಲುಗಳಿವೆ.

* ದಸರಾದಲ್ಲಿ ವಸ್ತುಪ್ರದರ್ಶನ ಆರಂಭ.

**6) ಎಮ್. ವಿಶ್ವೇಶ್ವರಯ್ಯನವರು (1912–18):**

* 1918ರಲ್ಲಿ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿ ಕಾಯ್ದೆ ಜಾರಿ ಮಾಡಿದರು.

* ಕೈಗಾರಿಕಾಕರಣ ಇಲ್ಲವೇ ವಿನಾಶ ಎಂಬ ಹೇಳಿಕೆ. ಮೈಸೂರಿನ ಚೇಂಬರ್ ಆಫ್ ಕಾಮರ್ಸ್ ಸ್ಥಾಪನೆ. 1916ರಲ್ಲಿ ಭದ್ರಾವತಿಯಲ್ಲಿ ವ್ಹಿ.ಎಸ್.ಐ.ಎಲ್. ಸ್ಥಾಪನೆ. ಗಂಧದ ಎಣ್ಣೆ, ಸಾಬೂನು, ಚರ್ಮದ ಹದ ಕಾರ್ಖಾನೆಗಳು ಹಾಗೂ ಏಷ್ಯಾದಲ್ಲೇ ದೊಡ್ಡದಾದ ಹೆಚ್.ಎ.ಎಲ್. ಕಾರ್ಖಾನೆ ಸ್ಥಾಪನೆ ಮಾಡಿದರು.

* ಮಿಂಟೋ ಕಣ್ಣಿನ ಆಸ್ಪತ್ರೆ ಸ್ಥಾಪನೆ, ನಾಗೇನಹಳ್ಳಿಯಲ್ಲಿ ಕಬ್ಬು ಮತ್ತು ಭತ್ತದ ಸಂಶೋಧನಾ ಕೇಂದ್ರ, ಬೆಂಗಳೂರು ಕೃಷಿ ವಿ.ವಿ. ಸ್ಥಾಪಿಸಿದರು. 1917 ರೇಷ್ಮೆ ಸಂಶೋಧನಾ ಫಾರಂ ಚನ್ನಪಟ್ಟಣದಲ್ಲಿ ಸ್ಥಾಪನೆ ಮಾಡಿದರು.

* ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ವಿಧೇಯಕ ಜಾರಿ ಮಾಡಿದರು. 1916ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ ಮಾಡಿದರು.

* 1915 ಕನ್ನಡ ಸಾಹಿತ್ಯ ಪರಿಷತ್ತು ರಚನೆ. 1913ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಆರಂಭ.

**7) ಕಾಂತರಾಜ್ ಅರಸ್ (1918–22):**

ಇವರು ಪ್ರಥಮ ಬ್ರಾಹ್ಮಣೇತರ ದಿವಾನರು.

* ಇವರು ಹಿಂದುಳಿದ ವರ್ಗದವರ ಶೈಕ್ಷಣಿಕ ಹಿತಾಸಕ್ತಿಗಳನ್ನು ರಕ್ಷಿಸಿದರು.

* ಶಿಕ್ಷಣ ಕ್ಷೇತ್ರದಲ್ಲಿ ಅನೇಕ ರಿಯಾಯಿತಿಗಳನ್ನು ನೀಡಿದರು.

* ಹಿಂದುಳಿದ ವರ್ಗದ ರಕ್ಷಕನೆಂಬ ಬಿರುದು.

**8) ದಿವಾನ್ ಆರ್. ಬ್ಯಾನರ್ಜಿ (1922–26):**

* ಪ್ರಜಾಪ್ರತಿನಿಧಿ ಸಭೆ ವಿಸ್ತರಿಸಿದರು. ವಿಧಾನಪರಿಷತ್ ಸದಸ್ಯರ ಸಂಖ್ಯೆ ಹೆಚ್ಚಳ (50ರಿಂದ 150).

* ಅಪೆಕ್ಸ್ ಬ್ಯಾಂಕ್ ಸ್ಥಾಪನೆ ಮತ್ತು ಸಿವಿಲ್ ಸಮಿತಿ ಸ್ಥಾಪನೆ (ರಾಜ್ಯಾಂಗ ಸುಧಾರಣೆಗೆ).

**9) ಮಿರ್ಜಾ ಇಸ್ಮಾಯಿಲ್ (1926–1941):**

ಕೃಷ್ಣರಾಜ ಒಡೆಯರ್ ಸಹಪಾಠಿಗಳಾದ ಇವರು ತಮ್ಮ ಆಡಳಿತದ ಅವಧಿಯಲ್ಲಿ ಅದ್ವಿತೀಯ ಸಾಧಕನೆನಿಸಿಕೊಂಡರು.

ಇವರ ಸಾಧನೆಗಳೆಂದರೆ,

1) 1927ರಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಅಧಿನಿಯಮ ಜಾರಿ (ತಾಲ್ಲೂಕು ಲೋಕಲ್ ಬೋರ್ಡ್ ತೆಗೆದು ಹಾಕಲಾಯಿತು).

2) ಸ್ಥಳೀಯ ಸರ್ಕಾರಗಳಿಗೆ ಪೂರ್ಣ ಪ್ರಮಾಣದ ಸ್ವಾಯತ್ತತೆ ನೀಡಿದರು.

3) ಬೆಳಗೊಳದ ರಸಗೊಬ್ಬರ ಕೈಗಾರಿಕೆ, ಹಾಸನದ ಕೃಷಿ ಉಪಕರಣಗಳ ಕೈಗಾರಿಕೆ, ಪಿಂಗಾಣಿ ಬಟ್ಟಲು ಮುಂತಾದ ಕೈಗಾರಿಕೆ ಸ್ಥಾಪಿಸಿದರು.

4) ವ್ಯಾಪಾರದ ಪ್ರಗತಿಗೆ ಬಾಂಬೆಯಲ್ಲಿ ಬಾಂಬೆ ಎಂಪೋರಿಯಂ ಸ್ಥಾಪನೆ.

5) ಕಾವೇರಿ ನದಿಗೆ ಇರ್ವಿನ್ ಕಾಲುವೆ (ವಿಶ್ವೇಶ್ವರಯ್ಯ ನಾಲೆ) ತೋಡಿಸಿದರು.

6) 1927ರಲ್ಲಿ ಮೈಸೂರ್ ಲ್ಯಾಂಡ್ ರೆಕಾರ್ಡ್ ರೈಟ್ಸ್ ಅಧಿನಿಯಮ ಸ್ಥಾಪಿಸಿದರು.

7) ಶಿಕ್ಷಣದಲ್ಲಿ ಖಾಸಗೀಕರಣಕ್ಕೆ ಅವಕಾಶ ನೀಡಿ 7ನೇ ತರಗತಿಯವರೆಗೂ ಕನ್ನಡ ಮಾಧ್ಯಮ ಕಡ್ಡಾಯ ಮಾಡಿತು.

* ಮೈಸೂರು ಮೆಡಿಕಲ್ ಕಾಲೇಜು ಸ್ಥಾಪನೆ.

* ಮೈಸೂರು ಬೆಂಗಳೂರು ಆಕಾಶವಾಣಿ ಕೇಂದ್ರ, ಬೆಂಗಳೂರಿನ ಜಕ್ಕೂರಿನ ವಿಮಾನ ನಿಲ್ದಾಣ ತೆರೆಯಲಾಯಿತು.

* ಕೆ.ಆರ್.ಎಸ್. ಬೃಂದಾವನದ ಹೂತೋಟ, ಬೆಂಗಳೂರು ಗಾರ್ಡನ್ ಸಿಟಿಯಾಯಿತು.

* ಶಿವನಸಮುದ್ರದ ಶಿಂಷಾದಲ್ಲಿ ವಿದ್ಯುತ್ ಶಕ್ತಿ ಆರಂಭ. ವಿದ್ಯುತ್ ಸೌಲಭ್ಯ ಗ್ರಾಮಗಳಿಗೂ ವಿಸ್ತರಣೆಯಾಯಿತು.

ಇವರ ಸೇವೆ ಪರಿಗಣಿಸಿ ಮಹಾರಾಜರು 'ಅಮೀನ್–ಉಲ್–ಮುಲ್ಕ್' ಎಂಬ ಬಿರುದು ನೀಡಿದುರ.

ಇವರ ನಂತರ ಬಂದಂತಹ ಎನ್.ಮಾಧವರಾವ್ ಮತ್ತು ಆರ್ಕಾಟ್‌ಸ್ವಾಮಿ ಮೊದಲಿಯಾರ್‌ರವರೂ ಕೂಡ ತಮ್ಮದೇ ಆದ ಛಾಪನ್ನು ನೀಡುವಲ್ಲಿ ಯಶಸ್ವಿಯಾದರು.

ಒಟ್ಟಾರೆಯಾಗಿ ದಿವಾನರ ಕಾಲವು ಮೈಸೂರು ಪ್ರಗತಿಗೆ ಮುನ್ನುಡಿ ಬರೆಯಿತೆಂಬುದರಲ್ಲಿ ಯಾವುದೇ ಅತಿಶಯೋಗ್ತಿಯಿಲ್ಲ.

# ಘಟಕ – 6

# ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ಹಾಗೂ ಏಕೀಕರಣ

## ರಾಷ್ಟ್ರೀಯತೆಯ ಉದಯ:

19ನೇ ಶತಮಾನದ ಅಂತ್ಯಕ್ಕೆ ಕನ್ನಡಿಗರಲ್ಲಿ ದೇಶಾಭಿಮಾನವು ಜಾಗೃತಗೊಂಡು ರಾಷ್ಟ್ರೀಯ ಚಳುವಳಿ ಆರಂಭಗೊಂಡಿದುದು ಒಂದು ಮಹತ್ತರವಾದ ಬೆಳವಣಿಗೆ. ಕನ್ನಡಿಗರಲ್ಲಿ ಈ ರಾಷ್ಟ್ರೀಯತೆಯು ಜಾಗೃತಗೊಳ್ಳಲು ಹಲವಾರು ಕಾರಣಗಳಿವೆ. ಅವುಗಳೆಂದರೆ,

1) ಬ್ರಿಟೀಷರು ತಂದ ಏಕರೂಪ ಆಡಳಿತ ವ್ಯವಸ್ಥೆ.

2) ಇಂಗ್ಲೀಷ್ ಶಿಕ್ಷಣದಿಂದ ಪಾಶ್ಚಿಮಾತ್ಯ ವಿಚಾರಧಾರೆಯ ಅರಿವು ಮತ್ತು ಸಾರಿಗೆ ಸಂಪರ್ಕ ಕ್ರಾಂತಿಯಿಂದ.

3) ಬ್ರಿಟೀಷರ ಆರ್ಥಿಕ ಮತ್ತು ಸಾಮಾಜಿಕ ಶೋಷಣೆ.

4) 19ನೇ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು.

5) ಕನ್ನಡ ಸಾಹಿತ್ಯ ಮತ್ತು ಚರಿತ್ರೆ ಪುನರುಜ್ಜೀವನಗೊಂಡಿದ್ದು.

6) ಬಾಲಾಚಾರಿ, ವಾಸುದೇವಾಚಾರ್ಯ, ಆಲೂರು ವೆಂಕಟರಾವ್, ತಿಲಕರವರ ಸಾಹಿತ್ಯದ ಪ್ರಭಾವ.

7) ವೃತ್ತ ಪತ್ರಿಕೆಗಳ ಪ್ರಭಾವ.

ಹೀಗೆ ಪ್ರಾರಂಭವಾದ ಚಳುವಳಿಯು 2 ಹಂತ ಹೊಂದಿದ್ದು, ಪ್ರಥಮ ಹಂತ ಗಾಂಧಿ ಪೂರ್ವ ಯುಗ.

## ಗಾಂಧಿ ಪೂರ್ವ ಯುಗ (1885–1919):

ಎ.ಓ. ಹ್ಯೂಂರಿಂದ 1885ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಕಾಂಗ್ರೆಸ್ ಭಾರತೀಯರ ಐಕ್ಯತೆಗೆ ಪ್ರೇರಣೆಯಾಯಿತು. ಇದರ ಪ್ರಥಮ ಅಧಿವೇಶನದಲ್ಲಿ ಕರ್ನಾಟಕದ ಕೋಲಾಚಲಂ ವೆಂಕಟರಾವ, ಆಲೂರು ವೆಂಕಟರಾವ್, ಬಾಲಾಚಾರಿ ಮುಂತಾದ ಕನ್ನಡಿಗರು ಭಾಗವಹಿಸಿದ್ದರು. 1893ರಲ್ಲಿ 'ಹ್ಯೂಂ' ಬೆಳಗಾವಿ ಮತ್ತು ಧಾರವಾಡಕ್ಕೆ ಭೇಟಿ ನೀಡಿ ಕಾಂಗ್ರೆಸ್ ತತ್ವ ಪ್ರಚಾರ ಮಾಡಿದರು.

## ಸ್ವದೇಶೀ ಚಳುವಳಿ:

ಲಾರ್ಡ್‌ಕರ್ಜನ್ ಬಂಗಾಳ ವಿಭಜನೆಯನ್ನು 1905ರಲ್ಲಿ ಮಾಡಿದ್ದರ ವಿರುದ್ಧ ಭಾರತದಲ್ಲಿ ಸ್ವದೇಶೀ ಚಳುವಳಿ ಆರಂಭಗೊಂಡಿತು. ಅದರಂತೆ ಕರ್ನಾಟಕದ ಬೆಳಗಾಂ, ಧಾರವಾಡ, ನವಲಗುಂದ, ಕಿತ್ತೂರು, ಗದಗ ಮತ್ತು ಬಾಗಲಕೋಟೆಗಳಲ್ಲಿ ಸ್ವದೇಶೀ ಚಳುವಳಿ ನಡೆದು, ವಿದೇಶೀ ವಸ್ತುಗಳನ್ನು ಸಉಟ್ಟು ಸ್ವದೇಶೀ ವಸ್ತುಗಳ ಬಳಕೆಗೆ ತಂದರು. 1906ರಲ್ಲಿ ತಿಲಕರು ಬೆಳಗಾವಿ, ಧಾರವಾಡ, ಬಳ್ಳಾರಿಯಲ್ಲಿ ಪ್ರವಾಸ ಕೈಗೊಂಡರು. ಇವರ ಕೇಸರಿ ಮತ್ತು ಮರಾಠ ಪತ್ರಿಕೆಗಳು ಉತ್ತರ ಕರ್ನಾಟಕ ಜನತೆ ಮೇಲೆ ಗಾಢ ಪ್ರಭಾವ ಬೀರಿದವು. ಗಂಗಾಧರರಾವ್ ದೇಶಪಾಂಡೆ, ಜೋಷಿ, ಜಯರಾಂ, ನಾರಾಯಣರಾವ್, ಆಲೂರು ವೆಂಕಟರಾವ್‌ರವರು ಈ ಚಳುವಳಿಯಲ್ಲಿ ಭಾಗವಹಿಸಿದ್ದರು. ಮದ್ಯದ ಅಂಗಡಿ ಮುಂದೆ ಪಿಕೆಟಿಂಗ್ ಮಾಡಲಾಯಿತು. ಈ ಸಮಯದಲ್ಲಿ ಎನ್.ಎಸ್.ಹರ್ಡೇಕರ 'ವಂದೇ ಮಾತರಂ' ಗೀತೆ ಹಾಡಿ ಜನಪ್ರಿಯಗೊಳಿಸಿದರು.

## ಸೂರತ್ ಕಾಂಗ್ರೆಸ್: 1907

ಸೂರತ್ ಕಾಂಗ್ರೆಸ್ ಸಮಾವೇಶಕ್ಕೆ ಆಲೂರು ವೆಂಕಟರಾವ್ ಅಣ್ಣಾಚಾರಿ ಹೊಸಕೇರಿ, ದೇಶಪಾಂಡೆ, ಶ್ರೀನಿವಾಸ್ ಕೌಜಲಗಿ, ಭಾಗವಹಿಸಿ ತಿಲಕರಿಗೆ ಬೆಂಬಲ ನೀಡಿದರು.

* ಹನುಮಂತರಾವ್ ದೇಶಪಾಂಡೆ ಬೆಳಗಾವಿಯಲ್ಲಿ 'ಮ್ಯಾಜಿನಿ ಕ್ಲಬ್' ಎಂಬ ರಹಸ್ಯ ಕ್ರಾಂತಿಕಾರಿ ಸಂಘ 1907ರಲ್ಲಿ ಸ್ಥಾಪಿಸಿದರು.

* 1916ರಲ್ಲಿ ತಿಲಕ್ ಸ್ಥಾಪಿಸಿದ ಹೋಮ್ ರೂಲ್ ಲೀಗ್ ಶಾಖೆಯನ್ನು ಗಂಗಾಧರರಾವ್ ದೇಶಪಾಂಡೆ ಧಾರವಾಡದಲ್ಲಿ ಪ್ರಾರಂಭಿಸಿದರು. ಇದರ ಶಾಖೆಗಳು ಸಂಕೇಶ್ವರ, ಮಂಗಳೂರು, ಸಿದ್ದಾಪುರ, ಹುಬ್ಬಳ್ಳಿ, ನಿಪ್ಪಾಣಿ, ಬೆಳಗಾಂನಲ್ಲಿ ಸ್ಥಾಪಿತವಾದವು.

* 1917ರಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಹೈಸ್ಕೂಲ್ ಸ್ಥಾಪನೆಯಾಯಿತು. ಇದು ಮುಂದಿನ ಎಲ್ಲಾ ವೈಚಾರಿಕ ಚಟುವಟಿಕಾ ಕೇಂದ್ರವಾಯಿತು.

## ದ್ವಿತೀಯ ಹಂತ – ಗಾಂಧಿ ಯುಗ (1919–1947):

ಗಾಂಧೀಜಿಯವರು 1915ರಲ್ಲಿ ಮೊದಲಿಗೆ ಬೆಂಗಳೂರಿಗೆ ಭೇಟಿ ನೀಡಿ ತಮ್ಮ ಗುರು ಗೋಖಲೆಯವರ ಪುತ್ಥಳಿ ಅನಾವರಣಗೊಳಿಸಿದರು. ನಂತರ 1916, 1918ರ ರಾಜಕೀಯ ಸಮಾವೇಶದಲ್ಲಿ ಭಾಗವಹಿಸಿದ್ದರು. 1920ರಲ್ಲಿ ತಿಲಕರು ತೀರಿಕೊಂಡಾಗ ಭಾರತ ಸ್ವಾತಂತ್ರ್ಯ ಚಳುವಳಿಯ ನಾಯಕರಾದರು. ಇಲ್ಲಿಂದ ಕರ್ನಾಟಕದಲ್ಲಾದ ಬೆಳವಣಿಗೆ ನೋಡುವುದಾದರೆ,

### 1) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ):

ಅಖಿಲ ಕರ್ನಾಟಕದ ಮೊದಲ ರಾಜಕೀಯ ಸಮ್ಮೇಳನ ವ್ಹಿ.ಪಿ. ಮಾಧವರಾವ್ ಅಧ್ಯಕ್ಷತೆಯಲ್ಲಿ 1920ರಲ್ಲಿ ಧಾರವಾಡದಲ್ಲಿ ನಡೆಯಿತು. ಇದರ ನಿರ್ಣಯದಂತೆ 1920ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಕಮಿಟಿ ಬೇಕೆಂದು ಕೇಳಿ ಪಡೆದರು. ಅದರಂತೆ ಮೊದಲ ಕಾಂಗ್ರೆಸ್ ಕಮಿಟಿ ಸ್ಥಾಪನೆಯಾಗಿ 'ಗಂಗಾಧರ್ ರಾವ್ ದೇಶಪಾಂಡೆ' ಅಧ್ಯಕ್ಷರಾದರು.

### 2) ಅಸಹಕಾರ ಚಳುವಳಿ:

ರೌಲತ್ ಕಾಯ್ದೆ ವಿರೋಧಿಸಿ ಗಾಂಧೀಜಿಯವರು 1920ರಲ್ಲಿ ಈ ಚಳುವಳಿ ಆರಂಭಿಸಿದರು. ಇವರ ಕರೆಯಂತೆ ಕರ್ನಾಟಕದಲ್ಲಿ ಬೆಳಗಾವಿ, ಹುಬ್ಬಳ್ಳಿ, ಗದಗ, ಸಿದ್ದಾಪುರ, ಹಾವೇರಿ, ಧಾರವಾಡದಲ್ಲಿ ಈ ಚಳುವಳಿ ಆರಂಭವಾಯಿತು. ಶಾಲಾ ಕಾಲೇಜು, ಕೋರ್ಟ್‌ಗಳು, ಬಹಿಷ್ಕಾರವಾದವು. ವಿದೇಶೀ ವಸ್ತುಗಳನ್ನು ಸುಟ್ಟರು. ಇಲ್ಲಿ ಕೌಜಲಗಿ, ಹರ್ಡೀಕರ್, ನೀಲಕಂಠಪ್ಪ.ಜಿ., ದೇಶಪಾಂಡೆ, ಭಾಗವಹಿಸಿದರು. ಗಂಗಾಧರ್‌ರಾವ್ ದೇಶಪಾಂಡೆ ಬೆಂಗಳೂರಿನಲ್ಲಿ ಚರಕ ಸಂಘ ಸ್ಥಾಪಿಸಿದರು. ಕರ್ನಾಟಕ ಗಾಂಧಿ ಹರ್ಡೀಕರ್ ಮಂಜಪ್ಪಾ ಖಾದಿಯನ್ನು ಜನಪ್ರಿಯಗೊಳಿಸಿದರು. 70 ಜನ ಜೈಲುವಾಸ ಅನುಭವಿಸಿದರು. ಮೂವರು ಹುತಾತ್ಮರಾದರು. 1923ರಲ್ಲಿ ಎನ್.ಎಸ್.ಹರ್ಡೀಕರ್ ರಾಷ್ಟ್ರೀಯ ಸೇವಾದಳ ಸ್ಥಾಪಿಸಿದರು.

### 3) ಬೆಳಗಾವಿ ಕಾಂಗ್ರೆಸ್ ಅಧಿವೇಶನ (1924):

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ 1924ರಲ್ಲಿ ನಡೆಯಿತು. ಗಾಂಧಿ ಇದರ ಅಧ್ಯಕ್ಷರಾದರು. ಇಲಲಿ ಹುಯಿಲಗೋಳ ನಾರಾಯಣರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಹಾಡನ್ನು ಹಾಡಲಾಯಿತು. ರಾಜೇಂದ್ರ ಪ್ರಸಾದ್, ರಾಜಾಜಿ, ನೆಹರು, ಆಲಿ ಸಹೋದರರು ಭಾಗವಹಿಸಿದ್ದರು. ಇದೊಂದು ಐಕ್ಯತಾ ಸಮ್ಮೇಳನವಾಗಿತ್ತು. ಹಿಂದೂ ಮುಸ್ಲಿಂ ಒಗ್ಗೂಡಿಸಿತು. 1927ರಲ್ಲಿ ಗಾಂಧಿ ನಂದಿ ಬೆಟ್ಟದಲ್ಲಿ ವಿಶ್ರಾಂತಿಗೆ ಬಂದಾಗ ಮಂಡ್ಯ, ಮೈಸೂರು, ಶಿವಮೊಗ್ಗದಲ್ಲಿ ಪ್ರವಾಸ ಮಾಡಿದರು.

### 4) ಕಾನೂನು ಭಂಗ ಚಳುವಳಿ 1930:

ಗಾಂಧೀಜಿಯವರು 1930ರಲ್ಲಿ ಉಪ್ಪಿನ ಸತ್ಯಾಗ್ರಹ ಕೈಗೊಂಡು ಉಪ್ಪಿನ ಮೇಲೆ ವಿಧಿಸಿದ್ದ ತೆರಿಗೆ ಕಾಯ್ದೆ ಭಂಗ ಮಾಡಿದರು. ಇದರಲ್ಲಿ ಕರ್ನಾಟಕದ ಮೈಲಾರ ಮಹಾದೇವಪ್ಪ ಭಾಗವಹಿಸಿದ್ದರು.

ಕರ್ನಾಟಕದ ಶಿರ್ಸಿ, ಸಿದ್ದಾಪುರ, ಅಂಕೋಲಾ, ಉಡುಪಿ, ಕಾರ್ಕಳ, ಇತ್ಯಾದಿ 30 ಕಡೆಗಳಲ್ಲಿ ಸತ್ಯಾಗ್ರಹ

ನಡೆಯಿತು. 40000 ಜನ ಭಾಗಿ. ಎಮ್.ಆಯ್, ನಾಢಕರ್ಣಿ ಮತ್ತು ಮೈಲಾರ ಮಹಾದೇವಪ್ಪ ನೇತೃತ್ವ. (45 ದಿನ) ಗೋವಾದಿಂದ ಉಪ್ಪು ತಂದು ಸುಂಕವಿಲ್ಲದೇ ಕರ್ನಾಟಕದಲ್ಲಿ ಮಾರಲಾಯಿತು. ಅಂಕೋಲಾವನ್ನು ಕರ್ನಾಟಕದ ಬಾರ್ಡೋಲಿ ಎನ್ನುತ್ತಾರೆ.

**5) ಅರಣ್ಯ ಸತ್ಯಾಗ್ರಹ:**

ಸರ್ಕಾರ ಕಾಯ್ದಿರಿಸಿದ ಅರಣ್ಯಗಳಲ್ಲಿ ಈಚಲು ಗಿಡಗಳನ್ನು ಕಡಿದು ಹಾಕುವುದು, ಹುಲ್ಲು ಮತ್ತು ಉರುವಲು ತರುವ ಉದ್ದೇಶದಿಂದ ಈ ಚಳುವಳಿ ಪ್ರಾರಂಭವಾಯಿತು. ತುರುವನೂರು, ಧಾರವಾಡ, ಶಿಗ್ಗಾವಿ, ಶಿರ್ಸಿಯಲ್ಲಿ ಹೆಚ್ಚಾಗಿ ನಡೆಯಿತು. ಎಸ್. ನಿಜಲಿಂಗಪ್ಪ ಇದರಲ್ಲಿ ಭಾಗಿಯಾಗುವ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಇಲ್ಲಿ ಇವರಿಗೆ 1 1/2 ವರ್ಷ ಜೈಲು ಶಿಕ್ಷೆಯಾಯಿತು.

**6) ಕರ ನಿರಾಕರಣ ಚಳುವಳಿ:**

ಬಾರ್ಡೋಲಿಯಲ್ಲಿ ಸರ್ದಾರ್ ಪಟೇಲರು ಆರಂಭಿಸಿದ ಕರ ನಿರಾಕರಣೆ ಚಳುವಳಿಯಿಂದ ಪ್ರೇರಿತರಾದ ಕನ್ನಡಿಗರು ಶಿರ್ಸಿ, ಸಿದ್ದಾಪುರ, ಅಂಕೋಲಾ ಮತ್ತು ಹಿರೇಕೆರೂರಲ್ಲಿ ನಡೆಸಿದರು. ಸಿದ್ದಾಪುರದಲ್ಲಿ 80 ಕುಟುಂಬದ ಆಸ್ತಿ ಮುಟ್ಟುಗೋಲು.

**7) ಅಖಿಲ ಕರ್ನಾಟಕ ಸತ್ಯಾಗ್ರಹ:**

1932 ಜನವರಿ 12ರಂದು ಅಖಿಲ ಕರ್ನಾಟಕ ಸತ್ಯಾಗ್ರಹ ದಿನಾಚರಣೆ ಮಾಡಲಾಯಿತು.

**8) ಶಿವಪುರ ಕಾಂಗ್ರೆಸ್ ಅಧಿವೇಶನ (1938):**

ಮಂಡ್ಯದ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು 25000 ಜನ ಟಿ.ಸಿದ್ದಲಿಂಗಯ್ಯ ಅಧ್ಯಕ್ಷತೆಯಲ್ಲಿ ಸೇರಿ ತ್ರಿವರ್ಣಧ್ವಜ ಹಾರಿಸಿ ದಸ್ತಗಿರಿಯಾದರು. ಸಾಹುಕಾರ್ ಚೆನ್ನಯ್ಯ ಸೇರಿದಂತೆ ಕೆ.ಟಿ.ಭಾಷ್ಯಂ, ಕೆ.ಸಿ.ರೆಡ್ಡಿ, ಸಿದ್ದಲಿಂಗಯ್ಯ, ಬಳ್ಳಾರಿ ಸಿದ್ದಮ್ಮ ಬಂಧನವಾದರು. ಮೈಸೂರಿನ ಜವಾಬ್ದಾರಿ ಸರ್ಕಾರ ಸೇರಿದಂತೆ 18 ನಿರ್ಣಯ ಅಂಗೀಕರಿಸಿತು.

**9) ವಿಧುರಾಶ್ವತ್ಥ ದುರಂತ (1938 ಏಪ್ರಿಲ್ 25):**

ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ 1938 ಏಪ್ರಿಲ್ 25ರಂದು 10000 ಜನ ಸೇರಿ ನಿಷೇಧಾಜ್ಞೆ ಇದ್ದರೂ ಧ್ವಜಾರೋಹಣ ನಡೆಸಿದರು. ಇಲ್ಲಿ ಪೋಲಿಸರು ಗುಂಡು ಹಾರಿಸಿ ಸ್ಥಳದಲ್ಲಿ 35 ಜನ ಸತ್ತಿದ್ದರು. ಆದ್ದರಿಂದ ವಿದುರಾಶ್ವತ್ಥವನ್ನು 'ಕರ್ನಾಟಕದ ಜಲಿಯನ್ ವಾಲ್‌ಭಾಗ್' ಎನ್ನಲಾಗಿದೆ.

**10) ಕ್ವಿಟ್ ಇಂಡಿಯಾ ಚಳುವಳಿ (1942):**

1942ರಲ್ಲಿ ಭಾರತಕ್ಕೆ ಬಂದ ಕ್ರಿಪ್ಸ್ ನಿಯೋಗವು ಭಾರತೀಯರ ಬೇಡಿಕೆ ಈಡೇರಿಸಲಿಲ್ಲ. ಹೀಗಾಗಿ ಗಾಂಧಿ ಆಗಸ್ಟ2 8, 1942ರಂದು ಕ್ವಿಟ್ ಇಂಡಿಯಾ ಠರಾವು ಹೊರಡಿಸಿ, 'ಮಾಡು ಇಲ್ಲವೇ ಮಡಿ' ಎಂದು ಕರೆಕೊಟ್ಟರು. ಇದಕ್ಕೆ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಬಳ್ಳಾರಿ, ಬೆಳಗಾವಿ, ಗೋಕಾಕ್, ಮಂಡ್ಯ, ಶಿವಮೊಗ್ಗ, ಧಾರವಾಡದಲ್ಲಿ ಆರಂಭವಾಯಿತು.

ಆರ್.ಆರ್. ದಿವಾಕರ್, ಹೆಚ್ಚ.ಎನ್. ಹುಕ್ಕೇರಿ, ಕಮಲಾದೇವಿ, ಮೈಲಾರ ಮಹಾದೇವಪ್ಪ ಮುಂತಾದ ಗಣ್ಯರು ಭಾಗಿಯಾಗಿ ದಸ್ತಗಿರಿಯಾದರು. ಖಜಾನೆ ಲೂಟಿ, ಅಂಚೆ ತಂತಿ ತಂಡರಿಕೆ, ಸರ್ಕಾರಿ ಕಾಗದ ಪತ್ರ ನಾಶಕ್ಕೆ ಇಳಿದರು. 28 ರೈಲ್ವೆ ಠಾಣೆ ಸುಡಲಾಯಿತು. 25 ಸೇತುವೆ ನಾಶ ಹೀಗೆ ವಿಧ್ವಂಸಕ್ಕೆ ಇಳಿದಾಗ 18 ಕಡೆ ಗೋಲಿಬಾರ್‌ಗಳಾಗಿ 186 ಜನ ಸತ್ತರು. 7000 ಜನ ಸೆರೆವಾಸ ಅನುಭವಿಸಿದರು.

**11) ಈಸೂರು ದುರಂತ:**

ಕ್ವಿಟ್ ಇಂಡಿಯಾ ಚಳುವಳಿ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಜನರು ಗಾಂಧೀಜಿಯವರ ಮಾಡು ಇಲ್ಲವೇ ಮಡಿ ಕರೆಗೆ ಓಗೊಟ್ಟು ಶಾನುಭೋಗ ಮತ್ತು ಪಟೇಲರಿಂದ

ಕಂದಾಯ ಪತ್ರ ಕಿತ್ತುಕೊಂಡು ಒಂಟಿ ಕಾಲಲ್ಲಿ ನಿಲ್ಲಿಸಿದ್ದರು. ಅದಕ್ಷ ಅಧಿಕಾರಿಗಳು ಊರಿಗೆ ಬಂದರೆ ಎಚ್ಚರಿಕೆ? ಎಂಬ ಪತ್ರ ತೂಗು ಹಾಕಿದ್ದರು. ಹೀಗೆ ಸೆಪ್ಟೆಂಬರ್ 28, 1942 ಈಸೂರು ಸ್ವತಂತ್ರ ಘೋಷಿಸಿಕೊಂಡ ಪ್ರಥಮ ಹಳ್ಳಿಯಾಯಿತು. ಸ್ಥಳಕ್ಕೆ ಬಂದ ಪೋಲಿಸರು ಗುಂಡು ಹಾರಿಸಿ 2 ಜನರನ್ನು ಸಾಯಿಸಿ 41 ಜನರನ್ನು ಸೆರೆ ಹಿಡಿದು ಹಳ್ಳಿಯನ್ನು ಲೂಟಿ ಮಾಡಿದರು.

ಭಾರತವು 1947 ಆಗಸ್ಟ್ 15ರಂದು ಸ್ವತಂತ್ರ ಪಡೆಯಿತು. ಈ ಸ್ವತಂತ್ರ ಚಳುವಳಿಯಲ್ಲಿ ಕರ್ನಾಟಕದ ಪಾತ್ರ ಹಿರಿದು. ಕನ್ನಡಿಗರು ಮೆರೆದ ಎದೆಗಾರಿಕೆ, ತ್ಯಾಗ, ಬಲಿದಾನಗಳು ಪ್ರಶಂಸನೀಯ.

## ಅಂತಿಮವಾಗಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ: 1947

ಭಾರತ 1947 ಆಗಸ್ಟ್ 15ರಂದು ಸ್ವತಂತ್ರಗೊಂಡಿತು. ಮಹಾರಾಜ ಜಯಚಾಮರಾಜರು ಕೂಡಿಕೆಯ ಕಾಕಗದಪತ್ರಕ್ಕೆ ಸಹಿ ಹಾಕಿ ಮೈಸೂರು ಸಂಸ್ಥಾನ ಭಾರತ ಒಕ್ಕೂಟಕ್ಕೆ ಸೇರಿತು. ಆದರೆ ಮಯಸೂರಿನಲ್ಲಿ ಜನತೆಗೆ ಪ್ರಜಾಪ್ರಭುತ್ವಯುತ ಪೂರ್ಣ ಜವಾಬ್ದಾರಿಯು ಸರ್ಕಾರ ರಚನೆಯನ್ನು ಬಯಸಿದರು. ಹೀಗಾಗಿ ಮೈಸೂರು ಕಾಂಗ್ರೆಸ್ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ 'ಮೈಸೂರು ಚಲೋಜಾವ್ ಅಥವಾ ಅರಮನೆ ಸತ್ಯಾಗ್ರಹ ಚಳುವಳಿ ಹೂಡಿತು.

**ಅರಮನೆ ಸತ್ಯಾಗ್ರಹ:**

ಸೆಪ್ಟೆಂಬರ್ 3, 1947ರಂದು ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಿಂದ ಕೆ.ಸಿ.ರೆಡ್ಡಿ ಅರಮನೆ ಸತ್ಯಾಗ್ರಹ ಆರಂಭಿಸಿದರು. ಈ ಚಳುವಳಿಯಲ್ಲಿ ಬಳ್ಳಾರಿ ಸಿದ್ದಮ್ಮ, ಹೆಚ್.ಸಿ.ದಾಸಪ್ಪ, ಯಶೋಧರಮ್ಮ, ಎಸ್.ನಿಜಲಿಂಗಪ್ಪ, ಟಿ.ಸಿದ್ದಲಿಂಗಯ್ಯ ಮುಂತಾದವರು ಭಾಗವಹಿಸಿದ್ದರು. ಸರ್ಕಾರ ಮುನ್ಸೂಚನೆಯಾಗಿ ಎಲ್ಲರನ್ನೂ ಬಂಧಿಸಿತು. ರಾಜ್ಯದ ಎಲ್ಲಾ ಕಡೆಗಳಿಂದಲು ಬಂದ ಸತ್ಯಾಗ್ರಹಿಗಳು ಅರಮನೆ ಮುಂದೆ ಸತ್ಯಾಗ್ರಹ ಹೂಡಿದರು. ಇವರ ಬೇಡಿಕೆಗಳೆಂದರೆ,

1) ಮೈಸೂರಿನಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು.
2) ಚುನಾಯಿತ ಪ್ರತಿನಿಧಿಗಳಿರುವ ರಾಜ್ಯಾಂಗ ರಚನಾ ಸಭೆ ರಚಿಸುವುದು.
3) ರಾಜ್ಯಾಂಗ ರಚನೆಯಾಗುವವರೆಗೆ ತಾತ್ಕಾಲಿಕ ಸರ್ಕಾರ ಏರ್ಪಡಿಸುವುದು.
4) ರಾಜಕೀಯ ಬಂಧಿಗಳ ಬಿಡುಗಡೆ ಇತ್ಯಾದಿ.

ಮಧ್ಯವರ್ತಿಗಳಿಂದ ಮಹಾರಾಜರನ್ನು ಬಿಡುಗಡೆ ಮಾಡುವುದೇ ಇದರ ಉದ್ದೇಶ ಎಂದು ಟಿ. ಸಿದ್ದಲಿಂಗಯ್ಯ ಸಾರಿದರು.

ಇದರ ಅಂಗವಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸಭೆ ನಡೆದು 'ಆರ್ಕಾಟ್ ಬಯ್ಕಾಟ್, ತಂಬು ಚಟ್ಟಿ ಚಟ್ಟಕಟ್ಟಿ' ಎಂಬ ಘೋಷಣೆ ಮೊಳಗಿದವು. ಕೆ.ಜಿ.ಎಫ್., ಬೆಂಗಳೂರು, ಭದ್ರಾವತಿಯಲ್ಲಿ ನೌಕರರು ಚಳುವಳಿಗಿಳಿದರು. ಸ್ತ್ರೀಯರು ಸರ್ಕಾರಿ ಕಛೇರಿ ಮುಂದೆ ಪಿಕೆಟಿಂಗ್ ಹೂಡಿದರು. ಇಲ್ಲಿ 4000 ಜನ ದಸ್ತಗಿರಿಯಾದರು. ಮೈಸೂರಿನ ಮೆರವಣಿಗೆಯಲ್ಲಿ ಶಾಲಾಬಾಲಕ 'ರಾಮಸ್ವಾಮಿ' ಬಲಿಯಾದರು. ಹೀಗೆ 42 ದಿನಗಳ ಹೋರಾಟ ನಡೆಯಿತು. ಸತ್ಯಾಗ್ರಹಿಗಳು ಅರಮನೆಯ ಮೇಲೆ ರಾಷ್ಟ್ರಧ್ವಜ ಹಾರಿಸಿದರು. ಕೊನೆಗೆ ಜಯಚಾಮರಾಜರು ಕಾಂಗ್ರೆಸ್ ನಾಯಕರೊಂದಿಗೆ ಒಪ್ಪಂದವನ್ನು ಮಾಡಿಕೊಂಡರು. ಇದರಂತೆ ಅಕ್ಟೋಬರ್ 24ರ ವಿಜಯದಶಮಿಯಂದು ಜವಾಬ್ದಾರಿ ಸರ್ಕಾರ ರಚನೆಯಾಯಿತು. ಅಕ್ಟೋಬರ್ 29ರಂದು ಕೆ.ಸಿ.ರೆಡ್ಡಿ ಪ್ರಥಮ ಮುಖ್ಯಮಂತ್ರಿ ಆದರು. ಜಯಚಾಮರಾಜ ಒಡೆಯರ4 ರಾಜ್ಯಪಾಲರಾದರು.

ಹೀಗೆ ಕರ್ನಾಟಕವು ಸ್ವಾತಂತ್ರ್ಯ ಚಳುವಳಿಯ ತವರೂರಾಗಿತ್ತು.

## ಹೈದ್ರಾಬಾದ್-ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ:

ಕರ್ನಾಟಕದ ಇತರ ಭಾಗಗಳಂತೆ ಹೈದ್ರಾಬಾದ್ – ಕರ್ನಾಟಕ ಪ್ರಾಂತ್ಯದಲ್ಲೂ ಸ್ವಾತಂತ್ರ್ಯ ಚಳುವಳಿ ವಿಶೇಷವಾಗಿ ನಡೆಯಿತು. ಇದರ ಬಗೆಗೆ ಸಂಪೂರ್ಣವಾಗಿ ನೋಡುವುದಾದರೆ,

**1) ರಾಜಕೀಯ ಜಾಗೃತಿ:**

ಹೈದ್ರಾಬಾದ್-ಕರ್ನಾಟಕ ಭಾಗದಲ್ಲೂ (ಬೀದರ್, ರಾಯಚೂರು, ಗುಲ್ಬರ್ಗಾ) ರಾಜಕೀಯ ಜಾಗೃತಿ ಉಂಟಾಗಿ ಅಲ್ಪ ಸ್ವಲ್ಪ ಜಾಗೃತಿ ಪಡೆದ ಹಿಂದೂಗಳು ಒಗ್ಗೂಡತೊಡಗಿದರು. ಸವಲತ್ತುಗಳಿಗಾಗಿ ಬಾಯ್ತೆರೆಯಲಾರಂಭಿಸಿದರು. 1921ರ ವೇಳೆಗೆ ವಿದ್ಯಾವಂತರಲ್ಲಿ ಪ್ರಮುಖರಾದ ವಾಮನನಾಯಕ್, ವಿನಾಯಕರಾವ್, ವಿದ್ಯಾಲಂಕಾರ ಮುಂತಾದವರು ಸಂವಿಧಾನಾತ್ಮಕ ಸುಧಾರಣೆಗಾಗಿ ಪ್ರಯತ್ನಿಸಿದರು. 'ನಜ್ಜನ್ ಜಂಗ್' ಎಂಬ ಉದಾರಿ ಮುಸಿಂ ಮುಖಂಡನಿಂದ ಸ್ಥಾಪಿತವಾದ 'ಸಿಟಿಜನ್ ಲೀಗ್' ನಾಗರೀಕ ಹಕ್ಕು ಆಸ್ತಿ ರಕ್ಷಣೆಗೆ ಧಾರ್ಮಿಕ ಸ್ವಾತಂತ್ರ್ಯದ ಬೇಡಿಕೆಯಿಟ್ಟಿತು.

**2) ಆರ್ಯ ಸಮಾಜ:**

ಭಾರತದ ಇತರೆಡೆಯಂತೆ ಹೈದ್ರಾಬಾದ್ ಕರ್ನಾಟಕದಲ್ಲೂ ಕೂಡ ಜನರನ್ನು ಜಾಗೃತಗೊಳಿಸುವಲ್ಲಿ ಆರ್ಯಸಮಾಜ ಮುಂಚೂಣಿಯಲ್ಲಿತ್ತು. ಆನಂದಸ್ವಾಮಿ ಎಂಬುವವರು ಇದರ ನೇತಾರರಾಗಿದ್ದರು. ಮರುಮತಾಂತರ ಚಳುವಳಿಯಲ್ಲಿ ಪ್ರಮುಖವಾದ ಪಾತ್ರ ವಹಿಸಿದ ಇವರು ಬಹುಮಂದಿಯನ್ನು ಇಸ್ಲಾಂನಿಂದ ಹಿಂದೂ ಧರ್ಮಕ್ಕೆ ತಂದರು. ನಿಜಾಮನ 1)ಮೈಪೊಸಾ 2) ಗೈರ್ ಮೈಪೊಸಾ ಕಾಯಿದೆ ವಿರುದ್ಧ ಭೀಮಣ್ಣ ಖಂಡ್ರೆ, ಮಾಣಿಕ್ಯರಾವ್, ಹರೇಕತ್‌ರಾವ್ ಮುಂತಾದವರು ಮಹಾತ್ಮ ನಾರಾಯಣಸ್ವಾಮಿ ಜೊತೆ ಹೋರಾಡಿ ಜೈಲು ಸೇರಿದರು. 1934ರಲ್ಲಿ ಹೈದ್ರಾಬಾದ್ ಕರ್ನಾಟಕ ಪರಿಷತ್ತು ಶ್ರೀನಿವಾಸ್ ನೇತೃತ್ವದಲ್ಲಿ ಪ್ರಾರಂಭಗೊಂಡು ಸತ್ಯಾಗ್ರಹ ಪ್ರಾರಂಭಿಸಿತು.

**3) ಹಿಂದೂ ಮಹಾಸಭಾ:**

ಪೂನಾದ ಹಿಂದೂ ಮಹಾಸಭೆಯ ನಾಯಕರಾದ ಸೇನಾಪತಿ ಬಾಪಟ್, ವಾಯ್.ಡಿ.ಜೋಷಿ ಮೊದಲಾದವರು ಹೆಚ್.ಕೆ. ಪ್ರಾಂತ್ಯದಲ್ಲಿ ಪ್ರವಾಸ ಮಾಡಿ ಜನ ಜಾಗೃತಿ ಉಂಟು ಮಾಡಿದರು. ಚಂದ್ರಶೇಖರ ಪಾಟೀಲ ನೇತೃತ್ವದಲ್ಲಿ 'ಹಿಂದೂ ಚಳುವಳಿ, ವಂದೇ ಮಾತರಂ' ಗಾಯನದ ಮೂಲಕ ಪ್ರತೀ ಹಳ್ಳಿಗು ಇದು ಹಬ್ಬಿತು. ಶಾಲಾ ಕಾಲೇಜಿನಲ್ಲಿ ನಿಜಾಮ ಜಿಂದಾಬಾದ್ ಮತ್ತು ಖುರಾನಿನ ಕೀರ್ತನೆ ವಿರೋಧಿಸಿ 'ವಂದೇ ಮಾತರಂ' ಹಾಡತೊಡಗಿದರು. ನಿಜಾಮನು ಎಲ್ಲಾ ರಾಜಕೀಯ ಪಕ್ಷಗಳ ಸಭೆ ಸಮಾರಂಭಗಳ ಮೇಲೆ ನಿಷೇಧ ಹೇರಿದನು. ಪರಿಣಾಮವಾಗಿ ರಾಜಕೀಯ ಸಭೆ ಬಿಟ್ಟ ಪಕ್ಷಗಳು 'ಸ್ವದೇಶಿ ಚಳುವಳಿ, ವಿದೇಶಿ ಉಡುಪು ಬಹಿಷ್ಕಾರ, ಪಾನನಿರೋಧ ಮತ್ತು ಖಾದಿಗ್ರಾಮೋದ್ಯೋಗ'ಕ್ಕೆ ಒತ್ತು ಕೊಟ್ಟವು. ಇದೇ 'ಖದ್ದರ್ ಮೂಮೆಂಟ್'.

**4) ಸ್ವಾಮಿ ರಮಾನಂದ:**

ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯದ ಕಾಂಗ್ರೆಸ್ ಧುರೀಣರಾದ ಇವರು ಶಾಲೆ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡಿ ಹೆಚ್ಚಿನ ದೇಶಭಕ್ತರನ್ನು ತಯಾರು ಮಾಡಿದರು. ಎಲ್ಲಾ ಚಳುವಳಿಯಲ್ಲೂ ಭಾಗವಹಿಸಿದರು. ಇಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಕಾರ್ಯಕ್ರಮ ರೂಪಿಸಿದರು. ರಜಾಕಾರರ ದಬ್ಬಾಳಿಕೆ ವಿರುದ್ಧ ಹೋರಾಡಿದರು.

**5) ರಜಾಕಾರರ ದೌರ್ಜನ್ಯಗಳು:**

ಮತಾಂಧ ರಜಾಕಾರ 'ಖಾಸಿಂ ರಜ್ವಿ' ಹಿಂದೂ ವಿರೋಧಿಯಾಗಿದ್ದು ವಿಗ್ರಹಾರಾಧನೆಯಿಂದ ಬೇಸತ್ತು, ಇವರನ್ನು ಮುಸ್ಲಿಂರಾಗಿಸಲು ಪಣತೊಟ್ಟು 52 ಕೇಂದ್ರಗಳಲ್ಲಿ ಸಶಸ್ತ್ರ ರಜಾಕಾ ಪಡೆ ನಿಯೋಜಿಸಿದ್ದನು. ಇದು ಹಿಂದೂ ವರ್ಗವನ್ನು ಕೆರಳಿಸಿತು.

ಭಾರತ ಸ್ವಾತಂತ್ರ್ಯಗೊಂಡಾಗ ನಿಜಾಮನು ಸ್ವತಂತ್ರವಾಗೇ ಉಳಿಯಲು ಇಚ್ಛಿಸಿದ. ಆದರೆ ಪಟೇಲ್‌ರವರು ಪೋಲಿಸ್ ಕಾರ್ಯಾಚರಣೆ ನಡೆಸಿ (ಸೆಪ್ಟೆಂಬರ್ 13–19) ನಿಜಾಂ 'ಉಸ್ಮಾನ್ ಆಲಿಖಾನ್' ಸಹಾಯದೊಂದಿಗೆ ಹೈದ್ರಾಬಾದ್ ಪ್ರಾಂತ್ಯ ಭಾರತದೊಂದಿಗೆ ವಿಲೀನವಾಯಿತು.

ಹೀಗೆ ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯದಲ್ಲೂ ಸ್ವಾತಂತ್ರ್ಯ ಚಳುವಳಿ ಉತ್ತುಂಗದಲ್ಲೇ ನಡೆದಿತ್ತು.

## ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ವ್ಯಕ್ತಿಗಳು:

**1) ಡೆಪ್ಯೂಟಿ ಚೆನ್ನಬಸಪ್ಪ:**

ಉತ್ತರ ಕರ್ನಾಟಕದ ಪ್ರಾಂತ್ಯದಲ್ಲಿ ಕನ್ನಡ ನಾಡು ಮತ್ತು ಭಾಷೆಗೆ ಶ್ರಮಿಸಿದವರಲ್ಲಿ ಇವರು ಪ್ರಮುಖರಾಗಿದ್ದಾರೆ. ಇಂಜಿನಿಯರಿಂಗ್ ಪದವೀಧರರಾದ ಇವರು ಡೆಪ್ಯೂಟಿ ಇನ್‌ಸ್ಪೆಕ್ಟರ್ ಆಗಿ ಬೆಳಗಾವಿ ಮತ್ತು ಧಾರವಾಡದಲ್ಲಿ ಕೆಲಸ ಮಾಡಿದ್ದರು.

ಉತ್ತರ ಕರ್ನಾಟಕದಲ್ಲಿ ಆಡಳಿತ ಮತ್ತು ಶಿಕ್ಷಣಾಧಿಕಾರಿಯಾಗಿ ಬಂದ ಇವರು ಕನ್ನಡ ಶಾಲೆಗಳನ್ನು ತೆರೆದು ಕನ್ನಡದಲ್ಲಿಯೇ ಬೋಧನೆ ಮಾಡುವಂತೆ ಮಾಡಿದರು. ಇವರು ತಾವೇ ಸ್ವತ: ಕನ್ನಡ ಶಾಲೆ ತೆರೆದು ಕನ್ನಡ ಭಾಷೆ ಮತ್ತು ಸಂಸ್ಕೃತಿ ಮೇಲೆ ಅಭಿಮಾನ ಮೂಡುವಂತೆ ಮಾಡಿದರು. ರೆವರೆಂಡ್ ಫಾದರ್ ಕಿಟಲ್‌ರವರಿಗೆ ಕನ್ನಡ–ಕನ್ನಡ ನಿಘಂಟು ರಚನೆಗೆ ಪ್ರೋತ್ಸಾಹವನ್ನು ನೀಡಿದರು.

ಇವರು ಸ್ವತ: ಶೇಕ್ಸ್‌ಪೀಯರ್‌ನ ಕಾಮಿಡಿ ಆಫ್ ಎರರ್ಸ್ ಮತ್ತು ಮ್ಯಾಕ್‌ಬೆತ್ ಎಂಬ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು.

**2) ಆಲೂರು ವೆಂಕಟರಾವ್:**

ಬಿಜಾಪುರದಲ್ಲಿ 1880ರಲ್ಲಿ ಜನಿಸಿದ ಇವರಿಗೆ ಮುಂಬೈನಲ್ಲಿ ಕಾನೂನು ಪದವಿ ಪಡೆಯುವ ಸಮಯದಲ್ಲಿ ತಿಲಕರ ಸಂಪರ್ಕ ಉಂಟಾಯಿತು. ಇಲ್ಲಿ ಮರಾಠಿಗರ ಪ್ರಾಬಲ್ಯದಿಂದ ಕನ್ನಡಿಗರು ನಾನಾ ಸಮಸ್ಯೆಗಳಿಗೆ ಗುರಿಯಾಗಿದ್ದನ್ನು ಕಂಡು ಆಲೂರರು ಅಂದೇ ಕನ್ನಡಾಭಿಮಾನವನ್ನು ತಾಳಿದ್ದರು. ಇವರು ಕರ್ನಾಟಕದ ಭವ್ಯ ಪರಂಪರೆಯನ್ನು ಕನ್ನಡಿಗರ ಮುಂದೆ ತರಲು 'ಕರ್ನಾಟಕ ಗತ ವೈಭವ' ಎಂಬ ಗ್ರಂಥವನ್ನು ಬರೆದರು.

ತಿಲಕರು ಗೀತಾ ರಹಸ್ಯವನ್ನು ಕನ್ನಡಕ್ಕೆ ಭಾಷಾಂತರಿಸಿದರು. 1914ರಲ್ಲಿ ಧಾರವಾಡದಲ್ಲಿ 'ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ' ಆರಂಭಿಸಿದರು. ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸಿ ವಿದೇಶಿ ವಸ್ತುಗಳನ್ನು ಸುಟ್ಟರು. ತಿಲಕ್‌ರನ್ನು ಗದಗಕ್ಕೆ ಕರೆಸಿ ಭಾಷಣ ಮಾಡಿಸಿದರು. ಇವರು ವಾಗ್ಭೂಷಣ ಎಂಬ ಪತ್ರಿಕೆ ಆರಂಭಿಸಿದರು.

**3) ಹರ್ಡೇಕರ ಮಂಜಪ್ಪ:**

ದೇಶಾಭಿಮಾನಿ, ರಾಜಕೀಯ ದ್ರಷ್ಟಾರ ಹಾಗೂ ಕರ್ನಾಟಕದ ಗಾಂಧೀ ಎಂದೇ ಹೆಸರಾದ ಹರ್ಡೇಕರ ಮಂಜಪ್ಪನವರು 1886ರಲ್ಲಿ ಬನವಾಸಿಯಲ್ಲಿ ಜನಿಸಿದರು. ದಯಾನಂದ ಸರಸ್ವತಿಯವರ ಸತ್ಯಾರ್ಥ ಪ್ರಕಾಶವನ್ನು ಕನ್ನಡಕ್ಕೆ ಅನುವಾದಿಸಿದರು. 'ಸ್ವದೇಶೀ' ಎಂಬ ಕವನ ಸಂಕಲನವನ್ನು ಪ್ರಕಟಿಸಿ ದೇಶಾಭಿಮಾನ ಉದ್ದೀಪಗೊಳಿಸಿದರು. ಇವರು ತಿಲಕ್ ಮತ್ತು ಬಸವಣ್ಣ ಆದರ್ಶಕ್ಕೆ ಮಾರು ಹೋಗಿ ಗಣೇಶ ಮತ್ತು ಬಸವ ಉತ್ಸವ ಪ್ರೋತ್ಸಾಹಿಸಿದರು. ಗಾಂಧಿ ಪ್ರಭಾವಕ್ಕೂ ಒಳಗಾಗಿ ಖಾದಿವಸ್ತ್ರವನ್ನು ಚರಕದಿಂದ ನೇಯ್ದು ತೊಡುತ್ತಿದ್ದರು. ಇವರ ಪತ್ರಿಕೆ ಧನುರ್ಧಾರಿ. ಇವರ ಗ್ರಂಥ 'ಸತ್ಯಾಗ್ರಹಧರ್ಮ'. ಇದರ ಮೂಲಕ ಸತ್ಯಾಗ್ರಹ ಮೂಲ ತತ್ವವನ್ನು ತಿಳಿಸಿದರು. 1924ರಲ್ಲಿ 'ಬಸವೇಶ್ವರ ಸೇವಾ ದಳ' ಸಂಘಟಿಸಿದರು. ಗಾಂಧಿಯೊಡನೆ ಸಬರಮತಿ ಆಶ್ರಮದಲ್ಲಿದ್ದರು. ಇವರು ಅಸ್ಪೃಶ್ಯತೆ ಖಂಡಿಸಿ ಹರಿಜನ ಸೇವೆಯಲ್ಲಿ ತೊಡಗಿದ್ದರು.

**4) ಗಂಗಾಧರರಾವ್ ದೇಶಪಾಂಡೆ:**

ಉಜ್ವಲ ದೇಶಾಭಿಮಾನಿ. 'ಕರ್ನಾಟಕ ಸಿಂಹ'ವೆಂದೇ ಖ್ಯಾತಿವೆತ್ತ ಇವರು 1871ರಂದು ರಾಯಭಾಗದಲ್ಲಿ

ಜನಿಸಿದರು. ವಕೀಲ ವೃತ್ತಿ ಆರಿಸಿಕೊಂಡ ಇವರಿಗೆ ಪೂನಾದಲ್ಲಿ ತಿಲಕರ ಪ್ರಭಾವ ಬೀರಿತು. (ಚೆನ್ನಮ್ಮ, ರಾಯಣ್ಣ, ಬಾಬಾಸಾಹೇಬ) ಮುಂತಾದವರ ಪ್ರಭಾವವು ಅತಿಯಾಗಿ ಬೀರಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ತಿಲಕರ ಮಾರ್ಗದರ್ಶನದಂತೆ ಬೆಳಗಾವಿಯಲ್ಲಿ 'ಸ್ವದೇಶಿ ವಸ್ತು ಭಂಡಾರ' ಅಂಗಡಿ ತೆಗೆದರು. ಹೋಂ ರೂಲ್ ಲೀಗ್‌ನ ಶಾಖೆ ಇವರಿಂದ ಧಾರವಾಡದಲ್ಲಿ ಪ್ರಾರಂಭ. 1921ರಲ್ಲಿ ಕೆಪಿಸಿಸಿ ಪ್ರಾರಂಭವಾದಾಗ ಪ್ರಥಮ ಅಧ್ಯಕ್ಷ 1924ರ ಅಧಿವೇಶನದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಗಾಂಧಿ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿ ಹೇಳುತ್ತಿದ್ದರು.

ಇವರು ಗಾಂಧಿ ಆರಂಭಿಸಿದ ಅಸಹಕಾರ, ಉಪ್ಪಿನ ಸತ್ಯಾಗ್ರಹ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಬೆಂಗಳೂರಿನಲ್ಲಿ ಚರಕ ಸಂಘ ಸ್ಥಾಪನೆ. 1930ರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ನಾಡಿಗೆ ಕೀರ್ತಿ ತಂದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೆ ಒಳಗಾಗಿ ಬೆಳಗಾವಿಯ ಹಿಂಡಲಗಾ ಜೈಲು ಸೇರಿದರು. ಫಜಲ್ ಆಲಿ ಆಯೋಗದ ಮುಂದೆ ಬೆಳಗಾವಿ ಕರ್ನಾಟಕದಲ್ಲೇ ಇರಬೇಕೆಂದು ವಾದಿಸಿದ್ದರು.

**5) ಎನ್.ಎಸ್. ಹರ್ಡೀಕರ:**

ನಿಸ್ವಾರ್ಥ ರಾಷ್ಟ್ರಸೇವಕ ಎನ್.ಎಸ್. ಹರ್ಡೀಕರ್‌ರವರು 1889ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಯೆಡೆಗೆ ಆಕರ್ಷಿತರಾದರು. ಬಂಗಾಳದ ವಿಭಜನೆಯಿಂದಾದ 'ವಂಗಭಂಗ' ಚಳುವಳಿ ಇವರ ಮೇಲೆ ಸಾಕಷ್ಟು ಪ್ರಭಾವ ಬೀರಿತು. ತಿಲಕರ 'ಶಿವಾಜಿ ಮತ್ತು ಗಣೇಶ ಉತ್ಸವ' ಪ್ರಭಾವ ಬೀರಿ ಹುಬ್ಬಳ್ಳಿಯಲ್ಲಿ 'ಆರ್ಯಬಾಲ' ಸಭೆಯನ್ನು ಸ್ಥಾಪಿಸಿದರು. ಅಮೇರಿಕಾದಲ್ಲಿ ವೈದ್ಯಶಾಸ್ತ್ರ ವ್ಯಾಸಂಗ ಮುಗಿಸಿದ ಇವರು ಅಲ್ಲಿದ್ದ ಲಾಲಾಲಜಪತಿರಾಯ್ ಜೊತೆಗೂಡಿ ರೂಪುರೇಷೆ ನಿರ್ಮಿಸಿ 1923ರಲ್ಲಿ ಹುಬ್ಬಳ್ಳಿಯಲ್ಲಿ 'ಹಿಂದೂಸ್ಥಾನ ಸೇವಾ ದಳ' ಸ್ಥಾಪಿಸಿದರು. (ನೆಹರೂ–ಅಧ್ಯಕ್ಷರು) ತರುಣ–ತರುಣಿಯರನ್ನು ಸಂಘಟಿಸಿ ಸ್ವಯಂ ಸೇವಕರನ್ನಾಗಿಸಿ ರಾಷ್ಟ್ರೀಯ ಆಂದೋಲನದಲ್ಲಿ ತೊಡಗಿಸುವುದು ಉದ್ದೇಶವಾಗಿತ್ತು. ನಂತರ ಮಿಲ್‌ವರ್ಕರ್ಸ್ ಯೂನಿಯನ್, ಹೋಟೆಲ್ ವರ್ಕರ್ಸ್ ಯೂನಿಯನ್ ಹೀಗೆ ಹಲವಾರು ಸಂಘ ಸ್ಥಾಪಿಸಿದರು. 1958ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ದೊರಕಿತು.

**6) ಆರ್.ಆರ್. ದಿವಾಕರ:**

ದೇಶಾಭಿಮಾನಿಯಾದ ಇವರು 1894ರಲ್ಲಿ ಜನನ. ವಿದ್ಯಾರ್ಥಿ ಜೀವನದಲ್ಲೇ ದೇಶಭಕ್ತಿ ಬೆಳೆಸಿಕೊಂಡು ಇವರು, ಅಮೃತ್ ಬಜಾರ್, ಕರ್ಮಯೋಗಿ ಪತ್ರಿಕೆಗಳನ್ನು ಓದುತ್ತಿದ್ದರು. 'ವಂಗಭಂಗ' ಚಳುವಳಿಯಲ್ಲಿ ಭಾಗವಹಿಸಿ ವಿದ್ಯಾರ್ಥಿಯಾಗಿದ್ದಾಗಲೇ ಬಂಧನಕ್ಕೊಳಗಾದರು. ಇವರು ಹರ್ಡೀಕರ್‌ರವರ 'ಆರ್ಯಬಾಲ' ಸಭೆ ಸೇರಿದರು. ತಮ್ಮದೇ ಆದ 'ಕರ್ಮವೀರ' ಎಂಬ ಪತ್ರಿಕೆಯನ್ನು ಆರಂಭಿಸಿದರು. 1928ರಲ್ಲಿ ನೆಹರೂ ಸಮಿತಿ ಮುಂದೆ ಅಂಕಿ ಅಂಶ ಮಂಡಿಸಿ ಕರ್ನಾಟಕ ಪ್ರಾಂತ್ಯ ರಚನೆಗೆ ವಾದ ಹೂಡಿದರು. ಉಪ್ಪಿನ ಸತ್ಯಾಗ್ರಹದಲ್ಲೂ ಪಾಲ್ಗೊಂಡಿದ್ದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಸಂವಿಧಾನ ರಚನಾ ಸಭೆಯ ಸದಸ್ಯರಾದರು. ವಾರ್ತಾಸಚಿವ, ಬಿಹಾರದ ರಾಜ್ಯಪಾಲ, ಕಾಸರಗೋಡು ಏಕೀಕರಣ ಸಮಿತಿಯ ಅಧ್ಯಕ್ಷರಾಗಿದ್ದರು.

**7) ಟಿ. ಸಿದ್ದಲಿಂಗಯ್ಯ:**

ಮೈಸೂರು ಜವಾಬ್ದಾರಿ ಸರ್ಕಾರದ ಶಿಲ್ಪಿಯಾದ ಇವರು 1898ರಲ್ಲಿ ದೊಡ್ಡ ಬಳ್ಳಾಪುರದಲ್ಲಿ ಜನಿಸಿದರು. ಇವರು ಅನಿಬೆಸೆಂಟ್‌ರವರ ಅನುಯಾಯಿಯಾಗಿ ಗಾಂಧೀಜಿಯವರನ್ನು ಟೀಕಿಸುತ್ತಿದ್ದರು. ಕಾನೂನು ಭಂಗ ಚಳುವಳಿ ಮುಂದೊಮ್ಮೆ ನಮ್ಮ ಸರ್ಕಾರ ಬಂದಾಗಲೂ ಅಶಿಸ್ತಿಗೆ ದಾರಿ ಎಂಬುದು ಇವರ ವಾದ. ಇವರು 'ನೇಗಸ್ ಯೂಥ್ ಲೀಗ್' ಸ್ಥಾಪಿಸಿ ಹೋರಾಟಕ್ಕಿಳಿದರು. 1938ರಲ್ಲಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧಿತರಾದರು. 1947ರಲ್ಲಿ ಮೈಸೂರು ಚಲೋ ಚಳುವಳಿ ಸ್ಥಾಪಿಸಿದರು.

**8) ಕೆ.ಸಿ.ರೆಡ್ಡಿ:**

ಮೈಸೂರಿನ ಪ್ರಥಮ ಮುಖ್ಯಮಂತ್ರಿ ಮತ್ತು ಜವಾಬ್ದಾರಿ ಸರ್ಕಾರದ ಹರಿಕಾರ ಎಂದೇ ಖ್ಯಾತಿವೆತ್ತ ಇವರು 1902ರಲ್ಲಿ ಕೋಲಾರದಲ್ಲಿ ಜನಿಸಿದರು. 27ನೇ ವಯಸ್ಸಿಗೆ ಕೋಲಾರ ಜಿಲ್ಲಾ ಬೋರ್ಡ್‌ನ ಅಧ್ಯಕ್ಷರಾಗಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡು ರಾಜೀನಾಮೆ ನೀಡಿದರು. ಸೆಪ್ಟೆಂಬರ್ 1, 1947ರಂದು ಜವಾಬ್ದಾರಿ ಸರ್ಕಾರ ರಚನೆಗೆ ಹಕ್ಕೊತ್ತಾಯಿಸಿ ಮೈಸೂರು ಚಲೋ ಚಳುವಳಿ ಹೂಡಿದರು. ಅದರಲ್ಲಿ ಜಯಪ್ರದರಾಗಿ ಮೈಸೂರಿನ ಪ್ರಥಮ ಮುಖ್ಯಮಂತ್ರಿಯಾದರು.

**9) ಕೆ.ಟಿ. ಭಾಷ್ಯಂ:**

ಇವರು 1895ರಲ್ಲಿ ಮೈಸೂರಿನಲ್ಲಿ ಜನಿಸಿದರು. 1926ರಲ್ಲಿ ಮೈಸೂರಿನ ಪ್ರಜಾಪ್ರತಿನಿಧಿ ಸಭಾ ಸದಸ್ಯರಾದರು. ಮಹಿಳೆಯರ ಸ್ಥಾನಮಾನ ಕುರಿತು 'ಹಿಂದೂ ಕಾನೂನಿನಲ್ಲಿ ಮಹಿಳೆಯರು' ಎಂಬ ಕೃತಿ ರಚಿಸಿದರು. ಕಾರ್ಮಿಕ ಚಿಂತಕರಾಗಿದ್ದ ಇವರ ಹೋರಾಟದ ಫಲವಾಗಿ 'ಮೈಸೂರು ಕಾರ್ಮಿಕ ಕಾನೂನು' ಅಸ್ತಿತ್ವಕ್ಕೆ ಬಂದಿತು. (ರಾಷ್ಟ್ರದಲ್ಲೇ ಪ್ರಥಮ) ಶಿವಪುರ ಧ್ವಜ ಸತ್ಯಾಗ್ರಹ ವಿದುರಾಶ್ವತ್ಥ, ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದರು. ಅಮೇರಿಕಾ ಮತುತ ಜಿನೇವಾದಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

**10) ಎಸ್. ನಿಜಲಿಂಗಪ್ಪ:**

ವಿಶಾಲ ಏಕೀಕೃತ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾದ ಇವರು 1902ರಲ್ಲಿ ಬಳ್ಳಾರಿಯಲ್ಲಿ ಜನಿಸಿದರು. 1924ರ ಬೆಳಗಾವಿ ಅಧಿವೇಶನದಲ್ಲಿ ಗಾಂಧೀಜಿ, ಮಾಳವೀಯರ ಭಾಷಣದಿಂದ ಪ್ರಭಾವಿತರಾದರು. ವಕೀಲ ವೃತ್ತಿ ತೊರೆದು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲು ಶಿಕ್ಷೆ, ನಂತರ ಕ್ವಿಟ್ ಇಂಡಿಯಾದಲ್ಲಿ ಭಾಗಿ. ಕೊನೆಯ ಹಂತವಾಗಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಲ್ಲಿ ಹಿರಿಯಣ್ಣನ ಸ್ಥಾನ ವಹಿಸಿದ್ದರು.

**11) ಅನ್ನದಾನಪ್ಪ ದೊಡ್ಡಮೇಟಿ:**

ಇವರು 1903ರಲ್ಲಿ ಗದಗದ ಜಕ್ಕಲಿಗ್ರಾಮದಲ್ಲಿ ಜನನ. 1924ರ ಅಧಿವೇಶನದಲ್ಲಿ ಗಾಂಧಿಯಿಂದ ಪ್ರೇರಿತ. 22ನೇ ವಯಸ್ಸಿನಲ್ಲಿ ಅಸಹಕಾರ ಚಳುವಳಿ ಮತ್ತು ಸತ್ಯಾಗ್ರಹದಲ್ಲಿ ಭಾಗಿ, ಧಾರವಾಡದಲ್ಲಿ ಹರಿಜನ ಸೇವಾಸಂಘ ಸ್ಥಾಪನೆ. ಕರ್ನಾಟಕ ಏಕೀಕರಣಕ್ಕಾಗಿ ಜಕ್ಕುಲಿಗ್ರಾಮದಲ್ಲಿ ಅಮರಣಾಂತ ಉಪವಾಸ. ಇವರ ಪತ್ರಿಕೆ 'ಕಲ್ಕಿ' ಮೈಸೂರು ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡುವಲ್ಲಿ ಇವರ ಪಾತ್ರ ಪ್ರಮುಖ.

## ಕರ್ನಾಟಕದ ಏಕೀಕರಣ–ಏಕೀಕರಣ ಚಳುವಳಿಯ ಉದಯಕ್ಕೆ ಕಾರಣಗಳು: ಸಾಕ್ಷರತೆ, ಸಾಂಸ್ಕೃತಿಕ ಸಂಘ ಮತ್ತು ಮುದ್ರಣ ಮಾಧ್ಯಮಗಳ ಪಾತ್ರ–ಏಕೀಕರಣದ 3 ಹಂತಗಳು:

**1) ಏಕೀಕರಣ ಚಳುವಳಿಯ ಉದಯಕ್ಕೆ ಕಾರಣಗಳು:**

ಸುಮಾರು 1905ರಿಂದ 1920ರವರೆಗಿನ ಕಾಲದಲ್ಲಿ ಭಾರತದ ರಾಜಕೀಯ ರಂಗದಲ್ಲಿ ಕಾಲಿಟ್ಟ ಕರ್ನಾಟಕದ ಕಾರ್ಯಕರ್ತರು 2 ಪ್ರಮುಖ ಕನಸುಗಳನ್ನು ಕಂಡರು.

1. ಭಾರತದ ಸ್ವಾತಂತ್ರ್ಯ

2. ಕರ್ನಾಟಕದ ಏಕೀಕರಣ.

ಕರ್ನಾಟಕದ ಏಕೀಕರಣ ಚಳುವಳಿಯು ಒಮ್ಮಿಂದೊಮ್ಮೆಲೇ ಪ್ರಾರಂಭವಾದುದಲ್ಲ. ಇದರ ಉಗಮಕ್ಕೆ ಕಾರಣ ನೋಡುವುದಾದರೆ,

* 1912ರಲ್ಲಿ ಬಿಹಾರ, ಒರಿಸ್ಸಾ ಮತ್ತು ಅಸ್ಸಾಂ ಪ್ರಾಂತ್ಯಗಳನ್ನು ಭಾಷಾವಾರು ಪ್ರಾಂತ್ಯದಂತೆ ರಚಿಸಿದಾಗ ಹಾಗೂ ವಿಭಕ್ತ ಬಂಗಾಳವನ್ನು ಒಂದುಗೂಡಿಸಿದಾಗಿನಿಂದ ಕನ್ನಡ ಭಾಷಿಕ ಜನರು ಒಂದು ಪ್ರತ್ಯೇಕ ಪ್ರಾಂತ್ಯವಿರಬೇಕೆಂಬ ಭಾವನೆ ಬಲವಾಗುತ್ತಾ ಸಾಗಿತ್ತು.

* ಬ್ರಿಟೀಷರ ಒಡೆದು ಆಳುವ ನೀತಿಯಿಂದ ಕರ್ನಾಟಕವು ವಿಭಜಿಸಲ್ಪಟ್ಟು ಸುಮಾರು 20 ವಿಭಿನ್ನ ಬಗೆಯ ಆಡಳಿತ ಘಟಕಗಳಿಗೆ ಒಳಪಟ್ಟಿತ್ತು. ಮೈಸೂರು ಸಂಸ್ಥಾನ ಹೊರತುಪಡಿಸಿ ಉಳಿದ ಪ್ರದೇಶದಲ್ಲಿ ಕನ್ನಡಿಗರ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಇದು ಏಕೀಕರಣದೆಡೆಗೆ ಪ್ರೇರೇಪಿಸಿತು.

* ಮುಂಬೈ ಪ್ರಾಂತ್ಯದ ಕನ್ನಡಿಗರ ಮೇಲೆ ಮರಾಠಿ ಭಾಷೆ, ಹೈದ್ರಾಬಾದ್ ಕರ್ನಾಟಕದ ಮೇಲೆ ಉರ್ದು ಭಾಷೆ, ಮದ್ರಾಸ್ ಪ್ರೆಸಿಡೆನ್ಸಿಯ ಮೇಲೆ ತಮಿಳು ಭಾಷೆ ಪ್ರಭಾವ ಅಧಿಕವಾಗಿತ್ತು. ಕನ್ನಡಿಗರನ್ನು ತಾತ್ಸಾರವಾದ ಮನೋಭಾವದಿಂದ ನೋಡಲಾಗುತ್ತಿದ್ದು ಇವರೆಲ್ಲರೂ ಒಗ್ಗಟ್ಟಾಗಿ ಸಂಘಟಿತರಾಗಬಯಸಿದರು.

* ಕನ್ನಡಿಗರು ತಮ್ಮ ಸಂಸ್ಕೃತಿ, ಭಾಷೆಗಳ ಮೇಲೆ ನಿರಂತರವಾಗಿ ನಡೆಯುತ್ತಿದ್ದ ಅನ್ಯಾಯ, ದಬ್ಬಾಳಿಕೆಗಳಿಂದ ಜಾಗೃತರಾಗಿ ಸಂಘಟಿತರಾಗಲು ಬಯಸಿದರು.

* ಭಾಷಾವಾರು ಪ್ರಾಂತ್ಯಗಳ ರಚನೆ ಏಕೀಕರಣಕ್ಕೆ ಪ್ರೇರೇಪಿಸಿತು.

* ಭಾರತದ ಕೇಂದ್ರ ಶಾಸನ ಸಭೆಯಲ್ಲಿ ಬ್ರಿಟೀಷ್ ಕರ್ನಾಟಕದ ಒಟ್ಟು 68 ಲಕ್ಷ ಕನ್ನಡಿಗರ ಪೈಕಿ 1 ಪ್ರತಿನಿಧಿಯಿದ್ದಾರೆ, 32 ಲಕ್ಷ ಜನಸಂಖ್ಯೆಯ ಮಲಯಾಳಿ ಮತ್ತು ಸಿಂಧಿಗಳು 4 ಪ್ರತಿನಿಧಿ ಹೊಮದಿದ್ದು, ಕನ್ನಡಿಗರ ಮನಸ್ಸಿಗೆ ಹೋರಾಟ ಮನೋಭಾವನೆ ಬೆಳೆಸಿತು.

* ಡೆಪ್ಯೂಟಿ ಚನ್ನಬಸಪ್ಪನವರ ಅಗಾಧ ಪರಿಶ್ರಮ, ಇವರು 1858ರಲ್ಲಿ ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಕನ್ನಡ ಶಾಲೆ ತೆರೆದಿದ್ದರು. ಕನ್ನಡ ಭಾಷಾ ಉಳುವಿಕೆಗೆ ಅಗಾಧವಾಗಿ ಶ್ರಮಿಸಿದರು.

* ಪ್ರಸಿದ್ಧ ಆಂಗ್ಲ ವಿದ್ವಾಂಸಕರಾದ ಬಿ.ಎಲ್. ರೈಸ್, ಜಾನ್‌ಪ್ಲೀಟ್, ರಾಬರ್ಟ್ ಸಿವೆಲ್‌ರ ಯತ್ನದಿಂದ ಇಲ್ಲಿನ ಇತಿಹಾಸದ ಸಂಶೋಧನೆಯಾಗಿ ಜನರಲ್ಲಿ ತಾಯ್ನಾಡಿನ ಬಗ್ಗೆ ಅಭಿಮಾನ ಮೂಡಿತು.

* ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಕೃತಿ ಮತ್ತು ರಾಬರ್ಟ್ ಸಿವೆಲ್‌ರ ಫರ್‌ಗೆಟೆನ್ ಎಂಫೈಯರ್ ಕರ್ನಾಟಕದ ಹಿರಿಮೆ ತಿಳಿಸಿದವು.

* ದೇಶಭಕ್ತಿ ಗೀತೆಗಳ ಉಗಮ.

ಹುಯಿಲುಗೋಳ ನಾರಾಯಣರ – ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು.

ಬಿ.ಎಮ್.ಶ್ರೀರವರ – ಏರಿಸಿ ಹಾರಿಸಿ ಕನ್ನಡ ಬಾವುಟ.

ಶಾಂತ ಕವಿಗಳ – ರಕ್ಷಿಸು ಕರ್ನಾಟಕ ದೇವಿ.

ಎಂ. ಗೋವಿಂದ ಪೈ – ತಾಯಿ ಬಾರೆ ಮೊಗವ ತೋರೆ.

ಮೊದಲಾದ ಗೀತೆಗಳು ಏಕೀಕರಣದ ಕಿಚ್ಚು ಹೊತ್ತಿಸಿದವು.

* ಕರ್ನಾಟಕ ವಿದ್ಯಾವರ್ಧಕ ಸಂಘ, ಸಾಹಿತ್ಯ ಪರಿಷತ್ತು (1915) ಮುಂತಾದವುಗಳು ಪ್ರೇರಣೆಗಳಂತೆ ಕೆಲಸ ಮಾಡಿದವು.

ಹೀಗೆ ಇಷ್ಟೂ ಅಂಶಗಳು ಏಕೀಕರಣ ಚಳುವಳಿಗೆ ಪ್ರೇರಣೆಯಾದವು.

## (1) ಸಂಘ ಸಂಸ್ಥೆಗಳ ಪಾತ್ರ:

ಕನ್ನಡಿಗರಲ್ಲಿ ಕ್ನನಡಾಭಿಮಾನವನ್ನು ಮೂಡಿಸಿ ಅವರನ್ನು ಏಕೀಕರಣಕ್ಕೆ ಅಣಿಗೊಳಿಸಲು ಕೆಲವು ಸಂಘ ಸಂಸ್ಥೆಗಳು ಹುಟ್ಟಿಕೊಂಡವು. ಇವುಗಳು ಏಕೀಕರಣದ ಪ್ರೇರಣಾ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದವು. ಕೆ.ಶೇಷಾದ್ರಿ ಅಯ್ಯರ್‌ರವರ ಭಾಷೋಜ್ಜೀವನ ಸಭಾ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಭಾಗಳ ಪಾತ್ರ ಹಿರಿದು. ಪ್ರಮುಖವಾಗಿ,

**ಕರ್ನಾಟಕದ ವಿದ್ಯಾವರ್ಧಕ ಸಂಘ 1890:**

1890ರಲ್ಲಿ ಆರ್.ಹೆಚ್.ದೇಶಪಾಂಡೆಯವರು ಧಾರವಾಡದಲ್ಲಿ ಇದನ್ನು ಸ್ಥಾಪಿಸಿದರು. ಕರ್ನಾಟಕ ಇತಿಹಾಸ, ಕನ್ನಡ ಭಾಷೆ, ಕಲೆಯ ಅಭಿವೃದ್ಧಿ ಹಾಗೂ ಕರ್ನಾಟಕದ ಸ್ವಾಯತ್ತತೆಗಾಗಿ ನಡೆಸಿದ ಹೋರಾಟದಲ್ಲಿ ಈ ಸಂಸ್ಥೆಯ ಪಾತ್ರ ಮಹತ್ವದ್ದು. ಏಕೀಕರಣದ ಬಗ್ಗೆ ಚಿಂತನೆ ಮಾಡುವ ಒಂದು ವೇದಿಕೆಯಾಯಿತು. ಬೆನಗಲ್ ರಾಮರಾಯ್, ಆಲೂರು ವೆಂಕಟರಾಯರು ಈ ಸಂಘವನ್ನು ಸದುಪಯೋಗ ಪಡಿಸಿಕೊಂಡರು.

**ಕನ್ನಡ ಸಾಹಿತ್ಯ ಪರಿಷತ್ತು 1915:**

ಇದು ಆಂಗ್ಲರ ವಿಕೇಂದ್ರೀಕರಣ ನೀತಿಯ ವಿರುದ್ಧ ಸ್ಥಾಪನೆಯಾದಂತಹ ಪ್ರಥಮ ಸಂಸ್ಥೆ (ನಾಲ್ವಡಿ ಕೃಷ್ಣರಾಜ್ + ವಿಶ್ವೇಶ್ವರಯ್ಯ). ಇದು ಏಕೀಕರಣವನ್ನೇ ಪ್ರಮುಖವಾದ ಗುರಿಯಾಗಿ ಹೊಂದಿದ್ದು ತನ್ನ ಮೊದಲ ಅಧಿವೇಶನದಲ್ಲೇ ಏಕೀಕರಣದ ಗೊತ್ತುವಳಿಯನ್ನು ಅಂಗೀಕರಿಸಿತು. ವಾರ್ಷಿಕ ಸಮಾವೇಶ ನಡೆಸುತ್ತಾ ಕನ್ನಡಿಗರಲ್ಲಿ ನವಚೈತನ್ಯ ಮತ್ತು ನವ ಜಾಗೃತಿ ಮೂಡಿಸಿತು. ಹೆಚ್.ವಿ. ನಂಜುಂಡಯ್ಯ, ಹಳಕಟ್ಟಿ, ಬೆನಗಲ್ ರಾಮರಾಯರು ಅಪಾರವಾಗಿ ಶ್ರಮಿಸಿದರು. ಇದರ ಪ್ರಮುಖ ಧ್ಯೇಯಗಳೆಂದರೆ,

1) ಪ್ರತ್ಯೇಕ ಕನ್ನಡ ರಾಜ್ಯದ ಸ್ಥಾಪನೆ

2) ಕನ್ನಡ ಭಾಷೆಗೆ ಪ್ರಾಮುಖ್ಯತೆ

**ಕರ್ನಾಟಕ ಸಭಾ ಸ್ಥಾಪನೆ 1916:**

1916ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾಯಿತು. ಏಕೀಕರಣಕ್ಕಾಗಿ ರೂಪಿಸಲ್ಪಟ್ಟ ಪ್ರಥಮ ರಾಜಕೀಯ ಸಂಘಟನೆ. ಆಲೂರು ವೆಂಕಟರಾವ್, ಕಡಪ ರಾಘವೇಂದ್ರರಾವ್, ಮುದವೀಡು ಕೃಷ್ಣರಾವ್ ಆದ್ಯ ಸಂಸ್ಥಾಪಕರು. ಕನ್ನಡಿಗರ ಕರ್ತವ್ಯ ಎಂಬ ಪತ್ರಿಕೆ ಆರಂಭ ಮತ್ತು ಎಲ್ಲಾ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸಿ ಸಂಯುಕ್ತ ಕರ್ನಾಟಕ ರಚನೆಯ ವಿಷಯ ತಿಳಿಸುತ್ತಿತ್ತು.

**ಕರ್ನಾಟಕ ಏಕೀಕರಣ ಸಭಾ:**

ಮೊದಲ ಏಕೀಕರಣ ಸಭೆಯ ಅಧಿವೇಶನ 1924ರ ಬೆಳಗಾವಿಯಲ್ಲಿ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದು ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಮಯದಲ್ಲೇ ಜರುಗಿದ್ದರಿಂದ ಇಲ್ಲಿಯ 'ಉದಯವಾಗಲೀ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆ ಏಕೀಕರಣದ ಚಿಗುರೊಡೆಯುವಂತೆ ಮಾಡಿತು. ಸಂಯುಕ್ತ ಕರ್ನಾಟಕದ ಐಕ್ಯತೆಗಾಗಿ ಹೋರಾಡುವುದೇ ಏಕೀಕರಣ ಸಭಾದ ಉದ್ದೇಶವಾಗಿತ್ತು.

**1947ರ ಕರ್ನಾಟಕ ಏಕೀಕರಣ ಮಹಾಸಮಿತಿ:**

ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಇದು ರಚನೆಯಾಗಿ ಕರ್ನಾಟಕದಾದ್ಯಂತ ಏಕೀಕರಣ ಚಳುವಳಿಯನ್ನು ಜನಪ್ರಿಯಗೊಳಿಸಿದರು. ಇದರ ಆಧಾರದಲ್ಲೇ ಜವಾಬ್ದಾರಿಯುತ ಸರ್ಕಾರಕ್ಕೆ ಚಳುವಳಿ ಆರಂಭವಾದದ್ದು.

ಹೀಗೆ ಹಲವಾರು ಸಂಘ ಸಂಸ್ಥೆಗಳು ಏಕೀಕರಣಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದವು.

## ಏಕೀಕರಣದಲ್ಲಿ ಮುದ್ರಣ ಮಾಧ್ಯಮಗಳ ಪಾತ್ರ:

ಕನ್ನಡಿಗರಲ್ಲಿ ಭಾವನಾತ್ಮಕ ಐಕ್ಯತೆ ಮತ್ತು ಭಾಷಾಭಿಮಾನ ಮೂಡಿಸಿ ಅವರನ್ನು ಏಕೀಕರಣಕ್ಕೆ ಅಣಿಗೊಳಿಸಲು ಮುದ್ರಣ ಮಾಧ್ಯಮಗಳು ತಮ್ಮದೇ ಆದಂತಹ ವಿಶೇಷವಾದ ಪ್ರಭಾವವನ್ನು ಬೀರಿದ್ದವು. ಅವುಗಳನ್ನು ನೋಡುವುದಾದರೆ,

**1) ಪತ್ರಿಕೆಗಳ ಪ್ರಭಾವ / ಪಾತ್ರ:**

ಜನತೆಯಲ್ಲಿ ಜಾಗೃತಿ ಮೂಡಿಸುವಲ್ಲಿ ಪತ್ರಿಕೆಗಳ ಪಾತ್ರ ಮಹತ್ವವಾಗಿತ್ತು. ಇಂತಹ ಸಮಯದಲ್ಲಿ ಉದಯವಾದ ಉಡುಪಿಯ 'ಸತ್ಯಾಗ್ರಹ' ಮತ್ತು ನವಯುಗ, ಧಾರವಾಡ ಹುಬ್ಬಳ್ಳಿಯಲ್ಲಿ ಕರ್ಮವೀರ, ತರುಣ

ಕರ್ನಾಟಕ, ಸಂಯುಕ್ತ ಕರ್ನಾಟಕ, ಹೈದರಾಬಾದಿನಲ್ಲಿ 'ಸಾಧನ', ಮಡಿಕೇರಿಯಲ್ಲಿ 'ಕೊಡಗು', ಬಳ್ಳಾರಿಯಲ್ಲಿ 'ಕರ್ನಾಟಕ ಕೇಸರಿ', ಬೆಂಗಳೂರಿನಲ್ಲಿ 'ಪ್ರಜಾಮತ', ಚಿತ್ರಗುಪ್ತ, ವೀರಕೇಸರಿ, ಬಿಜಾಪುರದಲ್ಲಿ ಕರ್ನಾಟಕ ವೈಭವ ಮುಂತಾದವು ಜನರಿಗೆ ಏಕೀಕರಣದ ಅರಿವು ಮೂಡಿಸಿದವು.

ಇದರ ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ರಾಜಹಂಸ, ಜೈ ಹಿಂದ್, ಧನಂಜಯ ಮುಂತಾದವು ಕರ್ನಾಟಕದ ಭವ್ಯ ಇತಿಹಾಸ ಪರಂಪರೆ ಬಗ್ಗೆ ಬೆಳಕು ಚೆಲ್ಲಿದವು ಮತ್ತು ರಾಷ್ಟ್ರೀಯತೆಯ ಭಾವ ಬಿತ್ತಿದವು.

**2) ಮುದ್ರಣ ಸಾಹಿತ್ಯ:**

ಕರ್ನಾಟಕದ ಏಕೀಕರಣ ಚಳುವಳಿ ಬಲಗೊಳಿಸಲು ಸಾಹಿತಿಗಳು ತತ್ವಜ್ಞಾನಿಗಳು ಪ್ರಮುಖವಾದ ಪಾತ್ರವನ್ನು ವಹಿಸಿದರು. ಸಾಹಿತಿಗಳು ಕನ್ನಡ ನಾಡಿನ ಶ್ರೀಮಂತ ಪರಂಪರೆ, ಸಂಸ್ಕೃತಿ, ಚರಿತ್ರೆ ಬಗ್ಗೆ ಲೇಖನ, ಕಾವ್ಯ, ಸಂಶೋಧನಾ ಗ್ರಂಥ ರಚಿಸಿದರು. ಆಲೂರು ವೆಂಕಟರಾಯರ 'ಕರ್ನಾಟಕ ಗತ ವೈಭವ', ಡಾ.ಫ್ಲೀಟ್ 'ಕೆನರಾ ರಾಜ ಸಂಸ್ಕೃತಿಗಳು', ಭಂಡಾರ್ಕರ್‌ರವರ 'ಅರ್ಲಿ ಹಿಸ್ಟರಿ ಆಫ್ ಡೆಕ್ಕನ್', ರಾಬರ್ಟ್ ಸಿವಿಲ್‌ರವರ ಮರೆತು ಹೋದ ಸಾಮ್ರಾಜ್ಯ, ಬಿ.ಎಲ್.ರೈಸ್‌ರವರ ಎಫಿಗ್ರಾಫಿ ಆಫ್ ಕರ್ನಾಟಕ ಮುಂತಾದ ಸಾಹಿತ್ಯಗಳು ದೇಶಭಕ್ತಿ ಮತ್ತು ನಾಡಭಕ್ತಿಯನ್ನು ಉಕ್ಕಿಸಿದವು.

ಇದರಲ್ಲಿ ಪ್ರಮುಖವಾಗಿ ಆಲೂರು ವೆಂಕಟರಾಯರ ಕರ್ನಾಟಕ ಗತ ವೈಭವವು ಕರ್ನಾಟಕದ ಭವ್ಯ ಪರಂಪರೆಯನ್ನು ಕನ್ನಡಿಗರ ಕಣ್ಣು ಮುಂದೆ ತಂದಿತು. ಇವರೇ ಧಾರವಾಡದಲ್ಲಿ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ ಸ್ಥಾಪಿಸಿದರು. ತಮ್ಮದೇ ಆದ 'ವಾಗ್ಭೂಷಣ' ಪತ್ರಿಕೆಯಲ್ಲಿ ಏಕೀಕರಣ ತತ್ವದ ಪ್ರಚಾರ ಮಾಡಿದರು. ಇವರ ಎಲ್ಲಾ ಕೃತಿಗಳು 'ಕ' ಅಕ್ಷರದಿಂದ ಪ್ರಾರಂಭವಾಗಿ ಕನ್ನಡಾಭಿಮಾನವನ್ನು ಸೂಚಿಸಿದವು. ಇವರ ಪ್ರಮುಖ ವಾಕ್ಯವೆಂದರೆ 'ಕರ್ನಾಟಕತ್ವ ಒಂದು ಕಿರಣಗಾಜು ಇದ್ದಂತೆ. ಅದರಲ್ಲಿ ಭಾರತವೇಕೇ ಇಡೀ ಜಗತ್ತೇ ಗೋಚರಿಸುತ್ತದೆ'. ಹಾಗಾಗಿ ಇವರನ್ನು ಕನ್ನಡದ ಕುಲಪುರೋಹಿತ ಎಂದಿದ್ದಾರೆ.

## (2) ಧಾರ್, ಜೆ.ವ್ಹಿ.ಪಿ ಮತ್ತು ಫಜಲ್ ಆಲಿ ವರದಿಗಳು:

**1) ಧಾರ್ ಸಮಿತಿ (1948):**

29 ಡಿಸೆಂಬರ್ 1947 ಕಾಸರಗೋಡಿನಲ್ಲಿ ಏಕೀಕರಣ ಸಮ್ಮೇಳನ ಜರುಗಿ ಆರ್.ದಿವಾಕರ್ ಅಧ್ಯಕ್ಷತೆಯಲ್ಲಿ ಏಕೀಕರಣದ ಪರ ದನಿಯೆದ್ದಾಗ ಭಾರತ ಸರ್ಕಾರವು ಕರ್ನಾಟಕ, ಕೇರಳ, ಆಂಧ್ರಪ್ರದೇಶ ರಾಜ್ಯ ರಚನೆಯ ಬಗ್ಗೆ ಸಂಪೂರ್ಣ ವರದಿ ನೀಡಲು ಈ ಕಮಿಇ ನೇಮಕವಾಯಿತು. ಇದು ಭಾಷಾವಾರು ಪ್ರಾಂತ್ಯ ರಚನೆಯಿಂದ ಏಕತೆ ಮತ್ತು ಐಕ್ಯತೆಗೆ ದಕ್ಕೆಯಾಗುವುದರಿಂದ ವಿಂಗಡಣೆ ಬೇಡ ಎಂದು ಶಿಫಾರಸ್ಸು ಮಾಡಿತು. ಇದು ಕನ್ನಡಿಗರಲ್ಲಿ ಉಗ್ರ ಪ್ರತಿಭಟನೆಗೆ ಅನುವು ಮಾಡಿಕೊಟ್ಟಿತು.

**2) ಜೆ.ವ್ಹಿ.ಪಿ. ಸಮಿತಿ (1949): ನೇಮಕ-1948, ವರದಿ-1949**

ನೆಹರೂ, ಪಟೇಲ್ ಪಟ್ಟಾಭಿ ಸೀತಾರಾಮಯ್ಯನವರ ನೇತೃತ್ವದಲ್ಲಿ ಭಾಷಾವಾರು ಪ್ರಾಂತ್ಯ ರಚನೆಗೆ ಜೆ.ವ್ಹಿ.ಪಿ ಸಮಿತಿ ನೇಮಕವಾಯಿತು. ಈ ಸಮಿತಿ ಕರ್ನಾಟಕ ಮತ್ತು ಕೇರಳವನ್ನು ವಿರೋಧಿಸಿ ಆಂಧ್ರರಚನೆಗೆ ಶಿಫಾರಸ್ಸು ಮಾಡಿತು. ಇದರಿಂದ ಕೆಪಿಸಿಸಿ ಸದಸ್ಯರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. 1951ರಲ್ಲಿ ಕರ್ನಾಟಕ ಏಕೀಕರಣ ಪಕ್ಷ ಅಸ್ತಿತ್ವಕ್ಕೆ ಬಂತು.

**3) 1952ರಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ ಸ್ಥಾಪನೆ:**

ಕೆ.ರಾಮಕೃಷ್ಣ ಕಾರಂತ್ ಅಧ್ಯಕ್ಷರಾದರು. ಇದೇ ಸಮಯದಲ್ಲಿ ದೊಡ್ಡ ಮೇಟಿ ಅಂದಾನಪ್ಪನವರು ಧಾರವಾಡದ ಜಕ್ಕಲಿ ಗ್ರಾಮದಲ್ಲಿ ಉಪವಾಸ ಕೈಗೊಮಡರು. ಬಹುಕಡೆ ಸತ್ಯಾಗ್ರಹ ಪ್ರಾರಂಭವಾದಾಗ 1953ರಲ್ಲಿ ಎಸ್.ನಿಜಲಿಂಗಪ್ಪನವರು ಕೆಲವು ಸಂಸದರೊಂದಿಗೆ ನೆಹರೂರವರನ್ನು ಭೇಟಿಮಾಡಿ ಕರ್ನಾಟಕ ರಾಜ್ಯ ರಚನೆಗೆ ಒತ್ತಾಯಿಸಿದಾಗ ನೆಹರೂ ಭರವಸೆ ನೀಡಿ ಫಜಲ್ ಅಲಿ ಕಮಿಟಿ ನೇಮಕ ಮಾಡಿದರು.

**4) ಫಜಲ್ ಅಲಿ ಕಮಿಟಿ 1953:**

ಈ ಸಮಿತಿಯ ಅಧ್ಯಕ್ಷರು ಫಜಲ್ ಆಲಿ ಮತ್ತು ಸದಸ್ಯರು ಹೆಚ್.ಎನ್.ಕುಂಜ್ರು, ಕೆ.ಎಮ್.ಫಣಿಕ್ಕರ್. ಈ ಸಮಿತಿ ಭಾರತದಾದ್ಯಂತ ಪ್ರವಾಸ ಕೈಗೊಂಡು ಅಸಂಖ್ಯಾತ ಜನರನ್ನು ಸಂಪರ್ಕಿಸಿ 1955ರಲ್ಲಿ ತನ್ನ ವರದಿ ಸಲ್ಲಿಸಿತು. ಇದು ಭಾಷೆಯ ಆಧಾರದ ಮೇಲೆ ರಾಜ್ಯ ರಚನೆಗೆ ಸಮ್ಮತಿಸಿತು.

**(3) ಏಕೀಕೃತ ಮೈಸೂರು ರಾಜ್ಯ ಸ್ಥಾಪನೆ:**

ಫಜಲ್ ಅಲಿ ಕಮಿಟಿಯ ವರದಿಯಂತೆ ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶಗಳು ಮೈಸೂರಿಗೆ ವಿಲೀನವಾದವು. ಹೊಸ ರಾಜ್ಯಕ್ಕೆ 1956ರಲ್ಲಿ ಮೈಸೂರು ಎಂದು ಹೆಸರಿಡಲಾಯಿತು.

1) ಮೈಸೂರು ಸಂಸ್ಥಾನದ 9 ಜಿಲ್ಲೆಗಳು. (ಬೆಂಗಳೂರು, ಮೈಸೂರು, ಹಾಸನ, ತುಮಕೂರು, ಮಂಡ್ಯ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ, ಕೋಲಾರ, ಬಳ್ಳಾರಿ – 1953).

2) ಮದ್ರಾಸ್‌ನಿಂದ ದಕ್ಷಿಣ ಕನ್ನಡ ಜಿಲ್ಲೆ, ಧಾರವಾಡ, ವಿಜಾಪುರ, ಕಾರವಾರ.

3) ಮುಂಬಯಿ ಪ್ರಾಂತ್ಯದಿಂದ ರಾಯಚೂರು, ಬೀದರ್, ಗುಲ್ಬರ್ಗಾ.

4) ಹೈದ್ರಾಬಾದ್‌ನಿಂದ ರಾಯಚೂರು, ಬೀದರ್, ಗುಲ್ಬರ್ಗಾ.

5) ಸ್ವತಂತ್ರ ಸಂಸ್ಥಾನಗಳು – ಜಮಖಂಡಿ, ಸಂಡೂರು, ಮುಧೋಳ, ಸವಣೂರು.

ಹೀಗೆ ನವೆಂಬರ್ 1, 1956ರಲ್ಲಿ ಏಕೀಕೃತ ಮೈಸೂರು ಅಸ್ತಿತ್ವಕ್ಕೆ ಬಂತು. 19 ಜಿಲ್ಲೆಗಳು ಪ್ರಾರಂಭದಲ್ಲಿದ್ದು, ಜಯಚಾಮರಾಜ ಒಡೆಯರ್ ರಾಜ್ಯಪಾಲರಾದರೆ, ನಿಜಲಿಂಗಪ್ಪನವರು ವಿಶಾಲ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾದರು.

ಹೀಗೆ ಏಕೀಕರಣ ಚಳುವಳಿಯು 3 ಹಂತಗಳಲ್ಲಿ ಯಶಸ್ವಿಯಾಗಿ ಮುಕ್ತಾಯವಾಯಿತು.

**ಮಿಷನರಿ ಹಾಗೂ ಸ್ವಯಂ ಸಂಸ್ಥೆಗಳಿಂದ ಶಿಕ್ಷಣ ಪ್ರಸಾರ, ಮುದ್ರಣ ಹಾಗೂ ವೃತ್ತ ಪತ್ರಿಕೆಗಳು, ಸಾಹಿತ್ಯ ಹಾಗೂ ವಿದ್ವತ್‌ಪೂರ್ಣ ಅಧ್ಯಯನ, ಕನ್ನಡ ಸಾಹಿತ್ಯದಲ್ಲಿನ ಆಧುನಿಕ ಪ್ರಕಾರಗಳು, ಹಿಂದುಳಿದ ವರ್ಗಗಳ ಚಳುವಳಿ, ಮಿಲ್ಲರ್ ಸಮಿತಿಯ ವರದಿ, ಕರ್ನಾಟಕದ ಜಾನಪದ ಕಲೆಗಳು**

**1) ಮಿಷನರಿ ಮತ್ತು ಸ್ವಯಂ ಸಂಸ್ಥೆಗಳಿಂದ ಶಿಕ್ಷಣ ಪ್ರಸಾರ:**

ಕರ್ನಾಟಕ ರಾಜ್ಯದ ಶಿಕ್ಷಣದ ಪ್ರಸಾರವನ್ನು ಅವಲೋಕಿಸಿದಾಗ ಪ್ರಾಂತೀಯರು ವಹಿಸಿದ್ದಷ್ಟೇ ಆಸಕ್ತಿಯನ್ನು ಕ್ರಿಶ್ಚಿಯನ್ ಮಿಷನರಿಗಳು ಕೂಡ ವಹಿಸಿದ್ದವು. ಕರ್ನಾಟಕದ ಬೇರೆ ಬೇರೆ ಕಡೆ ಗ್ರಾಮಗಳಿಂದ ಬರುವ ಬಡ, ಅನಾಥ ಮಕ್ಕಳಿಗಾಗಿ ಸ್ಟೂಡೆಂಟ್ ಹೋಮ್, ಅನಾಥಾಶ್ರಮ, ಹೊಸಶಾಲೆಗಳನ್ನು ತೆರೆದು ಪ್ರೋತ್ಸಾಹಿಸಿದರು.

ಕರ್ನಾಟಕದಲ್ಲಿ ಪ್ರಾರಂಭದಲ್ಲಿ ಪ್ರಶ್ನೋತ್ತರ ರೂಪದ ಶಿಕ್ಷಣಕ್ಕಾಗಿ ಕ್ಯಾಥೋಲಿಕ್ ಪಾದ್ರಿಗಳು ಶಾಲೆಗಳನ್ನು ತೆರೆದಿದ್ದರು. ಆಗ ಪ್ರಾಂತೀಯ ಶಿಕ್ಷಣ ಅಗ್ರಹಾರ, ಬ್ರಹ್ಮಪುರಿಯಲ್ಲಿ ನಡೆಯುತ್ತಿತ್ತು. ಇವು ಕಂಠಪಾಠಕ್ಕೆ ಸೀಮಿತವಾಗಿದ್ದು 'ಪಿಯರ್‌ಶಾಲೆ' ಎಂದು ಕರೆಯುತ್ತಿದ್ದರು.

1) ಬಳ್ಳಾರಿ: 1820ರಲ್ಲಿ ಲಂಡನ್ ಮಿಷನ್ ತನ್ನ ಕಾರ್ಯಕ್ಷೇತ್ರ ಸ್ಥಾಪಿಸಿತು. ಬೆಯ್‌ಗಾನ್ ಎಂಬುವವರು ಪ್ರಥಮವಾಗಿ ಇಂಗ್ಲೀಷ್ ಕಲಿಸುವ ಶಾಲೆಗಳು ಸ್ಥಾಪಿಸಲ್ಪಟ್ಟವು. ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿತ್ತು.

2) ಬೆಂಗಳೂರು: 1820ರಲ್ಲಿಯೇ ಲಂಡನ್ ಮಿಷನ್ ತನ್ನ ಕಾರ್ಯವನ್ನು ಬೆಂಗಳೂರಿನಲ್ಲಿ ಆರಂಭಿಸಿತು. ಎ.ಕ್ಯಾಂಬೆಲ್‌ನು ಕನ್ನಡ ಮಾತನಾಡುವವರ ಮಧ್ಯೆ ನುಡಿದನು. ಮುಂದೆ ಪ್ರೋಟೆಸ್ಟೆಂಟ್ ಮತ್ತು ಕ್ಯಾಥೋಲಿಕರು ಸೆಂಟ್ ಜೋಸೆಫ್, ಬಿಷಪ್ ಕಾಟನ್ ಹೀಗೆ ಹಲವಾರು ಶಾಲೆ ಪ್ರಾರಂಭವಾಯಿತು.

3) ಮೈಸೂರು: ವೆಸ್ಲಿಯಸ್ ಮಿಷನ್ ಮೈಸೂರಿನಲ್ಲಿ 1820ರಿಂದ ಪ್ರಾರಂಭಿಸಿತು. ರೆ.ಹಡ್ಸನ್ ಇಲ್ಲಿ ಉಸ್ತುವಾರಿ ಹೊತ್ತು ಹಲವಾರು ಶಾಲೆ ತೆರೆದನು. 1835ರಲ್ಲೇ ಪ್ರಸ್ತುತ ನಡೆಯುತ್ತಿರುವ ಇಂಗ್ಲೀಷ್ ಶಾಲೆಯನ್ನು ಕಟ್ಟಿದನು.

4) ಮಂಗಳೂರು: ಬಾಸೆಲ್ ಮಿಷನ್ ಸೊಸೈಟಿಯು 1836ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಮೊದಲ ಶಾಖೆ ತೆರೆದರು. 1844ರಲ್ಲಿ ಜೈಸ್ಯೂಟ್ ಮಿಷನ್ ಮಂಗಳೂರಿನಲ್ಲಿ ತನ್ನ ಶಾಲೆ ಪ್ರಾರಂಭಿಸಿತು.

5) ಧಾರವಾಡ: ಇಲ್ಲಿ ಬಾಸೆಲ್ ಮಿಷನ್ ಮೊದಲ ಮಾಧ್ಯಮಿಕ ಶಾಲೆ ಪ್ರಾರಂಭವಾಯಿತು. ಇದು ಕಾಲೇಜು ಶಿಕ್ಷಣವನ್ನು ಪ್ರಾರಂಭಿಸಿತು.

6) ಮಲಬಾರ್ ಮತ್ತು ಕೊಡಗು: ಹೆಬಿಕ್ ಮತ್ತು ಇತರರು ಬಾಸೆಲ್ ಮಿಷನ್‌ನ ಕಾರ್ಯವನ್ನು ನೀಲಗಿರಿ, ಕೊಡಗು, ಮಲಬಾರಿಗೂ ವಿಸ್ತರಿಸಿದರು. ಚರ್ಚ್, ಪ್ರಾಥಮಿಕ, ಪ್ರೌಢ, ಕಾಲೇಜುಗಳನ್ನು ಕಟ್ಟಿದರು.

ಹೀಗೆ ಮುಂದುವರೆದು ಕಾರವಾರ, ಬಿಜಾಪುರ, ಉಡುಪಿ, ಹಾಸನ್, ಬೀದರ್, ಚಿತ್ರದುರ್ಗ, ಶಿವಮೊಗ್ಗ ಮುಂತಾದ ಕಡೆ ಆಧುನಿಕ ಪಾಠಶಾಲೆ ಆರಂಭವಾದವು. ರೆವರೆಂಡ್ ಡಾ.ಮೊಗ್ಲಿಂಗ್, ರೆವರೆಂಡ್ ರಿಷ, ಮುಂತಾದವರು ಪ್ರಭಾವ ಬೀರಿ ಹೋಗಿದ್ದಾರೆ.

## ಮುದ್ರಣ ಹಾಗೂ ವೃತ್ತ ಪತ್ರಿಕೆಗಳು:

ಪತ್ರಿಕೆಯೆಂಬುದು ಆಧುನಿಕ ಸಮಾಜದ ಪ್ರಬಲವಾದ ಅಸ್ತ್ರ. ಒಂದು ದೇಶದ ಜನಸಂಖ್ಯೆಯಲ್ಲಿ ಎಷ್ಟು ಜನ ಪತ್ರಿಕೆ ಓದುತ್ತಾರೋ ಅದು ಆ ದೇಶವನ್ನು ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿಶೀಲ ರಾಷ್ಟ್ರವೆಂದು ನಿರ್ಧರಿಸುತ್ತದೆ. ಈ ನಿಟ್ಟಿನಲ್ಲಿ ಪತ್ರಿಕೆಗಳು ಜನಸಾಮಾನ್ಯರು ಮತ್ತು ಸರ್ಕಾರದ ನಡುವೆ ಕೊಂಡಿಯಾಗಿರುತ್ತವೆ.

ನಮಗಿರುವ ಆಧಾರಗಳ ಪ್ರಕಾರ ಕನ್ನಡದ ಮೊದಲ ಪತ್ರಿಕೆ ಮಂಗಳೂರು ಸಮಾಚಾರ 1843 ಜುಲೈನಲ್ಲಿ ಹೊರಬಂತು. ಬಾಸೆಲ್ ಮಿಷನ್‌ನ ಪಾದ್ರಿ, ಮೊಗ್ಲಿಂಗ್ ಸಂಪಾದಕರಾಗಿದ್ದರು. 1857ರಲ್ಲಿ ಇವರು 'ವಾರ್ತಿಕ' ಪತ್ರಿಕೆ ಆರಂಭಿಸಿದರು.

19ನೇ ಶತಮಾನದ ಅಂತ್ಯದಲ್ಲಿ ವೃದ್ಧ ಪಿತಾಮಹ ಎಮ್.ವೆಂಕಟಕೃಷ್ಣಯ್ಯನವರು 'ಬೋಧಿಸಿ' ಮಾಸಪತ್ರಿಕೆ ಮೂಲಕ ಪತ್ರಿಕಾ ರಂಗ ಪ್ರವೇಶ ಮಾಡಿದರು. ವೃತ್ತಾಂತ ಚಿಂತಾಮಣಿ ಇವರಿಗೆ ಇನ್ನೂ ಹೆಸರು ಕೊಟ್ಟಿತು.

ಪತ್ರಿಕ ಚಟುವಟಿಕೆಗಳು ಗರಿಗೆದರಿದಂತೆ ಮೂರು ಮುಖ್ಯ ಪ್ರಾದೇಶಿಕ ಪತ್ರಿಕಾ ಕೇಂದ್ರಗಳು ಹುಟ್ಟಿಕೊಂಡವು. (ಮಂಗಳೂರು, ಮೈಸೂರು, ಧಾರವಾಡ).

ಮೈಸೂರು ರಾಜ್ಯದಲ್ಲಿ 1908ರಲ್ಲಿ ಪತ್ರಿಕಾ ಪ್ರತಿಬಂಧಕ ಕಾಯ್ದೆ ಜಾರಿಗೆ ಬಂದಿತು. ಪತ್ರಿಕೆ ಮಾಡುವವರು ಮೊದಲು ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿತ್ತು.

ಡಿ.ವ್ಹಿ.ಗುಂಡಪ್ಪನವರು 1907ರಲ್ಲಿ ಭಾರತಿ ಎಂಬ ರಾಷ್ಟ್ರೀಯ ದಿನಪತ್ರಿಕೆ ಆರಂಭಿಸಿದರು.

1885ರಲ್ಲಿ ಸ್ಥಾಪಿತವಾದ ನ್ಯಾಷನಲ್ ಕಾಂಗ್ರೆಸ್ ಸ್ವರಾಜ್ಯವು ತನ್ನ ಗುರಿಯೆಂದು ಸಾರಿತ್ತು. ತಿಲಕ್, ಗೋಖಲೆ ಮುಂತಾದ ನಾಯಕರು ಪತ್ರಿಕೆಗಳನ್ನೇ ಸ್ವಾತಂತ್ರ್ಯ ಹೋರಾಟದ ಆಯುಧಗಳಾಗಿ ಬಳಸಿಕೊಂಡರು. ಇಂತಹ ಪರಿಸ್ಥಿತಿಯಲ್ಲಿ ಹಲವಾರು ಪತ್ರಿಕೆಗಳು ಕನ್ನಡದಲ್ಲೂ ಪ್ರಾರಂಭವಾದವು.

1914ರಲ್ಲಿ ಶುಭೋದ, 1907ರಲ್ಲಿ ಭಾರತಿ (ಬೆಂಗಳೂರು), ನವಜೀವನ 1914ರಲ್ಲಿ, 1927ರಲ್ಲಿ ತಾಯಿನಾಡು (ಮೈಸೂರು), 1921ರಲ್ಲಿ ಸತ್ಯಾಗ್ರಹಿ (ಉಡುಪಿ), 1930ರಲ್ಲಿ ದೇಶಬಂದು (ಹುಬ್ಬಳ್ಳಿ).

ಇದರ ಜೊತೆಗೆ ಕರ್ನಾಟಕ ಏಕೀಕರಣಕ್ಕಾಗಿ ಹಲವು ಪತ್ರಿಕೆಗಳು ಪ್ರಾರಂಭವಾದವು.

1929-ಸಂಯುಕ್ತ ಕರ್ನಾಟಕ (ಬೆಳಗಾವಿ), 1934-ಕರ್ನಾಟಕ ಭಾಷಾ ಸೇವಕ (ಬಿಜಾಪುರ), 1913-ಕರ್ನಾಟಕ (ಬೆಂಗಳೂರು), ಕರ್ನಾಟಕ ಜೀವನ, ಕರ್ನಾಟಕ ನಂದಿನಿ, ಕರ್ನಾಟಕ ವೃತ್ತ, ಕನ್ನಡ ಕೋಗಿಲೆ,

ಕನ್ನಡ ಜ್ಯೋತಿ, ಕನ್ನಡವಾಣಿ ಮುಂತಾದ ಹಲವಾರು ಪತ್ರಿಕೆಗಳು ಆರಂಭವಾದವು. ಇವುಗಳ ಪ್ರೇರಣೆಯಿಂದಾಗಿ ಏಕೀಕೃತ ಕರ್ನಾಟಕವೂ ಆಯಿತು.

ಪ್ರಜೆಗಳ ಅಭೀಪ್ಸ ಸಾಕಾರಗೊಂಡು, ಪ್ರಜಾ ಆಶಯಕ್ಕೆ ಪ್ರತಿಬಿಂಬವೋ ಎಂಬಂತೆ ಅನೇಕ ಪತ್ರಿಕೆಗಳು ಪ್ರಕಟವಾದವು. ಉದಾ: ಪ್ರಜಾವಾಣಿ–1948, ಪ್ರಜಾಬಂಧು, ಪ್ರಜಾಮತ.

20ನೇ ಶತಮಾನದ ಪೂರ್ವಾರ್ಧದಲ್ಲಿ ಆರಂಭವಾಗಿ ಇಂದಿಗೂ ಪ್ರಕಟಣೆಯಲ್ಲಿರುವ ಪತ್ರಿಕೆಗಳೆಂದರೆ ಸಂಯುಕ್ತ ಕರ್ನಾಟಕ ಮತ್ತು ಪ್ರಜಾವಾಣಿ. ಸಂಯುಕ್ತ ಕರ್ನಾಟಕ ಮೊದಲು ವಾರಪತ್ರಿಕೆಯಾಗಿ ನಂತರ ದಿನಪತ್ರಿಕೆಯಾಗಿ ಮದ್ವರಾವ್, ರಾಮರಾವ್, ರಂಗನಾಥ ದಿವಾಕರ್‌ರಿಂದ ಪ್ರಾರಂಭವಾಯಿತು.

ಪ್ರಜಾವಾಣಿ 1948ರಿಂ ಡೆಕ್ಕನ್ ಹೆರಾಲ್ಡ್ ಎಂಬ ಇಂಗ್ಲೀಷ್ ಪತ್ರಿಕೆಯ ಸಹೋದರಿ ಪ್ರಕಟಣೆಯಾಗಿ ಆರಂಭಗೊಂಡಿತು. ಕೆ.ಎನ್.ಗುರುಸ್ವಾಮಿ ಇದರ ಸ್ಥಾಪಕರು. ಸುಧಾ ಮತ್ತು ಮಯೂರ ಪತ್ರಿಕೆಗಳು ಇವರ ಸಂಸ್ಥೆಯವೇ ಆಗಿವೆ. ಸ್ಥಾಪಕ ಸಂಪಾದಕ ಪುಟ್ಟಸ್ವಾಮಯ್ಯ, ಇದರ 'ಛೂ' ಬಾಣ ಅಂಕಣ ಪ್ರಸಿದ್ಧವಾಗಿತ್ತು. ನಂತರ ಇದರಲ್ಲಿ ಸಾಪ್ತಾಹಿಕ ಪುರವಣಿ ಪ್ರಾರಂಭವಾಗಿ ನವ್ಯ, ದಲಿತ, ಬಂಡಾಯ ಸಾಹಿತ್ಯ ಚಳುವಳಿಗೆ ಬೆಳವಣಿಗೆಯಲ್ಲಿ ಸಹಾಯ ಮಾಡಿತು.

**ಕರ್ನಾಟಕದ ಜಾನಪದ ಕಲೆಗಳು:**

ಸಾವಿರಾರು ವರ್ಷಗಳ ಚರಿತ್ರೆ ಹೊಂದಿರುವ ಕರ್ನಾಟಕವು ತನ್ನದೇ ಆದ ಸಾಂಸ್ಕೃತಿಕ ಪರಂಪರೆ ರೂಢಿಸಿಕೊಂಡು ಬಂದಿದೆ. ಎಲ್ಲೆಡೆಯಲ್ಲಿಯೂ ಇರುವಂತೆ ಕನ್ನಡಿಗರ ಸಂಸ್ಕೃತಿಯಲ್ಲಿಯೂ ಜನಪದ ಮತ್ತು ಶಿಷ್ಟ ಜೀವನಶೈಲಿಗಳು ಸಮ್ಮಿಳಿತಗೊಂಡಿವೆ.

ಜನಪದ ಬಹಳಷ್ಟು ಕಲೆಗಳು ಧರ್ಮಾಚರಣೆಯ ಮೂಲದಿಂದ ಪ್ರೇರಣೆಯಾಗಿ ಹುಟ್ಟಿಬಂದಿದೆ.

ಕರ್ನಾಟಕದ ಜನಪದ ಕಲೆಗಳನ್ನು ನಿರ್ದಿಷ್ಟ ಮಾನದಂಡಗಳ ಆಧಾರದ ಮೇಲೆ ವರ್ಗೀಕರಿಸಿ ನೋಡುವುದಾದರೆ,

1) ಆರಾಧನಾ ಕಲೆಗಳು

2) ಮನರಂಜನಾ ಕಲೆಗಳು

3) ರಂಗಭೂಮಿ ಕಲೆಗಳು

4) ವಾದ್ಯಗಳು

5) ಗೀತಮೇಳಗಳು

6) ಜನಾಂಗ ಸಮುದಾಯ ಕಲೆಗಳು ಮತ್ತು ಪ್ರಾದೇಶಿಕ ಕಲೆ.

**1) ಆರಾಧನಾ ಕಲೆಗಳು:**

ಬಹಳಷ್ಟು ಜನಪದ ಕಲೆಗಳು ಆರಾಧನೆಯ ಭಾಗವಾಗಿ ಹುಟ್ಟಿ ಬೆಳೆದಿವೆ. ಮಾತೃದೇವತೆಯ ಆರಾಧನೆಯ ವಾಸನೆ ಈ ನಿಟ್ಟಿನಲ್ಲಿ ವ್ಯಾಪಕವಾದ ಪ್ರಚಾರದಲ್ಲಿದೆ. ಅಂತಹ ಕೆಲವು ಆರಾಧನೆಗಳೆಂದರೆ,

* ಮಾರಿಕುಣಿತ (ತಮಟೆಯ ಮತ್ತು ವಾದ್ಯದ ಹಿಮ್ಮೇಳನದೊಂದಿಗೆ).

* ಕೋಣನ ಕುಣಿತ.

* ಅಸಾದಿ

* ದುರುಗ ಮುರುಗಿ ಅಥವಾ ಮರಗದಮ್ಮ ಕಲೆ (ಬುಟ್ಟಿಯೊಳಗೆ ಮಾರಮ್ಮನಿಟ್ಟು ಊರೂರು ಸುತ್ತಿ ಕುಣಿತ).

* ಕರಗ (ಬೆಂಗಳೂರು, ಕೋಲಾರ, ಆನೇಕಲ್).
* ಕಂಸಾಳೆ (ಕಂಚಿನ ತಾಲ) ಮಲೆ ಮಹದೇಶ್ವರ ದೇವರ ಗುಡ್ಡ.
* ಭೂತಾರಾಧನೆ.
* ನಾಗಮಂಡಲ.
* ಸೋಮನ ಕುಣಿತ.
* ಮೊಹರಂ ಹಾಡು ಕುಣಿತ.

**2) ಮನರಂಜನಾ ಕಲೆಗಳು:**

ಕೋಲಾಟ (ಬಿದಿರು, ಕಾರೆ, ಹೊನ್ನ, ಯಾವುದಾದರೊಂದು ಮರದಿಂದ ಕೋಲು ತಯಾರಿ, 60 ತರಹದ ಕೋಲಾಟ ಪ್ರಚಾರದಲ್ಲಿವೆ).

2 ಕುದುರೆ ಕುಣಿತ, ಮರಗಾಲ ಕುಣಿತ, ಹೆಜ್ಜೆಮೇಳ ಸುಗ್ಗಿ ಕುಣಿತ, ಪಟಾಕುಣಿತ, ಪಂಜನ ಕುಣಿತ, ಕೋಡಂಗಿ ಕುಣಿತ, ಗಾರುಡಿ ಗೊಂಬೆ ಕುಣಿತ ಪ್ರಮುಖವಾದವು.

**3) ಗೀತಮೇಳಗಳು:**

ಬಹಳಷ್ಟು ಜನಪದ ಕಲೆಗಳು ಹಾಡು, ಕುಣಿತ, ವಾದ್ಯಗಳನ್ನೊಳಗೊಂಡ ಸಂಕೀರ್ಣ ಕಲೆಗಳಾಗಿವೆ. ಇದರಲ್ಲಿ ಹಾಡುಗಾರಿಕೆ ವಾದ್ಯಗಳ ಹಿಮ್ಮೇಳನ ಇರುತ್ತದೆ.

* ಸೋಬಾನ ಮೇಳ
* ರಿವಾಯತ್ (ಮೊಹರಂ ಸಂದರ್ಭದಲ್ಲಿ)
* ಭಜನೆ, ಗೀಗೀಹಾಡು ಇತ್ಯಾದಿ.

**4) ವಾದ್ಯ ಕಲೆಗಳು:**

ಹಾಡು ಕುಣಿತಗಳಿಗೆ ವಾದ್ಯಗಳ ಹಿಮ್ಮೇಳನ ಅತ್ಯಾವಶ್ಯಕವಾಗಿ ಬೇಕು. ಇಲ್ಲಿಯ ವಾದ್ಯ ಕರೆಗಳೆಂದರೆ,

1) ಕರಡಿ (ಉತ್ತರ ಕರ್ನಾಟಕದಲ್ಲಿ ಕರಡಿ ವಾದ್ಯ ಪ್ರಸಿದ್ಧ).
2) ಗಣೆ (ಕೊಳಲು) ಬಾಂಸುರಿ ಊದುವುದು.
3) ಹಲಗೆ / ತಮಟೆ.
4) ಡೊಳ್ಳು ಕುಣಿತ (ಕುರುಬ ಜನಾಂಗದ್ದು).

**5) ರಂಗಕಲೆಗಳು:**

ಜನಪದರಲ್ಲಿ ಸಹಜವಾಗಿ ಬಂದಿರುವ ಹಾಡು ಕುಣಿತಗಳಿಗೆ ಅಭಿನಯ ಮತ್ತು ವೇಷ ಭೂಷಣ ಸೇರಿಕೊಂಡು ವಿವಿಧ ರಂಗಕಲೆಗಳು ಹುಟ್ಟಿಕೊಂಡವು.

1) ದಾಸರಾಟ: ಶೂದ್ರ ವರ್ಗದ ದಾಸರು ತಿರುಗಾಟದ ಬದುಕಿನಲ್ಲಿ ಊರೂರಲ್ಲಿ ಆಡುವ ಆಟ.
2) ಹಗಲು ವೇಷ: ಹಗಲು ಹೊತ್ತಿನಲ್ಲಿ ಬಹುವೇಷ ಧರಿಸಿ ನಟನೆ ಇದೆ.
3) ತೊಗಲು ಗೊಂಬೆಯಾಟ.
4) ಸಣ್ಣಾಟ (ಸಂಗ್ಯಾಬಾಳ್ಯ – ಪ್ರಥಮ ಸಣ್ಣಟ).
5) ಮೂಡಲಪಾಯ – (ದೊಡ್ಡಾಟ ಎನ್ನುತ್ತಾರೆ). ಸಂಗೀತಶೈಲಿಯಾಗಿದೆ. ಇದರಲ್ಲಿ ಲಿಖಿತ

ಸಂಭಾಷಣೆಗಳಿವೆ. ಕೃಷ್ಣಾರ್ಜುನ ಕಾಳಗ, ಕುರುಕ್ಷೇತ್ರ ನಾಟಕ ಅಭಿನಯಿಸುತ್ತಾರೆ. ಇಲ್ಲಿ ಕುಣಿತಕ್ಕೆ ಹೆಚ್ಚು ಮಹತ್ವವಿದೆ.

6) ಯಕ್ಷಗಾನ – ಕರಾವಳಿ ಮತ್ತು ಮಲೆನಾಡು ಕರ್ನಾಟಕದಲ್ಲಿ, ಕ್ರಿ.ಶ.1700ರಿಂದಲೇ ಪ್ರಾರಂಭ. ಇದೊಂದು ನೃತ್ಯ ಪ್ರಧಾನ ನಾಟಕ.

**ಇತಿಹಾಸ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಯು.ಪಿ.ಎಸ್.ಸಿ., ಕೆ.ಪಿ.ಎಸ್.ಸಿ.ಯಲ್ಲಿ ಕೇಳಿದ ಪ್ರಶ್ನೆಗಳನ್ನು ಅಭ್ಯರ್ಥಿಗಳ ತಯಾರಿಗಾಗಿ ಈ ಕೆಳಗೆ ಕೊಡಲಾಗಿದೆ.**

1) ಸಿಂಧೂ ನಾಗರಿಕತೆ ಅವಶೇಷಗಳು ಭಾರತದ ಗತಕಾಲದ ಮಹತ್ವಪೂರ್ಣ ಆಧಾರಗಳನ್ನು ಒದಗಿಸುತ್ತದೆ ಎಂದು ನೀವು ಭಾವಿಸುವಿರಾ? ಉದಾಹರಣೆಗಳೊಂದಿಗೆ ವಿವರಿಸಿ.

2) ಮಗಧ ಸಾಮ್ರಾಜ್ಯಶಾಹಿಯನ್ನು ವ್ಯಾಖ್ಯಾನಿಸಿ. ಅದರ ಬೆಳವಣಿಗೆ ಅನುವು ಮಾಡಿಕೊಟ್ಟ ವಿವಿಧ ಸನ್ನಿವೇಶಗಳು ಯಾವುವು?

3) ಮೌರ್ಯರು ಬೌದ್ಧ ಧರ್ಮಕ್ಕೆ ನೀಡಿದ ಉತ್ತೇಜನ ಮತ್ತು ಸಂರಕ್ಷಣೆಯು ಮೌರ್ಯ ಸಾಮ್ರಾಜ್ಯದ ಪ್ರವರ್ಧನೆಗೆ ಹೇಗೆ ನೆರವಾಯಿತು?

4) ವಿವರಿಸಿ.

ಸಂಗಮ ಯುಗ

ಸಮುದ್ರಗುಪ್ತನ ದಂಡಯಾತ್ರೆ

ರಾಜತ್ವ ಕುರಿತು ಬಲ್ಬನನ ಸಿದ್ಧಾಂತ

ಡೆಕ್ಕನನ ಬಹಮನಿ ಆಡಳಿತಗಾರ

5) ವಿಜಯನಗರದ ಕಲೆಯ ಪ್ರಮುಖ ಅಂಶಗಳು ಮತ್ತು ಅದರ ಬೆಳವಣಿಗೆಗೆ ಶ್ರೀಕೃಷ್ಣದೇವರಾಯನ ಕೊಡುಗೆ ಕುರಿತು ವಿವರಿಸಿ.

6) ಮೊಘಲರ ಧಾರ್ಮಿಕ ನೀತಿಯ ಬಗ್ಗೆ ಬರೆಯಿರಿ. ವಿಶೇಷವಾಗಿ ಅಕ್ಬರ್ ಮತ್ತು ಔರಂಗಜೇಬ ಇವರಿಗೆ ಸಂಬಂಧಿಸಿದಂತೆ ವಿಮರ್ಶಾತ್ಮಕವಾಗಿ ವಿವರಿಸಿ.

7) ಹರಪ್ಪಾ ಕಾಲದ ಜನರ ಅರ್ಥವ್ಯವಸ್ಥೆ ಮತ್ತು ಮತಶ್ರಾದ್ಧೆಯನ್ನು ಕುರಿತು ಚರ್ಚಿಸಿ. ಈ ಸನ್ನಿವೇಶದಲ್ಲಿ ಇವರ ನಗರೀಕರಣ ಸಂಸ್ಕೃತಿಯನ್ನು ಕುರಿತು ಪರೀಕ್ಷಿಸಿರಿ.

8) ಆಗ್ನೇಯ ಏಷ್ಯಾದಲ್ಲಿ ಭಾರತದ ಸಾಂಸ್ಕೃತಿಕ ವಿಸ್ತರಣೆಯ ಕಾರ್ಯ ವಿಧಾನ ಮತ್ತು ಸ್ವಭಾವವನ್ನು ಕುರಿತು ಚರ್ಚಿಸಿ.

9) ವಿವರಿಸಿ.

ಅಕ್ಬರನ ದೀನ್–ಇ–ಇಲಾಹಿ

ಶಂಕರಾಚಾರ್ಯರ ಅದ್ವೈತ ಸಿದ್ಧಾಂತ

ಕೃಷ್ಣದೇವರಾಯ

10) 13ರಿಂದ 15ನೇಯ ಶತಮಾನದಲ್ಲಿ ಭಾರತದಲ್ಲಿನ ಆಂದೋಲನವನ್ನು ಕುರಿತು ತಿಳಿಸಿ. ಈ ಸನ್ನಿವೇಶದಲ್ಲಿ ಜನರ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಮೇಲಿನ ಪರಿಣಾಮವನ್ನು ವಿವರಿಸಿ.

11) ಕಾಳಿದಾಸನ ಸಾಹಿತ್ಯ ಕೃತಿಗಳನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

12) ಮನಸಬ್ದಾರಿ ವ್ಯವಸ್ಥೆಯಲ್ಲಿ 'ಶ್ರೇಣಿಗಳ ಜೋಡಣೆ' ಎಂಬುದರ ಅರ್ಥವೇನು?

13) ಹರಪ್ಪಾ ನೆಲೆಗಳಲ್ಲಿ ಕರಕುಶಲ ವಸ್ತುಗಳು ತಯಾರಾಗುತ್ತಿದ್ದವು ಎಂಬುದಕ್ಕೆ ಸಿಗುವ ಆಧಾರಗಳು ಯಾವುವು?

14) ವಿಜಯನಗರ–ಪೋರ್ಚುಗೀಸ್ ಸಂಬಂಧಗಳ ಬಗೆಗೆ ನಿರೂಪಿಸಿ.

15) ಮಧ್ಯಕಾಲೀನ ಯುಗದ ಆರಂಭದಲ್ಲಿ ದಕ್ಷಿಣ ಭಾರತದ ವ್ಯಾಪಾರ ಸಂಘಟನೆಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತಿದ್ದವು ಎಂಬುದನ್ನು ವಿಶ್ಲೇಷಿಸಿ.

16) ನಂತರದ ವೇದ ಕಾಲದಲ್ಲಿ, ವೇದ ಕಾಲೀನ ಜನರು ಪೂರ್ವಾಭಿಮುಖವಾಗಿ ವಿಸ್ತರಣೆಗೊಂಡಿದ್ದನ್ನು ಕುರಿತು ಪ್ರಬಂಧ ಬರೆಯಿರಿ.

17) ನಾಯನಾರರು ಮತ್ತು ಆಳ್ವಾರರು ಸಂದರ್ಭದಲ್ಲಿ, ದಕ್ಷಿಣ ಭಾರತದ ಭಕ್ತಿ ಚಳುವಳಿಯು ಯಾವ ರೀತಿಯ ಸಾಮಾಜಿಕ ಅಂಶವನ್ನು ಒಳಗೊಂಡಿತ್ತು–ವಿವರಿಸಿ.

18) ವಿಜಯನಗರದ ಅರಸರ ಆಳ್ವಿಕೆಯಲ್ಲಿ ದಕ್ಷಿಣ ಭಾರತದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಎಂತಹ ಬದಲಾವಣೆಗಳಾದವು?

19) ಹರಪ್ಪಾ ನಾಗರಿಕತೆಯ ಅವಸಾನ ಕುರಿತಂತೆ ಮಂಡಿಸಿದ ವಿವಿಧ ಸಿದ್ಧಾಂತ ಪರಿಶೀಲಿಸಿ.

20) 19ನೇ ಶತಮಾನದಲ್ಲಿ ಬ್ರಿಟೀಷರ 'ಸಾಮಾಜಿಕ ಸುಧಾರಣೆಗಳು' ಕಾರ್ಯಕ್ರಮದಲ್ಲಿ ಅವರ ಕಾರ್ಯಸೂಚಿ ಯಾವುದಾಗಿತ್ತು.

21) ಕರ್ನಾಟಕವು ಅಂತಿಮವಾಗಿ ಒಂದು ಏಕೀಕೃತ ರಾಜ್ಯವಾಗಿ ಉಗಮಿಸುವಲ್ಲಿ ಹಾದು ಬಂದ ಹಂತಗಳನ್ನು ಗುರುತಿಸಿ.

22) 'ಭಾರತದ ಪುನರುತ್ಥಾನ' ಎಂದು ಹೇಳಲಾಗುವ ಚಳುವಳಿಯ ನೇತಾರರು, ಆಗಷ್ಟೇ ಉಗಮಿಸುತ್ತಿದ್ದ ಬುರ್ಪ್ವಾ ಬುದ್ಧಿಜೀವಿ ವರ್ಗಕ್ಕೆ ಸೇರಿದವರಾಗಿರಲಿಲ್ಲ ಎಂಬ ದೃಷ್ಟಿಕೋನ ಬಗ್ಗೆ ವಿಮರ್ಶಿಸಿ.

23) ಋಗ್ವೇದದಲ್ಲಿ ತಿಳಿಸಲಾದ ಪ್ರಮುಖವಾದ ಐಶ್ವರ್ಯಗಳಾವುವು?

24) ಮಹಾಯಾನ ಬೌದ್ದ ಧರ್ಮವು ಯಾವ ಲಕ್ಷಣಗಳಿಂದ ಹೀನಯಾನ ಬೌದ್ಧಧರ್ಮಕ್ಕಿಂತ ಭಿನ್ನವಾಗಿದೆ?

25) ಹರಪ್ಪಾ ನಾಗರಿಕತೆಯ ಪ್ರಾಕ್ತನ ಶಾಸ್ತ್ರದಿಂದ ವ್ಯಕ್ತವಾದ ಭೌತಿಕ, ಸಂಸ್ಕೃತಿ ಮತ್ತು ವೇದ ಸಾಹಿತ್ಯದಲ್ಲಿ ವ್ಯಕ್ತವಾದ ಸಂಸ್ಕೃತಿಯ ನಡುವೆ ಕಂಡು ಬರುವ ವ್ಯತ್ಯಾಸವೇನು?

26) ವಿಶಿಷ್ಟಾದ್ವೈತವು ಅದ್ವೈತದಿಂದ ಹೇಗೆ ಭಿನ್ನವಾಗಿದೆ ಎಂಬುದನ್ನು ವಿವರಿಸಿ.

27) ಉತ್ತರ ವೇದಕಾಲದಲ್ಲಿ ಕಬ್ಬಿಣ ತಂತ್ರಜ್ಞಾನವು ಜಾರಿಗೆ ಬಂದ ನಂತರ ಅದು ಹೇಗೆ ಜನರ ಬದುಕಿನಲ್ಲಿ ಪ್ರಮುಖ ಬದಲಾವಣೆಗಳನ್ನು ಉಂಟುಮಾಡಿತು? ವಿವರಿಸಿ.

28) ಒಂದು ಬಲಾಢ್ಯ ರಾಷ್ಟ್ರದ ಪರಿಕಲ್ಪನೆಯು ಅರ್ಥಶಾಸ್ತ್ರದಲ್ಲಿ ಹೇಗೆ ವ್ಯಕ್ತವಾಗಿದೆ?

29) 'ವಿಜಯನಗರ' ಎಂದರೆ ವಿಜಯದ ನಗರ. ಈ ಅವಧಿಯು ನಿಸ್ಸಂದೇಹವಾಗಿ ನಿಮ್ಮ 'ನಗರ ವಿಜಯ' ಅಥವಾ ನಗರದ ವಿಜಯವನ್ನು ಪ್ರತಿನಿಧಿಸುತ್ತದೆ. ಈ ಅವಧಿಯಲ್ಲಿ ದಕ್ಷಿಣ ಭಾರತದ ವ್ಯಾಪಾರ, ನಗರೀಕರಣ ವಿವರಿಸಿ.

30) ಮೈಸೂರು ರಾಜ್ಯವನ್ನು ಸ್ವಾಧೀನಕ್ಕೆ ಕೊಡುವಾಗ ಏನೇನು ಷರತ್ತುಗಳನ್ನು ಹಾಕಲಾಯಿತು?

31) ಮೈಸೂರು ರಾಜ್ಯದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ನಡೆದ 'ವಿಧುರಾಶ್ವತ್ಥ ಘಟನೆ' ನಿರೂಪಿಸಿ.

32) ಕರ್ನಾಟಕದ ಏಕೀಕರಣ ಚಳುವಳಿಯ ಚರಿತ್ರೆಯನ್ನು ನಿರೂಪಿಸಿ.

33) ಗಾಂಧಾರ ಕಲಾ ಪ್ರಸ್ಥಾನದ ವಿಶಿಷ್ಟ ಲಕ್ಷಣಗಳು ಯಾವುವು?

34) ವಿಜಯನಗರ ಆಳ್ವಿಕೆಯ ಕಾಲದಲ್ಲಿದ್ದ ನಾಯಕರ ಪದ್ಧತಿಯ ಕಾರ್ಯನಿರ್ವಹಣೆಯ ಕುರಿತು ಟಿಪ್ಪಣಿ ಬರೆಯಿರಿ.

35) ಬಾಣಭಟ್ಟನ 'ಹರ್ಷಚರಿತ' ಒಂದು ಇತಿಹಾಸ ಕೃತಿಯಾಗಿದೆ. ಎಂಬುದರ ಕುರಿತು ನಿಮ್ಮ ಅಭಿಪ್ರಾಯವೇನು?

36) ಬಾದಾಮಿಯ ಗುಹಾ ದೇವಾಲಯಗಳನ್ನು ಕುರಿತು ವಿವರಿಸಿ.

37) ಸ್ಥಾಪಿತ ಸಂಪ್ರದಾಯಬದ್ಧ ವರ್ತನೆ ಮತ್ತು ಹೊಸದಾಗಿ ಉಗಮಿಸುತ್ತಿದ್ದ ಗುಂಪುಗಳ ಆಕಾಂಕ್ಷೆಗಳ ನಡುವಿನ ವಿವಾದಗಳ ಕ್ರಿ.ಪೂ. ಆರನೇ ಶತಮಾನದ ಧಾರ್ಮಿಕ ಪದ್ಧತಿಗಳು ಹಾಗೂ ತತ್ವಮೀಮಾಂಸ ಪರಿಕಲ್ಪನೆಗಳಲ್ಲಿ ಹೇಗೆ ಬದಲಾವಣೆಗಳನ್ನು ತೀವ್ರಗೊಳಿಸಿದವು?

38) ಜ್ಞಾನೋದಯದ ವಿಶಿಷ್ಟ ಲಕ್ಷಣಗಳನ್ನು ನಿರೂಪಿಸಿ.

39) 'ವಿಧುರಾಶ್ವತ್ಥ ಘಟನೆ' ಎಂದರೇನು? ಮೈಸೂರು ಸ್ವಾತಂತ್ರ್ಯಾ ಚಳುವಳಿಯಲ್ಲಿ ಇದರ ಪಾತ್ರವೇನು?

40) ಕರ್ನಾಟಕದ ಏಕೀಕರಣಕ್ಕಾಗಿ ನಡೆದ ಚಳುವಳಿಯಲ್ಲಿ ಸಾಹಿತ್ಯ ಮತ್ತು ಸಾಹಿತಿಗಳು ವಹಿಸಿದ ಪಾತ್ರವೇನು?

41) ಆರಂಭದ ವೇದಕಾಲೀನ ಸಾಹಿತ್ಯದಲ್ಲಿ ಯಾವ ಯಾವ ಪ್ರಕಾರದ ಸಂಪತ್ತುಗಳನ್ನು ಹಾಗೂ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಹೇಳಲಾಗಿದೆ?

42) ಹರಪ್ಪಾ ನಾಗರಿಕತೆಯು ಪಾಶ್ಚಾತ್ಯ ಜಗತ್ತಿನೊಂದಿಗೆ ಹೊಂದಿದ್ದ ವ್ಯಾಪಾರ ಸಂಪರ್ಕಗಳನ್ನು ಕುರಿತು ಬರೆಯಿರಿ.

43) ಗುಪ್ತ ರಾಜವಂಶದ ಕಾಲದಲ್ಲಿ ಸಂಸ್ಕೃತ ಸಾಹಿತ್ಯದ ಸ್ಥಾನಮಾನ ಹೇಗಿದ್ದಿತು?

44) ಗುಹಾ ದೇವಾಲಯಗಳು ಮತ್ತು ಕಟ್ಟಡ ದೇವಾಲಯಗಳನ್ನು ವಿಶೇಷ ಗಮನದಲ್ಲಿಟ್ಟುಕೊಂಡ ಪಲ್ಲವರ ವಾಸ್ತು ಶಿಲ್ಪಶೈಲಿಯ ಮುಖ್ಯ ಲಕ್ಷಣಗಳನ್ನು ವಿವರಿಸಿ.

45) 'ದೀನ ಇ ಇಲಾಹಿ' ಕೃತಿಯ ವಿಷಯಗಳೇನು ಎಂಬುದನ್ನು ವಿವರಿಸಿ ಮತ್ತು ಅದರ ರಾಜಕೀಯ ಹಾಗೂ ಸಾಮಾಜಿಕ ಅಂಶಗಳನ್ನು ತಿಳಿಸಿ.

46) ವಿಜಯನಗರ ಸಾಮ್ರಾಜ್ಯ ಕುಸಿದು ಬೀಳುವುದಕ್ಕೆ ಕಾರಣವೇನು? ವಿವರಿಸಿ.

47) ಬೌದ್ಧ ಧರ್ಮದ ಮುಖ್ಯ ತತ್ವಗಳನ್ನು ಕುರಿತಂತೆ ಅವು ಯಾವ ಸಮಾಜೋ ಆರ್ಥಿಕ ಸಂದರ್ಭದಲ್ಲಿ ಹುಟ್ಟಿಕೊಂಡವು ಎಂಬುದರ ಹಿನ್ನೆಲೆ ಇಟ್ಟುಕೊಂಡು ಚರ್ಚಿಸಿ.

48) ಮೈಸೂರಿನ ಪುನರ್ ಸ್ಥಾಪನೆಯ ಷರತ್ತು ಬರೆಯಿರಿ.

49) ಪೆರಿಯಾರ ಇ.ವಿ.ರಾಮಸ್ವಾಮಿ ನಾಯಕರ ಅವರ ಸಾಧನೆಗಳನ್ನು ವಿವರಿಸಿ. ಭಾರತದ ಪುನರುಜ್ಜೀವನದ ಪರಿಧಿಯೊಳಗೆ ಈ ಸಾಧನೆಗಳ ಸ್ಥಾನವನ್ನು ಹೇಗೆ ಗುರುತಿಸಬಹುದು. ವಿವರಿಸಿ.

50) ಕರ್ನಾಟಕದ ಹಿಂದುಳಿದ ವರ್ಗಗಳ ಚಳುವಳಿಗೂ ಸಾಧನೆಗಳನ್ನು ಕುರಿತು ಚರ್ಚಿಸಿರಿ.

51) ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಗಳಿಗೆ ರಾಷ್ಟ್ರಕೂಟರ ಕೊಡುಗೆಗಳೇನು?

52) ಇಸ್ಲಾಂ ಧರ್ಮವು ದಕ್ಷಿಣ ಭಾರತಕ್ಕೆ ವಿಸ್ತರಿಸದಂತೆ ತಡೆಯುವ ರಕ್ಷಣಾ ಕ್ಷೇತ್ರವಾಗಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಲಾಯಿತು ಎಂಬುದು ನಿಜವೇ?

53) ವೇದಕಾಲಿನ ಸಾಹಿತ್ಯದ ವ್ಯಾಪ್ತಿ ಮತ್ತು ವಿಷಯವಸ್ತು ತಿಳಿಸಿರಿ.

54) ವೇದಕಾಲಿನ ಸಮಾಜದಲ್ಲಿ ಸಮರ್ಪಣೆಯ ಆಚರಣೆಯ ಉದ್ದೇಶಗಳೇನು?

55) ಶಂಕರಾಚಾರ್ಯರ ತತ್ವಶಾಸ್ತ್ರದ ವಿವರಗಳನ್ನು ನಿರೂಪಿಸಿ ಚಾರಿತ್ರಿಕ ಸಂದರ್ಭಗಳಲ್ಲಿ ಅವುಗಳ ಸ್ಥಾನ ಗುರುತಿಸಿ.

56) ಆರಂಭಿಕ ಸಂದರ್ಭದಲ್ಲಿ ಉತ್ತರ ಭಾರತದ ಭಕ್ತಿ ಚಳುವಳಿಯು ಎಷ್ಟರ ಮಟ್ಟಿಗೆ ದಕ್ಷಿಣ ಭಾರತದ ಚಳುವಳಿಗೆ ಋಣಿಯಾಗಿದ್ದಿತು.

57) ಬ್ರಹ್ಮ ಸಮಾಜದ ಸಿದ್ಧಾಂತಗಳ ಬಗ್ಗೆ ಬರೆಯಿರಿ.

58) ಹಾವನೂರು ಸಮಿತಿಯ ವರದಿಯನ್ನು ಕುರಿತು ಬರೆಯಿರಿ.

59) ಜ್ಞಾನೋದಯದ ವಿಶೇಷ ಗುಣ ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

* * * * *

**ಗ್ರಂಥ ಋಣ:**

1) ಸಮಗ್ರ ಭಾರತದ ಇತಿಹಾಸ: ಕೆ.ಎನ್.ಎ

2) ಭಾರತದ ಇತಿಹಾಸ: ಕೆ. ಸದಾಶಿವ

3) ಭಾರತದ ಇತಿಹಾಸ: ಫಾಲಾಕ್ಷ

4) ವಿಕಿಪಿಡಿಯಾ

5) ಪ್ರೇರಣಾ: ಸುವರ್ಣಾ ಕರ್ನಾಟಕ

6) ಡಿ.ಎಸ್.ಇ.ಆರ್.ಟಿ. ಇತಿಹಾಸ ಪಠ್ಯ ಪುಸ್ತಕಗಳು

7) ಕೆ.ಎ.ಎಸ್. ಇತಿಹಾಸ, ಚೈತ್ರ ಪ್ರಕಾಶನ

8) ಇತಿಹಾಸ: ಅರ್ಚನಾ ಎಮ್.ಎಸ್.

9) ಯು.ಪಿ.ಎಸ್.ಸಿ ಮತ್ತು ಕೆ.ಪಿ.ಎಸ್.ಸಿ. ವೆಬ್ ಸೈಟ್ಸ್.

# ಸಾಮಾನ್ಯ ಅಧ್ಯಯನ ಪತ್ರಿಕೆ 1

# ಭಾಗ – 2

## 1. ಸಾಮಾಜಿಕ ಮತ್ತು ರಾಜಕೀಯ ಚಿತ್ರಣ

### ಹಿಂದುಳಿದ ವರ್ಗಗಳು ಮತ್ತು ನ್ಯಾಯ:

ಹಿಂದುಳಿದ ವರ್ಗಗಳು ಎಂಬುವುದು ಯಾವುದೇ ನಿಶ್ಚಿತವಾದ ಸೀಮಾರೇಖೆ ಮತ್ತು ನಿರ್ದಿಷ್ಟವಾದ ಆಧಾರಾಂಶಗಳನ್ನು ಒಳಗೊಳ್ಳದ ಸಮೂಹವಾಗಿದೆ. ಇದು ದೇಶದ ಮೂರನೇ ಒಂದು ಭಾಗದಷ್ಟು ಒಳಗೊಂಡಿದೆ. ಈ ಬಗೆಯ ಸಮೂಹಗಳೆಂದರೆ,

1) ಪರಿಶಿಷ್ಟ ಬುಡಕಟ್ಟುಗಳು

2) ಪರಿಶಿಷ್ಟ ಜಾತಿಗಳು

3) ಇತರೆ ಹಿಂದುಳಿದ ವರ್ಗಗಳು

ಹಿಂದೂ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಪಂಚಮ ವರ್ಗದವರು ಕಂಡು ಬಂದಿದ್ದು, ಮೊದಲ ಮೂ4ರು ವರ್ಗದವರನ್ನು ಮುಂದುವರೆದು ಪರಿಗಣಿಸಲಾಗಿದೆ. ಅಂದರೆ ಅವರಿಗೆ ವೇದೋಪನಿಷತ್ತುಗಳು, ಧರ್ಮಶಾಸ್ತ್ರಗಳು, ಭೂಮಿ ಒಡೆತನ, ರಾಜಕೀಯ ಪ್ರಾಬಲ್ಯ, ಮನುವಿನ ಧರ್ಮಶಾಸ್ತ್ರಗಳು ಆಧಾರವಾಗಿವೆ. ಆದರೆ ಹಿಂದುಳಿದ ವರ್ಗದಲ್ಲಿ ಸೇರಿದ ಶೂದ್ರರು ಮತ್ತು ಪಂಚಮರು ವಿವಿಧ ಕಾರ್ಮಿಕರು ಮತ್ತು ಕುಶಲಕರ್ಮಿಗಳಾಗಿದ್ದರು. ಇವರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳಿಂದ ವಂಚಿತರಾಗಿದ್ದರು.

ಕರ್ನಾಟಕದಲ್ಲಿ ಈ ಹಿಂದುಳಿದ ವರ್ಗಗಳು 12ನೇ ಶತಮಾನದವರೆಗೂ ಉನ್ನತವರ್ಗಗಳಿಂದ ಶೋಷಣೆಗೆ ಒಳಪಟ್ಟು ಅವರ ಸೇವಕರಾಗಿಯೂ ಜೀತದಾಳಾಗಿಯೂ ಇದ್ದರು. ಆದರೆ ಬಸವೇಶ್ವರರ ಪ್ರಭಾವದಲ್ಲಿ ಅನೇಕ ದಲಿತ ಪುರುಷರು ಮತ್ತು ಮಹಿಳೆಯರು ಸಾಮಾಜಿಕ ಸಂಕೋಲೆಗಳಿಂದ ಹೊರಬಂದರು. ನಂತರ 20ನೇ ಶತಮಾನದ ಸ್ಥಿತಿಗತಿ ಸುಧಾರಣೆಗೆ ಸಹಾಯಕವಾಗಿದೆ.

ಹಿಂದುಳಿದ ವರ್ಗಗಳೆಂದರೆ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಸಮುದಾಯಗಳು ಸಮೂಹಗಳೇ ಆಗಿವೆ.

### ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿ (ಸ್ವಾತಂತ್ರ್ಯ ನಂತರ):

ಸ್ವಾತಂತ್ರ್ಯ ಪೂರ್ವದಲ್ಲೇ ಕರ್ನಾಟಕದಲ್ಲಿ ಹಿಂದುಳಿದ ವರ್ಗದ ಚಳುವಳಿಗಳು ಜೋರಾಗಿಯೇ ನಡೆದಿದ್ದವು. (1917ರ ಹಿಂದುಳಿದ ವರ್ಗ ಪ್ರಥಮ ಸಮಾವೇಶ ಪ್ರಜಾಮಿತ್ರ ಮಂಡಳಿ, ಜಸ್ಟಿಸ್ ಮಿಲ್ಲರ್ ಸಮಿತಿ, ಬ್ರಾಹ್ಮಣೇತರ ಪರಿಷತ್ 1920) ಹೀಗೆ ಹಲವಾರು ಹೋರಾಟಗಳು ಮತ್ತು ಸಮಿತಿಗಳು ಅಸರ್ತಿತ್ವಕ್ಕೆ ಬಂದಿದ್ದವು. ಆದರೆ ಸ್ವಾತಂತ್ರ್ಯದ ನಂತರ ಹಲವಾರು ಪ್ರಮುಖವಾದ ಆಯೋಗಗಳು ಸ್ಥಾಪಿಸಲ್ಪಟ್ಟು ಸುಧಾರಣಾ ಪ್ರಕ್ರಿಯೆ ಭರದಿಂದ ಸಾಗಿತು. ಅಂತಹ ಕೆಲವು ಪ್ರಮುಖವಾದ ಆಯೋಗಗಳನನು ನೋಡುವುದಾದರೆ,

1) ಡಾ. ಆರ್. ನಾಗನಗೌಡ ಸಮಿತಿ

2) ಎಲ್.ಜಿ. ಹಾವನೂರು ಆಯೋಗ

3) ಟಿ. ವೆಂಕಟಸ್ವಾಮಿ ಆಯೋಗ

4) ಚಿನ್ನಪ್ಪರೆಡ್ಡಿ ಆಯೋಗ

ಪ್ರಮುಖವಾದವುಗಳು.

**1) ಡಾ. ಆರ್. ನಾಗನಗೌಡ ಸಮಿತಿ (1960–61):**

ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಗುರುತಿಸಲು ಅನುಸರಿಸಬೇಕಾದ ಮಾನದಂಡವನ್ನು ಸೂಚಿಸಲು ಎಸ್. ನಿಜಲಿಂಗಪ್ಪನವರ ಸರ್ಕಾರ 1960ರಲ್ಲಿ ಡಾ.ಆರ್.ನಾಗನಗೌಡರ ಅಧ್ಯಕ್ಷತೆಯಲ್ಲಿ 'ಮೈಸೂರು ಹಿಂದುಳಿದ ವರ್ಗಗಳ ಸಮಿತಿ' ರಚನೆಯಾಯಿತು.

ಸಮಿತಿ ಅನುಸರಿಸಿದ ಮಾನದಂಡ,

1) ಪ್ರೌಢ ಶಾಲೆಗಳಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪ್ರಮಾಣ.

2) ಸರ್ಕಾರಿ ಸೇವೆಯಲ್ಲಿ ಹಿಂದುಳಿದ ನೌಕರರ ಪ್ರಮಾಣ.

3) ಸಾಮಾಜಿಕವಾಗಿ ಹಿಂದುಳಿದವರ ಪ್ರಮಾಣ.

ಈ ಮಾನದಂಡಕ್ಕನುಗುಣವಾಗಿ ಹಿಂದುಳಿದ ವರ್ಗದವರನ್ನು ಗುರುತಿಸಿ ಅದರಲ್ಲಿ 9 ಗುಂಪು ಹಿಂದುಳಿದವರೆಂದು ಮತ್ತು ಅತೀ ಹಿಂದುಳಿದಂತಹ ವರ್ಗಗಳೆಂದು ತೀರ್ಮಾನಿಸಲಾಯಿತು.

ಬ್ರಾಹ್ಮಣ, ಕ್ಷತ್ರಿಯ, ಲಿಂಗಾಯತ ಧರ್ಮಗಳು ಶೈಕ್ಷಣಿಕವಾಗಿ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಮುಂದುವರೆದಿವೆ ಎಂದು ವರದಿ ನೀಡಿದೆ. ಇದು ತನ್ನ ವರದಿಯಲ್ಲಿ ಮೀಸಲಾತಿಯನ್ನು ಈ ರೀತಿ ನಿಗದಿಗೊಳಿಸಲಾಯಿತು.

* ಎಸ್ಸಿ – 15%
* ಎಸ್ಟಿ – 3%
* ಒಬಿಸಿ – 50%

ಒಟ್ಟು ಶೇ.68 ಮೀಸಲಾತಿ ಜಾರಿಗೆ ಬಂದಾಗ ಬಾಲಾಜಿ ಮತ್ತು ಕೆಲವು ವಿದ್ಯಾರ್ಥಿಗಳು ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದರು. ಸುಪ್ರೀಂಕೋರ್ಟ್ ನಾಗನಗೌಡ ಸಮಿತಿಯ ವರದಿಯನ್ನು ಅಸಿಂಧುಗೊಳಿಸಿ, ಈ ರೀತಿ ತೀರ್ಪಿಟ್ಟಿತ್ತು.

'ಹಿಂದುಳಿದ ವರ್ಗದವರನ್ನು ಕೇವಲ ಜಾತಿಯ ಆಧಾರದ ಮೇಲೆ ಗುರುತಿಸುವುದು ಸಂವಿಧಾನ ಬಾಹಿರ'. ಇದರ ಜೊತೆಗೆ ಶಿಕ್ಷಣ ಕಸುಬು ಪರಿಸರವನ್ನು ಪರಿಗಣಿಸಿ ಎಂದು ತಿಳಿಸಿತು. ನಂತರ ಮೀಸಲಾತಿ 48%ಕ್ಕೆ ಇಳಿಯಿತು.

**2) ಎಲ್.ಜಿ. ಹಾವನೂರು ಆಯೋಗ (1972):**

ಹಿಂದಿನ ಮೀಸಲಾತಿಯಿಂದ ಸುಧಾರಣೆ ಕಂಡವರನ್ನು ಕೈಬಿಟ್ಟು ಅತ್ಯಂತ ದಾರುಣ ಸ್ಥಿತಿಯಲ್ಲಿರುವವರನ್ನು ಮೇಲೆತ್ತಲು 1972ರಲ್ಲಿ ದೇವರಾಜ್ ಅರಸ ಸರ್ಕಾರವು ಎಲ್.ಜಿ.ಹಾವನೂರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಿತು. ಇದು ಕರ್ನಾಟಕದ ಪ್ರಥಮ ಹಿಂದುಳಿದ ವರ್ಗದವರ ಆಯೋಗವಾಗಿತ್ತು. (8 ಸದಸ್ಯರು).

ಲಿಂಗಾಯತ ಮತ್ತು ಒಕ್ಕಲಿಗರ ಪ್ರಾಬಲ್ಯವನ್ನು ಕಡಿಮೆಗೊಳಿಸಿ, ಹಿಂದುಳಿದ ಜಾತಿಯವರನ್ನು ರಾಜಕೀಯವಾಗಿ ಸಂಘಟಿಸಬೇಕೆಂಬ ದೇವರಾಜ್ ಅರಸ್‌ರವರ ಆಸೆಯನ್ನು ಈಡೇರಿಸಬೇಕಿತ್ತು. ಹಾಗಾಗಿ ಅರಸುರವರ ಈ ವರದಿಯನ್ನು ಬೈಬಲ್ ಆಫ್ ದಿ ಬ್ಯಾಕ್‌ವಾರ್ಡ್ ಕ್ಲಾಸಸ್ ಎಂದರು.

**3) ವೆಂಕಟಸ್ವಾಮಿ ಆಯೋಗ (1983–86):**

ಎಲ್.ಜಿ. ಹಾವನೂರ ವರದಿಯ ಲೋಪದೋಷಗಳನ್ನು ಪರಿಶೀಲನೆ ಮಾಡಿದ ಸರ್ಕಾರ 1979ರಲ್ಲಿ ಪರಿಷತ್ ಆದೇಶ ಹೊರಡಿಸಿತು. ನ್ಯಾಯಾಲಯ ಮೀಸಲಾತಿ ನೀತಿ ಪರಿಶೀಲಿಸಲು ಆದೇಶಿಸಲಾಗಿದೆ. ಅಂದಿನ ಮುಖ್ಯಮಂತ್ರಿ 'ರಾಮಕೃಷ್ಣ ಹೆಗಡೆ'ಯವರು ಟಿ. ವೆಂಕಟಸ್ವಾಮಿ ಅಧ್ಯಕ್ಷತೆಯಲ್ಲಿ 8ನೇ ಹಿಂದುಳಿದ ವರ್ಗಗಳ ಆಯೋಗ ರಚಿಸಿದರು. (14 ಮಂದಿ ಸದಸ್ಯರು).

**ಆಯೋಗದ ಮುಖ್ಯ ಕಾರ್ಯದ್ದೇಶಗಳು:**

1) ಸಂವಿಧಾನದ 15 (4) ಮತ್ತು 16 (4) ವಿಧಿಗಳ ಪ್ರಕಾರ ಅದುವರೆಗೆ ಸರ್ಕಾರವು ಹೊರಡಿಸಿದ ಆಜ್ಞೆಗಳನ್ನು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಬೆಳಕಿನಲ್ಲಿ ಪರಿಶೀಲನೆ ಮಾಡುವುದು.

2) ರಾಜ್ಯದ ಹಿಂದುಳಿದ ವರ್ಗಗಳ ಪರಿಶೀಲನೆ ಮತ್ತು ವರದಿ.

3) ಇದುವರೆಗೆ ಸರ್ಕಾರ ಕೈಗೊಂಡ ಕ್ರಮಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗಿದೆ ಎಂಬುದರ ಪರಿಶೀಲನೆ.

**ಈ ಆಯೋಗದ ಶಿಫಾರಸ್ಸುಗಳು:**

ಈ ಆಯೋಗವು ಓಬಿಸಿ ಜಾತಿಗಳನ್ನು ಎರಡು ಭಾಗವಾಗಿ ವಿಂಗಡಿಸಿ, ಒಕ್ಕಲಿಗ ಜಾತಿಯನ್ನು ಹಿಂದುಳಿದ ಪಟ್ಟಿಯಿಂದ ತೆಗೆದುಹಾಕಿ ಉಳಿದವರಿಗೆ ನೌಕರಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಶೇ.27 ಮೀಸಲಾತಿ ನೀಡಿತು. ಇದರ ಜೊತೆಗೆ ಎಸ್ಸಿ / ಎಸ್ಟಿಯವರಿಗೆ 18% ಮೀಸಲಾತಿ ನಿಗದಿಪಡಿಸಿ 45% ಮೀಸಲಾತಿ ಶಿಫಾರಸ್ಸು ಮಾಡಿತು. ಇದರನ್ವಯ ಹಿಂದುಳಿದ ಮತ್ತು ಅತೀ ಹಿಂದುಳಿದವರಲ್ಲಿ 399 ಜಾತಿಗಳನ್ನು ಗುರುತಿಸಲಾಯಿತು.

ಆದರೆ ಲಿಂಗಾಯಿತ ಮತ್ತು ಒಕ್ಕಲಿಗ ಜಾತಿಯವರ ಪ್ರಬಲ ವಿರೋಧದಿಂದಾಗಿ ಈ ವರದಿಯು ತಿರಸ್ಕಾರಗೊಂಡಿತು. ಕ್ರಮೇಣ ಇದಕ್ಕೆ ಪರಿಹಾರವಾಗಿ 'ಚಿನ್ನಪ್ಪ ರೆಡ್ಡಿಯವರ ಏಕಸದಸ್ಯ' ಆಯೋಗವು ಅಸ್ತಿತ್ವಕ್ಕೆ ಬಂದಿತು.

**4) ಚಿನ್ನಪ್ಪ ರೆಡ್ಡಿ ಆಯೋಗ (1986–90):**

ವೆಂಕಟಸ್ವಾಮಿ ಆಯೋಗದಲ್ಲಾದ ಲೋಪದೋಷಗಳ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಸರ್ಕಾರವು 1986ರಲ್ಲಿ ಚಿನ್ನಪ್ಪರೆಡ್ಡಿಯವರ ಅಧ್ಯಕ್ಷತೆಯಲ್ಲಿ 3ನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಿತು.

**ಆಯೋಗದ ಪ್ರಮುಖ ಉದ್ದೇಶ / ವಿಶೇಷತೆ:**

1) ಈ ಆಯೋಗವು ಹಿಂದುಳಿದಿರುವಿಕೆ ಜಾತಿಯ ಜೊತೆಗೆ ಆರ್ಥಿಕವಾಗಿ ಹಿಂದುಳಿದಿರುವ ವೃತ್ತಿನಿರತ ಜಾತಿಗಳನ್ನು ಪರಿಗಣನೆಗೆ ತೆಗೆದುಕೊಂಡಿತು.

2)ನಮ್ಮ ಸಂವಿಧಾನದಲ್ಲಿ ಅಳವಡಿತವಾದ ಶೈಕ್ಷಣಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕೆ, ಅವಕಾಶಗಳ ಬಗ್ಗೆ ಚರ್ಚಿತವಾಯಿತು.

3) ಎಲ್ಲಾ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಪರಿಶೀಲನೆ.

4) ಹಿಂದಿನ ಎಲ್ಲಾ ಆಯೋಗಗಳ ವರದಿ ಪರಿಶೀಲಿಸಿತು.

**ವರದಿ:**

ಚಿನ್ನಪ್ಪರೆಡ್ಡಿ ಆಯೋಗವು ಶೈಕ್ಷಣಿಕ ಮತ್ತು ಉದ್ಯೋಗದ ಸವಲತ್ತುಗಳ ಮೀಸಲಾತಿ ಪಡೆಯಲು 3 ವರ್ಗಗಳನ್ನು ವಿಂಗಡಿಸಿತು. ಅವುಗಳೆಂದರೆ,

1) 52 ಜಾತಿಗಳು ಮತ್ತು ಉಪಜಾತಿಗಳಿಗೆ ಮೀಸಲು ಪ್ರಮಾಣ 5% (ಗೊಣಗ, ಹಾಲಕ್ಕಿ, ಉಪ್ಪಾರ, ಜೋಗಿ ಇತ್ಯಾದಿ).

2) 14 ಜಾತಿಗಳು ಮತ್ತು ಮೀಸಲಾತಿ ಪ್ರಮಾಣ 28% (ಕುರುಬ, ಈಡಿಗ, ಅಗಸ, ಬೇಡ, ಮುಸ್ಲಿಂ, ಎಸ್ಸಿ, ಎಸ್ಟಿ ಇತ್ಯಾದಿ).

3) ಜಾತಿಯ ಆಧಾರವಿಲ್ಲದೆ ವೃತ್ತಿಪರ ಆರ್ಥಿಕ ಆಧಾರ ಗುಂಪುಗಳು 5% (ಬಡಗಿ, ಕೃಷಿ ಕಾರ್ಮಿಕ, ಕೈಮಗ್ಗ, ಹಮಾಲ ಇತ್ಯಾದಿ).

ಸೌಲಭ್ಯ ಪಡೆಯಲು ಅನರ್ಹರೆಂದರೆ,

1) ಅವರು ಸರ್ಕಾರಿ ಸೇವೆಯಲ್ಲಿ ಅಧಿಕಾರಿಗಳಾಗಿದ್ದರೆ.

2) ವೃತ್ತಿಪರ ಉದ್ಯೋಗಸ್ಥರು (ಉದಾ: ವೈದ್ಯ)

3) ತಂದೆ ಮತ್ತು ತಾಯಿ ಇಬ್ಬರೂ ಪದವೀಧರರಾಗಿದ್ದರೆ.

4) ವರಮಾನ ತೆರೆಇಗೆ ಸಲ್ಲಿಸುವವರ ಮಕ್ಕಳು ಇತ್ಯಾದಿ.

ಚಿನ್ನಪ್ಪರೆಡ್ಡಿ ಆಯೋಗವು ಹಿಂದುಳಿದಿರುವಿಕೆಗೆ ಜಾತಿಯ ಜೊತೆಗೆ ಆರ್ಥಿಕವಾಗಿ ಹಿಂದುಳಿದವರ ವೃತ್ತಿ ನಿರತ ಜಾತಿಗಳನ್ನು ಪರಿಗಣನೆಗೆ ತೆಗೆದುಕೊಂಡು ವರದಿಯನ್ನು ಸಿದ್ದಗೊಳಿಸಿದರು. ಆದರೆ ಮುಂದುವರೆದ ಬ್ರಾಹ್ಮಣ ವರ್ಗದವರೊಡನೆ ಹೋಲಿಸಿಕೊಂಡು ತಮ್ಮ ಹಿಂದುಳಿದಿರುವಿಕೆಯನ್ನು ಪ್ರತಿಪಾದಿಸಿದ ಲಿಂಗಾಯತ ಮತ್ತು ಒಕ್ಕಲಿಗರ ಅಹವಾಲುಗಳನ್ನು ಪರಿಶೀಲಿಸಿದ ನಂತರ ಲಿಂಗಾಯತ ಜಾತಿಯಲ್ಲಿ ಅತಿ ಹಿಂದೆ ಉಳಿದ ಕೆಲವು ಉಪಜಾತಿಗಳನ್ನು ಪಟ್ಟಿ ಮಾಡಿ ಅಂತಹವರನ್ನು ಮಾತ್ರ ಹಿಂದುಳಿದ ವರ್ಗದವರ ಪಟ್ಟಿಯಲ್ಲಿ ಸೇರಿಸಿದರು. ಮತ್ತು ಒಕ್ಕಲಿಗರನ್ನು ಮೀಸಲಾತಿ ಪಟ್ಟಿಯಿಂದ ಹೊರಗಿಡಲಾಯಿತು.

ಈ ವರದಿ 1990ರಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಯಿತು. ಆಗ ವೀರೇಂದ್ರ ಪಾಟಿಲ್ ಅನಿರೀಕ್ಷಿತ ಕಾರಣದಿಂದ ಮುಖ್ಯಮಂತ್ರಿ ಪದವಿಯಿಂದ ಹಿಂದೆ ಸರಿದರು. ನಂತರ ಬಂದ ಬಂಗಾರಪ್ಪಾ ಮತ್ತು ವೀರಪ್ಪಾ ಮೋಯ್ಲಿಯವರು ಶೇ.50ರ ಮೀಸಲಾತಿಯನ್ನು 75%ಗೆ ಏರಿಸಿ ಸುಪ್ರೀಂ ಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡರು.

ಹೀಗೆ ಈ 4 ಪ್ರಮುಖ ಆಯೋಗಗಳು ಹಿಂದುಳಿದವರ ಕಲ್ಯಾಣಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಶ್ರಮಿಸಿದವು.

## ಸ್ವಾತಂತ್ರ್ಯ ನಂತರದ ದಲಿತ ಚಳುವಳಿ:

ದಲಿತ ಎಂದರೆ ಸಾಮಾಜಿಕ ಶೈಕ್ಷಣಿಕ ಧಾರ್ಮಿಕ ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದ ವರ್ಗ. ಮೇಲಾಗಿ ಎಲ್ಲ ಬಗೆಯ ಸಮಾನತೆಯ ಸೌಲಭ್ಯ ಹಾಗೂ ಹಕ್ಕುಗಳಿಂದಲೂ ವಂಚಿತವಾದ ವರ್ಗ. ಪ್ರಮುಖವಾದ 4 ವರ್ಣಾಶ್ರಮಗಳಿಗೂ ಸೇರಿದ ಪಂಚಮರು (ಮಾದಿಗ, ಹೋಲೆಯ ಇತ್ಯಾದಿ) 20ನೇ ಶತಮಾನದ ಮೈಸೂರು ಸರ್ಕಾರದ ದಾಖಲೆಗಳಲ್ಲಿ ಆದಿ ಕರ್ನಾಟಕ (ಎಕ) ಆದಿ ದ್ರಾವಿಡದ (ಎಡಿ) ಎಂದೇ ನಮೂದಿಸಲಾಗಿದೆ.

**ದಲಿತ ಚಳುವಳಿಗೆ ಕಾರಣಗಳು:**

1) ಶತಮಾನಗಳಿಂದಲೂ ಹಿಂದೂ ಸಮಾಜದಲ್ಲಿ ದಲಿತರಿಗೆ ವಿರುದ್ದವಾಗಿ ನಡೆದು ಬಂದಂತಹ ಶೋಷಣೆಗಳು.

2) ಸಾರ್ವಜನಿಕ ಜಾತ್ರೆ ಉತ್ಸವ ಹಬ್ಬದ ಸಮಾರಂಭಗಳಲ್ಲಿಯೂ, ಅವರು ಸವರ್ಣಿಯರ ಜೊತೆ ಮಿಳಿತಗೊಳ್ಳಲು ಅವಕಾಶವಿರಲಿಲ್ಲ.

3) ಸಾರ್ವಜನಿಕ ಬಾವಿ ಕೆರೆಗಳ ನಿಷೇಧತೆ / ದೇವಾಲಯ ನಿಷೇಧ.

4) ಸ್ವಚ್ಛತೆ ಕಸುಬು ಮಾತ್ರ ಇದರ ಕರ್ತವ್ಯವಾಗಿತ್ತು.

ಸ್ವಾತಂತ್ರ್ಯ ಪೂರ್ವದಲ್ಲೂ ಹಲವಾರು ದಲಿತ ಚಳುವಳಿಗಳು ನಡೆದಿದ್ದವು. (1906–ಡಿಪ್ರೆಸ್ಸ್‌ಡ್ ಕ್ಲಾಸ್ ಮಿಷನ್ ಸೊಸೈಟಿ) ಕಟ್ಟುಮಂಚಿ ರಾಮಲಿಂಗರೆಡ್ಡಿ ಚಳುವಳಿ (1993–ಆದ ಜಾಂಬದ ಸಂಘ ಕಣಿಯರ ಸಂಘ ಸಿವಿಲ್ ಅಂಡ್ ಸೋಷಿಯಲ್ ಪ್ರೋಗ್ರೆಸೀವ್ ಅಸೋಸಿಯೇಷನ್ ಎಕ್ಸೆಟ್ರಾ).

ಸ್ವಾತಂತ್ರ್ಯ ನಂತರ ದಲಿತ ಚಳುವಳಿ ಇನ್ನು ಪ್ರಬಲವಾಯಿತು. ಇದಕ್ಕೆ ಪ್ರಮುಖ ಕಾರಣಗಳೆಂದರೆ,

1) ಸಾಂವಿಧಾನಿಕ ಮೀಸಲಾತಿ ಹಕ್ಕು

2) ದಲಿತ ಸಾಹಿತ್ಯದ ಪ್ರಭಾವ

3) ದಲಿತರ ರಕ್ಷಣೆಗೆ ಬಂದ ಶಾಸನಗಳು

4) ಅಸ್ಪೃಶ್ಯತೆ ನಿಷೇಧ ಕಾಯ್ದೆ ಮತ್ತು 1974 ದಲಿತ ಸಂಘರ್ಷ ಸಮಿತಿ ಸ್ಥಾಪನೆ.

**ದಲಿತ ಚಳುವಳಿಯ ಬೆಳವಣಿಗೆ:**

ಸ್ವಾತಂತ್ರ್ಯ ನಂತರ ದಲಿತ ಚಳುವಳಿಯಲ್ಲಿ ಹೊಸ ಅಲೆ ಮತ್ತು ಚೈತನ್ಯ ಬರತೊಡಗಿತು. ಗಾಂಧೀಜಿ ಮತ್ತು ಅಂಬೇಡ್ಕರ್ ಪ್ರಭಾವದಲ್ಲಿ ಅನೇಕ ಪ್ರಕಾರದ ಹೊಸ ಸಾಹಿತ್ಯವೇ ಇಲ್ಲಿ ಸೃಷ್ಟಿಯಾಯಿತು. ಸಇದ್ದಲಿಂಗಯ್ಯ, ದೇವನೂರ ಮಹಾದೇವರಂತಹ ಚಿಂತಕರಿಂದ ಸಾಹಿತ್ಯದಲ್ಲಿ ಕೈ ಕಾಲು ಮುರಿದಿದ್ದ ದಲಿತ ವರ್ಗಕ್ಕೆ ಹೊಸ ಚೈತನ್ಯ ತುಂಬಿ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟ ಪ್ರಬಲವಾಯಿತು.

ಇದಕ್ಕಿಂತ ಮೇಲಾಗಿ ಸಂವಿಧಾನದಲ್ಲಿ ನೀಡಲಾದ ಮೀಸಲಾತಿ ಮತ್ತು ಇತರೆ ರಕ್ಷಣಾ ಭದ್ರತೆ ದಲಿತರಲ್ಲಿ ಮಾನಸಿಕ ಸ್ಥೈರ್ಯ ಹಾಗೂ ಕಾನೂನಿನ ಬಲವನ್ನು ತಂದುಕೊಟ್ಟಿತು.

## ದಲಿತ ಜಾಗೃತ ಚಳುವಳಿ ಮತ್ತು ಬೀದಿ ನಾಟಕಗಳು:

ದಲಿತ ಚಳುವಳಿಯಲ್ಲಿ ಬೀದಿ ನಾಟಕಗಳು ಜನ ಜಾಗೃತಿಯನ್ನು ಮೂಡಿಸುವಲ್ಲಿ ಗಮನಾರ್ಹವಾದ ಪಾತ್ರವನ್ನು ನಿರ್ವಹಿಸಿದವು. ಅವು 1980ರ ದಶಕದಲ್ಲಿ ಬಹಳ ಜನಪ್ರಿಯವಾಗಿದ್ದವು. ಇಲ್ಲಿ ಏಕಲವ್ಯ, ಅಹಲ್ಯರಂತಹ ಚಿತ್ರವನ್ನು ಆಧುನಿಕ ವ್ಯಾಖ್ಯಾನಗಳೊಂದಿಗೆ ಜನಮನ ಮುಟ್ಟುವಂತೆ ಮಾಡಲಾಯಿತು. ಶೋಷಿತ ದಲಿತ, ದುರ್ಬಲ ಹಾಗೂ ಮಹಿಳೆಯರ ಏಳಿಗೆಗಾಗಿ ಇವುಗಳು ಗಮನ ಸೆಳೆದವು. ಇಲ್ಲಿ ದಲಿತ ಪತ್ರಿಕೆಗಳು ಪ್ರಾಮುಖ್ಯತೆ ಪಡೆದಿದ್ದವು. ಉದಾ: ಪಂಚಮ, ದಲಿತ, ಶೂದ್ರ, ಸಂಕ್ರಮಣ ಆಂದೋಲನ ಇತ್ಯಾದಿ. ಇವು ದಲಿತರ ಶೈಕ್ಷಣಿಕ, ಸಾಮಾಜಿಕ, ಸಂವಿಧಾನಿಕ ಉದ್ಯೋಗದ ಹಕ್ಕುಗಳ ಬಗ್ಗೆ ಜಾಗೃತಿಯನ್ನು ಮೂಡಿಸಿದವು. ಇಲ್ಲಿ ಸಚಿವ ಬಿ. ಬಸವಲಿಂಗಪ್ಪ ಪ್ರೋ.ಬಿ.ಕೃಷ್ಣಪ್ಪ, ಡಾ.ಸಿದ್ದಲಿಂಗಪ್ಪ, ಮುನಿವೆಂಕಟಪ್ಪ ಚನ್ನಪ್ಪ ಮೊದಲಾದವರು ದಲಿತರನ್ನು ಜಾಗೃತಗೊಳಿಸಿ ಚಳುವಳಿ ಮುನ್ನಡೆಸಿದರು.

1956ರಲ್ಲಿ ಅಂಬೇಡ್ಕರ್ ಮರಣ ಹೊಂದಿದಾಗ ಇದು ಮಹಾರಾಷ್ಟ್ರದ ಗಡಿ ಭಾಗದ ಕರ್ನಾಟಕದವರನ್ನು ಜಾಗೃತಗೊಳಿಸಿತು.

**ದಲಿತ ಕ್ರಾಂತದಳ ಮತ್ತು ಬಸವಲಿಂಗಪ್ಪ – 1961:**

ಹರಿಹರದ ದಲಿತ ವರ್ಗದ ಬಿ.ಬಸವಲಿಂಗಪ್ಪನವರು ರಾಜಕೀಯ ಪ್ರವೇಶಿಸಿ 1969ರಲ್ಲಿ 'ದಲಿತ ಕ್ರಾಂತಿದಳ' ಎಂಬ ಪಕ್ಷವನ್ನು ಕಟ್ಟಿದರು.

**ಬೂಸಾ ಪ್ರಕರಣ: 1973**

ಪೌರಾಡಳಿತ ಸಚಿವರಾಗಿದ್ದ ಬಿ.ಬಸವಲಿಂಗಪ್ಪನವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಈವರೆಗೆ ದಲಿತರ ಬಗ್ಗೆ ಕಾಳಜಿ ಇಲ್ಲದೇ ರಚಿಸಿದ. ಕನ್ನಡ ಸಾಹಿತ್ಯ ಒಂದು ಬೂಸಾ ಸಾಹಿತ್ಯ ಎಂದು ಟೀಕೆ ಮಾಡಿ ವಿವಾದ ಸೃಷ್ಟಿಸಿದರು. ಇದರಿಂದ ಅವರು ಸಚಿವ ಸ್ಥಾನ ಬಿಡಬೇಕಾಯಿತು. ಇದು ಬಂಡಾಯ ಹಾಗೂ ದಲಿತ ಸಾಹಿತ್ಯದ ರಚನೆಗೆ ಮತ್ತು ದಲಿತರು ಒಗ್ಗೂಡಲು ಕಾರಣವಾಯಿತು. (ಇವರು ದಲಿತ ಮಂತ್ರಿ ಆಗಿದ್ದರು).

**ಮಲಹೊರುವ ಪದ್ದತಿ ನಿಷೇಧ ಕಾಯ್ದೆ – 1972:**

1972ರ ತನಕ ಪುರಸಭೆ ಮತ್ತು ನಗರಸಭೆ ವ್ಯಾಪ್ತಿಯ ದಲಿತ ಮಾಲಿಗಳು ಮಲವನ್ನು ಗೃಹಗಳಿಂದ ತಲೆ ಮೇಲೆ ಹೊರುವ ಹೀನ ನೆಲೆಯಲ್ಲಿದ್ದರು. ಇದನ್ನು ಸಚಿವ ಬಿ.ಬಸವಲಿಂಗಪ್ಪನವರು ಸುಧಾರಿಸಿದ್ದು ಅಮೂಲ್ಯವಾದ ಬದಲಾವಣೆ ಎನಿಸಿತು.

1) ದೇವರಾಜು ಅರಸ್ ಮತ್ತು ದಲಿತ ಚಳುವಳಿ.

2) ದಲಿತರಲ್ಲಿ ಆತ್ಮಬಲ ತಂದವರಲ್ಲಿ ದೇವರಾಜ್ ಅರಸ್ ಪ್ರಮುಖರು. ದಲಿತರ ಹಕ್ಕು ಬಾಧ್ಯತೆಗಳಿಗಾಗಿ ಪ್ರತ್ಯೇಕ ಇಲಾಖೆ ತೆರೆಯಲಾಯಿತು. ಇವರ ಮೇಲಿನ ದೌರ್ಜನ್ಯ ಪರಿಹಾರಕ್ಕಾಗಿ ಕ್ರಮ ಕೈಗೊಂಡರು. ಜೀತಪದ್ಧತಿ ನಿರ್ಮೂಲನೆ, ಉಚಿತ ನಿವೇಶನ, ಮನೆ ನಿರ್ಮಾಣ, ಉದ್ಯೋಗಿಗಳಿಗಾಗಿ ಸಾಲ ಸೌಲಭ್ಯ ದೊರೆಯಿತು. 1976ರಲ್ಲಿ ದೇವರಾಜ್ ಅರಸ್ ಸರ್ಕಾರ ಲಿಡ್ಕರ4 ಯೋಜನೆಯ ಮುಖಾಂತರ ರಸ್ತೆ ಬದಿಯ ಚಮ್ಮಾರರಿಗೆ ಉಚಿತವಾಗಿ ಪೆಟ್ಟಿಗೆ ಅಂಗಡಿಗಳನ್ನು ಮಾಡಿಸಿಕೊಟ್ಟರು.

## ದಲಿತ ಸಂಘರ್ಷ ಸಮಿತಿ ಮತ್ತು ಬಿ.ಕೃಷ್ಣಪ್ಪ 1974:

ಪ್ರಾಧ್ಯಾಪಕರಾಗಿದ್ದ ಕೃಷ್ಣಪ್ಪನವರು 1974ರಲ್ಲಿ ದಲಿತರ ಐಕ್ಯತೆಗಾಗಿ ಭದ್ರಾವತಿಯಲ್ಲಿ (ಡಿ.ಎಸ್.ಎಸ್) ದಲಿತ ಸಂಘರ್ಷ ಸಮಿತಿ ಸ್ಥಾಪಿಸಿದರು. ರಾಜ್ಯಾದ್ಯಂತ ಪ್ರವಾಸ ಕೈಗೊಂಡು ದಲಿತರ ಸಮಸ್ಯೆಗಳಿಗೆ ದಲಿತರನ್ನು ಒಗ್ಗೂಡಿಸಿ ನ್ಯಾಯ ಪಡೆಯುವಂತೆ ಪ್ರೇರೇಪಿಸಿದರು.

ಕರ್ನಾಟಕ ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿ (1977) ಬೆಂಗಳೂರು, ಇದೇ ರಾಜ್ಯ ವ್ಯಾಪ್ತಿಯುಳ್ಳ ಕರ್ನಾಟಕ ದಲಿತ ಸಂಘರ್ಷ ಸಮಿತಿ 1977ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ಪ್ರೋ.ಕೃಷ್ಣಪ್ಪನವರೇ ರಾಜ್ಯ ಸಂಚಾಲಕರಾದರು. ಎಲ್ಲಾ ಜಿಲ್ಲಾ ಡಿ.ಎಸ್.ಎಸ್. ಪ್ರತಿನಿಧಿಗಳು ಇದರ ಸದಸ್ಯರಾದರು.

ಡಿ.ಎಸ್.ಎಸ್. ಕೈಗೆತ್ತಿಕೊಂಡು ಹೋರಾಡಿದ ಪ್ರಮುಖವಾದ ಪ್ರಕರಣಗಳೆಂದರೆ,

1) ಚಂದ್ರಗುತ್ತಿ ಬೆತ್ತಲೆ ಸೇವೆ ಪ್ರಕರಣ
2) ತತ್ತೂರಿನ ಭೂ ಪ್ರಕರಣ
3) ಸಿದ್ಲಿಪುರ ಭೂ ಪ್ರಕರಣ
4) ಬಿದರೆ ಭೂ ಪ್ರಕರಣ
5) ಚಾಂದಗೋಡು ಭೂ ಪ್ರಕರಣ
6) ನಾಗಸಂದ್ರ ಭೂ ಪ್ರಕರಣ
7) ಹರಟಿ ಮಲ ಪ್ರಕರಣ
8) ದೇವಲಾಪುರ ಭೂ ಪ್ರಕರಣ

## ಮಾದಿಗರ ಒಳ ಮೀಸಲಾತಿ ಚಳುವಳಿ:

ಕರ್ನಾಟಕದಲ್ಲಿ ಆರಂಭವಾದ ಮಾದಿಗ ದಂಡೋರ ಚಳುವಳಿಯು ಆಂಧ್ರದ ದಂಡೋರ ಚಳುವಳಿಯಿಂದ ಪ್ರೇರಿತವಾಯಿತು. ಕೃಷ್ಣ ಮಾದಿಗರವರು ಕರ್ನಾಟಕದ ಮಾದಿಗ ದಂಡೋರರ ಪ್ರೇರಕ ಶಕ್ತಿಯಾದರು. ಪರಿಶಿಷ್ಟ ಜಾತಿಗೆ ನೀಡುವ ಮೀಸಲಾತಿಯ ಬಹುಪಾಲು ಹೊಲೆಯರು (ಆದಿ ದ್ರಾವಿಡರ) ಪಾಲಾಗಿದೆ. ಅದೇ ಪರಿಶಿಷ್ಟ ಜಾತಿಗೆ ಸೇರಿರುವ ಮಾದಿಗ (ಆದಿ ಕರ್ನಾಟಕ)ರಿಗೆ ನ್ಯಾಯಯುತ ಬೇಡಿಕೆ ನೀಡಿಲ್ಲವೆಂದು ಚಳುವಳಿ ಈಗಲೂ ನಡೆಯುತ್ತಿದೆ.

ಕೇಂದ್ರದ ಪರಿಶಿಷ್ಟ ಜಾತಿ ಬುಡಕಟ್ಟು ಆಯೋಗದ ಅಧ್ಯಕ್ಷ ಹನುಮಂತ ಸಮಿತಿಯ ವರದಿಯು ಕೂಡ ಮೀಸಲಾತಿಯಲ್ಲಿ ಮಾದಿಗರಿಗೆ ಅನ್ಯಾಯವಾಗಿರುವ ಅಂಶವನ್ನು ಹಾಗೂ ಚಲವಾದಿಗಳಿಗೆ (ಹೊಲೆಯರು) ಆಗಿರುವ ಹೆಚ್ಚು ಅನುಕೂಲ ಹೇಳಿದೆ. ಇದಕ್ಕಾಗಿ 1997ರಲ್ಲಿ 'ಕರ್ನಾಟಕ ರಾಜ್ಯ ಮಾದಿಗ ಹೋರಾಟ ಸಮಿತಿ' ಚಳುವಳಿ ನಡೆಸಿತು.

ಜಿಲ್ಲಾ ಮಟ್ಟದಲ್ಲಿ ರಾಯಚೂರು, ಕುಷ್ಟಗಿ, ಚಿತ್ರದುರ್ಗ, ಹಿರಿಯೂರು, ತುಮಕೂರು, ಮೈಸೂರಿನಲ್ಲಿ ಮಾದಿಗರ / ಜಾಂಬವಾ ಹೋರಾಟ ಸಮಿತಿಗಳಿವೆ.

ದಿನ ಕಳೆದಂತೆ ಮುಖಂಡರು ಪಕ್ಷ ರಾಜಕೀಯದ ಒಲವನ್ನು ತೋರಲಾರಂಭಿಸಿದರು. ಉದಾ: ದೇವನೂರು ಮಹಾದೇವರವರು 1991ರಲ್ಲಿ ಜನತಾ ಪಕ್ಷಕ್ಕೆ ಬೆಂಬಲ ಸೂಚಿಸಿದರು. ಜೊತೆಗೆ 1991ರಲ್ಲೇ ಕೃಷ್ಣಪ್ಪ ಕೋಲಾರದಿಂದ ರಾಜಕೀಯ ಪ್ರವೇಶಿಸಿದರು. ಜೊತೆಗೆ ಹೊಲೆಯರ ಮತ್ತು ಮಾದಿಗರ ವಿವಾದಗಳು ದಲಿತರಲ್ಲಿ ಒಡಕನ್ನು ಮೂಡಿಸಿದವು.

ಏನೇ ಇದ್ದಾಗ್ಯೂ ದಲಿತ ಚಳುವಳಿಗಳು ದಲಿತರಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಜಾಗೃತಿ ಮೂಡಿಸುವಲ್ಲಿ ಸಹಾಯಕಾರಿಯಾಗಿವೆ.

## ದೇವರಾಜ ಅರಸ್ ಹಾಗೂ ಭೂ ಸುಧಾರಣೆಗಳು:

ಕರ್ನಾಟಕದಲ್ಲಿ ದೀರ್ಘಕಾಲ ಮುಖ್ಯಮಂತ್ರಿಗಳಾಗಿ ತಮ್ಮ ಉದಾತ್ತ ಗುಣ, ನಡವಳಿಕೆಗಳಿಂದ ಜನಮನ ಸೂರೆಗೊಂಡಿದ್ದ ದೇವರಾಜ್ ಅರಸ್‌ರವರು ನಾಡಿನ ಪ್ರಗತಿಗೆ ಅಪೂರ್ವವಾದ ಕಾಣಿಕೆ ಸಲ್ಲಿಸಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಿದ್ದು ಇವರ ಪ್ರಮುಖವಾದ ಸಾಧನೆ.

ಮೂಲತ: ಮೈಸೂರು ಜಿಲ್ಲೆಯ ಹುಣಸೂರಿನವರಾದ ಇವರು 1942ರ ಐತಿಹಾಸಿಕ 'ಭಾರತ ಬಿಟ್ಟು ತೊಲಗಿ ಚಳುವಳಿ' ಹಾಗೂ 1947ರಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಜವಾಬ್ದಾರಿ ಸರ್ಕಾರದ ಸ್ಥಾಪನೆ ಕುರಿತಾದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 1952ರ ಪ್ರಥಮ ಚುನಾವಣೆಯಲ್ಲಿ ಹುಣಸೂರು ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಸತತ 6 ಬಾರಿ ಇದೇ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದರು. ಸಾರಿಗೆ ಸಚಿವರಾಗಿದ್ದಾಗ ರಾಜ್ಯದ ಸಂಚಾರ ವ್ಯವಸ್ಥೆಯನ್ನು ಸರ್ಕಾರದ ಅಧೀನಕ್ಕೆ ತೆಗೆದುಕೊಂಡಿದ್ದು ಇವರ ಸಾಧನೆ. ಇವರ ಮೆಚ್ಚಿನ ಪುಸ್ತಕ 'ಮ್ಯಾನ್ ದಿ ಅನ್‌ನೋನ್'. 1972ರಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾದರು. ತಮ್ಮ ಅಧಿಕಾರಾವಧಿಯಲ್ಲಿ ಬಡಜನರ ಏಳಿಗೆಗೆ ಒಂದು ಹೊಸ ಅಧ್ಯಾಯವನ್ನೇ ಆರಂಭಿಸಿದರು.

ಕನ್ನಡ ಆಡಳಿತದ ಭಾಷೆಯಾಗಬೇಕೆಂಬುದು ಅವರ ಬಹುದಿನದ ಕನಸಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತಿಗೆ ಇವರು ಧಾರಾಳವಾಗಿ ಹಣ ನೀಡಿದರು. 'ಉಳುವವನೇ ಹೊಲದೊಡೆಯ' ಎಂಬ ಮಾತನ್ನು ನನಸಾಗಿಸಲು ಶಾಸನ ತಂದರು. ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕ್ ಸ್ಥಾಪಿಸಿ ಹಣಕಾಸಿನ ನೆರವು ಸಿಗುವಂತೆ ಮಾಡಿದರು. ಜೀತಪದ್ಧತಿಯೆಂಬ ಮಾರಿಯನ್ನು ರಾಜ್ಯದಿಂದ ಹೋಗಿಸಿದರು.

ಯಾವುದೇ ನಾಡು ಅಭಿವೃದ್ಧಿಗೊಳ್ಳಬೇಕಾದರೆ ಕೃಷಿ ಹಾಗೂ ಕೈಗಾರಿಕೆ ಕ್ಷೇತ್ರ ಬೆಳೆಯಬೇಕು. ಇದನ್ನು ಹೆಚ್ಚಾಗಿ ಮನಗಂಡಿದ್ದ ಅರಸ್‌ರವರು ಸಣ್ಣ ನೀರಾವರಿ ಕಾಮಗಾರಿಗಳು, ಮಣ್ಣು ಸಂರಕ್ಷಣೆ, ಸಣ್ಣ ಹಾಗೂ ಬೃಹತ್ ಜಲವಿದ್ಯುತ್ ಯೋಜನೆಗಳಿಗೆ ಆದ್ಯತೆ ನೀಡಿದರು. ಬೃಹತ್ 'ಕಾಳಿ ನದಿ' ಜಲವಿದ್ಯುತ್ ಯೋಜನೆ ಆರಂಭಿಸಿದರು.

'ಭಾಗ್ಯಜ್ಯೋತಿ' ಎಂಬ ಮನೆಗೊಂದು ವಿದ್ಯುದ್ದೀಪದ ಯೋಜನೆ ಇವರಿಗೆ ಅಪಾರವಾದ ಹೆಸರನ್ನು ತಂದುಕೊಟ್ಟಿತು. ಉದ್ಯೋಗವಕಾಶವನ್ನು ಹೆಚ್ಚಿಸಲು ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸಿದರು. ಶಿಕ್ಷಕರಿಗೆ ಚೆಕ್ ವ್ಯವಸ್ಥೆಯ ಮೂಲಕ ಸಂಬಳ, ವೃದ್ಧಾಪ್ಯ ವೇತನ, ಹಾವನೂರ ಆಯೋಗದ ನೇಮಕ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಹೀಗೆ ಹಲವಾರು ಕಾಣಿಕೆಯಿತ್ತ ಅರಸ್‌ರವರು ಅಂತಿಮವಾಗಿ ಕಾಂಗ್ರೆಸ್‌ನಿಂದ ಹೊರಬಂದು 'ಕ್ರಾಂತಿರಂಗ' ಎಂಬ ನೂತನ ಪಕ್ಷವನ್ನು ಕಟ್ಟಿದರು. ಇವರು 1982ರಲ್ಲಿ ತೀರಿಕೊಂಡರು.

## ಭೂ ಸುಧಾರಣೆಗಳು:

ಕರ್ನಾಟಕದಲ್ಲಿ ಆಡಳಿತ ನಡೆಸಿದ ಮುಖ್ಯಮಂತ್ರಿಗಳು ಮತ್ತು ಅವರ ಮಂತ್ರಿಮಂಡಲಗಳು ರಾಜ್ಯದ ಮತ್ತು ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶಕ್ತಿ ಮೀರಿ ಶ್ರಮಿಸಿವೆ. ಇವರುಗಳು ತಂದಿರುವಂತಹ ಕ್ರಾಂತಿಕಾರಿಯಾದ ಯೋಜನೆಗಳಲ್ಲಿ 'ಭೂ ಸುಧಾರಣೆಯು' ಒಂದಾಗಿದೆ.

ಭೂ ಸುಧಾರಣೆಯ ಪ್ರಮುಖವಾದಂತಹ ಎರಡು ಗುರಿಗಳೆಂದರೆ, 'ಉಳುವವನಿಗೆ ಭೂಮಿ' ಮತ್ತು 'ಗೇಣಿದಾರನ ವಿಮೋಚನೆ'.

ಪ್ರಥಮವಾಗಿ 1957 ಮೇ 10ರಂದು ಶ್ರೀ ಜತ್ತಿ ಅವರ ಅಧ್ಯಕ್ಷತೆಯಲ್ಲಿ 'ಮೈಸೂರು ಗೇಣಿದಾರ ಮತ್ತು ಕೃಷಿ ಭೂಮಿ ಕಾನೂನು ಸಮಿತಿ' ನೇಮಿಸಲಾಯಿತು. ಇದು ಗೇಣಿಯ ಆಧಾರ, ಸಾಗವಳಿಯ ಭದ್ರತೆ, ಸ್ವಂತ ಉಳುಮೆಗಾಗಿ ಭೂ ಮಾಲೀಕರು ಜಮೀನು ವಾಪಸ್ ಪಡೆಯುವ ಹಕ್ಕು, ಭೂಮಿಯ ಗರಿಷ್ಟ ಮಿತಿ, ಮುಂತಾದವುಗಳನ್ನು ಪರಿಶೀಲಿಸಿ 1957ರಲ್ಲಿ ರಾಷ್ಟ್ರಪತಿ ಅಂಕಿತ ದೊರೆತು ಜಾರಿಗೆ ಬಂದಿತು. ಈ ಭೂ ಸುಧಾರಣೆಯಿಂದಾಗಿ ಗೇಣಿದಾರನಿಗೆ ಭೂಮಿಯ ಒಡೆತನ ದೊರಕಿತು. ಭೂಮಿಯ ಗರಿಷ್ಟ ಮಿತಿ 18 ಎಕರೆಯೆಂದು ನಿಗದಿಪಡಿಸಲಾಯಿತು. ಈ ಶಾಸನವನ್ನು 1966–67–68, 1970, 1972 ಮತ್ತು 1974ರಲ್ಲಿ ತಿದ್ದುಪಡಿ ಮಾಡಲಾಯಿತು. ಇದರಲ್ಲಿ 1974ರ ದೇವರಾಜ್ ಅರಸ್ ಜಾರಿಗೆ ತಂದ ಭೂ ಸುಧಾರಣಾ ಕಾಯ್ದೆ ಪ್ರಮುಖವಾದುದು.

**1974ರ ದೇವರಾಜ್ ಅರಸ್ ಭೂ ಸುಧಾರಣಾ ಕಾಯ್ದೆ:**

1974ರ ಕರ್ನಾಟಕ ಭೂ ಸುಧಾರಣಾ ಶಾಸನವು 1961ರ ಮೂಲ ಶಾಸನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಜಾರಿಗೆ ತಂದಿತು.

'ಉಳುವವನಿಗೇ ಭೂಮಿ, ಉಳುವವನೇ ಒಡೆಯ' ಎಂಬ ಘೋಷಣೆ ಈ ಸುಧಾರಣೆ ಪ್ರಮುಖವಾದ ವಿಷಯವಾಯಿತು. ಇದರ ಪ್ರಮುಖವಾದಂತಹ ಸುಧಾರಣೆಗಳೆಂದರೆ,

* ಎಸ್.ಸಿ, ಎಸ್.ಟಿ (ಭೂ ರಹಿತ)ಯವರಿಗೆ ಭೂ ಒಡೆಯರಾಗುವಂತೆ ಮಾಡಿತು.

* ಪ್ರತಿ ಕುಟುಂಬ ಹೊಂದಬಹುದಾದ ಜಮೀನಿನ ಮಿತಿಯನ್ನು ಕಡಿಮೆಗೊಳಿಸಿ, 12000 ವರಮಾನ ಹೊಂದಿರುವವರು ಕೆಲವೊಂದು ನಿಶ್ಚಿತ ಕರಾರುಗಳ ಹೊರತಾಗಿ ಭವಿಷ್ಯದಲ್ಲಿ ಜಮೀನು ಹೊಂದುವುದನ್ನು ನಿಷೇಧಿಸಲಾಯಿತು.

* ಗೇಣಿದಾರಿ ಪದ್ಧತಿಯನ್ನು ಕೊನೆಗಾಣಿಸಿ ಗೇಣಿದಾರರು ಭೂ ಮಾಲೀಕರಾಗುವಂತೆ ಮಾಡಿತು.

* ಈ ಶಾಸನವು ಗೇಣಿದಾರನಿಗೆ ಅವನು ಉಳುತ್ತಿದ್ದ ಎಲ್ಲಾ ಜಮೀನಿನ ಹಕ್ಕನ್ನು ನೀಡಿತು.

* ಭೂ ವ್ಯಾಜ್ಯಗಳ ವಿವಾದ ಬಗೆಹರಿಸಲು ಭೂ ನ್ಯಾಯ ಮಂಡಳಿಗಳನ್ನು ಸ್ಥಾಪಿಸಲಾಯಿತು.

* ಭೂ ಹಿಡುವಳಿಯ ಮೇಲೆ ಮಿತಿ ವಿಧಿಸಿ 5 ಜನ ಮತ್ತು ಅದಕ್ಕಿಂತ ಕಡಿಮೆ ಜನರ ಕುಟುಂಬಕ್ಕೆ 10 ಎಕರೆ ಜಮೀನನ್ನು ಹೊಂದಲು ಅವಕಾಶವನ್ನು ಕಲ್ಪಿಸಿತು.

* ನೀರಾವರಿ ಸೌಲಭ್ಯವನ್ನು ಪರಿಗಣಿಸಿ, ನೀರಾವರಿ ವರ್ಗದ ಭೂಮಿಗೆ 10 ಎಕರೆ ಕೃಷಿ ಭೂಮಿಗೆ ಶೇ.50 ಎಸ್.ಸಿಗೆ ಮೀಸಲು. ಇತ್ಯಾದಿ.

ಹೀಗೆ 1974ರ ಭೂ ಸುಧಾರಣಾ ಚಳುವಳಿಯು ಒಂದು ಕ್ರಾಂತಿಕಾರಿ ಹೆಜ್ಜೆಯಾಗಿ ಮಾರ್ಪಟ್ಟಿತು. 1981ರ ಒಂದು ಸಮೀಕ್ಷೆಯಂತೆ ಶೇ.99 ಭೂ ಸುಧಾರಣಾ ಕೆಲಸ ಪೂರ್ತಿಯಾದದ್ದು ಕಂಡು ಬರುತ್ತದೆ. ಇದರಿಂದಾಗಿ ಆದ ಪರಿಣಾಮಗಳೆಂದರೆ,

1) ಹೊಲಗಳಲ್ಲಿನ ಮನೆಗಳಲ್ಲಿ ವಾಸಿಸುತ್ತಿದ್ದ 3700 ಜನ ಮನೆಗಳ ಒಡೆಯರೇ ಆದರು.

2) ಒಂದು ಲಕ್ಷ ರೂ. ಹೆಚ್ಚು ಗೇಣಿ ವಸೂಲಿ ಅರ್ಜಿಗಳು ಇತ್ಯರ್ಥವಾಗಿ ಭೂ ಮಾಲೀಕರ ಬೇಡಿಕೆ ಇತ್ಯರ್ಥವಾದವು.

3) 4.85 ಲಕ್ಷ ಕೃಷಿಕರು 20.94 ಲಕ್ಷ ಎಕರೆ ಭೂಮಿಯ ಒಡೆಯರಾದರು.

4) ಬೀಜ ಗೊಬ್ಬರ ಜಮೀನು ಅಭಿವೃದ್ಧಿಗಾಗಿ ನೇಗಿಲು ಭಾಗ್ಯ ಯೋಜನೆ ಸಹಕಾರಿಯಾಯಿತು.

ಒಟ್ಟಾರೆಯಾಗಿ 1974ರಲ್ಲಿ ಬಂದ ಭೂ ಸುಧಾರಣಾ ಕಾಯ್ದೆ ಕರ್ನಾಟಕದ ಬಡ ಜನರಲ್ಲಿ ಶತಮಾನದ ದಾಸ್ಯದ ಸಂಕೋಲೆಯಿಂದ ಹೊರಬಂದ ಹರ್ಷಭಾವ ಜನತೆಯಲ್ಲಿ ಮೂಡಿತು.

## ಭಾಷಾ ಸಮಸ್ಯೆ ಮತ್ತು ಚಳುವಳಿಗಳು:

### ಗೋಕಾಕ್ ಚಳುವಳಿ:

ಕನ್ನಡ ಭಾಷಾಭಿಮಾನ ಹೊತ್ತು ನಾಡುನುಡಿಯ ರಕ್ಷಣೆಗಾಗಿ ಹಲವಾರು ಸಂಘಟನೆಗಳು ಜನ್ಮ ತಾಳಿದವು. ಅನ್ಯ ಭಾಷಿಕರ ಪ್ರಭಾವ ದಿನೇ ದಿನೇ ಹೆಚ್ಚುತ್ತಾ ಆತಂಕ ಸೃಷ್ಟಿಸುತ್ತಿದ್ದ ಸಮಯದಲ್ಲಿ ಕನ್ನಡ ಜಾಗೃತಿ ಪರಿಷತ್ತಿನ ಚಳುವಳಿ, ಗೋಕಾಕ್ ಚಳುವಳಿ, ಮಹರ್ಷಿ ವರದಿ ಕ.ರ.ವೇ. ವಾಟಾಳ್ ಚಳುವಳಿ ಹೀಗೆ ಹಲವಾರು ಸಂಘಟನೆಗಳು ಭಾಷೆಯ ಅಸ್ಮಿತೆಗಾಗಿ ಹೋರಾಡಿದವು ಮತ್ತು ಈಗಲೂ ಮುಂದುವರೆದಿವೆ. ಕರ್ನಾಟಕವು ಒಂದು ಉಪದೇಶದಂತೆ ಭಾಸವಾಗುತ್ತಿದ್ದು, ಇಲ್ಲಿ ಎಲ್ಲಾ ಭಾಷಿಕರ ನೆಲೆಯಿಂದ ದಿನಗಳು ಉರುಳಿದಂತೆ, ಕನ್ನಡ ಭಾಷಾ ಸ್ಥಾನವೇ ಅನ್ಯರ ಪ್ರಭಾವದಿಂದ ಕುಗ್ಗುತ್ತಿದೆ. ತೆಲುಗು, ತಮಿಳು, ಹಿಂದಿ, ಮರಾಠಿ ಇನ್ನಿತರ ಭಾಷೆಗಳು ಇನ್ನಿಲ್ಲದಂತೆ ಕಾಡುತ್ತಿವೆ.

**1) ಕನ್ನಡ ಜಾಗೃತಿ ಪರಿಷತ್ತಿನ ಚಳುವಳಿ (1962) ಬೆಂಗಳೂರು: ಅಧ್ಯಕ್ಷರು – ಅ.ನ.ಕೃ.**

ಸುಪ್ರಸಿದ್ದ ಕಾದಂಬರಿಕಾರ ಅ.ನ.ಕೃ.ರವರು ಕನ್ನಡ ಜಾಗೃತಿ ಪರಿಷತ್ತಿನ ಅಚ್ಚು ಹಾಕಿದರು. ಇದು ಅಖಿಲ ಕರ್ನಾಟಕ ಸ್ಥಾಪನೆಯಾದ ನಂತರ ಕನ್ನಡಿಗರಲ್ಲಿ ಜಾಗೃತಿ ಉಂಟಾಗತೊಡಗಿತು. ಕನ್ನಡ ಚಿತ್ರಗಳೇ ಚಿತ್ರಮಂದಿರದಲ್ಲಿ ಪ್ರದರ್ಶಿಸಲು ಹಿಂದೇಟು ಹಾಕುತ್ತಿದ್ದ ಕಾಲ. ಇದರ ವಿರುದ್ಧ ಹೋರಾಡಿ ಕನ್ನಡ ಚಿತ್ರರಂಗ ಪ್ರಗತಿ ಹೊಂದಲು ಸಾಧ್ಯವಾಯಿತು.

**2) ವಾಟಾಳ್ ಪಕ್ಷ ಮತ್ತು ಕನ್ನಡ ಪರ ಚಳುವಳಿ (1970) ಬೆಂಗಳೂರು:**

ವಾಟಾಳ್ ನಾಗರಾಜ್ ಯುವ ನಾಯಕರಾಗಿ ಕನ್ನಡ ಪರ ಚಳುವಳಿ ಮಾಡುತ್ತಾ ರಾಜಕೀಯ ಪ್ರವೇಶಿಸಿ ಶಾಸಕರಾದರು. ಬೆಂಗಳೂರಿನ ವ್ಯಾಪಾರಿಗಳಾದ ಮಾರ್ವಾಡಿ ಗುಜರಾತಿ, ಸಿಂದಿ, ಅನ್ಯಭಾಷಿಕರಿಗೆ ಕನ್ನಡದಲ್ಲಿ ನಾಮಫಲಕ ಹಾಕುವಂತೆ ದೊಡ್ಡ ಚಳುವಳಿಯನ್ನೇ ಮಾಡಿದ್ದರು. ಬೆಳಗಾವಿಯಲ್ಲಿ ಮರಾಠಿಗೂ ದಾಂಧಲೆ ನಡೆಸಿದಾಗಲೆಲ್ಲ ವಾಟಾಳ್ ಕನ್ನಡ ಪರ ಧ್ವನಿ ಎತ್ತಿ ನಿಂತರು. ಇಂದಿಗೂ ವಿನೂತನ ಪ್ರತಿಭಟನೆಯ ಮೂಲಕ ಕನ್ನಡಕ್ಕಾಗಿ ಹೋರಾಡುತ್ತಿದ್ದಾರೆ.

**3) ಗೋಕಾಕ್ ಚಳುವಳಿ (1982):**

ಕನ್ನಡ ನಾಡು ನುಡಿ ಅಭಿವೃದ್ದಿಗಾಗಿ ಕರ್ನಾಟಕ ಸರ್ಕಾರ ಕೈಗೊಂಡ ಕಾರ್ಯಕ್ರಮಗಳಲ್ಲಿ ಸಾಹಿತ್ಯ ವಿ.ಕೃ.ಗೋಕಾಕ್ ನೇತೃತ್ವದ ಸಮಿತಿಯ ರಚನೆಯು ಒಂದು.

**ಗೋಕಾಕ್ ಸಮಿತಿ ರಚನೆ ಹಿನ್ನೆಲೆ:**

1979ರವರೆಗೆ ಪ್ರೌಢಶಾಲೆಗಳಲ್ಲಿ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಕಲಿಯುತ್ತಿದ್ದ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ರ್‍ಯಾಂಕ್ ಗಳಿಸುತ್ತಿದ್ದರು. ಸಂಸ್ಕೃತ ಪ್ರಾಥಮಿಕ ಹಂತದ ಭಾಷೆಯಾಗಿದ್ದು ಶೇ.90ರಿಂದ 100 ಅಂಕಗಳನ್ನು ತೆಗೆಯುತ್ತಿದ್ದರು. ಜೊತೆಗೆ ಉನ್ನತ ವ್ಯಾಸಂಗದಲ್ಲಿ ಬ್ರಾಹ್ಮಣರಿಗೆ ಎಲ್ಲಾ ಸ್ಥಾನ ದೊರಕುತ್ತಿದ್ದವು. ದೇವರಾಜ್ ಅರಸ್ 1979ರಲ್ಲಿ ಸಂಸ್ಕೃತವನ್ನು ತೃತೀಯ ಭಾಷೆ ಮಾಡಿ 50 ಅಂಕಗಳಿಗೆ ನಿಗದಿ ಮಾಡಿದರು. ಆಗ ಇದರ ವಿರುದ್ಧ ದನಿಯೆತ್ತಿದ ಸಂಸ್ಕೃತಾಭಿಮಾನಿಗಳು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದಾಗ ಗೋಕಾಕ್‌ರವರ ಅಧ್ಯಕ್ಷತೆಯಲ್ಲಿ ಗೋಕಾಕ್ ಸಮಿತಿ ರಚನೆಯಾಯಿತು.

**ಗೋಕಾಕ್ ವರದಿಯ ಸಾರ:**

ಗೋಕಾಕ್ ವರದಿಯು ಪ್ರೌಢಶಾಲಾ ಮಟ್ಟದಲ್ಲಿ ಭಾಷೆಗಳ ಸ್ಥಾನಮಾನವನ್ನು ವಿಂಗಡಿಸಿತು.

1) ಪ್ರಥಮ ಭಾಷೆ (ಕನ್ನಡ) – ಅಂಕಗಳು 150 ಕಡ್ಡಾಯ.

2) ದ್ವಿತೀಯ ಭಾಷೆ (ಇಂಗ್ಲೀಷ್) – ಅಂಕಗಳು 100 ಕಡ್ಡಾಯ.

3) ತೃತೀಯ ಭಾಷೆ – ಅಂಕಗಳು 50 ಐಚ್ಛಿಕ.

(ಸಂಸ್ಕೃತ, ಹಿಂದಿ, ಉರ್ದು, ಅರೇಬಿಕ್, ತೆಲುಗು, ಮಲೆಯಾಳಂ ಯಾವುದಾದರೂ ಒಂದು).

ಗೋಕಾಕ್ ವರದಿಯನ್ನು ಜಾರಿಗೊಳಿಸುವಲ್ಲಿ ಗುಂಡೂರಾವ್ ಸರ್ಕಾರ (1980–83) ಅನಗತ್ಯ ವಿಳಂಬ ನೀತಿಯನ್ನು ಅನುಸರಿಸಿತು. ಈ ಸಮಯದಲ್ಲಿ ಅಲ್ಪಸಂಖ್ಯಾತ ಮುಸ್ಲಿಂರು ಈ ವರದಿಯಿಂದ ನಮಗೆ ಅನ್ಯಾಯವಾಗುತ್ತದೆ ಎಂದು ಪ್ರತಿಭಟನೆಯಾಯಿತು. ಇದರಿಂದ ಬೇಸತ್ತು ಕನ್ನಡ ಸಂಘಟನೆಗಳು, ಪ್ರಗತಿಪರ ಚಿಂತಕರು 1982ರಿಂದ ಗೋಕಾಕ್ ಚಳುವಳಿ ಆರಂಭಿಸಿದರು.

ಮೈಸೂರಿನಲ್ಲಿ ಅನಂತಮೂರ್ತಿ ನೇತೃತ್ವದಲ್ಲಿ ಚಳುವಳಿ ಆರಂಭವಾಯಿತು. ಧಾರವಾಡದ ಕನ್ನಡ ಕ್ರಿಯಾ ಸಮಿತಿಯ ಪಾಟಿಲ್ ಪುಟ್ಟಪ್ಪ, ಕಲ್ಬುರ್ಗಿ, ಚನ್ನವೀರ ಕಣವಿ, ಚಂಪಾ ಮೊದಲಾದವರು ದಾಣ ಮಾಡಿದರು. ಶಿವರುದ್ರಪ್ಪ, ಚಿದಾನಂದಮೂರ್ತಿ, ಗೋರೂರು ಮೊದಲಾದವರು ಉಪವಾಸ ಸತ್ಯಾಗ್ರಹ ಮಾಡಿದರು.

ಈ ಮಧ್ಯೆ ಕನ್ನಡದ ಉಳಿವಿಗಾಗಿ ಮೇರು ನಟ ಡಾ.ರಾಜ್‌ಕುಮಾರ್ ಚಳುವಳಿಗೆ ಧುಮುಕಿ ಚಳುವಳಿಗೆ ಹೊಸ ತಿರುವು ನೀಡಿದರು. ಪಂಡರಿಬಾಯಿ, ವಿಷ್ಣುವರ್ಧನ್, ಕಲ್ಪನಾ ಎಲ್ಲರೂ ಭಾಗವಹಿಸಿದ್ದರು. ಜೂನ್ 4ರಂದು ಸರ್ಕಾರ ಮುಖಂಡರು ಸಭೆ ಸೇರಿಸಿ ಪರಿಷ್ಕೃತ ನೀತಿ ಪ್ರಕಟಿಸಿತು.

**ಪರಿಷ್ಕೃತ ನೀತಿ:**

1) ಕನ್ನಡ ಮತ್ತು ಇಂಗ್ಲೀಷ್ ಅನುಕ್ರಮವಾಗಿ ಪ್ರಥಮ ದ್ವಿತೀಯ ಭಾಷೆಗಳಾಗಿ ಮಾಡಲಾಯಿತು.

2) 3ನೇ ಭಾಷೆಗಳಾಗಿ ಹಿಂದಿ, ಉರ್ದು, ತಮಿಳು, ತೆಲುಗು, ಸಂಸ್ಕೃತ ಕಲಿಯಲು ಅವಕಾಶ.

3) ಕನ್ನಡ ಕಲಿಯುವ ಅಲ್ಪಸಂಖ್ಯಾತರಿಗೆ 10 ವರ್ಷಗಳವರೆಗೆ 15 ಕೃಪಾ ಅಂಕ.

4) ಒಟ್ಟಾರೆ ಗೋಕಾಕ್ ಚಳುವಳಿ ಕನ್ನಡಕ್ಕೆ ಅಗ್ರಸ್ಥಾನ ನೀಡಿತು.

## ಸರೋಜಿನಿ ಮಹಿಷಿ ಸಮಿತಿ ವರದಿ 1986:

ಕೆಂಗಲ್ ಹನುಮಂತಯ್ಯನವರು ಬೆಂಗಳೂರನ್ನು ಕಾಸ್ಮೋಪಾಲಿಟನ್ ಸಿಟಿ ಎಂದು ಘೋಷಿಸಿದಾಗಿನಿಂದ ಎಲ್ಲಾ ರಾಜ್ಯದ ಉದ್ಯಮಿಗಳು, ಬೆಂಗಳೂರಲ್ಲಿ ಉದ್ಯಮ ಸ್ಥಾಪಿಸಿ ತಮ್ಮ ರಾಜ್ಯದವರಿಗೆ ಹೆಚ್ಚಿನ ಆದ್ಯತೆ ನೀಡಲು ಶುರುಮಾಡಿದಾಗ, ಕನ್ನಡಿಗರು ಪ್ರತಿಭಟಿಸಿದರು. ಆಗ ರಾಮಕೃಷ್ಣ ಹೆಗಡೆ ಈ ಸಮಿತಿ ನೇಮಿಸಿದರು.

**ಉದ್ದೇಶ:**

ಬೆಂಗಳೂರಿನ ಉದ್ಯಮದಲ್ಲಿ ಕನ್ನಡಿಗರ ನೇಮಕಾತಿ ಬಗ್ಗೆ ವರದಿ ನೀಡುವುದು.

**ಸಾರಾಂಶ:**

1) 'ಎ' ವರ್ಗದ ಹುದ್ದೆಗಳಿಗೆ ಎನ್.ಇ.ಎಸ್. (ನ್ಯಾಷನಲ್ ಎಪ್ಲಾಂಯ್‌ಮೆಂಟ್ ಸರ್ವಿಸ್) ಮೂಲಕ ಕೇಂದ್ರ ಸರ್ಕಾರದ ಉದ್ದಿಮೆಯಲ್ಲಿ ಕನ್ನಡಿಗರಿಗೆ ಶೇ.65 ಮೀಸಲು.

2) 'ಬಿ' ವರ್ಗದ ಹುದ್ದೆಗಳು ಶೇ.80 ಕನ್ನಡಿಗರಿಗೆ ಮೀಸಲು.

3) ಸಿ, ಡಿ ವರ್ಗದ ಹುದ್ದೆಗಳು ಪೂರ್ತಿ ಕನ್ನಡಿಗರಿಗೆ ಮೀಸಲು.

4) ರಾಜ್ಯ ಸರ್ಕಾರದ ಹುದ್ದೆಗಳಲ್ಲಿ ಎಲ್ಲಾ ಹುದ್ದೆಗಳು ಕನ್ನಡಿಗರಿಗೆ ದಕ್ಕಬೇಕು.

5) ಉದ್ಯೋಗದ ಮಾಹಿತಿ ತಿಳುವಳಿಕೆಗಾಗಿ ಉದ್ಯೋಗ ವಾರ್ತೆ ಪತ್ರಿಕೆಯನ್ನು ಕನ್ನಡದಲ್ಲಿ ಹೊರಡಿಸಬೇಕು. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಚ್ಛಾಶಕ್ತಿಯ ಕೊರತೆಯಿಂದ ಇದು ಇಂದೂ ನೆನೆಗುದಿಗೆ ಬಿದ್ದಿದೆ.

## ಕನ್ನಡ ಶಕ್ತಿ ಕೇಂದ್ರ ಚಳುವಳಿ 1988:

ಸರೋಜಿನಿ ಮಹಿಷಿ ವರದಿ 1986ರಲ್ಲಿ ಸರ್ಕಾರದ ಕೈ ಸೇರಿದರೂ ಕೂಡ ವಿಳಂಬ ನೀತಿ ಅನುಸರಿಸುತ್ತಿದ್ದ ಸರ್ಕಾರದ ನೀತಿ ಖಂಡಿಸಿ ಡಾ.ಎಂ. ಚಿದಾನಂದ ಮೂರ್ತಿಯವರು 1988ರಲ್ಲಿ ಕನ್ನಡ ಶಕ್ತಿ ಕೇಂದ್ರ ಎಂಬ ಸಂಘಟನೆ ತಂದು ಹೋರಾಟ ಪ್ರಾರಂಭಿಸಿದರು.

**ಸೂತ್ರಗಳು:**

1) ಸರೋಜಿನಿ ಮಹಿಷಿ ವರದಿ ಜಾರಿಗಾಗಿ ಒತ್ತಾಯ.

2) ಟಿ.ವಿ.ಯ ಚಂದನ ಕನ್ನಡ ವಾಹಿನಿ ಕನ್ನಡ ಕಾರ್ಯಕ್ರಮಗಳಿಗೆ ಮಾತ್ರ ಮೀಸಲು ಮಾಡಬೇಕು.

3) ಚಂದನ ವಾಹಿನಿಯ ಉರ್ದು ಪ್ರಸಾರಕ್ಕೆ ತಡೆ ನೀಡಬೇಕು.

4) ಹಂಪಿ ಕನ್ನಡ ವಿ.ವಿ. ಸ್ಥಾಪನೆಗೆ ಹೋರಾಟ.

5) ಯು.ಪಿ.ಎಸ್.ಸಿ ಯನ್ನು ಕನ್ನಡ ಮಾಧ್ಯಮದಲ್ಲಿ ಉತ್ತರಿಸಲು ಅವಕಾಶ ನೀಡಬೇಕು.

ಸರೋಜಿನಿ ಮಹಿಷಿ ವರದಿ ಬಿಟ್ಟು ಉಳಿದೆಲ್ಲವೂ ಜಾರಿಯಾಗಿವೆ.

## ಕರ್ನಾಟಕ ರಕ್ಷಣಾ ವೇದಿಕೆ 2001 (ಕ.ರ.ವೇ):

ಟಿ.ಎ. ನಾರಾಯಣಗೌಡರ ಅಧ್ಯಕ್ಷತೆಯಲ್ಲಿ ಅನ್ಯ ರಾಜ್ಯಗಳ ಭಾಷೆಗಳ ದಬ್ಬಾಳಿಕೆ ತಡೆಯಲು ಪ್ರಾರಂಭವಾದ ವೇದಿಕೆ, ಇಂದು 1800 ಶಾಖೆ ಹೊಂದಿದ್ದು 85 ಲಕ್ಷ ಸದಸ್ಯರನ್ನು ಹೊಂದಿದೆ.

ಉದಾ: ಎಮ್.ಇ.ಎಸ್. ವಿರುದ್ಧ ಹೋರಾಟ, ಮರಾಠಿ ಮೇಯರ್‌ಗೆ ಮಸಿ, ರೈಲ್ವೆ ಪರೀಕ್ಷೆ ಕನ್ನಡದಲ್ಲಿ ಮಾಡಲು ಹೋರಾಟ, ಹೋಗೆನೆಕಲ್ ಹೋರಾಟ. ಹೀಗೆ ಹಲವಾರು ಕನ್ನಡ ಚಳುವಳಿಗಳ ಮೂಲಕ ಕನ್ನಡದ ರಕ್ಷಣೆಗೆ ಹೋರಾಡಿದೆ.

## ಅಂತರಾಜ್ಯ ವಿವಾದಗಳು:

### 1) ಗಡಿ ತಕರಾರುಗಳು:

ಭೌಗೋಳಿಕ ಹಾಗೂ ಭಾಷಿಕವಾಗಿ ಕನ್ನಡ ಪ್ರದೇಶಗಳು ಬ್ರಿಟೀಷರ್ ಕಾಲದಲ್ಲಿ ವಿವಿಧ ಭಾಷಿಕರ ಆಡಳಿತದಲ್ಲಿ ಹಂಚಿ ಹೋಗಿದ್ದವು.

1) ಬ್ರಿಟೀಷರ ನೇರ ಆಳ್ವಿಕೆಯಲ್ಲಿ ಮುಂಬೈ, ಕನ್ನಡದ ಬಿಜಾಪುರ, ಧಾರವಾಡ, ಬೆಳಗಾವಿ ಸೇರಿದ್ದವು.

2) ಮದ್ರಾಸ್ ಪ್ರಾಂತ್ಯಕ್ಕೆ ಬಳ್ಳಾರಿ, ಮಂಗಳೂರು, ಕೊಡಗು.

3) ಹೈದರಾಬಾದ್ ಪ್ರಾಂತ್ಯಕ್ಕೆ ಬೀದರ್, ಗುಲ್ಬರ್ಗಾ, ರಾಯಚೂರು.

4) ಮೈಸೂರು ಸಂಸ್ಥಾನದ ರಾಜ್ಯಗಳು.

ಹೀಗೆ ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳು 1956ರ ಏಕೀಕರಣ ಚಳುವಳಿಯ ಪರಿಣಾಮವಾಗಿ ವಿಶಾಲ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಆದರೆ 'ಸ್ಟೇಟ್ ಆರ್ಗನೈಜೆಷನ್ ಕಮಿಷನ್' ಎಸಗಿದ ಲೋಪದೋಷಗಳು ಗಡಿ ವಿವಾದಕ್ಕೆ ಕಾರಣವಾದವು.

**ಗಡಿ ವಿವಾದಕ್ಕೆ ಕಾರಣಗಳು:**

1) ಗಡಿ ವಿಭಜನೆಯ ಕಾಲದಲ್ಲಿ ಅನುಸರಿಸಿದ ದೋಷಪೂರಿತ ಸೂತ್ರಗಳು.

2) ರಾಜ್ಯಗಳ ರಚನೆಯಲ್ಲಿ ಅಖಂಡತೆಗೆ ಒತ್ತು ನೀಡಿ ಪ್ರತಿಯೊಂದು ಗಡಿ ಅವಿಭಾಜ್ಯ ಅಂಗವಾಗಿ ಪರಿಣಮಿಸಿದ್ದು (ಹೋಬಳಿ ಗ್ರಾಮ ಪರಿಗಣಿಸಲಿಲ್ಲ).

3) ತಾಲ್ಲೂಕು ವಿಂಗಡನೆಯಲ್ಲಿ ಶೇ.10 ಬಹುಮತ ಇರುವ ಭಾಷಿಕ ವಿಂಗಡನೆ ಇಲ್ಲಿ ಶೇ.90 ಇದ್ದು ಕನ್ನಡಿಗರು ನೆರೆಯ ರಾಜ್ಯಕ್ಕೆ ಸೇರ್ಪಡೆಯಾದರು.

4) ಗಡಿ ಭಾಗದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಂಶದ ಪರಿಗಣನೆ ಮಾಡಲಿಲ್ಲ.

5) ಆಯೋಗದ ಸದಸ್ಯರ ಪಕ್ಷಪಾತ.

6) ರಾಜಕೀಯ ಪಕ್ಷಗಳ ಭಾಷಾಂಧತೆ.

## ಕರ್ನಾಟಕ ರಾಜ್ಯವು ಹೊಂದಿರುವ ಗಡಿ ವಿವಾದಗಳೆಂದರೆ:

### ಕರ್ನಾಟಕ – ಕೇರಳ ಗಡಿ ವಿವಾದ:

ದಕ್ಷಿಣ ಜಿಲ್ಲೆಯ ಭಾಗವಾಗಿದ್ದ ಕಾಸರಗೋಡು ತಾಲ್ಲೂಕಿನಲ್ಲಿ, ಕಾಸರಗೋಡು ಕುಂಬ್ಳೆ, ಹೊಸದುರ್ಗ, ನೀಲೇಶ್ವರೆ ಎಂಬ 5 ಹೋಬಳಿಗಳಿದ್ದವು. ಒಟ್ಟು ಜನಸಂಖ್ಯೆ 3,48,000 ಇದರಲ್ಲಿ ಸರಿ ಸುಮಾರು 2 ಲಕ್ಷ ಜನ ಕನ್ನಡಿಗರಿದ್ದರು. ಇದೇ ತಾಲ್ಲೂಕಿನ 164 ಶಾಲೆಗಳಲ್ಲಿ 139 ಕನ್ನಡ ಶಾಲೆಗಳಿದ್ದವು. ಒಟ್ಟು 36 ಪಂಚಾಯಿತಿಗಳಲ್ಲಿ 35 ಪಂಚಾಯಿತಿಗಳು ಮೈಸೂರು ರಾಜ್ಯದೊಂದಿಗೆ ವಿಲೀನಕ್ಕೆ ಒಪ್ಪಿದವು. ಆದರೆ ಕೇರಳ ಮೂಲದ ಆಯೋಗದ ಸದಸ್ಯರಾದ ಕೆ.ಎಮ್.ಪಣಿಕ್ಕರ ಪ್ರಭಾವದಿಂದ ಕಾಸರಗೋಡು ತಾಲ್ಲೂಕು ಕೇರಳಕ್ಕೆ ಸೇರ್ಪಡೆಯಾಯಿತು. ಇದಕ್ಕಾಗಿ ಪಂಜೇ ಮಂಗೇಶ್ವರ್ ರಾವ್, ಕಯ್ಯಾರ ಕಿಣ್ಣ ರೈ ಮೊದಲಾದವರು ಪ್ರತಿಭಟಿಸಿದರು. ಮುಂದೆ ಕೇರಳ ಸರ್ಕಾರ 1988ರಿಂದ ಇದನ್ನು ಜಿಲ್ಲೆಯಾಗಿ ಘೋಷಿಸಿತು.

ಈ ಹಿನ್ನೆಲೆಯಲ್ಲಿ 1965ರಲ್ಲಿ ನೇಮಕವಾದಂತಹ ಮಹಾಜನ ಆಯೋಗವು ಕಾಸರಗೋಡಿನ ಚಂದ್ರಗಿರಿ, ಪಯಸ್ಸಿನಿ ನದಿಯ ಉತ್ತರದ ಭಾಗದ ಹೋಬಳಿಗಳನ್ನು ಕರ್ನಾಟಕಕ್ಕೆ ವರ್ಗಾಯಿಸಬೇಕೆಂದು ಶಿಫಾರಸ್ಸು ಮಾಡಿದೆ. ಆದರೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಇದು ನೆನೆಗುದಿಗೆ ಬಿದ್ದಿದೆ.

### ಕರ್ನಾಟಕ – ಆಂಧ್ರ ಗಡಿ ವಿವಾದ:

1953ರಲ್ಲಿ ಆಂಧ್ರಪ್ರದೇಶ ರಚನೆಯಾದಾಗ ಮದ್ರಾಸ್ ಅಧೀನದಲ್ಲಿದ್ದ ಬಳ್ಳಾರಿಯ ಆಲೂರು, ಆದೋನಿ ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಆಂಧ್ರಕ್ಕೆ ವರ್ಗಾಯಿಸಲಾಯಿತು. ಇಲ್ಲಿ ಕನ್ನಡ ಶಾಲೆಗಳು ಹೆಚ್ಚಿದ್ದರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ತೆಲುಗು ಭಾಷಿಕರ ಸಂಖ್ಯೆ ಹೆಚ್ಚಿತು. ಹಾಗಾಗಿ ಸಮಸ್ಯೆ ಉಲ್ಬಣಿಸಲಿಲ್ಲ. ಆದೋನಿಯ ಕನ್ನಡ ಸಂಘ, ಆಲೂರ ರಾಜೇಶ್ವರಿ ಕನ್ನಡ ಮಹಿಳಾ ಸಮಾಜ ಆಗಿಂದಾಗ್ಗೆ ಚಳುವಳಿ ನಡೆಸಿಕೊಂಡು ಬರುತ್ತಿವೆ.

ಇಲ್ಲಿ ರಾಯದುರ್ಗದ 'ಹಿರೇಹಾಳು' ಗ್ರಾಮ ನೂರಕ್ಕೆ ನೂರು ಕನ್ನಡ ಗ್ರಾಮವಾಗಿತ್ತು. ಅದರ 3 ಕಡೆ ತೆಲುಗೂ ಪ್ರದೇಶದಿಂದ ಆವೃತ್ತವಾಗಿತ್ತು. ಉತ್ತರದ ಕಡೆ ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡಿದ್ದರೂ ಕೂಡ ಇದನ್ನು ಬಳ್ಳಾರಿ ಜಿಲ್ಲೆಗೆ ಸೇರಿಸಲಾಯಿತು. ಇಲ್ಲಿಯೂ ಸಹ ತಾಲ್ಲೂಕು ಮಟ್ಟದ ವರ್ಗಾವಣಾ ಸೂತ್ರವು ಅಡ್ಡಿಯಾಯಿತು.

1956ರ ರಾಜ್ಯ ಪುನರ್ ವಿಂಗಡಣಾ ಆಯೋಗವು ಇದೇ ಮಡಕಶಿರ ತಾಲ್ಲೂಕನ್ನು ಆಂಧ್ರಕ್ಕೆ ವರ್ಗಾಯಿಸಿತು. ಈ ಭಾಗದ ಬಹುಸಂಖ್ಯಾತ ಕನ್ನಡಿಗರು ತೆಲುಗು ಶಿಕ್ಷಣ ಪಡೆಯಬೇಕಾಯಿತು. ಇಲ್ಲಿ ಹೋರಾಡಿದವರಲ್ಲಿ ಪ್ರಣಿಕ, ಚಂಪಾ, ಭೀಮಣ್ಣ ಖಂಡ್ರೆ ಪ್ರಮುಖರು. ಆದರೂ ಆಂಧ್ರಪ್ರದೇಶದೊಂದಿಗೆ ಹೆಚ್ಚಿನ ಗಡಿ ವಿವಾದ ತಲೆದೋರಿಲ್ಲ.

### ಕರ್ನಾಟಕ – ತಮಿಳುನಾಡು ಗಡಿ ವಿವಾದ:

ಬೆಂಗಳೂರು ಜಿಲ್ಲೆಗೆ ಹೊಂದಿಕೊಂಡಿರುವ ಹೊಸೂರು ತಾಲ್ಲೂಕನ್ನು ತಮಿಳುನಾಡಿಗೆ ಸೇರಿಸಲಾಯಿತು. ಆದರೆ ಈ ತಾಲೂಕಿನ ಗಡಿ ಗ್ರಾಮಗಳು ಬಹುಸಂಖ್ಯಾತ ಕನ್ನಡಿಗರಿಂದ ಕೂಡಿದ್ದು ಸಣ್ಣದಾದ ಹೋರಾಟ ನಡೆದಿದೆ.

ಉದಾ: ಕರ್ನಾಟಕದ ಆನೇಕಲ್ 'ಗುಮ್ಮಳಾಪುರ'.

ಕರ್ನಾಟಕದ ಮೈಸೂರು ಜಿಲ್ಲೆ ಗೆ ಹೊಂದಿಕೊಂಡು ಇರುವ ತಾಳವಾಡಿ ಮತ್ತು ನೀಲಗಿರಿ ಪ್ರದೇಶಗಳು ಹೊಯ್ಸಳರ ಕಾಲದಿಂದಲೂ ಕರ್ನಾಟಕದ ಭಾಗಗಳಾಗಿದ್ದವು. ಆದರೆ ಇಲ್ಲಿ ಹೋರಾಟದ ಮುಂಚೂಣಿ ನಾಯಕರ ಕೊರತೆಯಿಂದಾಗಿ ಗಡಿ ವಿವಾದ ಚಳುವಳಿಯಲ್ಲಿ ಇಲ್ಲದಾಗಿದೆ.

**ಕರ್ನಾಟಕ – ಮಹಾರಾಷ್ಟ್ರ ಗಡಿ ವಿವಾದ:**

ಮಹಾರಾಷ್ಟ್ರದ ಚಂದಗಢ, ಜತ್ತ, ಸೊಲ್ಲಾಪುರ, ಅಕ್ಕಲಕೋಟೆಗಳಲ್ಲಿನ ಕೆಲವು ಹಳ್ಳಿಗಳು ನೂರಕ್ಕೆ ನೂರರಷ್ಟು ಕನ್ನಡ ಭಾಷಿಕರಿಂದ ಕೂಡಿದ್ದವು. 1951ರ ಜನಗಣತಿಯಿಂದ ಸೊಲ್ಲಾಪುರದ ಖಾನ್‌ಪುರ ಪೂರ್ಣ ಕ್ನನಡಿಗರಿಂದಲೇ ಕೂಡಿದೆ. ಇಲ್ಲಿನ ತೆಲಗಾವ್ ಗ್ರಾಮದಲ್ಲಿ ಶೇ.84 ಕನ್ನಡಿಗರಿದ್ದಾರೆ. ಸೊಲ್ಲಾಪುರ ನಗರ ಶೇ.75 ಕನ್ನಡಿಗರಿಂದ ಕೂಡಿದೆ.

1956ರಲ್ಲಿ 2 ರಾಜ್ಯಗಳು ಕೇಂದ್ರ ಸರ್ಕಾರದ ಮುಂದೆ ತಮ್ಮ ಬೇಡಿಕೆಯನ್ನು ಈ ರೀತಿ ಮಂಡಿಸಿದವು. ಎಮ್.ಇ.ಎಸ್. 1058 ಗ್ರಾಮಗಳ ಜೊತೆಗೆ ಬೆಳಗಾವಿ, ನಿಪ್ಪಾಣಿ, ಕಾರವಾರ್, ನಗರಗಳನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಬೇಕೆಂದು, ಕೊಂಕಣಿ, ಮರಾಠಿಯ ಉಪಭಾಷೆ ಎಂದು ವಾದಿಸಿತು. ಇದರ ಜೊತೆಗೆ ಕರ್ನಾಟಕ 528 ಗ್ರಾಮಗಳು ಕರ್ನಾಟಕದವು ಎಂಬ ವಾದ ಮಂಡಿಸಿತು.

ಇದನ್ನು ಸರಿಪಡಿಸಲು 1960ರಲ್ಲಿ ಪಾಟಸ್ಕರ್ ಸಮಿತಿ ರಚಿಸಿದರು. ಇದರಲ್ಲಿ ವಾಯ್.ಬಿ.ಚಹ್ವಾಣ್, ಬಿ.ಡಿ.ಜತ್ತಿ ಸದಸ್ಯರು. ಇದು ಗಡಿ ಗ್ರಾಮಗಳನ್ನು ಭಾಷಾ ಆಧಾರದ ಮೇಲೆ ಸಂಬಂಧಿಸಿದ ರಾಜ್ಯಗಳಿಗೆ ವಿಲೀನ ಮಾಡಲಾಯಿತು. ಆದರೆ ಮಹಾರಾಷ್ಟ್ರ ಇದನ್ನು ಅಂಗೀಕರಿಸಲಿಲ್ಲ.

## ಮಹಾಜನ್ ಆಯೋಗ (1965–67):

ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಾಧೀಶರಾದ 'ಮೆಹರ್ ಚಂದ ಮಹಾಜನ್'ರವರ ಅಧ್ಯಕ್ಷತೆಯಲ್ಲಿ 1965ರಲ್ಲಿ ಕೇಂದ್ರ ಸರ್ಕಾರ ನೇಮಿಸಿತು. ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳ ಗಡಿಯನ್ನು ನಿರ್ಧರಿಸುವ ಕಾರ್ಯವನ್ನು ಮಹಾಜನ್ ಸಮಿತಿಯ ವ್ಯಾಪ್ತಿಗೆ ಬಿಡಲಾಯಿತು.

ಈ ಸಮಯದಲ್ಲಿ ಕೆಲವು ಗಡಿ ಗ್ರಾಮಗಳು ಭಾಷಾ ದೃಷ್ಟಿಯಿಂದ ಅನಿವಾರ್ಯವಾಗಿದ್ದವು.

ಉದಾ: ಕುರಿಹಾಳ (ಬೆಳಗಾವಿ) 97% ಮರಾಠ, ಬೆಳ್ಳಂಕಿ (ಬೆಳಗಾವಿ) 98% ಮರಾಠಿ. ಜೀವನೋಪಾಯಕ್ಕೆ ಈ ಜನ ವಲಸೆ ಹೋಗುತ್ತಿದ್ದು ಒಂದು ಕಾರಣವಾಗಿದೆ.

ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಮಹಾಜನ್ ಆಯೋಗ ಭಾಷಾ ಬಾಹುಳ್ಯ ಮತ್ತು ಭೌಗೋಳಿಕ ಐಕ್ಯತೆಗೆ ದಕ್ಕೆ ಬಾರದಂತೆ ಗಮನವಹಿಸಿ, ಅಥಣಿ, ಚಿಕ್ಕೋಡಿ, ಹುಕ್ಕೇರಿ, ಗೋಕಾಕ್, ಖಾನಾಪುರ, ಚಂದಗಡ, ರಾಯಭಾಗ, ಕಡಕೊಳ, ಹಳಿಯಾಳ 15 ತಾಲ್ಲೂಕು ವಿಂಗಡಿಸಿ 214 ಗ್ರಾಮ ಮಹಾರಾಷ್ಟ್ರಕ್ಕೆ, 260 ಗ್ರಾಮ ಕರ್ನಾಟಕಕ್ಕೆ ವರ್ಗಾಯಿಸಬೇಕೆಂದು ವರದಿ ನೀಡಿತು. ಬೆಳಗಾವಿ ಸಿಗದ ಕಾರಣ ಮಹಾರಾಷ್ಟ್ರ ಈ ವರದಿ ಒಪ್ಪುತ್ತಿಲ್ಲ.

1974ರಲ್ಲಿ ದೇವರಾಜ್ ಅರಸ್‌ರು ಮಹಾಜನ್ ವರದಿಯಲ್ಲಿ ಯಾವುದೇ ಬದಲಾವಣೆಯಾಗಕೂಡದು, ಅಕ್ಕಲಕೋಟೆ, ಸೊಲ್ಲಾಪುರ, ಜತ್ತ ಈ 3 ತಾಲ್ಲೂಕುಗಳು ಬರಪೀಡಿತ ಆದರೂ ನಾವು ಈ ವರದಿ ಒಪ್ಪಲು ಸಿದ್ದವೆಂದು ಖಾರವಾಗಿಯೇ ಪ್ರತಿಕ್ರಿಯೆ ನೀಡಿದ್ದರು.

ಕರ್ನಾಟಕ ಕೇರಳಕ್ಕೆ ಸಂಬಂಧಿಸಿದಂತೆ ಮಹಾಜನ್ ಆಯೋಗವು ಕಾಸರಗೋಡು (ಚಂದ್ರಗಿರಿ ನದಿಯ ಉತ್ತರ ಭಾಗ) ಕರ್ನಾಟಕಕ್ಕೆ ಸೇರಬೇಕೆಂದು ತಿಳಿಸಿತು.

**ಕರ್ನಾಟಕ – ಮಹಾರಾಷ್ಟ್ರ):**

ನಿಪ್ಪಾಣಿ, ಖಾನಾಪುರ, ಹಲ್ಯಾಳ ಮಹಾರಾಷ್ಟ್ರಕ್ಕೆ ಸೇರಬೇಕೆಂದು, ಬೆಳಗಾವಿ ಮೈಸೂರು ಪ್ರಾಂತ್ಯದಲ್ಲೇ ಇರಬೇಕೆಂದು ಶಿಫಾರಸ್ಸು ಮಾಡಿತು.

ಹೀಗೆ ಗಡಿಬಾಧೆಗಳಿಗೆ ಶಾಶ್ವತವಾದ ಒಂದು ಪರಿಹಾರ ಸಿಗದೆ ಕಗ್ಗಂಟಾಗಿಯೇ ಉಳಿದಿದ್ದು, ಇದಕ್ಕೊಂದು ಶಾಶ್ವತವಾದ, ಅನುಷ್ಠಾನ ಯೋಗ್ಯ ಪರಿಹಾರ ಕಂಡುಕೊಳ್ಳುವ ಅವಶ್ಯಕತೆ ಇದೆ. ಏಕೆಂದರೆ ನಾವು ಏನನ್ನು ಬೇಕಾದರೂ ಬದಲಿಸಬಹುದು, ಆದರೆ ನೆರೆಹೊರೆಯವರನ್ನಲ್ಲ. ಆದ್ದರಿಮದ ಸೌಹಾರ್ದಯುತ ಬಾಳಿಗಾಗಿ, ರಾಜಕೀಯ ಬದಿಗೊತ್ತಿ, ಸಮಸ್ಯೆ ಬಗೆಹರಿಸಿಕೊಳ್ಳಬೇಕಿದೆ.

## ಕರ್ನಾಟಕದೊಂದಿಗೆ ಇತರ ರಾಜ್ಯಗಳು ಹೊಂದಿರುವ ಜಲ ವಿವಾದಗಳು:

ಭೂಗಡಿ ವಿವಾದದಂತೆ ಕೆಲವು ರಾಜ್ಯಗಳು ಜಲ ವಿವಾದಗಳನ್ನು ಹೊಂದಿವೆ. ಕರ್ನಾಟಕದೊಂದಿಗೆ ಹೆಚ್ಚಾಗಿ ಗಡಿ ಸಮಸ್ಯೆ ಇವೆ. ತಮಿಳುನಾಡು ಜಲ ಸಮಸ್ಯೆ ಹೊಂದಿದೆ. ಪ್ರಮುಖವಾದ ನದಿ ನೀರಿನ ಹಂಚಿಕೆಯ ವಿವಾದಗಳೆಂದರೆ,

1) ಕಾವೇರಿ ನದಿ ನೀರು ಹಂಚಿಕೆ ವಿವಾದ.

2) ಕೃಷ್ಣಾ ನೀರು ಹಂಚಿಕೆ ವಿವಾದ.

3) ಮಹದಾಯಿ ನೀರು ಹಂಚಿಕೆ ವಿವಾದ.

### ಕಾವೇರಿ ನದಿ ನೀರಿನ ಹಂಚಿಕೆ ವಿವಾದ:

ಕಾವೇರಿ ನದಿ ಕರ್ನಾಟಕದ ಕೊಡಗು ಜಿಲ್ಲೆಯ ತಲಕಾವೇರಿ ಬಳಿ ಉಗಮಗೊಂಡ ಕರ್ನಾಟಕದಲ್ಲಿ ಸುಮಾರು 400 ಕಿ.ಮೀ. ಹಾಗೂ ತಮಿಳುನಾಡಿನಲ್ಲಿ ಸುಮಾರು 400 ಕಿ.ಮೀ. ಹರಿದು ಕಾವೇರಿ ಪಟ್ಟಣಂ ಹಾಗೂ 18 ಕಡೆ ಭಾಗಗಳಾಗಿ ಬಂಗಾಳ ಸಮುದ್ರ ಸೇರುತ್ತದೆ.

ಕಾವೇರಿಗೆ ಕರ್ನಾಟಕದಲ್ಲಿ 20 ಉಪನದಿಗಳಿವೆ. (ಹೇಮಾವತಿ, ಕಪಿಲ) ಹಾಗೂ ತಮಿಳುನಾಡಿನಲ್ಲಿ (ಭವಾನಿ, ಪಾಲಾರ್) ಮುಂತಾದ ಉಪನದಿಗಳು ಸೇರ್ಪಡೆಯಾಗುತ್ತವೆ.

ವಿಜಯನಗರ ಮತ್ತು ಮೈಸೂರು ಒಡೆಯರ ಕಾಲದಲ್ಲೇ ಕಾವೇರಿ ನದಿಗೆ ಹಾಸನದ ಕಟ್ಟೆಪುರ, ಚುಂಚನಕಟ್ಟೆ, ಅಡಗೂರು ಕಟ್ಟೆ ಮೊದಲಾದಂತಹ ಸಣ್ಣ ಅಣೆಕಟ್ಟುಗಳನ್ನು ನಿರ್ಮಿಸಲಾಗಿತ್ತು. ಚಿಕ್ಕದೇವರಾಜ್ ಒಡೆಯರ ಕನ್ನಂಬಾಡಿಯಲ್ಲಿ 30 ಅಡಿ ಎತ್ತರದ ಅಣೆಕಟ್ಟಿಗೆ ಪ್ರಸ್ತಾಪ ಮಾಡಿದರೆ ಅದು 1909ರಲ್ಲಿ ವಿಶ್ವೇಶ್ವರಯ್ಯನವರಿಂದ ಕಾರ್ಯರೂಪಕ್ಕೆ ಬಂದಿತು.

1911ರಲ್ಲಿ ಆರಂಭವಾದ ಇದು 1922ರಲ್ಲಿ ಪೂರ್ಣಗೊಂಡಿತು. ಇದರ ಪ್ರತಿಯಾಗಿ ಮೆಟ್ಟೂರು ಅಣೆಕಟ್ಟನ್ನು ತಮಿಳುನಾಡು ನಿರ್ಮಿಸಿತು. 1922ರಲ್ಲಿ ಅಣೆಕಟ್ಟು ಪೂರ್ಣವಾದಾಗ 1924ರಲ್ಲಿ ಮೈಸೂರು ಮತ್ತು ಮದ್ರಾಸ್ ಸರ್ಕಾರಗಳ ನಡುವೆ ಒಪ್ಪಂದ ಮಾಡಿಕೊಳ್ಳಲಾಯಿತು.

### 1924ರ ಒಪ್ಪಂದದ ಮುಖ್ಯಾಂಶಗಳು:

1) ಅಣೆಕಟ್ಟನ್ನು 134 ಅಡಿಯವರೆಗೆ ಎತ್ತರಿಸುವುದು. ಅದರಲ್ಲಿ 124 ಅಡಿಯವರೆಗೆ ಮಾತ್ರ ನೀರು ಸಂಗ್ರಹಣೆಗೆ ಅವಕಾಶ ಮಾಡಿಕೊಡಲಾಯಿತು.

2) 50 ಟಿ.ಎಮ್.ಸಿ. ನೀರು ಸಂಗ್ರಹಣಾ ಸಾಮರ್ಥ್ಯ ಮತ್ತು ಕಾವೇರಿ ಅದರ ಉಪ ನದಿಗಳಿಗೆ.

3) 14,483 ಟಿ.ಎಮ್.ಸಿ. ಎಕರೆಗೆ ನೀರಿನ ಸೌಲಭ್ಯ. ಮದ್ರಾಸ್ ಪ್ರದೇಶದಲ್ಲಿ ಅಣೆಕಟ್ಟು ಕಟ್ಟಲು ಅನುಮತಿ.

4) ಸಂಗ್ರಹವಾದ ನೀರಿನಲ್ಲಿ ಶೇ.60 ಮದ್ರಾಸಿನ ಮೆಟ್ಟೂರು ಅಣೆಕಟ್ಟೆಗೆ ಬಿಡುವುದು.

1972ರಲ್ಲಿ ಮಳೆ ಪ್ರಮಾಣ ಕಡಿಮೆಯಾದ್ದರಿಂದ ಅಣೆಕಟ್ಟಿನಲ್ಲಿ ನೀರು ಸಂಗ್ರಹವಾಗದೇ ಕೊರತೆಯುಂಟಾಯಿತು. 1924 ಒಪ್ಪಂದದ ಪ್ರಕಾರ ಮುಂದಿನ 50 ವರ್ಷಗಳಿಗೆ ಅಂದರೆ 1974ರಲ್ಲಿ ಮರು ಒಪ್ಪಂದವಾಗಬೇಕಿತ್ತು. ಆದರೆ ಇದು ಆಗಲಿಲ್ಲ. ಈ ಸಮಯದಲ್ಲಿ ಕಾವೇರಿ ನ್ಯಾಯಾಧೀಕರಣ ರಚನೆಯಾಯಿತು. 1982ರವರೆಗೆ ಕೊರತೆಯಾಗಲಿಲ್ಲ. ನಂತರ ಇದು 1983, 1990, 1991ರಲ್ಲಿ ಸಮಸ್ಯೆ ಉಲ್ಬಣಿಸಿತು.

ಕರ್ನಾಟಕ ತಮಿಳುನಾಡು ಕೇರಳ ಪಾಂಡಿಚೇರಿಗಳು ನೀರಿಗಾಗಿ ಬೇಡಿಕೆ ಇಟ್ಟವು. 1991ರಲ್ಲಿ ನರಸಿಂಹರಾವ್ ನಿರ್ದೇಶನದಲ್ಲಿ ಮಧ್ಯಂತರ ತೀರ್ಪಿನಲ್ಲಿ ಕರ್ನಾಟಕಕ್ಕೆ 53 ಟಿ.ಎಮ್.ಸಿ. ತಮಿಳುನಾಡಿಗೆ 33 ಟಿ.ಎಮ್.ಸಿ. ಕೇರಳಕ್ಕೆ 14 ಟಿ.ಎಮ್.ಸಿ. ನಿಗದಿಮಾಡಿತು. ಆದರೆ ಕರ್ನಾಟಕಕ್ಕೆ ಯಾವುದೇ ಹೊಸ ನೀರಾವರಿ ಯೋಜನೆ ಕೈಗೊಳ್ಳದಂತೆ ಮಾಡಿದ್ದರಿಂದ ಕರ್ನಾಟಕ ನಿರಾಕರಿಸಿತು.

1993ರಲ್ಲಿ ಅನಾವೃಷ್ಟಿಯಿಂದಾಗಿ ನೀರಿನ ಕೊರತೆಯಾದಾಗ ಜಯಲಲಿತಾ 4 ದಿನಗಳ ಉಪವಾಸ ಮಾಡಿ 6 ಟಿ.ಎಮ್.ಸಿ ನೀರು ಪಡೆಯಲು ಯಶಸ್ವಿಯಾದರು.

ಇಲ್ಲಿ ತಮಿಳುನಾಡು ಸರ್ಕಾರ ತನ್ನ ನೀರಾವರಿ ಪ್ರದೇಶ ಹೆಚ್ಚಿಸಿಕೊಳ್ಳುತ್ತಾ ಹೋಗುತ್ತದೆ. ಮತ್ತೇ 1996ರಲ್ಲಿ 30 ಟಿ.ಎಮ್.ಸಿ. ಬೇಡಿಕೆ ಇಟ್ಟ ತಮಿಳುನಾಡು, ಕೇಂದ್ರದ ಮೊರೆ ಹೋಗಿ, 6 ಟಿ.ಎಮ್.ಸಿ. ಪಡೆಯಿತು.

1997ರಲ್ಲಿ ಕರುಣಾನಿಧಿ ಶೇ.33ರ ಬದಲು ಶೇ.50 ನೀರು ಬೇಕೆಂದು ನ್ಯಾಯಾಲಯದ ಮೊರೆ ಹೋದರು. 1990ರಲ್ಲಿ ನರಸಿಂಹರಾವ್ ಸರ್ಕಾರ ಕಾವೇರಿ ನ್ಯಾಯ ಮಂಡಳಿಯ ರಚನೆ ಮಾಡಿತು. ಇಂದಿಗೂ ಕಗ್ಗಂಟಾಗಿ ಉಳಿದಿದೆ.

**ಕೃಷ್ಣಾ ನದಿ ನೀರು ಹಂಚಿಕೆ ವಿವಾದ:**

ಕೃಷ್ಣಾ ನದಿಯು ಮಹಾರಾಷ್ಟ್ರದ ಪೂನಾ ಬಳಿಯ ಮಹಾಬಲೇಶ್ವರದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಗುಂಟೂರು ಬಳಿ ಸೇರುತ್ತದೆ. ಒಟ್ಟು ಸುಮಾರು 1300 ಕಿ.ಮೀ. ಉದ್ದದ ನದಿಯು, 300 ಕಿ.ಮೀ. ಮಹಾರಾಷ್ಟ್ರದಲ್ಲಿ, 480 ಕಿ.ಮೀ. ಕರ್ನಾಟಕದಲ್ಲಿ, 520 ಕಿ.ಮೀ. ಆಂಧ್ರದಲ್ಲಿ ಹರಿಯುತ್ತದೆ. ಈ ನದಿ ನೀರು ಬಳಕೆಗಾಗಿ 1956ರಲ್ಲಿ ಆಂಧ್ರ ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ನಡುವೆ ನದಿ ನೀರಿನ ಕಾಯ್ದೆ ರೂಪಿಸಲಾಗಿತ್ತು.

1969ರಲ್ಲಿ ಕರ್ನಾಟಕ ಸರ್ಕಾರ ಬಿಜಾಪುರದ ಆಲಮಟ್ಟಿ ಬಳಿ ನಿರ್ಮಿಸಲು ಮುಂದಾದಾಗ ನ್ಯಾಯಮೂರ್ತಿ ಆರ್.ಎಸ್.ಬಚಾವತ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಅಣೆಕಟ್ಟು ನಿರ್ಮಿಸಲು ಮುಂದಾದಾಗ, ಈ ಕೆಳಗಿನ ನೀರು ಹಂಚಿಕೆ ನಿರ್ಧರಿಸಲಾಯಿತು.

1) ಮಹಾರಾಷ್ಟ್ರಕ್ಕೆ – 560

2) ಕರ್ನಾಟಕಕ್ಕೆ – 700

3) ಆಂಧ್ರಪ್ರದೇಶ – 800

ನಂತರ ಕರ್ನಾಟಕ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 580ಕ್ಕೆ ಎತ್ತರಿಸಲು ಕೇಳಿಕೊಮಡಿತು. ಆಗ ಆಂಧ್ರ 512 ಅಡಿ ಮೀರಬಾರದೆಂದು ವಾದ ಮಂಡಿಸಿತು. ಆದರೂ ಪ್ರಸ್ತುತ 519 ಮೀಟರ್‌ನಿಂದ 524.7 ಮೀ. ಎತ್ತರಿಸಲು ಅವಕಾಶ ನೀಡಲಾಗಿದೆ.

ಒಟ್ಟಾರೆಯಾಗಿ ಈ ಅನ್ಯಾಯವನ್ನು ತಪ್ಪಿಸಲು 3 ರಾಜ್ಯಗಳ ನೀರು ಶೇಖರಣೆಗೆ ಅಗತ್ಯವಾದ ಎತ್ತರಕ್ಕೆ ಅವರವರ ರಾಜ್ಯಗಳಲ್ಲಿ ಅಣೆಕಟ್ಟು ನಿರ್ಮಿಸಿಕೊಳ್ಳುವುದು ಪರಿಹಾರವಾಗಿದೆ.

## ಕರ್ನಾಟಕದಲ್ಲಿ ರೈತ ಚಳುವಳಿಗಳು:

ಕರ್ನಾಟಕದಲ್ಲಿ ಕಂಡ ಹಲವಾರು ಚಳುವಳಿಗಳಲ್ಲಿ ರೈತ ಚಳುವಳಿಯು ಬಹುದೊಡ್ಡದಾದ ಚಳುವಳಿಯಾಯಿತು. ರೈತರ ಬೇಡಿಕೆಗಳಿಗಾಗಿ ಹಲವಾರು ಚಳುವಳಿ ನಡೆದವು. ಚಿಕ್ಕದೇವರಾಯ ಒಡೆಯರವರ ಕಾಲದಿಂದ, ಇವು ಸ್ವಾತಂತ್ರ್ಯ ನಂತರ ನಿರ್ದಿಷ್ಟವಾದ ರೂಪರೇಷೆಗಳೊಂದಿಗೆ ಹೋರಾಟ ನಡೆಸಿದವು.

**ರೈತರ ದಂಗೆ / ಚಳುವಳಿಗೆ ಕಾರಣಗಳು:**

1) ಅಧಿಕ ತೆರಿಗೆ.

2) ಅತೀವೃಷ್ಟಿ ಅನಾವೃಷ್ಟಿಗಳಿಂದಾಗಬಹುದಾದ ಬೆಳೆ ನಷ್ಟ.

3) ಪ್ರಕೃತಿ ವಿಕೋಪದ ಸಮಯದಲ್ಲಿ ತೆರಿಗೆ ಮಾನ್ಯ ಮಾಡದಿರುವುದು.

4) ತೆರಿಗೆ ಕಂದಾಯದಲ್ಲಿ ತೆರಿಗೆ ಮಾನ್ಯ ಮಾಡದಿರುವುದು.

5) ಬೆಂಬಲ ಬೆಲೆ ಮತ್ತು ಕನಿಷ್ಠ ಬೆಲೆ ನಿಗದಿಗಾಗಿ.

6) ಅಭಿವೃದ್ಧಿ ತೆರಿಗೆ.

7) ಗೇಣಿ ರದ್ದತಿ, ನದಿ ನೀರು ಹಂಚಿಕೆ ಇತ್ಯಾದಿ.

**ಪ್ರಮುಖ ಚಳುವಳಿಗಳು:**

**1) ಕಾಗೋಡು ರೈತ ಚಳುವಳಿ (1950):**

ಶಾಂತವೇರಿ ಗೋಪಾಲಗೌಡರ ನೇತೃತ್ವದಲ್ಲಿ ಗೇಣಿ ರಸೀದಿ ಕೊಡದಿರುವುದಕ್ಕೆ ಬಂಡಾಯ ಕಾಣಿಸಿತು. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನಲ್ಲಿ ನಡೆದಂತಹ ಕಾಗೋಡು ರೈತ ಸತ್ಯಾಗ್ರಹ ರಾಜ್ಯದ ರೈತರಲ್ಲಿ ಜಾಗೃತಿ ಉಂಟು ಮಾಡುವ ಪ್ರಥಮ ಹೆಜ್ಜೆಯಾಯಿತು. ಇಲ್ಲಿ ಗೇಣಿದಾರರು ಭೂ ಮಾಲಿಕರಿಗೆ 52% ಉತ್ಪಾದನೆ ನೀಡಿ, 15% ಮಾತ್ರ ಇಟ್ಟುಕೊಳ್ಳಬೇಕಾಗಿತ್ತು. ಈ ಶೋಷಣೆಯಿಂದ ಮುಕ್ತರಾಗಲು ಹಾಗೂ ಊಳುವವನಿಗೆ ಭೂಮಿ ಎಂಬ ನೀತಿ ಜಾರಿಗೆ ತರಿಸಲು ಹೋರಾಡಿದರು.

ಇಲ್ಲಿ ಅಖಿಲ ಭಾರತ ಸಮಾಜವಾದಿ ಪಕ್ಷದ ನಾಯಕ ರಾಮ ಮನೋಹರ ಲೋಹಿಯಾ ಬಂದು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

**ಧಾರವಾಡ ಜಿಲ್ಲೆಯ ರೈತ ಚಳುವಳಿ (1972):**

ಈ ಚಳುವಳಿಯ 2 ಪ್ರಮುಖ ಬೇಡಿಕೆಗಳು,

1) ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಲೆ ನಿಗದಿ.

2) ರಾಜ್ಯಾದ್ಯಂತ ನ್ಯಾಯಬೆಲೆ ಅಂಗಡಿ ತೆರೆಯಬೇಕು. ಆದರೆ ರೈತರಿಗೆ ಈ ಕಮ್ಯುನಿಷ್ಟ್ ಪಕ್ಷದ ಮೇಲೆ ನಂಬಿಕೆ ಬರದೆ ಈ ರೈತ ಚಳುವಳಿಯು ವಿಫಲವಾಯಿತು.

**ವರುಣ ನಾಲೆ ಚಳುವಳಿ: 1976**

ಮೈಸೂರು ಜಿಲ್ಲೆಯ ರೈತರ ಹಿತಕ್ಕಾಗಿ ದೇವರಾಜ ಅರಸ್‌ರವರು ಕಾವೇರಿ ನದಿಯ ವರುಣ ನಾಲೆ ಯೋಜನೆಯನ್ನು ಕೈಗೆತ್ತಿಕೊಂಡರು. ಆಗ ಮಂಡ್ಯ ರೈತರು ಕೆ.ವಿ.ಶಂಕರಗೌಡ ನೇತೃತ್ವದಲ್ಲಿ ಪ್ರತಿಭಟಿಸಿದರು. ಇದು ಮುಂದಿನ ರೈತ ಚಳುವಳಿಗೂ, ಜನತಾ ಪಕ್ಷದ ಉಗಮಕ್ಕೂ ಕಾರಣವಾಯಿತು.

**ಕರ್ನಾಟಕ ರಾಜ್ಯ ರೈತ ಸಂಘ (1980) ಬೆಂಗಳೂರು:**

ಪ್ರೊ.ನಂಜುಂಡಸ್ವಾಮಿ, ಎನ್.ಡಿ.ಸುಂದರ್, ರುದ್ರಪ್ಪ ಮುಂತಾದವರ ನಾಯಕತ್ವದಲ್ಲಿ 1980ರಂದು ಅಧಿಕೃತವಾಗಿ 'ರಾಜ್ಯ ರೈತ ಸಂಘ' ಸ್ಥಾಪಿತವಾಯಿತು.

**ಕಾರಣಗಳು:**

1) ನರಗುಂದ ರೋಣ, ಬೆಳಗಾವಿ, ಸವದತ್ತಿ ಇಲ್ಲಿ ನೀರಾವರಿ ನಾಲೆ ನಿರ್ಮಿಸಿ, ನೀರು ಹರಿಸದೇ ರೈತರ ಮೇಲೆ ಕರವನ್ನು ಹೇರಿದ್ದು.

2) 1980 ಜುಲೈ 21ರ ನರಗುಂದ ಗೋಲಿಬಾರ್ ದುರಂತ.

3) ಭದ್ರಾ ಸಕ್ಕರೆ ಕಾರ್ಖಾನೆ ಸಮಸ್ಯೆ.

**ನರಗುಂದ ಮತ್ತು ನವಲಗುಂದ ರೈತರ ಚಳುವಳಿ:**

ಮಲಪ್ರಭಾ ನದಿಗೆ ಸವದತ್ತಿ ಬಳಿ ಅಣೆಕಟ್ಟು ನಿರ್ಮಿಸಿ ರೈತರ ಮೇಲೆ ಅಭಿವೃದ್ಧಿ ಶುಲ್ಕ ಹೇರಿದ ಹಿನ್ನೆಲೆಯಲ್ಲಿ ಚಳುವಳಿ 10,000 ರೈತರು ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

**ಬೇಡಿಕೆಗಳು:**

1) ಮಾರುಕಟ್ಟೆಯಲ್ಲಿನ ದಲ್ಲಾಳಿಗಳ ನಿರ್ಮೂಲನೆ.

2) ರೈತರ ಹಳೆ ಸಾಲ ಮನ್ನಾ.

3) ಕೃಷಿ ಬೆಳೆಗೆ ಬೆಂಬಲ ಬೆಲೆ.

4) ಕನಿಷ್ಠ ವಿದ್ಯುತ್ ದರ.

ಇದರ ಪರಿಹಾರಕ್ಕಾಗಿ 'ಬಂಗಾರಪ್ಪಾ ಸಮಿತಿ' ರಚಿಸಲಾಗಿತ್ತು. ಇದರ ನಂತರ ಶಿವಮೊಗ್ಗ, ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲಿ ಚಳುವಳಿಗಳು ನಡೆದು ರೈತರ ಹಕ್ಕುಗಳಿಗಾಗಿ ಹೋರಾಟ ಮುಂದುವರೆಯುತ್ತಾ ಬಂದಿದೆ. ಆದರೆ ಯಾವುದೇ ಬೇಡಿಕೆಗಳು ಪೂರ್ಣವಾಗಿ ಈಡೇರದೇ ಗೊಂದಲ ಮುಂದುವರೆದಿದೆ.

**ಪ್ರಾದೇಶಿಕ ಅಸಮತೋಲನ ಹಾಗೂ ನಂಜುಂಡಪ್ಪ ಸಮಿತಿ ವರದಿ: ಭಾರತದ ಆರ್ಥಿಕತೆ ಭಾಗವನ್ನು ಓದಿರಿ.**

# ಸಾಮಾಜಿಕ ಬದಲಾವಣೆ ಹಾಗೂ ಚಳುವಳಿಗಳು

## ಸಾಮಾಜಿಕ ಬದಲಾವಣೆ ಮತ್ತು ಸಿದ್ಧಾಂತಗಳು:

ಬದಲಾವಣೆ ಪರಿವರ್ತನೆಯ ಪ್ರಕೃತಿಯ ನಿಯಮ. ಅದೊಂದು ಸ್ವಾಭಾವಿಕ ಪ್ರಕ್ರಿಯೆ. ಈ ದಿನ ಏನಿದೆಯೋ ಅದು ನಾಳೆ ಪರಿವರ್ತನೆಗೆ ಒಳಗಾಗುತ್ತದೆ. ಒಂದಷ್ಟು ಕಾಲಾವಧಿ ಅಂತಯರದ ವೀಕ್ಷಣೆಯಲ್ಲಿ ಕಂಡುಬರುವ ವ್ಯತ್ಯಾಸವೇ ಪರಿವರ್ತನೆ.

**ಸಾಮಾಜಿಕ ಬದಲಾವಣೆಯ ಅರ್ಥ:**

ಸಮಾಜ ವ್ಯವಸ್ಥೆಯಲ್ಲಿ ನಿಗದಿತವಾದ ಕಾಲಾವಧಿಯಲ್ಲಿ ಗೋಚರಿಸಬಹುದಾದ ಯಾವುದೇ ವ್ಯತ್ಯಾಸವನ್ನು ಸಾಮಾಜಿಕ ಬದಲಾವಣೆ ಎನ್ನುತ್ತಾರೆ.

ಸ್ಯಾಮ್ಯುಯೆಲ್ ಕ್ಯುಯನಿಗ್ ಪ್ರಕಾರ, ಜನರ ಜೀವನದ ನಮೂನೆಗಳಲ್ಲಿ ಸಂಭವಿಸುವಂತಹ ಮಾರ್ಪಾಟುಗಳನ್ನು ಸಾಮಾಜಿಕ ಬದಲಾವಣೆ ಎನ್ನುತ್ತಾರೆ.

ಸಾಮಾಜಿಕ ಬದಲಾವಣೆಯ ವೈವಿಧ್ಯಮಯವಾಗಿದ್ದು, ಹಲವಾರು ರೂಪಗಳಲ್ಲಿ ಅಭಿವ್ಯಕ್ತವಾಗುತ್ತದೆ. ಸಾಮಾಜಿಕ ಪರಿವರ್ತನೆಯಲ್ಲಿ ಹಲವಾರು ವಿಧಗಳು. ಮುಖ್ಯವಾದವುಗಳೆಂದರೆ,

1) ಸಾಮಾಜಿಕ ವಿಶ್ವಾಸ.

2) ಸಾಮಾಜಿಕ ಪ್ರಗತಿ.

3) ಸಾಮಾಜಿಕ ಬೆಳವಣಿಗೆ.

4) ಸಾಮಾಜಿಕ ಅಭಿವೃದ್ಧಿ.

5) ಸಾಮಾಜಿಕ ಶಾಂತಿ.

6) ಸಾಮಾಜಿಕ ಹೊಂದಾಣಿಕೆ.

**ಸಾಮಾಜಿಕ ಬದಲಾವಣೆಯ ಸ್ವರೂಪ ಹಾಗೂ ಲಕ್ಷಣಗಳು:**

ಸಾಮಾಜಿಕ ಬದಲಾವಣೆ ಎಂಬುದು ನಿರಂತರವಾಗಿದ್ದು, ಸತತವಾಗಿ ಆಗುತ್ತಲೇ ಇದ್ದು, ಎಲ್ಲಾ ಕಾಲ ಸಮಾಜ ದೇಶಭೇದವಿಲ್ಲದೇ ನಡೆಯುವಂತಹುದು. ಹಾಗಾಗಿ ಇದರ ಲಕ್ಷಣಗಳನ್ನು ನೋಡುವುದಾದರೆ,

1) ಸಾಮಾಜಿಕ ಪರಿವರ್ತನೆಯು ನಿರಂತರವಾದುದು.

2) ಸಾರ್ವತ್ರಿಕವಾದುದು.

3) ಇದು ಸಮಯಾಧಾರಿತವಾದುದು.

4) ಇದೊಂದು ಮಾನವ ಪರಿವರ್ತನೆ.

5) ಸಾಮಾಜಿಕ ಪರಿವರ್ತನೆಯ ರೂಪ ಮತ್ತು ಗತಿ ಒಂದೇ ರೀತಿಯಿರುವುದಿಲ್ಲ.

6) ಇದರ ಬಗ್ಗೆ ಭವಿಷ್ಯ ನುಡಿಯುವುದು ಸಾಧ್ಯವಿಲ್ಲ.

8) ಇಲ್ಲಿ ನಿಯೋಜಿತ ಮತ್ತು ಅನಿಯೋಜಿತ ಪರಿವರ್ತನೆಗಳಿರುತ್ತವೆ. (ಕುಟುಂಬ ಯೋಜನೆ).

9) ಇದೊಂದು ವಸ್ತುನಿಷ್ಠ ಕಲೆಯಾಗಿದೆ.

10) ಪುನರಾವರ್ತಿತ ಮತ್ತು ದೀರ್ಘಾವಧಿಯ ಪರಿವರ್ತನೆಗಳಿವೆ.

ಒಳ್ಳೆಯ ನಿಟ್ಟಿನಲ್ಲಿ ಸಾಗುತ್ತಾ ಹೋಗುವಂತಹ ಸಾಮಾಜಿಕ ಬದಲಾವಣೆಯನ್ನು ಸಾಮಾಜಿಕ ಪ್ರಗತಿ ಎನ್ನುತ್ತಾರೆ.

ಹರ್ಬರ್ಟ್ ಸ್ಪೆನ್ಸರ್ ಪ್ರಕಾರ ಸಾಮಾಜಿಕವಾಗಿ ರಾಜ್ಯವು 3 ಹಂತಗಳಲ್ಲಿ ವಿಕಾಸ ಹೊಂದುತ್ತದೆ.

1) ಹೋರಾಡುವ ಸ್ವಭಾವದ ಸಮಾಜ.

2) ಕೈಗಾರಿಕಾ ಸಮಾಜ.

3) ನೈತಿಕ ಸಮಾಜ.

**ಸಾಮಾಜಿಕ ಬದಲಾವಣೆಯ ಅಂಶಗಳು:**

ಸಾಮಾಜಿಕ ಪರಿವರ್ತನೆಯ ಎಲ್ಲಾ ಸಮಾಜಗಳಲ್ಲಿಯೂ ಮತ್ತು ಎಲ್ಲಾ ಕಾಲಗಳಲ್ಲಿಯೂ ಸಂಭವಿಸುತ್ತದೆ. ಆದರೆ ಸಮಾಜದಿಂದ ಸಮಾಜಕ್ಕೆ ಇದರಿಂದ ವ್ಯತ್ಯಾಸವಿರುತ್ತದೆ. ಒಂದು ತೀವ್ರಗತಿ ಇದ್ದರೆ ಮತ್ತೊಂದು ಮಂದಗತಿ ಇರುತ್ತದೆ.

**ಸಾಮಾಜಿಕ ಬದಲಾವಣೆ ಅಂಶಗಳೆಂದರೆ,**

1) ಜೈವಿಕ ಅಂಶ

2) ಭೌಗೋಳಿಕ ಅಂಶ

3) ತಾಂತ್ರಿಕ ಅಂಶ.

**1) ಜೈವಿಕ ಅಂಶ:**

ಜನಸಾಂದ್ರತೆ, ಜನಾಂಗ, ಅನುವಂಶೀಯತೆ, ಜನನ ಪ್ರಮಾಣ, ಸ್ತ್ರೀಯರ ಫಲವತ್ತತೆ, ಲೈಂಗಿಕ ಸಂಬಂಧ. ಇಲ್ಲಿ ಕೆಲವೊಮ್ಮೆ ಬ್ರಹ್ಮಚರ್ಯ, ಶಿಶುಹತ್ಯೆ, ವಿಳಂಬ ವಿವಾಹ, ಗರ್ಭಪಾತದಿಂದ ಕಡಿಮೆ ಜನಸಂಖ್ಯೆ ಇರಬಹುದು.

**2) ಭೌಗೋಳಿಕ ಅಂಶ:**

ಭೌಗೋಳಿಕ ಅಂಶಗಳು ಜನರ ಜೀವನದ ಮೇಲೆ ಪ್ರಭಾವವನ್ನು ಬೀರುತ್ತವೆ. ಪ್ರಕೃತಿ ಸಂಪತ್ತಿನ ವಿತರಣೆಯಲ್ಲಿ ವ್ಯತ್ಯಾಸವಿದ್ದರೆ ಜನರ ಸಂಪ್ರದಾಯ ನೀತಿ ನಿಯಮ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿ ವ್ಯತ್ಯಾಸವಿರುವುದು ಕಂಡುಬರುತ್ತದೆ.

ಉದಾ: ಬಯಲುಸೀಮೆ ಜನ ಬೆಟ್ಟಗುಡ್ಡ ಪ್ರದೇಶದ ಜನ (ಭೂಮಿ, ಗಾಳಿ, ನದಿ).

**3) ಸಾಂಸ್ಕೃತಿಕ ಮತ್ತು ತಾಂತ್ರಿಕ ಅಂಶ:**

ನೈತಿಕ, ಧರ್ಮ, ಶಿಕ್ಷಣ, ಕಲೆ, ಸಾಹಿತ್ಯ ಮೊದಲಾದ ಸಾಂಸ್ಕೃತಿಕ ಅಂಶಗಳು ಮುಖ್ಯವಾದ ಸಾಮಾಜಿಕ ಬದಲಾವಣೆಯ ಚಳುವಳಿಗಳಾಗಿವೆ.

ಉದಾ: ವಿಚಾರಧಾರೆ, ಗಾಂಧಿ ನೀತಿ, ಹಿಂದೂ, ಬೌದ್ಧಧರ್ಮ.

ಉತ್ಪಾದನಾ ತಾಂತ್ರಿಕತೆ ಸಮಾಚಾರದ ತಾಂತ್ರಿಕತೆ ಕೈಗಾರಿಕಿಕರಣ, ನಗರೀಕರಣ ಮುಂತಾದವು ಸಾಮಾಜಿಕ ಬದಲಾವಣೆಯ ಅಂಶಗಳಾಗಿವೆ.

**ಸಾಮಾಜಿಕ ಪರಿವರ್ತನೆಗೆ ಪ್ರತಿರೋಧಕಗಳು:**

ಸಾಮಾನ್ಯವಾಗಿ ಸಾಮಾಜಿಕ ಪರಿವರ್ತನೆಗೆ ಅಡೆತಡೆ ಉಂಟಾಗುವುದನ್ನು ಸಾಮಾಜಿಕ ಪರಿವರ್ತನೆಗೆ ಪ್ರತಿರೋಧ ಎಂದು ಕರೆಯುತ್ತೇವೆ. ಈ ರೀತಿಯ ಪ್ರತಿರೋಧಕ್ಕೆ ಕಾರಣಗಳೆಂದರೆ,

1) ಹೊಸ ಅವಿಷ್ಕಾರ ಸಂಶೋಧನೆಗಳ ಕೊರತೆ

2) ಜನರ ಅಜ್ಞಾನ

3) ವಿವೇಚನೆ ಇಲ್ಲದ ಅಭ್ಯಾಸ

4) ಪರಂಪರೆ

5) ಪಟ್ಟಭದ್ರ ಹಿತಾಸಕ್ತಿಗಳು

6) ಹೊಸ ಸಂಶೋಧನೆಗಳ ಅಪರಿಪಕ್ವತೆ

7) ಹೊಸ ಸಂಶೋಧನೆಗಳ ನಿರಾಕರಣೆ

8) ಹೊಸದರ ಬಗೆಗಿನ ಭಯ

9) ಆರ್ಥಿಕ ಅಸಮಾನತೆ

10) ಬೌದ್ಧಿಕ ಆಲಸ್ಯ

ಮುಂತಾದವುಗಳು ಸಾಮಾಜಿಕ ಪರಿವರ್ತನೆ ಬದಲಾವಣೆಗೆ ಅಡ್ಡಿಯಾಗಿವೆ.

**ಸಾಮಾಜಿಕ ಬದಲಾವಣೆಯ ಸಿದ್ಧಾಂತಗಳು:**

ಸಾಮಾಜಿಕ ಬದಲಾವಣೆ ಕುರಿತಂತೆ ಹಲವಾರು ಸಿದ್ಧಾಂತಗಳಿದ್ದು, ಪ್ರಮುಖವಾದ ಸಿದ್ಧಾಂತಗಳನ್ನು ನೋಡುವುದಾದರೆ,

1) ಕಾರ್ಲ್‌ಮಾರ್ಕ್ಸ್‌ರವರ ಸಾಮಾಜಿಕ ಪರಿವರ್ತನಾ ಸಿದ್ಧಾಂತ.

2) ಪಿಟ್ರಿಮ್ ಸೋರೋಶಿನರವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಿದ್ಧಾಂತ.

**1) ಕಾರ್ಲ್‌ಮಾರ್ಕ್ಸ್‌ರವರ ಸಾಮಾಜಿಕ ಪರಿವರ್ತನಾ ಸಿದ್ಧಾಂತ:**

ಕಾರ್ಲ್‌ಮಾರ್ಕ್ಸ್‌ರವರು ಸಾಮಾಜಿಕ ಬದಲಾವಣೆ ಸಿದ್ಧಾಂತದ ಸಾಮಾಜಿಕ ಪರಿವರ್ತನಾ ವಿಶ್ಲೇಷಣೆಯನ್ನು ಪ್ರತಿಪಾದಿಸಿದರು.

ಇತಿಹಾಸದ ಚಾಲಕ ಬಲವು ಯಾವುದೋ ಒಂದು ಅಗೋಚರ ಶಕ್ತಿಯಲ್ಲಿ ಕಂಡುಬರುವುದಿಲ್ಲ. ಮಾನವರು ತಮ್ಮ ಭವಿಷ್ಯವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ಮಾನವರು ತಮ್ಮ ಇತಿಹಾಸದುದ್ದಕ್ಕೂ ಪ್ರಕೃತಿಯನ್ನು ತಮ್ಮ ಉದ್ದೇಶಗಳ ಸಾಧನೆಗೆ ಹೆಚ್ಚು ಹೆಚ್ಚು ಪರಿವರ್ತಿಸಿಕೊಳ್ಳುತ್ತಾ ಬಂದಿದ್ದಾರೆ. ಪ್ರಕೃತಿಯನ್ನು ಪರಿವರ್ತಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮಾನವರು ತಮ್ಮನ್ನು ತಾವೇ ಪರಿವರ್ತಿಸಿಕೊಂಡಿದ್ದಾರೆ.

ಪ್ರಕೃತಿಯ ಪರಿಸರಕ್ಕೆ ಹೇಗೋ ಹಾಗೆ ಹೊಂದಿಕೊಂಡು ಹೋಗುವ ಇತರೆ ಎಲ್ಲಾ ಪ್ರಾಣಿಗಳಿಗೆ ಪ್ರತಿಯಾಗಿ ಮಾನವನು ತನ್ನ ಸುತ್ತಲಿನ ಪರಿಸರದೊಡನೆ ಕ್ರಿಯಾಶೀಲವಾದ ಸಂಬಂಧವನ್ನು ಹೊಂದಿರುತ್ತಾನೆ. ಪರಿಸರವನ್ನು ಬಳಸಿ ಹಿತಸಾಧನೆಗೆ ಅವಶ್ಯಕ ಉಪಕರಣ ರೂಪಿಸುತ್ತಾನೆ. ವಾಸ್ತವಿಕವಾಗಿ ಬೌದ್ಧಿಕ ಜೀವನವನ್ನು ಉತ್ಪಾದಿಸಿ ತನ್ಮೂಲಕ ತಾವು ಇತರ ಪ್ರಾಣಿಗಳಿಗೆ ಭಿನ್ನವಾಗಿರುವವ ಎಂಬುದನ್ನು ಸಾಬೀತುಪಡಿಸಲು ಹವಣಿಸುತ್ತಾನೆ.

'ಮಾನವನು ತಾನು ದುಡಿಮೆಯ ಶ್ರಮದಿಂದಲೂ ಮತ್ತು ಹೊಸ ಜೀವಿಗಳಿಗೆ ಜನ್ಮ ಕೊಡುವುದರಿಂದಲೂ ಜೀವೋತ್ಪತ್ತಿ ಮಾಡುತ್ತಾನೆ. ಜೀವೋತ್ಪತ್ತಿ ಒಂದು ಅಸ್ವಾಭಾವಿಕವಾದುದರ ಮತ್ತೊಂದು ಬಗೆಯಲ್ಲಿ ಸಾಮಾಜಿಕ ಸಂಬಂಧದ ರೂಪ ಧರಿಸುತ್ತದೆ.'

ಇವರ ಸಿದ್ಧಾಂತದ ಪ್ರಕಾರ 'ಶೋಷಣೆಗೆ ಒಳಪಟ್ಟಿರುವ ಎಲ್ಲಾ ವರ್ಗಗಳೂ ಸಹ ಶೋಷಣೆಗೆ ಕಾರಣವಾಗಿರುವ ವರ್ಗದೊಡನೆ ಯಶಸ್ವಿ ಹೋರಾಟ ನಡೆಸುವ ಅವಕಾಶವನ್ನು ಹೊಂದಿರುವುದಿಲ್ಲ.'

ಇವರು ತಮ್ಮ ಸಿದ್ಧಾಂತದಲ್ಲಿ ಮನುಕುಲದ ಇತಿಹಾಸದಲ್ಲಿ ಪ್ರಾಚೀನ ಸಮತಾವಾದದ ಹಂತದ ನಂತರ ಉತ್ಪಾದನೆಯ 4 ಪ್ರಧಾನವಾದ ಅನುಕ್ರಮ ರೂಪಗಳಿರುವುವು ಎಂಬುದಾಗಿ ಭಾವಿಸಿದ್ದರು. ಅವುಗಳೆಂದರೆ,

1) ದ ಏಸಿಯಾಟಿಕ್

2) ಪುರಾತನ

3) ಊಳಿಗಮಾನ್ಯ

4) ಆಧುನಿಕ ಬಂಡವಾಳಶಾಹಿ

ಒಂದು ನವೀನ ಉತ್ಪಾದನಾ ತತ್ವವನ್ನು ಪ್ರತಿನಿಧಿಸುವ ಹೊಸವರ್ಗಗಳು ಪುರಾತನ ವ್ಯವಸ್ಥೆಯನ್ನು ಮುರಿದು ಹಾಕುತ್ತದೆ ಮತ್ತು ಇವು ಮುಂದಿನ ಪ್ರಗತಿಗೆ ಅವಶ್ಯಕವಾದ ಭೌತಿಕ ಪರಿಸ್ಥಿತಿ ನಿರ್ಮಿಸುತ್ತವೆ ಎಂಬುವುದು ಇವರ ಸಿದ್ಧಾಂತವಾದ.

**2) ಪ್ರಿಟಮ್ ಸೋರೋರೆನವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಲನೆ:**

ಸೋರೋರೆನವರು ತಮ್ಮ ಗ್ರಂಥವಾದಂತಹ 'ಸೋಷಿಯಲ್ ಅಂಡ್ ಕಲ್ಚರಲ್ ಡೈನಮಿಕ್'ನಲ್ಲಿ ಸಾಮಾಜಿಕ ಬದಲಾವಣಾ ಸಿದ್ಧಾಂತವನ್ನು ವಿಶ್ಲೇಷಿಸಿದ್ದಾರೆ.

ಇವರು ಮಾನವ ವಿಕಾಸದ ಏಕರೀತಿಯ ವಿವರಣೆಯನ್ನು ವಿರೋಧಿಸಿರುವರು. ಇವರು ಮಾನವನ ಸಂಸ್ಕೃತಿಯನ್ನು 3 ಪ್ರಮುಖವಾದ ವಿಭಾಗಗಳಾಗಿ ವರ್ಗೀಕರಿಸಿದ್ದಾರೆ.

1) ಆಧ್ಯಾತ್ಮಿಕ ಕಲ್ಪನೆಯಾದಂತ ಸಂಸ್ಕೃತಿ

2) ಇಂದ್ರಿಯಾನುಭವದಂತಹ ಸಂಸ್ಕೃತಿ

3) ಆದರ್ಶಾತ್ಮಕ ಸಂಸ್ಕೃತಿ

ಆಧ್ಯಾತ್ಮಿಕ ಕಲ್ಪನೆಯಾದಂತ ಸಂಸ್ಕೃತಿಯು ತಾರ್ಕಿಕ ತಿಳುವಳಿಕೆ ಮತ್ತು ಇಂದ್ರಿಯಾನುಭವಗಳು ನಿಲುಕದ ಬಗೆಯಾಗಿದೆ. ಈ ಬಗೆಯ ಸಂಸ್ಕೃತಿಯ ಪ್ರಕಾರ ಜ್ಞಾನ, ಧರ್ಮ, ಅಧಿಕ ಜ್ಞಾನ ಸಂಬಂಧಗಳು ಭಗವಂತನಿಂದಲೇ ನಿರ್ಧಾರವಾದವು. ಈ ಬಗೆಯ ಸಂಸ್ಕೃತಿಯನ್ನು ವೈಜ್ಞಾನಿಕವಾಗಿ ಅರ್ಥೈಸಲು ಸಾಧ್ಯವಿಲ್ಲ.

ಇಂದ್ರಿಯಾನುಭವಾಧಾರಿತ ಸಂಸ್ಕೃತಿಯು, ಇದು ಆಧ್ಯಾತ್ಮಿಕ ಕಲ್ಪನೆಯಾಧಾರಿತ ಸಂಸ್ಕೃತಿಗೆ ತದ್ವಿರುದ್ಧವಾಗಿದೆ. ಇದು ಪ್ರಾಯೋಗಿಕ ವಾಸ್ತಿವಿಕತೆಗೆ ಹೆಚ್ಚಿನ ಗಮನ ನೀಡುತ್ತಿದೆ. ಆದರ್ಶಾತ್ಮಕ ಸಂಸ್ಕೃತಿಯು ಆಧ್ಯಾತ್ಮಿಕ, ಇಂದ್ರಿಯಾನುಭವಾಧಾರಿತ ಸಂಸ್ಕೃತಿಯ ಮಿಶ್ರಣವಾಗಿದೆ.

ಇವರು ಸಾಮಾಜಿಕ ಬದಲಾವಣೆಗಾಗಿ ಸಾಮಾಜಿಕ ಸಂರಚನೆ ಸಿದ್ಧಾಂತ ಪ್ರತಿಪಾದಿಸಿದರು. ಇವರ ಪ್ರಕಾರ,

'ಸಾಮಾಜಿಕ ಸ್ತರವಿನ್ಯಾಸ ಸಾರ್ವತ್ರಿಕವಾದುದು. ಎಲ್ಲಾ ಸಮಾಜ, ಎಲ್ಲಾ ಕಾಲದಲ್ಲಿಯೂ ಕಂಡುಬರುವಂತದ್ದು. ಇದು ಮೇಲು ಕೀಳು ಭಾವನೆಯನ್ನು ಆಧರಿಸಿದ ಸ್ಥಾನಮಾನ ಹೊಂದಿದ ಜನರ ವಿಭಾಗಗಳನ್ನು ಉಂಟು ಮಾಡುತ್ತದೆ.

ಇವರ ಪ್ರಕಾರ ಸಾಮಾಜಿಕ ಸಂರಚನೆಯೆಂದರೆ, 'ಮಾನವ ಚಟುವಟಿಕೆಯ ವತಿಯಿಂದ ಯಾವುದೇ ಒಬ್ಬ ವ್ಯಕ್ತಿಯಿಲ್ಲದೆ, ಸಾಮಾಜಿಕ ವಸ್ತು ಇಲ್ಲದೆ ಮೌಲ್ಯವನ್ನು ಒಂದು ಸಾಮಾಜಿಕ ಸ್ಥಾನದಿಂದ ಮತ್ತೊಂದು ಸಾಮಾಜಿಕ ಸ್ಥಾನಕ್ಕೆ ಬದಲಾಯಿಸುವುದೇ ಸಾಮಾಜಿಕ ಸಂರಚನೆಯಾಗಿದೆ.' ಇಲ್ಲಿ ಇವರು 2 ಬಗೆಯಾದ ಸಾಮಜಿಕ ಚಲನಾ ವಿನ್ಯಾಸ ನೀಡಿದ್ದಾರೆ.

1) ಸಮಾಂತರ ಸಾಮಾಜಿಕ ಸಂರಚನೆ

2) ಲಂಬಾಂತರ ಸಾಮಾಜಿಕ ಸಂರಚನೆ

ಸಮಾನಾಂತರ ಸಾಮಾಜಿಕ ಸಂರಚನೆ ಎಂದರೆ, ಒಬ್ಬ ವ್ಯಕ್ತಿ ಒಂದು ಮಟ್ಟದ ಸಾಮಾಜಿಕ ಸಮೂಹದಿಂದ ಅದೇ ಮಟ್ಟದ ಮತ್ತೊಂದು ಸಾಮಾಜಿಕ ಸಮೂಹಕ್ಕೆ ವರ್ಗಾವಣೆ ಹೊಂದುವುದು.

ಉದಾ: ಒಂದು ಸಂಸ್ಥೆಯಲ್ಲಿ ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿದ್ದ ವ್ಯಕ್ತಿ ಮತ್ತೊಂದು ಸಂಸ್ಥೆಯಲ್ಲಿ ಅದೇ ಬಗೆಯ ಉಪನ್ಯಾಸಕನಾಗಿ ಅದೇ ಸಂಬಳ ಅಂತಸ್ತಿಗೆ ಸೇರುವುದು.

ಲಂಬಾಂತರ ಸಾಮಾಜಿಕ ಬದಲಾವಣೆ ಎಂದರೆ 'ಒಬ್ಬ ವ್ಯಕ್ತಿಯ ಕೆಳ ಅಂತಸ್ತು ಇಲ್ಲವೇ ಘನತೆ ಗೌರವದ ಒಮದು ಸಮೂಹದಿಂದ ಮೇಲಿನ ಅಂತಸ್ತಿನ ವರ್ಗಾವಣೆ ಹೊಂದುವುದೇ ಲಂಬಾಂತರ ಬದಲಾವಣೆ.'

ಉದಾ: ಉಪನ್ಯಾಸಕರು, ಪ್ರಾಧ್ಯಾಪಕರಾಗುವಿಕೆ.

## ಸಾಮಾಜಿಕ ಆಂದೋಲನಗಳು, ಚಳುವಳಿಗಳು ಮತ್ತು ಸಿದ್ಧಾಂತಗಳು:

ಮಾನವನ ವರ್ತನೆಯು ಬಹಳ ವಿಚಿತ್ರವಾದುದು. ಅವನು ಒಮ್ಮೇ ಹಳೆಯದರ ಪರವಾಗಿರುತ್ತಾನೆ. ಮತ್ತೊಮ್ಮೆ ಹೊಸದನ್ನು ಸಮರ್ಥನೆ ಮಾಡಲು ಮುಂದಾಗುತ್ತಾನೆ. ಇನ್ನೊಮ್ಮೆ ಹಳೆಯದರಲ್ಲಿ ಕೆಲವು ಅಂಶಗಳನ್ನು ಸಾಮೂಹಿಕವಾಗಿ ಮಾಡುತ್ತಾನೆ.

'ಹಾರ್ಟಾನ್ ಮತ್ತು ಹಂಟ'ರವರ ಪ್ರಕಾರ 'ಪರಿವರ್ತನೆಯೊಂದನ್ನು ತರುವ ಇಲ್ಲವೇ ಪ್ರತಿಭಟಿಸುವ ಸಾಮೂಹಿಕ ಪ್ರಯತ್ನವನ್ನು ಸಾಮಾಜಿಕ ಆಂದೋಲನ'ವೆಂದು ಕರೆಯುತ್ತೇವೆ.

ಸಾಮಾಜಿಕ ಆಂದೋಲನವು ಯಾವುದಾದರೂ ಒಂದು ಸಾಮಾಜಿಕ ಸಮೂಹದ ವತಿಯಿಂದ ನಡೆಯುವ ಹೋರಾಟ ಇಲ್ಲವೇ ಪ್ರತಿಭಟನೆ. ಈ ಬಗೆಯ ಹೋರಾಟದಲ್ಲಿ ಒಂದು ಗುರುತರವಾದ ಉದ್ದೇಶವಿದ್ದು ಇದರ ಈಡೇರಿಕೆಗೆ ನಿಗದಿತ ಸಮೂಹದ ಜನರು ನಿರಂತರವಾಗಿ ಪ್ರಯತ್ನಿಸುತ್ತಾರೆ.

**ಸಾಮಾಜಿಕ ಆಂದೋಲನದ ಲಕ್ಷಣಗಳು:**

ಎಂ.ಎಸ್.ರಾವ್‌ರವರು ತಮ್ಮ **'ಸೋಷಿಯಲ್ ಮೂಮೆಂಟ್ಸ್ ಆಫ್ ಇಂಡಿಯಾ'** ಕೃತಿಯಲ್ಲಿ ಸಾಮಾಜಿಕ ಆಂದೋಲನದ ಲಕ್ಷಣಗಳು ಈ ರೀತಿ ಗುರುತಿಸಿದ್ದಾರೆ.

1) ಸಾಮಾಜಿಕ ಆಂದೋಲನವು ಸಮೂಹ ವರ್ತನೆಯನ್ನು ಬಲಗೊಂಡಿರುತ್ತದೆ.

2) ಸಾಮಾನ್ಯವಾಗಿ ಇದು ಪರಿವರ್ತನೆಯೊಂದನ್ನು ತರುವುದಕ್ಕಾಗಿ ಉದ್ದೇಶಿಸಿರುತ್ತದೆ.

3) ಆಂದೋಲನಕ್ಕೆ ಹಿನ್ನೆಲೆಯಾಗಿ ಒಂದು ತತ್ವಾದರ್ಶವಿರುತ್ತದೆ.

4) ಸಂಘಟನಾತ್ಮಕ ಚೌಕಟ್ಟಿರುತ್ತದೆ.

5) ನಿರ್ದಿಷ್ಟ ವಿಧಾನ ತಂತ್ರ ಫಲಿತಾಂಶಗಳಿರುತ್ತದೆ.

6) ಶಾಂತಿಯುತ ಸಂಘಟನಾತ್ಮಕವಾಗಿರುತ್ತದೆ.

**ಸಾಮಾಜಿಕ ಆಂದೋಲನಗಳ ಆರಂಭ ಮತ್ತು ಬೆಳವಣಿಗೆಯ ಹಂತಗಳು:**

ಯಾವುದೇ ಸಾಮಾಜಿಕ ಆಂದೋಲನೆಯಾಗಲೀ ಅದು ಇದ್ದಕ್ಕಿದ್ದಂತೆಯೇ ರೂಪುಗೊಳ್ಳುವುದಿಲ್ಲ. ಅದಕ್ಕೆ ಒಂದಲ್ಲಾ ಒಂದು ಹಿನ್ನೆಲೆ ಇರುತ್ತದೆ. ಹರ್ಬರ್ಟ್ ಬೂಮ್ರವರು ಇದರಲ್ಲಿ 4 ಹಂತ ಗುರುತಿಸಿದ್ದಾರೆ.

1) ಪ್ರಾರಂಭಿಕ ಹಂತ: ಒಂದಷ್ಟು ಜನರು ಯಾವುದಾದರು ವಿಷಯದ ಬಗೆಗೆ ಅಂತಸ್ತು ಹೊಂದಿರುತ್ತಾರೆ. ಸಾಮೂಹಿಕವಾಗಿ ದನಿ ಎತ್ತಿದರೆ ಯಾರೊಬ್ಬರು ನಾಯಕತ್ವದಲ್ಲಿ ಹೋರಾಟ ಮಾಡಿದರೆ ಸೂಕ್ತ ಪರಿಹಾರ ಸಿಗಬಹುದೆಂದು ಭಾವನೆ ಉಂಟಾಗಿ ಆಂದೋಲನ ಪ್ರಾರಂಭಗೊಳ್ಳುತ್ತದೆ.

2) ಜನಪ್ರಿಯ ಹಂತ: ಇಲ್ಲಿ ಯಾವುದೇ ಮಹಾನ್ ನಾಯಕನ ಹೋರಾಟಗಾರನ ನೇತೃತ್ವದಲ್ಲಿ ಸಾಮಾಜಿಕ ಆಂದೋಲನ ದಿನೇ ದಿನೇ ಪ್ರಾಮುಖ್ಯತೆ ಪಡೆದು, ಸ್ಪಂದಿಸುವವರ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ.

3) ಔಪಚಾರಿಕ ಸಂಘಟನಾ ಹಂತ: ಇಲ್ಲಿ ಔಪಚಾರಿಕ ನೀತಿ ನಿಯಮಗಳ ಕಾರ್ಯ ನಡೆಯುತ್ತದೆ.

4) ಆಂದೋಲನದ ಸಾಂಸ್ಥಿಕರಣದ ಹಂತ: ಆಂದೋಲನವು ಯಶಸ್ವಿಯಾದಲ್ಲಿ ಅದು ಒಂದು ಶಾಶ್ವತ ಸಾಂಸ್ಥಿಕ ರೂಪ ಧರಿಸಿ ಸಮಾಜದ ನಿಯಮಗಳಿಗೆ ಬದ್ಧವಾಗಿರುತ್ತದೆ.

**ಸಾಮಾಜಿಕ ಆಂದೋಲನದ ಪ್ರಕಾರಗಳು:**

ಎಮ್.ಎಸ್. ರಾವ್ ಮತ್ತು ವಿಲಿಯಂ ಕಾರ್ನ್‌ಬ್ಲಮ್ ಪ್ರಕಾರ ಸಾಮಾಜಿಕ ಆಂದೋಲನದಲ್ಲಿ 3 ಪ್ರಕಾರಗಳಿವೆ.

1) ಕ್ರಾಂತಿಕಾರಕ ಆಂದೋಲನಗಳು: ಅಸ್ತಿತ್ವದಲ್ಲಿರುವ ವ್ಯವಸ್ಥೆಯು ಎಂದಿಗೂ ಸಮರ್ಪಕವಾಗಿ ಕಾರ್ಯನಿರ್ವಹಿಸಲಾರದ್ದರಿಂದ ಅದನ್ನು ಕಿತ್ತೆಸೆಯಬೇಕು ಎಂಬುದನ್ನು ಬಿಂಬಿಸುವ ಆಂದೋಲನಗಳು.

2) ಸುಧಾರಣಾತ್ಮಕ ಆಂದೋಲನಗಳು: ಸಮಾಜದ ಒಂದು ಇಲ್ಲವೇ ಕೆಲವೇ ಕ್ಷೇತ್ರಗಳಲ್ಲಿ ಸುಧಾರಣೆಯಾಗಬೇಕು ಎಂಬುದನ್ನು ಉದ್ದೇಶವಾಗಿಯುಳ್ಳ ಆಂದೋಲನಗಳು (ಬ್ರಹ್ಮ ಸಮಾಜ, ಆರ್ಯ ಸಮಾಜ).

3) ಪ್ರತಿಕ್ರಿಯಾತ್ಮಕ ಪುನರುಜ್ಜೀವನ ಆಂದೋಲನಗಳು: ಹೊಸ ಬಗೆಯ ಪರಿವರ್ತನೆಗಳಿಗೆ ವಿರುದ್ದವಾಗಿ ಪ್ರತಿಕ್ರಿಯಾತ್ಮಕವಾಗಿರುತ್ತವೆ. ಆ ಹಿಂದೆ ಇದ್ದ ಸ್ಥಿತಿ ಇಲ್ಲವೇ ವ್ಯವಸ್ಥೆಯೇ ಹೆಚ್ಚು ಸಮರ್ಪಕ ನ್ಯಾಯೋಚಿತ ಎಂದು ವಾದಿಸುವ ಆಂದೋಲನಗಳು ಇವಾಗಿವೆ. ಹೀಗೆ ಸಾಮಾಜಿಕ ಆಶಂದೋಲನವು ವಿವಿಧ ಪ್ರಕಾರ ಹೊಂದಿದೆ.

## ಸಾಮಾಜಿಕ ಅಭಿವೃದ್ಧಿ:

ಅಭಿವೃದ್ಧಿ ಎಂಬ ಪದವು ತುಂಬಾ ಅರ್ಥಪೂರ್ಣವಾದುದು. ಅದು ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ವ್ಯವಸ್ಥೆಗಳಲ್ಲಿ ಪರಿಣಾಮಾತ್ಮಕವಾದ ಹಾಗೂ ಗುಣಾತ್ಮಕವಾದ ಪರಿವರ್ತನೆ, ಬದಲಾವಣೆಯನ್ನುಂಟು ಮಾಡುವ ಚಟುವಟಿಕೆಗಳು.

ಅಭಿವೃದ್ಧಿಯ ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ನೋಟಗಳೆರಡನ್ನು ಒಳಗೊಂಡಿದೆ. ಇದು ಸಾಮಾಜಿಕ ಆರ್ಥಿಕ ರಾಜಕೀಯ ಸಾಂಸ್ಕೃತಿಕ ಮುಂತಾದ ಕ್ಷೇತ್ರದಲ್ಲಿ ಗುಣಾತ್ಮಕ ಬದಲಾವಣೆ ಸೂಚಿಸುತ್ತದೆ. ಇದೊಂದು ತಡೆರಹಿತ ಪ್ರಕ್ರಿಯೆ ಹಾಗೂ ಮುಗಿದ ಪ್ರಕ್ರಿಯೆಯಾಗಿದೆ.

ಅಭಿವೃದ್ಧಿಯು ಅಂತಿಮವಾಗಿ ಮಾನವನ ಅಭಿವೃದ್ಧಿಯನ್ನೇ ಸೂಚಿಸುತ್ತದೆ. ಶತಮಾನಗಳಿಂದ ಶೋಷಿತ ಗುಲಾಮತನದ ಬದುಕನ್ನು ಅನುಭವಿಸಿಕೊಂಡು ಬಂದಿರುವ ಸಾಮಾಜಿಕವಾಗಿ ಮೇಲೆರಲಾಗದ ಸ್ಥಿತಿ ಇರುವವರನ್ನು ಈ ಅಭಿವೃದ್ಧಿ ಪಥದಲ್ಲಿ ಮೇಲೆ ತರಬೇಕಾಗಿರುವುದೇ ಇದರ ಮೊದಲ ಹೆಜ್ಜೆ.

**ಅಭಿವೃದ್ಧಿ ಮೂಲಾಂಶಗಳು:**

ಒಂದು ಸಮಾಜದ ಭೌಗೋಳಿಕ ನೆಲೆ, ಸಂಸ್ಕೃತಿ ಮತ್ತು ಐತಿಹಾಸಿಕ ಹಂತ ಯಾವುದೇ ಇರಲಿ ಅಭಿವೃದ್ಧಿಯ ಮೂಲಭೂತ ಅಂಶಗಳು ಮೂರಿರುತ್ತವೆ.

1) ಜೀವನ ಸಂರಕ್ಷಣೆ

2) ಆತ್ಮ ಗೌರವ

3) ಸ್ವಾತಂತ್ರ್ಯ

**1) ಜೀವನ ಸಂರಕ್ಷಣೆ:**

ಸಂರಕ್ಷಣೆಯೆಂದರೆ ಅನಾಥರನ್ನು ಬದುಕಿಸುವುದು, ಉಡುಪು, ವಸತಿ, ಆರೋಗ್ಯ ಇವುಗಳಲ್ಲಿ ಯಾವುದೊಮದು ಇಲ್ಲವಾದರೂ ಅಥವಾ ಕೊರತೆಯಾದರೂ ಅದು ನಿಖರ ಅನಭಿವೃದ್ಧಿಯ ದ್ಯೋತಕವಾಗಿರುತ್ತದೆ. ಈ ಮೂಲಭೂತ ಅಗತ್ಯತೆಗಳನ್ನು ಪೂರೈಸುವುದು ಅತ್ಯಾವಶ್ಯಕ. ಇಲ್ಲಿ ಆರ್ಥಿಕ ಬೆಳವಣಿಗೆಯ ಅಭಿವೃದ್ಧಿ ಎಂದಾಗ ಕರೆಯಲ್ಪಡುವ ಜೀವನ ಸುಧಾರಣೆಯ ಗುಣಮಟ್ಟದ ಅತ್ಯವಶ್ಯಕ ಪರಿಸ್ಥಿತಿ.

**2) ಆತ್ಮ ಗೌರವ:**

ಪ್ರತಿಯೊಬ್ಬ ವ್ಯಕ್ತಿ ಇಲ್ಲವೇ ಪ್ರತಿಯೊಂದು ರಾಷ್ಟ್ರವೂ ಸಹ ಆತ್ಮಗೌರವ, ಘನತೆ ಗೌರವಿಸುವುದು. ಇವುಗಳನ್ನು ಮೂಲಾಂಶಗಳಾಗಿ ಭಾವಿಸುವುದು. ಇವುಗಳಾವುವು ಇಲ್ಲವಾದರೆ ಅದು ಅನಭಿವೃದ್ಧಿಯ ದ್ಯೋತಕ.

**3) ಸ್ವಾತಂತ್ರ್ಯ:**

ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯ ಹೊಂದಿರುವುದು. ಸಾಮಾಜಿಕ ದಾಸ್ಯ, ಗುಲಾಮಗಿರಿಯಿಂದ ಸ್ವಾತಂತ್ರ್ಯವಾಗಿರುವುದನ್ನು ಸೂಚಿಸುತ್ತದೆ. ಸಮಾಜವು ಅಜ್ಞಾನ, ಮೂಢನಂಬಿಕೆ ಮುಂತಾದವುಗಳ ದಾಸ್ಯವಿಲ್ಲದಿದ್ದರೆ ಅಭಿವೃದ್ಧಿ ಸಾಧಿಸಿದೆ ಎಂದರ್ಥ. ಇವುಗಳಿಂದ ಬಿಡುಗಡೆಯ ಸ್ವಾತಂತ್ರ್ಯ ಅವಶ್ಯಕ.

ಸಾಮಾಜಿಕ ಅಭಿವೃದ್ಧಿಯನ್ನು ಪ್ರಚಲಿತವಾಗಿರುವ ಪ್ರಗತಿಪರ ಸಾಮಾಜಿಕ ಭಾವೈಕ್ಯತೆಯ ವತಿಯಿಂದ ಗೊತ್ತು ಮಾಡಲಾಗುತ್ತದೆ. ಸಮಾಜವು ವಿವಿಧ ಬಗೆಯ ಉಪಸಮೂಹಗಳಿಂದ ಛಿದ್ರವಾಗಿದ್ದರೆ ಅಲ್ಪಸಂಖ್ಯಾತರಿಗೆ ಕಿರುಕುಳ ನಿಡುತ್ತಿದ್ದರೆ, ಒಂದು ಭಾಗ ಮಾತ್ರ ಎಲ್ಲಾ ಅರ್ಹತೆ ಹೊಂದಿದ್ದರೆ ಅಭಿವೃದ್ಧಿ ಅಸಾಧ್ಯ. ಇಲ್ಲಿ ಸಾಮಾಜಿಕವಾದ ಸಮೈಕ್ಯತೆಯು ಅಭಿವೃದ್ಧಿಯ ಮಂತ್ರವಾಗಿರುತ್ತದೆ.

**ಅಭಿವೃದ್ಧಿಯ ಸೂಚಕಗಳು:**

ಅಭಿವೃದ್ಧಿ ಎಂಬುವುದು ನಿರೀಕ್ಷಿತ ಅರ್ಥಪೂರ್ಣ ಬದಲಾವಣೆ ತರುವ ಒಂದು ದೀರ್ಘಕಾಲಿಕ ಪ್ರಕ್ರಿಯೆಯಾಗಿದ್ದು, ಇದರ ಪ್ರಚಲಿತವಾಗಿರುವ ಮಾಪನದ ಪ್ರಮುಖವಾದ ಮಾನದಂಡಗಳೆಂದರೆ,

1) ರಾಷ್ಟ್ರೀಯ ಆದಾಯ

2) ನೈಜ ತಲಾ ಆದಾಯ

3) ಆರ್ಥಿಕ ಕಲ್ಯಾಣ ವಿಧಾನ

4) ಜೀವನಮಟ್ಟ ವಿಧಾನ

5) ಸಾಮಾಜಿಕ ಸೂಚಕಗಳು

**ಸಾಮಾಜಿಕ ಸೂಚಕಗಳನ್ನು ಮೂಲಭೂತ ಅವಶ್ಯಕತೆಗಳೆಂದು ಪರಿಗಣಿಸಿದ್ದಾರೆ.**

**ಮೂಲ ಅವಶ್ಯಕತೆ** **ಸೂಚಕ**

1) ಆರೋಗ್ಯ – ಜನನ ವೇಳೆಯಲ್ಲಿ ಜೀವನ ನಿರೀಕ್ಷೆ.

2) ಶಿಕ್ಷಣ – ಒಟಲ್ಲು ಜನಸಂಖ್ಯೆಯಲ್ಲಿ ಶೇಕಾಡಾವಾರು ಎಷ್ಟು ಪ್ರಾಥಮಿಕ ಶಾಲೆಗೆ ದಾಖಲಿಸಿದ್ದಾರೆ.

3) ಆಹಾರ – ಕ್ಯಾಲೊರಿ ಪ್ರಮಾಣ (ಪ್ರತಿಯೊಬ್ಬರು).

4) ನೀರು ಪೂರೈಕೆ – ಯೋಗ್ಯ ಕುಡಿಯುವ ನೀರು ಪಡೆಯುವವರ ಸಂಖ್ಯೆ.

5) ನೈರ್ಮಲ್ಯ – ಶುಚಿತ್ವ.

6) ಗೃಹ – ಮನೆ ನಿರ್ಮಾಣ.

ಹೀಗೆ ಸಾಮಾಜಿಕ ಸೂಚಕಗಳು ಕೂಡ ಅಭಿವೃದ್ಧಿಯ ಸಂಕೇತಗಳಾಗಿವೆ.

# ಸಾಮಾಜಿಕ ಬದಲಾವಣೆ ಹಾಗೂ ಆಧುನೀಕರಣ

## ವಿಘಟಿತ ಪಾತ್ರದ ಸಮಸ್ಯೆಗಳು:

ಸಮಾಜದಲ್ಲಿ ಸಮಸ್ಯೆಗಳು ಸರ್ವೇ ಸಾಮಾನ್ಯವಾದವುಗಳು. ಆದರೆ ಈ ಸಮಸ್ಯೆಗಳ ಪರಿಣಾಮವು ಘರ್ಷಣೆಯಾಗಿ ರೂಪುಗೊಂಡಿದ್ದಾದರೆ ಅದು ಸಾಮಾಜಿಕ ಅಶಾಂತಿಗೆ ಗುರಿಯಾಗುತ್ತದೆ. ಸಮಾಜವು ವೈವಿಧ್ಯತೆಯಿಂದ ಕೂಡಿರುತ್ತದೆ. ಅಲ್ಲಿ ಹಲವು ತಲೆಮಾರುಗಳ ಜನತೆ ಇರುತ್ತಾರೆ. ತಲಾತಲಾಂತರವಾಗಿ ಬಂದಂತಹ ಸಂಪ್ರದಾಯಗಳನ್ನು ಮುನ್ನಡೆಸಿಕೊಂಡು ಬಂದಂತಹ ಜನತೆಯು ಸಮಾಜದಲ್ಲಿ ಈಗಿನ ತಲೆಮಾರಿನ ನಡವಳಿಕೆಗೆ ಅಸಮಾಧಾನಗೊಳ್ಳುವುದು ಸಾಮಾನ್ಯವಾದುದೇ ಆಗಿದೆ. ಆದರೆ ಈ ಅಸಮಾಧಾನವು ಕೆಲವು ಸಲ ಘರ್ಷಣೆಗೆ ಕಾರಣವಾಗುತ್ತದೆ.

ವಿಘಟಿತ ಸಮಾಜದಲ್ಲಿ ಆಗುವಂಥಹ ಈ ರೀತಿಯ ಸಮಸ್ಯೆಗಳನ್ನು ನಿವಾರಿಸುವುದು ಸಮಾಜದ ಪ್ರತಿಯೊಬ್ಬ ಸದಸ್ಯನ ಕರ್ತವ್ಯವಾಗಿದೆ. ಅದೇ ಈ ಕುರಿತು ತೀವ್ರ ಕಾಳಜಿಯು ಕಂಡು ಬರುತ್ತಿಲ್ಲ.

## ತಲೆಮಾರುಗಳ ಒಳ ಅಂತರ:

ಜಗತ್ತಿನ ಪ್ರತಿಯೊಂದು ಸಮಾಜದಲ್ಲಿಯೂ ತಲೆಮಾರುಗಳು ಹುಟ್ಟುತ್ತವೆ. ಮತ್ತು ಅಂತರವೂ ಹುಟ್ಟುತ್ತವೆ. ಅದರಲ್ಲಿಯೂ ಭಾರತದಂತಹ ಅಭಿವೃದ್ದಿ ರಾಷ್ಟ್ರದಲ್ಲಿ ತಲೆಮಾರುಗಳ ನಡುವಿನ ಅಂತರ ವಿಪರೀತವಾಗಿ ಬೆಳೆದಿರುತ್ತದೆ. ಬದಲಾಗುತ್ತಿರುವ ಸಮಾಜದಲ್ಲಿ ಸಂಪ್ರದಾಯಗಳು, ನಡಾವಳಿಕೆಗಳು ಸಹ ಬದಲಾಗುತ್ತವೆ. ಈ ಬದಲಾವಣೆಗೆ ಜನತೆ ಒಗ್ಗಿಕೊಂಡರೆ ತಲೆಮಾರುಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಅದೇ ಹಳೆಯ ಜನತೆಯ ಆಚರಣೆಗಳನ್ನು ಆಧುನಿಕ ಜನತೆ / ಯುವ ಪೀಳಿಗೆ ನಿರ್ಲಕ್ಷಿಸಿದರೆ ಮತ್ತು ಆಧುನಿಕ ಪೀಳಿಗೆಯ ಆಧುನಿಕತೆಯ ಜೀವನಕ್ಕೆ ಹಳೆಯ ತಲೆಮಾರುಗಳು ವಿರೋಧಿಸಿದರೆ ಈ ರೀತಿಯ ಘರ್ಷಣೆಗಳು ಉಂಟಾಗುವುದು ಸಾಮಾನ್ಯವಾಗಿದೆ.

## ಯುವಕರಲ್ಲಿ ಅಶಾಂತಿ:

ಇಂದಿನ ಮಗು ನಾಳೆಯ ಪ್ರಜೆ ಎಂಬಂತೆ ಪ್ರತಿಯೊಂದು ದೇಶದ ಆಸ್ತಿ ಈ ಯುವಕರು. ಯುವ ಶಕ್ತಿಯ ಕುರಿತು ವಿವೇಕಾನಂದ ಸ್ವಾಮಿಗಳು ಅಪಾರವಾಗಿ ಹೇಳಿದ್ದಾರೆ. ಮತ್ತು ಯುವಕರನ್ನು ಸದಾ ಕಾರ್ಯ ಪ್ರವೃತ್ತರಾಗಿರುವಂತೆ ಪ್ರೇರೇಪಿಸಿದರು. ಅದರಂತೆ ಯುವ ಶಕ್ತಿಯನ್ನು ಪ್ರತಿಯೊಂದು ದೇಶಗಳು ಮನಗಾಣಬೇಕು. ಯುವಕರಲ್ಲಿಯ ಶಕ್ತಿಯನ್ನು ಅರಿತು ಅವರ ಮೂಲಕ ದೇಶವನ್ನು ಅಭಿವೃದ್ದಿಯತ್ತ ನಡೆಸಲು ಯೋಜನೆ ರೂಪಿಸಬೇಕು.

ಆದರೆ ಬಹಳಷ್ಟು ಸಮಯ ಈ ಯುವ ಶಕ್ತಿಯ ಕುರಿತು ನಿರ್ಲಕ್ಷ್ಯ ವಹಿಸಿ, ಇದು ಮುಂದೆ ಯುವ ಅಶಾಂತಿಗೆ ಕಾರಣವಾಗುವಂತಾಗುತ್ತದೆ. ಯುವ ಶಕ್ತಿಯನ್ನು ಸದ್ಬಳಕೆ ಮಾಡಲಾಗದೆ ಇರುವುದರಿಂದ ಈ ಯುವ ಅಶಾಂತಿಯ ಸಮಸ್ಯೆ ಉದ್ಭವವಾಗುತ್ತದೆ.

## ಯುವ ಅಶಾಂತಿಯ ರೂಪಗಳು:

ಸಮಾಜದಲ್ಲಿ ಯುವ ಅಶಾಂತಿಯು ಹಲವು ರೂಪಗಳಲ್ಲಿ ಪ್ರಕಟಗೊಳ್ಳುತ್ತದೆ. ಉದಾಹರಣೆಗೆ ಸಾಮಾಜಿಕ ನಿಯಮಗಳ ಉಲ್ಲಂಘನೆ, ತಂದೆ ತಾಯಿಯರನ್ನು ತುಚ್ಛೀಕರಿಸುವುದು, ಮಾದಕ ವಸ್ತುಗಳ ಸೇವನೆ, ಕಳ್ಳತನ, ಕೊಲೆಗಾರಿಕೆ, ಲೈಂಗಿಕ ಸ್ವೇಚ್ಛಾಚಾರ, ಧೂಮಪಾನ, ಮನೋವೈಕಲ್ಯ, ಸರ್ಕಾರದ ನಿಯಮಗಳ, ಯೋಜನೆಗಳ ಮತ್ತು ಸರ್ಕಾರಿ ಆಸ್ತಿಗಳ ನಾಶಪಡಿಸುವಿಕೆ ಮುಂತಾದವುಗಳು.

### ಯುವ ಅಶಾಂತಿಯಿಂದಾಗುವ ಪರಿಣಾಮಗಳು:

1) ಸಾಮಾಜಿಕ ಹಿಂದುಳಿಯುವಿಕೆ

2) ಸಾಮಾಜಿಕ ಅಶಾಂತಿ

3) ಪ್ರಗತಿಗೆ ಮಾರಕ

4) ಆರ್ಥಿಕ ಕೊರತೆ

**ಯುವ ಅಶಾಂತಿಗೆ ಕಾರಣಗಳು:**

1) ನಿರುದ್ಯೋಗ

2) ದೋಷಪೂರಿತ ಶಿಕ್ಷಣ

3) ಅಸಮಾನತೆ

4) ಅವಕಾಶ ವಂಚನೆ

5) ಭ್ರಷ್ಟಾಚಾರ

6) ದೋಷಪೂರಿತವಾದ ಪರಿಸರ

7) ವಿದ್ಯಾರ್ಥಿಗಳ ದುರ್ಬಳಕೆ

## ಮಹಿಳಾ ಸ್ಥಿತಿಗತಿಯ ಬದಲಾವಣೆಗಳು ಹಾಗೂ ಸಾಮಾಜಿಕ ಚಳುವಳಿಗಳು:

ಜೈವಿಕ ಆಧಾರದ ಮೇಲೆ ಲಿಂಗಭೇದದ ನೆಲೆಯಲ್ಲಿ ಮಾನವ ಜನಾಂಗವನ್ನು 'ಸ್ತ್ರೀಯರು ಮತ್ತು ಪುರುಷರು' ಎಂದು ವರ್ಗೀಕರಿಸಲಾಗಿದೆ. ಸ್ತ್ರಿ ಪುರುಷರು ಎಲ್ಲಾ ದೃಷ್ಟಿಗಳಿಂದಲೂ ಸರಿಸಮಾನರಾಗಿದ್ದ ನಿದರ್ಶನವು ಇತಿಹಾಸದಲ್ಲಿಲ್ಲ. ಪುರುಷರಿಗೆ ಸರಿಸಮಾನವಾಗಿ ಬಾಳಬೇಕೆಂಬ **'ತುಡಿತ'** ಹೊಂದಿದ ಸ್ತ್ರೀಯರು ಎಲ್ಲಾ ಕಾಲದಲ್ಲೂ ಇದ್ದಿರಬಹುದಾದರೂ ಅದನ್ನು ಕೈಗೂಡಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ.

ಇತಿಹಾಸದುದ್ದಕ್ಕೂ ಸ್ತ್ರೀ ಪುರುಷರ ನಡುವಿನ ಅಸಮಾನತೆ ಹರಿದು ಬಂದಿದ್ದು ಸ್ತ್ರೀಯರು ಒಂದು ಬಗೆಯ ಪರಾವಲಂಬನೆಯ ಹಾಗೂ ಪರಾಧೀನತೆಯ ಜೀವನ ನಡೆಸಿರುವುದನ್ನು ಗುರುತಿಸಬಹುದು. ಪುರುಷರಿಗೆ ಸಮಾನ ಸ್ಥಾನಮಾನ ಹಕ್ಕುಗಳನ್ನು ಹೊಂದಿಲ್ಲದಿದ್ದ ಅವರಿಗೆ ದ್ವಿತೀಯ ದರ್ಜೆ ಸ್ಥಾನವಿತ್ತು.

ಪ್ರಾಚೀನ ಭಾರತದಲ್ಲಿ ವೇದಕಾಲೀನ ಯುಗದ ಭಾರತೀಯ ಸ್ತ್ರೀಯರಿಗೆ ಸಂಪೂರ್ಣ ಸಮಾನತೆ ಇಲ್ಲದೇ ಹೋದರೂ, ಶಿಕ್ಷಣ, ಮತಧರ್ಮ, ವೇಷಭೂಷಣ, ವಿವಾಹ ವಿಷಯಗಳಲ್ಲಿ ಸ್ವತಂತ್ರ್ಯವಿದ್ದವು. ರಾಮಾಯಣ ಮಹಾಭಾರತ ಕಾಲದಲ್ಲೂ ಸ್ತ್ರೀಯರ ಸ್ಥಾನಮಾನ ಉತ್ತಮ ಮಟ್ಟದಲ್ಲಿತ್ತು. ವೇದಗಳ ಅಂತ್ಯ ಕಾಲದಲ್ಲಿ ಈ ಭಾವನೆಯ ಹಿಂದೆ ಸರಿಯತೊಡಗಿತು. ನಂತರ ಮಧ್ಯಯುಗೀಯ ಮುಸ್ಲಿಂ ಆಳ್ವಿಕೆಯಲ್ಲಿ ಇದು ಅಧೋಗತಿ ತಲುಪಿತು. ನಂತರ ಬ್ರಿಟೀಷರ ಅವಧಿಯಲ್ಲಿ ಇವು ಸ್ವಲ್ಪ ಮಟ್ಟಿಗೆ ಸುಧಾರಣೆ ಕಮಡವು. (ಕಾರಣ: ಸುಧಾರಕರ ಪ್ರಭಾವ, ಮಹಿಳಾ ಶಿಕ್ಷಣ ಶಾಸನಗಳು, ಮಹಿಳಾ ಸಂಘಗಳು) ಸ್ವತಂತ್ರ ಭಾರತದಲ್ಲಿ ನೋಡುವುದಾದರೆ,

## ಸ್ವಾತಂತ್ರ್ಯ ಭಾರತದಲ್ಲಿ ಮಹಿಳಾ ಸ್ಥಿತಿಗತಿಯಲ್ಲಿನ ಬದಲಾವಣೆಗಳು:

ಭಾರತವು ಸ್ವಾತಂತ್ರ್ಯವನ್ನು ಪಡೆದ ಮೇಲೆ ಸ್ತ್ರೀಯರ ಸ್ಥಾನಮಾನವನ್ನು ಹೆಚ್ಚಿಸುವ ಹಾಗೂ ಕಲ್ಯಾಣವನ್ನು ಸಾಧಿಸುವ ದೃಷ್ಟಿಯಿಂದ ಹಲವಾರು ಶಾಸನಾತ್ಮಕ ಶೈಕ್ಷಣಿಕ, ಆರ್ಥಿಕ ಮತ್ತಿತರ ಕ್ರಮಗಳನ್ನು ಕೈಗೊಳ್ಳಲಾಯಿತು. ಸ್ವತಂತ್ರ ಭಾರತದ ಸಂವಿಧಾನವು 1950 ಜನವರಿ 26ರಿಂದ ಜಾರಿಕೊಂಡ ಮೇಲೆ ಕಾನೂನಾತ್ಮಕವಾಗಿ ಸ್ತ್ರೀಯರು ಎಲ್ಲಾ ವಿಷಯಗಳಲ್ಲೂ ಪುರುಷರಿಗೆ ಸಮಾನವಾಗಿದ್ದಾರೆ. ಸಂವಿಧಾನದ 14 ಮತ್ತು 15ನೇ ವಿಧಿಗಳು ಸಮಾನತೆಯ ಹಕ್ಕನ್ನು ದೇಶೀಯ ಎಲ್ಲಾ ಪೌರರಿಗೆ ಯಾವುದೇ ಜಾತಿ ಮತ ಲಿಂಗ ಭೇದವಿಲ್ಲದೇ ಸಮಾನತೆಯನ್ನು ನೀಡಿದೆ.

**1) ಮಹಿಳೆಯರ ಸ್ಥಾನಮಾನಗಳನ್ನು ಎತ್ತರಿಸಲು ಕಾರಣವಾದ ಶಾಸನಗಳು;**

* ಹಿಂದೂ ವಿವಾಹ ಕಾಯ್ದೆ – 1955

* ಬಹುಪತ್ನಿತ್ವ ನಿಷೇಧ

* ಬಾಲ್ಯ ವಿವಾಹ ನಿಷೇಧ

* ವಿಚ್ಛೇದನದಲ್ಲಿ ಸ್ತ್ರೀಯರಿಗೂ ಸಮಾನ ಅವಕಾಶ

* ವಿಚ್ಛೇದನದ 1 ವರ್ಷದ ನಂತರ ಮರುವಿವಾಹ

* ಹಿಂದೂ ಉತ್ತರಾಧಿಕಾರ ಕಾಯ್ದೆ – 1956

ಶತಮಾನಗಳಿಂದ ನಿರಾಕರಿಸಲಾಗಿದ್ದ ಹಿಂದೂ ಉತ್ತರಾಧಿಕಾರ ಹಕ್ಕನ್ನು ನೀಡಿತು. ಹಿರಿಯನು ಸತ್ತ ಬಳಿಕ ಕುಟುಂಬದ ಪಿತ್ರಾರ್ಜಿತ ಆಸ್ತಿ ಆತನ ಮಗಳಿಗೂ ಉತ್ತರಾಧಿಕಾರಿಯಾಗಲು ಅವಕಾಶ ನೀಡಿತು.

* ಹಿಂದೂ ದತ್ತು ಮತ್ತು ಜೀವನಾಂಶ ಕಾಯಿದೆ–1956

ಅವಿವಾಹಿತ ಸ್ತ್ರೀ ವಿಧವೆ ಅಥವಾ ವಿಚ್ಛೇದನ ಹೊಂದಿದ ಸ್ತ್ರೀ 15 ವರ್ಷಕ್ಕೂ ಕಡಿಮೆ ವಯಸ್ಸಿನ ಮಗುವನ್ನು ದತ್ತು ಪಡೆಯಲು ಅವಕಾಶ. ಇದರ ಜೊತೆಗೆ ವಿವಾಹ ವಿಚ್ಛೇದನೆ ಪಡೆದಾಗ ಜೀವನಾಂಶವನ್ನು ಪಡೆಯಲು ಅರ್ಹಳು

* ವಿಶೇಷ ವಿವಾಹ ಕಾಯ್ದೆ – 1954

ವಿವಾಹ ವಯಸ್ಸು ಹುಡುಗರಿಗೆ 18, ಹೆಣ್ಣು ಮಕ್ಕಳಿಗೆ 15 ನಿಗದಿ.

* ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ

* ವಿವಾಹದ ನೋಂದಣಿಗೆ ಅವಕಾಶ

* ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯಾಪಾರ ಪ್ರತಿಬಂಧಕ ಕಾಯ್ದೆ – 1956

ಇದು ಹಣಕ್ಕಾಗಿ ಸ್ತ್ರೀಯರ ದೇಹವನ್ನು ಮಾರಿಕೊಳ್ಳುವುದನ್ನು ಹಣದಾಸೆಯಿಂದ ಮಹಿಳೆಯರನ್ನು ಒತ್ತಾಯಪೂರ್ವಕವಾಗಿ ವೇಶ್ಯಾವಾಟಿಕೆಗೆ ನೂಕುವುದನ್ನು ನಿಷೇಧಿಸಿತು.

* ವರದಕ್ಷಿಣೆ ನಿಷೇಧ ಕಾಯ್ದೆ – 1961

* ಇತರೆ ಶಾಸನಗಳು:

1) ಪ್ರಸೂತಿ ಸೌಲಭ್ಯ ಕಾಯಿದೆ – 1961

2) ಸಮಾನ ವೇತನ ಕಾಯ್ದೆ – 1976

3) ಕಾರ್ಖಾನೆ ಕಾಯೆ – 1976

4) ವಿವಾಹ ತಿದ್ದುಪಡಿ ಕಾಯ್ದೆ – 1976

5) ಬಾಲ್ಯ ವಿವಾಹ ನಿಷೇಧ ಕಾಯ್ದೆ – 1978

6) ಕ್ರಿಮಿನಲ್ ಕಾನೂನು ತಿದ್ದುಪಡಿ ಕಾಯ್ದೆ – 1983

7) ವೈದ್ಯಕೀಯ ಗರ್ಭ ನಿವಾರಣಾ ಕಾಯ್ದೆ – 1971

8) ಕುಟುಂಬ ನ್ಯಾಯಾಲಯ ಕಾಯ್ದೆ – 1984

**ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು:**

ಸ್ವಾತಂತ್ರ್ಯ ಭಾರತದ ಸಂವಿಧಾನವು ಸ್ತ್ರೀಯರಿಗೆ ರಾಜಕೀಯ ಸಮಾನತೆಯನ್ನು ನೀಡಿದೆ. ಇಂದು ಸ್ತ್ರೀಯರು ಸ್ಥಳೀಯವಾದ ಪುರಸಭೆ, ಗ್ರಾಮಪಂಚಾಯತ್, ಚುನಾವಣೆಯಿಂದ ಹಿಡಿದು ಲೋಕಸಭಾ ಚುನಾವಣೆಯವರೆಗೂ ಎಲ್ಲಾ ಮಟ್ಟದ ಹಾಗೂ ಹೆಚ್ಚು ಕಡಿಮೆ ಎಲ್ಲಾ ಕ್ಷೇತ್ರದ ಚುನಾವಣೆಗಳಲ್ಲಿ ಭಾಗವಹಿಸಿದ್ದಾರೆ. ರಾಜ್ಯಗಳ ಮುಖ್ಯಮಂತ್ರಿ ಸ್ಥಾನವಲ್ಲದೆ, ಪ್ರಧಾನಮಂತ್ರಿ ಸ್ಥಾನವನ್ನು ನಿರ್ವಹಿಸಿದ್ದಾರೆ. ಸಂವಿಧಾನದ 326ನೇ

ವಿಧಿಯು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಸ್ತ್ರೀ ಪುರುಷ ಭೇದವಿಲ್ಲದೇ ಅನುಷ್ಠಾನಕ್ಕೆ ತಂದಿರುವುದರಿಂದ ಹಾಗೂ 243ನೇ ವಿಧಿಯು ಹೆಣ್ಣು ಮಕ್ಕಳಿಗೂ ಪಂಚಾಯತ್ ಚುನಾವಣೆಯಲ್ಲಿ ಮೀಸಲಾತಿಗೆ ಅವಕಾಶ ಕಲ್ಪಿಸಿರುವುದರಿಂದ ಇವರ ನೈತಿಕ ಸ್ಥೈರ್ಯ ಹೆಚ್ಚಿದೆ.

## ಶೈಕ್ಷಣಿಕ ರಂಗದಲ್ಲಿ ಮಹಿಳೆಯರು:

1901ರಲ್ಲಿ ಶೇ.0.6 ಇದ್ದ ಮಹಿಳಾ ಸಾಕ್ಷರತಾ ಪ್ರಮಾಣ 1981ರ ಹೊತ್ತಿಗೆ 24.8 ತಲುಪಿರುವುದು ನೋಡಿದಾಗ ಹಾಗೂ ಪ್ರಸ್ತುತವಾದ ಶೇ.60ರಷ್ಟನ್ನು ದಾಟಿರುವುದು ಗಮನಿಸಿದಾಗ ಶೈಕ್ಷಣಿಕವಾಗಿ ಇವರ ಬೆಳವಣಿಗೆ ಗೋಚರಿಸುತ್ತದೆ. 1980ರ ನಂತರದ ಪರೀಕ್ಷೆಗಳಲ್ಲಿ ಗಂಡು ಮಕ್ಕಳಿಗಿಂತ, ಹೆಣ್ಣು ಮಕ್ಕಳೇ ಫಲಿತಾಂಶದ ಸಾಧನೆಯಲ್ಲಿ ಮುಂದೆ ಇರುವುದು ಕಂಡು ಬರುತ್ತಿದೆ. ಮಹಿಳೆಯರಿಗಾಗಿ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಿವೆ. ಉದಾ: ಮಹಿಳಾ ವಿ.ವಿ. ವಿಜಾಪುರ. ಇಲ್ಲಿ ಹೆಣ್ಣು ಮಕ್ಕಳನ್ನು ಶಿಕ್ಷಣದೆಡೆಗೆ ಆಕರ್ಷಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಉದಾ: ಶುಲ್ಕ ವಿನಾಯಿತಿ, ವಿದ್ಯಾರ್ಥಿ ವೇತನ. ಒಟ್ಟಾರೆಯಾಗಿ ಬುದ್ಧಿಶಕ್ತಿ ಎಂಬುವುದು ಪುರುಷರ ಏಕಸ್ವಾಮ್ಯದಲ್ಲಿ ಎಂಬುದು ಈ ಮೂಲಕ ದೃಢವಾಗುತ್ತಿದೆ.

## ಆರ್ಥಿಕ ಮತ್ತು ಉದ್ಯೋಗ ವಲಯಗಳಲ್ಲಿ ಸ್ತ್ರೀಯರು:

ಕೇವಲ ಒಂದು ಶತಮಾನದ ಹಿಂದೆ ಶಿಕ್ಷಣಕ್ಕಾಗಿ ಹೊಸ್ತಿಲು ದಾಟದ ಮಹಿಳೆ, ಆರ್ಥಿಕ ಲಾಭದ ದುಡಿಮೆಗಾಗಿ ಹೊರಗೆ ಹೋಗದ ಭಾರತೀಯ ಸ್ತ್ರೀಯರು ಇಂದು ಉದ್ಯೋಗ ರಂಗದ ವಿವಿಧ ಭಾಗಗಳಲ್ಲಿ ಇಲಾಖೆಗಳಲ್ಲಿ ಜವಾಬ್ದಾರಿಯುತ ಸ್ಥಾನದ ನಿರ್ವಹಣೆ ಮಾಡುತ್ತಿದ್ದಾರೆ. ಜೊತೆಗೆ ಉದ್ಯೋಗ ಮಾರುಕಟ್ಟೆಯಲ್ಲಿಂದು ಯುವತಿಯರು ಯುವಕರಿಗೆ ಪ್ರಬಲವಾದ ಪ್ರತಿಸ್ಪರ್ಧೆ ನೀಡುತ್ತಿದ್ದಾರೆ. ಶಿಕ್ಷಕರು, ವೈದ್ಯಕೀಯ, ದಾದಿಯರು, ವಕೀಲರು, ಬ್ಯಾಂಕ್ ನೌಕರರು, ಬಸ್ ಕಂಡಕ್ಟರ್, ರಿಕ್ಷಾ ಚಾಲಕರು, ವಾಯು ಸೇನೆ, ನೌಕಾ ಪಡೆ ಇತ್ಯಾದಿ. ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ದಾಪುಗಾಲು ಇಡುತ್ತಿದ್ದಾರೆ. ಉದ್ಯೋಗ ವಲಯದಲ್ಲಿ ಇವರ ಸ್ಥಿತಿಗತಿ ಸುಧಾರಣೆಗಾಗಿ,

1) ವಸತಿ ಸೌಲಭ್ಯ ಕಾಯ್ದೆ – 1961 (42ನೇ ವಿಧಿ)

2) ಸಮಾನ ಕೆಲಸಕ್ಕೆ ಸಮಾನ ವೇತನ ಕಾಯ್ದೆ – 1976

3) ಕಾರ್ಖಾನೆ ಕಾಯ್ದೆ – 1976

4) ಹಿಂದೂ ಉತ್ತರಾಧಿತ್ವ ಕಾಯ್ದೆ (1956)ಗಳಿವೆ.

## ಕೈಗಾರೀಕರಣ ಮತ್ತು ಸ್ತ್ರೀಯರ ಅಂತಸ್ತು:

ಕೈಗಾರೀಕರಣವು ಸ್ತ್ರೀ ಪುರುಷರ ಸಾಮಾಜಿಕವಾದ ಚಲನೆಗೆ ಹಾಗೂ ಭೌಗೋಳಿಕ ಚಲನೆಗೆ ಅವಕಾಶವನ್ನು ನೀಡಿದೆ. ಸ್ತ್ರೀಯರಿಗೂ ಅದು ಹೊಸ ಜೀವನ ಶೈಲಿಯ ಮತ್ತು ಹೊಸ ಪ್ರಪಂಚದ ದರ್ಶನ ಮಾಡಿಸಿದೆ. ಜೊತೆಗೆ ಹೊಸ ಮೌಲ್ಯಗಳ ಅಭ್ಯಾಸ ಆಚರಣೆಗಳ ಹಾಗೂ ವರ್ತನಾ ಮಾದರಿಗಳ ಪರಿಚಯ ಮಾಡಿಸಿದೆ.

1990ರಿಂದ ಈಚೆಗೆ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲೂ, ಕಂಪನಿ, ಉದ್ಯಮ ಘಟಕಗಳಲ್ಲೂ ಸ್ತ್ರೀಯರ ಪಾಲುದಾರಿಕೆ ಹೆಚ್ಚಾಗಿದೆ.

## ಮಹಿಳಾ ಸಾಮಾಜಿಕ ಚಳುವಳಿಗಳು / ಆಂದೋಲನಗಳು:

ಬ್ರಿಟೀಷರ ಆಳ್ವಿಕೆಯಲ್ಲಿ ಮಹಿಳೆಯರ ಶಕ್ತಿಶಾಲಿ ಆಂದೋಲನವನ್ನು, ಅದೇ ಸ್ಫೂರ್ತಿಯಲ್ಲಿ, ಅದೇ ವೇಗದಲ್ಲಿ ಮುಂದುವರೆಸಿಕೊಂಡು ಹೋಗಲಿಲ್ಲ. ಪರಿಣಾಮವಾಗಿ ಭಾರತೀಯ ಸ್ತ್ರೀಯು ವರದಕ್ಷಿಣೆ, ಉಪಚಾರ, ಅತ್ಯಾಚಾರ, ಮಿತಿ ಮೀರಿದ ದುಡಿತ ಮುಂತಾದ ಸುಳಿಗೆ ಸಿಲುಕಬೇಕಾಯಿತು.

19ನೇ ಶತಮಾನದ ಅಂತ್ಯದಲ್ಲಿ ದೇಶದಲ್ಲಿ ಉಂಟಾದ ರಾಷ್ಟ್ರೀಯ ಜಾಗೃತಿಯ ಪರಿಣಾಮವಾಗಿ ಶಿಕ್ಷಿತರಾದ ಸ್ತ್ರೀಯರೂ ಕೂಡ ಎಚ್ಚೆತ್ತುಕೊಳ್ಳಬೇಕಾಯಿತು. ಪಂಡಿತ ರಮಾಬಾಯಿ, ಶ್ರೀಮತಿ ಕರ್ವೆ, ಮೇಡಂ ಕಾಮಾ, ಮುಂತಾದವರ ಪ್ರಯತ್ನದಿಂದ 20ನೇ ಶತಮಾನದ ಆರಂಭದಲ್ಲಿ ಸ್ತ್ರೀಯರ ಸಂಘಟನೆಗಳು ಮುಡಿ ಬಂದವು.

## ಪಾಶ್ಚಾತ್ಯ ಮಹಿಳಾ ನಾಯಕಿಯರ ಪಾತ್ರ:

ಐರಿಶ್ ಮೂಲದ ಮೂವು ಸ್ತ್ರೀಯರಾದ 'ಭಗಿನಿ ನಿವೇದಿತ, ಮಾರ್ಗರೇಟ್ ಕಸ್ಸಿನ್, ಅನಿಬೆಸೆಂಟ್' ಇವರು ಭಾರತದ ಬಗ್ಗೆ ಅಪಾರವಾದ ಕಾಳಜಿಯುಳ್ಳವರಾಗಿದ್ದರು. ಇಲ್ಲಿಯ ಸ್ಥಳೀಯರು ಅವರ ಜೊತೆಗೂಡಿ ಸಂಘಟನೆಯಲ್ಲಿ ತೊಡಗಿಸಿಕೊಂಡರು. ನಂತರ ಇವರ ಜೊತೆಗೆ ಸಿಸ್ಟರ್ ಸಾಧ್ಯಲಕ್ಷ್ಮಿ, ಮುತ್ತುಲಕ್ಷ್ಮಿ ಮುಂತಾದವರು ಸೇರಿಕೊಂಡರು.

1893ರಿಂದಲೇ ಭಾರತದಲ್ಲಿ ಶಾಶ್ವತವಾಗಿ ನೆಲೆ ನಿಂತಿದ್ದಂತಹ ಅನಿಬೆಸೆಂಟ್‌ರವರು, 1917ರ ಹೋಂರೂಲ್ ಚಳುವಳಿಯು ಸ್ತ್ರೀಯರ ಪ್ರಗತಿಯ ದೃಷ್ಟಿಯಲ್ಲಿ ಒಂದು ಮೈಲುಗಲ್ಲಾಯಿತು. ಇವರ ಬಂಧನವಾದಾಗ ಮೊಟ್ಟ ಮೊದಲ ಬಾರಿಗೆ ಮಹಿಳೆಯರು ಮೆರವಣಿಗೆಯಲ್ಲಿ ದೇವಸ್ಥಾನಗಳಿಗೆ ತೆರಳಿ ಅವರ ಬಿಡುಗಡೆಗಾಗಿ ಪ್ರಾರ್ಥನೆ ಸಲ್ಲಿಸಿದರು.

ಭಗಿನಿ ನಿವೇದಿತಾರವರು ವಿವೇಕಾನಂದರ ಅನುಯಾಯಿಯಾಗಿದ್ದು, ಪರತಂತ್ರದಿಂದ ಬಿಡುಗಡೆಯಾಗದ ಭಾರತೀಯ ಮಹಿಳೆಯರಿಗೆ ಮೋಕ್ಷವಿಲ್ಲ ಎಂದು ತಿಳಿಸಿದರು.

ಕಸ್ಸಿನ್‌ರವರು 'ಸ್ತ್ರೀಧರ್ಮ' ಎಂಬ ಆಂದೋಲನವನ್ನು ಆರಂಭಿಸಿದರು. ಸಾರ್ವಜನಿಕ ಅಭಿಪ್ರಾಯವನ್ನು ಸ್ತ್ರೀಯರ ಹಕ್ಕುಗಳು ಮತ್ತು ಜಾಗೃತಿಯ ಬಗ್ಗೆ ಕ್ರೋಢಿಕರಿಸುವ ಪ್ರಯತ್ನ ಮಾಡಿದರು.

**ಭಾರತೀಯ ಚಳುವಳಿ:**

ವಿದೇಶಿ ಮಹಿಳೆಯರ ಹೋರಾಟದಿಂದ ಸ್ಫೂರ್ತಿಗೊಂಡ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮುಂದುವರೆಸಿದರು.

## ಭಾರತೀಯ ಸ್ತ್ರೀಯರ ಸಂಘ 1917:

ಸರೋಜಿನಿ ನಾಯ್ಡು, ಮಾರ್ಗರೇಟ್ ಕಸ್ಸಿನ್, ಅನಿಬೆಸೆಂಟ್ ಜೊತೆಗೂಡಿ ಮದ್ರಾಸ್‌ನಲ್ಲಿ 1917ರಲ್ಲಿ 'ಭಾರತೀಯ ಸ್ತ್ರೀಯರ ಸಂಘ' ಸ್ಥಾಪಿಸಿದರು.. ಅದರ ಮೂಲಕ ಸ್ತ್ರೀಯರ ಸಮಸ್ಯೆ ಮತ್ತು ಬೇಡಿಕೆಗಳನ್ನು ಸಾರ್ಮಜನಿಕ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದರು. ಈ ಸಮಯದಲ್ಲಿ ಇವರು 'ಮಾಂಟೆಗೂ'ರನ್ನು ಭೇಟಿ ಮಾಡಿ ಮತದಾನ ಮತ್ತು ಶೈಕ್ಷಣಿಕ ಹಕ್ಕಿಗಾಗಿ ಹೋರಾಟ ಮಾಡಿದ್ದರು.

## ಅಖಿಲ ಮಹಿಳಾ ಪರಿಷತ್ 1926:

1926ರಲ್ಲಿ ಇದು ಆರಂಭವಾಯಿತು. 1927ರಲ್ಲಿ ಪೂನಾದಲ್ಲಿ ನಡೆದ ಅದರ ಪ್ರಥಮ ಸಮ್ಮೇಳನದಲ್ಲಿ ದೇಶಾದ್ಯಂತ ಮಹಿಳಾ ಪ್ರತಿನಿಧಿಗಳು ಭಾಗಿಯಾಗಿದ್ದರು. ಇವರ ಬೇಡಿಕೆಯಂತೆ 1932ರಲ್ಲಿ 'ರಾಷ್ಟ್ರೀಯ ಶಿಕ್ಷಣದ ನಿಧಿ' ಸ್ಥಾಪಿಸಲಾಯಿತು. ಇದು ಗ್ರಾಮೀಣ ಪ್ರದೇಶದ ಆರೋಗ್ಯ ರಕ್ಷಣೆಗಾಗಿ ಅಂದು ಯಾರೂ ಕಂಡು ಕೇಳರಿಯದ ಸಂಚಾರಿ ಆಸ್ಪತ್ರೆ ಆರಂಭಿಸಿ ಆರೋಗ್ಯ ಬಂಡಿ ಚಲಿಸುತ್ತಿರಲಿ ಎಂಬ ಘೋಷಣೆ ಜನಪ್ರಿಯಗೊಳಿಸಿತು. 1975ರಲ್ಲಿಯೇ ಇದು 500 ಉಪಶಾಖೆಗಳು, 3.25 ದಶಲಕ್ಷ ಸದಸ್ಯತ್ವ ಹೊಂದಿತ್ತು.

## ಪ್ರಚಲಿತ ಮಹಿಳಾ ಸಂಘಟನೆಗಳು:

ದಕ್ಷಿಣ ಭಾರತಕ್ಕಿಂತಲೂ ಉತ್ತರ ಭಾರತದ ಹಲವು ನಗರಗಳಲ್ಲಿ ಮಹಿಳಾ ಸಂಘಟನೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು, ಕ್ರಿಯಾಶೀಲವಾಗಿದೆ. ಇವುಗಳ ಜೊತೆಗೆ 1936ರಲ್ಲಿ ಆರಂಭವಾದ 'ರಾಷ್ಟ್ರ ಸೇವೆ ಸಮಿತಿ'ಯಂತಹ ರಾಷ್ಟ್ರೀಯ ಮಟ್ಟದ ಸಂಘಟನೆಗಳು ಪ್ರಮುಖವಾದವು.

1) ವರದಕ್ಷಿಣೆ ವಿರುದ್ದ ಸಮರ ಸಾರುವಲ್ಲಿ

* ನಾರಿ ರಕ್ಷಣಾ ಸಮಿತಿ
* ಮಹಿಳಾ ದಕ್ಷತಾ ಸಮಿತಿ

2) ಮಹಿಳೆಯರ ಪುನರ್ವಸತೀಕರಣ ನೀಡುವಲ್ಲಿ

* ಅವ್ವೈ ಹೋಂ ಆಶ್ರಮ (ಮದ್ರಾಸ್)
* ಅಖಿಲ ಬಂಗಾಳ ಸ್ತ್ರೀಯರ ಆಶ್ರಮ

3) ಮಹಿಳೆಯರ ಆರ್ಥಿಕ ಹಿತ ರಕ್ಷಣೆಯಲ್ಲಿ

* ಮಹಿಳಾ ಸೇನಾ ಸಹಕಾರಿ ಬ್ಯಾಂಕ್
* ಸ್ವ ಉದ್ಯೋಗ ಸ್ತ್ರೀಯರ ಸಂಘ
* ದುಡಿಯುವ ಸ್ತ್ರೀ ವೇದಿಕೆ

4) ಸ್ತ್ರೀ ಸ್ವಾತಂತ್ರ್ಯದ 3 ಗುಂಪುಗಳು

* ಉದಾರ ಸ್ತ್ರೀ ಸ್ವಾತಂತ್ರ್ಯವಾದಿಗಳು
* ಪ್ರಗತಿಪರ ಸ್ತ್ರೀ ಸ್ವಾತಂತ್ರ್ಯವಾದಿಗಳು
* ಸಾಮಾಜಿಕ ಸ್ತ್ರೀ ಸ್ವಾತಂತ್ರ್ಯವಾದಿಗಳು

ಹೀಗೆ ಸ್ತ್ರೀಯರು ಕೂಡ ಸಬಲೀಕರಣಕ್ಕಾಗಿ ಹಲವಾರು ಸಂಘಗಳ ಮೂಲಕ ಹೋರಾಡುತ್ತಿದ್ದಾರೆ.

## ಒತ್ತಡ ಗುಂಪುಗಳ ಪಾತ್ರ:

ಸಮಾಜವು ಮನುಷ್ಯನ ಬೇಡಿಕೆಗಳನ್ನು ಈಡೇರಿಸಲು ಜನ್ಮ ತಾಳಿದ ಸಂಸ್ಥೆಯಾಗಿದೆ. ಪ್ರತಿಯೊಬ್ಬ ಮನುಷ್ಯನು ಸಹ ತನ್ನದೇ ಆದ ಕಾರ್ಯಗಳನ್ನು ಮಾಡುತ್ತಿರುತ್ತಾನೆ. ಆದ್ದರಿಂದ ಪ್ರತಿಯೊಬ್ಬ ಮನುಷ್ಯನಬ ಬೇಡಿಕೆಗಳು, ಆಶೋತ್ತರಗಳು ಸಹ ವೈವಿಧ್ಯಮಯವಾಗಿರುತ್ತವೆ. ಹೀಗಿರುವಾಗ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಆಶೋತ್ತರಗಳನ್ನು ಈಡೇರಿಸಲು ಕೆಲವು ಸಲ ಸಮಾಜವು ವಿಫಲವಾಗಬಹುದು ಅಥವಾ ತಡವಾಗಬಹುದು. ಈ ಸಮಯದಲ್ಲಿ ಮನುಷ್ಯನು ತನ್ನ ಬೇಡಿಕೆಗಳ ಈಡೇರಿಕೆಗೆ ಜನ್ಮ ನೀಡಿದ ಸಂಘವೇ ಒತ್ತಡ ಗುಂಪುಗಳು.

**ಪ್ರಸ್ತುತ ಒತ್ತಡ ಗುಂಪುಗಳ ವಿಧಗಳು:**

1) ಕಾರ್ಮಿಕರ ಸಂಘಗಳು
2) ರೈತರ ಸಂಘಗಳು
3) ಸರ್ಕಾರಿ ಸಂಘಗಳು
4) ವ್ಯಾಪಾರಿ ಸಂಘಗಳು
5) ಜಾತಿ ಗುಂಪುಗಳು
6) ಗ್ರಾಹಕ ಸಂಘಗಳು
7) ಧಾರ್ಮಿಕ ಸಂಘಗಳು
8) ನಾಗರಿಕ ಸೇವಾ ಸಂಘಗಳು
9) ವಿದ್ಯಾರ್ಥಿ ಸಂಘಗಳು

**ಒತ್ತಡ ಗುಂಪುಗಳ ಕಾರ್ಯಗಳು:**

1) ತಮ್ಮ ಜನತೆಯ ಹಿತಾಸಕ್ತಿಗಳ ರಕ್ಷಣೆ ಮಾಡುತ್ತವೆ.
2) ಪ್ರತಿಭಟನೆ, ಮುಷ್ಕರ ಮೂಲಕ ತಮ್ಮ ಬೇಡಿಕೆ ಈಡೇರಿಕೆಗೆ ಒತ್ತಡ ಹಾಕುತ್ತವೆ.

3) ಸಾಮಾಜಿಕವಾಗಿ ಆಗುವ ಅನ್ಯಾಯ ನಿಯಂತ್ರಿಸುತ್ತವೆ.

4) ರಾಜಕೀಯ ನಿಯಂತ್ರಣ.

## ಸಂಸ್ಕೃತಾನುಕರಣ, ಪಾಶ್ಚಾತ್ಯೀಕರಣ ಹಾಗೂ ಆಧುನೀಕರಣ:

**ಸಂಸ್ಕೃತಾನುಕರಣ:**

ಸಂಸ್ಕೃತಾನುಕರಣ ಎಂಬ ಪದವನ್ನು 1952ರಲ್ಲಿ ಮೊಟ್ಟಮೊದಲಿಗೆ 'ಶ್ರೀನಿವಾಸರವರು ದಕ್ಷಿಣ ಭಾರತದ ಕೊಡವರಲ್ಲಿ ಧರ್ಮ ಮತ್ತು ಸಮಾಜ' ಎಂಬ ಹೊತ್ತಿಗೆಯಲ್ಲಿ ಪ್ರಕಟಿಸಿದರು.

ಭಾರತವನ್ನು ಒಂದು ಜಡಭರಿತ, ಪರಂಪರಾಗತ ಹಾಗೂ ಪ್ರತಿಗಾಮಿ ಸಮಾಜವೆಂದು ಪರಿಗಣಿಸುತ್ತಿದ್ದ ಕಾಲವಿತ್ತು. ಸ್ವಾತಂತ್ರ್ಯ ನಂತರದ ಭಾರತೀಯ ಸಮಾಜದಲ್ಲಿ ಸಂಭವಿಸಿದ ಪರಿವರ್ತನಾ ಪ್ರಕ್ರಿಯೆ ಗುಣಾತ್ಮಕವಾಗಿ ಹೊಸದೊಂದು ಮಜಲು ತಲುಪಿತು. (ವಿವಾಹ, ಕುಟುಂಬ, ಬಂಧುತ್ವ, ಗ್ರಾಮೀಣ ಜೀವನ, ಅಸ್ಪೃಶ್ಯತೆ ಎಲ್ಲದರಲ್ಲೂ ಬದಲಾವಣೆ ಗೋಚರಿಸತೊಡಗಿದವು.

**ಭಾರತದಲ್ಲಿನ ಸಾಮಾಜಿಕ ಪರಿವರ್ತನೆಯ 3 ಪ್ರಕ್ರಿಯೆಗಳೆಂದರೆ,**

1) ಸಂಸ್ಕೃತಾನುಕರಣ

2) ಪಾಶ್ಚಾತ್ಯೀಕರಣ

3) ಆಧುನೀಕರಣ

**ಸಂಸ್ಕೃತಾನುಕರಣ:**

ಕೆಳಜಾತಿಗಳೆಂದು ಕರೆಯಲ್ಪಡುವ ಕೆಲವು ಜಾತಿಗಳು ಸಾಮಾಜಿಕ ರಚನೆಯಲ್ಲಿ ಮೇಲ್ಮುಖವಾಗಿ ಅಂದರೆ ಉನ್ನತವಾದ ಅಂತಸ್ತನ್ನು ಗಳಿಸುವ ಕಡೆಗೆ ಸಾಗುವ ಚಲನಾ ಪ್ರಕ್ರಿಯೆಯನ್ನು 'ಸಂಸ್ಕೃತಾನುಕರಣ' ಎನ್ನಲಾಗಿದೆ.

ಎಮ್.ಎನ್.ಶ್ರೀನಿವಾಸ್‌ರವರ ಪ್ರಕಾರ, 'ಕೆಳಸ್ತರದ ಹಿಂದೂ ಜಾತಿ ಆದಿವಾಸಿ ಇತರೆ ಸಮೂಹವು ತನ್ನ ಪದ್ಧತಿ, ಕ್ರಿಯಾ ವಿಧಿ ಮತ್ತು ಜೀವನ ವಿಧಾನಗಳನ್ನು ಉಚ್ಚ ಜಾತಿಗೆ, ಅದರಲ್ಲೂ ಹೆಚ್ಚಾಗಿ ದ್ವಿಜ ಜಾತಿಯ ರೀತಿ ನೀತಿಗನುಸಾರವಾಗಿ ಮಾರ್ಪಡುವ ಪ್ರಕ್ರಿಯೆಯೇ ಸಂಸ್ಕೃತಾನುಕರಣ.'

ಇಲ್ಲಿ ಏಣಿ ಶ್ರೇಣಿಯಲ್ಲಿ ಕೆಳಜಾತಿಗಳು ಮೇಲೆ ಬರುವ ಪ್ರಯತ್ನವನ್ನು ಮಾಡಿವೆ. ತಮ್ಮ ಸಂಸ್ಕರಣಾ ಪದ್ದತಿಗಳಲ್ಲಿ ಬದಲಾವಣೆ ಮಾಡಿಕೊಂಡು ಮೇಲೆ ಬರುವ ಪ್ರಯತ್ನ ಇದಾಗಿದೆ.

**ಸಂಸ್ಕೃತಾನುಕರಣಕ್ಕೆ ಪೂರ್ವಾವಶ್ಯಕತೆಗಳು:**

1) ಉನ್ನತ ಅಂತಸ್ತಿನ ಆಕಾಂಕ್ಷೆಯೊಂದಿಗೆ ಜಾತಿಯ ಸ್ವಕಲ್ಪನೆಯಲ್ಲಿ ಬದಲಾವಣೆ.

2) ಸಾಮಾಜಿಕ ಚಲನೆಗೆ ಕ್ರಿಯಾತ್ಮಕ ಪ್ರಯತ್ನ.

3) ಸಾಂಪ್ರದಾಯಿಕ ಸಮಾಜದ ಭಾವನೆಗಳ ಅತಿಯಾದ ಬದ್ದತೆ.

**ಸಾಂಸ್ಕೃತಾನುಕರಣ ಪ್ರಕ್ರಿಯೆಯ ಮುಖ್ಯ ಲಕ್ಷಣಗಳು:**

**ಒಂದು ಅನುಕರಣೆಯ ಪ್ರಕ್ರಿಯೆಯಾಗಿ ಸಂಸ್ಕೃತಾನುಕರಣ:**

ಕೆಳಜಾತಿಗಳು ಮೇಲ್ಜಾತಿಗಳ ಜೀವನ ಕ್ರಮ, ತಾನು ಪ್ರತಿಷ್ಠಿತ, ಪ್ರಬಲ ಎಂದು ರೂಢಿ ಪದ್ದತಿಗಳನ್ನು ಅನುಕರಿಸುವ, ಸುಧಾರಿಸಿಕೊಳ್ಳುವ ಪ್ರಯತ್ನ.

**ಅನುಕರಣೆಯ ಮತ್ತು ಸಂಸ್ಕೃತಾನುಕರಣದ ಕೆಲವು ಕ್ಷೇತ್ರಗಳು:**

* ಕ್ರಿಯಾ ವಿಧಾನಗಳು: ವೇದ ಮಂತ್ರ ಪಠಣೆ, ವಿವಾಹ, ಕನ್ಯಾದಾನ.

* ವಿವಾಹ ಕ್ರಮ: ವಿಧವೆಯರ ವಿವಾಹವಿಲ್ಲ. ಇವರ ಮುಖ ದರ್ಶನ ಅಮಂಗಳ ಎಂಬ ಭಾವನೆ.

* ಸ್ತ್ರೀ ನೋಡಿಕೊಳ್ಳುವ ರೀತಿ: ದ್ವಿತೀಯ ದರ್ಜೆ ಸ್ಥಾನ, ಸೂತಕ.

* ಊಟ ಮತ್ತು ಉಡುಪಿನ ಶೈಲಿ: ಕಚ್ಚೆ, ಪಂಚೆ, ಸೀರೆ, ಮಾಂಸಾಹಾರ ತ್ಯಜಿಸುವುದು.

* ಶಿಶುವಿಗೆ ಹೆಸರಿಡುವ ಕ್ರಮ: ಚಿದಾನಂದ, ಈಶ್ವರಿ, ಗೌರಿ, ಲಕ್ಷ್ಮಿ (ಕರಿಯ, ಕಾಳ, ಬೀರ, ಜಗನು, ಇತ್ಯಾದಿಗಳ ಬದಲಿಗೆ).

* ತತ್ವಾದರ್ಶ ಹಾಗೂ ಮೌಲ್ಯ ಅನುಕರಣೆ: ಮೋಕ್ಷ, ಪರಮಾತ್ಮ, ಪೂರ್ವಜನ್ಮಗಳತ್ತ ಒಲವು.

* ಸಂಸ್ಕೃತಾನುಕರಣದಿಂದ ಸಾಮಾನ್ಯವಾಗಿ ಮೇಲ್ಮುಖವಾದ ಚಲನೆಯು ಕಂಡು ಬರುತ್ತದೆ.

* ಇದು ಹಿಂದೂ ಜಾತಿಗಳಲ್ಲಿ ಮಾತ್ರವಲ್ಲದೆ ಆದಿವಾಸಿ ಸಮುದಾಯಗಳಲ್ಲಿಯೂ ಕಾಣಬಹುದು.

* ಸಂಸ್ಕೃತಾನುಕರಣದ ಪ್ರಕ್ರಿಯೆಯು ಎಲ್ಲಾ ಕಡೆಗಳಲ್ಲಿ ಒಂದೇ ತೆರನಾಗಿರುತ್ತದೆ.

* ಸಾಂಸ್ಕೃತಿಕ ನಿಯಮಗಳ ರೂಢಿಗಳಿಗೆ ಸಂಬಂಧಿಸಿದಂತೆ ಸಂಸ್ಕೃತಾನುಕರಣದ ಮುಖ್ಯ ತಿರುಳು ಬೇರೆ ಬೇರೆಯಾಗಿರುತ್ತದೆ.

* ಸಂಸ್ಕೃತಾನುಕರಣ ಪ್ರಕ್ರಿಯೆಯು ಕೆಲವೊಂದು ಜಾತಿ ಸಮೂಹಗಳಿಗೆ ಸಂಬಂಧಿಸಿದಂತೆ ಸ್ಥಾನಮಾನದಲ್ಲಿ ಪರಿವರ್ತನೆ ಸೂಚಿಸುತ್ತದೆ.

* ಸಂಸ್ಕೃತಾನುಕರಣ ತಕ್ಷಣದ ಆಕಸ್ಮಿಕವಾದ ಪ್ರಕ್ರಿಯೆಯಲ್ಲ.

* ಇದು ವಿನೂತನ ಪ್ರಕ್ರಿಯೆಯೂ ಅಲ್ಲ.

* ಸಾಂಪ್ರದಾಯಿಕ ಜಾತಿ ವ್ಯವಸ್ಥೆಗೊಂದು ಪ್ರತಿಭಟನೆಯಾಗಿರುತ್ತದೆ.

**ಸಂಸ್ಕೃತಾನುಕರಣದ ಕುರಿತು ಕೆಲವು ಟೀಕೆಗಳು:**

ಎಂ.ಎನ್.ಶ್ರೀನಿವಾಸರವರು ಪರಿಚಯಿಸಿದ 'ಸಂಸ್ಕೃತಾನುಕರಣ' ಪ್ರಕ್ರಿಯೆಗೆ ತನ್ನದೇ ಆದ ಪ್ರಾಮುಖ್ಯವಿರುವುದಾದರೂ ಅದು ಟೀಕೆಗಳಿಂದ ಮುಕ್ತವಾಗಿಲ್ಲ. ಅಂತಹ ಕೆಲವು ಟೀಕೆಗಳೆಂದರೆ,

1) ಇದೊಂದು ಸಂಕೀರ್ಣವಾದ ಹಾಗೂ ದಾರಿ ತಪ್ಪಿಸುವ ಪರಿಕಲ್ಪನೆಯಾಗಿದೆ. ಜೆ.ಎಫ್.ಸ್ಟಾಲ್ ಪ್ರಕಾರ, 'ಸಂಸ್ಕೃತದ ಜೊತೆಗಿನ ಅದರ ಸಂಬಂಧವೇ ಬಹಳ ತೊಡಕಿನದಾದ್ದರಿಂದ ಈ ಕಲ್ಪನೆ ಓದುಗರನ್ನು ತಪ್ಪು ದಾರಿಗೆ ಎಳೆಯುವಂತದ್ದಾಗಿದೆ' ಎಂದಿದ್ದಾರೆ.

2) ಬದಲಾಗುತ್ತಾ ಹೋಗಿರುವ ಸಂಸ್ಕೃತಾನುಕರಣದ ವ್ಯಾಖ್ಯಾನ: ಯೋಗೇಂದ್ರಸಿಂಗ್ ಪ್ರಕಾರ ಇದಕ್ಕೆ ನಿರ್ದಿಷ್ಟವಾದ ವ್ಯಾಖ್ಯಾನಗಳಿರದೆ ಬದಲಾಗುತ್ತಾ ಹೋಗುತ್ತದೆ. ಅರ್ಥ ನಿಖರತೆ ಇಲ್ಲ.

3) ಸಂಸ್ಕೃತಾನುಕರಣ ಪರಂಪರೆಯ ಅಂಶಗಳನ್ನು ಪರಿಗಣಿಸದಿರುವುದು.

4) ಸಂಸ್ಕೃತಾನುಕರಣದ ಪ್ರಭಾವವು ದೇಶದ ಎಲ್ಲ ಭಾಗಗಳಲ್ಲಿಯೂ ಏಕರೂಪವಾಗದೇ ಇರುವುದು.

5) ಇದು ಸಾರ್ವತ್ರಿಕ ಪ್ರಕ್ರಿಯೆ ಅಲ್ಲಾ ಎಂಬ ಅಪವಾದ.

ಡಿ.ಎನ್. ಮಜುಮ್ದಾರ ಪ್ರಕಾರ ಉತ್ತರಪ್ರದೇಶದ ಮೋಹನ ಗ್ರಾಮದ ಸಮೀಕ್ಷೆಯಲ್ಲಿ ಇಲ್ಲಿಯ ಜನ ಸಂಸ್ಕೃತಾನುಕರಣವನ್ನು ಖಂಡಿಸಿರುವಾಗ ಇದು ಹೇಗೆ ಸಾರ್ವತ್ರಿಕ ಎಂಬ ಪ್ರಶ್ನೆ ಇವರದು.

**ವಿರೋಧಾಭಾಸಗಳು:**

ಮೀಸಲಾತಿ ಪ್ರಕ್ರಿಯೆಗೆ ಒಳಪಡುವ ಉದ್ದೇಶದಿಂದಲೇ ಕೆಳಜಾತಿಯ ಬ್ರಾಹ್ಮಣರು ತಾವು ಕೀಳು, ಹಿಂದುಳಿದಿರುವುದಾಗಿ ಹೇಳುವುದು. ಸಾಮಾಜಿಕ ಪರಿವರ್ತನೆಗೆ ಸಂಬಂಧಿಸಿದಂತಹ ಸ್ಥಿರ ಸಿದ್ಧಾಂತವೊಂದನ್ನು ಇದು ರೂಪಿಸಲು ಸಹಾಯಕವಾಗಿಲ್ಲ. ಇದೊಂದು ಶಿಥಿಲ ಮತ್ತು ಊಹಾ ಕಲ್ಪನೆಯಾಗಿದೆ.

ಕೊನೆಯದಾಗಿ, ಸಂಸ್ಕೃತಾನುಕರಣದ ಪರಿಕಲ್ಪನೆಯು ಭಾರತೀಯ ಸಮಾಜದಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಚಲನೆಯನ್ನು ಅರ್ಥೈಸುವಲ್ಲಿ ಸಹಾಯಕವಾದುದು ಎಂಬುದು ಖಚಿತ. ಎಮ್.ಎನ್.ಶ್ರೀನಿವಾಸರಾವ್‌ರವರು ಹೇಳುವಂತೆ ಇದೊಂದು ಸಂಕೀರ್ಣ ಪ್ರಕ್ರಿಯೆಯಾಗಿದೆ.

**ಪಾಶ್ಚಾತ್ಯೀಕರಣ:**

ಆಧುನಿಕ ಭಾರತದ ಸಾಮಾಜಿಕ ಸಾಂಸ್ಕೃತಿಕ ಪರಿವರ್ತನೆಗಳನ್ನು ವಿಶ್ಲೇಷಿಸುವಲ್ಲಿ 'ಪಾಶ್ಚಾತ್ಯೀಕರಣ' ಪರಿಕಲ್ಪನೆಯು ಬಹಳಷ್ಟು ಸಹಾಯಕವಾಗಿದೆ.

'ಪಾಶ್ಚಿಮಾತ್ಯ ದೇಶಗಳ ಜನರ ಜೀವನ ವಿಧಾನ, ಮೌಲ್ಯಗಳು ಹಾಗೂ ಆಚಾರ ವಿಚಾರಗಳನ್ನು, ವ್ಯಕ್ತಿ ಸಮೂಹವನ್ನು ಅನುಕರಿಸುವ ಕ್ರಿಯೆಯೇ ಪಾಶ್ಚಾತ್ಯೀಕರಣ'.

ಎಮ್.ಎನ್.ಶ್ರೀನಿವಾಸರವರ ಪ್ರಕಾರ, 'ಪಾಶ್ಚಾತ್ಯೀಕರಣದ ಪ್ರಕ್ರಿಯೆಯು ಸುಮಾರು 150 ವರ್ಷಗಳಿಗೂ ಮಿಗಿಲಾದ ಬ್ರಿಟಿಷ್ ಆಳ್ವಿಕೆಯು ಭಾರತೀಯ ಸಮಾಜ ಮತ್ತು ಸಂಸ್ಕೃತಿಗಳಲ್ಲಿ ಉಂಟು ಮಾಡಿದ ಪರಿವರ್ತನೆಗಳ, ಅದರಲ್ಲೂ ಮುಖ್ಯವಾಗಿ ತಾಂತ್ರಿಕತೆ, ತತ್ವದರ್ಶನ ಹಾಗೂ ಮೌಲ್ಯಗಳ ಕ್ಷೇತ್ರಗಳಲ್ಲಾದಂತಹ ಪರಿವರ್ತನೆಗಳ ಸಂಕೇತವಾಗಿದೆ.

**ಪಾಶ್ಚಾತ್ಯೀಕರಣದ ಮುಖ್ಯ ಲಕ್ಷಣಗಳು:**

1) ಸಂಸ್ಕೃತಾನುಕರಣಕ್ಕಿಂತಲೂ ಇದು ಸರಳವಾದ ಪ್ರಕ್ರಿಯೆಯಾಗಿದೆ.

2) ಪಾಶ್ಚಾತ್ಯೀಕರಣದ ಪ್ರಭಾವಕ್ಕೆ ಒಳಗಾದ ಕೆಲವು ಮುಖ್ಯ ಕ್ಷೇತ್ರಗಳು:

* ತಾಂತ್ರಿಕತೆ
* ತತ್ವದರ್ಶನ
* ಮೌಲ್ಯಗಳು

ಇವು ಭಾರತೀಯ ಸಾಮಾಜಿಕ ಸಾಂಸ್ಕೃತಿಕ ಜೀವನದ ಮೇಲೆ ಪರಿಣಾಮ ಬೀರಿದವು.

3) ಪಾಶ್ಚಾತ್ಯೀಕರಣವು ಸಂಕೀರ್ಣವಾದ ಮತ್ತು ಬಹುಪದರಗಳುಳ್ಳ ಪರಿಕಲ್ಪನೆ.

ಈ ಪ್ರಭಾವಕ್ಕೆ ಸಿಲುಕಿದ ಭಾರತೀಯರು ಕೆಲವು ಆಚರಣೆ ಕೈಬಿಡುತ್ತಾ ಹೊಸ ಆಚರಣೆಗೆ ರೂಢಿಸಿಕೊಂಡರು. ಉದಾ: ನೆಲದ ಮೇಲೆ ಎಲೆಯ ಊಟ ಹೋಗಿ, ಕುರ್ಚಿ, ಪಂಚೆ, ಧೋತಿ, ಬಿಟ್ಟು, ಶರ್ಟ್, ಪ್ಯಾಂಟ್ ಇತ್ಯಾದಿ.

4) ಪಾಶ್ಚಾತ್ಯೀಕರಣದ ಪ್ರಕ್ರಿಯೆಯು ವೇಗೋತ್ಕರ್ಷಕ್ಕೆ ಕಾರಣವಾದ ಜನವರ್ಗಗಳು:

* ಬ್ರಿಟೀಷ್ ಜನರಲ್ಲಿ:
  * ಸೈನಿಕರು ಮತ್ತು ಉನ್ನತ ಮಟ್ಟದ ಸರ್ಕಾರಿ ಅಧಿಕಾರಿಗಳು
  * ವರ್ತಕರು ಮತ್ತು ಭಾರಿ ತೋಟದ ಮಾಲೀಕರು
  * ವಿದೇಶಿ ಕ್ರೈಸ್ತ ಮಿಷನರಿಗಳು

ಇವರೆಲ್ಲಾ ತಮ್ಮ ಸಂಪರ್ಕ ವ್ಯಾಪ್ತಿಗೆ ಬಂದ ಭಾರತೀಯರ ಮೇಲೆ ಪಾಶ್ಚಿಮಾತ್ಯ ಜೀವನ ಶೈಲಿ ಅನುಕರಣೆಗೆ ಪರೋಕ್ಷ ಪ್ರೇರಣೆ ನೀಡಿದರು.

* ಬ್ರಿಟೀಷ್ ಅಧಿಕಾರಿಗಳ ಮನೆಯಲ್ಲಿ ಸೇವಕರಾಗಿ ದುಡಿಯುತ್ತಿದ್ದರೆ. ಅವರು ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದರು.

5) ಪಾಶ್ಚಾತ್ಯೀಕರಣದ ರೂಪ ಹಾಗೂ ವೇಗ: ಇವು ಭಾರತದ ಬೇರೆ ಬೇರೆ ಭೂ ಭಾಗಗಳಲ್ಲಿ ಹಾಗೂ ಜನಸಮುದಾಯಗಳಲ್ಲಿ ಬೇರೆ ಬೇರೆಯಾಗಿದೆ.

(ದನದ ಮಾಂಸದ ಭಕ್ಷಣೆ, ಮಧ್ಯಕ್ಕೆ–ಲಿಂಗಾಯತ ಮತ್ತು ಬ್ರಾಹ್ಮಣ ವಿರೋಧ).

6) ಪಾಶ್ಚಾತ್ಯೀಕರಣ ನೀತಿ ನಿರಕ್ಷೇಪ ಪರಿಕಲ್ಪನೆ: ಇದು ನಿರ್ಲಿಪ್ತವಾಗಿದ್ದು ಒಳ್ಳೆಯದು ಕೆಟ್ಟದ್ದು ಎಂದು ಯಾವುದೇ ಮೌಲ್ಯಧಾರಿತ ನಿಲುವು ಸೂಚಿಸುವುದಿಲ್ಲ.

7) ಪಾಶ್ಚಾತ್ಯೀಕರಣದ ಹೆಚ್ಚಳವು ಸಂಸ್ಕೃತಾನುಕರಣದ ಪ್ರಕ್ರಿಯೆಯ ವೇಗೋತ್ಕರ್ಷಕ್ಕೆ ಕಾರಣವಾಗಿದೆ.

8) ಪಾಶ್ಚಾತ್ಯೀಕರಣ ಹೆಚ್ಚು ವಸ್ತುನಿಷ್ಠೆ ಹೊಂದಿದೆ.

9) ಆಧುನೀಕರಣಕ್ಕಿಂತಲೂ ಇದು ಉತ್ತಮವಾದ ಪರಿಕಲ್ಪನೆ ಹೊಂದಿದೆ.

ಹೀಗೆ ಹಲವಾರು ಲಕ್ಷಣಗಳಿಂದ ಇದು ಕೂಡಿದ್ದಾಗಿದೆ.

**ಪಾಶ್ಚಾತ್ಯೀಕರಣದ ಪರಿಣಾಮಗಳು:**

1) ತಾಂತ್ರಿಕತೆಯ ಸಂಸ್ಥೆಗಳ ಸ್ಥಾಪನೆ ಮತ್ತು ಮೌಲ್ಯಗಳಲ್ಲಿ ಅಮೂಲಾಗ್ರಹವಾದಂತಹ ಬದಲಾವಣೆಗಳು ಗೋಚರಿಸಿದವು.

(ರೈಲು ಮಾರ್ಗ, ಅಂಚೆ, ಶಿಕ್ಷಣ ಸಂಸ್ಥೆಗಳು ಹಾಗೂ ಸ್ತ್ರೀ ಪುರುಷ ಸಮಾನ ತತ್ವಗಳು).

2) ಪಾಶ್ಚಾತ್ಯೀಕರಣವು ಸಾಮಾಜಿಕ ಸುಧಾರಣಾ ಆಂದೋಲನಗಳಿಗೆ ಸ್ಫೂರ್ತಿ ನೀಡಿತು.

(ಬ್ರಹ್ಮ ಸಮಾಜ, ಆರ್ಯ ಸಮಾಜ ಇತ್ಯಾದಿ).

3) ಪಾಶ್ಚಾತ್ಯೀಕರಣವು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆಯಾಯಿತು.

(ಫ್ರಾನ್ಸ್, ಜರ್ಮನಿ ಕ್ರಾಂತಿಗಳು).

4) ಪಾಶ್ಚಾತ್ಯೀಕರಣವು ನವೀನ ಶೈಲಿಯ ಜೀವನ ಪ್ರಸಾರಕ್ಕೂ ಕಾರಣವಾಯಿತು.

(ವಿವಾಹ, ಜನ್ಮದಿನಾಚರಣೆ ಆಚರಣೆ, ಉಡುಗೆ ತೊಡುಗೆ ಇತ್ಯಾದಿ).

5) ಬ್ರಾಹ್ಮಣರ ಪಾಶ್ಚಾತ್ಯೀಕರಣದಿಂದಾಗಿ ಹೊಸ ಮಾದರಿಯ ಮತೇತರ ಸ್ವರೂಪದ ಜಾತಿ ವ್ಯವಸ್ಥೆಯ ಸೃಷ್ಟಿಯಾಯಿತು.

**ಇದರ ಋಣಾತ್ಮಕ ಪರಿಣಾಮಗಳು:**

1) ಸಾಂಪ್ರದಾಯಿಕ ಪದ್ಧತಿ ಆಚರಣೆ ಸಂಪೂರ್ಣವಾಗಿ ಅವನತಿ ಹೊಂದಿತು.

2) ಪಶ್ಚಿಮ ಮೂಲದ ವಸ್ತು ವಿಚಾರ, ಪದ್ಧತಿ ಆಚರಣೆ ಇವೆಲ್ಲವೂ ಉತ್ತಮವಾದುದು ಎಂಬ ಭಾವನೆ ಬರತೊಡಗಿತು.

3) ಪಾಶ್ಚಿಮಾತ್ಯರ ದೋಷ, ದೌರ್ಬಲ್ಯಗಳು ಮತ್ತು ದುಶ್ಚಟಗಳು ಭಾರತೀಯರ ಜೀವನ ಭಾಗವಾಗಿ ಸೇರಿತು.

4) ರಾಷ್ಟ್ರೀಯ ಸ್ವಾಭಿಮಾನ ಮತ್ತು ಸ್ವದೇಶಿಯ ಅಭಿಮಾನ ಕಡಿಮೆಯಾಯಿತು.

**ಪಾಶ್ಚಾತ್ಯೀಕರಣದ ಕುರಿತು ಟೀಕೆಗಳು:**

**ಪ್ರಶಂಸಾ ಮಾತುಗಳು:**

1) ಸಾಮಾಜಿಕ ಚಲನೆಯ ವಿಶ್ಲೇಷಣೆಗೆ ಸಹಾಯಕವಾಗಿದೆ.

2) ಇದು ಮಧ್ಯಮ ವರ್ಗದ ವಿದ್ಯಮಾನವನ್ನು ಪ್ರತಿನಿಧಿಸುತ್ತದೆ.

ಉನ್ನತ ಜಾತಿಗಳು ಪಾಶ್ಚಾತ್ಯೀಕರಣಗೊಂಡಾಗ, ಕೆಳ ಜಾತಿಗಳು ಉನ್ನತ ಜಾತಿ ಸ್ಥಾನ ಅಲಂಕರಿಸುತ್ತವೆ. (ಬೆನಾರ್ಡ್ ಕೊಹ್ಲ ಮತ್ತು ಸಿಂಗರ್).

3) ವರ್ತನೆ, ತಾಂತ್ರಿಕ ಮತ್ತು ಜ್ಞಾನದ ಅಂಶಗಳನ್ನು ಸುಧಾರಿಸಿದೆ.

**ಟೀಕೆಗಳು:**

1) ಪಾಶ್ಚಿಮಾತ್ಯ ಸಂಸ್ಕೃತಿಯು ಕೆಲವು ಇತಿಮಿತಿಗಳಿಂದ ಕೂಡಿದೆ. ಇದು ಸಾಮಾಜಿಕ ಸಂರಚನಾ ಅಂಶವನ್ನು ವಿಶ್ಲೇಷಿಸುವುದಿಲ್ಲ.

2) ಭಾರತೀಯೇತರ ಸಮಾಜಗಳಲ್ಲಿನ ಪರಿವರ್ತನಾ ವಿಶ್ಲೇಷಣೆಗೆ ಇದು ಸಹಾಯಕವಾಗಿಲ್ಲ. (ರಾಮ ಅಹ್ರಜಾ)

3) ಇದು ನೀತಿ ನಿರಪೇಕ್ಷ ಕಲ್ಪನೆ – ಯೋಗೀಂದ್ರ ಸಿಂಗ್.

4) ಇದು ಸ್ವಾತಂತ್ರ್ಯೋತ್ತರ ಭಾರತೀಯ ಸಮಾಜದ ಸಾಮಾಜಿಕ ಸಾಂಸ್ಕೃತಿಕ ಪರಿವರ್ತನೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿಲ್ಲ.

5) ಇದು ಮೇಲ್ವರ್ಗವನ್ನು ಮಾತ್ರ ಪ್ರಭಾವಿಗೊಳಿಸುತ್ತದೆ.

6) ಕೇವಲ ಪಾಶ್ಚಾತ್ಯೀಕರಣವನ್ನು ಬ್ರಿಟೀಷ್ ಪ್ರಭಾವಕ್ಕೆ ಸಮಾನಗೊಳಿಸುವುದು ಸರಿಯಲ್ಲ.

ಹೀಗೆ ಪಾಶ್ಚಾತ್ಯೀಕರಣ ಕುರಿತಾದ ಪರ ಮತ್ತು ವಿರೋಧ ಚರ್ಚೆಗಳು ನಡೆಯುತ್ತಿವೆ.

## ಆಧುನೀಕರಣ:

ಆಧುನೀಕರಣ ಎಂಬುದು ಮಾನವನ ಆಧುನಿಕ ಜೀವನಕ್ಕೆ ಸಂಬಂಧಪಟ್ಟ ಒಂದು ಮೌಲ್ಯ ಸೂಚಕ ಪದ. ಅದು ಸಮಾಜವೊಂದರಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಪರಿವರ್ತನಾ ಪ್ರಕ್ರಿಯೆಯನ್ನು ಸಂಕೇತಿಸುವ ಪರಿಕಲ್ಪನೆಯಾಗಿದೆ.

'ಕೃಷಿ ಪ್ರಧಾನ ಸಮಾಜ'ವೊಂದು 'ಕೈಗಾರಿಕಾ ಪ್ರಧಾನ' ಸಮಾಜವಾಗಿ ರೂಪಾಂತರಗೊಳ್ಳುವ ಪ್ರಕ್ರಿಯೆಯನ್ನು ಸೂಚಿಸುವ ಪರಿಕಲ್ಪನೆಯಾಗಿದೆ. ಒಟ್ಟಾರೆಯಾಗಿ ಆಧುನೀಕರಣವೆಂದರೆ,

ಹಳೆಯ ರೂಢಿ ಹಾಗೂ ಪರಂಪರೆಗಳ ಹಿಡಿತದಲ್ಲಿದ್ದ ಸಮಾಜವೊಂದು, ಆ ಹಿಡಿತದಿಂದ ಹೊರಬಂದು ಆಧುನಿಕ ಪರಿಸ್ಥಿತಿಗಳು ಜೀವನ ಕ್ರಮಗಳು ಹಾಗೂ ನಂಬಿ ಸ್ವೀಕರಿಸುವ ಹಾಗೂ ಅವುಗಳಿಗೆ ಅನುಗುಣವಾಗಿ ನಡೆದುಕೊಳ್ಳುವ ಪ್ರಯತ್ನವೊಂದನ್ನು ಸೂಚಿಸುವ ಪರಿಕಲ್ಪನೆಯಾಗಿದೆ. ಅದು ಜನರ ಆಹಾರಭ್ಯಾಸಗಳು, ಉಡುಪಿನ ಶೈಲಿ, ಮಾತನಾಡುವ ರೀತಿ, ಅಭಿರುಚಿ, ತತ್ವಾದರ್ಶ ಮೌಲ್ಯ ಒಳಗೊಂಡಿರುತ್ತದೆ.

(ಈ ಪರಿಕಲ್ಪನೆಯನ್ನು 'ಡಾನಿಯಲ್ ಲರ್ನರ್' ಪರಿಚಯಿಸಿದರು.) ರುಟಾ ಮತ್ತು ವಾರ್ಡ್ ಪ್ರಕಾರ, 'ಆಧುನಿಕ ವಿಜ್ಞಾನವನ್ನು ಮಾನವ ಸಂಗತಿಗಳಿಗೆ ಅನ್ವಯವಾಗುವಂತೆ ಬಳಸುವುದೇ ಆಧುನೀಕರಣ.'

**ಆಧುನೀಕರಣದ ಮುಖ್ಯ ಲಕ್ಷಣಗಳು:**

ಸೈಲ್‌ಸರ್ ಅವರು ನಿರ್ದಿಷ್ಟ ಗುಣಲಕ್ಷಣ ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ,

1) ತಾಂತ್ರಿಕತೆ ಮತ್ತು ಅರ್ಥವ್ಯವಸ್ಥೆಯಲ್ಲಿ ಬದಲಾವಣೆ.

(ಟ್ರ್ಯಾಕ್ಟರ್ ಬಳಕೆ, ಚರಕದ ಬದಲು ಯಂತ್ರಚಾಲಿತ ಮಗ್ಗ) ಉತ್ಪಾದನಾ ತಂತ್ರದಲ್ಲಿ ಬದಲಾವಣೆ.

* ವಾಣಿಜ್ಯ ಬೆಳೆ ಬೆಳೆಯುವ ದಿಕ್ಕಿನತ್ತ ಕೃಷಿ

* ಯಂತ್ರಗಳ ಬಳಕೆ

* ಕೈಗಾರೀಕರಣ ಮತ್ತು ನಗರೀಕರಣ

2) ಧಾರ್ಮಿಕ ವ್ಯವಸ್ಥೆಯಲ್ಲಿ ಬದಲಾವಣೆ (ದೇಶಭಕ್ತಿ, ರಾಷ್ಟ್ರೀಯತೆ).

3) ಕೌಟುಂಬಿಕ ಹಾಗೂ ವೈವಾಹಿಕ ವ್ಯವಸ್ಥೆಗಳಲ್ಲಿ ಬದಲಾವಣೆ. (ವಿವಾಹದ ಆಧ್ಯಾತ್ಮಿಕ ನೆಲೆ ಕುಸಿಯತೊಡಗಿತು).

4) ಶಿಕ್ಷಣದ ಪ್ರಾಮುಖ್ಯತೆಯ ಅರಿವು.

5) ಹೊಸ ಸಂಘಟನಾತ್ಮಕ ಬೆಳವಣಿಗೆಗಳು ಸ್ಥಾಪಿತವಾದವು. (ನೌಕರಶಾಹಿ ವರ್ಗ ಸೃಷ್ಟಿ).

6) ಆಧುನೀಕರಣವು ಮನೋನಿಷ್ಠ ಹಾಗೂ ಮಾನಸಿಕವಾದ ಬದಲಾವಣೆಗಳನ್ನು ಒಳಗೊಂಡಿರುತ್ತದೆ. (ಹೆಚ್ಚು ಸ್ವತಂತ್ರ, ಅನುಭವಕ್ಕೆ ಪ್ರಾಮುಖ್ಯತೆ, ಮುಕ್ತ ಮನಃಸ್ಥಿತಿ).

**ಆಧುನೀಕರಣದ ಮಾನಕಗಳು:**

ಆಧುನೀಕರಣವನ್ನು ಗುರುತಿಸುವುದು ಎಂದರೆ ಹೆಚ್ಚು ಮುಂದುವರೆದ ಆಧುನಿಕ ಸಮಾಜಗಳ ಗುಣಲಕ್ಷಣಗಳನ್ನು ಗುರುತಿಸುವುದಾಗಿದೆ. ರುಸ್ಟೋವ್ ಮತ್ತು ವಾರ್ಡ್ ಪ್ರಕಾರ ಕೆಲವು ಮಾನಕಗಳೆಂದರೆ,

1) ಅರ್ಥವ್ಯವಸ್ಥೆಯ ಕೈಗಾರೀಕರಣ, ಕೃಷಿ, ಹಾಲು ಹೈನುಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿ.

2) ವಿಚಾರಗಳ ವಿನಿಮಯ.

3) ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣದ ಪ್ರಸಾರ.

4) ಪ್ರಧಾನಿತ ಅಂತಸ್ತಿನಿಂದ ಸಾಧಿತ ಅಂತಸ್ತಿನೆಡೆಗೆ ವರ್ಗಾವಣೆ.

5) ಭೌತಿಕ ಜೀವನಮಟ್ಟದಲ್ಲಿ ಸುಧಾರಣೆ ಸಾಧಿಸಿರುವುದು.

6) ಪ್ರಾಥಮಿಕ, ಮಾಧ್ಯಮಿಕ, ತೃತೀಯ ವಲಯದ ಕಾರ್ಮಿಕರ ವಿಶ್ಲೇಷಣೆ.

7) ನಗರೀಕರಣ.

8) ಶಿಶು ಜನನ ಪ್ರಮಾಣ.

9) ಆಡಳಿತದಲ್ಲಿ ಸಾರ್ವಜನಿಕ ಸಹಭಾಗಿತ್ವ.

**ಭಾರತದಲ್ಲಿ ಆಧುನೀಕರಣ ಪ್ರಕ್ರಿಯೆ:**

ಆಧುನೀಕರಣವು ಒಂದು ಸಾರ್ವತ್ರಿಕ ಪ್ರಕ್ರಿಯೆಯಾಗಿದ್ದರೂ ಕೂಡ ಇದು ಎಲ್ಲಾ ಕಡೆಗಳಲ್ಲೂ ಒಂದೇ ತೆರನಾಗಿರುವುದಿಲ್ಲ. ಬೇರೆ ಬೇರೆ ಸಮಾಜದಲ್ಲಿ ಬೇರೆ ಬೇರೆ ಇದೆ. ಬೇರೆ ಬೇರೆ ರೀತಿಗಳಲ್ಲಿ ಸಂಭವಿಸುತ್ತದೆ. ಭಾರತದಲ್ಲಿ ನೋಡುವುದಾದರೆ,

1) ಆಧುನೀಕರಣ ಮಟ್ಟಗಳು:

* ರಾಜಕೀಯವಾಗಿ, ವಸಾಹತು ಶಾಹಿ ಆಳ್ವಿಕೆಯಿಂದ ಪ್ರಜಾಸತ್ತಾತ್ಮಕ ಆಳ್ವಿಕೆ ಒಪ್ಪಿಕೊಂಡು ಮುಂದುವರೆಸುತ್ತಿರುವುದು.

* ಆರ್ಥಿಕವಾಗಿ, ಕೃಷಿಯ ಅವಗಣನೆ ಇಲ್ಲದಿದ್ದರೂ ಕೈಗಾರಿಕಾ ಅರ್ಥವ್ಯವಸ್ಥೆ ಬಗ್ಗೆ ವಿಶೇಷ ಒಲವಿದೆ. (ಜಾಜಮಾನಿ ವ್ಯವಸ್ಥೆ ಕಣ್ಮರೆಯಾಗಿದೆ.)

* ಸಾಮಾಜಿಕವಾಗಿ, ಸಾಭಿತ ಅಂತಸ್ತಿನ ಕಡೆಗೆ ಸಾಗುತ್ತಿದ್ದೇವೆ.

* ಸಾಂಸ್ಕೃತಿಕವಾಗಿ, ಮತಾತೀತವಾದ, ವಿಚಾರವಾದ ಮತ್ತು ಉದಾರವಾದ ಎಂಬ ತತ್ವದರ್ಶನ ಸ್ವೀಕರಣೆ.

2) ಭಾರತದಲ್ಲಿ ಆಧುನೀಕರಣಕ್ಕೆ ಆಯ್ಕೆಮಾಡಿಕೊಮಡ ಸಾಧನಗಳು (ಪಂಚವಾರ್ಷಿಕ ಯೋಜನೆ, ಔಪಚಾರಿಕ ಶಿಕ್ಷಣ, ವಿದೇಶಿ ಸಹಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಗತಿ).

3) ಆಯ್ಕೆಯಾದಂತ ಮತ್ತು ಪಾಕ್ಷಿಕ ಸ್ವರೂಪದ ಪ್ರಕ್ರಿಯೆಯಾಗಿ ಆಧುನೀಕರಣ:

ಬ್ರಿಟೀಷರು ಆಯ್ಕೆಯಾದ ವಿಷಯಗಳಲ್ಲಿ ಮಾತ್ರ ಬದಲಾವಣೆ ಬಯಸಿದ್ದರು. (ಶಿಕ್ಷಣ, ಕೈಗಾರೀಕರಣ, ನಗರೀಕರಣ). ಆದರೆ ಸೂಕ್ಷ್ಮ ಸಂಗತಿಗಳಾದ ಜಾತಿ, ಬಂಧುತ್ವ, ಸಮುದಾಯದಲ್ಲಿ ಬದಲಾವಣೆಗೆ ಸಹಕರಿಸಲಿಲ್ಲ.

4) ಆಧುನೀಕರಣ ಮತ್ತು ಸಂಪ್ರದಾಯಗಳ ಸಹ ಅಸ್ತಿತ್ವ.

5) ಆಧುನಿಕತೆಯೊಂದಿಗೆ ರಾಜಿ ಮಾಡಿಕೊಂಡಿರುವ ಸಂಪ್ರದಾಯತೆ.

6) ಭಾರತೀಯತೆಯನ್ನು ಕಳೆದುಕೊಳ್ಳದೇ ಆಧುನಿಕ ಸಂಶೋಧನೆ ಒಪ್ಪಿಕೊಳ್ಳುವುದು.

## ಆಧುನೀಕರಣದ ಸಮಸ್ಯೆಗಳು:

1) ಸಾಮಾಜಿಕ ಸಮತೋಲನದ ಸವಾಲು: ಸಮಾಜವು ಎಲ್ಲಾ ದಿಕ್ಕಿನಲ್ಲೂ ಒಂದೇ ಬಾರಿ ಬದಲಾವಣೆಯಾಗಲು ಸಾಧ್ಯವಿಲ್ಲ. ಉದಾ: ಭಾರಿ ಪ್ರಮಾಣದ ಶೈಕ್ಷಣಿಕ ಅವಕಾಶಗಳು – ಕಡಿಮೆ ಉದ್ಯೋಗಾವಕಾಶ.

2) ಬದಲಾಗದೆ ಉಳಿಯುವ ಸಂರಚನೆಗಳು: ಆಧುನಿಕ ಪ್ರಕ್ರಿಯೆ ನಡೆದಂತೆಲ್ಲಾ ಸಾಂಸ್ಥಿಕ ರಚನೆಯಲ್ಲೂ ಕೂಡ ಬದಲಾವಣೆಯಾಗಬೇಕು. ಕೆಲವೊಮ್ಮೆಬದಲಾಗದೇ ಹಾಗೇ ಉಳಿಯುತ್ತವೆ. ಉದಾ: ಕೈಗಾರಿಕೆ, ಆಧುನೀಕರಣವಾದರೂ ಕುಟುಂಬ ಜಾತಿವ್ಯವಸ್ಥೆ ಹಾಗೇ ಇವೆ.

3) ಸಾಂಪ್ರದಾಯಿಕ ಕ್ರಮಗಳೊಳಗೆ ಸಂಘರ್ಷ: ಉದಾ: ಎಂ.ಬಿ.ಬಿ.ಎಸ್. ವೈದ್ಯರಿಗೂ ಸಾಂಪ್ರದಾಯಿಕ ನಾಟಿ ವೈದ್ಯರಿಗೆ.

4) ಆಧುನಿಕ ಮತ್ತು ಪರಂಪರೆಯ ಮೌಲ್ಯದೊಂದಿಗೆ ಸಂಘರ್ಷ: ಆಧುನಿಕ ಕಟ್ಟಡ ನಿರ್ಮಾಪಕರು ಮತ್ತು ಪುರಾತನ ವಾಸ್ತುಶಿಲ್ಪ ಶಾಸ್ತ್ರ.

5) ಆಧುನೀಕರಣಗೊಂಡಿರುವ ಮತ್ತು ಆಧುನೀಕರಣಗೊಳ್ಳುತ್ತಾ ಇರುವ ನಿಯೋಗಗಳ ನಡುವೆ ಸಹಕಾರದ ಕೊರತೆ.

6) ಗರಿಗೆದರುವ ಆಶಯಗಳು, ಆದರೆ ಈಡೇರಿಸಲಾಗದ ವ್ಯವಸ್ಥೆಯ ಸಮಸ್ಯೆಗಳು.

**ಪಾಶ್ಚಾತ್ಯೀಕರಣ:**

* ವ್ಯಾಪ್ತಿ ವಿಶಾಲವಾದುದು

* ಇದು ವರ್ತನೆ, ಜ್ಞಾನ ಮೌಲ್ಯಗಳಿಗೆ ಸಂಬಂಧಿಸಿದ್ದು.

* ಇದು ಮದ್ಯಮ ವರ್ಗದ ವಿದ್ಯಮಾನ.

* ಅಪೂರ್ಣ ಮತ್ತು ಸಂಕುಚಿತ.

**ಆಧುನೀಕರಣ:**

* ಪಾಶ್ಚಾತ್ಯೀಕರಣಕ್ಕಿಂತಲೂ ಬಹಳ ವಿಸ್ತ್ರತ ವ್ಯಾಪ್ತಿ.

* ಹೊಸ ಕಾರ್ಯ ನಿರ್ವಹಿಸಲು ಹುಟ್ಟುವ ಸಂರಚನೆ.

* ಇಡೀ ಜನರಾಶಿಗೆ ಅವರ ಎಲ್ಲಾ ಆಚರಣೆಗೆ ಸಂಬಂಧಿತ.
* ವೈಚಾರಿಕ ಮತ್ತು ಪೂರ್ಣ.

**ಆಧುನಿಕತಾವಾದ ವಿರುದ್ಧ ಸಂಪ್ರದಾಯವಾದ:**

**ಸಂಪ್ರದಾಯವಾದ:**

* ಕೃಷಿ ಪ್ರಧಾನ ಸಮಾಜ ನಗರೀಕರಣವಿಲ್ಲ.
* ಸಂಪ್ರದಾಯಗಳ ಜಡತ್ವ.
* ಆಧುನಿಕ ವಿಜ್ಞಾನಕ್ಕೆ ವಿರೋಧ ವ್ಯಾಪ್ತಿ ವಿಶಾಲ.
* ಸಾಂಪ್ರದಾಯಿಕವಾದ ಕೃಷಿ ಮತ್ತು ಹಳೆಯದರ ಮುಂದುವರಿಯದ ಕೃಷಿ ವಿಧಾನಗಳಿಗೆ ಒತ್ತು.
* ವಿವಾಹ ಶ್ರೇಷ್ಠವಾದ ಬಂಧ.
* ಪ್ರಜಾಪ್ರಭುತ್ವ ಆಡಳಿತ.
* ಮುಚ್ಚಿದ ಮನಸ್ಥಿತಿ ಅನುಭವಕ್ಕೆ ಅವಕಾಶವಿಲ್ಲ.
* ಶಿಕ್ಷಣದ ಪ್ರಾಮುಖ್ಯತೆಯ ಅರಿವಿಲ್ಲ.
* ಪ್ರಧಾನಿತ ಅಂತಸ್ತು.

**ಆಧುನಿಕವಾದ:**

* ಕೈಗಾರಿಕಾ ಪ್ರಧಾನ ಸಮಾಜ ನಗರೀಕರಣ.
* ಸಂಪ್ರದಾಯಗಳ ಕ್ರಿಯಾಶೀಲತೆ.
* ವಿಜ್ಞಾನವನ್ನು ಮಾನವ ಸಂಗತಿಗಳಿಗೆ ಅನ್ವಯಿಸುತ್ತದೆ.
* ಆಧುನಿಕ ತಂತ್ರಜ್ಞಾನ ಹೊಸ ಕಾರ್ಯ ನಿರ್ವಹಣೆ ಕ್ರಾಂತಿಯೆಡೆಗೆ ಒಲವು.
* ವಿವಾಹದ ಆಧ್ಯಾತ್ಮಿಕ ನೆಲೆ ಕುಸಿಯತೊಡಗುತ್ತಿದೆ.
* ನೌಕರಿಶಾಹಿ ಸೃಷ್ಟಿ.
* ತೆರೆದ ಮನ:ಸ್ಥಿತಿ.
* ಅರಿವಿರುತ್ತದೆ.
* ಸಾಧಿತ ಅಂತಸ್ತು.

## ಕೈಗಾರೀಕರಣ ಮತ್ತು ನಗರೀಕರಣ:

**1) ನಗರೀಕರಣ:**

ಭಾರತಕ್ಕೆ ನಗರ ಜೀವನ ಹೊಸದೇನಲ್ಲಾ. ಪ್ರಾಗೈತಿಹಾಸಿಕ ಸಾಕ್ಷಾಧಾರಗಳಿಂದ ಸುಮಾರು 6000 ವರ್ಷಗಳಿಂದಲೂ ಭಾರತದಲ್ಲಿ ನಗರಗಳು ಅಸ್ತಿತ್ವದಲ್ಲಿದ್ದವು. ಇದಕ್ಕೆ ಹರಪ್ಪಾ ಮತ್ತು ಮೆಹಂಜೋದಾರೋ ನಗರಗಳೇ ಸಾಕ್ಷಿ. ಸ್ವಾತಂತ್ರ್ಯಾ ನಂತರವಂತೂ ಕೈಗಾರೀಕರಣ ಹಾಗೂ ನಗರಗಳಿಗೆ ಹೊಸವೇಗ ಸಿಕ್ಕಿದಂತಾಗಿ 1991ರ ಹೊತ್ತಿಗೆ 21.8 ಕೋಟಿ ಪಟ್ಟಣ ವಾಸಿಗಳಾಗಿದ್ದರು. ಉದಾರೀಕರಣ, ಖಾಸಗೀಕರಣ, ಜಾಗತೀಕರಣದಂತಹ ಕೆಲವು ಆರ್ಥಿಕ ಸುಧಾರಣೆಗಳು ಭಾರತದ ನಗರ ಜೀವನವನ್ನು ಸಂಕೀರ್ಣಗೊಳಿಸಿದವು.

**ನಗರೀಕರಣದ ಪರಿಕಲ್ಪನೆ:**

ನಗರಗಳಲ್ಲಿ ಜನರು ಕೇಂದ್ರೀಕರಣಗೊಳ್ಳುವ ಪ್ರಕ್ರಿಯೆಯನ್ನು ನಗರೀಕರಣ ಎನ್ನಲಾಗಿದೆ. ನಗರೀಕರಣವು ನಿರಂತರವಾದ ಪ್ರಕ್ರಿಯೆಯಾಗಿದ್ದು ಕಡಿಮೆ ಕೇಂದ್ರೀಕರಣದ ಸ್ಥಿತಿಯಿಂದ ಹೆಚ್ಚು ಕೇಂದ್ರೀಕರಣವಿರುವ ಸ್ಥಿತಿಯೆಡೆಗೆ ಜನರ ಚಲನೆ ಸೂಚಿಸುತ್ತದೆ. ಈ ಚಲನೆ ಪ್ರತ್ಯೇಕವಾಗಿ, ಏಕಪ್ರಕಾರವಾಗಿ ಹಾಗೂ ನಿರಂತರವಾಗಿರಬೇಕೆಂದೇನೂ ಇಲ್ಲ.

ವಾಲ್ಲೇಸ ಮತ್ತು ವಾಲ್ಲೇಸ್‌ರವರು ಹೇಳುವಂತೆ, ಗ್ರಾಮೀಣ ಪ್ರದೇಶಗಳಿಂದ ಜನರು ನಗರಗಳತ್ತ ಚಲಿಸುವುದನ್ನೇ ನಗರೀಕರಣ ಎನ್ನಬಹುದು.

ನಗರೀಕರಣವು ಒಂದು ಜಾಗತಿಕ ವಿದ್ಯಮಾನವಾಗಿದ್ದು, ಕೈಗಾರಿಕಾ ಕ್ರಾಂತಿಯಿಂದ ನಗರಗಳ ಬೆಳವಣಿಗೆ ಹೆಚ್ಚಾಯಿತು. ಜಗತ್ತಿನ ಅತಿ ದೊಡ್ಡ ನಗರಗಳಲ್ಲಿ ಈಗಾಗಲೇ ಒಂದು ಕೋಟಿಗಿಂತಲೂ ಹೆಚ್ಚು ಜನಸಂಖ್ಯೆ ಅಡಕವಾಗಿದೆ. (ಟೋಕಿಯೋ, ನ್ಯೂಯಾರ್ಕ್, ಮುಂಬೈ, ಕಲ್ಕತ್ತಾ).

**ಭಾರತದಲ್ಲಿ ನಗರೀಕರಣ:**

ಭಾರತಕ್ಕೆ ನಗರಗಳೇನೂ ಹೊಸತಲ್ಲ. ಮಗಧ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಅಯೋಧ್ಯಾ ಕಾಶಿ, ಬೌದ್ಧರ ಕಾಲದಲ್ಲಿ ನಳಂದಾ, ತಕ್ಷಶಿಲಾ, ಗುಪ್ತರ ಕಾಲದಲ್ಲಿ ಕನೌಜ, ಬ್ರಿಟೀಷರ ಕಾಲದಲ್ಲಿ ಕಲ್ಕತ್ತಾ, ಮುಂಬಯಿ, ದೆಹಲಿ, ಮದ್ರಾಸ್ ಹೀಗೆ ಹಂತ ಹಂತವಾಗಿ ನಗರಗಳು ಬೆಳೆಯುತ್ತಾ ಬಂದವು.

ಸ್ವಾತಂತ್ರ್ಯ ನಂತರದಲ್ಲಿ ಮಾತ್ರ ಹಲವಾರು ಹೊಸ ಮಾದರಿಯ ಪಟ್ಟಣಗಳು ಮತ್ತು ನಗರಗಳು ತ್ವರಿತಗತಿಯ ಕೈಗಾರೀಕರಣದಿಂದಾಗಿ ಬೆಳೆದು ಬಂದವು. ಕೆಲವು ನಗರಗಳು ಕೈಗಾರಿಕಾ ನಗರಗಳಾಗಿಯೇ ಉಳಿದುಕೊಂಡವು. ಉದಾ: ರೊರ್ಕೆಲಾ, ಬಿಲಾಯ್, ದುರ್ಗಾಪುರ, ಚಿತ್ತರಂಜನ್, ಕೆಲವು ನಗರಗಳು ರಾಜಧಾನಿ ನಗರಗಳಾಗಿ ಬೆಳವಣಿಗೆ ಹೊಂದಿದವು.

ಉದ್ಯೋಗಾವಕಾಶಗಳ ಹೆಚ್ಚಳದಿಂದಾಗಿ ಮುಂಬೈ, ಚೆನ್ನೈ, ಕಲ್ಕತ್ತಾ, ಕಾನ್ಪುರ, ಅಹಮದಾಬಾದ್, ಹೈದ್ರಾಬಾದ್ ನಗರಗಳು ಬೆಳೆದು ನಿಂತವು. ಅಂಕಿ ಅಂಶ ನೋಡುವುದಾದರೆ, 1951ರಲ್ಲಿ 2843 ನಗರಗಳಿದ್ದವು. 1991ರಲ್ಲಿ 3768 ನಗರಗಳು.

1951–62.4 ದಶಲಕ್ಷ–17.3%ರಷ್ಟು ನಗರ ಜನತೆ.

1991–217.6 ದಶಲಕ್ಷ–25.7%ರಷ್ಟು ನಗರ ಜನತೆ.

2011–31.8%ರಷ್ಟು ನಗರ ಜನತೆ.

ಹೀಗೆ ನಗರೀಕರಣ ಪ್ರಕ್ರಿಯೆ ನಿರಂತರವಾಗಿ ಮುಂದುವರೆಯುತ್ತಲೇ ಇದೆ.

* ಭಾರತವು ಗ್ರಾಮಗಳ ದೇಶವೆಂದು ಪರಿಗಣಿತವಾಗಿದ್ದರೂ ಕೂಡ ಅದು ಪಟ್ಟಣಿಗರ ದೃಷ್ಟಿಯಿಂದ ಜಗತ್ತಿನಲ್ಲಿ 2ನೇ ಸ್ಥಾನದಲ್ಲಿದೆ

* ಒಟ್ಟು ವಿಸ್ತೀರ್ಣದ 43,606 ಚ.ಕಿ.ಮೀ. ಪ್ರದೇಶ ಮಾತ್ರ ನಗರ ಪ್ರದೇಶವಿದ್ದು, ಜನಸಾಂದ್ರತೆ ಒಂದೇ ಸಮನೆ ಏರುತ್ತಿದೆ.

* ಮಹಾನಗರಗಳಲ್ಲಿ ಮಾತ್ರ ಜನಸಂಖ್ಯೆಯ ಭಾರಿ ಹೆಚ್ಚಳವಾಗುತ್ತಿದೆ. ಉದಾ: ದಶವಾರ್ಷಿಕ ದರದಲ್ಲಿ ನೋಡುವುದಾದರೆ ಬೆಂಗಳೂರು, ದೆಹಲಿ, ಪುಣೆಯಲ್ಲಿ ಶೇ.50ರಷ್ಟು ಹೆಚ್ಚಾಗಿದೆ.

**ನಗರೀಕರಣಕ್ಕೆ ಕಾರಣವಾದ ಅಂಶಗಳು:**

* ಜನಸಂಖ್ಯೆಯಲ್ಲಿನ ಸಹಜವಾದ ಹೆಚ್ಚಳ

* ನಗರಗಳ ಕಡೆಗೆ ಜನರ ನಿರಂತರ ವಲಸೆ

* ನಗರ ಕಡೆಗೆ ನೂಕುವ ಅಂಶಗಳು:
  * ಗ್ರಾಮೀಣ ಜನರು ಜೀವನ ಶೈಲಿಯಲ್ಲಿ ಬದಲಾವಣೆ ಬಯಸಿ ವಲಸೆ ಹೋಗುವರು.
  * ಆಸ್ತಿಯ ಸರಿಯಾದ ಹಂಚಿಕೆಯಿಲ್ಲದೇ, ಉದ್ಯೋಗ ಆರಿಸಿ.
* ನಗರಗಳತ್ತ ಸೆಳೆಯುವ ಅಂಶಗಳು. ಉದಾ: ಸೌಕರ್ಯಗಳು.
  * ಉದ್ಯೋಗಾವಕಾಶಗಳ ಸೆಳೆತ
  * ನಗರಗಳ ಆಕರ್ಷಣೆಯ ಸೆಳೆತ
* ನಗರಗಳ ಗಡಿ ಬದಲಾವಣೆಗಳು.

**ಭಾರತದಲ್ಲಿ ನಗರೀಕರಣದಿಂದಾದ ಸಮಸ್ಯೆಗಳು:**

* ನಗರ ಬಡತನ ಹೆಚ್ಚಾಗುವುದು
* ಕೊಳಚೆ ಪ್ರದೇಶ ಸೃಷ್ಟಿ
* ಯೋಗ್ಯವಲ್ಲದ ಕಟ್ಟಡ ನಿರ್ಮಾಣ
* ಅತಿಯಾದ ಜನಸಾಂದ್ರತೆ
* ಮೂಲಭೂತ ಸೌಕರ್ಯದ ಕೊರತೆ
* ವಾಹನ ದಟ್ಟಣೆ ಸಮಸ್ಯೆ
* ಕೈಗಾರಿಕಾ ಅಪಘಾತಗಳು ಮತ್ತು ರೋಗಗಳು.

## ಪ್ರಚಲಿತವಾದ ಸಾಮಾಜಿಕ ಪಿಡುಗುಗಳು

**ಮೂಲಭೂತವಾದ:**

ಕೋಮುವಾದ, ಪ್ರಾದೇಶಿಕವಾದ, ಜಾತಿವಾದ ಹಾಗೂ ಭಯೋತ್ಪಾದನೆ ಜೊತೆಗೆ ಮೂಲಭೂತವಾದ, ಅದರಲ್ಲೂ ಮತೀಯ ಮೂಲಭೂತವಾದವು ಸಾಮಾಜಿಕ ಪಿಡುಗಿನಂತಿದ್ದು ಮಾನವ ಸಮಾಜಕ್ಕೆ ಅಪಾರವಾದ ಹಾನಿಯನ್ನು ತರುತ್ತದೆ.

**ಅರ್ಥ:**

ಕೆಲವೊಂದು ತತ್ವಗಳು ಬಹಳ ಪ್ರಾಥಮಿಕ ಸ್ವರೂಪದವು. ಮೂಲಭೂತ ಸ್ವರೂಪದವು ಎಂಬ ಅತ್ಯಂತ ಬಲವಾದ ನಂಬಿಕೆಯನ್ನು ಅಥವಾ ಒಂದು ಬಗೆಯ ಶಾಸ್ತ್ರಾಂಧತೆಯನ್ನು ಮೂಲಭೂತವಾದ ಎನ್ನಲಾಗಿದೆ.

ಈ ಮೇಲೆ ತಿಳಿಸಿದಂತಹ ರೀತಿಯ ಮತ್ತು ಯಾವುದೇ ಬಗೆಯ ರಾಜಿ, ಒಪ್ಪಂದಕ್ಕೆ ಒಡಂಬಡವ ನಂಬಿಕೆಯು ಧಾರ್ಮಿಕ ಜನಾಂಗೀಯ ಕಾಲ ಸಂಬಂಧೀ ಹಾಗೂ ವಿಚಾರಗಳಲ್ಲಿರಬಹುದು. ಇದನ್ನು ಬೇರೆ ಬೇರೆ ರೀತಿಯಲ್ಲಿ ಗುರುತಿಸಲಾಗಿದೆ.

ಉದಾ: ಮತೀಯ ಮೂಲಭೂತವಾದ, ಜನಾಂಗೀಯ ಮೂಲಭೂತವಾದ, ಭಾಷಾ ಮೂಲಭೂತವಾದ ಇತ್ಯಾದಿ.

ಈ ಬೆಳವಣಿಗೆಯನ್ನು ಕ್ರೈಸ್ತ ಮತದ ಬೆಳವಣಿಗೆಯ ಇತಿಹಾಸದಲ್ಲೇ ಕಾಣಬಹುದು. ಇದು ಪ್ರತಿಗಾಮಿ ಆಂದೋಲನವಾಗಿ ಅಮೇರಿಕಾದ ಪ್ರೊಟೆಸ್ಟೆಂಟ್ ಮುಂದಾಳತ್ವದಲ್ಲಿ 19ನೇ ಶತಮಾನದಲ್ಲಿಯೇ ಆರಂಭವಾಗಿತ್ತು. ಬೈಬಲ್‌ನಲ್ಲಿ ಉಲ್ಲೇಖವಿರುವುದೆಲ್ಲಾ ಸತ್ಯವೆಂದು ವಾದ.

**ಮತೀಯ ಮೂಲಭೂತವಾದದ ಲಕ್ಷಣಗಳು:**

* ಮತೀಯ ಮೂಲಭೂತವಾದದ ಸಮರ್ಥಕರಲ್ಲಿ ತಾವು ನೆಚ್ಚಿದ, ನಂಬಿದ ಮತೀಯ ತತ್ವ ಆದರ್ಶಗಳೇ ಮೂಲಭೂತವಾದ ಸ್ವರೂಪದವುಗಳು ಮತ್ತು ಪ್ರಶ್ನಾತೀತ ಆದವುಗಳು ಎಂಬ ಸೂತ್ರಾಂಧ ಪ್ರವೃತ್ತಿಯಿರುತ್ತದೆ.

* ಇವು ಉದಾರವಾದಕ್ಕೆ ವಿರುದ್ಧವಾದುದು.

* ಮತೀಯ ಪ್ರಾಮುಖ್ಯವುಳ್ಳ 'ಪವಿತ್ರ ಗ್ರಂಥ'ವೊಂದರಲ್ಲಿ ಹೇಳಿದೆಲ್ಲವೂ ಪ್ರಶ್ನಾತೀತವಾದುದು, ಅಪರಿವರ್ತನೀಯ ಎಂಬ ನಂಬಿಕೆ.

* ನಂಬಿದ ಗ್ರಂಥದ ಯಾಉದೇ ಬದಲಾಣೆಗೂ ಒಪ್ಪುವುದಿಲ್ಲ.

* ಇದು ಮತಾತೀತವಾದುದನ್ನು ವಿರೋಧಿಸುತ್ತದೆ.

* ಮತೀಯ ಮೂಲಭೂತವಾದವು ಪ್ರಾದೇಶಿಕ ಮಟ್ಟದಿಂದ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದವರೆಗಿನ ಆಯಾಮ ಹೊಂದಿರುತ್ತದೆ.

* ಇದನ್ನು ಅತ್ಯುಗ್ರ ರೂಪದ ಭಯೋತ್ಪಾದನೆಯಂತಹ ಪಿಡುಗಿನಲ್ಲಿ ಗುರುತಿಸಬಹುದು.

* ಪ್ರತ್ಯೇಕತೆಯನ್ನು ಪೋಷಿಸುತ್ತದೆ.

* ಇದೊಂದು 'ಸ್ವಜನ ಶ್ರೇಷ್ಠತಾ ವಾದ'ವಾಗಿದೆ.

ಭಾರತದ ಸಂದರ್ಭದಲ್ಲಿ ನೋಡುವುದಾದರೆ, ಮೂಲಭೂತವಾದವು ಆಗಲೇ ದೇಶ ವಿಭಜಿಸಿ ಮತ್ತೇ ಅದೇ ರೀತಿಯ ಲಕ್ಷಣಗಳು ಗೋಚರಿಸುತ್ತಿವೆ. ಇದಕ್ಕೆ ಅವಕಾಶ ನೀಡಬಾರದು.

'ಉದಾತ್ತ ಭಾವನೆಗಳು ಎಲ್ಲಾ ಕಡೆಯಿಂದಲೂ ಹರಿದು ಬರಲಿ' – ಋಗ್ವೇದ.

'ಪರಮಾತ್ಮನು ಎಲ್ಲರನ್ನೂ ಕಾಪಾಡಲಿ, ನಮಗೆ ಪೋಷಣೆ ನೀಡಲಿ, ನಾವೆಲ್ಲರೂ ಬಲಶಾಲಿಗಳಾಗೋಣ' – ಉಪನಿಷತ್.

ಇವೆಲ್ಲವೂ ಮತೀಯ ಮೂಲಭೂತವಾದಕ್ಕೆ ಬೇಕಾದ ಪರಿಹಾರದ ಅಂಶಗಳು ನಮ್ಮ ಗ್ರಂಥಗಳಲ್ಲೇ ಲಭ್ಯವಿದೆ.

**ಭಯೋತ್ಪಾದನೆ:**

ಭಯೋತ್ಪಾದನೆ ಎಂಬ ಪದವನ್ನು ಒಡೆದು ವಿಶ್ಲೇಷಿಸಿದರೆ ಭಯ+ಉತ್ಪಾದನೆ ಎಂದಾಗುತ್ತದೆ. ಅಂದರೆ ಭಯವನ್ನು ಉತ್ಪತ್ತಿ ಮಾಡುವುದು ಎಂಬಂತೆ ಸೂಚಿಸುತ್ತದೆ. ತಮ್ಮ ಉದ್ದೇಶಗಳ ಈಡೇರಿಕೆಗಾಗಿ ಸಮಾಜದಲ್ಲಿ ಭಯವನ್ನು ಹುಟ್ಟಿಸುವುದು ಮತ್ತು ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳುವುದೇ ಭಯೋತ್ಪಾದನೆಯಾಗಿದೆ.

ಸಂಘಟಿತ ಸಮೂಹ ಒಂದು ಹಿಂಸಾಚಾರಕ್ಕಿಳಿದು ಸಮಾಜದಲ್ಲಿ ಅಶಾಂತಿ ತಲೆದೋರುವಂತೆ ಮಾಡುವುದು ಮತ್ತು ಆಡಳಿತವನ್ನು ವಿಫಲಗೊಳಿಸುವುದೇ ಭಯೋತ್ಪಾದನೆಯಾಗಿದೆ. ಇದು ಉಗ್ರವಾದದ ಒಂದು ರೂಪ. ಇತ್ತೀಚೆಗೆ ಹೆಚ್ಚು ಕೇಳಿಸುತ್ತಿರುವ ಇಸಿಸ್ ಸಂಘಟನೆ, ಅಲ್‌ಖೈದಾ ಸಂಘಟನೆಗಳ ಸಂಘರ್ಷಣೆ. ಈ ಸಂಘಟನೆಗಳ ಭಯೋತ್ಪಾದನೆಯ ಪರಿಯನ್ನು ನಾವು ತೀಕ್ಷ್ಣವಾಗಿ ಖಂಡಿಸುತ್ತಿದ್ದೇವೆ ಮತ್ತು ಅವುಗಳಿಂದಾಗುತ್ತಿರುವ ಪರಿಣಾಮಗಳನ್ನು ಸಹ ಪ್ರತ್ಯಕ್ಷ ವೀಕ್ಷಿಸುತ್ತಿದ್ದೇವೆ. ಈ ಸಂಘಟನೆಗಳು ಸ್ವಾರ್ಥಪರವಾದವುಗಳು. ಇವು ಸಾಮಾಜಿಕ ಪಿಡುಗಿನಂತೆಯೇ ಹೆಮ್ಮರವಾಗಿ ಬೆಳೆಯುತ್ತವೆ.

**ನಕ್ಸಲ್‌ವಾದ:**

ನಕ್ಸಲ್ ಎಂದ ಕೂಡಲೇ ನೆನಪಾಗುವುದು ಭಾರತದ ಈಶಾನ್ಯ ಭಾಗದ ರಾಜ್ಯಗಳು. ಭಾರತದಲ್ಲಿ ಈ ಆಂದೋಲನಗಳಿಂದ ಇದೊಂದು ಹಿಂಸಾತ್ಮಕ ಮತ್ತು ದಂಗೆಯ ಸ್ವರೂಪದ್ದು.

ನಕ್ಸಲ್‌ಬಾರಿ ಎಂಬ ಪುಟ್ಟ ಪ್ರದೇಶದಲ್ಲಿ ಪ್ರಾರಂಭವಾದ ರೈತರ ಹೋರಾಟವು ಮುಂದೆ ಸಶಸ್ತ್ರ ಬಂಡಾಯವಾಗಿ ಹೊರಹೊಮ್ಮಿತು.

**ನಕ್ಸಲ್‌ವಾದ ಚಳುವಳಿಗೆ ಕಾರಣಗಳು:**

1) ಆರ್ಥಿಕ ಅಸಂತುಷ್ಟಿ

2) ಅರಣ್ಯಗಳ ರಾಷ್ಟ್ರೀಕರಣ

3) ಸರ್ಕಾರಗಳ ಪಕ್ಷಪಾತದ ಧೋರಣೆ

4) ಅನಕ್ಷರತೆ

5) ಉಗ್ರಗಾಮಿ ಮಾರ್ಕ್ಸಿಸ್ಟರ ವಾದಗಳು

6) ರೈತ ಸಂಘಟನೆಗಳು

**ಭ್ರಷ್ಟಾಚಾರ:**

ಭ್ರಷ್ಟಾಚಾರ ಸಾರ್ವತ್ರಿಕವಾದುದು, ನ್ಯಾಯಾಂಗವನ್ನು ಒಳಗೊಂಡಂತೆ ಜೀವನದ ಎಲ್ಲಾ ರಂಗಗಳಲ್ಲೂ ಇದು ವ್ಯಾಪಿಸಿದೆ. ಪ್ರಸ್ತುತ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ, ಭ್ರಷ್ಟಾಚಾರಿಗಳಿಗಾಗಲೀ ಸಾಮಾಜಿಕ ಬಹಿಷ್ಕಾರವಿಲ್ಲ. ಭಾರತದಾದ್ಯಂತ ಸಿಗುವ ಒಂದೇ ಒಂದು ವಸ್ತುವೆಂದರೆ ಭ್ರಷ್ಟಾಚಾರ ಎಂದು ಅಭಿಪ್ರಾಯವಿದೆ.

ಕೊಪ್ಲಿಯವರ ಪ್ರಕಾರ, 'ಹೆರಿಗೆ ಆಸ್ಪತ್ರೆಯಿಂದ ಹಿಡಿದು ಸ್ಮಶಾನದವರೆಗೆ ಎಲ್ಲಾ ರಸ್ತೆಗಳಲ್ಲೂ ಭ್ರಷ್ಟಾಚಾರದ ವಾಸನೆ ಹರಡಿದೆ. ಯಾವ ವ್ಯಕ್ತಿಯೇ ಆಗಲೀ ಇದರಿಂದ ಮುಕ್ತವಾಗಿಲ್ಲ.' ಭ್ರಷ್ಟಾಚಾರವು ಆಚರಣೆಯಾಗಿರದೆ ಯಾವುದೇ ಒಂದು ಕ್ಷೇತ್ರವಿಲ್ಲ.

ಜಿ.ಎಸ್.ಭಾರ್ಗವರವರ ಪ್ರಕಾರ, 'ಸಾರ್ವಜನಿಕ ಸೇವಕ ತನಗಾಗಿ ಮತ್ತು ತನ್ನ ಕುಟುಂಬಕ್ಕಾಗಿ ಅಥವಾ ಸ್ನೇಹಿತರಿಗಾಗಿ ಪ್ರತ್ಯಕ್ಷ ಪರೋಕ್ಷವಾಗಿ ವಸ್ತುಗಳ ರೂಪದಲ್ಲಿ ಹಣದ ರೂಪದಲ್ಲಿ ಪ್ರಯೋಜನೆ ಪಡೆಯಲು ಕಾರ್ಯ ಮಾಡುವುದು, ಮಾಡದಿರುವುದು ಭ್ರಷ್ಟಾಚಾರ' ಎನಿಸಿಕೊಳ್ಳುತ್ತದೆ.

**ಭ್ರಷ್ಟಾಚಾರದ ವಿಧಗಳು:**

ಪ್ರೋ.ರಾಮ್ ಅಹ್ರಜಾರ ಪ್ರಕಾರ,

* ಲಂಚ
* ಸ್ವಜನ ಪಕ್ಷಪಾತ
* ಹಣ ದುರುಪಯೋಗ
* ಪೋಷಣೆ, ಆಶ್ರಯ
* ಪಕ್ಷಪಾತಿ

ಪ್ರೋ. ಜಿ.ಆರ್.ಮದನ್‌ರವರು 5 ಪ್ರಕಾರದ ಭ್ರಷ್ಟಾಚಾರ ಪಟ್ಟಿ ಮಾಡಿದ್ದಾರೆ.

* ರಾಜಕಾರಣಿಗಳಿಂದ ಭ್ರಷ್ಟಾಚಾರ
* ಅಧಿಕಾರಿಗಳಿಂದ ಭ್ರಷ್ಟಾಚಾರ
* ಪೋಲಿಸರಿಂದ ಭ್ರಷ್ಟಾಚಾರ
* ವ್ಯಾಪಾರಿಗಳಿಂದ ಭ್ರಷ್ಟಾಚಾರ

* ಗಣ್ಯ ವ್ಯಕ್ತಿಗಳಿಂದ ಭ್ರಷ್ಟಾಚಾರ

**ಭ್ರಷ್ಟಾಚಾರಕ್ಕೆ ಕಾರಣಗಳು:**

ಜಿ.ಆರ್. ಮದನ್‌ರವರ ಪ್ರಕಾರ,

* ರಾಜಕೀಯ ಘಟಕಗಳ ವಿಸ್ತೃತ ಕ್ಷೇತ್ರ
* ಪ್ರಜಾಸತ್ತಾತ್ಮಕ ಗಣರಾಜ್ಯದ ಹದಗೆಟ್ಟ ಸ್ಥಿತಿ
* ಮೌಲ್ಯಗಳಲ್ಲಿ ಬದಲಾವಣೆ
* ಭ್ರಷ್ಟಾಚಾರ ತಡೆಗಟ್ಟಲು ಇರುವ ಸಾಧನಗಳ ಕೊರತೆ.

ಸಂತಾನಂ ಸಮಿತಿಯ ಪ್ರಕಾರ,

* ಆಡಳಿತಾತ್ಮಕ ವಿಧಾನ
* ಸರ್ಕಾರಗಳು ಹೆಚ್ಚಾದ ಹೊಣೆ ಹೊತ್ತಿರುವುದು
* ಅರ್ಪಣಾ ಮನೋಭಾವ ಮತ್ತು ನಿಷ್ಠೆ ಕೊರತೆ
* ಜನರಿಗೆ ಗೊಂದಲಮಯವಾದ ವಿಧಿ ವಿಧಾನಗಳು
* ನಿಯಂತ್ರಣ ಸಾಧನದ ಕೊರತೆ

**ಸಾಮಾನ್ಯವಾಗಿ ಪಟ್ಟಿ ಮಾಡಬಹುದಾದ ಭ್ರಷ್ಟಾಚಾರ ಕಾರಣಗಳೆಂದರೆ,**

* ಆರ್ಥಿಕ ಅಭದ್ರತೆ
* ಹೆಚ್ಚಿನ ಆದಾಯ ತೆರಿಗೆ ದರ
* ಅತ್ಯಲ್ಪ ಸಂಬಳ
* ಸಾಮಾಜಿಕ ಆರ್ಥಿಕ ಆಧುನೀಕರಣ
* ಐಶ್ವರ್ಯ ಮತ್ತು ಅಧಿಕಾರ ದಾಹ
* ಪ್ರಜಾಪ್ರಭುತ್ವ ಪದ್ಧತಿ (ಚುನಾವಣೆಯಿಂದಲೇ ಭ್ರಷ್ಟಾಚಾರ)
* ಲೆಕ್ಕಕ್ಕೆ ಸಿಗದ ಕಪ್ಪು ಹಣ
* ಮೌಲ್ಯಗಳಲ್ಲಿ ಬದಲಾವಣೆ
* ಭ್ರಷ್ಟಾಚಾರ ನಿಯಂತ್ರಣ ಸಾಧನಗಳ ಕೊರತೆ
* ವಸ್ತುಗಳ ಮಿತಿ ಮೀರಿದ ಬೆಲೆ

ಹೀಗೆ ಹಲವಾರು ಕಾರಣಗಳಿಂದ ಭ್ರಷ್ಟಾಚಾರವು ಎಲ್ಲೇ ಮೀರುತ್ತಿದೆ.

**ಭ್ರಷ್ಟಾಚಾರದ ಪರಿಣಾಮ:**

ಭ್ರಷ್ಟಾಚಾರದ ಪರಿಣಾಮ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಬಹಳ ಅಪಾಯಕಾರಿಯಾದುದು. ಇದರ ಪರಿಣಾಮ ನೋಡುವುದಾದರೆ,

* ಇದು ದೇಶದ ಆರ್ಥಿಕ ಬೆಳವಣಿಗೆಗೆ ತಡೆಯೊಡ್ಡಿ ಸಾಮಾಜಿಕವಾದ ಶಿಸ್ತನ್ನು ಸಂಪೂರ್ಣವಾಗಿ ನಾಶ ಮಾಡುತ್ತದೆ.

* ಸಮಾಜದಲ್ಲಿ ಹಿಂಸೆಯನ್ನು, ಕಾನೂನುರಹಿತ ಸ್ಥಿತಿಯನ್ನು ಉಂಟುಮಾಡುತ್ತದೆ.

* ಜಾತಿಯತೇ, ಭಾಷಾಂಧತೆ ಮತ್ತು ಕೋಮುಕಲಹಗಳು ಹೆಚ್ಚುತ್ತವೆ.

* ಇದು ಅದಕ್ಷತೆ ಹೆಚ್ಚಿಸುವುದಲ್ಲದೇ ಸ್ವಜನ ಪಕ್ಷಪಾತ, ಸೋಮಾರಿತನವನ್ನು ಹೆಚ್ಚಿಸುತ್ತದೆ. ಆಡಳಿತದ ಎಲ್ಲಾ ವಿಭಾಗದಲ್ಲೂ ಅಶಿಸ್ತು ಪೋಷಿಸುತ್ತಿದೆ.

* ಕಪ್ಪು ಹಣದ ಸಂಗ್ರಹ ಹೆಚ್ಚುತ್ತದೆ.

* ಇವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುತ್ತದೆ.

* ಹಿತಾಸಕ್ತಿ ವಲಯದಲ್ಲಿ ಪಾಳೇಗಾರರು ಹುಟ್ಟಿಕೊಳ್ಳುತ್ತಾರೆ. ಆಡಳಿತ, ಶಿಕ್ಷಣ, ಸಮಾಜ ಕಲ್ಯಾಣ ಇತ್ಯಾದಿ ಕ್ಷೇತ್ರಗಳಲ್ಲಿ ಇವರ ಶಿಫಾರಸ್ಸುಗಳು ಅಂತಸ್ತು ಸೂಚಕಾಗಿ ಕೆಲಸ ಸಾಧಿಸುತ್ತವೆ.

* ಭ್ರಷ್ಟಾಚಾರ, ನಿಯಮಗಳನ್ನು ಕೇಲ ತಮಾಷೆಯ ಸ್ಥಾನಕ್ಕಿಳಿಸುತ್ತದೆ.

* ವಿಸ್ತೃತವಾದ ಸಮುದಾಯವನ್ನು ಬಲಗೊಳಿಸುವ ನಿಷ್ಠೆಯನ್ನು ಭ್ರಷ್ಟಾಚಾರ ದುರ್ಬಲಗೊಳಿಸುತ್ತದೆ.

ಹೀಗೆ ಭ್ರಷ್ಟಾಚಾರವು ಹಲವಾರು ಋಣಾತ್ಮಕ ಪರಿಣಾಮ ಬೀರುತ್ತದೆ.

**ಭ್ರಷ್ಟಾಚಾರ ನಿಯಂತ್ರಣಕ್ಕೆ ಕ್ರಮಗಳು:**

ಭ್ರಷ್ಟಾಚಾರದ ಮೇಲಿನ ಸಂತಾನಂ ಸಮಿತಿಯು ಗಮನಿಸಿದಂತೆ, ನಿರ್ಬಂಧಕ ಕ್ರಮಗಳನ್ನು ಯೋಜಿಸಿ, ಶಾಶ್ವತ ಮತ್ತು ಪರಿಣಾಮಕಾರಿಯಾದ ರೀತಿಯಲ್ಲಿ ಅನ್ವಯಿಸದೇ ಇದ್ದರೆ ಭ್ರಷ್ಟಾಚಾರವನ್ನು ತೊಡೆದು ಹಾಕುವುದಾಗಲೀ, ಗಣನೀಯವಾಗಿ ಕಡಿಮೆ ಮಾಡುವುದಾಗಲೀ ಸಾಧ್ಯವಿಲ್ಲ.

1) ಶಾಸನಾತ್ಮಕ ಕ್ರಮಗಳು:

* 1860ರಲ್ಲಿ ಭಾರತ ದಂಡ ಸಂಹಿತೆ

* 1872ರಲ್ಲಿ ಭಾರತೀಯ ಸಾಕ್ಷಿ ಶಾಸನ

* 1892ರಲ್ಲಿ ಅಪರಾಧ ಪ್ರಕ್ರಿಯಾ ಸಂಹಿತೆ

ಈ ಮೇಲಿನ ಶಾಸನಗಳು ಕಾನೂನು ವಂಚನೆ, ಸುಳ್ಳು ದಾಖಲೆ ಮಾಡುವುದು, ನಕಲಿ ಸಹಿ, ಒಳಸಂಚು, ಲಂಚ, ಇತ್ಯಾದಿಗಳ ನಿಯಂತ್ರಣ ಮಾಡುತ್ತಿದೆ.

2) ಪ್ರಾಂತೀಯ ಸರ್ಕಾರಗಳು ಕೂಡ ಕೆಲವು ಶಾಸನ ಜಾರಿಗೊಳಿಸಿವೆ.

* 1867 – ಬಾಂಬೆ ಗ್ಯಾಂಬ್ಲಿಂಗ್ ಆಕ್ಟ್

* 1876 – ಎಕ್ಸರ್‌ಸೈಸ್ ಆಕ್ಟ್

* 1878 – ಆರ್ಮ್ಸ್ ಆಕ್ಟ್ ಎಕ್ಸೆಟ್ರಾ.

3) 1947ರಲ್ಲಿ ಭಾರತ ಸರ್ಕಾರವು ಲಂಚ, ಹಣದುಬ್ಬರ, ಕಳ್ಳಸಾಗಾಣಿಕೆ, ಭ್ರಷ್ಟಾಚಾರ ತಡೆಯಲು 1947ರಲ್ಲಿ 'ಭ್ರಷ್ಟಾಚಾರ ತಡೆಶಾಸನ' ಜಾರಿಗೆ ತಂದಿದೆ.

4) ನಿರ್ಬಂಧಕ ಕ್ರಮಗಳು:

* ಅಪರಾಧಿಗಳ ಕಪ್ಪು ಪಟ್ಟಿ

* ಮುನ್ನೆಚ್ಚರಿಕಾ ಬಂಧನ

* ಆಸ್ತಿ ಮುಟ್ಟುಗೋಲು

* ಕನಿಷ್ಠ ಗುಣಮಟ್ಟ ಕಾಯ್ದುಕೊಳ್ಳಲು ಕಟ್ಟುನಿಟ್ಟಾದ ಕ್ರಮ
* ಶಾಸನಗಳ ಪುನರಾವಲೋಕನ

1988ರ 'ಭ್ರಷ್ಟಾಚಾರ ತಡೆ ಶಾಸನ'ವು ಸಾರ್ವಜನಿಕ ಸೇವಕ ಎನ್ನುವ ಕಲ್ಪನೆಯ ವ್ಯಾಪ್ತಿಯನ್ನು ವಇಸ್ತರಿಸಿ ಹೆಚ್ಚಿನ ಸಂಖ್ಯೆಯ ನೌಕರರನ್ನು ಈ ವ್ಯಾಪ್ತಿಯಲ್ಲಿ ಸೇರಿಸಲಾಯಿತು.

* ಸಿಬ್ಬಂದಿ ಮತ್ತು ತರಬೇತಿ ವಿಭಾಗದಲ್ಲಿ ಆಡಳಿತಾತ್ಮಕ ಜಾಗೃತ ದಳದ ವಿಭಾಗ
* ಸಿ.ಬಿ.ಐ.
* ಸಚಿವಾಲಯಗಳಲ್ಲಿ, ಬ್ಯಾಂಕುಗಳಲ್ಲಿ ಡೊಮೆಸ್ಟಿಕ್ ವಿಜಿಲೆನ್ಸ್ ಯೂನಿಟ್.
* ಸಿ.ವಿ.ಸಿ.
* ಲೋಕಪಾಲ, ಲೋಕಾಯುಕ್ತ

ಹೀಗೆ ಭ್ರಷ್ಟಾಚಾರ ತಡೆಗೆ ಹಲವಾರು ಮಾರ್ಗಗಳಿದ್ದು ಮನೋಧರ್ಮದಲ್ಲಿ ಬದಲಾವಣೆ ಆಗಿ, ಆಡಳಿತ ಇನ್ನಷ್ಟು ಚುರುಕುಗೊಂಡರೆ ಭ್ರಷ್ಟಾಚಾರ ನಿಷೇಧ ಕಾರ್ಯ ಕಠಿಣ ಸವಾಲೇನಲ್ಲ.

**ಕಪ್ಪು ಹಣ (ಕಾಳ ಧನ)**

ಕಪ್ಪು ಹಣ ಕಾಳಧನ ಎಂಬುದು ಸಮಾನಾಂತರವಾದ ಅರ್ಥವ್ಯವಸ್ಥೆ, ಅನೌಪಚಾರಿಕ ಅರ್ಥವ್ಯವಸ್ಥೆ, ಅನಧಿಕೃತ ಅರ್ಥವ್ಯವಸ್ಥೆಯಾಗಿದ್ದು, ಪ್ರಸಕ್ತ ಭಾರತವನ್ನು ಕಾಡುತ್ತಿರುವ ಪ್ರಮುಖ ಸಾಮಾಜಿಕ ಆರ್ಥಿಕ ಸಮಸ್ಯೆಗಳಲ್ಲೊಂದು. ಈ ಸಮಸ್ಯೆಯ ವ್ಯಾಪ್ತಿ ವಿಶಾಲವಾಗಿದ್ದು ಸಮಾಜದ ಜನಸಾಮಾನ್ಯರೆಲ್ಲರನ್ನೂ ಪರೋಕ್ಷವಾಗಿ ಕಾಡುತ್ತದೆ.

**ಅರ್ಥ:**

'ಅಸ್ತಿತ್ವದಲ್ಲಿರುವ ಸರ್ಕಾರಿ ಶಾಸನಗಳನ್ನು ಮತ್ತು ನಿಯಮಗಳನ್ನು ಉಲ್ಲಂಘಿಸಿ ಗಳಿಸಿದ, ಪಡೆದ ಹಣವಾಗಿದ್ದು ಅದನ್ನು ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯನ್ನು ಕೊಡದೇ ಉಳಿಸಿಕೊಂಡಿರುವ ಹಣವೇ ಕಪ್ಪುಹಣ.'

ಸರಳವಾಗಿ ಹೇಳುವುದಾದರೆ ತೆರಿಗೆ ತಪ್ಪಿಸಿ ಕಾನೂನು ವಿರುದ್ಧವಾಗಿ ಸಂಗ್ರಹಿಸಿದ ಹಣ ಇದಾಗಿದೆ.

ಉದಾ: ಸಂಸತ್ ಸದಸ್ಯ, ಮಂತ್ರಿಯೊಬ್ಬ, ಸರ್ಕಾರದ ಉನ್ನತಾಧಿಕಾರಿಯೊಬ್ಬ ಅನಧಿಕೃತವಾಗಿ ಅರ್ಥಾತ್ ಲಂಚವಾಗಿ ಹಣ ಪಡೆದು ಯಾವುದೇ ಪರವಾನಿಗೆ ನೀಡುವುದಾದರೆ ಅದು ಆತ ಗಳಿಸಿದ ಕಪ್ಪುಹಣವಾಗುತ್ತದೆ.

ಯಾವುದೇ ವಸ್ತುವನ್ನು ಅದರ ನಿಗದಿತ ಮಾರುಕಟ್ಟೆ ದರಕ್ಕಿಂತಲೂ ಅಧಿಕ ದರದಲ್ಲಿ ಮಾರುವುದಾದಲ್ಲಿ ಅದು 'ಕಾಳಸಂತೆ ವ್ಯಾಪಾರ'ವಾಗಿದ್ದು ಅಂತಹ ವ್ಯಾಪಾರದಿಂದ ಗಳಿಸಿದ ಹಣ 'ಕಪ್ಪು ಹಣ' ಎನಿಸಿಕೊಳ್ಳುತ್ತದೆ.

**ಕಪ್ಪು ಹಣದ ಮೂಲಗಳು:**

ಕಾನೂನುಬದ್ಧ ಮೂಲ: ವ್ಯಕ್ತಿಯೋರ್ವನು ಹಲವಾರು ಕಾನೂನುಬದ್ಧವಾದ ಮೂಲಗಳಿಂದ ಹಣವನ್ನು ದುಡಿದರೂ ತೆರಿಗೆಯ ಲೆಕ್ಕ ನೀಡುವಾಗ ಆ ಎಲ್ಲ ಸವಾಲುಗಳನ್ನು ಪ್ರಕಟಿಸದೇ ತನ್ನ ಆದಾಯವನ್ನು ಕಡಿಮೆ ತೋರಿಸಿ ತೆರಿಗೆಯನ್ನು ತಪ್ಪಿಸುವ ಪ್ರಯತ್ನ ಇದಾಗಿದೆ. ಹೀಗೆ ತೆರಿಗೆ ತಪ್ಪಿಸಿದ ಹಣವನ್ನೆಲ್ಲಾ ಕಪ್ಪುಹಣ ಎನ್ನಲಾಗಿದೆ.

ಉದಾ: ಖಾಸಗಿ ಟ್ಯೂಷನ್‌ನಿಂದ ಶುಲ್ಕ ಪಡೆಯುವ ಅಧ್ಯಾಪಕರು ಹಾಗೇ ಸಂಗ್ರಹಿಸಿದ ಹಣಕ್ಕೆ ತೆರಿಗೆ ಕಟ್ಟದೇ ಇದ್ದಾಗ ಅದು ಕಪ್ಪುಹಣವಾಗುತ್ತದೆ.

ಕಾನೂನು ಬಾಹಿರ ಸವಾಲುಗಳು: ಕಾನೂನುಬಾಹಿರ ಮೂಲಗಳ ಸಂಖ್ಯೆ ಹಲವಾರಿದ್ದು, ಇವುಗಳ ಸಂಖ್ಯೆ ಬೆಳೆಯುತ್ತಲಿದೆ. ಉದಾ: ಲಂಚದ ಹಣ, ಕಾಳಸಂತೆ ವ್ಯಾಪಾರದ ಹಣ, ಕಳ್ಳಸಾಗಾಣಿಕೆ ಹಣ, ನಿಯಂತ್ರಿತ ಬೆಲೆಗೂ ಅಧಿಕ ಬೆಲೆಗೆ ವಸ್ತು ಮಾರಾಟ, ಭ್ರಷ್ಟ ಆಚರಣೆಗಳ ಮೂಲಕ ಸಂಪಾದನೆ ಇತ್ಯಾದಿ.

**ಕಪ್ಪು ಹಣದ ಪ್ರಭಾವ:**

ಜಗತ್ತಿನಲ್ಲಿ ಯಾವುದೇ ದೇಶದ ಅರ್ಥಶಾಸ್ತ್ರಜ್ಞರಿಗೂ ತಮ್ಮ ದೇಶದಲ್ಲಿ ಸಂಗ್ರಹಿತವಾಗಿರುವ ಒಟ್ಟು ಕಾಳಧನದ ಮೊತ್ತವೆಷ್ಟು ಎಂಬುದರ ಬಗೆಗೆ ನಿಖರಾದ ಅಂದಾಜು ಮಾಡಲು ಸಾಧ್ಯವಿಲ್ಲ. 1980ರ ದಶಕದಲ್ಲಿ ಅಯ್.ಎಮ್.ಎಫ್.ನ ಒಂದು ಅಂದಾಜಿನ ಪ್ರಕಾರ ಕಪ್ಪುಹಣದಲ್ಲಿ ಭಾರತಕ್ಕೆ ಪ್ರಥಮ ಸ್ಥಾನವಿತ್ತು. ಅಮೇರಿಕಾ ಮತ್ತು ಕೆನಡಾಗಳು ಕ್ರಮವಾಗಿ 2, 3ನೇ ಸ್ಥಾನದಲ್ಲಿದ್ದವು.

'ವಾಂಛೂ' ಸಮಿತಿಯು ನೀಡಿದ ವರದಿಯಂತೆ 1965–66ರಲ್ಲೇ 1000 ಕೋಟಿ ರೂ.ಗಳಿದ್ದರೆ 1969–70ರಲ್ಲಿ 1400 ಕೋಟಿಯಾಗಿತ್ತು.

ಯೋಜನಾ ಆಯೋಗದ ಅಂದಾಜಿನಂತೆ 1991ರ ಹೊತ್ತಿಗೆ ಈ ಕಾಳಧನ 70000 ಕೋಟಿ ದಾಟಿದ್ದು ಪ್ರತಿ ವರ್ಷ 50,000 ಕೋಟಿ ಸೇರುತ್ತದೆ.

ಇತ್ತೀಚಿನ ವರದಿಗಳ ಅಂದಾಜಿನ ಪ್ರಕಾರ 1.2 ಟ್ರಿಲಿಯನ್ ಮೊತ್ತವನ್ನು ಸರಿಸುಮಾರು ಭಾರತದ ಜಿ.ಡಿ.ಪಿ.ಯಷ್ಟು ಮೊತ್ತವನ್ನು ದೂರದ ಸ್ವಿಸ್ ಬ್ಯಾಂಕಲ್ಲಿ ಇರಿಸಲಾಗಿದೆ ಎಂಬ ವದಂತಿಯಿದೆ. ಇದನ್ನು ಸರ್ಕಾರ ತನ್ನ ಅಧಿಕಾರ ಚಲಾಯಿಸಿ ಹಿಂದೆ ತರಿಸಿಕೊಂಡು ರಾಷ್ಟ್ರೀಕರಿಸಬೇಕೆಂದು ಒತ್ತಡ ಹೆಚ್ಚಿದೆ.

**ಕಪ್ಪು ಹಣ ಸಂಗ್ರಹಣೆಗೆ ಕಾರಣಗಳು:**

ಪ್ರೊ.ರಾಮ್ ಅಹ್ರಜಾರವರ ಪ್ರಕಾರ,

1) ಅತೀ ಹೆಚ್ಚಿನ ತೆರಿಗೆ ದರ: ಅವಾಸ್ತವಿಕವಾದ ಹಾಗೂ ಅಸಂತುಲಿತವಾದ ತೆರಿಗೆಯಿಂದ ಕಪ್ಪು ಹಣ ಸಂಗ್ರಹಣೆಗೆ ಪ್ರಚೋದನೆಯಾಗುತ್ತಿದೆ.

2) ವಿಭಿನ್ನ ದರಗಳ ಅಬಕಾರಿ ಸುಂಕ: ವಸ್ತುಗಳನ್ನು ಗುಣಮಟ್ಟದ ಆಧಾರದಲ್ಲಿ ವಸ್ತುಗಳನ್ನು ಬೇರೆ ಬೇರೆ ರೀತಿಯಲ್ಲಿ ವರ್ಗೀಕರಿಸಿ ಸರ್ಕಾರ ತೆರಿಗೆ ವಿಧಿಸುತ್ತದೆ. ಆದರೆ ಉತ್ಪಾದಕರು ಕೆಲವೊಮ್ಮೆ ತೆರಿಗೆ ತಪ್ಪಿಸುವುದಕ್ಕಾಗಿ ಉತ್ಪಾದನಾ ವಸ್ತುಗಳನ್ನು ಕೆಳಮಟ್ಟದಲ್ಲಿ ತೋರಿಸುವುದುಂಟು.

'ಇಂಡಿಯಾ ಟುಡೇ' ವರದಿ ಪ್ರಕಾರ ಇದರ ಅಂದಾಜು 7500ರಿಂದ 10000 ಕೋಟಿ.

3) ಸರ್ಕಾರದ ಬೆಲೆ–ನಿಯಂತ್ರಣ ಧೋರಣೆಯ ಪರಿಣಾಮ: ಸರ್ಕಾರ ಕೆಲವು ವಸ್ತುಗಳ ಬೆಲೆಯಲ್ಲಿ ಕಡಿಮೆ ಮಾಡಿದಾಗ ವರ್ತಕರು ಅಕ್ರಮ ದಾಸ್ತಾನು ಮಾಡಿ ಕೆಲವು ದಿನಗಳ ನಂತರ ಕಾಳಸಂತೆಯಲ್ಲಿ ಮಾರುವುದು.

4) ಹಣದುಬ್ಬರ.

5) ಖೋಟಾ ವ್ಯವಸ್ಥೆ, ದರ ನಿಗದಿ ವ್ಯವಸ್ಥೆ ಕೊರತೆ (ಸರ್ಕಾರ ಇನ್ನೂ ದರ ನಿರ್ಧಾರ ಮಾಡದಿದ್ದಾಗ).

6) ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಚುನಾವಣೆಗಳು.

7) ರಿಯಲ್ ಎಸ್ಟೇಟ್.

ಹೀಗೆ ಹಲವಾರು ಕಾರಣಗಳಿವೆ.

**ಕಾಳಧನ ಪರಿಣಾಮಗಳು:**

* ಕಾಳಧನವು ದೇಶವೊಂದರ ಆರ್ಥಿಕ ಅಭಿವೃದ್ಧಿಗೆ ಹಾಗೂ ಅದರ ಅಭಿವೃದ್ಧಿದಾಯಕ ಹಾಗೂ ಬಡಜನ ಕಲ್ಯಾಣ ಕಾರ್ಯಕ್ರಮಗಳಿಗೆ ಅಡಚಣೆ ಒಡ್ಡುತ್ತದೆ.

* ತೆರಿಗೆಗಳ್ಳತನದಿಂದ ಸರ್ಕಾರದ ಬೊಕ್ಕಸಕ್ಕೆ ಸೇರಬೇಕಾದ ಹಣ ಸೇರದೆ ಅಭಿವೃದ್ದಿ ಕಾರ್ಯಕ್ರಮ ಕುಂಟಿತವಾಗುತ್ತಿದೆ.

* ಹಣದುಬ್ಬರಕ್ಕೆ ಕಾರಣವಾದ ಸರ್ಕಾರವು ಅರ್ಥವ್ಯವಸ್ಥೆಯ ಮೇಲೆ ತನ್ನ ನಿಯಂತ್ರಣ ಕಳೆದುಕೊಳ್ಳುತ್ತದೆ.

* ಅಂತರಾಷ್ಟ್ರೀಯ ವ್ಯವಹಾರದಲ್ಲಿ ದೇಶಕ್ಕೆ ಹಿನ್ನಡೆ.

* ಇದು ಆರ್ಥಿಕ ಅಸಮಾನತೆ ಹೆಚ್ಚಿಸಿ ನಕ್ಸಲೀಯ ಪಿಡುಗಿಗೆ ಕಾರಣವಾಗುತ್ತದೆ.

* ಬಡವರು ಇನ್ನಷ್ಟು ಬಡವರಾಗಿ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿರುತ್ತಾರೆ.

**ಕಾಳಧನ ನಿಯಂತ್ರಣ ಕ್ರಮಗಳು:**

* ಸಾರ್ವಜನಿಕ ನೈತಿಕತೆಯನ್ನು ಎತ್ತರಿಸುವ ಪ್ರಯತ್ನವಾಗಬೇಕು.

* ಸರ್ಕಾರಿ ದುಂದು ವೆಚ್ಚಗಳಿಗೆ ಕಡಿವಾಣ.

* ಖಾಸಗಿ ಹಣಕಾಸು ಸಂಸ್ಥೆಗಳ ಲೇವಾದೇವಿಯ ಮೇಲೆ ನಿಗಾ.

* ತೆರಿಗೆ ವ್ಯವಸ್ಥೆಯ ಸುಧಾರಣೆ.

* ಬೆಲೆ ನಿಯಂತ್ರಣ ನೀತಿಗೆ ವಿದಾಯ ಹೇಳಬೇಕು.

* ತೆರಿಗೆ ಸಂಗ್ರಹ ಯಂತ್ರದ ಪರಿಷ್ಕಾರ.

* ತಪ್ಪೊಪ್ಪಿಗೆಗೆ ಸೂಕ್ತ ರಿಯಾಯಿತಿ.

* ದಕ್ಷ ಪ್ರಾಮಾಣಿಕ ಅಧಿಕಾರ ನೇಮಕ.

* ಆಡಳಿತ ಯಂತ್ರದ ಸುಧಾರಣೆ.

* ಸರ್ಕಾರದ ಧೋರಣೆಗೆ ಸೂಕ್ತ ತಿದ್ದುಪಡಿಗಳು.

* ಪ್ರಬಲ ಜನಾಂದೋಲನೆ. ಉದಾ: ಅಣ್ಣಾ ಹಜಾರೆ, ಬಾಬಾ ರಾಮದೇವ ಇತ್ಯಾದಿ.

**ಸರ್ಕಾರ ಮತ್ತು ರಾಜಕೀಯ ವ್ಯವಸ್ಥೆ:**

**ಸಾಮಾನ್ಯ ಅಧ್ಯಯನ ಪತ್ರಿಕೆ ಎರಡರ ಸಂವಿಧಾನ ಭಾಗವನ್ನು ಅಭ್ಯಸಿಸಿ.**

# 5) ಅಧಿಕಾರದ ವಿಕೇಂದ್ರೀಕರಣ:

1) ಅಧಿಕಾರ ವಿಕೇಂದ್ರೀಕರಣ ಮತ್ತು ರಾಜಕೀಯ ಭಾಗವಹಿಸುವಿಕೆ.

2) ಕೇಂದ್ರ ಸರ್ಕಾರ, ಸಂಸತ್ತು, ಕ್ಯಾಬಿನೆಟ್, ಸರ್ವೋಚ್ಚ ನ್ಯಾಯಾಲಯ, ನ್ಯಾಯಾಂಗೀಯ ವಿಮರ್ಶೆ, ಕೇಂದ್ರ ಮತ್ತು ರಾಜ್ಯ ಸಂಬಂಧಗಳು.

ಈ ಮೇಲಿನ ವಿಷಯಗಳ ಅಧ್ಯಯನಕ್ಕಾಗಿ ಸಾಮಾನ್ಯ ಅಧ್ಯಯನ ಪತ್ರಿಕೆ ಎರಡರ ಸಂವಿಧಾನ ಭಾಗವನ್ನು ನೋಡಿ.

**ಪಂಚಾಯತ್ ರಾಜ್:**

ಪಂಚಾಯತ್ ರಾಜ್ ವ್ಯವಸ್ಥೆಯು ಅಧಿಕಾರ ಮತ್ತು ಆಡಳಿತ ವಿಕೇಂದ್ರೀಕರಣದ ಉಜ್ವಲ ಮಾದರಿಯಾಗಿದೆ. 1952ರಲ್ಲಿ ಜಾರಿಯಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, 1953ರಲ್ಲಿ ಜಾರಿಯಾದ ರಾಷ್ಟ್ರೀಯ ವಿಸ್ತರಣಾ ಸೇವೆಗಳ ಫಲಿತಾಂಶವನ್ನು ಅಧ್ಯಯನ ಮಾಡಲು ಬಲವಂತ್ ರಾಯ್ ಮೆಹ್ತಾ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. 1959ರಲ್ಲಿ ಈ ಸಮಿತಿಯು ತನ್ನ ವರದಿಯನ್ನು ನೀಡಿತು.

ಪ್ರಮುಖ ಶಿಫಾರಸ್ಸುಗಳು–

1) ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯ ರಚನೆ. (ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪರಿಷತ್ತು.)

2) ಅಧಿಕಾರ ಮತ್ತು ಜವಾಬ್ದಾರಿಗಳನ್ನು ಈ ಸಂಸ್ಥೆಗಳಿಗೆ ವರ್ಗಾವಣೆ ಮಾಡುವುದು.

3) ಸಂಪನ್ಮೂಲಗಳನ್ನು ಒದಗಿಸುವುದು.

**ಅಶೋಕ ಮೆಹ್ತಾ ಸಮಿತಿ:**

ಈ ಸಮಿತಿಯು 1973ರಲ್ಲಿ ನೇಮಕವಾಗಿ 1979ರಲ್ಲಿ ವರದಿ ಸಲ್ಲಿಸಿತು.

ಸಮಿತಿಯ ಪ್ರಮುಖ ಶಿಫಾರಸ್ಸುಗಳು–

1) ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಇರಬೇಕು. ಅವುಗಳು ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್.

2) ರಾಜಕೀಯ ಪಕ್ಷಗಳು ಭಾಗವಹಿಸಲು ಅವಕಾಶ ನೀಡುವುದು.

3) ಎಸ್.ಸಿ/ಎಸ್.ಟಿ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ನೀಡುವುದು.

4) ಜಿಲ್ಲಾ ಪರಿಷತ್ತಿನಲ್ಲಿ ಸಾಮಾಜಿಕ ನ್ಯಾಯ ಪಂಚಾಯಿತಿ ಅಸ್ತಿತ್ವದಲ್ಲಿ ಇರಬೇಕು.

5) ಸಂಪನ್ಮೂಲಗಳಿಗಾಗಿ ತೆರಿಗೆ ವಿಧಿಸುವ ಅಧಿಕಾರ ನೀಡಬೇಕು.

**1985ರ ಜಿ.ವಿ.ಕೆ.ರಾವ್ ಸಮಿತಿ:**

ಈ ಸಮಿತಿಯು ಜಿಲ್ಲಾ ಪರಿಷತ್ತನ್ನು ಹೆಚ್ಚು ಬಲಪಡಿಸಬೇಕು ಎಂದು ಶಿಫಾರಸ್ಸು ಮಾಡಿತು.

## 1986ರ ಎಲ್.ಎಂ.ಸಿಂಘ್ವಿ ಸಮಿತಿ:

ಈ ಸಮಿತಿಯು ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬೆಂಬಲಿಸಿತು.

ಶಿಫಾರಸ್ಸುಗಳು–

1) ಎಸ್.ಸಿ/ಎಸ್.ಟಿ ಮತ್ತು ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡುವುದು.

2) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಉದಾರವಾಗಿ ಅನುದಾನ ನೀಡಬೇಕು.

3) ಇವುಗಳ ಚುನಾವಣೆಗಳನ್ನು ಮುಂದೂಡದೆ ಸಕಾಲದಲ್ಲಿ ನಡೆಸಬೇಕು.

4) ಇವುಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಬೇಕು.

ಇದರ ಅನ್ವಯ 1993 ಏಪ್ರಿಲ್ 20ರಂದು 73ನೇಯ ಮತ್ತು 74ನೇಯ ಸಂವಿಧಾನ ತಿದ್ದುಪಡಿಗಳು ರಾಷ್ಟ್ರಪತಿಯವರ ಒಪ್ಪಿಗೆ ಪಡೆದವು. ಸಂವಿಧಾನಕ್ಕೆ ಅನುಸೂಚಿ 11 ಮತ್ತು 12ನ್ನು ಸೇರಿಸಲಾಯಿತು. 74ನೇಯ ತಿದ್ದುಪಡಿಯು ಪೌರಸಭೆಗಳಿಗೆ ಸಂಬಂಧಿಸಿದೆ. ವಿಧಿ 243 ಪಿ.ದಿಂದ ಜೆಡ್‌ಜಿ.ಗಳು ಪೌರಸಭೆಗಳಿಗೆ ಅನ್ವಯಿಸುತ್ತವೆ. ಪಂಚಾಯತ್ ರಾಜ್‌ಗಳಿಗೆ ಒಟ್ಟು 29 ವಿಷಯಗಳಿದ್ದರೆ, ಪೌರಸಭೆಗಳಿಗೆ ಒಟ್ಟು 18 ವಿಷಯಗಳಿವೆ.

## 73 ಮತ್ತು 74ನೇ ಸಂವಿಧಾನ ತಿದ್ದುಪಡಿ:

73ನೇ ಸಂವಿಧಾನ ತಿದ್ದುಪಡಿ ಅಧಿನಿಯಮ 1992, 20–04–1993ರಂದು ಜಾರಿಗೆ ಬಂದಿತು. ಇದರಲ್ಲಿ 243 ಪರಿಭಾಷೆಗಳಿವೆ. ಇದರ ಪ್ರಕಾರ ಜಿಲ್ಲೆ ಎಂದರೆ ಒಂದು ರಾಜ್ಯದಲ್ಲಿನ ಜಿಲ್ಲೆ. 'ಗ್ರಾಮಸಭೆ' ಎಂದರೆ ಗ್ರಾಮ ಪಂಚಾಯಿತಿ ಪ್ರದೇಶದೊಳಗೆ ಸೇರಿರುವ ಗ್ರಾಮಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಗಳಲ್ಲಿ ನೋಂದಾಯಿತರಾದ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ. 'ಮಧ್ಯಂತರ ಮಟ್ಟ' ಎಂದರೆ ಈ ಭಾಗದ ಉದ್ದೇಶಗಳಿಗಾಗಿ ಮಧ್ಯಂತರ ಮಟ್ಟವೆಂದು ರಾಜ್ಯದ ರಾಜ್ಯಪಾಲರು ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಿದ ಗ್ರಾಮ ಮತ್ತು ಜಿಲ್ಲೆಯ ನಡುವಣ ಮಟ್ಟ.

ಈ ಅಧಿನಿಯಮದ ಪ್ರಕಾರ 'ಪಂಚಾಯಿತಿ' ಎಂದರೆ ಗ್ರಾಮೀಣ ಪ್ರದೇಶಗಳಾಗಿ 243 ಬಿ ಅನುಚ್ಛೇದದ ಮೇರೆಗೆ ರಚಿತವಾದ ಸ್ವಾಯತ್ತ ಸರ್ಕಾರದ ಒಂದು ಸಂಸ್ಥೆ. 'ಪಂಚಾಯಿತಿ ಪ್ರದೇಶ' ಎಂದರೆ ಪಂಚಾಯಿತಿಯ ಕ್ಷೇತ್ರೀಯ ಪ್ರದೇಶ. ಜನಸಂಖ್ಯೆ ಎಂದರೆ ಈ ಹಿಂದಿನ ಕೊನೆಯ ಸಲದ ಜನಗಣತಿಯ ಮೇರೆಗೆ ಖಚಿತಪಡಿಸಿಕೊಂಡ ಮತ್ತು ಅದಕ್ಕೆ ಸಂಬಂಧಪಟ್ಟ ಅಂಕಿಅಂಶಗಳು ಪ್ರಕಟವಾಗಿರುವ ಜನಸಂಖ್ಯೆ. 'ಗ್ರಾಮ' ಎಂದರೆ ಈ ಭಾಗದ ಉದ್ದೇಶಗಳಿಗಾಗಿ ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ಗ್ರಾಮವೆಂದು ನಿರ್ದಿಷ್ಟಪಡಿಸಿದ ಗ್ರಾಮ ಮತ್ತು ಇದು ಹಾಗೆ ನಿರ್ದಿಷ್ಟಪಡಿಸಲಾದ ಗ್ರಾಮಗಳ ಸಮೂಹವನ್ನು ಒಳಗೊಳ್ಳುತ್ತದೆ.

## ಈ ಅಧಿನಿಯಮದ ಸಂಕ್ಷಿಪ್ತ ಪರಿಚಯ:

243ಎ ಗ್ರಾಮ ಸಭೆ: ಗ್ರಾಮ ಸಭೆಯ ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥಹ ಅಧಿಕಾರಗಳನ್ನು ಗ್ರಾಮ ಮಟ್ಟದಲ್ಲಿ ಚಲಾಯಿಸಬಹುದಾದ ಮತ್ತು ಅಂತಹ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

243ಬಿ. ಪಂಚಾಯಿತಿಗಳ ರಚನೆ: ಈ ಭಾಗದಲ್ಲಿ ಉಪಬಂಧಗಳಿಗೆ ಅನುಸಾರವಾಗಿ ಪ್ರತಿಯೊಂದು ಗ್ರಾಮಮಟ್ಟ ಮಧ್ಯಂತರದ ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಪಂಚಾಯಿತಿಗಳನ್ನು ರಚಿಸತಕ್ಕದ್ದು.

243ಸಿ. ಪಂಚಾಯಿತಿಗಳ ಅಂಗ ರಚನೆ:

243ಡಿ ಸ್ಥಾನಕ್ಕೆ ಮೀಸಲಾತಿ:

1) ಪ್ರತಿಯೊಂದು ಚುನಾಯಿತಿಯಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡತಕ್ಕದ್ದು.

2) (1)ನೇ ಖಂಡದ ಮೇರೆಗೆ ಮೀಸಲಿಡಲಾದ ಸ್ಥಾನಗಳ ಒಟ್ಟು ಸಂಖ್ಯೆಯ ಮೂರನೆಯ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಮೀಸಲಿರಿಸತಕ್ಕದ್ದು.

3) ಪ್ರತಿಯೊಂದು ಪಂಚಾಯಿತಿಯಲ್ಲಿ ಒಟ್ಟು ಸಂಖ್ಯೆಯ ಸ್ಥಾನಗಳ ಪೈಕಿ ಮೂರನೆಯ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು.

243ಇ. ಪಂಚಾಯಿತಿಗಳ ಅವಧಿ ಇತ್ಯಾದಿ.

ಪ್ರತಿಯೊಂದು ಪಂಚಾಯಿತಿಯನ್ನು ತಾತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಐದು ವರ್ಷಗಳಿಗಿಂತ ಮುಂಚಿತವಾಗಿ ವಿಭಜಿಸಿದ್ದು ಹೊರತು, ಅದರ ಮೊದಲ ಸಭೆಗಾಗಿ ಗೊತ್ತುಪಡಿಸಿದ ದಿನಾಂಕದಿಂದ ಅದು ಐದು ವರ್ಷಗಳ ಅವಧಿಯವರೆಗೆ ಮುಂದುವರಿಯತಕ್ಕದ್ದು. ಆದರೆ ಅದಕ್ಕಿಂತ ಹೆಚ್ಚು ಅವಧಿಯವರೆಗೆ ಅಲ್ಲ.

ಗ್ರಾಮ ಪಂಚಾಯಿತಿ: ಪಂಚಾಯಿತಿಯನ್ನು ರಚಿಸಲು ನಡೆಸಬೇಕಾದ ಚುನಾವಣೆಯನ್ನು,

ಎ) (1)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಅದರ ಅವಧಿಯು ಮುಕ್ತಗೊಳ್ಳುವುದಕ್ಕೆ ಮುಂಚೆ.

ಬಿ) ಅವರ ವಿಸರ್ಜನೆಯು ದಿನಾಂಕದಿಂದ 6 ತಿಂಗಳ ಅವಧಿಯಲ್ಲಿ ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಪೂರ್ಣಗೊಳ್ಳತಕ್ಕದ್ದು.

4) ಒಂದು ಪಂಚಾಯಿತಿಯ ಅವಧಿಯ ಮುಕ್ತಾಯವಾಗುಉದಕ್ಕೆ ಮುಂಚೆ ವಿಸರ್ಜಿತ ಪಂಚಾಯಿತಿಯ ಹಾಗೆ ವಿಸರ್ಜಿತವಾಗದೆ ಹೋಗಿದ್ದರೆ ಅದು (1)ನೇ ಖಂಡದ ಮೇರೆಗೆ ಯಾವ ಅವಧಿಯವರೆಗೆ ಮುಂದುವರೆಯಬಹುದಾಗಿತ್ತೋ ಆ ಉಳಿದ ಅವಧಿಯವರೆಗೆ ಮಾತ್ರ ಮುಂದುವರೆಯತಕ್ಕದ್ದು.

243ಎಫ್. ಸದಸ್ಯತ್ವಕ್ಕೆ ಅರ್ಹತೆಗಳು: ಒಬ್ಬ ವ್ಯಕ್ತಿಯ ಪಂಚಾಯಿತಿಯು ಸದಸ್ಯನಾಗಿ ಚುನಾಯಿತನಾಗಲು ಮತ್ತು ಅದರ ಸದಸ್ಯನಾಗಿರಲು ಈ ಕೆಳಕಂಡ ಸಂದರ್ಭಗಳಲ್ಲಿ ಅನರ್ಹನಾಗತಕ್ಕದ್ದು.

243ಜಿ. ಪಂಚಾಯಿತಿಗಳ ಅಧಿಕಾರಿಗಳು ಪ್ರಾಧಿಕಾರ ಜವಾಬ್ದಾರಿಗಳು:

1) ಆರ್ಥಿಕಾಭಿವೃದ್ದಿಯು ಮತ್ತು ಸಾಮಾಜಿಕ ನ್ಯಾಯ ಯೋಜನೆಗಳನ್ನು ಪಟ್ಟಿ ಮಾಡಿಸುವುದು.

2) 11ನೇ ಅನುಸೂಚಿಯನ್ನು ಪಟ್ಟಿಮಾಡಿದ ವಿಷಯಗಳು ಸೇರಿದಂತೆ ಪಂಚಾಯಿತಿಗಳಿಗೆ ವಹಿಸಬಹುದಾದರೂ ಆರ್ಥಿಕಾಭಿವೃದ್ದಿಯ ಮತ್ತು ಸಾಮಾಜಿಕ ನ್ಯಾಯದ ಪರಿಯೋಜನೆಗಳ ಅನುಷ್ಠಾನ.

243ಹೆಚ್. ತೆರಿಗೆಗಳನ್ನು ವಿಧಿಸಲು ಪಂಚಾಯಿತಿಗಳ ಅಧಿಕಾರಿಗಳು ಮತ್ತು ಅವುಗಳ ನಿಧಿಗಳು: ತೆರಿಗೆಗಳು, ಸುಂಕಗಳು, ದಾರಿ ಸುಂಕಗಳು ಮತ್ತು ಫೀಜುಗಳು ಇವುಗಳನ್ನು ವಿಧಿಸಲು ವಸೂಲು ಮಾಡಲು ಮತ್ತು ವಿನಿಯೋಗಿಸಲು ಪಂಚಾಯಿತಿಗೆ ಅಧಿಕಾರ ನೀಡಬಹುದು.

243ಅಯ್. ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಲು ಹಣಕಾಸು ಆಯೋಗದ ರಚನೆ: ಒಂದು ರಾಜ್ಯದ ರಾಜ್ಯಪಾಲನು, ಸಂವಿಧಾನದ (73ನೇ ತಿದ್ದುಪಡಿ) ಅಧಿನಿಯಮ 1992 ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ಆ ತರುವಾಯ ಪ್ರತಿ 5ನೇ ವರ್ಷವು ಮುಕ್ತಾಯವಾದಾಗ ಸಾಧ್ಯವಾದಷ್ಟು ಬೇಗನೇ ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಗಳನ್ನು ಪರಿಶೀಲಿಸಲು ಪಂಚಾಯಿತಿಗಳಿಗೆ ವಹಸಿಕೊಡಬಹುದಾದ ಅಥವಾ ಅವುಗಳ ವಿನಿಯೋಗಿಸಬಹುದಾದ ತೆರಿಗೆಗಳು, ಶುಲ್ಕಗಳು, ದಾರಿ ಸುಂಕಗಳು ಮತ್ತು ಫೀಜುಗಳನ್ನು ನಿರ್ಧರಿಸುವುದಕ್ಕೆ.

ರಾಜ್ಯದ ಸಂಚಿತ ನಿಧಿಯಿಂದ ಪಂಚಾಯಿತಿಗಳಿಗೆ ನೀಡುವ ಸಹಾಯಧನಕ್ಕೆ, ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳಿಗೆ.

ಪಂಚಾಯಿತಿಗಳ ಸುಭದ್ರ ಹಣಕಾಸಿನ ದೃಷ್ಟಿಯಿಂದ ರಾಜ್ಯಪಾಲರು ಹಣಕಾಸು ಆಯೋಗಕ್ಕೆ ಕಳುಹಿಸಬಹುದಾದ ಯಾವುದೇ ಇತರ ವಿಷಯಕ್ಕೆ ಅನ್ವಯಿಸುವ ತತ್ವಗಳನ್ನು ಕುರಿತು ರಾಜ್ಯಪಾಲನಿಗೆ ಶಿಫಾರಸ್ಸು ಮಾಡಲು ಹಣಕಾಸು ಆಯೋಗವೊಂದನ್ನು ರಚಿಸತಕ್ಕದ್ದು.

243ಜೆ. ಪಂಚಾಯಿತಿಗಳ ಲೆಕ್ಕಪತ್ರಗಳ ಪರಿಶೋಧನೆ: ರಾಜ್ಯ ವಿಧಾನ ಮಂಡಲವು ಕಾನೂನಿನಿಂದ ಪಂಚಾಯಿತಿಯ ಲೆಕ್ಕಪತ್ರಗಳ ನಿರ್ವಹಣೆ ಪರಿಶೋಧನೆಗೆ ಕುರಿತಂತೆ ಉಪಬಂಧಗಳನ್ನು ಮಾಡಬಹುದು.

243ಕೆ. ಪಂಚಾಯಿತಿಗಳಿಗೆ ಚುನಾವಣೆಗಳು: ಪಂಚಾಯಿತಿಗಳಿಗೆ ನಡೆಯುವ ಎಲ್ಲಾ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಮತದಾರರ ಪಟ್ಟಿಗಳ ತಯಾರಿಕೆಯ ಆ ಎಲ್ಲಾ ಚುನಾವಣೆಗಳ ನಿರ್ವಹಣೆ ನಿರ್ದೇಶನ ಮತ್ತು ನಿಯಂತ್ರಣ ಇವುಗಳು ರಾಜ್ಯಪಾಲನಿಂದ ನೇಮಕಗೊಳ್ಳತಕ್ಕ ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

ರಾಜ್ಯ ವಿಧಾನ ಮಂಡಲವು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟ ರಾಜ್ಯದ ಚುನಾವಣಾ ಆಯುಕ್ತನ ಸೇವಾ ಷರತ್ತುಗಳು ಮತ್ತು ಪಧಾವಧಿಯು, ರಾಜ್ಯಪಾಲನು ನಿಯಮದ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು.

ಪರಂತು, ರಾಜ್ಯ ಚುನಾವಣಾ ಆಯುಕ್ತನನ್ನು, ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಅವರ ಪದವಿಯಿಂದ ತೆಗೆದು ಹಾಕುವ ರೀತಿಯಲ್ಲಿಲ್ಲದೆ, ಮತ್ತು ಅದೇ ಕಾರಣಗಳ ಮೇಲಲ್ಲದೆ ಇತರ ರೀತಿಯಲ್ಲಿ ತೆಗೆದುಹಾಕತಕ್ಕುದಲ್ಲ.

243ಎಲ್. ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯ: ಈ ಭಾಗದ ಉಪಬಂಧಗಳು ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯವಾಗತಕ್ಕದ್ದು. ಮತ್ತು ಅವುಗಳನ್ನು ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯಿಸುವಾಗ ರಾಜ್ಯದ ರಾಜ್ಯಪಾಲನಿಗೆ ಮಾಡಲಾದ ಉಲ್ಲೇಖಗಳು 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತಗಾರನಿಗೆ ಮಾಡಲಾದ ಉಲ್ಲೇಖಗಳಿದ್ದಾರೆ. ಹೇಗೋ ಹಾಗೆ ಮತ್ತು ರಾಜ್ಯ ವಿಧಾನ ಮಂಡಲ ಅಥವಾ ವಿಧಾನಸಭೆಗೆ ಮಾಡಲಾದ ಉಲ್ಲೇಖಗಳು ವಿಧಾನ ಸಭೆಯನ್ನು ಹೊಮದಿರುವ ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಆ ವಿಧಾನ ಸಭೆಗೆ ಮಾಡಲಾದ ಉಲ್ಲೇಖಗಳಾಗಿದ್ದಾರೆ. ಹೇಗೋ ಹಾಗೆ, ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದು.

243ಎಂ. ಕೆಲವು ಪ್ರದೇಶಗಳಿಗೆ ಈ ಭಾಗವು ಅನ್ವಯವಾಗದಿರುವುದು: ಈ ಭಾಗದಲ್ಲಿರುವುದು 244ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿತ ಪ್ರದೇಶಗಳಿಗೆ ಮತ್ತು (2)ನೇ ಖಂಡದಲ್ಲಿ ಉಲ್ಲೇಖಿಸಲಾದ ಬುಡಕಟ್ಟು ಪ್ರದೇಶದಲ್ಲಿ ಅನ್ವಯವಾಗತಕ್ಕುದಲ್ಲ.

ಈ ಭಾಗದಲ್ಲಿರುವ ಯಾವುದು, ನಾಗಾಲ್ಯಾಂಡ್, ಮೇಘಾಲಯ ಮತ್ತು ಮಿಜೋರಾಂ ರಾಜ್ಯಗಳಿಗೆ, ಜಿಲ್ಲಾ ಪರಿಷತ್ತುಗಳನ್ನು ಹೊಂದಿರುವಂತೆ ಮಣಿಪುರ ರಾಜ್ಯದಲ್ಲಿನ ಗುಡ್ಡಗಾಡು ಪರಿಷತ್‌ಗಳನ್ನು ಹೊಂದಿರುವಂಥ ಮಣಿಪುರ ರಾಜ್ಯದಲ್ಲಿನ ಗುಡ್ಡಗಾಡು ಪ್ರದೇಶಗಳಿಗೆ ಅನ್ವಯವಾಗತಕ್ಕುದಲ್ಲ.

ಈ ಭಾಗದಲ್ಲಿರುವುದು ಯಾವುದು, ಜಿಲ್ಲಾ ಮಟ್ಟದ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಡಾರ್ಜಿಲಿಂಗ್, ಗೂರ್ಖಾ, ಗುಡ್ಡಗಾಡು ಪರಿಷತ್ತನ್ನು ಹೊಂದಿರುವಂಥ ಪಶ್ಚಿಮ ಬಂಗಾಳ ರಾಜ್ಯದಲ್ಲಿನ ಡಾರ್ಜಿಲಿಂಗ್ ಜಿಲ್ಲಾ ಗುಡ್ಗಡಗಾಡು ಪ್ರದೇಶಗಳಿಗೆ ಅನ್ವಯವಾಗತಕ್ಕುದಲ್ಲ.

ಈ ಸಂವಿಧಾನವನ್ನು ಏನೇ ಇದ್ದಾಗ್ಯೂ (ಏ) (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಪ್ರದೇಶಗಳು, ಯಾವುದಾದರೂ ಇದ್ದರೆ ಅವುಗಳನ್ನು ಹೊರತುಪಡಿಸಿ (2)ನೇ ಖಂಡದ (5) ಉಪಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ರಾಜ್ಯಕ್ಕೆ ಈ ಭಾಗವನ್ನು ಅನ್ವಯಿಸಬೇಕೆಂದು ಆ ರಾಜ್ಯದ ವಿಧಾನ ಸಭೆಯ ಒಟ್ಟು ಸದಸ್ಯರ ಬಹುಮತದ ಮೂಲಕ ಮತ್ತು ಆ ಸದನದಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ 3ನೇ 2 ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದ ಮೂಲಕ ಒಂದು ನಿರ್ಣಯವನ್ನು ಅಂಗೀಕರಿಸಿದೆ. ರಾಜ್ಯ ವಿಧಾನಮಂಡಲವು ಹಾಗೆಯೇ ಅನ್ವಯಿಸಬಹುದು.

243ಓ. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯಪ್ರವೇಶಿಸುವುದರ ಬಗ್ಗೆ: ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಸಿಂಧುತ್ವವನ್ನು ಅಥವಾ 243ಕ್ಕೆ ಅನುಚ್ಛೇದದ ಮೇರೆಗೆ ಮಾಡಲಾದ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

## ಭಾರತದ ರಾಜಕೀಯದಲ್ಲಿ ವರ್ಗ ಹಾಗೂ ಜಾತಿಗಳು:

ಆಧುನಿಕ ಭಾರತದ ಪ್ರಜಾಪ್ರಭುತ್ವ ಪದ್ದತಿ, ಏಕರೂಪದ ಕಾನೂನು ಪದ್ದತಿ, ಸಾರ್ವತ್ರಿಕ ಶಿಕ್ಷಣ ಕ್ರಮ, ಸಾಮಾಜಿಕ, ಧಾರ್ಮಿಕ ಸುಧಾರಣೆಗಳು, ಪಾಶ್ಚಾತ್ಯೀಕರಣ, ನಗರೀಕರಣ, ಆಧುನೀಕರಣ, ಜಾಗತೀಕರಣ ಈ ಮುಂತಾದ ಬೆಳವಣಿಗೆಗಳು ಜಾತಿಯು ಹೊಸ ಪಾತ್ರ ನಿರ್ವಹಣೆಗೆ ಅಡಿಪಾಯವಾದವು. ಇಂತಹ ಪ್ರಭಾವಿ ಶಕ್ತಿ ಹಾಗೂ ಮಾಧ್ಯಮಗಳಿಂದ ಜಾತಿಯ ಹೊಸ ಪಾತ್ರ ನಿರ್ವಹಣೆಯ ವಿವರ ಇಲ್ಲಿದೆ.

1) ಸಂಘಟನಾ ಶಕ್ತಿಯಾಗಿ ಹೊರ ಹೊಮ್ಮುತ್ತಿರುವ ಜಾತಿ

2) ರಾಜಕೀಯ ಶಕ್ತಿಯಾಗಿ 'ಜಾತಿ'

3) ನಿಮ್ನ ಜಾತಿಗಳ ಹಾಗೂ ಹಿಂದುಳಿದ ವರ್ಗಗಳ ರಕ್ಷಣೆ\

4) ಕುಗ್ಗುತ್ತಿರುವ ಜಾತಿಯ ಮೇಲಿನ ಧಾರ್ಮಿಕ ಹಿಡಿತ.

## ಜಾತಿ ಮತ್ತು ರಾಜಕೀಯ:

ಜಾತಿ ಮತ್ತು ರಾಜಕೀಯ ಇವೆರಡು ಪರಸ್ಪರ ಸಂಬಂಧ ಹೊಂದಿದ ಕಲ್ಪನೆಗಳು. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಒಂದು ಅರ್ಥದಲ್ಲಿ ಹೇಳುವುದಾದರೆ, ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜಾತಿಗಳ ಸಂಘಟನೆ ಹಾಗೂ ಪೈಪೋಟಿ ಇವುಗಳನ್ನು ಗಮನಿಸಿದರೆ ದೇಶದಲ್ಲಿ ಜಾತಿ ಇನ್ನೂ ಜೀವಂತವಾಗಿದೆ ಎಂಬುವುದು ಸ್ಪಷ್ಟವಾಗುತ್ತದೆ. ಭಾರತವು ಜಾತ್ಯಾತೀತ ರಾಷ್ಟ್ರವೆಂದು ಕರೆಯಿಸಿಕೊಂಡರೂ ಅದರ ವಾಸ್ತವಿಕ ಸತ್ಯವೇ ಬೇರೆಯದಾಗಿದೆ. ಜಾತಿಗಳು ಪ್ರಬಲ ಶಕ್ತಿಗಳಾಗಿ ಪುನ: ಬೆಳೆಯುತ್ತಿವೆ.

ಪ್ರಬಲ ಜಾತಿಗಳ ಪ್ರಾಬಲ್ಯ: ದೇಶದ ವಿವಿಧ ರಾಜ್ಯಗಳಲ್ಲಿ ಪ್ರಬಲ ಜಾತಿಗಳು ಪ್ರಾಬಲ್ಯ ಹೆಚ್ಚುತ್ತಲೇ ಇದೆ. ಅವುಗಳಲ್ಲಿ ಪೈಪೋಟಿ ಕೂಡಾ ಕಂಡು ಬರುತ್ತದೆ. ರಾಜಕೀಯ ಪೈಪೋಟಿಯಲ್ಲಿರುವ ದೇಶದ ವಿವಿಧ ರಾಜ್ಯಗಳು ಹಾಗೂ ಜಾತಿಗಳನ್ನು ಕೆಳಗಿನ ಈ ಪಟ್ಟಿ ಸ್ಪಷ್ಟಪಡಿಸುತ್ತದೆ.

**ರಾಜಕೀಯ ಪೈಪೋಟಿಯಲ್ಲಿರುವ ರಾಜ್ಯವಾರು ಪ್ರಬಲ ಜಾತಿಗಳು:**

**ರಾಜ್ಯಗಳುಪೈಪೋಟಿಯಲ್ಲಿರುವ ಜಾತಿಗಳು**

1. ಕರ್ನಾಟಕ – ಒಕ್ಕಲಿಗ ಮತ್ತು ಲಿಂಗಾಯತ

2. ಕೇರಳ – ನಾಯರ್, ಸಿರಿಯನ ಕ್ರಿಶ್ಚಿಯನ್ ಮತ್ತು ಇಝುವನ್

3. ಆಂಧ್ರಪ್ರದೇಶ – ರೆಡ್ಡಿ ಮತ್ತು ಕಮ್ಮಾ

4. ತಮಿಳುನಾಡು – ಗೌಂಡರ್, ಪದ್ಯಯಾತಿ ಮತ್ತು ಮೊದಲಿಯಾರ್

5. ಗುಜರಾತ್ – ಪಾತಿದಾರ, ಬನಿಯನ್ ಕೋಲಿ

6. ಪ.ಬಂಗಾಳ – ಸಾದ್ಗೋಪ್

7. ಮಹಾರಾಷ್ಟ್ರ – ಮರಾಠಾ, ಬ್ರಾಹ್ಮಣ ಕಾಯಸ್ತಾ ಮತ್ತು ರಾಜಪೂತ

8. ಬಿಹಾರ್ – ಬೂಮಿ ಹಾರ್ ಕಾಯಸ್ತಾ ಮತ್ತು ರಾಜಪೂತ

9. ಉತ್ತರಪ್ರದೇಶ – ರಾಜಪೂತ ಮತ್ತು ಚಮ್ಮಾರ

ದೇಶದ ವಿವಿಧ ರಾಜ್ಯಗಳಲ್ಲಿ ಪ್ರಬಲ ಜಾತಿಗಳ ಮಧ್ಯೆ ರಾಜಕೀಯ ಸೆಣಸಾಟ ಇದೆ. ಚುನಾವಣೆಗಳಲ್ಲಿ ಪ್ರಬಲ ಜಾತಿಗಳು ಅಲ್ಪಸಂಖ್ಯಾತ ಜಾತಿಗಳ ಮನವೊಲಿಸುವ ಆಸೆ ಆಮಿಷಗಳನ್ನು ತೋರಿಸಿ ಇಲ್ಲವೇ ಹೆದರಿಸಿ, ಬೆದರಿಸಿ ಮತ ಪಡೆಯುವುದನ್ನು ಕಾಣುತ್ತೇವೆ.

**ಜಾತಿ ರಾಜಕಾರಣ:**

ರಾಜಕಾರಣವೆಂದರೆ ಅದು ಜಾತಿಕಾರಣವೆಂದೇ ಗುರುತಿಸಲಾಗುತ್ತದೆ. ಜನರಲ್ಲಿ ಜಾತಿಯ ಭಾವನೆ, ಸ್ವಜಾತಿ ಪ್ರೇಮ, ನಿಷ್ಠೆ, ಅನ್ಯ ಜಾತಿಗಳ ಮೇಲೆ ದ್ವೇಷ ಇತ್ಯಾದಿಗಳು ಹೆಚ್ಚುತ್ತಿವೆ. ಇವು ಕೆಲವು ಸಲ ಸಂಘರ್ಷಕ್ಕೂ ದಾರಿ ಮಾಡಿಕೊಡುತ್ತಿವೆ. ಇದಕ್ಕೆಲ್ಲ ಜಾತಿ ರಾಜಕಾರಣವೇ ಪ್ರಮುಖ ಕಾರಣವೆನ್ನಲಾಗಿದೆ. ಇದೊಂದು ವಿನಾಶಕಾರಿ ಬೆಳವಣಿಗೆಯೇ ಆಗಿದೆ.

**ಪ್ರಾದೇಶಿಕ ರಾಜಕೀಯ:**

ಪ್ರಾದೇಶಿಕತಾ ವಾದವೆಂದರೆ ರಾಷ್ಟ್ರೀಯ ಆಸಕ್ತಿಗಳನ್ನು ಅಲಕ್ಷಿಸುವಷ್ಟರ ಮಟ್ಟಿಗೆ ಪ್ರದೇಶವೊಂದರ ಬಗ್ಗೆ ಜನರು ಹೊಂದಿರಬಹುದಾದ ತೀರಾ ಅತಿರೇಕದ ನಿಷ್ಠೆ. ಭಾರತವು ಬಹಳಷ್ಟು ಪ್ರಾದೇಶಿಕ ಭಿನ್ನತೆಗಳಿಗಿರುವ ನಾಡು. ಇಲ್ಲಿನ ಕೆಲವು ರಾಜ್ಯಗಳು ಆರ್ಥಿಕವಾಗಿ ಮುನ್ನಡೆಯುತ್ತಿದ್ದರೆ ಇನ್ನು ಕೆಲವು ಆರ್ಥಿಕವಾಗಿ ಬಹಳಷ್ಟು ಹಿಂದುಳಿದಿವೆ. ಇದರಿಂದ ರಾಜ್ಯ ರಾಜ್ಯಗಳ ನಡುವಿನ ಅಂತರ ಹೆಚ್ಚಾಗಿ ಪ್ರಾದೇಶಿಕ ಭಾವನೆಗಳು ಮೊಳೆಯಲು ಆಸ್ಪದವಾಗಿದೆ. ಪ್ರಾದೇಶಿಕತಾವಾದದಿಂದಾಗಿ ಒಂದು ರಾಜ್ಯದ ಜನ ಇನ್ನೊಂದು ರಾಜ್ಯದ ಆಶಯ, ಆಸಕ್ತಿ ಹಾಗೂ ಅಗತ್ಯತೆಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ವ್ಯವಹರಿಸುವಂತಾಗುವುದು. ಸ್ವಾರ್ಥ ರಾಜಕಾರಣಿಗಳು ಇದಕ್ಕೆ ಇನ್ನಷ್ಟು ಇಂಬು ಕೊಡುತ್ತಾರೆ. ಪ್ರಾದೇಶಿಕತಾವಾದವು 'ಪ್ರತ್ಯೇಕತಾವಾದಕ್ಕೆ' ಹಾಗೂ ಆ ಸಂಬಂಧವಾದ ಚಟುವಟಿಕೆಗಳು ಉಗ್ರವಾದೀ ಆಂದೋಲನಗಳಿಗೂ ಅವಕಾಶ ನೀಡಿದ ಉದಾಹರಣೆಗಳಿವೆ. ಉದಾ: ಪಂಜಾಬಿನ 'ಖಲೀಸ್ಥಾನ ಆಂದೋಲನ' ಅಸ್ಸಾಮಿನ 'ಬೋಡೋಲ್ಯಾಂಡ್ ಆಂದೋಲನ' ಇತ್ಯಾದಿ.

**ಭಾಷಾಂಧತೆ ಮತ್ತು ಮತಾಂಧತೆ:**

ಭಾಷಾವಾದವೆಂಬುದು ಒಂದು ಭಾಷೆಯ ಬಗೆಗಿನ ವಿಶೇಷವಾದ ಮೆಚ್ಚುಗೆ ಹಾಗೂ ಒಲವು ಹಾಗೂ ಇತರ ಭಾಷೆಗಳ ಬಗೆಗಿನ ತಿರಸ್ಕಾರ ಹಾಗೂ ದ್ವೇಷವನ್ನು ಒಳಗೊಂಡ ಪರಿಕಲ್ಪನೆಯಾಗಿದೆ. ಭಾರತವು ಭಾಷೆಗಳ ಸಂಗ್ರಹಾಲಯ. ಭಾಷಾ ವೈವಿಧ್ಯವು ಭಾಷಾವಾದಕ್ಕೆ ಕಾರಣವಾಗಿ ರಾಷ್ಟ್ರೀಯ ಭಾವೈಕ್ಯಕ್ಕೆ ಅಪಾಯಗೊಂಡಿರುವುದು ಇದೇ ಭಾಷೆಯ ಹೆಸರಿನಲ್ಲಿ ನಡೆದ ಆಂದೋಲನಗಳು, ಪ್ರತಿಭಟನೆ, ಮುಷ್ಕರಗಳು ಭಾಷೆಗಳ ನಡುವಿನ ಅಂತರವನ್ನು ಹೆಚ್ಚಿಸಿವೆ. ರಾಜ್ಯಗಳ ಗಡಿಗಳಲ್ಲಿ ವಾಸಿಸುವವರಂತೂ ಹಲವು ಬಾರಿ ಗಲಭೆಗಳಿಗೆ ಬಲಿಪಶುಗಳಾಗಿದ್ದಾರೆ.

ಭಾಷಾವಾದದ ಪರಿಣಾಮಗಳು ಹಲವಾರು. ಭಾಷಾವಾದದಿಂದ ಭಾಷಾ ಅಲ್ಪಸಂಖ್ಯಾತರು ಉಪಟಳಕ್ಕೆ ಒಳಗಾಗುತ್ತಾರೆ. ಭಾಷಾವಾದದ ಜೊತೆಗೆ ಸಂಕುಚಿತತೆ ಬೆಳೆಯುತ್ತದೆ. ರಾಷ್ಟ್ರೀಯ ವಿಚಾರಗಳ ಹಾಗೂ ವಿಷಯಗಳ ಬಗ್ಗೆ ಅಸಡ್ಡೆ ಮೂಡುತ್ತದೆ. ಅದು ಪ್ರಾದೇಶಿಕ ಮಟ್ಟದ ರಾಜಕೀಯ ಪಕ್ಷಗಳ ಹುಟ್ಟಿಗೆ ಕಾರಣವಾಗುವುದು. ಭಾಷಾವಾದದ ಅತಿರೇಕಕ್ಕೆ ಹೋದಾಗ 'ಪ್ರತ್ಯೇಕ ರಾಜ್ಯ ಸ್ಥಾಪನೆ' ಯಂತಹ ವಿಭಜನಕಾರೀ ಘೋಷಣೆಗಳು ಮೊಳಗುವುವು. ಇದರಿಂದ ರಾಷ್ಟ್ರೀಯ ಏಕತೆ ಆಪತ್ತಿನಲ್ಲಿ ಸಿಲುಕುವುದು.

**ಮತಾಂಧತೆ:**

ಹಲವು ಅಲ್ಪಸಂಖ್ಯಾತ ಕೋಮುಗಳು ಮತ್ತು ಮತಗಳು ತಮ್ಮ ಹಿತಾಸಕ್ತಿಯನ್ನು ಉಳಿಸಿಕೊಳ್ಳಲು ಅನೇಕ ವಿಧಾನಗಳನ್ನು ಅನುಸರಿಸುತ್ತವೆ. ಯಾವುದೇ ರಾಜಕೀಯ ಪಕ್ಷಕ್ಕೆ ಬೆಂಬಲ ನೀಡಿ ಅದರಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬಹುದು. ಬಹುಸಂಖ್ಯಾತರ ದಬ್ಬಾಳಿಕೆಯ ಹೆದರಿಕೆ ಅಲ್ಪಸಂಖ್ಯಾತರಿಗೆ ಇರುವುದು ಸಹಜ. ಭಾರತದಲ್ಲಿ ಮುಸ್ಲಿಂರಿಗೆ ಮತ್ತು ಸಿಖ್‌ರಿಗೆ ಇಂತಹ ಸ್ವರೂಪದ ಸಂಶಯ ಮುಡುವುದು ಸಹಜ ಎಂದು ಹೇಳಬಹುದು.

ಆದರೆ, ಮುಸ್ಲಿಂರಿಗೆ ಕೋಮುವಾದಕ್ಕೆ ಬೆಂಬಲ ಸಿಗುತ್ತಿರುವುದು ವರ್ತಮಾನದ ಸಂಗತಿಯಲ್ಲಿ ಬ್ರಿಟೀಷರಿಂದ ಸಕ್ರಿಯ ನೆರವು ಪಡೆದು ಸಾಕಷ್ಟು ಹಿಂಸೆ, ದಳ್ಳೂರಿಗಳನ್ನು ಎಬ್ಬಿಸಿ ಅಂತಿಮವಾಗಿ ದೇಶದ ವಿಭಜನೆಯಾಯಿತು. ಭಾರತದಲ್ಲಿ ಉಳಿದ ಅಲ್ಪಸಂಖ್ಯಾತ ಮುಸ್ಲಿಂರಿಗೆ ಪಾಕಿಸ್ತಾನ ತಾನು ಕಾವಲುಗಾರ ಎಂದು ಹೇಳಿಕೊಳ್ಳುತ್ತದೆ. ಹಿಂದೂ ಕೋಮುವಾದಿಗಳು ಪ್ರತಿಯಾಗಿ ಅನೇಕ ಗಲಭೆ ಮತ್ತು ದೊಂಬಿಗಳನ್ನು ಏರ್ಪಡಿಸುತ್ತಾರೆ. ಇದೇ

ರೀತಿಯ ಪರಸ್ಪರ ದ್ವೇಷ ಅಸೂಯೆ ಹಿಂದೂ ಹಾಗೂ ಸಿಖ್‌ರಲ್ಲಿ ಕಂಡುಬರುತ್ತಿವೆ. ಮಹಾರಾಷ್ಟ್ರದಲ್ಲಿ ಸಂಭವಿಸಿದ ಭಿವಂಡಿ ಗಲಭೆ ಮತ್ತು ಪಂಜಾಬಿನಲ್ಲಿ ಈಗ ನಡೆಯುತ್ತಿರುವ ಕೋಮು ಕಗ್ಗೋಲೆಗಳನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು.

## ಜಾತ್ಯಾತೀತ ನೀತಿಯ ಸಮಸ್ಯೆಗಳು ಹಾಗೂ ರಾಷ್ಟ್ರದ ಏಕತೆಯ ಸಮಸ್ಯೆಗಳು:

ಪ್ರಾದೇಶಿಕತಾವಾದ: ಭಾರತ ವೈವಿಧ್ಯಮಯ ಸಾಂಸ್ಕೃತಿಕ ಉಪಖಂಡ. ವಿಭಿನ್ನ ಭಾಷೆಯ ಸಂಸ್ಕೃತಿಯ ಮತ್ತು ಸಾಮಾಜಿಕ ಹಿನ್ನೆಲೆ ಹೊಂದಿದ ಜನ ವರ್ಗ ವಿಸ್ತಾರವಾದ ಪ್ರದೇಶದಲ್ಲಿ ಹಂಚಿಹೋಗುತ್ತಾರೆ. ಹಾಗಾಗಿ ಅವರ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಆಶೋತ್ತರಗಳು ವಿಭಿನ್ನತೆ ಹೊಂದುವುದು ಸಹಜವಾಗಿರುತ್ತದೆ. ಇಂತಹ ಸಾಂಸ್ಕೃತಿಕ ವಿಭಿನ್ನತೆಗೆ ಪ್ರಥಮ ಬಾರಿಗೆ ಪುರಸ್ಕಾರ ದೊರಕ್ಕಿದ್ದು 1956ರ ಭಾಷಾವಾರು ಪ್ರಾಂತ್ಯ ವಿಂಗಡನೆಯಿಂದ. ಪ್ರಾದೇಶಿಕತೆಯ ಗಾಳಿ ನಂತರದ ಕಾಲದಲ್ಲಿ ರಾಷ್ಟ್ರದ ಎಲ್ಲ ಕಡೆ ಬೀಸಲು ಪ್ರಾರಂಭವಾಯಿತು. ವಿವಿಧ ಪ್ರಾದೇಶಿಕತೆ ಗುಂಪುಗಳು, ರಾಜಕೀಯ ಪಕ್ಷಗಳು, ಸ್ಥಳೀಯ ಬೇಡಿಕೆಗಳನ್ನು ಪುಷ್ಠೀಕರಿಸಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಹೊರಟ ಮಾರ್ಗ, ರಾಷ್ಟ್ರೀಯ ಐಕ್ಯತೆಯ ದೃಷ್ಟಿಯಿಂದ ನಿಜವಾಗಿಯೂ ಖೇದಕರ. ಅಂದರೆ ಪ್ರಾದೇಶಿಕ ಬೇಡಿಕೆಗಳು ಅಪ್ಪಟವಾಗಿಲ್ಲ ಎಂದು ಹೇಳಲು ಶಕ್ಯವಿಲ್ಲ. ಆದರೆ ಅವುಗಳನ್ನು ವಿವೇಕ ರಹಿತವಾಗಿ ಬಳಸಿಕೊಳ್ಳುವುದು ರಾಷ್ಟ್ರದ ಸಮಗ್ರತೆಯ ದೃಷ್ಟಿಯಿಂದ ಒಳ್ಳೆಯದಲ್ಲ.

ಭಾಷಾವಾದ: ಭಾಷಾರಾಜ್ಯ ನಿರ್ಮಾಣ ಸ್ಥಳೀಯ ಸಂಸ್ಕೃತಿ ಮತ್ತು ಆಶೋತ್ತರಗಳನ್ನು ನೀಗಿಕೊಳ್ಳಲು ಮಾಡಿದ ಹೋರಾಟದ ಪರಿಣಾಮ ಎಂದು ಹೇಳಬಹುದು. ಭಾರತದಲ್ಲಿ ಭಾಷಾ ವೈವಿಧ್ಯವಿದ್ದು ಪ್ರತಿ ಭಾಷೆಯ ಜನರೂ ಅದರ ಬಗ್ಗೆ ಮತ್ತು ತಮ್ಮ ಪುರಾತನ ಶ್ರೇಷ್ಠತೆಯ ಬಗ್ಗೆ ಅಭಿಮಾನ ತಾಳಿರುವುದು ಸಹಜ. ಆದರೆ ಭಾಷಾಭಿಮಾನ ಜಾಗೃತಿಗೆ ಬಹುಮಟ್ಟಿಗೆ ಆಯಾ ಆ ಭಾಷೆಯ ಸಾಹಿತಿಗಳು ಇತಿಹಾಸಜ್ಞರು ಮೂಲಪ್ರೇರಕರಾಗಿದ್ದಾರೆ. ಈ ಬೇಡಿಕೆಗಳಲ್ಲಿ ರಾಜಕಾರಣದ ಪ್ರವೇಶವಾದ ಮೇಲೆ ಅದರ ಪರಿಶುದ್ಧತೆಯಲ್ಲಿ ಕೆಸರುಗಳು ಸೇರಿದವೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಮೊದಲನೆಯದಾಗಿ ಜಾತೀಯ ಭಾವನೆಗಳು ಆ ಭಾಷಾಭಿಮಾನದ ಜಾತ್ಯಾತೀತ ಸೋಗನ್ನು ಸಂತೋಷದಿಂದ ಧರಿಸಿದವು. ಭಾಷಾ ಪ್ರದೇಶಗಳು ಕೆಲಜಾತಿಗಳು ಸಂಖ್ಯಾಬಲದ ಪ್ರದೇಶಗಳು ಒಂದೇ ಆಗಿದ್ದುದರಿಂದ ಭಾಷೆಯ ಹೆಸರಿನಲ್ಲಿ ಪ್ರತ್ಯೇಕ ರಾಜ್ಯವನ್ನು ಗಳಿಸಿ ಜಾತಿ ಪ್ರಭುತ್ವಗಳನ್ನು ಸ್ಥಾಪಿಸಲು ಅನುಕೂಲವಾಯಿತು. ಪಂಜಾಬಿನಲ್ಲಿ ಸಿಖ್‌ರು ಮಹಾರಾಷ್ಟ್ರದಲ್ಲಿ ಮರಾಠಾ ಮತ್ತು ಆಂಧ್ರದಲ್ಲಿ ರೆಡ್ಡಿಗಳ ಮುಂದಾಳ್ತನಕ್ಕೆ ಭಾಷಾ ರಾಜ್ಯಗಳು ನೆರವಾಗಬಹುದಿತ್ತು. ಆದರೆ ಸಮಕಾಲೀನ ರಾಜಕೀಯ, ಸಾಮಾಜಿಕ ಪರಿಸ್ಥಿತಿಗಳು ಇಂತಹ ವಿಷಮತೆಗೆ ಅವಕಾಶ ನೀಡಲಿಲ್ಲ ಎಂದು ಹೇಳಬೇಕು. ದೇಶದ ಪ್ರಾದೇಶಿಕ ಐಕ್ಯಕ್ಕಲ್ಲದಿದ್ದರೂ ಸುಲಭ ಆಡಳಿತಕ್ಕೂ ತೊಡಕು ತರಬಹುದಾದದ್ದು ಭಾಷಾ ರಾಜ್ಯಗಳ ಭಾಷಾ ನೀತಿ ಭಾಷಾ ರಾಜ್ಯಗಳಾದ ಮೇಲೆ ಆಯಾ ಭಾಷೆ ಅಲ್ಲಿ ಇಂದಲ್ಲ ನಾಳೆ ಆಡಳಿತ ಮತ್ತು ಶಿಕ್ಷಣ ಭಾಷೆಯಾಗುವುದು ಅನಿವಾರ್ಯ. ವಿವಿಧ ರಾಜ್ಯಗಳ ನಡುವೆ ಆಡಳಿತ ಕೌಶಲ್ಯಕ್ಕೆ, ವಿಚಾರ ವಿನಿಮಯಕ್ಕೆ ನಮಗೆ ಒಂದು ಅಖಿಲ ಭಾರತ ಭಾಷೆ ಅಗತ್ಯ. ಅದನ್ನು ಹಿಂದಿ ಭಾಷೆ ವಹಿಸಬೇಕೋ ಅಥವಾ ಇಂಗ್ಲೀಷ್ ನಿರ್ವಹಿಸಬೇಕೋ ಎಂಬುವುದರ ಬಗೆಗೆ ಇತ್ತೀಚಿನವರೆಗೆ ಸುದ್ದಿಯಲ್ಲಿರುವ ವಿಷಯವಾಗಿದೆ.

ಉತ್ತರ ಭಾರತದ ಹಿಂದಿ ಒತ್ತಾಯ ಹೇರಿಕೆಯ ನೀತಿಯನ್ನು ದಕ್ಷಿಣ ರಾಜ್ಯಗಳು ವಿರೋಧಿಸುತ್ತಿವೆ. ಅದರಲ್ಲೂ ಮುಖ್ಯವಾಗಿ ತಮಿಳುನಾಡಿನಲ್ಲಿ ಹಿಮದಿ ವಿರೋಧಿ ಚಳುವಳಿಗಳಿಗೂ ಪ್ರಬಲವಾಗಿವೆ. ಈ ಕಾರಣದಿಂದಾಗಿ, ಅನೇಕ ರಾಜ್ಯಗಳಲ್ಲಿ ಭಾಷಾ ಗುಂಪುಗಳು ಹುಟ್ಟಿಕೊಂಡಿವೆ. ಕನ್ನಡ ಹೋರಾಟ ಸಮಿತಿ ಮುಂತಾದವು. ಆದರೆ ಅವುಗಳ ಬೇಡಿಕೆ ಕೇವಲ ಭಾಷೆಯ ರಕ್ಷಣೆಯೊಂದೇ ಅಲ್ಲದೆ ಕಾಲಕಾಲಕ್ಕೆ ವಿವಿಧ ಬೇಡಿಕೆಗಳನ್ನು ಮುಂದಿಡುತ್ತಾ ಬಂದಿವೆ. ವಿವಿಧ ರಾಜ್ಯಗಳ ಸಮಾನವಾದ ಅಭಿವೃದ್ದಿಗಾಗಿ ಕೇಂದ್ರವು ಹಣ ಒದಗಿಸಬೇಕೆಂದು ಒತ್ತಾಯ ಪಡಿಸುತ್ತಿವೆ. ಅನೇಕ ರಾಜ್ಯಗಳಲ್ಲಿ ಭಾಷಾ ಅಲ್ಪಸಂಖ್ಯಾತರ ಪ್ರಶ್ನೆಯು ಇದೆ. ಶಿಕ್ಷಣ ಮತ್ತು ಸರ್ಕಾರಿ ನೌಕರಿಗಳಲ್ಲಿ ಮುಖ್ಯವಾಗಿ ಸೌಲಭ್ಯಗಳು ಬೇಕೆಂದು ಅವರು ಹೇಳುತ್ತಿರುವರು.

ಈ ಭಾಷಾ ಗುಂಪುಗಳು ವಿವಿಧ ಗಡಿತಂಟೆಗಳಲ್ಲಿಯೂ ವಿದ್ಯುಕ್ತವಾಗಿವೆ. ಅಂತರ್ ರಾಜ್ಯ ನದಿ ನೀರಿನ ಹಂಚಿಕೆಯಂತಹ ವಿವಾದಗಳು ಕೈಗೂಡಿವೆ. ಯಾವುದೇ ಭಾಷೆಯನ್ನು ಒತ್ತಾಯದ ಮೂಲಕ ಇನ್ನೊಂದು ಭಾಷೆಯ ಜನತೆಯ ಮೇಲೆ ಹೇರಬಾರದು. ಕಲಹ ಮತ್ತು ದ್ವೇಷವನ್ನು ತಪ್ಪಿಸಲು ಸರ್ವಸಮ್ಮತ ಸೂತ್ರ ಕಂಡುಹಿಡಿಯುವುದು ಅಗತ್ಯ. ಭಾಷೆಯ ಜಗಳಗಳಿಂದ ಭಾರತದ ಐಕ್ಯತೆಗೆ ವಿಪತ್ತು ಬರುವ ಸಂಭವ ವಿಶೇಷವಾಗಿಲ್ಲ.

## ಮತಾಂಧತೆ, ಕೋಮುವಾದ:

ಮತಾಂಧತೆ ಭಾವನೆ ಎಂದರೆ ಇಡೀ ಸಮಾಜ ಅಥವಾ ರಾಷ್ಟ್ರದ ಬದಲು ತನ್ನ ಸ್ವಂತ ಜನಾಂಗ, ಬುಡಕಟ್ಟಿನವರ ಬಗ್ಗೆ ನಿಷ್ಠೆ, ಪ್ರೀತಿಯನ್ನು ಹೊಂದಿರುವುದೇ ಆಗಿದೆ.

ಕೋಮುವಾದ ಭಾವನೆಯ ಜಾತ್ಯಾತೀತ ಪರಿಕಲ್ಪನೆಗೆ ವಿರುದ್ದವಾದದ್ದು. ಇದು ಒಂದು ಧಾರ್ಮಿಕ ಗತುಂಪು ಇತರೆ ಗುಂಪುಗಳಿಂದ ಪ್ರತ್ಯೇಕವಾಗಿ ತನ್ನ ಅನನ್ಯತೆಗೆ ಒತ್ತು ನೀಡುವ ಒಂದು ತತ್ವಸರಣಿಯಾಗಿದೆ. ಇತರೆ ಧಾರ್ಮಿಕ ಗುಂಪುಗಳಿಗೆ ನಷ್ಟವಾಗುವಂತೆ ತನ್ನ ಸ್ವಂತ ಜನಾಂಗದ ಹಿತಾಸಕ್ತಿ ಸಂವರ್ಧಿಸುತ್ತದೆ.

ಭಾರತದಲ್ಲಿ ಕೋಮುವಾರು ಬೆಳೆಯಲು ಬ್ರಿಟೀಷರ 'ಒಡೆದು ಆಳುವ ನೀತಿಯೇ' ಮುಖ್ಯ ಕಾರಣವೆನ್ನಬಹುದು. ಬ್ರಿಟೀಷರು ತಮ್ಮ ಸ್ವಂತ ಹಿತಾಸಕ್ತಿಗೋಸ್ಕರ ಹಿಂದೂ ಮತ್ತು ಮುಸ್ಲಿಂರ ನಡುವೆ ಒಡಕನ್ನುಂಟುಮಾಡಿ ಭಾರತದಲ್ಲಿ ತಮ್ಮ ಆಳ್ವಿಕೆಯ ಭದ್ರತೆಗಾಗಿ ಹಿಂದೂ ಮತ್ತು ಮುಸ್ಲಿಮರ ನಡುವಿನ ಭಿನ್ನಾಭಿಪ್ರಾಯಗಳನ್ನು ಸ್ವಪ್ರಯೋಜನಕ್ಕಾಗಿ ಬಳಸಿಕೊಂಡು ಕೋಮುವಾದ ಭಾವನೆಯನ್ನು ಹುಟ್ಟು ಹಾಕಿದರು.

ಹಿಂದೂ ಮಹಾಸಭಾ, ಮುಸ್ಲಿಂ ಲೀಗ್, ಅಕಾಲಿದಳ ಮುಂತಾದ ಕೋಮುವಾರು ಪಕ್ಷಗಳು ಹಾಗೂ ಸಂಘಟನೆಗಳು ಮತ್ತು ವಿ.ಎಚ್.ಪಿ. ಜಮಾತ್, ಎ.ಇಸ್ಲಾಮ ಮುಂತಾದ ಧಾರ್ಮಿಕ ಸಂಘಟನೆಗಳು ಸದಸ್ಯರಲ್ಲಿ ಮತಾಂಧತೆ ಬೀಜ ಬಿತ್ತುತ್ತಿವೆ. ಧರ್ಮದಲ್ಲಿ ರಾಜಕೀಯ ಬೆರೆಸಿ, ಮತೀಯ ಆಧಾರದ ಮೇಲೆ ಮತಗಳನ್ನು ಗಳಿಸುವ ಪ್ರಯತ್ನಗಳು ಸಹ ಕೋಮುವಾದ ಭಾವನೆ ಬೆಳೆಯಲು ಸಹಕಾರಿಯಾಗಿವೆ. ಚುನಾವಣಾ ಪ್ರಚಾರದಲ್ಲಿ ಜನರ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸಲಾಗುತ್ತಿವೆ. ಪಾಶ್ಚಿಮಾತ್ಯ ರಾಷ್ಟ್ರಗಳು ನಮ್ಮ ದೇಶದ ಜನತೆಯಲ್ಲಿ ಕೋಮುವಾರು ಭಾವನೆಯನ್ನು ಬೆಳೆಸಲು ಕೆಲವು ಮತೀಯ ಗುಂಪುಗಳಿಗೆ ಹಣ ಮತ್ತು ಶಸ್ತ್ರಾಸ್ತ್ರಗಳ ಸಹಾಯ ಮಾಡುವುದು. ಈ ಭಾವನೆ ಬೆಳೆಯಲು ಮತ್ತೊಂದು ಕಾರಣವಾಗಿದೆ.

ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಅಗತ್ಯಾಂಶಗಳಾದ ಭ್ರಾತೃತ್ವ ಭಾವನೆ. ಸಹಿಷ್ಣುತೆ, ಸಾಮರಸ್ಯಗಳಿಗೆ ಈ ಕೋಮು ಭಾವನೆ ಅಡಚಣೆಯಾಗಿದೆ. ಕೋಮುವಾರು ಭಾವನೆಯು ಧಾರ್ಮಿಕ ಮತಾಂಧತೆಗೆ ದಾರಿ ಮಾಡಿಕೊಟ್ಟು ಗುಂಪು ಗುಂಪುಗಳ ನಡುವೆ ಹಗೆತನವನ್ನು ಬೆಳೆಸುತ್ತದೆ. ಇದು ದೇಶದ ಐಕ್ಯತೆ, ಸಮಗ್ರತೆ, ಸಾಮರಸ್ಯಗಳಿಗೆ ಮಾರಕ.

ಭಾರತದಲ್ಲಿನ ವಿವಿಧ ಮತ ಧರ್ಮಗಳ ನಡುವೆ ಸಹಬಾಳ್ವೆಗೂ ಮತ್ತು ಭ್ರಾತೃತ್ವ ಭಾವನೆಗೂ ಈ ಮತಾಂಧತೆಯು ಅಡ್ಡಿಯಾಗಿದೆ. ಭಾರತದ ರಾಷ್ಟ್ರೀಯತವಾದದ ಅನನ್ಯತೆಗೆ ಇದು ತೇಜೋವಧೆಯಾಗಿದೆಯಲ್ಲದೇ ನಮ್ಮ ಜಾತ್ಯಾತೀತ ಸಂಸ್ಕೃತಿಯ ಬೆಳವಣಿಗೆಗೂ ಅಡ್ಡಿಯಾಗಿದೆ.

ಇದರಿಂದ ಹೊರಬರುವ ಆಶಯ ನಾಗರೀಕ ಸಮಾಜದ್ದಾಗಬೇಕು.

## ಜಾತ್ಯಾತೀತ ನೀತಿಯ ಸಮಸ್ಯೆಗಳು ಮತ್ತು ರಾಷ್ಟ್ರದ ಏಕತೆಯ ಸಮಸ್ಯೆಗಳು

### ಜಾತ್ಯಾತೀತತೆ:

ಕೋಮುವಾರು, ಮತೀಯ ಭಾವನೆಯನ್ನು ಚಿವುಟಿ ಹಾಕಲು ಜನತೆಯಲ್ಲಿ ಜಾತ್ಯಾತೀತ ಮತ್ತು ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವುದೊಂದೇ ದಾರಿಯಾಗಿದೆ.

'ಜಾತ್ಯಾತೀತ ಎಂದರೆ ಯಾವುದೇ ಜಾತಿಯನ್ನು ಆರಾಧಿಸದಿರುವುದು ಎಲ್ಲಾ ಜಾತಿಗಳು ಒಂದೇ ಎಂಬ ಭಾವ'. ಜಾತ್ಯಾತೀತ ತತ್ವಕ್ಕೆ ಕಟ್ಟುಬಿದ್ದು ಮತೀಯವಾದ ಸ್ವಾತಂತ್ರ್ಯವನ್ನು ಕೊಟ್ಟಿರುವುದು ಭಾರತದ

ಪ್ರಜಾಪ್ರಭುತ್ವದ ಒಂದು ವೈಶಿಷ್ಟ್ಯ. ಪ್ರಾಚೀನ ಕಾಲದಿಂದಲೂ ಭಾರತವು ಅನೇಕ ಧರ್ಮಗಳ ನೆಲೆಬೀಡು. ಭಾರತದ ಆಚರಣೆಯಲ್ಲಿರುವಷ್ಟು ಮತಾಚಾರಗಳು, ಧರ್ಮಗಳು, ಜಗತ್ತಿನ ಬೇರ್‍ಯಾವ ರಾಷ್ಟ್ರದಲ್ಲೂ ಇಲ್ಲ. ಅನ್ಯಮತೀಯರಿಗೆ ಭಾರತವು ಈ ಉದಾತ್ತ ಗುಣಗಳನ್ನು ಪೋಷಿಸಿಕೊಂಡು ಬರಲು ಭಾರತ ಸಂವಿಧಾನವು ಭಾರತವನ್ನು ಜಾತ್ಯಾತೀತ ರಾಜ್ಯವೆಂದು ಘೋಷಿಸಿದೆ.

1976ರ 42ನೇ ತಿದ್ದುಪಡಿಯು ಸಂವಿಧಾನದ ಪ್ರಸ್ತಾವನೆಯಲ್ಲಿ 'ಜಾತ್ಯಾತೀತ' ಎಂಬ ಪದವನ್ನು ಸೇರಿಸುವುದರ ಮೂಲಕ ಭಾರತವನ್ನು ಜಾತ್ಯಾತೀತ ರಾಜ್ಯವೆಂದು ಘೋಷಿಸಲಾಗಿದೆ. ಇಲ್ಲಿ ಭಾರತವು ಯಾವುದೇ ಧರ್ಮವನ್ನು ರಾಷ್ಟ್ರೀಯ ಧರ್ಮವೆಂದು ಅಂಗೀಕರಿಸಿಲ್ಲ.

ಸಂವಿಧಾನದ 25ನೇ ವಿಧಿಯು ಪ್ರತಿಯೊಬ್ಬರಿಗೂ ಮನ:ಸಾಕ್ಷಿಯಂತೆ ನಡೆಯುವ ಸ್ವಾತಂತ್ರ್ಯವನ್ನು ನೀಡಿದೆ ಮತ್ತು ಪ್ರತಿಯೊಬ್ಬರಿಗೂ ತನಗಿಷ್ಟವಾದ ಧರ್ಮವನ್ನು ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕು ನೀಡುತ್ತದೆ. 26ನೇ ವಿಧಿಯು ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸಿಕೊಂಡು ಹೋಗುವ ಸ್ವಾತಂತ್ರ್ಯ ನೀಡಿದರೆ 27ನೇ ವಿಧಿಯು ತೆರಿಗೆ ವಿನಾಯಿತಿ ನೀಡಿದೆ. 28ನೇ ವಿಧಿ ಧಾರ್ಮಿಕ ಶಿಕ್ಷಣವನ್ನು ನಿಷೇಧಿಸಿದೆ. ಹೀಗೆ ಜಾತ್ಯಾತೀತ ಲಕ್ಷಣಗಳು ಕಂಡುಬರುತ್ತವೆ.

29ನೇ ವಿಧಿಯ ಮತೀಯ ಮತ್ತು ಭಾಷಾ ಅಲ್ಪಸಂಖ್ಯಾತರು ತಮ್ಮ ಭಾಷೆ, ಸಾಹಿತ್ಯ, ಲಿಪಿ, ಸಂಸ್ಕೃತಿ ಇವುಗಳನ್ನು ರಕ್ಷಿಸಿ ಅಭಿವೃದ್ಧಿಪಡಿಸಿಕೊಂಡು ಹೋಗುವ ಸ್ವಾತಂತ್ರ್ಯ ಹೊಂದಿದ್ದಾರೆ.

ಒಟ್ಟಾರೆಯಾಗಿ ಜಾತ್ಯಾತೀತತೆಗೆ ಹೆಚ್ಚು ಒತ್ತು ನೀಡಿದ್ದು ಕೋಮುವಾರು ಭಾವನೆ ಹತ್ತಿಕ್ಕಲು ಜಾತ್ಯಾತೀತ ತತ್ವದ ಸರಿಯಾದ ಆಚರಣೆ ಅಗತ್ಯ. ಆದರೆ ಕೋಮುವಾರು ಶಕ್ತಿಗಳು ಜಾತ್ಯಾತೀತ ಶಕ್ತಿಗಳಿಗೆ ದೊಡ್ಡ ಸವಾಲಾಗಿವೆ.

## ರಾಷ್ಟ್ರೀಯ ಸಮಗ್ರತೆ:

ಭಾರತವು ಅನೇಕ ವಿಭಿನ್ನ ಧರ್ಮ, ಭಾಷೆ, ಜಾತಿ ಬುಡಕಟ್ಟು ಜನಾಂಗ ಪ್ರದೇಶಗಳಿಂದ ಕೂಡಿದ ವೈವಿಧ್ಯತೆಯ ನಾಡಾಗಿದೆ. ಆದ್ದರಿಂದ ದೇಶದ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗೆ ರಾಷ್ಟ್ರೀಯ ಸಮಗ್ರತೆ, ಭಾವೈಕ್ಯತೆ ಸಾಧಿಸುವುದು ಅತ್ಯಾವಶ್ಯಕ.

'ರಾಷ್ಟ್ರೀಯ ಸಮಗ್ರತೆಯು ವ್ಯಕ್ತಿಗತ ಮತ್ತು ಗುಂಪುಗಾರಿಕೆಯ ಹಿತಾಸಕ್ತಿಗಳನ್ನು ಕಡೆಗಣಿಸಿ, ರಾಷ್ಟ್ರೀಯ ಹಿತಾಸಕ್ತಿಗಳಿಗೆ ಆದ್ಯತೆ ನೀಡುವಂತೆ ಪ್ರಚೋದಿಸುವ ಒಂದು ಮನೋಭಾವವಾಗಿದೆ.'

ಈ ನಿಟ್ಟಿನಲ್ಲಿ ರಾಷ್ಟ್ರೀಯ ಸಮಗ್ರತೆ ಸಾಧಿಸಲು 1961ರಲ್ಲಿ 'ರಾಷ್ಟ್ರೀಯ ಭಾವೈಕ್ಯತೆ ಸಮಿತಿ' ರಚಿಸಿತು. (ಪ್ರಧಾನಿ ಇದರ ಪದನಿಮಿತ್ಯ ಅಧ್ಯಕ್ಷರು.)

**ರಾಷ್ಟ್ರದ ಏಕತೆಯ ಸಮಸ್ಯೆಗಳೆಂದರೆ:**

ಧಾರ್ಮಿಕ ಸ್ವಾತಂತ್ರ್ಯವು ಕೆಲವು ಧರ್ಮಗಳಲ್ಲಿ ಮತಾಂಧತೆ ಭಾವನೆ ಉಂಟುಮಾಡುತ್ತಿದೆ.

**ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಮತದಾನ, ಮತಬ್ಯಾಂಕ್ ರಾಜಕೀಯ:**

ರಾಜಕೀಯ ಪಾಲ್ಗೊಳ್ಳುವಿಕೆ: ಭಾರತದ ಪ್ರಜಾಸತ್ತೆಯ ಪ್ರಮುಖ ಲಕ್ಷಣ ಬಹುಪಕ್ಷ. ರಾಷ್ಟ್ರದ ಸಾಂಸ್ಕೃತಿಕ ವೈವಿಧ್ಯತೆಯ ಹಿನ್ನೆಲೆಯಲ್ಲಿ ಸಹಜವಾಗಿ ಇಂತಹ ಪಕ್ಷ ಪದ್ಧತಿ ಅಸ್ತಿತ್ವದಲ್ಲಿದೆ. ವಿವಿಧ ವರ್ಗಗಳ, ಜನಾಂಗಗಳ ಅಭಿಪ್ರಾಯಗಳು ಅನಿವಾರ್ಯವಾಗಿ ವಿಭಿನ್ನವಾಗಿ ಇರುವುದರಿಂದ, ಅವುಗಳ ಸಾಮೂಹಿಕ ಸಾಂಘಿಕ ಧ್ಯೇಯ ಉದ್ದೇಶಗಳು ಅನಿವಾರ್ಯವಾಗಿ ವಿಭಿನ್ನತೆಗಳನ್ನು ಹೊಂದಿರುತ್ತವೆ. ಇನ್ನು ಸಮಕಾಲೀನ ಅಂತರ ರಾಷ್ಟ್ರೀಯ ರಾಜಕೀಯ ಸಿದ್ಧಾಂತಗಳಿಂದ ಆಕರ್ಷಿತರಾಗಿ ಭಾರತದ ಮಧ್ಯಮ ವರ್ಗವು ವಿದೇಶಿ ಮಾದರಿಯಲ್ಲಿ ಪಕ್ಷಗಳನ್ನು ರಚಿಸಿದ ದೃಷ್ಟಾಂತಗಳು ನಮಗೆ ಸಿಕ್ಕುತ್ತವೆ. ಕಮ್ಯುನಿಸ್ಟ್ ಹಾಗೂ ಸೋಶಿಯಾಲಿಸ್ಟ್ ಪಕ್ಷಗಳು ಈ ಮಾದರಿಯಲ್ಲಿ ರಚಿತವಾದವು. ಹೀಗೆ ಭಾರತದಲ್ಲಿ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಭಿನ್ನ ಅಂಶಗಳ ಕಾರಣದಿಂದಾಗಿ ಬಹುಪಕ್ಷ ಪದ್ಧತಿ ರೂಢಿಯಲ್ಲಿದೆ.

ಆದರೆ ಆಶ್ಚರ್ಯಕಾರಕ ಅಂಶವೆಂದರೆ ಭಾರತದ ಪ್ರಜಾಸತ್ತೆಯಲ್ಲಿ ಬಹುಪಕ್ಷ ಪದ್ಧತಿ ರೂಢಿಯಲ್ಲಿದ್ದರೂ ಕಾಂಗ್ರೆಸ್ ಏಕ ಪ್ರಧಾನ ಸ್ಥಾನಮಾನ ಹೊಂದಿದೆ. ಕಾಂಗ್ರೆಸ್ ಪಕ್ಷದ ಪ್ರಾಧಾನ್ಯತೆಯನ್ನು ಹಲವು ಅಂಶಗಳಿಂದ ಸಮರ್ಥಿಸಬಹುದು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬಹು ದೀರ್ಘಕಾಲದ ತನಕ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಆಡಳಿತ ಪಕ್ಷವಾಗಿ ಮುಂದುವರೆಯುತ್ತಿದೆ. ಕಾಂಗ್ರೆಸ್ಸಿಗೆ ಸರಿಸಮಾನ ಸ್ಪರ್ಧೆ ನೀಡಬಲ್ಲ ಜನತಾ ಪಕ್ಷವು 1977ರಲ್ಲಿ ಅಧಿಕಾರಕ್ಕೆ ಬಂದಿತಾದರೂ ಆಂತರಿಕ ಕಲಹಗಳಿಂದ ಅಲ್ಪ ಸಮಯದಲ್ಲೇ ಅಧಿಕಾರ ಕಳೆದುಕೊಂಡಿತು. ಹೀಗಾಗಿ ಕಾಂಗ್ರೆಸ್‌ಗೆ ಸಮನಾದ ವಿರೋಧ ಪಕ್ಷ ಇಲ್ಲವಾಗಿದೆ. ಪರಿಣಾಮವಾಗಿ, ಕಾಂಗ್ರೆಸ್ ಏಕಪಕ್ಷವಾಗಿ ಪ್ರಾಧಾನ್ಯತೆಯನ್ನು ಗಳಿಸಿದೆ.

ಭಾರತೀಯ ಉಪಖಂಡದ ಪ್ರಾದೇಶಿಕ ಭಿನ್ನತೆಗಳ ಆಶೋತ್ತರಗಳನ್ನು ಪೂರೈಸುವ ಸಲುವಾಗಿ ಅನೇಕ ಪ್ರಾದೇಶಿಕ ಪಕ್ಷಗಳು ಅಧಿಕಾರಕ್ಕೆ ಬಂದಿವೆ. ತಮಿಳುನಾಡಿನ ಡಿ.ಎಂ.ಕೆ. ಪಕ್ಷ ಅಸ್ಸಾಂನ ಗಣ ಸಂಗ್ರಾಮ ಪರಿಷತ್, ತೆಲುಗುದೇಶಂ ಮುಂತಾದವುಗಳು ಪ್ರಾದೇಶಿಕ ಬೆಂಬಲವನ್ನು ಹಾಗೂ ಅಧಿಕಾರವನ್ನು ಗಳಿಸಿವೆ. ಅದೇ ರೀತಿಯಾಗಿ ಹಲವು ಜಾತಿಯ ಪಕ್ಷಗಳು ಅಸ್ತಿತ್ವದಲ್ಲಿವೆ. (ಜಾತಿ ಆಧಾರಿತ ಪಕ್ಷಗಳು).

ಗುಂಪುಗಾರಿಕೆ, ಒಳಜಗಳ ಕಲಹ ಮುಂತಾದವುಗಳು ಭಾರತೀಯ ಪಕ್ಷ ಪದ್ಧತಿಯ ಪ್ರಮುಖ ಲಕ್ಷಣಗಳು ಜಾತಿ, ಕೋಮು ಮತ್ತು ಇತರ ಅಂಶಗಳಿಂದ ಪ್ರೇರಿತರಾಗಿ ಪಕ್ಷದಲ್ಲಿ ಪ್ರಾಬಲ್ಯ ಗಳಿಸಲು ಅನೇಕ ಒಳಪಂಗಡಗಳು, ಗುಂಪುಗಾರಿಕೆಯನ್ನು ಪುಷ್ಟೀಕರಿಸುತ್ತವೆ. ಇದು ಪಕ್ಷದ ತಳಹದಿಯನ್ನು ಸಡಿಲಗೊಳಿಸುವುದಲ್ಲದೆ, ಜನತೆಯಲ್ಲಿ ವಿಶ್ವಾಸವನ್ನು ಕ್ರಮೇಣವಾಗಿ ಕಳೆದುಕೊಳ್ಳಬಹುದು. ಇನ್ನೂ ವಿವಿಧ ಪಕ್ಷಗಳಲ್ಲಿ ಮೂಲಭೂತ ಪ್ರಶ್ನೆಗಳ ವಿಷಯದಲ್ಲಿ ಒಮ್ಮತವಿಲ್ಲ.

1950ರ ನಂತರ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಕಾಲದಿಂದ ಕಾಲಕ್ಕೆ ನಿಗದಿತವಾಗಿ ನಡೆಯುತ್ತಿದ್ದರೂ ಅವುಗಳ ಆಂತರಿಕ ಆಯಾಮಗಳು ಪ್ರತಿಬಿಂಬಿಸುತ್ತದೆ. ಸಮಾಜದ ವರ್ಗಪ್ರಭೇದಗಳು, ಜಾತಿಗಳು, ಪ್ರಾದೇಶಿಕತಾವಾದ, ಕೋಮುವಾದ ಇತ್ಯಾದಿಗಳು ರಾಜಕಾರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಉದಾಹರಣೆಗೆ ಉತ್ತರ ಭಾರತದಲ್ಲಿ ಯಾದವರು, ರಾಜಸ್ತಾನದಲ್ಲಿ ಜಾಟರು, ಆಂಧ್ರಪ್ರದೇಶದಲ್ಲಿ ಕಮ್ಮಾ ಮತ್ತು ರೆಡ್ಡಿಗಳು, ಕರ್ನಾಟಕದಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರು ರಾಜ್ಯ ರಾಜಕಾರಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಅಂದರೆ ಕೋಮುಪ್ರಾಬಲ್ಯ ಮತದಾನದ ನಮೂನೆಗಳಲ್ಲಿ ಎದ್ದು ಕಾಣುತ್ತದೆ. ಚುನಾವಣಾ ಶಾಸ್ತ್ರದ ವಿಶ್ಲೇಷಣೆಗೆ ಅನುಗುಣವಾಗಿ ದೇಶದ ಪ್ರತಿಯೊಂದು ರಾಜ್ಯದಲ್ಲಿಯೂ ಪ್ರಾದೇಶಿಕ ಕೋಮುಗಳು, ವರ್ಗಗಳು ರಾಜಕೀಯ ಅಧಿಕಾರವನ್ನು ಹಿಡಿಯಲು ಪೈಪೋಟಿ ನಡೆಸಿವೆ ಎನ್ನಬಹುದು. ಇನ್ನೊಂದು ಮುಖ್ಯ ಲಕ್ಷಣವೆಂದರೆ ಅಧಿಕಾರ ಹಿಡಿದು ನಿರ್ದಿಷ್ಟ ಕೋಮಿನವರು ತಮ್ಮ ಹಿತಾಸಕ್ತಿಯನ್ನು ರಾಜಕೀಯ ರಂಗದಲ್ಲಿ ಸ್ಥಾಪಿಸಿ ಅದನ್ನು ವಿಸ್ತರಿಸಲು ಕ್ರಮ ಕೈಗೊಳ್ಳುತ್ತಾರೆ. ಉಳಿದ ಅಲ್ಪಸಂಖ್ಯಾತ ಜನ ಇವರಿಗೆ ಅಧೀನರಾಗಿ ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಆದರೆ ಇತ್ತೀಚೆಗೆ ನಡೆದ 16ನೇ ಲೋಕಸಭಾ ಚುನಾವಣೆಯಲ್ಲಿ ಈ ಕೆಲವು ಲಕ್ಷಣಗಳು ಮಾರ್ಪಾಟಿಗೆ ಒಳಪಟ್ಟಿದ್ದು ಗಮನಾರ್ಹ.

ಮತಬ್ಯಾಂಕ್ ರಾಜಕೀಯದಲ್ಲಿ ಇತ್ತೀಚೆಗೆ ಹೆಚ್ಚು ನಿರ್ಣಾಯಕ ಪಾತ್ರ ವಹಿಸುವ ಇನ್ನೊಂದು ಅಂಶವೆಂದರೆ ಸಮೂಹ ಮಾಧ್ಯಮಗಳು. ಇವು ರಾಜಕೀಯ ಪಕ್ಷಗಳು ಚುನಾವಣಾ ಕಾಲದಲ್ಲಿ ಮತದಾರರಿಗೆ ಆಮಿಷ ತೋರಿಸುವ ಕಾರ್ಯತಂತ್ರಗಳಿಗೆ ಅಡ್ಡಿಮಾಡುತ್ತವೆ. ಹಣ ಹಂಚಿಕೆ, ಮದ್ಯ ಹಂಚಿಕೆ ಇನ್ನಿತರ ಆಕರ್ಷಕ ಬಹುಮಾನಗಳನ್ನು ನೀಡುವ ಜಾಯಮಾನಕ್ಕೆ ಸಮೂಹ ಮಾಧ್ಯಮಗಳು ಪರೋಕ್ಷವಾಗಿ ರಾಜಕೀಯ ಪಕ್ಷಗಳಿಗೆ ಎಚ್ಚರಿಕೆಯನ್ನು ಕೊಡುತ್ತವೆ. ಆದಾಗ್ಯೂ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕಳಪೆ ಸ್ವರೂಪದ ಆಶ್ವಾಸನೆಗಳನ್ನು ನೀಡಿ ಮತದಾರರನ್ನು ಓಲೈಸಲು ಮುಂದಾಗುತ್ತವೆ. ಉದಾಹರಣೆಗೆ ತಮಿಳುನಾಡಿನಲ್ಲಿ ಅಮ್ಮಾ ಕ್ಯಾಂಟಿನ್, ಅಮ್ಮಾ ಟಿ.ವಿ., ಅಮ್ಮಾ ಡೈರಿ ಮುಂತಾದ ಪ್ರಚಾರ ಸ್ವರೂಪದ ಆಮಿಷಗಳನ್ನು ಜನತೆಗೆ ನೀಡುತ್ತಾರೆ. ಹೀಗೆ ವೋಟ್ ಬ್ಯಾಂಕ್ ರಾಜಕಾರಣ ಭಾರತದ ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಭಾವೀ ರೂಪವನ್ನು ಹೊಂದಿದ್ದು ಕಾಲದಿಂದ ಕಾಲಕ್ಕೆ ಬದಲಾವಣೆ ಕಾಣುತ್ತೇವೆ.

# 6. ಸಾಮಾಜಿಕ ಆರ್ಥಿಕ ವ್ಯವಸ್ಥೆ

## ಜಾಬಮಾನಿ ವ್ಯವಸ್ಥೆ, ಸಾಂಪ್ರದಾಯಿಕ ಸಮಾಜದ ಮೇಲೆ ಅದರ ಪ್ರಭಾವ:

ಬಹಳ ಹಿಂದೆ ಪ್ರಾಚೀನ ಕಾಲದಲ್ಲಿ ಹಣದ ಚಲಾವಣೆ ಅಧಿಕೃತವಾಗಿ ಇರಲಿಲ್ಲವಾದ್ದರಿಂದ, ತಾವು ಬೆಳೆಯುವ ಬೆಳೆ, ದವಸಧಾನ್ಯಗಳು, ಬಟ್ಟೆ, ಪಾತ್ರೆ ಪದಾರ್ಥಗಳನ್ನು ಇತರರು ತಮಗಾಗಿ ಸಲ್ಲಿಸುವ ಸೇವೆಗೆ ಪ್ರತಿಫಲವಾಗಿ ನೀಡುವ ಪರಿಪಾಟ ಬೆಳೆದು ಬಂದಿತ್ತು.

ಇಲ್ಲಿ ಸೇವೆ ಸಲ್ಲಿಸುವ ಕುಶಲ ಕೆಲಸಗಾರರಿಗೂ ಮತ್ತು ಕೃಷಿಕರಿಗೂ ನಿಕಟ ಬಾಂಧವ್ಯವಿದ್ದು, ವರ್ಷದಲ್ಲೆರಡೂ ಬಾರಿ ಸುಗ್ಗಿ ಕಾಲದಲ್ಲಿ ದವಸ ಧಾನ್ಯ ನೀಡಲಾಗುತ್ತಿತ್ತು. ಈ ಬಗೆಯ ಆರ್ಥಿಕ ವ್ಯವಹಾರಕ್ಕೆ ಜಾಜಮಾನಿ ವ್ಯವಸ್ಥೆ ಎನ್ನುತ್ತಿದ್ದರು.

ಆಸ್ಕರ್ ಲೆವಿಸ್ ಪ್ರಕಾರ, 'ಈ ಪದ್ಧತಿಯಡಿಯಲ್ಲಿ ಗ್ರಾಮದ ಒಳಗಡೆ ಪ್ರತಿಯೊಂದು ಜಾತಿ ಸಮೂಹವು ಸಹ ಇತರ ಜಾತಿಗಳ ಕುಟುಂಬಗಳಿಗೆ ಕೆಲವು ಪ್ರಾಮಾಣೀಕೃತ ಸೇವೆ ಸಲ್ಲಿಸಬೇಕಾಗಿದೆ.'

ಒಂದು ಕುಟುಂಬಕ್ಕೆ ಪೂರ್ವಿಕರು ಪರಂಪರಾಗತವಾಗಿ ಸೇವೆ ಸಲ್ಲಿಸುತ್ತಿದ್ದು ಅದೇ ಸಮೂಹದ ಕುಟುಂಬಗಳಿಗೆ ಅವರ ಮಕ್ಕಳಿಗೂ ಸಹ ಅದೇ ಬಗೆಯ ಸೇವಾ ಕಾರ್ಯಗಳನ್ನು ಮುಂದುವರೆಸುವುದು ಜಾಜಮಾನಿ ವ್ಯವಸ್ಥೆ ಎನ್ನಲಾಗಿದೆ.

ವಿಲಿಯಂ ಎಚ್.ವೈಸರ್, ಆಸ್ಕರ್ ಲೆವಿಸ್, ವೆಬಸ್ಟಾರ್ ಮುಂತಾದವರು ಈ ವ್ಯವಸ್ಥೆಯ ಬಗ್ಗೆ ಬೆಳಕು ಚೆಲ್ಲಿದ್ದಾರೆ.

**ಜಾಜಮಾನಿ ಪದ್ದತಿಯ ಅಧ್ಯಯನಗಳು:**

* ಆಸ್ಕರ್ ಲೆವಿಸ್ – ಉತ್ತರ ಭಾರತೀಯ ಗ್ರಾಮಗಳಲ್ಲಿ
* ಜಫ್ಲರ್ ಮತ್ತು ಸಿಂಗ್ – 1908ರಲ್ಲಿ ಉತ್ತರ ಪ್ರದೇಶದಲ್ಲಿ
* ಎನ್.ಶ್ರೀನಿವಾಸ್ – ಮೈಸೂರು ಜಿಲ್ಲಾ ಜಾಜಮಾನಿ ಬಗ್ಗೆ
* ಗಾಫ್ –1953ರಲ್ಲಿ ತಂಜಾವೂರಿನಲ್ಲಿ
* ಡಾರ್ಲಿಂಗ್ – 1934ರಲ್ಲಿ ಪಂಜಾಬಿನಲ್ಲಿ

**ಜಾಜಮಾನಿ ಪದ್ದತಿಯ ಲಕ್ಷಣಗಳು:**

ಜಾಜಮಾನಿ ಪದ್ದತಿಯ ಲಕ್ಷಣಗಳು ಈ ಕೆಳಗಿನಂತಿವೆ.

1) ಜಾಜಮಾನಿ ಪದ್ದತಿ ಅಡಿಯ ಸಂಬಂಧಗಳು ಖಾಯಂ ಆದವುಗಳು. ಉದಾ: ರೈತ–ಜಾಜಮಾನ, ಕೆಲಸಗಾರ–ಕಮೀನ

ಈ ಪದ್ಧತಿಯಡಿ ರೈತರುಗಳು ಮತ್ತು ಇತರರ ಸಂಬಂಧಗಳು ಖಾಯಂ ಸ್ವರೂಪದವುಗಳಾಗಿರುತ್ತವೆ. ಪ್ರತಿಯೊಂದು ಗ್ರಾಮವು ಸ್ವಾವಲಂಬನೆಯಾಗಿ ಸ್ವಯಂ ಪೂರ್ಣ ಘಟಕವಾಗಿರುತ್ತದೆ.

ಈ ಕಾರಣದಿಂದಾಗಿ ಕಮೀನನು ಸೇವೆ ತ್ಯಜಿಸಿ ಹೋಗದಂತೆ ನಿರ್ಬಂಧಿಸಲಾಗಿದ್ದು, ಅವನೇನಾದರೂ ಗ್ರಾಮವನ್ನು ಬಿಟ್ಟು ಹೋಗಬೇಕಾಗಿ ಬಂದರೆ ತನ್ನ ಬದಲೀ ಸೇವೆ ಸಲ್ಲಿಸುವ ಕಮೀನನನ್ನು ಗೊತ್ತುಮಾಡಿಕೊಡಬೇಕು. ಇದೇ ರೀತಿ ಜಾಜಮಾನ ಸಹ ಕಮೀನನನ್ನು ಇದ್ದಕ್ಕಿದ್ದಂತೆ ಕೈ ಬಿಡುವಂತಿಲ್ಲ. (ಜಾತಿ ಪಂಚಾಯತ ಪರಿಷತ್ ಇತ್ತು).

2) ಈ ಪದ್ಧತಿ ಅನುವಂಶಿಯವಾದುದು: ಎನ್.ಎಸ್.ರೆಡ್ಡಿಯವರ ಪ್ರಕಾರ ಇದು ಒಡೆತನದ ಹಕ್ಕಾಗಿತ್ತು. ತಂದೆ, ಮಗ, ಮೊಮ್ಮಗ ಹೀಗೆ ತಲೆತಲಾಂತರವಾಗಿ ಸಾಗುತ್ತಾ ಬಂದಿತ್ತು. (ಹೆಣ್ಣು ಮಕ್ಕಳಿದ್ದರೆ ಅಳಿಯನಿಗೆ ಹಕ್ಕು.)

3) ಸೇವೆಗಳ ಪ್ರತಿಯಾಗಿ ಪದಾರ್ಥಗಳು: ವಿವಿಧ ಸೇವೆಗಳಿಗೆ ಪ್ರತಿಯಾಗಿ ಪದಾರ್ಥಗಳನ್ನು ನೀಡುವುದು ಜಾಜಮಾನಿ ಪದ್ದತಿಯ ಒಂದು ವಿಶೇಷವಾದ ಲಕ್ಷಣವಾಗಿತ್ತು. ಕಮೀನನ ಸೇವೆಗೆ ಪ್ರತಿಯಾಗಿ ರಾಗಿ, ಭತ್ತ, ಜೋಳ, ಗೋಧಿ ಮುಂತಾದವು ಪಡೆಯುತ್ತಿದ್ದನು.

ಉದಾ: ಬಡಗಿ–ವ್ಯವಸಾಯೋಪಕರಣ ರಿಪೇರಿ–ವಾರ್ಷಿಕ ಒಂದು ಮಣ ಆಹಾರ ಧಾನ್ಯ. ಹಾಗೆಯೇ ಕುಂಬಾರ–ಮಡಿಕೆ, ಕುಡಿಕೆ, ಗಡಗಿ, ತಯಾರು ಮಾಡುವುದು–ಮಡಿಕೆಗಳ ಸಂಖ್ಯೆಗೆ ಆಧಾರವಾಗಿ ಧಾನ್ಯ.

4) ಶಾಂತಿ ಮತ್ತು ತೃಪ್ತಿ: ಎಚ್.ವೈಸರ್‌ರವರ ಪ್ರಕಾರ 'ಜಾಜಮಾನಿ ಪದ್ದತಿಯ ಮಹತ್ವಪೂರ್ಣ ಲಕ್ಷಣವೆಂದರೆ ಅದು ಗ್ರಾಮಸ್ಥರಿಗೆ ಒದಗಿಸುವ ಶಾಂತಿ ಮತ್ತು ತೃಪ್ತಿಯೇ ಆಗಿದೆ. ಉದ್ಯೋಗದ ಅಭದ್ರತೆ ಇರಲಿಲ್ಲ. ನಿರುದ್ಯೋಗವಿಲ್ಲ, ನೌಕರಿ ಹುಡುಕುವ ಪರಿಪಾಟವಿಲ್ಲ, ಸೂಕ್ತ ಪ್ರತಿಫಲ ಇತ್ಯಾದಿ.

5) ಕೆಲಸದ ವ್ಯಾಪ್ತಿಯಲ್ಲಿನ ವ್ಯತ್ಯಾಸಗಳು: ಇಲ್ಲಿ ಬೇರೆ ಬೇರೆ ಕಮೀನರುಗಳ ಕೆಲಸಗಳೇ ವ್ಯಾಪ್ತಿಯಲ್ಲಿ ವ್ಯತ್ಯಾಸವಿರುತ್ತಿದ್ದು, ಒಬ್ಬ ಕಮೀನನು ಒಂದೇ ಕುಟುಂಬಕ್ಕೆ ಒಂದೇ ಗ್ರಾಮಕ್ಕೆ ಸೇವೆ ಸಲ್ಲಿಸಬೇಕೆಂಬ ನಿರ್ಬಂಧವಿರಲಿಲ್ಲ.

ಉದಾ: ಉತ್ತರಭಾರತದ 54 ಗ್ರಾಮಗಳಲ್ಲಿ ಕೇವಲ 18 ಗ್ರಾಮಗಳಲ್ಲಿ ಮಾತ್ರ ಚಮ್ಮಾರ ಅಂಗಡಿ ನಡೆಸುವವರಿದ್ದರು.

**ಅನುಕೂಲಗಳು:**

* ಸೇವಾ ಭದ್ರತೆ
* ಆರ್ಥಿಕ ಭದ್ರತೆ
* ನಿಕಟವಾದ ವೈಯಕ್ತಿಕ ಸಂಬಂಧಗಳು
* ಕೃತಜ್ಞತಾ ಭಾವವಿತ್ತು
* ನಿರುದ್ಯೋಗದ ಭಯವಿರಲಿಲ್ಲ

**ಅನಾನುಕೂಲಗಳು:**

* ಜಾಜಮಾನರಿಂದ ಕಮೀನರ ಶೋಷಣೆ
* ಕಮೀನರನ್ನು ಕೀಳಾಗಿ ಕಾಣುವ ಮನೋಭಾವ
* ಮೇಲು ಕೀಳು ಆಧರಿಸಿ ವ್ಯಕ್ತಿಗಳನ್ನು ವಿಭಜಿಸಲು ಅನುಕೂಲಕರ ಕಲುಷಿತ ವ್ಯವಸ್ಥೆಯಾಗಿತ್ತು.
* ಕೃಷಿಕರೇ ಬಡವರಾಗಿದ್ದಾಗ ಕಮೀನರಿಗೆ ಇನ್ನೂ ಶೋಷಣೆಯಾಗುತ್ತಿತ್ತು. ಭಾರತದಲ್ಲಾದ ಶೈಕ್ಷಣಿಕ ಕ್ರಾಂತಿ, ನಗರೀಕರಣ, ಕೈಗಾರೀಕರಣ, ಜಾತಿ ನಿರ್ಮೂಲನೆ ಮುಂತಾದವು ಜಾಜಮಾನಿ ವ್ಯವಸ್ಥೆಗೆ ಪ್ರಸ್ತುತ ಅಂತ್ಯ ಹಾಡಿವೆ.

**ಸಾಂಪ್ರದಾಯಿಕ ಸಮಾಜದ ಮೇಲೆ ಪ್ರಭಾವ:**

ಸಾಂಪ್ರದಾಯಿಕ ಸಮಾಜದಲ್ಲಿ ಇದು ಒಂದರ್ಥದಲ್ಲಿ ಧನಾತ್ಮಕವಾಗಿಯೇ ಸ್ಪಂದಿಸಿತ್ತು. ಉದ್ಯೋಗ ಅರಸುವ ಗೊಂದಲದಿಂದ ಆರ್ಥಿಕ ಅಭದ್ರತೆಯಿಂದ ಮುಕ್ತಗೊಳಿಸಿ ಶಾಂತಿಯುತ ಸಮಾಜದ ನಿರ್ಮಾಣಕ್ಕೆ ಇದು ಸಹಕಾರಿಯಾಗಿತ್ತು.

## ಮಾರುಕಟ್ಟೆ ವ್ಯವಸ್ಥೆ ಹಾಗೂ ಅದರ ಸಾಮಾಜಿಕ ಪರಿಣಾಮಗಳು:

ಸಾಮಾನ್ಯವಾಗಿ ಸರಕುಗಳನ್ನು ಕೊಳ್ಳುವ ಮತ್ತು ಮಾರುವ ಒಂದು ಸ್ಥಳವನ್ನು 'ಮಾರುಕಟ್ಟೆ' ಎಂದು ಕರೆಯುತ್ತೇವೆ. ಡಬ್ಲ್ಯೂ.ಎಸ್.ಜೆವನ್ಸ್ ಪ್ರಕಾರ, 'ಮಾರುಕಟ್ಟೆ ಎಂದರೆ ಯಾವುದೇ ಸರಕಿನ ವ್ಯಾಪಕವಾದ ವಹಿವಾಟು ನಡೆಸುವ ಆಸ್ತಿ ವ್ಯವಹಾರ ಸಂಬಂಧ ಹೊಂದಿರುವ ವ್ಯಕ್ತಿಗಳ ಗುಂಪಾಗಿದೆ.'

ಇಲ್ಲಿ ಮಾರುವವರ ಮತ್ತು ಕೊಳ್ಳುವವರ ಸಂಪರ್ಕವು ಪ್ರತ್ಯಕ್ಷವಾಗಿರಬಹುದು ಇಲ್ಲವೇ ಪರೋಕ್ಷವಾಗಿರಬಹುದು. (ಫ್ಯಾಕ್ಸ್, ಕೊರಿಯರ್, ಇ–ಕಾಮರ್ಸ್).

**ಮಾರುಕಟ್ಟೆಯ ಲಕ್ಷಣಗಳು:**

* ವಸ್ತುಗಳನ್ನು ಕೊಳ್ಳುವ ಮಾರುವ ಸ್ಥಳ
* ಸರಕಿನ ಅಸ್ತಿತ್ವ
* ಇದು ಕೇವಲ ಭೌತಿಕವಾದ ಪ್ರದೇಶವಲ್ಲ
* ಹಲವು ಮಂದಿ ಗ್ರಾಹಕರು ಮತ್ತು ಮಾರಾಟಗಾರರ ಅಸ್ತಿತ್ವ
* ಗಾಢ ಸಂಪರ್ಕವಿದೆ
* ನಿರ್ದಿಷ್ಟ ಬೆಲೆಯ ಅಸ್ತಿತ್ವವಿದೆ

ವಿಶಾಲಾರ್ಥದಲ್ಲಿ ಮಾರುಕಟ್ಟೆ ಎಂಬ ಪದವನ್ನು ಆರ್ಥಿಕ ಚಟುವಟಿಕೆ ಎಂದೇ ಗ್ರಹಿಸಲಾಗುತ್ತದೆ. ಇದೊಂದು ಸಾಮಾಜಿಕ ಆರ್ಥಿಕ ಸಂಸ್ಥೆಯಾಗಿದೆ.

**ಮಾರುಕಟ್ಟೆಯ ವಿಧಗಳು:**

* ಸ್ಥಳೀಯ ಮಾರುಕಟ್ಟೆ – ಗ್ರಾಮ
* ಪ್ರಾದೇಶಿಕ ಮಾರುಕಟ್ಟೆ – ಪ್ರಾಂತ್ಯ , ರಾಜ್ಯ
* ರಾಷ್ಟ್ರೀಯ ಮಾರುಕಟ್ಟೆ – ರಾಷ್ಟ್ರ
* ಅಂತರಾಷ್ಟ್ರೀಯ ಮಾರುಕಟ್ಟೆ – ಇಡೀ ಜಗತ್ತು

**ಕಾಲಾವಧಿ ಆಧಾರದ ಮೇಲೆ,**

* ಅತ್ಯಂತ ಅಲ್ಪಾವಧಿ ಮಾರುಕಟ್ಟೆ (ಹೂವು, ತರಕಾರಿ, ಹಣ್ಣು)
* ಅಲ್ಪಾವಧಿ ಮಾರುಕಟ್ಟೆ
* ದೀರ್ಘಾವಧಿ ಮಾರುಕಟ್ಟೆ

**ಪೈಪೋಟಿ ಆಧಾರದ ಮೇಲೆ,**

* ಪರಿಪೂರ್ಣ ಪೈಪೋಟಿ ಮಾರುಕಟ್ಟೆ
* ಅಪರಿಪೂರ್ಣ ಪೈಪೋಟಿ ಮಾರುಕಟ್ಟೆ
* ಏಕಸ್ವಾಮ್ಯ ಪೈಪೋಟಿ ಮಾರುಕಟ್ಟೆ

**ಮಾರುಕಟ್ಟೆ ವ್ಯವಸ್ಥೆಯ ಸಾಮಾಜಿಕ ಪರಿಣಾಮಗಳು:**

ಆಡಂ ಸ್ಮಿತ್‌ರವರು ತಮ್ಮ ಗ್ರಂಥವಾದ 'ದಿ ವೆಲ್ತ್ ಆಫ್ ನೇಷನ್ಸ್'ನಲ್ಲಿ ಮಾರುಕಟ್ಟೆಯ ಆರ್ಥಿಕ ವ್ಯವಸ್ಥಾ ಸಂರಚನೆ ಬಗ್ಗೆ ವಿವರಿಸಿದ್ದಾರೆ.

ಗುನ್ನಾರ ಮಿರ್ಡಾಲ್‌ರವರು 'ಏಷ್ಯನ್ ಡ್ರಾಮಾ'ದಲ್ಲಿ ಸಾಮಾಜಿಕ ಸಂಗತಿಗಳು ಹೇಗೆ ಆರ್ಥಿಕ ಸನ್ನಿವೇಶಕ್ಕೆ ಸಂಬಂಧಪಟ್ಟಿವೆ ಎಂದು ವಿವರಿಸಿದ್ದಾರೆ. ಸಮಾಜಶಾಸ್ತ್ರಜ್ಞರು ತಿಳಿಸಿರುವಂತೆ ಅರ್ಥಶಾಸ್ತ್ರವೂ ಸಾಮಾಜಿಕ ವ್ಯವಸ್ಥೆಯಲ್ಲಿನ ಒಂದು ಸಂಸ್ಥೆ ಎಂದು ವಾದಿಸಲು 2 ಉದಾಹರಣೆಗಳಿಂದ ಸ್ಪಷ್ಟಪಡಿಸಿದ್ದಾರೆ.

1) ಭಾರತದ ವಾರದ ಮಾರುಕಟ್ಟೆಗಳು / ಸಂತೆಗಳು

2) ಸಾಂಪ್ರದಾಯಿಕ ವ್ಯಾಪಾರಿ ಸಮುದಾಯಗಳ ಅಂತರ್ಜಾಲ ವ್ಯವಸ್ಥೆ

**ವಾರದ ಸಂತೆಯಾಗಿ ಸಾಮಾಜಿಕ ಸಂಸ್ಥೆ:**

ಪ್ರಪಂಚದ ಎಲ್ಲಾ ಕಡೆ ಕೃಷಿ / ರೈತ ಸಮುದಾಯ ನಿಗದಿತ ವಾರದ ಮಾರುಕಟ್ಟೆಯು ಸಾಮಾಜಿಕ ಮತ್ತು ಆರ್ಥಿಕ ಸಂಘಟನೆಯ ಕೇಂದ್ರಬಿಂದುವಾಗಿದೆ.

ಇದರ ಪರಿಣಾಮಗಳೆಂದರೆ,

* ಇದು ಸುತ್ತಮುತ್ತಲಿನ ನೆರೆಹೊರೆಯವರು ಒಟ್ಟಿಗೆ ಸೇರುವ ಪ್ರಯತ್ನವಾಗಿದೆ.

* ಜನರು ತಾವು ಬೆಳೆದಿರುವ ದವಸ ಧಾನ್ಯಗಳು ಹಾಗೂ ಇನ್ನಿತರ ಕುಶಲಕರ್ಮಿಗಳ ಸಿದ್ದವಸ್ತು ಮಾರುತ್ತಾರೆ.

* ಗ್ರಾಮಗಳಲ್ಲಿ ತಮಗೆ ದೊರೆಯದ ವಸ್ತುಗಳ ಲಭ್ಯತೆ.

* ಮನೋರಂಜನೆ, ಲೇವಾದೇವಿ ವ್ಯವಹಾರ ಜ್ಯೋತಿಷಗಳ ಲಭ್ಯತೆ.

* 'ಜಾನುವಾರು ಜಾತ್ರೆ' ಇಲ್ಲಿ ಪ್ರಸಿದ್ದ.

* ಅರಣ್ಯವಾಸಿಗಳು ತಮಗೆ ಬೇಕಾದಂತಹ ವಸ್ತುಗಳನ್ನು ಇಲ್ಲಿಂದಲೇ ಕೊಂಡೊಯ್ಯುವುದು.

* ಸ್ಥಳೀಯ ಆರ್ಥಿಕ ವ್ಯವಸ್ಥೆಯನ್ನು ಬಾಹ್ಯ ಪ್ರಪಂಚದಿಂದ ಇದು ಸಂಪರ್ಕಿಸುತ್ತದೆ.

* ಇಲ್ಲಿ ವಿನಿಮಯವಾಗುವ ವಸ್ತುಗಳು.

* ಕೈಗಾರಿಕಾ ಉತ್ಪನ್ನ.

* ಪ್ರಾದೇಶಿಕವಲ್ಲದ ಆಹಾರ ಪದಾರ್ಥ. (ಅರಿಶಿಣ, ಉಪ್ಪು).

* ಕರಕುಶಲ ವಸ್ತುಗಳು.

* ಅರಣ್ಯ ಸಾಮಗ್ರಿಗಳು.

ಇಲ್ಲಿ ಪ್ರಮುಖವಾದ ಆದಿವಾಸಿ ಜನಾಂಗದ ಮಾರುಕಟ್ಟೆಯೆಂದರೆ, ಛತ್ತೀಸ್‌ಘಡದ 'ಬಸ್ತಾರ' ಆದಿವಾಸಿ ಮಾರುಕಟ್ಟೆ, 'ದೋರಯಿ' ಶುಕ್ರವಾರದ ಸಂತೆಯೆಂದೇ ಪ್ರಸಿದ್ದ.

**ಸಾಂಪ್ರದಾಯಿಕ ವ್ಯಾಪಾತರಿ ಸಮುದಾಯದ ಅಂತರ್ಜಾಲ ವ್ಯವಸ್ಥೆ:**

ಭಾರತದ ಆರ್ಥಿಕ ಮತ್ತು ಸಮಾಜ ವ್ಯವಸ್ಥೆ ತಟಸ್ಥವಾದುದು ಎಂಬ ಭಾವನೆ ಹೋಗಲಾಗಿ ವಿಸ್ತೃತವಾದ ವಿನಿಮಯ ಅಂತರ್ಜಾಲಗಳು ಸಾಮಾಜಿಕವಾದ ಬದಲಾವಣೆ ಉಂಟು ಮಾಡಿದೆ. ಇಲ್ಲಿ ಎಲ್ಲರಿಗೂ ಅವಕಾಶ ಲಭ್ಯವಾಗಿ ವ್ಯಾಪಾರ ಚಟುವಟಿಕೆ ಕೇವಲ 'ವೈಶ್ಯ' ಸಮುದಾಯಕ್ಕೆ ಮಾತ್ರ ಸೀಮಿತವಾಗಿಲ್ಲ.

* ತಮಿಳುನಾಡಿನ ನಿರ್ಗತಿಕರ ಜಾತಿ ಆಧಾರಿತ ವ್ಯಾಪಾರ ವ್ಯವಸ್ಥೆ.

* ಮಾರ್ವಾಡಿಗಳ ಉಗಮ (ಅಂಬಾನಿ, ಬಿರ್ಲಾ).

* ಪುಷ್ಕರ ವಾರ್ಷಿಕ ಒಂಟೇ ಜಾತ್ರೆ.

* ವರ್ಚುಯಲ್ ಮಾರುಕಟ್ಟೆ (ಅಗೋಚರ) ಆನ್‌ಲೈನ್ ಮಾರುಕಟ್ಟೆ.

* ಸ್ಟ್ರೈಪ್, ಆನ್‌ಲೈನ್ ಸ್ಟೋರ್ಸ್, ಸ್ನಾಪ್ ಡೀಲ್, ಫ್ಲಿಪ್‌ಕಾರ್ಟ್ ಎಕ್ಸೆಟ್ರಾ.

ಹೀಗೆ ಮಾರುಕಟ್ಟೆ ಆರ್ಥಿಕತೆಯು ಸಮಾಜದ ಮೇಲೆ ತನ್ನದೇ ಆದ ಪರಿಣಾಮ ಬೀರಿದೆ.

**ಜಾಗತೀಕರಣ ಮತ್ತು ಗ್ರಾಮೀಣ ಸಮಾಜದ ಮೇಲೆ ಅದರ ಪ್ರಭಾವ:**

ಜಾಗತೀಕರಣ ಎಂಬ ಪರಿಕಲ್ಪನೆ ಮೊದಲ ಬಾರಿಗೆ ತಿಯೋಡರ್ ಲಿಮಿಟ್ ಎಂಬುವವರು ಪರಿಚಯಿಸಿದರು. ಜಾಗತಿಕರಣವೆಂದರೆ ಜಗತ್ತಿನಲ್ಲಿ ಎಲ್ಲಾ ಸಮಾಜಗಳಲ್ಲಿ ಪರಸ್ಪರ ಅವಲಂಬನೆಯನ್ನು ಸೂಚಿಸುತ್ತದೆ.

ಜಾಗತೀಕರಣದ ಪ್ರಭಾವದಿಂದಾಗಿ ಎಲ್ಲಾ ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಇನ್ನಿತರ ಅಂಶಗಳನ್ನು ಒಂದುಗೂಡಿಸುವ ಪ್ರಕ್ರಿಯೆಯಾಗಿದೆ.

ಉದಾ: ವಿಶ್ವಕಪ್ ಪಂದ್ಯಾವಳಿಗಳನ್ನು ಎಲ್ಲಾ ರಾಷ್ಟ್ರದವರು ವೀಕ್ಷಿಸುವುದು.

**ಜಾಗತೀಕರಣಕ್ಕೆ ಪ್ರೇರಕವಾದ ಅಂಶಗಳು:**

* ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಪ್ರಗತಿ

* ಮಾಹಿತಿಗಳ ನಿರಂತರವಾದ ಪ್ರವಾಹ

* ಆರ್ಥಿಕ ಪ್ರಬಲತೆ

* ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶ

* ವಿದ್ಯುನ್ಮಾನ ಆರ್ಥಿಕತೆ (ಬ್ಯಾಂಕಿಂಗ್)

* ರಾಜಕೀಯ ಪರಿವರ್ತನೆಗಳು (1991)

* ಸಾರ್ಕ್, ಬ್ರಿಕ್ಸ್ ಎಕ್ಸೆಟ್ರಾ.

'ಜಾಸ್‌ಪಿನ್'ರವರ ಪ್ರಕಾರ, 'ಮಾನವನ ನಾಗರೀಕತೆಯ ಅತ್ಯಂತ ದೊಡ್ಡ ಶತ್ರುವೇ ಜಾಗತೀಕರಣ ಪ್ರಕ್ರಿಯೆ'.

ಜನರು ತಮ್ಮ ವ್ಯಕ್ತಿತ್ವದ ಪ್ರತಿರೂಪವನ್ನು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಸಂವಹನ ಅಂತರ್ಜಾಲದಿಂದ ರೂಪಿಸಿಕೊಳ್ಳುತ್ತಾರೆ. ಅಂತರಾಷ್ಟ್ರೀಯ ಮಟ್ಟದ ಸಂಬಂಧಗಳ ಸೃಷ್ಟಿಯಾಗುತ್ತಿದೆ. ಇದನ್ನು ಜಾಗತಿಕ ಅನನ್ಯತೆ (ಟ್ರಾನ್ಸೆಷನಲ್ ಐಡೆಂಟಿಟಿ) ಎನ್ನಲಾಗಿದೆ.

**ಸಮಾಜದ ಮೇಲೆ ಇದರ ಪ್ರಭಾವ:**

* ಇದು ತಯಾರಿಸಿದ ಇಲ್ಲವೇ ಉತ್ಪಾದಿಸಿದ ಪದಾರ್ಥಗಳಿಗೆ ಮುಕ್ತವಾದ ಮಾರುಕಟ್ಟೆ ಒದಗಿಸುತ್ತದೆ.

* ಇದು ಅರ್ಹ, ಸಮರ್ಥ, ಸುಶಿಕ್ಷಿತ, ತಂತ್ರಜ್ಞಾನ, ಶಿಕ್ಷಣವನ್ನು ಪಡೆದ ವ್ಯಕ್ತಿಗಳಿಗೆ ಉದ್ಯೋಗಾವಕಾಶ ಅಧಿಕಗೊಳಿಸುತ್ತದೆ.

* ಇದು ಆರ್ಥಿಕ ಅಭಿವೃದ್ಧಿ ಸಾಧಿಸಲು ಅವಕಾಶವನ್ನು ಮಾಡಿಕೊಡುತ್ತದೆ.

* ಅಂತರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ಸಹಬಾಳ್ವೆಗೆ ಸಹಕಾರ ಮಾಡಿದೆ.

* ತಂತ್ರಜ್ಞಾನ ವಿನಿಮಯ.

* ಜಾಗತೀಕರಣ ಪ್ರವೃತ್ತಿಯ ವಿಸ್ತಾರವಾದಂತೆ, 'ಜಾಗತಿಕ ಪ್ರಜೆ' ಎಂಬ ಭಾವನೆ ಹೆಚ್ಚು ಮಹತ್ವ ಪಡೆಯುತ್ತಿದೆ.

ಜಾಗತೀಕರಣವು ಸಮಾಜದ ಮೇಲೆ ಉಪಯೋಗಕ್ಕಿಂತ ಅನಾನುಕೂಲಗಳೇ ಹೆಚ್ಚಾಗಿವೆ. ನೋಬೆಲ್ ಪ್ರಶಸ್ತಿ ವಿಜೇತ 'ಅಮರ್ತ್ಯಸೇನ'ರವರ ಅಭಿಪ್ರಾಯ ಆಧರಿಸಿ ನೋಡುವುದಾದರೆ,

* ಜಾಗತೀಕರಣದಿಂದಾಗಿ ದೇಶಿಯ ಸಂಸ್ಕೃತಿಯು ಎದುರಿಸುತ್ತಿರುವ ಬೆದರಿಕೆಯು ಹಳೆಯ ಜೀವನ ಶೈಲಿ ನಾಶವಾಗತೊಡಗಿ ನಾವೇನನ್ನೋ ಕಳೆದುಕೊಳ್ಳುತ್ತಿರುವೆವೆಂಬ ಭೀತಿ ತಂದೊಡ್ಡಿದೆ.

* ಜಾಗತೀಕರಣ ಸ್ಥಿತಿಯಲ್ಲಿ ಸೃಷ್ಟಿಸಲ್ಪಡುವ ಹೊಸ ಹೊಸ ಅವಶ್ಯಕತೆಗಳಿವೆ. ಹೊಸ ರೀತಿಯ ಕೌಶಲ್ಯವು ಬೇಕಾಗುತ್ತದೆ. ಆದ್ದರಿಂದ ಅಲ್ಪಮಟ್ಟಿಗಾದರೂ ಹಳೆಯ ಕೌಶಲ್ಯ ತಿಳಿದವರು ತೊಂದರೆಗೊಳಗಾಗಬೇಕಾಗುತ್ತದೆ.

* ಹಳೆಯದಾದ ಯಾವುದನ್ನು ಉಳಿಸಿಕೊಳ್ಳಬೇಕು, ಯಾವುದನ್ನು ಕೈ ಬಿಡಬೇಕು ಎಂಬ ಗೊಮದಲ ಸಮಾಜದಲ್ಲಿ ಉಂಟಾಗುತ್ತದೆ.

* ಹಳೆಯ ಮಾದರಿಯ ಜೀವನ ಶೈಲಿ ಸತ್ತು ಅತೀವ ವೇದನೆ ಉಂಟುಮಾಡುತ್ತದೆ.

* ದಕ್ಷಿಣ ಏಷ್ಯಾ ಮತ್ತು ಆಫ್ರಿಕಾದ ಕೆಲ ದೇಶಗಳು ಹಿಂದೆ ಬಿದ್ದಿದ್ದು, ಇಲ್ಲಿಯ ಜನರು ಹೊಸ ಕೌಶಲ್ಯ ಪಡೆಯದೇ ಆರ್ಥಿಕ ಮತ್ತು ಸಾಂಸ್ಕೃತಿಕ ಅಸಮಾನತೆಯಿಂದ ಬಳಲಬೇಕಾಗಿದೆ.

* ದುರ್ಬಲ ವರ್ಗದವರು ಜೀವನ ಮೌಲ್ಯಗಳನ್ನು ಕಳೆದುಕೊಳ್ಳದೇ ಹೋದರೂ ಜೀವನ ಮಟ್ಟವನ್ನು ಕಳೆದುಕೊಳ್ಳಬೇಕಾಗುತ್ತದೆ. ತಾನು ಇತರರಿಂದ ಪಡೆಯಬಹುದಾದ ಪ್ರಾಮಾಣಿಕ ಸ್ನೇಹ, ಪ್ರೀತಿ ಸಂಬಂಧಗಳನ್ನು ಕಳೆದು ಶುಷ್ಕ ಬದುಕಿನತ್ತಾ ಮುನ್ನಡೆಯುವಂತಾಗುತ್ತದೆ.

* ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಯು (ಐಎಲ್‌ಸಿ) ಜಾಗತೀಕರಣವು ಉದ್ಯೋಗ ಸೃಷ್ಟಿ ಮತ್ತು ಬಡತನ ಪ್ರಮಾಣ ತಗ್ಗಿಸುವಲ್ಲಿ ವಿಫಲವಾಗಿದೆ ಎಂದು ಹೇಳಿದೆ.

* ನೀತಿ ನಿರೂಪಣೆಯಲ್ಲಿ ಕಾರ್ಮಿಕ ವರ್ಗಕ್ಕೆ ಉತ್ತಮವಾದ ಉದ್ಯೋಗ ಮತ್ತು ಆದಾಯ ಸಾಧ್ಯವಾಗುವಂತೆ ಮಾಡುವುದಕ್ಕೆ ಇನ್ನೂ ಆದ್ಯತೆ ಸಿಕ್ಕಿಲ್ಲ.

ಬಹಳ ಹಿಂದೆಯೇ ನಮ್ಮ ದಾರ್ಶನಿಕರು 'ವಸುದೈವ ಕುಟುಂಬಕಂ' ಎಂಬ ಪರಿಕಲ್ಪನೆಯ ಮೂಲಕ ವಿಶ್ವದೃಷ್ಟಿಯ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದ್ದರು. ಅದು ತಾತ್ವಿಕವಾಗಿ ಒಳ್ಳೆಯ ಬೆಳವಣಿಗೆಯಾದರೂ ಕೂಡ ಪ್ರಬಲ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು ಮಾತ್ರ ಕಾಯ್ದುಕೊಳ್ಳಲು ಪ್ರಯತ್ನ ನಡೆಸುತ್ತಿರುವುದು ದುರದೃಷ್ಟಕರ.

ಜಾಗತೀಕರಣವು ದುಡಿಯುವ ಕೈಗಳಿಗೆ ಶಾಪವಾಗದೇ ವರವಾಗುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟರೆ, ಕಾರ್ಮಿಕರ ಕಲ್ಯಾಣ ಸಾಧಿಸಿದರೆ, ಅನ್ನದಾತನಿಗೆ ಭರವಸೆಯ ಬದುಕನ್ನು ಕಲ್ಪಿಸಿದರೆ, ಜಾಗತೀಕರಣ ಜಾಗತಿಕವಾದ ವರವಾಗುವುದರಲ್ಲಿ ಅಚ್ಚರಿಯಿಲ್ಲ.

'ಬಾರ್ಬಿ ಗೊಂಬೆ' ಜಾಗತಿಕ ಪ್ರಜೆಯ ಲಾಂಛನವಾಗಿದೆ.

**ಕಾರ್ಮಿಕ ಸಂಘಗಳು:**

ಕಾರ್ಮಿಕ ಸಂಘಗಳು ಕಾರ್ಮಿಕರನ್ನು ರಕ್ಷಿಸುವುದಕ್ಕಾಗಿಯೇ ಆರಂಭವಾದ ಸಂಘಟನೆಗಳು. ಇದು ಕೈಗಾರಿಕಾ ಕ್ರಾಂತಿಯ ಶಿಶುವಾಗಿದ್ದು ವ್ಯಕ್ತಿ ವಿಶಿಷ್ಟವಾದದ ತತ್ವವೇ ಇದರ ಬಂಡವಾಳ.

ಕಾಲ ಬದಲಾದಂತೆ ಮನೋಭಾವಗಳು ಬದಲಾದವು. ಕಾರ್ಮಿಕರ ಕಷ್ಟಕಾರ್ಪಣ್ಯಗಳನ್ನು ಕರುಣೆಯಿಂದ ನೋಡುವ ದೃಷ್ಟಿ ಬೆಳಣಿಗೆಯಾಯಿತು. ಕಾರ್ಮಿಕರಲ್ಲೂ ಸಂಘಟನಾ ಪ್ರವೃತ್ತಿ ಬೆಳೆದು ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಕಾರ್ಮಿಕ ಸಂಘಟನೆಯ ಪ್ರಮುಖವಾದ 4 ಲಕ್ಷಣಗಳೆಂದರೆ,

1) ಅದು ಆರ್ಥಿಕ ಮೂಲದಿಂದಾಗಿದೆ.

2) ಅದು ರಕ್ಷಣಾ ಸದುದ್ದೇಶದಿಂದ ಕೂಡಿದೆ.

3) ವರ್ಗ ವ್ಯತ್ಯಾಸ ಹೊಂದಿದೆ.

4) ವ್ಯಕ್ತಿ ವಿಶಿಷ್ಟವಾದ ಸಮಾಜದ ಫಲವಾಗಿದೆ.

ವಿ.ವಿ.ಗಿರಿಯವರ ಪ್ರಕಾರ, 'ಕಾರ್ಮಿಕ ಸಂಘವು ಕೆಲಸಗಾರರ ಐಚ್ಛಿಕ ಸಂಘಟನೆಯಾಗಿದ್ದು ಕಾರ್ಮಿಕ ಹಿತಾಸಕ್ತಿಯನ್ನು ರಕ್ಷಿಸಲು ಸಾಮೂಹಿಕ ಶಕ್ತಿಯಿಂದ ಕೆಲಸ ಮಾಡುವ ಸಂಸ್ಥೆಯಾಗಿದೆ.'

**ಕಾರ್ಮಿಕ ಸಂಘಗಳ ಕಾರ್ಯಗಳು:**

* ಕಾರ್ಮಿಕರಲ್ಲಿ ನಾವೆಲ್ಲಾ ಒಂದೇ ಎಂಬ ಭಾವನೆ ಬಲಪಡಿಸುತ್ತದೆ.

* ತಮ್ಮ ಮೇಲಾಗುವ ಶೋಷಣೆಗಳನ್ನು ತಡೆಗಟ್ಟಲು ಕಾರ್ಮಿಕರಿಗೆ ಈ ಸಂಘವು ಸಹಕಾರಿಯಾಗಿದೆ.

* ಶೋಷಣೆಯ ವಿರುದ್ಧ ದನಿ ಎತ್ತುವ ಸಾಮರ್ಥ್ಯ.

* ಕೈಗಾರಿಕಾ ಜಗಳಗಳ ನಿವಾರಣೆಗೆ ಇವು ಸಹಾಯ ಮಾಡುತ್ತದೆ.

* ಕಾರ್ಮಿಕರಲ್ಲಿ ಶಿಸ್ತು ಪಾಲನೆ.

* ಕಷ್ಟಕಾರ್ಪಣ್ಯಗಳ ಕಾಲದಲ್ಲಿ ಸಹಾಯ.

* ಕಾರ್ಮಿಕ ಸಾಮಾಜಿಕ ಅವಶ್ಯಕತೆಗಳಾದ ವಿದ್ಯಾಭ್ಯಾಸ, ಮನರಂಜನೆ, ವೈದ್ಯಕೀಯ ಸೌಲಭ್ಯಗಳು. ಇತರೆ ಸಮಾಜ ಕಲ್ಯಾಣ ಹಾಗೂ ಸಮೂಹಕ್ಕೆ ಲಾಭದಾಯಕ ಯೋಜನೆ ಪೂರೈಸುತ್ತವೆ.

* ಕಾರ್ಮಿಕರನ್ನು ರಾಜಕೀಯವಾಗಿ ಸಾಮಾಜೀಕರಣಗೊಳಿಸುತ್ತದೆ.

**ಇವು ಸ್ವತಂತ್ರವಾಗಿ ಕೆಲಸ ಮಾಡಲು ಈ ವಿಷಯಗಳು ಅಗತ್ಯವಿದೆ,**

* ಕಡ್ಡಾಯ ಸದಸ್ಯತ್ವ

* ಭದ್ರ ಆರ್ಥಿಕ ತಳಹದಿ

* ತ್ಯಾಗ ಮನೋಭಾವ

* ವರ್ಗ ಪ್ರಜ್ಞೆ

* ಸಮರ್ಥ ನಾಯಕತ್ವ

* ರಾಜಕೀಯದಿಂದ ದೂರವಿರುವಿಕೆ

**ಭಾರತದಲ್ಲಿ ಕಾರ್ಮಿಕ ಸಂಘಟನೆಗಳು:**

* 1881ರ ಇಂಡಿಯನ್ ಫ್ಯಾಕ್ಟರಿ ಆಕ್ಟ್

* 1890ರಲ್ಲಿ ನಾರಾಯಣ ಮೇಘಜೀ ಲೋ ಖಂಡೆ 'ಬೊಂಬಾಯಿ ಮಿಲ್‌ಹ್ಯಾಂಡೆ ಅಸೋಸಿಯೇಷನ್' ಪ್ರಾರಂಭಿಸಿದರು.

* ದಿ ಪ್ರಿಂಟರ್ಸ್ ಯೂನಿಯನ್ ಆಫ್ ಕಲ್ಕತ್ತಾ – 1903

* ಬೋಂಬೆ ಪೋಸ್ಟಲ್ ಯೂನಿಯನ್ – 1907

* ದಿ ಸೋಷಿಯಲ್ ಸರ್ವಿಸ್ ಲೀಗ್ ಆಫ್ ಬಾಂಬೆ – 1910

* ಎಐಟಿಯೂಸಿ (ಆಲ್ ಇಂಡಿಯನ್ ಟ್ರೇಡ್ ಯೂನಿಯನ್ ಕಾಂಗ್ರೆಸ್) – 1920

ಇದನ್ನು ಲಾಲಾ ಲಜಪತ್‌ರಾಯರವರು ಪ್ರಾರಂಭಿಸಿದರು. ಇದರಲ್ಲಿ 64 ವಿವಿಧ ಕಾರ್ಮಿಕ ಸಂಘ ಪ್ರತಿನಿಧಿಗಳನ್ನು ಒಗ್ಗೂಡಿಸಲಾಯಿತು. 1,40,584 ಮಂದಿ ಸದಸ್ಯರಿದ್ದರು.

* ದಿ ಓಲ್ಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್

* ದಿ ರೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್

* ಎನ್.ಎಲ್.ಓ.

ಹೀಗೆ ಮುಂತಾದ ಸಂಘಟನೆಗಳು ತಮ್ಮದೇ ಆದ ನಿಟ್ಟಿನಲ್ಲಿ ಹೋರಾಟ ಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆಗೆಂದೇ ಹಲವಾರು ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಸಫಲವಾಗಿದೆ. ಅಂತಹ ಕೆಲವು ಶಾಸನಗಳನ್ನು ನೋಡುವುದಾದರೆ,

* ಕಾರ್ಖಾನೆ ಶಾಸನ – 1881
* ಕೆಲಸಗಾರರ ಪರಿಹಾರ ಶಾಸನ – 1923
* ವೇತನ ಪಾವತಿ ಶಾಸನ – 1936
* ಕಾರ್ಖಾನೆ ಕಾಯ್ದೆ – 1948
* ಕೆಲಸಗಾರರ ರಾಜ್ಯ ವಿಮಾ ಶಾಸನ – 1948
* ಕೆಲಸಗಾರರ ಭವಿಷ್ಯ ನಿಧಿ ಶಾಸನ – 1952
* ಬೋನಸ್ ಪಾವತಿ ಶಾಸನ – 1905

ಪ್ರಸ್ತುತವಾಗಿ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ ಜಾಗತಿಕ ಮಟ್ಟದ ಸಂಘಟನೆಯಾಗಿದ್ದು (1919) ಭಾರತವು ಇದರ ಸ್ಥಾಪಿತ ದಿನದಿಂದಲೇ ಸದಸ್ಯತ್ವ ಪಡೆದಿರುವ ಖಾಯಂ ರಾಷ್ಟ್ರವಾಗಿದೆ.

**ವೃತ್ತಿಯ ವೈವಿಧ್ಯತೆ ಹಾಗೂ ಇದರ ಸಾಮಾಜಿಕ ರಚನೆ**

**ಸಾರ್ವತ್ರಿಕ ಚಟುವಟಿಕೆಯಾಗಿ ದುಡಿಮೆ:**

ಕೈಗಾರಿಕಾ ಸಮಾಜಶಾಸ್ತ್ರವು ಮೂಲಭೂತವಾಗಿ ಸಾಮಾಜಿಕ ಸಂಘಟನೆಗಳಲ್ಲಿ ದುಡಿಮೆಯ ಪಾತ್ರವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ವಿಜ್ಞಾನವಾಗಿದೆ. ಇದಕ್ಕೆ ದುಡಿಮೆಯ ಸಮಾಜಶಾಸ್ತ್ರ ಎಂದೂ ಹೆಸರಿದೆ.

ಸಾಮಾನ್ಯವಾಗಿ ಒಂದು ನಿರ್ದಿಷ್ಟ ಗುರಿಯನ್ನು ಸಾಧಿಸುವುದಕ್ಕೆ ಮಾಡುವ ಕ್ರಿಯೆಯನ್ನು ದುಡಿಮೆ, ಕೆಲಸ ಎನ್ನುತ್ತೇವೆ. ಮಾನವರು ತಮ್ಮ ಜೀವನೋಪಾಯಕ್ಕಾಗಿ ಹಲವಾರು ಬಗೆಯ ದುಡಿಮೆಯನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಮನುಕುಲದ ಪ್ರಾಚೀನ ಹಂತದಲ್ಲಿಯೂ ದುಡಿಮೆ ಇತ್ತು. ಆಧುನಿಕ ಯುಗದಲ್ಲಿ ದುಡಿಮೆ ಇದೆ.

ಅನಕ್ಷರಸ್ಥ ಮತ್ತು ಅಕ್ಷರಸ್ಥ ಸಮಾಜಗಳೆರೆಡರಲ್ಲಿಯೂ ದುಡಿಮೆಯು ಕಂಡು ಬರುತ್ತದೆ. ದುಡಿಮೆಯನ್ನು ಪ್ರಮುಖವಾಗಿ 4 ಹಂತದಲ್ಲಿ ನೋಡುವುದಾದರೆ,

* ವ್ಯವಸಾಯ ಪೂರ್ವ
* ವ್ಯವಸಾಯದ
* ವ್ಯವಸಾಯೋತ್ತರ ಸಮಾಜ
* ಆಧುನಿಕ ಕೈಗಾರಿಕಾ ಸಮಾಜ

ಹೀಗೆ ಕಾಲ, ದೇಶಗಳ ಧರ್ಮ, ಇಲ್ಲವೇ ಮನರಂಜನೆ ಮೊದಲಾದ ಸಾಮಾನ್ಯ ಚಟುವಟಿಕೆಗಳ ಜೊತೆ ಜೊತೆಯಲ್ಲಿಯೇ ಇದು ಸಾಗುತ್ತದೆ.

'ರೇವಾಂಡ್ ಫಿರ್ಕ್' ಪ್ರಕಾರ ದುಡಿಮೆಯೆಂದರೆ, 'ದುಡಿಮೆಯ ಆದಾಯ ತರುವ ಒಂದು ಚಟುವಟಿಕೆಯಾಗಿದ್ದು, ಸ್ವಲ್ಪ ಆನಂದ ಇಲ್ಲವೇ ವಿರಾಮವನ್ನು ತ್ಯಾಗ ಮಾಡುತ್ತಾ ಶಕ್ತಿಯನ್ನು ವ್ಯಯಿಸುವ ಒಂದು ಉದ್ದೇಶಪೂರ್ವಕ ಚಟುವಟಿಕೆಯಾಗಿದೆ.'

**ಸಮಾಜದಲ್ಲಿ ದುಡಿಮೆಯ ಪಾತ್ರ:**

ಕಾರ್ಲ್‌ಮಾರ್ಕ್ಸ್‌ರವರ ಅಭಿಪ್ರಾಯದಂತೆ, **'ದುಡಿಮೆಯು ಕೇವಲ ಜೀವನೋಪಾಯದ ಒಂದು ಸಾಧನವಾಗಿರದೆ ವ್ಯಕ್ತಿಯ ವ್ಯಕ್ತಿತ್ವದ ಅಭಿವ್ಯಕ್ತಿಯಾಗಿರಬೇಕು'.**

ದುಡಿಮೆಯು ಮಾನವ ಜೀವನದ ಕೇಂದ್ರೀಯ ಅಂಶವಾಗಿ ದುಡಿಮೆ ಇಲ್ಲದ ವ್ಯಕ್ತಿಗೆ, ದುಡಿಮೆ ಇದ್ದು ದುಡಿಯದಿರುವ ವ್ಯಕ್ತಿಗೆ, ದುಡಿಮೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸದಿರುವ ವ್ಯಕ್ತಿಗೆ ಏನೇನೂ ಮನ್ನಣೆ ಸಿಗುವುದಿಲ್ಲ. ದುಡಿಮೆಯ ಸಮಾಜದ ಸಾರ್ವತ್ರಿಕ ಕ್ರಿಯೆಯಾಗಿದ್ದು ಅಕ್ಷರಸ್ಥ ಮತ್ತು ಅನಕ್ಷರಸ್ಥ 2 ಸಮಾಜದಲ್ಲಿಯೂ ಕಂಡು ಬರುತ್ತದೆ.

**ಇದರ ಪ್ರಮುಖ ಪಾತ್ರಗಳೆಂದರೆ,**

1) ವ್ಯಕ್ತಿಗಳಿಗೆ ಅಗತ್ಯವಾಗಿರುವುದರ ಜೊತೆಗೆ ಒಂದು ಅನಿವಾರ್ಯತೆಯೂ ಆಗಿದೆ.

2) ಮಾನವನ ವ್ಯಕ್ತಿತ್ವದ ಪರಿಪೂರ್ಣತೆಗೆ ಅವಶ್ಯಕ.

3) ಇತರರ ಹಂಗಿಗೆ ಒಳಗಾಗದೇ ಇರುವುದು ಪ್ರತಿಯೊಬ್ಬ ವ್ಯಕ್ತಿಯ ನೈತಿಕ ಕರ್ತವ್ಯ.

4) ಉದ್ಯೋಗ ಒಂದು ಸೃಜನಾತ್ಮಕ ಕ್ರಿಯೆಯಾಗಿದ್ದು ಮಾನವನನ್ನು ಪಶುಗಳ ಸ್ಥಿತಿಯಿಂದ ದಿಗಂತಕ್ಕೇರಿಸುತ್ತದೆ.

5) ದುಡಿಮೆಯು ಭಾವನಾಪೂರ್ವಕವಾಗಿದ್ದು ಮತ್ತು ಆರ್ಥಿಕವಾದ ಅವಶ್ಯಕತೆಗಳಿಂದ ಕೂಡಿದ್ದಾಗಿದೆ.

# 7. ಗ್ರಾಮೀಣ ಸಾಮಾಜಿಕ ವ್ಯವಸ್ಥೆ ಹಾಗೂ ಗ್ರಾಮೀಣಾಭಿವೃದ್ಧಿ:

**ಗ್ರಾಮೀಣ ಸಮುದಾಯದ ಸಾಮಾಜಿಕ–ಸಾಂಸ್ಕೃತಿಕ ದೃಷ್ಟಿಕೋನಗಳು:**

ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಗ್ರಾಮೀಣ ಪ್ರದೇಶಗಳು ಹಲವು ವಿಭಿನ್ನತೆಗಳನ್ನು ಒಳಗೊಂಡಿರುತ್ತವೆ. ಈ ವಿಭಿನ್ನತೆಗಳನ್ನು ನಾವು ಪ್ರಮುಖವಾಗಿ ಈ ಕೆಳಗಿನವುಗಳಲ್ಲಿ ಕಾಣಬಹುದಾಗಿದೆ.

1) ಉದ್ಯೋಗಗಳಲ್ಲಿ

2) ಸಂಸ್ಕೃತಿ

3) ಜನಸಾಂದ್ರತೆ

4) ಸಮುದಾಯದ ಗಾತ್ರ

ಕೃಷಿ ಪ್ರಧಾನವಾದ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಸಂಬಂಧಿ ಕಾರ್ಯ ಚಟುವಟಿಕೆಗಳನ್ನು ಹೆಚ್ಚಾಗಿ ಕಾಣುತ್ತೇವೆ. ಇದರ ಜೊತೆಗೆ ಸಾಮಾಜಿಕ ಕಟ್ಟಳೆಗಳು, ಸಂಪ್ರದಾಯಗಳು, ನಂಬಿಕೆಗಳು, ವಿಧಿ ವಿಧಾನಗಳನ್ನು ಗ್ರಾಮ ಸಮುದಾಯವು ಒಳಗೊಂಡಿರುತ್ತದೆ. ಹಾಗೆಯೇ ಪ್ರತಿಯೊಂದು ಗ್ರಾಮ ಸಮುದಾಯವು ತನ್ನದೇ ಆದ ಇತಿಹಾಸವನ್ನು ಹೊಂದಿರುತ್ತದೆ.

ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಭಾರತದ ಸಮುದಾಯಗಳು ವಿಭಿನ್ನ ಭಾಷೆಗಳನ್ನು ಹೊಂದಿದೆ. ಹಾಗೆಯೇ ಪ್ರತಿಯೊಂದು ಗ್ರಾಮದ ಸೊಗಡು, ಸಂಪ್ರದಾಯಗಳು ಶ್ರೀಮಂತಿಕೆಯಿಂದ ಕೂಡಿವೆ. ಹಳ್ಳಿಯು ಗ್ರಾಮೀಣ ಸೊಗಡಿನ ಪ್ರತಿಬಿಂಬವಾಗಿದೆ. ಭಾರತದ ಸಾಂಸ್ಕೃತಿಕ ಶ್ರೀಮಂತಿಕೆಯು ನೆಲೆಸಿರುವುದು ಹಳ್ಳಿಗಳಲ್ಲಿಯೇ. ಆದ್ದರಿಂದ ಭಾರತವು ಹಳ್ಳಿಗಳ ದೇಶ ಎಂದು ಹೇಳಲಾಗಿದೆ.

**ಸಾಂಪ್ರದಾಯಿಕ ಅಧಿಕಾರ ರಚನೆ:**

ಅಧಿಕಾರದ ಬಗೆಗಳಲ್ಲಿ ಸಾಂಪ್ರದಾಯಿಕ ಅಧಿಕಾರವು ಒಂದು. ಸಾಂಪ್ರದಾಯಿಕವಾಗಿ ನಡೆದು ಬಂದ ಆಚರಣೆಗಳೇ ಇದಕ್ಕೆ ಸಾಕ್ಷಿ. ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಅಧಿಕಾರವನ್ನು ಚಲಾಯಿಸುವುದು ಸಾಮಾನ್ಯವಾದ ಸಂಗತಿಯಾಗಿದೆ. ಈ ಹಿಂದೆ ರಾಜ ಮಹಾರಾಜರ ಅಧಿಕಾರವನ್ನು ಜನತೆಯು ಒಪ್ಪಿಕೊಂಡು ಅದರಂತೆಯೇ ನಡೆದುಕೊಳ್ಳುತ್ತಿದ್ದರು.

ಈ ಅಧಿಕಾರವು ರೂಢಿ ಅಥವಾ ಪದ್ಧತಿಗಳ ತಳಹದಿ ಮೇಲೆ ಚಲಾವಣೆಯಾಗುತ್ತದೆ. ಅಧಿಕಾರಕ್ಕೆ ಶಾಸನೀಯ, ಬಲ, ಹಣಕಾಸು, ಭೌದ್ಧಿಕ ಅಂಶಗಳು ಅಡಿಪಾಯವಾಗಿರುತ್ತವೆ. ಇವುಗಳ ಆಧಾರದ ಮೇಲೆಯೇ ಅಧಿಕಾರದ ವಿವಿಧತೆಯನ್ನು ಹೇಳಬಹುದಾಗಿದೆ. ಸಾಂಪ್ರದಾಯಿಕ ಅಧಿಕಾರವು ಸಹ ಹೀಗೆ ರೂಢಿ, ಆಚರಣೆಗಳಿಂದ ರೂಪ ಪಡೆದಿರುತ್ತದೆ.

**ಪ್ರಜಾಪ್ರಭುತ್ವ ಮತ್ತು ನಾಯಕತ್ವ:**

ಈ ಭಾಗವನ್ನು ಸಾರ್ವಜನಿಕ ಆಡಳಿತ ವಿಷಯದಲ್ಲಿ ಅಧ್ಯಯನ ಮಾಡಿ.

**ಬಡತನ:**

ಗ್ರಾಮ ಸಮುದಾಯಗಳು ಪುಟ್ಟದಾದ ಗಣರಾಜ್ಯದಂತೆ ಇದ್ದು ಅವು ತಮಗೆ ಅಗತ್ಯವಾದುದನ್ನೆಲ್ಲಾ ತಮ್ಮಲ್ಲಿಯೇ ಹೊಂದಿರುವ ಮತ್ತು ಯಾವುದೇ ಪರಕೀಯ ಸಂಬಂಧಗಳಿಂದ ಮುಕ್ತನಾಗಿರುವ ಸ್ವಾಯತ್ತತೆಯನ್ನು ಹೊಂದಿವೆ. ಹೀಗಿರುವಾಗ ಇಲ್ಲಿ ಹಲವಾರು ಸಮಸ್ಯೆಗಳು ಆಕ್ರಮಿಸಿದ್ದು ಅವುಗಳಲ್ಲಿ ಬಡತನವೂ ಒಂದಾಗಿದೆ.

ಬಡತನವು ಭಾರತೀಯ ಗ್ರಾಮಗಳ ಒಂದು ಪ್ರಮುಖವಾದ ಸಮಸ್ಯೆಯಾಗಿದ್ದು ಗ್ರಾಮೀಣ ಜನರಲ್ಲಿ ಶೇ.40ಕ್ಕಿಂತಲೂ ಅಧಿಕ ಮಂದಿ ಬಡತನ ರೇಖೆಯಿಂದ ಕೆಳಗೆ ಬರುವವರಾಗಿದ್ದಾರೆ. ಈ ಬಡತನಕ್ಕೆ ಹಲವಾರು ಕಾರಣಗಳಿದ್ದು, ಜಾಗತಿಕ ಬ್ಯಾಂಕ್ (ವರ್ಲ್ಡ್ ಬ್ಯಾಂಕ್) 1996ರಲ್ಲಿ ರಾಜಸ್ಥಾನದ 7 ಜಿಲ್ಲೆಗಳಲ್ಲಿ ನಡೆಸಿದ ಕ್ಷೇತ್ರಾಧ್ಯಯನವು ಗ್ರಾಮೀಣ ಕ್ಷೇತ್ರಗಳಲ್ಲಿ ಬಡತನಕ್ಕೆ ಕಾರಣಗಳನ್ನು ಈ ಕೆಳಗಿನಂತೆ ಗುರುತಿಸಿದೆ.

* ಕೃಷಿಯ ಮೇಲೆ ವಿಪರೀತ ಅವಲಂಬನೆ

* ಕೃಷಿಯೇತರ ಕಸುಬುಗಳಲ್ಲಿ ಕೆಲವೇ ಕೆಲವು ಜನರ ಪಾಲ್ಗೊಳ್ಳುವಿಕೆ

* ಅಸಮರ್ಪಕ ಆಧುನಿಕ ಕೌಶಲ್ಯ

* ಕೃಷಿಗೆ ವಿದ್ಯುಚ್ಛಕ್ತಿಯ ಅಲಭ್ಯತೆ

* ಗುಣಮಟ್ಟವಲ್ಲದ ಜಾನುವಾರಗಳು

* ಅಪೂರ್ಣ ಮತ್ತು ಶೋಷಿತ ಸಾಲದ ಮಾರುಕಟ್ಟೆ ಸಂವಹನ ಸೌಲಭ್ಯಗಳು

* ಉತ್ತಮ ಮಟ್ಟದ ಶಿಕ್ಷಣದ ಕೊರತೆ

* ಸಮುದಾಯದ ನಾಯಕತ್ವ ಕೊರತೆ

* ಅಭಿವೃದ್ಧಿ ಚಟುವಟಿಕೆಗಳಲ್ಲಿ ಮಹಿಳಾ ಸಹಕಾರದ ಕೊರತೆ ಮತ್ತು ಯೋಜಿತ ಕಾರ್ಯಕ್ರಮದಲ್ಲಿ ಅವರ ಸಹಭಾಗಿತ್ವ

* ಅಂತರಜಾತಿ ಸಂಘರ್ಷಗಳು

* ವಿವಾಹ, ತಿಥಿ, ಮುಂಜಿ, ಹಬ್ಬ ಹರಿದಿನ, ಮುಂತಾದ ಅನುತ್ಪಾದಕ ಕಾರ್ಯಗಳ ಮೇಲೆ ಹಣ ವೆಚ್ಚ ಮಾಡುವುದು

ಇದರ ಜೊತೆಗೆ ಜನಸಂಖ್ಯಾ ಸ್ಫೋಟ, ನಿರುದ್ಯೋಗ, ಅರೆಉದ್ಯೋಗ, ಸಣ್ಣಹಿಡುವಳಿ, ಋಣಭಾರತ್ವ, ನೈಸರ್ಗಿಕ ವಿಪತ್ತು, ಶ್ರಮಕ್ಕೆ ತಕ್ಕ ಬೆಲೆಲ ಇಲ್ಲದಿರುವುದು ಕಾರಣಗಳಾಗಿವೆ.

ಭಾರತದ ಘನ ಸರ್ಕಾರವು ಬಡತನವನ್ನು ನಿವಾರಿಸುವ ನಿಟ್ಟಿನಲ್ಲಿ ಹಲವಾರು ಉಪಯುಕ್ತವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಜನರನ್ನು ಬಡತನದ ರೇಖೆಯಿಂದ ಮೇಲೆತ್ತಲು ಹಾಗೂ ಪಂಚವಾರ್ಷಿಕ ಯೋಜನೆಗಳ ಮೂಲಕ ಹಲವಾರು ಕಾರ್ಯಕ್ರಮ ಹಮ್ಮಿಕೊಂಡಿದೆ. ಉದಾ: ಎನ್.ಇ.ಎಸ್. ಸಿ.ಡಿ.ಪಿ. ಅಯ್.ಆರ್.ಡಿ.ಪಿ. ಜೆ.ಆರ್.ವಾಯ್, ಎಸ್.ಜಿ.ಆರ್.ವಾಯ್ ಇತ್ಯಾದಿ.

ಜೊತೆಗೆ ಭೂ ಸುಧಾರಣೆ, ಗ್ರಾಮೀಣಾಭಿವೃದ್ಧಿ, ಬ್ಯಾಂಕ್ ಸ್ಥಾಪನೆ, 20 ಅಂಶ ಕಾರ್ಯಕ್ರಮ, ಉಳುವವನೇ ಒಡೆಯ. ಹೀಗೆ ಬಡತನ ಪ್ರಮಾಣ ತಗ್ಗಿಸಲು ಸರ್ಕಾರ ಹೋರಾಡುತ್ತಿದೆ.

**ಋಣಭಾರ (ಸಾಲ):**

ಋಣಭಾರತ್ವವು ಭಾರತೀಯ ಗ್ರಾಮಗಳ ಒಂದು ಪ್ರಮುಖವಾದ ಸಮಸ್ಯೆಯಾಗಿದೆ. ಭಾರತೀಯ ಗ್ರಾಮಗಳಲ್ಲಿನ ಬಹುತೇಕ ಗ್ರಾಮಸ್ಥರು 'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬೆಳೆದು, ಸಾಲದಲ್ಲೇ ಸಾಯುತ್ತಾರೆ' ಎಂಬುದು ಪ್ರಸಿದ್ದವಾದ ನುಡಿಯಾಗಿದೆ.

ಸಾಹುಕಾರ, ಸಾಲಗಾರ, ಋಣ, ಋಣದಾರತ್ವ, ಅಸಲು, ಬಡ್ಡಿ, ಸರಳಬಡ್ಡಿ, ಚಕ್ರಬಡ್ಡಿ, ವಸೂಲಿ ಗ್ರಾಮಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಗ್ರಾಮೀಣ ಆರ್ಥಿಕತೆಯಲ್ಲಿ ಸಾಹುಕಾರ, ಲೇವಾದೇವಿಗಾರನಿಗೆ ಪ್ರಮುಖವಾದ ಸ್ಥಾನವಿದೆ.

**ಕಾರಣಗಳು:**

ಬಡತನದ ಎಲ್ಲಾ ಕಾರಣಗಳು ಈ ಋಣಭಾರತ್ವಕ್ಕೆ ಕಾರಣಗಳಾಗುತ್ತವೆ. ಭಾರತೀಯ ಗ್ರಾಮಗಳಲ್ಲಿ ಕೃಷಿಕನು ಬಹಳಮಟ್ಟಿಗೆ ಬಡತನದಲ್ಲಿಯೇ ಬೇಯುತ್ತಿರುತ್ತಾನೆ. ಒಂದು ವರ್ಷ ಸುಭಿಕ್ಷ ಸಂಭವಿಸಿದರೆ ಮತ್ತೇ ಕೆಲವು ವರ್ಷಗಳು ದುರ್ಭಿಕ್ಷ ತಲೆದೋರುತ್ತದೆ. ಆಗಾಗ್ಗೆ ಬಂದೊದಗುವ ಕ್ಷಾಮ, ಬರಗಾಲ, ಅತೀವೃಷ್ಟಿ, ಪ್ರವಾಹ ಮೊದಲಾದವು ಅವನನ್ನು ಹೆಚ್ಚು ತತ್ತರಿಸುವಂತೆ ಮಾಡುತ್ತವೆ.

ಕೃಷಿಕನು ಬೆಳೆ ಬಂದೇ ಬರುತ್ತದೆ ಎಂಬ ಆಶಾಭಾವನೆಯಿಂದ ಉತ್ತಿ, ಬಿತ್ತಿ, ಸಾಲಮಾಡಿ, ನಾಟಿ ಹಾಕಿಸಿ, ಕಳೆಕೀಳಿಸಿ, ಗೊಬ್ಬರ ಹಾಕಿ ಮುಗಿಲನ್ನೇ ನೋಡುವಾಗ ಆಕಾಶದಲ್ಲೇ ಮೋಡಗಳೇ ಇಲ್ಲವಾಗಿ ಸಂಕಷ್ಟ ತಂದೊಡ್ಡುತ್ತವೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಗ್ರಾಮೀಣ ಋಣಭಾರತ್ವ ನಿವಾರಣೆಗಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಮುಖವಾಗಿ **'ಕೋ ಆಪರೇಟಿವ್ ಕ್ರೆಡಿಟ್ ಸೊಸೈಟೀಸ್ ಆಕ್ಟ್'** ಅನ್ನು ಜಾರಿಗೊಳಿಸಿದ್ದು, ಇದು ಭಾರತದಾದ್ಯಂತ ಗ್ರಾಮಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಲು ನೆರವಾಗಿದೆ.

ರಾಜ್ಯ ಸಹಕಾರಿ ಬ್ಯಾಂಕುಗಳು, ಕೇಂದ್ರ ಸಹಕಾರಿ ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕುಗಳು, ದೇಶಾದ್ಯಂತ ಸ್ಥಾಪಿತವಾಗಿವೆ. ಬೃಹತ್ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಗಿದೆ. ಇದರ ಜೊತೆಯಲ್ಲಿ ಋಣಪರಿಹಾರ ಕಾಯ್ದೆ ಜಾರಿಗೆ ಬಂದಿದೆ.

ಸಾಲಗಳನ್ನು ವಸೂಲಿ ಮಾಡುವುದಕ್ಕೇ ಇಲ್ಲವೇ ಸಾಲ ನೀಡುವುದಕ್ಕೂ ಬ್ಯಾಂಕುಗಳು ಬಡವರ ಮನೆಯ ಬಾಗಿಲಿಗೆ ಬರುವಂತೆ ಮಾಡಲಾಗುತ್ತಿರುವುದು ಶುಭ ಸೂಚನೆಯಾಗಿದೆ.

ಅಲ್ಪಾವಧಿ ಸಾಲ, ದೀರ್ಘಾವಧಿ ಸಾಲ, ಬೆಳೆ ಸಾಲ, ಕುರಿ, ಹಂದಿ ಸಾಲ, ಅಂಗಡಿ ನಡೆಸುವ ಸಾಲ, ಗ್ರಾಮೀಣ ಜೀವ ವಿಮೆ, ಇವೇ ಮೊದಲಾದ ಹಲವಾರು ಬಗೆಯ ಸಾಲ ಸೌಲಭ್ಯಗಳು ಋಣಭಾರತ್ವದ ತೀವ್ರತೆಯನ್ನು ಕಡಿಮೆ ಮಾಡಿದೆ.

**ಪ್ರಮುಖ ಕಾರಣಗಳು:**

* ಅಗತ್ಯವಾದ ಕಾನೂನುಗಳ ಕೊರತೆ
* ಸರ್ಕಾರದ ತಾತ್ಸಾರ
* ಆರ್ಥಿಕ ಉತ್ಕ್ರಾಂತಿ
* ದುಂದುವೆಚ್ಚ
* ಲೇವಾದೇವಿಗಾರರ ಯುಕ್ತಿಗಳು
* ಸಾಲ ಪಡೆಯಲಿರುವ ಅನುಕೂಲಗಳು

**ಋಣ ಭಾರತ್ವದ ಪರಿಣಾಮಗಳು:**

* ಗುಲಾಮಗಿರಿ ಪದ್ಧತಿಯ ಉಗಮ
* ಬಡತನದಲ್ಲಿ ಹೆಚ್ಚಳ
* ವ್ಯವಸಾಯದ ಅವನತಿ
* ಆರೋಗ್ಯದ ಕಳಪೆ ಮಟ್ಟ

**ಇದರ ನಿವಾರಣೆಗಾಗಿ:**

1889ರಲ್ಲೇ 'ಡೆಕ್ಕನ್ ಅಗ್ರಿಕಲ್ಚರಿಸ್ಟ್ ಆಕ್ಟ್'

1930 ಪಂಜಾಬ್ 'ದಿ ಅಕೌಂಟ್ಸ್ ರೆಗ್ಯುಲೇಷನ್ ಆಕ್ಟ್'

1934 'ದಿ ಅಗ್ರಿಕಲ್ಚರಿಸ್ಟ್ ರಿಲೀಫ್ ಆಕ್ಟ್' ಎಕ್ಸೆಟ್ರಾ.

**ಜೀತ ಕಾರ್ಮಿಕರು ಮತ್ತು ಜೀತ ಪದ್ಧತಿ:**

ಭಾರತೀಯ ಸಮಾಜದಲ್ಲಿ ಅನಾದಿ ಕಾಲದಿಂದಲೂ ಹಲವಾರು ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿರುವುದನ್ನು ಗುರುತಿಸಬಹುದಾಗಿದೆ. ಉದಾ: ದೇವದಾಸಿ, ಜೀತ, ಸಹಗಮನ ಇತ್ಯಾದಿ. ಜೀತ ಪದ್ಧತಿಯು ಶತಶತಮಾನಗಳಿಂದ ಸತತವಾಗಿ ಆಚರಣೆಯಲ್ಲಿರುವ ಪದ್ಧತಿಯಾಗಿದೆ.

**ಅರ್ಥ:**

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಒಬ್ಬ ಯಜಮಾನನಿಗೆ ಕೆಲವರು ನಿರ್ದಿಷ್ಟ ನಿಯಮಗಳಿಗೆ ಬದ್ಧನಾಗಿ, ಹಗಲು ರಾತ್ರಿ ಎನ್ನದೇ ಸತತವಾಗಿ ಸೇವೆ ಸಲ್ಲಿಸುವುದನ್ನು 'ಜೀತ ಪದ್ಧತಿ' ಎನ್ನುತ್ತೇವೆ.

1976ರ ಜೀತ ಪದ್ದತಿ ನಿರ್ಮೂಲನಾ ಶಾಸನದನ್ವಯ ಈ ಪದ್ದತಿಯನ್ನು ಕೆಳಕಂಡಂತೆ ನಿರೂಪಿಸಬಹುದಾಗಿದೆ. 'ಜೀತಪದ್ಧತಿಯು ಒತ್ತಾಯದ ಇಲ್ಲವೇ ಬಲಾತ್ಕಾರದ ದುಡಿಮೆ ಪದ್ದತಿಯಾಗಿದ್ದು, ಸಾಲಗಾರನು ಸಾಹುಕಾರನೊಡನೆ ಒಪ್ಪಂದದ ಈ ಷರತ್ತುಗಳನ್ನು ಹೊಂದಿರುತ್ತಾನೆ.

* ಸಾಲಗಾರನು ತಾನು ಪಡೆದ ಸಾಲದ ಮೊತ್ತಕ್ಕೆ ಇಲ್ಲವೇ ತನ್ನ ವಂಶದ ಹಿರಿಯರು ಪಡೆದ ಸಾಲಕ್ಕೆ ಪ್ರತಿಯಾಗಿ, ನೀಡಬೇಕಾದ ಬಡ್ಡಿಗೆ ಪ್ರತಿಯಾಗಿ ಸಾಲ ಕೊಟ್ಟು ಸಾಹುಕಾರನ ಜೀತದಾಳಾಗುತ್ತಾನೆ
* ಸಾಂಪ್ರದಾಯಿಕ ಋಣಕ್ಕೆ ಅನುಗುಣವಾಗಿ ದಾಸ್ಯ
* ಪೂರ್ವಿಕರ ಸಾಲಕ್ಕೆ ಬದಲಾಗಿ
* ಪ್ರಮುಖವಾಗಿ ಒಂದು ನಿರ್ದಿಷ್ಟ ಜಾಗಿ ಇಲ್ಲವೇ ಸಮುದಾಯದಲ್ಲಿ ಹುಟ್ಟಿದ ಕಾರಣದಿಂದ

1975-76 ಮತ್ತು 1976-77ರ ಎಸ್.ಸಿ / ಎಸ್.ಟಿ ವರದಿಯ ಪ್ರಕಾರ, 'ಯಾವುದೇ ನಿರ್ದಿಷ್ಟ ಜಾತಿ ಇಲ್ಲವೇ ಸಮುದಾಯಕ್ಕೆ ಸೇರಿದ ಜನರನ್ನು ಸಾಲ ನೀಡುವ ಸಾಹುಕಾರನ ಒಪ್ಪಂದದ ಮೇರೆಗೆ, ಭಾಗಶ: ಇಲ್ಲವೇ ಪೂರ್ತಿಯಾಗಿ ಸೇವೆ ಸಲ್ಲಿಸಲು ಒತ್ತಾಯಿಸುವುದು. ಈ ರೀತಿಯ ಸೇವೆಗೆ ಕೂಲಿ ನೀಡದಿರುವುದು ಜೀತಪದ್ಧತಿಯ ವಾಖ್ಯದಡಿ ಬರುತ್ತದೆ.

ಇಲ್ಲಿ ಸಾಲ ಋಣ ಸಂಪೂರ್ಣವಾಗಿ ತೀರುವವರೆಗೆ ಜೀತದಾಳಿಗೆ ಬೇರೆಡೆ ಉದ್ಯೋಗ ಪಡೆಯುವ ಸ್ವಾತಂತ್ರ್ಯವಿರುವುದಿಲ್ಲ. ಜೀವನೋಪಾಯಕ್ಕೆ ಅನ್ಯ ಮಾರ್ಗ ಅವಲಂಬನೆಯಿಲ್ಲ ಹಾಗೂ ಮನಬಂದಂತೆ ಬೇರೆ ಕಡೆ ತಿರುಗಾಡುವ ಸ್ವಾತಂತ್ರ್ಯವಿಲ್ಲ.

ಒಂದು ವೇಳೆ ಸಾಲಗಾರನು ದೈಹಿಕವಾಗಿ ದುರ್ಬಲನಾದರೆ ಇಲ್ಲವೇ ಅಂಗವಿಕಲನಾದರೆ ಆತನ ತನ್ನ ಕುಟುಂಬದ ಇತರ ಸದಸ್ಯನನ್ನು ತನ್ನ ಪರವಾಗಿ ಕಳುಹಿಸಬಹುದು.

1981ರಲ್ಲಿ 26,17,000 ಜೀತದಾಳುಗಳಾಗಿದ್ದರು.

**ಜೀತಪದ್ಧತಿಯ ಲಕ್ಷಣಗಳು:**

1) ಸಮುದಾಯ / ಜಾತಿ ರಚನೆ: ಎಸ್.ಸಿ, ಎಸ್.ಟಿ, ಜನರದ್ದೇ ಇಲ್ಲಿ ಸಿಂಹಪಾಲು. ಪರಿಶಿಷ್ಟ ಜಾತಿಯ ಜನರಲ್ಲಿ ಶೇ.6.47, ಎಸ್.ಟಿ.ಯಲ್ಲಿ 9.6ರಷ್ಟು, ಒ.ಬಿ.ಸಿ.ಯಲ್ಲಿ ಶೇ.2.2 ಜೀತದಾಳುಗಳಾಗಿದ್ದಾರೆ.

2) ಲಿಂಗ: ಜೀತದಾಳುಗಳಲ್ಲಿ ಪುರುಷರೇ ಅಧಿಕ. ಕರ್ನಾಟಕದಲ್ಲಿ 91% ಪುರುಷ ಹಾಗೂ 9% ಮಹಿಳೆ.

3) ವಯೋರಚನೆ: ಅಧಿಕ ಸಂಖ್ಯೆಯ ಜನ ತರುಣರೇ ಆಗಿದ್ದಾರೆ. ಸರಾಸರಿ ವಯಸ್ಸು 21 ವರ್ಷ. ಶೇ.25 ಜೀತದಾಳುಗಳು 20 ವಯಸ್ಸಿನ ಒಳಗಡೆಯವರು.

4) ವೈವಾಹಿಕ ಸ್ಥಿತಿ: ಶೇ.21.7 ಅವಿವಾಹಿತರು. ಶೇ.78.3 ವಿವಾಹಿತರು, ಶೇ.0.6 ಇಧವೆಯರು.

5) ಶಿಕ್ಷಣ ಜೀತದಾಳುಗಳಲ್ಲಿ ಅಕ್ಷರಸ್ಥರ ಸಂಖ್ಯೆ ಕಡಿಮೆ. ಶೇ.74ರಷ್ಟು ಅನಕ್ಷರಸ್ಥರೇ. ಕುಟುಂಬದ ಸರಾಸರಿ ಜೀತದಾಳುಗಳ ಸಂಖ್ಯೆ 6.7

6) ಸಾಲ: ಶೇ.20 ಮಂದಿ ರೂ.500ರಿಂದ 1000 ಸಾಲ ಪಡೆದಿದ್ದು ಸಾಲ ಪಡೆದ ಗರಿಷ್ಠ ಹಣ ರೂ.9000/-, ಸರಾಸರಿ ಸಾಲ ರೂ.855/- ಬಡ್ಡಿ. ಶೇ.30.

7) ಸಾಲದ ಉದ್ದೇಶ: ಹಬ್ಬ ಹರಿದಿನ ಆಚರಣೆ, ಬಡತನ, ಬೆಳೆ ಇತ್ಯಾದಿ.

**ಯಜಮಾನರ ಲಕ್ಷಣಗಳು:**

* ಶೇ.25.4ರಷ್ಟು ಯಜಮಾನರು ಉಚ್ಚ ಜಾತಿಯವರು
* ಶೇ.86 ಯಜಮಾನರು ಉದ್ಯೋಗ ಕೃಷಿಯಾಗಿತ್ತು
* ಒಬ್ಬ ಯಜಮಾನ ಸರಾಸರಿ 4 ಜೀತದಾಳು ಹೊಂದಿದ್ದು
* ತಲಾ 10ಕ್ಕಿಂತ ಹೆಚ್ಚು ಪ್ರಾಣಿ ಹೊಂದಿದ್ದರು
* ತಲಾ 1 ಟ್ರ್ಯಾಕ್ಟರ್

**ಭೂ ಸುಧಾರಣೆಯ ಸಾಮಾಜಿಕ ಪರಿಣಾಮಗಳು:**

ಭೂ ರಹಿತ ಕಾರ್ಮಿಕರ ದುಸ್ಥಿತಿಯನ್ನು ದೂರಮಾಡಿ ಅವರು ಸಹ ನೆಮ್ಮದಿಯಿಂದ ಜೀವನ ಸಾಗಿಸುವಂತೆ ಮಾಡಲು ಭಾರತದ ಘನ ಸರ್ಕಾರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಆಯೋಜಿಸಿ ಜಾರಿಗೆ ತಂದಿದೆ. ಇವುಗಳಲ್ಲಿ ಭೂ ಸುಧಾರಣೆಯು ಕೂಡ ಒಂದಾಗಿದೆ.

ಸಂವಿಧಾನಕ್ಕೆ 1951ರ ಪ್ರಥಮ ತಿದ್ದುಪಡಿಯಲ್ಲಿಯೇ 9ನೇ ಅನುಸೂಚಿ ಸೇರಿಸಿ ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತರಲಾಯಿತು.

ಜಮೀನ್ದಾರಿ ವ್ಯವಸ್ಥೆ, ಪದ್ಧತಿಯನ್ನು ರದ್ದುಗೊಳಿಸಿ ಅದರಿಂದ ಆಗುತ್ತಿದ್ದ ಅನಿಷ್ಟಗಳನ್ನು ಕಾನೂನಿನ ಮೂಲಕ ಅಳಿಸಿ ಗೇಣಿದಾರರ ಹಿತರಕ್ಷಣೆಗೆ ಪೂರಕವಾದ ಕಾನೂನುಗಳು ಜಾರಿಗೆ ತಂದವು.

ಕೃಷಿಯ ಉತ್ಪಾದನೆ ಪ್ರಮುಖವಾಗಿ ತಂತ್ರಜ್ಞಾನ ಮತ್ತು ಸಾಂಸ್ಥಿಕ ಅಂಶಗಳನ್ನು ಅವಲಂಬಿಸಿದೆ.

'ಉಳುವವನೇ ಭೂಮಿಯ ಒಡೆಯ, ಭೂ ರಹಿತರಿಗೆ ಭೂಮಿ' ಎಂಬ ಘೋಷಣೆಯು ಭೂ ಸುಧಾರಣೆಯ ತತ್ವವಾಗಿದೆ.

**ತಾಂತ್ರಿಕ ಅಂಶಗಳು:**

ಕೃಷಿಯ ಉತ್ಪಾದನೆ ಮತ್ತು ವಿಧಾನಕ್ಕೆ ಬೇಕಾದ ಸಾಮಗ್ರಿಗಳ ಬಳಕೆಯನ್ನು ಒಳಗೊಂಡಿದೆ. ಇವುಗಳಲ್ಲಿ ಸುಧಾರಿತ ಬೀಜಗಳು, ಗೊಬ್ಬರ, ಆಧುನಿಕ ನೇಗಿಲು, ಟ್ರ್ಯಾಕ್ಟರ್‌ಗಳು, ಬೆಳೆ ಸಂರಕ್ಷಣೆ ಮುಂತಾದವುಗಳ ಸುಧಾರಣೆಯಾಗಿದೆ.

**ಸಾಂಸ್ಥಿಕ ಸುಧಾರಣೆ:**

ಬೇಸಾಯದಲ್ಲಿ ದುಡಿಯುವ ಜನರ ಪರವಾಗಿ ಭೂಮಿಯ ಪುನರ್ ವಿತರಣೆ (ರೀಡಿಸ್ಟ್ರಿಬ್ಯೂಷನ್ ಆಫ್ ಲ್ಯಾಂಡ್) ಮೂಲಕ, ಇದರಿಂದ ಗ್ರಾಮೀಣ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸಲು, ಉತ್ತೇಜನ ನೀಡುವಂತಹ ಉದ್ದೇಶವಾಗಿದೆ.

ಬ್ಯಾರಿ ಹಿಡುವಳಿ ಗಾತ್ರದಲ್ಲಿ ಸುಧಾರಣೆ, ಗೇಣಿದಾರರ ಸಂರಕ್ಷಣೆ, ಕಂದಾಯ ನಿಯಮಗಳನ್ನು ರೂಪಿಸುವುದು ಇತ್ಯಾದಿ.

**ಭೂ ಸುಧಾರಣೆಯ ವಿವಿಧ ಗುರಿ ಉದ್ದೇಶಗಳೆಂದರೆ:**

* ಮಧ್ಯವರ್ತಿಗಳ ನಿಷೇಧ
* ಗೇಣಿದಾರರ ಸುಧಾರಣೆ ಮತ್ತು ಭೂ ಒಡೆತನದ ಹಕ್ಕನ್ನು ನೀಡುವುದು.
* ಭೂ ಹಿಡುವಳಿ ಮೇಲೆ ನಿರ್ಬಂಧ ಹೇರುವುದು
* ಭೂ ಹಿಡುವಳಿ ಕ್ರೋಢೀಕರಣ

* ಸಹಕಾರಿ ವ್ಯವಸಾಯದ ಸಂಘಟನೆ

**ಇದರ ಸಾಮಾಜಿಕ ಪರಿಣಾಮಗಳೆಂದರೆ:**

* ಕೃಷಿ ವಲಯದಲ್ಲಿ ಕ್ರಾಂತಿಕಾರಿ ಬೆಳವಣಿಗೆಗೆ ಸಹಾಯಕವಾಯಿತು

* ಅಧಿಕ ಸಂಖ್ಯೆಯ ಗೇಣಿದಾರರು ಮತ್ತು ಸಣ್ಣ ಹಿಡುವಳಿಯ ರೈತರು ಭೂ ಮಾಲೀಕರಾಗಲು ಸಹಾಯ ಮಾಡಿತು

* ಜಮೀನ್ದಾರಿ ಪದ್ಧತಿಯ ಸಂಪೂರ್ಣ ನಿರ್ಮೂಲನೆಯಾಯಿತು

* ಜೀತಪದ್ಧತಿಯ ವಿನಾಶ ಇಲ್ಲಿಂದಲೇ ಆರಂಭವಾಯಿತು

* ಸ್ವಾವಲಂಬನೆಯ ಚಿತ್ತ ಆರಂಭ

**ಗಾಮೀಣಾಭಿವೃದ್ದಿ ಯೋಜನೆಗಳು:**

ಸ್ವಾತಂತ್ರ್ಯಾ ನಂತರ ಭಾರತೀಯ ರಾಷ್ಟ್ರೀಯ ಯೋಜನೆಯಲ್ಲಿ ಗ್ರಾಮೀಣ ಅಭಿವೃದ್ಧಿಗೆ ಮಹತ್ವಪೂರ್ಣ ಸ್ಥಾನ ಲಭ್ಯವಾಯಿತು. ಸ್ಥಾಪಿತವಾದಂತ ಯೋಜನಾ ಆಯೋಗವು ತನ್ನ ಪಂಚವಾರ್ಷಿಕ ಯೋಜನೆಗಳಲ್ಲಿ ಹಲವಾರು ಯೋಜನೆಗಳನ್ನು ಪ್ರಕಟಿಸಿ ಕಾರ್ಯರೂಪಕ್ಕೆ ತಂದಿತು. ಅವುಗಳೆಡೆಗೆ ಒಮ್ಮೆ ಬೆಳಕು ಚೆಲ್ಲುವುದಾದರೆ,

* ಸಮುದಾಯಿಕ ಅಭಿವೃದ್ಧಿ ಕಾರ್ಯಕ್ರಮ: 1952 (ಸಿ.ಡಿ.ಪಿ.): ಯೋಜನಾ ಆಯೋಗವು ತನ್ನ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒತ್ತನ್ನು ನೀಡಿತು.

ಇದು ಅಕ್ಟೋಬರ್ 2, 1952ರಂದು ಉದ್ಘಾಟನೆಗೊಂಡು, ಅಂದೇ ಭಾರತ ರಾಷ್ಟ್ರದಾದ್ಯಂತ ಜಾರಿಯಾಯಿತು.

* ಎನ್.ಇ.ಎಸ್ (ನ್ಯಾಷನಲ್ ಎಕ್ಸ್‌ಟೆನ್ಷನ್ ಸರ್ವಿಸ್)–1953

* ಐಎಎಪಿ – 1960–61

* ಐಎಡಿಪಿ – 1972

* ಹೆಚ್ ವಯ್ ವಿ ಪಿ – 1996

* ಡಿಪಿಎಪಿ – 1973

* ಸಿಡಿಪಿ – 1952

* ಹೆಚ್‌ಎಡಿಪಿ

* ಎಸ್‌ಎಫ್‌ಡಿಎ – 1971–72

* ಎನ್‌ಆರ್‌ಇಪಿ

* ಕೂಲಿಗಾಗಿ ಕಾಳು – 1977

**ಬದಲಾಗುತ್ತಿರುವ ಗ್ರಾಮೀಣ ಚಿತ್ರಣ:**

ನಮ್ಮ ಭಾರತ ದೇಶವು ಗ್ರಾಮ ಪ್ರಧಾನವಾದಂತಹ ದೇಶವಾಗಿದ್ದು, ಗ್ರಾಮಗಳು ದೇಶದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬುಗಳಾಗಿವೆ. ಗ್ರಾಮಗಳ ಪರಿವರ್ತನೆ ಆಂಗ್ಲರ ಆಳ್ವಿಕೆಯ ಅವಧಿಯಲ್ಲಿ ಪ್ರಾರಂಭವಾಗಿ ಪ್ರಸ್ತುತ ಗ್ರಾಮಗಳು ತೀವ್ರಗತಿಯಲ್ಲಿ ಪರಿವರ್ತನೆಗೊಳ್ಳುತ್ತಿವೆ. ನಂತರ ಕೈಗಾರೀಕರಣ, ಸರ್ಕಾರದ ಯೋಜನೆಗಳು, ಶಿಕ್ಷಣ ವೈಜ್ಞಾನಿಕ ಬೇಸಾಯ ಪದ್ದತಿ, ಸುಧಾರಿತವಾದ ಸಾರಿಗೆ ಸಂಪರ್ಕ, ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಗ್ರಾಮೀಣ ಚಿತ್ರಣ ಬದಲಾಗುತ್ತಿದೆ. ಅವುಗಳನ್ನು ನೋಡುವುದಾದರೆ,

* ಕೈಗಾರೀಕರಣವು ಗ್ರಾಮಗಳಲ್ಲಿ ಪ್ರಚಲಿತವಾಗಿದ್ದ ಕೌಟುಂಬಿಕ ಅರ್ಥ ವ್ಯವಸ್ಥೆಯ ಸ್ಥಾನದಲ್ಲಿ ಕಾರ್ಖಾನೆಯ ವ್ಯವಸ್ಥೆಯನ್ನು ತಂದಿದೆ. ಸರಳವಾಗಿದ್ದ ಗ್ರಾಮ ಜೀವನ ಹಾಗೂ ಗೃಹ ಕೈಗಾರಿಕಾ ಸ್ಥಾನದಲ್ಲಿ ಸಂಕೀರ್ಣವಾದ ನಗರ ಜೀವನ ಶೈಲಿ ಹಾಗೂ ಬೃಹತ್ ಪ್ರಮಾಣದ ವಸ್ತು ಉತ್ಪಾದನಾ ಪ್ರಕ್ರಿಯೆಗಳು ಚಾಲನೆಗೊಂಡಿದೆ.

* ಯಂತ್ರಗಳ ಬಳಕೆಯಿಂದ ಕಡಿಮೆ ವೆಚ್ಚದಲ್ಲೇ ಬೃಹತ್ ಪ್ರಮಾಣದ ವಸ್ತುಗಳ ಉತ್ಪಾದನೆ ಸಾಧ್ಯವಾಗಿದೆ.

* ನಗರ ಪ್ರದೇಶಗಳಿಗೆ ನಿರಂತರವಾದ ವಲಸೆ ಹೋಗುತ್ತಿರುವುದು ಒಂದು ಪ್ರಮುಖ ವಿದ್ಯಮಾನವಾಗಿದೆ. ಉದಾ: ಕರ್ನಾಟಕದ ಕಾಫಿ ಎಸ್ಟೇಟಿನಲ್ಲಿ ಕೊಡಗು ಕಾರ್ಮಿಕರು ದುಡಿಯುತ್ತಿದ್ದಾರೆ.

* ಕೃಷಿಯಿಂದ ಕೃಷಿಯೇತರ ಚಟುವಟಿಕೆಗೆ ಬದಲಾವಣೆ: ಎ.ಆರ್.ದೇಸಾಯಿ ಅವರು ಈ ವಿಚಾರದಲ್ಲಿ ಪ್ರಮುಖವಾದ 4 ಒಲವುಗಳನ್ನು ಗುರುತಿಸಿದ್ದಾರೆ.

1) ಜೀವನಾಧಾರಿತವಾದ ಕೃಷಿಯಿಂದ ವಾಣಿಜ್ಯೀಕರಣ ಕೃಷಿಗೆ ಮಾರ್ಪಾಡು

2) ಆಧುನಿಕ ತಂತ್ರಜ್ಞಾನದ ಪರಿಚಯದಿಂದ ಉಂಟಾದ ಮಾರ್ಪಾಡು

3) ಮಧ್ಯವರ್ತಿಗಳ ನಿರ್ಮೂಲನೆ

4) ವಿವಿಧ ಸಂಘ ಸಂಸ್ಥೆಗಳ ಉಗಮ

* ಸ್ಥಳೀಯ ಸರ್ಕಾರಗಳ ಆಸೆ ಈಡೇರಿದ್ದು 73 ಮತ್ತು 74ನೇ ತಿದ್ದುಪಡಿ ಅನ್ವಯ ತಮಗಾಗಿ, ತಮಗೋಸ್ಕರ, ತಮ್ಮಿಂದಲೇ ಸರ್ಕಾರ ನಡೆಸುವುದು ಸಾಧ್ಯವಾಗಿದೆ.

* ಔಪಚಾರಿಕ ಶಿಕ್ಷಣ, ವಯಸ್ಕರ ಶಿಕ್ಷಣ, ಪರಿಪೂರ್ಣ ಸಾಕ್ಷರತಾ ಆಂದೋಲನಗಳು ಗ್ರಾಮೀಣ ಜನತೆಯಲ್ಲಿ ಆಧುನಿಕ ಪ್ರಗತಿಪರ ಧೋರಣೆಗಳನ್ನು ಬೆಳೆಸುವಲ್ಲಿ ಗಣನೀಯ ಯಶಸ್ಸು ಸಾಧಿಸಿದೆ.

* ವೈಜ್ಞಾನಿಕ ಬೇಸಾಯ ಪದ್ಧತಿ ಅನುಸರಿಸಲು ಪ್ರಾರಂಭಿಸಿದ್ದು ಹಸಿರು ಕ್ರಾಂತಿಯನ್ನೇ ಸೃಷ್ಟಿ ಮಾಡಿದ್ದಾರೆ.

* ಜಾತಿ ವ್ಯವಸ್ಥೆ ಮಾಯವಾಗಿ ವರ್ಗ ವ್ಯವಸ್ಥೆಯ ಕಲ್ಪನೆ ರೂಢಿಗೆ ಬಂದಿದೆ.

* ಋಣಭಾರತ್ವ ಮತ್ತು ಜೀತಪದ್ಧತಿಯ ಕುರುಹುಗಳು ನಿರ್ಮೂಲನವಾಗಿವೆ.

* ಆಗ್ರಹ ಪೂರ್ವಕ ಕೋರಿಕೆ ಮಂಡಿಸುತ್ತಿದ್ದು, ಬೇಡಿಕೆಗಳ ಈಡೇರಿಸುವಿಕೆಗೆ ಒತ್ತಾಯಿಸುತ್ತಿದ್ದಾರೆ.

* ಸುಧಾರಿತದ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳು ಗ್ರಾಮೀಣ ಜನರ ಶೈಲಿಯಲ್ಲಿ ಮಹತ್ತರ ಬದಲಾವಣೆ ತಂದಿದೆ.

ಹೀಗೆ ಗ್ರಾಮೀಣ ಚಿತ್ರಣ ಸಂಪೂರ್ಣವಾಗಿ ಬದಲಾಗುತ್ತಿದೆ.

### ಗ್ರಂಥ ಋಣ

1) ಪಿ.ಯು.ಸಿ ಸಮಾಜಶಾಸ್ತ್ರ ಪಠ್ಯ ಪುಸ್ತಕಗಳು

2) ಸಾಮಾಜಿಕ ಸಮಸ್ಯೆಗಳು: ಎಸ್.ರಾಜಶೇಖರ

3) ಗ್ರಾಮೀಣ ಸಮಾಜ ಮತ್ತು ಸಮಸ್ಯೆಗಳು: ಕೆ.ಬೈರಪ್ಪ

4) ಡಿ.ಎಸ್.ಇ.ಆರ್.ಟಿ. ಪುಸ್ತಕಗಳು

5) ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ: ಹೆಚ್.ಆರ್.ಕೃಷ್ಣಯ್ಯಗೌಡ

6) ವಿಕಿಪಿಡಿಯಾ

7) ಸಮಾಜಶಾಸ್ತ್ರ ಒಂದು ಪರಿಚಯ: ಬಿ.ಶ್ರೀನಿವಾಸ್

# ಸಾಮಾನ್ಯ ಅಧ್ಯಯನ ಪತ್ರಿಕೆ – 1

# ಭಾಗ – 3

# ಅಧ್ಯಾಯ – 1

# ಭಾರತದ ಆರ್ಥಿಕತೆ

## ಸ್ವಾತಂತ್ರ್ಯ ನಂತರದ ಬೆಳವಣಿಗೆ:

ಸ್ವಾತಂತ್ರ್ಯ ನಂತರದ ದಿನಗಳಿಂದ 90ರ ದಶಕದವರೆಗೆ ದೇಶದ ಆರ್ಥಿಕತೆಯು ಕೃಷಿಯನ್ನು ಬಹುಪಾಲು ಅವಲಂಬಿಸಿತು. ಜಿಡಿಪಿಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅತಿ ಹೆಚ್ಚಿನ ಕೊಡುಗೆ ಅಂದರೆ ಶೇ.53ರಷ್ಟು ಕೃಷಿಯಿಂದ ದೊರೆಯುತ್ತಿತ್ತು. ನಂತರದಲ್ಲಿ ಕೈಗಾರಿಕೆ (ದ್ವಿತೀಯ ವಲಯ) ಸೇವಾವಲಯ (ತೃತೀಯ ವಲಯ)ಗಳು ಸ್ಥಾನ ಪಡೆದಿದ್ದವು. ಪಂಚವಾರ್ಷಿಕ ಯೋಜನೆಗಳಿಂದ, 1991ರ ಆರ್ಥಿಕ ಸುಧಾರಣೆಗಳಿಂದ ದೇಶದ ಆರ್ಥಿಕತೆಯು ಬದಲಾವಣೆಯ ಪರ್ವವನ್ನು ಎದುರಿಸಿತು. ಅಮೂಲಾಗ್ರವಾಗಿ ಅತಿ ಹೆಚ್ಚು ಕೊಡುಗೆ ಸಲ್ಲಿಸುತ್ತಿದ್ದ ಕೃಷಿ ವಲಯ, ಇಂದು ಜಿಡಿಪಿಗೆ 17ರಷ್ಟು ಕೊಡುಗೆಯನ್ನು ನೀಡುತ್ತದೆ. ಆದರೂ ಇಂದಿಗೂ ಅತಿ ಹೆಚ್ಚಿನ ಜನರನ್ನು ತನ್ನಲ್ಲಿ ತೊಡಗಿಸಿಕೊಂಡಿದೆ (56+7).

ಪ್ರಸ್ತುತ ಸೇವಾವಲಯ ಕೊಡುಗೆ ದೇಶದ ಆರ್ಥಿಕತೆಯನ್ನು ನಿಯಂತ್ರಿಸುತ್ತಿದೆ ಎನ್ನಬಹುದು. ಜಾಗತಿಕವಾಗಿ ಆರ್ಥಿಕ ಬೆಳವಣಿಗೆಯಲ್ಲಿ ಏರುಪೇರುಗಳಿದ್ದರೂ, 2014–15ರ ಅಂಕಿ ಅಂಶಗಳ ಪ್ರಕಾರ ದೇಶವು ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ (ಚೀನಾವನ್ನು ಹಿಂದಿಕ್ಕಿ) ಆರ್ಥಿಕತೆಯಾಗಿ ಹೊರಹೊಮ್ಮಿದೆ. 2011–12ರ ಮೂಲಾಧಾರ ವರ್ಷವನ್ನು ಪರಿಗಣಿಸಿ ಪ್ರಸ್ತುತ ದೇಶದ ಬೆಳವಣಿಗೆ ದರ 7.2–7.4ರ ಹಂತದಲ್ಲಿದೆ. ಬೆಳೆಯುತ್ತಿರುವ ಆರ್ಥಿಕತೆಗೆ ಪೂರಕವಾದ ವಾತಾರಣ ಸೃಷ್ಟಿಸುವುದು ಸರ್ಕಾರದ ಕರ್ತವ್ಯವಾಗಿದೆ.

## ಕೃಷಿಯ ಪಾತ್ರ:

ಭಾರತ ದೇಶದ 55%ರಷ್ಟು ಜನರ ಜೀವನಾಡಿ ಕೃಷಿಯಾಗಿದೆ. ಕೈಗಾರಿಕೆಗಳಿಗೆ ಮತ್ತು ಕೈಗಾರಿಕೇತರ ಕ್ಷೇತ್ರಕ್ಕೆ ಕಚ್ಚಾವಸ್ತು ಪೂರೈಕೆಯಲ್ಲಿ ಕೃಷಿಯು ಪ್ರಮುಖ ಪಾತ್ರ ವಹಿಸಿದೆ. ಸರ್ಕಾರದ ನೂತನ ಯೋಜನೆಗಳ, ಮತ್ತು ರೈತರ ಶ್ರಮದ ಫಲವಾಗಿ 2011–12ರಲ್ಲಿ ದಾಖಲೆಯ 259.29 ಮಿಲಿಯನ್ ಟನ್ ಆಹಾರ ಧಾನ್ಯಗಳ ಉತ್ಪಾದನೆಯಾಗಿದೆ. ಇದು ಪ್ರತಿವರ್ಷ ಅಲ್ಪ ಏರಿಕೆಯೊಂದಿಗೆ ಮುನ್ನಡೆದಿದೆ. ಕೃಷಿ ಅಭಿವೃದ್ಧಿ ಪಡಿಸಲು ಕೃಷಿ ಇಲಾಖೆ ಹಮ್ಮಿಕೊಂಡ ಯೋಜನೆಗಳು ಈ ಕೆಳಗಿನಂತಿವೆ.

### 1) ರಾಷ್ಟ್ರೀಯ ಕೃಷಿ ವಿಕಸನಾ ಯೋಜನೆ:

ಈ ಯೋಜನೆಯನ್ನು 2007–08ರ ಆರ್ಥಿಕ ವರ್ಷದಲ್ಲಿ ಜಾರಿಗೊಳಿಸಲಾಯಿತು. ಈ ಯೋಜನೆಯಂತೆ 4%ರಷ್ಟು ಕೃಷಿ ಬೆಳವಣಿಗೆ ಸಾಧಿಸಲು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರದಲ್ಲಿ 25000 ಕೋಟಿ ಹೂಡಿಕೆ ಆಯಿತು.

### 2) ರಾಷ್ಟ್ರೀಯ ಆಹಾರ ಭದ್ರತಾ ಮಿಷನ್:

ಈ ಯೋಜನೆಯನ್ನು 2007–08ರಲ್ಲಿ ಜಾರಿಗೆ ತರಲಾಯಿತು. ಇದರ ಗುರಿ ಅಕ್ಕಿ, ಗೋಧಿ, ಬೇಳೆಕಾಳುಗಳ ಉತ್ಪಾದನೆಯನ್ನು 20 ಮಿಲಿಯನ್ ಟನ್‌ನಷ್ಟು ಹೆಚ್ಚಿಸುವುದು.

### 3) ರಾಷ್ಟ್ರೀಯ ತೋಟಗಾರಿಕಾ ಮಿಷನ್:

2005–06ರಿಂದ 18 ರಾಜ್ಯ, 3 ಕೇಂದ್ರಾಡಳಿತ ಪ್ರದೇಶದ 382 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಯಿತು. ತೋಟಗಾರಿಕೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಿತ್ತು. ಈ ಮೂಲಕ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಭಾರತ ದ್ವಿತೀಯ ಸ್ಥಾನ ಪಡೆದಿದೆ.

**4) ರಾಷ್ಟ್ರೀಯ ಬಂಬೂ ಮಿಷನ್:**

2006–07 ಜಾರಿ.

**5) ಸಮಗ್ರ ಕೀಟ ನಿರ್ವಹಣೆ**

**6) ಕೃಷಿ ಸಾಲ:**

ಪ್ರಸ್ತುತ ಕೃಷಿ ಸಾಲದ ಗುರಿಯನ್ನು 8 ಲಕ್ಷ ಕೋಟಿಗೆ ನಿಗದಿಪಡಿಸಲಾಗಿದೆ.

**7) ಕಿಸಾನ್ ಕ್ರೆಡಿಟ್ ಕಾರ್ಡ್:**

1998–99ರಲ್ಲಿ ಜಾರಿಗೆ ಬಂದಿತು. ಆರ್‌ಆರ್‌ಬಿ, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳ ಮೂಲಕ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. ರೈತರ ಅಪಘಾತದ ಸಾವಿಗೆ ರೂ.50,000ಗಳು, ಮತ್ತು ಖಾಯಂ ಅಂಗವೈಕಲ್ಯಕ್ಕೆ 25,000 ವಿಮೆಯನ್ನು ಇದು ನೀಡುತ್ತದೆ. ಈ ಕಾರ್ಡನ ಅವಧಿ 5 ವರ್ಷಗಳು.

**8) ಕಿಸಾನ್ ಮಣ್ಣಿನ ಕಾರ್ಡ್:**

2014–15ರಲ್ಲಿ ಜಾರಿಗೆ ಬಂದಿತು. ಇದು ಮಣ್ಣಿನ ಕುರಿತಾದ ಮಾಹಿತಿ ಕಾರ್ಡನ್ನು ನೀಡುತ್ತದೆ. ಕಾಲ ಕಾಲಕ್ಕೆ ರೈತರಿಗೆ ಸಲಹೆ, ಸೂಚನೆ ನೀಡಲು, ಮಣ್ಣಿನ ಸಂರಕ್ಷಣೆ, ಬೆಳೆಯ ಮಾಹಿತಿ ನೀಡುವ ಉದ್ದೇಶವನ್ನು ಇದು ಹೊಂದಿದೆ.

**9) ಕಡಿಮೆ ಬಡ್ಡಿದರದ ಕೃಷಿ ಸಾಲ, ಶೂನ್ಯ ಬಡ್ಡಿದರ ಸಾಲ:**

ಮೂರು ಲಕ್ಷದವರೆಗೆ 7%ನಷ್ಟು ಬಡ್ಡಿದರ, ಸರಿಯಾಗಿ ಮರುಪಾವತಿ ಮಾಡಿದರೆ ಸರ್ಕಾರದಿಂದ 3%ರ ಬಡ್ಡಿ ದರ ವಾಪಸ್ ಪಡೆಯುವ ಯೋಜನೆ ಇದಾಗಿದೆ.

**10) ಕೃಷಿ ಮಾರ್ಕೆಟಿಂಗ್:**

ಸ್ಟಾಂಡರ್ಡೈಸೇಷನ್ ಅಂಡ್ ಗ್ರೈಂಡಿಂಗ್.

**11) ಎಜಿಎಂಎಆರ್‌ಕೆ**

**12) ಗ್ರಾಮೀಣ ಗೋಡೋನ್ಸ್ ಸ್ಕೀಮ್**

**13) ಮಳೆಯಾಧಾರಿತ ಪ್ರದೇಶಾಭಿವೃದ್ಧಿ ಯೋಜನೆ**

**14) ಕೋಲ್ಡ್ ಸ್ಟೋರೇಜ್**

**15) ಬರ ನಿರ್ವಹಣೆ – ಎನ್‌ಡಿಎಂಎ**

**16) ಕೃಷಿ ಆಧುನೀಕರಣ, ಯಾಂತ್ರೀಕರಣ**

**17) ಕೃಷಿಯಲ್ಲಿ ರಾಷ್ಟ್ರೀಯ ಇ–ಗವರ್ನನ್ಸ್ ಯೋಜನೆ**

**18) ಎಸ್‌ಎಂಎಸ್ ಪೋರ್ಟಲ್**

**19) ಕಿಸಾನ್ ಕಾಲ್ ಸೆಂಟರ್**

**20) ಮಿನಿಮಮ್ ಸಪೋರ್ಟ್ ಪ್ರೈಸ್**

**21) ಕರ್ನಾಟಕದಲ್ಲಿ ಕೃಷಿ ಭಾಗ್ಯ:**

ಭೂ ಚೇತನ, ಸುವರ್ಣ ಭೂಮಿ ಯೋಜನೆ ಅಗ್ರಿ–ಜಿಐಎಂ, ಉಚಿತ ವಿದ್ಯುತ್, ಸಮಗ್ರ ಬೃಹತ್ ನೀರಾವರಿ ಯೋಜನೆ.

**22) ಹನಿ ನೀರಾವರಿ:**

ಹನಿ ನೀರಾವರಿ ತುಂತುರು ನೀರಾವರಿಗೆ ಪ್ರೋತ್ಸಾಹ ಧನ.

**23) ಗಂಗಾ ಕಲ್ಯಾಣ ಯೋಜನೆ**

**24) ಯಂತ್ರೋಪಕರಣಗಳ ಖರೀಧಿಗೆ ಪ್ರೋತ್ಸಾಹ ಧನ.**

ಇದಲ್ಲದೆ ಸ್ವಾತಂತ್ರ್ಯಾ ನಂತರ 1966–69ರಲ್ಲಿ ಹಸಿರು ಕ್ರಾಂತಿ ಮತ್ತು ಪ್ರಸ್ತುತವಿರುವ ಎವರ್ ಗ್ರೀನ್ ರಿವೊಲ್ಯೂಷನ್ ಕೃಷಿಯನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿದೆ. ಕೃಷಿಯಲ್ಲಿ ಶೇ.4 ಗುರಿ ಸಾಧಿಸಿ, ಮುಂದೆ ಸಾಗುವುದೇ ನಮ್ಮ ಮುಂದಿರುವ ಸವಾಲು.

**ಕೈಗಾರಿಕೆ:**

1948ರ ಕೈಗಾರಿಕಾ ನೀತಿಯು ಕೈಗಾರಿಕಾ ಕ್ರಾಂತಿಗೆ ನಾಂದಿಯಾಯಿತು. 1956ರ ಕಂಪನಿ ಕಾಯ್ದೆ, ಇತ್ತೀಚಿನ 2013ರ ಕಂಪನಿ ಕಾಯ್ದೆ ಕೈಗಾರಿಕಾ ಪ್ರಗತಿಗೆ ಮೈಲಿಗಲ್ಲುಗಳಾಗಿವೆ. 1991ರ ಆರ್ಥಿಕ ನೀತಿಗಳು ಕೈಗಾರಿಕಾ ಪ್ರಗತಿಯಲ್ಲಿ ಆದ ಬೃಹತ್ ನೆಗೆತ ಎನ್ನಬಹುದು. 2011ರ ರಾಷ್ಟ್ರೀಯ ಮ್ಯಾನುಫ್ಯಾಕ್ಚರಿಂಗ್ ನೀತಿ ಇವೆಲ್ಲಕ್ಕೂ ಉತ್ತಮ ತಳಹದಿಯಾಗಿದೆ.

**ಸಣ್ಣ ಕೈಗಾರಿಕೆಗಳು:**

2006ರ ಕಾಯ್ದೆ ಅನ್ವಯ ಕೈಗಾರಿಕೆಗಳನ್ನು ಅತೀ ಸಣ್ಣ, ಮಧ್ಯಮ ಕೈಗಾರಿಕೆಗಳೆಂದು ಗುರುತಿಸಲಾಗಿದೆ. ಪ್ರಸ್ತುತ 20 ವಸ್ತುಗಳನ್ನು ಸಣ್ಣ ಕೈಗಾರಿಕೆಗೆ ಮೀಸಲು ಇರಿಸಲಾಗಿದೆ.

**ಕೈಗಾರಿಕೆಯಿಂದ ಜಿಡಿಪಿಗೆ ಕೊಡುಗೆ:**

**ರಾಷ್ಟ್ರೀಯ ಹೂಡಿಕೆ ಮತ್ತು ನಿರ್ಮಾಣ ವಲಯಗಳು:**

1) ಡೆಲ್ಲಿ, ಮುಂಬಯಿ ಇಂಡಸ್ಟ್ರಿಯಲ್ ಕಾರ್‌ಡಿಯರ್

2) ಚೆನ್ನೈ ಬೆಂಗಳೂರು ಇಂಡಸ್ಟ್ರಿಯಲ್ ಕಾರ್‌ಡಿಯರ್ – ಜಪಾನ್.

3) ಬೆಂಗಳೂರು ಮುಂಬಯಿ ಎಕ್‌ನಾಮಿಕ್ ಕಾರಿಡಿಯರ್ – ಯೂಕೆ.

4) ಅಮೃತ್‌ಸರ್–ದೆಹಲಿ–ಕೊಲ್ಕತ್ತಾ ಇಂಡಸ್ಟ್ರಿಯಲ್ ಕಾರ್‌ಡಿಯರ್.

**ವಿದೇಶಿ ಹೂಡಿಕೆಯ ಒಳಹರಿವು ಎಫ್‌ಡಿಐ:**

2003–04–05 – $3.22 ಬಿಲಿಯನ್ (ಯೂಎಸ್) – ಕಳೆದ ಸಾಲಿನ 47ರಷ್ಟು, 2006–07 – 12.49 ಬಿಲಿಯನ್ $125%ರಷ್ಟು ಹೆಚ್ಚಳವಾಗಿದೆ. 2011–12ರಲ್ಲಿ 35.12 ಯೂಎಸ್ ಬಿಲಿಯನ್ $ ಶೇ.64ರಷ್ಟು ಹೆಚ್ಚಾಗಿದೆ.

ಕೈಗಾರಿಕಾ ಪ್ರಗತಿಗಾಗಿ ಆನ್‌ಲೈನ್–ಸಿಂಗಲ್ ವಿಂಡೋ ವ್ಯವಸ್ಥೆ (ಏಕಗವಾಕ್ಷಿ), ತೆರಿಗೆಗಳಲ್ಲಿ ಬದಲಾವಣೆ ನೀತಿನಿಯಮಗಳನ್ನು ಸರಳೀಕರಣಗೊಳಿಸುತ್ತಿದೆ.

ಈಶಾನ್ಯ ಕೈಗಾರಿಕಾ ಮತ್ತು ಹೂಡಿಕೆ ಪ್ರೋತ್ಸಾಹ ನೀತಿ 2007.

* ಎಂಎಸ್‌ಎಂಇ – ಒಟ್ಟು 45%ರಷ್ಟು ಉತ್ಪಾದನೆ.

* ರಫ್ತಿನಲ್ಲಿ ಒಟ್ಟು 40% ಪಾಲು.

* ಒಟ್ಟು 36.17 ಮಿಲಿಯನ್ ಘಟಕಗಳು, 81 ಮಿ ಉದ್ಯೋಗ.

* ಇವುಗಳ ಅಭಿವೃದ್ದಿಗಾಗಿ ಕ್ರೆಡಿಟ್ ಲಿಂಕ್ಡ್ ಕಾಮೆಟಲ್ ಸಬ್ಸಿಡಿ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ.

* ಜೊತೆಗೆ ಕ್ರೆಡಿಟ್ ಗ್ಯಾರಂಟಿ ಫಂಡ್ ಸ್ಕೀಮ್ ಫಾರ್ ಎಂಎಸ್‌ಎಂಇ ಗಳಿಗೆ.
* ಮೈಕ್ರೋ ಫೈನಾನ್ಸ್ ಕಾರ್ಯಕ್ರಮ
* ರಾಜೀವ್ ಗಾಂಧಿ ಉದ್ಯಮಿ ಮಿತ್ರ ಯೋಜನೆ.
* ಮಾರ್ಕೆಟಿಂಗ್ ಅಸಿಸ್ಟೆನ್ಸ್ ಸ್ಕೀಮ್.
* ಗ್ರಾಡಿಂಗ್ ರೇಟಿಂಗ್ ಸ್ಕೀಮ್.
* ಮಹಾರತ್ನ (2009), ನವರತ್ನ (1997), ಮಿನಿರತ್ನ (1997) ಯೋಜನೆ.

**ತೃತೀಯ ವಲಯ:**

ದೇಶದ ಆರ್ಥಿಕ ಅಭಿವೃದ್ಧಿಗೆ ನೇರವಾದ ಕೊಡುಗೆ ನೀಡುವ ರಚನೆಗಳನ್ನು ಆರ್ಥಿಕ ಮೂಲ ಸೌಲಭ್ಯ ಎನ್ನುವರು. ಮೂಲ ಸೌಲಭ್ಯ ಎಂಬುದು ಅಥವಾ ತೃತೀಯ ವಲಯ ಎಂಬುದು ಅರ್ಥವ್ಯವಸ್ಥೆಯ ಅಡಿಪಾಯವಾಗಿದೆ. ಇದು ಅರ್ಥವ್ಯವಸ್ಥೆಯ ಎಲ್ಲ ಚಟುವಟಿಕೆಗಳ ಮೂಲ ತೃತೀಯ ವಲಯದಲ್ಲಿ 2 ಗುಂಪುಗಳಿವೆ.

1) ಆರ್ಥಿಕ ಮೂಲ ಸೌಲಭ್ಯಗಳು: ಸಾರಿಗೆ, ಸಂಪರ್ಕ, ಶಕ್ತಿ, ಬ್ಯಾಂಕಿಂಗ್, ನೀರಾವರಿ ಮುಂತಾದವು.

2) ಸಾಮಾಜಿಕ ಮೂಲ ಸೌಲಭ್ಯಗಳು: ಶಿಕ್ಷಣ, ಆರೋಗ್ಯ, ಗೃಹ ನಿರ್ಮಾಣ.

**ಅರ್ಥ ವ್ಯವಸ್ಥೆಯಲ್ಲಿ ಸಾರಿಗೆಯ ಮಹತ್ವ:**

* ಮಾರುಕಟ್ಟೆ ವಿಸ್ತರಣೆ
* ಉತ್ಪಾದನೆಗೆ ಸಹಾಯ
* ಪ್ರಾದೇಶಿಕ ಕ್ರಮ ಯೋಜನೆ
* ಬೆಲೆಯಲ್ಲಿ ಸ್ಥಿರತೆ
* ಸಮತೋಲನ ಅಭಿವೃದ್ಧಿ
* ಕೃಷಿ ಮತ್ತು ಕೈಗಾರಿಕಾಭಿವೃದ್ಧಿ
* ಉದ್ಯೋಗ ಸೃಷ್ಟಿ
* ಸಂಪನ್ಮೂಲಗಳ ಸದ್ಬಳಕೆ
* ರಾಷ್ಟ್ರ ರಕ್ಷಣೆ
* ನೈಸರ್ಗಿಕ ವಿಕೋಪಗಳ ನಿರ್ವಹಣೆ
* ದಕ್ಷ ಆಡಳಿತ
* ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ

## ಭಾರತದಲ್ಲಿ ಬಡತನ ಮತ್ತು ಅಸಮಾನತೆ:

ಬಡತನ ಮತ್ತು ಅಸಮಾನತೆ ಇವು ಭಾರತ ಅಭಿವೃದ್ಧಿ ಹೊಂದಲು ಪ್ರಮುಖ ಅಡೆತಡೆಗಳಾಗಿವೆ. ಬಡತನೆಂಬುದು ಕೇವಲ ಆರ್ಥಿಕ ಸ್ಥಿತಿಯಾಗಿರದೇ ಅದು ಮಾನವರ ಸ್ಥಿತಿಯಾಗಿದೆ. ದೇಶದಲ್ಲಿ ಯಥೇಚ್ಚವಾಗಿ ಮಾನವ ಸಂಪನ್ಮೂಲವಿದ್ದರೂ ಕೂಡ ನಿರುದ್ಯೋಗದ ಕಾರಣದಿಂದ ಬಡತನ ಹೆಚ್ಚಾಗುತ್ತಿದೆ. ಮನುಷ್ಯ ತಮ್ಮ ಕನಿಷ್ಠ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಅಸಾಧ್ಯವಾಗದ ಸ್ಥಿತಿಯೇ ಬಡತನವಾಗಿದೆ. ಇದು ಮೂಲಭೂತ ಅವಶ್ಯಕತೆಗಳಾದ ಆಹಾರ, ನೀರು, ವಸತಿಯನ್ನು ಹೊಂದದ ಸ್ಥಿತಿಯಾಗಿದೆ. ಬಡತನ ರೇಖೆ ಎಂದರೆ

ಎಫ್‌ಎಓ ನ ಮಹಾನಿರ್ದೇಶಕರಾಗಿದ್ದ ಬಾಯಿಂಡರ್‌ರವರು 1945ರಲ್ಲಿ ಮೊದಲ ಬಾರಿಗೆ ಬಡತನ ರೇಖೆಯನ್ನು ವ್ಯಾಖ್ಯಾನಿಸಿದರು. ಇದರ ಪ್ರಕಾರ ಒಬ್ಬ ವ್ಯಕ್ತಿ ಒಂದು ದಿನಕ್ಕೆ 2300 ಕಿಲೋ ಆಹಾರಕ್ಕಿಂತ ಕಡಿಮೆ ಸೇವಿಸುತ್ತಿದ್ದರೆ ಆತ ಬಡತನ ರೇಖೆಗಿಂತ ಕೆಳಗಿದ್ದಾನೆಂದು ಹೇಳಲಾಗುತ್ತದೆ.

ಭಾರತದ ಯೋಜನಾ ಆಯೋಗದ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 2400 ಕ್ಯಾಲೋರಿ ಮತ್ತು ನಗರ ಪ್ರದೇಶದಲ್ಲಿ 2100 ಕ್ಯಾಲೋರಿಗಿಂತ ಕಡಿಮೆ ಆಹಾರ ಅನುಭೋಗಿಸುವರೆಲ್ಲ ಬಡವರು ಎಂದು ಹೇಳಲಾಗುತ್ತದೆ.

**ಭಾರತದಲ್ಲಿಯ ಬಡತನ ಪ್ರಮಾಣ:**

* 2007–08ರಲ್ಲಿ 26%

* 2008–09ರಲ್ಲಿ 27%

* 2009–10ರ ಸುರೇಶ ತೆಂಡೂಲ್ಕರ್ (ಕೇಂದ್ರೀಯ ಅಂಕಿ ಅಂಶಗಳ ಸಮಿತಿ ಅಧ್ಯಕ್ಷರು) ವರದಿ ಪ್ರಕಾರ 37.2%

* ಕರ್ನಾಟಕದಲ್ಲಿ 20.04%

* 2011ರ ವರದಿಯ ಪ್ರಕಾರ 32%

* ಆಯೋಗದ ಮಾನದಂಡದ ಪ್ರಕಾರ (ಸಿ.ರಂಗರಾಜನ್ ವರದಿಯ ಪ್ರಕಾರ 2011ರಲ್ಲಿ 29.5%) ನಗರದಲ್ಲಿ 42ರ ಗ್ರಾಮೀಣದಲ್ಲಿ 37 ರೂ.ಗಳಿಂದ ಕಡಿಮೆ ಖರ್ಚು ಮಾಡುವವರು.

**ಬಡತನಕ್ಕೆ ಕಾರಣಗಳು:**

* ಮಿತಿ ಮೀರಿ ಏರುತ್ತಿರುವ ಜನಸಂಖ್ಯೆ

* ಅನಕ್ಷರತೆ

* ನಿರುದ್ಯೋಗ

* ಅತಿವೃಷ್ಟಿ ಮತ್ತು ಅನಾವೃಷ್ಟಿ

* ಹಣದುಬ್ಬರ

* ಹಿಂದುಳಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆ

* ಪ್ರಾದೇಶಿಕ ಅಸಮತೋಲನ

* ಕೃಷಿಯ ಮೇಲೆ ಹೆಚ್ಚು ಅವಲಂಬಿತರು

* ಸಾಮಾಜಿಕ ಮತ್ತು ರಾಜಕೀಯ ಕಾರಣಗಳು

ಭಾರತದಲ್ಲಿ ಅತಿ ಹೆಚ್ಚು ಬಡತನ ರೇಖೆಗಿಂತ ಕೆಳಗಿನವರು ಓರಿಸ್ಸಾದಲ್ಲಿದ್ದಾರೆ. ಅತಿ ಕಡಿಮೆ ಬಡತನ ರೇಖೆಗಿಂತ ಕೆಳಗಿರುವವರು ಗೋವಾದಲ್ಲಿದ್ದಾರೆ. ಸಿ.ರಂಗರಾಜನ್ ವರದಿ ಪ್ರಕಾರ ಭಾರತದಲ್ಲಿ ಪ್ರಸ್ತುತ ಶೇ.29.5ರಷ್ಟು ಬಡತನವಿದೆ.

# ಅಧ್ಯಾಯ – 2

# ಭಾರತ ಮತ್ತು ಅಂತರಾಷ್ಟ್ರೀಯ ಆರ್ಥಿಕ ಸಂಬಂಧಗಳು

## ಬೆಳವಣಿಗೆ ಹಾಗೂ ವ್ಯಾಪಾರ ಗಾತ್ರ, ಆಮದು ಹಾಗೂ ರಫ್ತು ಸಂಯೋಜನೆ:

ಆಮದು ಮತ್ತು ರಫ್ತು ಪರಿಕಲ್ಪನೆ ಬರುವುದು ವಿದೇಶಿ ವ್ಯಾಪಾರದಲ್ಲಿ. ನಾವು ಎಷ್ಟೇ ಸ್ವಾವಲಂಬನೆ ಸಾಧಿಸಿದರೂ ಕೃಷಿ ವಲಯಕ್ಕೆ ಸಂಬಂಧಿಸಿದಂತೆ 2%ರಷ್ಟು ಆಮದು ಮಾಡಿಕೊಳ್ಳಬೇಕಾಗಿದೆ.

**ಬೆಳವಣಿಗೆ ಹಾಗೂ ವ್ಯಾಪಾರ:**

ವ್ಯಾಪಾರವು ಮುಖ್ಯ ಆರ್ಥಿಕ ಚಟುವಟಿಕೆಯಾಗಿದ್ದು ಬೆಳವಣಿಗೆಯನ್ನು ಪ್ರೇರೇಪಿಸುತ್ತದೆ. ವ್ಯಾಪಾರ ದೇಶದ ಅಭಿವೃದ್ಧಿಗೆ, ಬೆಳವಣಿಗೆಗೆ ಎಂಜಿನಿನಂತೆ ಇದ್ದು, ಹಾಗೆ ವ್ಯಾಪಾರ ಆರ್ಥಿಕ ಚಟುವಟಿಕೆಯನ್ನು ಪ್ರೇರೇಪಿಸುತ್ತದೆ. ರೆಗ್ನರ್ ನರ್ಕ್ಸ್ ಪ್ರಕಾರ 1%ರಷ್ಟು ವ್ಯಾಪಾರದ ಅಭಿವೃದ್ಧಿ 2%ರಷ್ಟು ಆರ್ಥಿಕ ಬೆಳವಣಿಗೆಯನ್ನು ಪ್ರಚೋದಿಸುತ್ತದೆ.

**ವ್ಯಾಪಾರದಿಂದಾಗುವ ಪ್ರಯೋಜನಗಳು:**

1) ಹೆಚ್ಚುವರಿ ಉತ್ಪಾದನೆಯ ಪೂರೈಕೆ

2) ಆಮದಿನ ಮೂಲಕ ಉತ್ಪಾದನೆ ಮತ್ತು ಅನುಭೋಗದ ನಡುವೆ ಅಂತರವನ್ನು ತುಂಬುತ್ತದೆ

3) ವಿದೇಶಿ ರಾಷ್ಟ್ರಗಳ ಜೊತೆಗೆ ಉತ್ತಮ ಸಂಬಂಧವನ್ನು ಹೊಂದುತ್ತದೆ

4) ನಮ್ಮ ಬೆಳವಣಿಗೆ ದರವನ್ನು ಪ್ರೇರೇಪಿಸುತ್ತದೆ

5) ವಿಭಿನ್ನ ಸರಕು ಮತ್ತು ಸೇವೆಗಳು ಒಂದೇ ಪ್ರದೇಶದಲ್ಲಿ ಲಭ್ಯವಾಗುವ ಬಂಡವಾಳ ಮತ್ತು ತಂತ್ರಜ್ಞಾನದ ನೆರವು.

6) ಆರೋಗ್ಯಯುತ ಪೈಪೋಟಿಯನ್ನು ಹೆಚ್ಚಿಸುವುದು.

7) ಉತ್ಪಾದನಾ ವೆಚ್ಚವನ್ನು ತಗ್ಗಿಸುವುದು.

8) ನೈಸರ್ಗಿಕ ತಾರತಮ್ಯವನ್ನು ಹೋಗಲಾಡಿಸಲು ಆಮದು ಮತ್ತು ರಫ್ತು ಅವಶ್ಯಕವಾಗಿದೆ.

## ಭಾರತ ವಿದೇಶಿ ವ್ಯಾಪಾರದ ಗಾತ್ರ, ಸಂರಚನೆ, ದಿಕ್ಕು:

1950ರ ಅವಧಿಯಲ್ಲಿ ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಭಾರತದ ಗಾತ್ರ 1.78%ರಷ್ಟು ಇತ್ತು. ಇದರಲ್ಲಿ ರಫ್ತಿನ ಪ್ರಮಾಣ 1.85, ಆಮದಿನ ಪ್ರಮಾಣ 1.71ರಷ್ಟಿತ್ತು. ಇದು ಮುಂದೆ 1999ರ ಅವಧಿಯಲ್ಲಿ 0.53 ಅದರಲ್ಲಿ ರಫ್ತು–50, ಆಮದು 0.56 ರಷ್ಟಿತ್ತು. ಮುಂದುವರೆದು 2013–14 ಅವಧಿಯಲ್ಲಿ 2.1ರಷ್ಟಾಗಿ ಅದರಲ್ಲಿ ರಫ್ತು 1.7ರಷ್ಟು ಮತ್ತು ಆಮದು 2.5 ಆಗಿತ್ತು. ಪ್ರಸ್ತುತ ಭಾರತವು ಜಾಗತಿಕವಾಗಿ ಆಮದಿನಲ್ಲಿ 10ನೇ ಸ್ಥಾನದಲ್ಲಿದ್ದು, ರಫ್ತಿನಲ್ಲಿ 19ನೇ ಸ್ಥಾನದಲ್ಲಿದೆ.

**ಭಾರತದ ವಿದೇಶಿ ವ್ಯಾಪಾರದ ಸಂರಚನೆ:**

ಭಾರತದ ವಿದೇಶಿ ವ್ಯಾಪಾರದ ಸಂರಚನೆಯು ಈ ಕೆಳಗಿನಂತಿದೆ.

1) ರಫ್ತಿನ ಸಂರಚನೆ: ಭಾರತದ ರಫ್ತಿನ ಸಂರಚನೆಯನ್ನು 3 ಭಾಗಗಳಾಗಿ ವಿಂಗಡಿಸುತ್ತದೆ.

1) ಪ್ರಾಥಮಿಕ ಉತ್ಪನ್ನಗಳು

2) ತಯಾರಿಕಾ ಉತ್ಪನ್ನಗಳು

3) ಇತರೆ ಉತ್ಪನ್ನಗಳು

ತಯಾರಿಕಾ ಉತ್ಪನ್ನಗಳಲ್ಲಿ, ಸಾಂಪ್ರಧಾಯಿಕ, ಕೈಗಾರಿಕಾ ಉತ್ಪನ್ನಗಳು ಬರುತ್ತವೆ. ಅವುಗಳು–

* ಕರಕುಶಲ ಉತ್ಪನ್ನಗಳು
* ರಾಸಾಯನಿಕಗಳು
* ಇತರೆ ತಯಾರಿಕಾ ಉತ್ಪನ್ನಗಳಿವೆ.

ಪ್ರಾಥಮಿಕ ಉತ್ಪನ್ನಗಳಲ್ಲಿ ಕೃಷಿ ಉತ್ಪನ್ನಗಳು.

* ಕೃಷಿ ಉತ್ಪನ್ನಗಳು – ಕಾಫಿ, ಟೀ, ತಂಬಾಕು, ಗೋಡಂಬಿ, ಸಾಂಬಾರು ಪದಾರ್ಥ, ಕಚ್ಚಾ ಹತ್ತಿ, ಅಕ್ಕಿ, ಮೀನು ಮತ್ತು ಮೀನಿನ ಉತ್ಪನ್ನಗಳು ಮಾಂಸ, ಹಣ್ಣುಗಳು.

ಕೈಗಾರಿಕಾ ತಯಾರಿಕಾ ಉತ್ಪನ್ನಗಳು – ಹತ್ತಿ, ಜವಳಿ, ಸಿದ್ದ ಉಡುಪುಗಳು, ಸೆಣಬಿನ ಉತ್ಪನ್ನಗಳು, ಚರ್ಮದ ಉತ್ಪನ್ನಗಳು, ಕರಕುಶಲ ವಸ್ತುಗಳು, ಬೆಲೆ ಬಾಳುವ ಆಭರಣಗಳು ಮತ್ತು ಹರಳುಗಳು.

ಇತರೆ ತಯಾರಿಕಾ ಉತ್ಪನ್ನಗಳು – ಕಬ್ಬಿಣ ಮತ್ತು ಉಕ್ಕಿನ ಪದಾರ್ಥಗಳು, ಸಾರಿಗೆ ಸಲಕರಣೆಗಳು, ಸಣ್ಣ ಯಂತ್ರಗಳು, ಇತ್ಯಾದಿ ಖನಿಜ ತೈಲಗಳು.

ಆಹಾರ ಮತ್ತು ಆಹಾರ ಸಂಬಂಧಿ ಉತ್ಪನ್ನಗಳು – ಆಹಾರ ಧಾನ್ಯಗಳು ಮತ್ತು ಖಾದ್ಯ ತೈಲಗಳು ಇಂಧನ, ಪೆಟ್ರೋಲಿಯಂ ಉತ್ಪನ್ನಗಳು, ರಸಗೊಬ್ಬರ.

ಬಂಡವಾಳ ಸರಕುಗಳು – ಎಲೆಕ್ಟ್ರಿಕ್ ಯಂತ್ರಗಳು ಹಾಗೂ ಯಂತ್ರದ ಬಿಡಿ ಭಾಗಗಳು ಸಣ್ಣ ಯಂತ್ರಗಳು.

ಇತರೆ ಉತ್ಪನ್ನಗಳು – ರಾಸಾಯನಿಕಗಳು ಚಿನ್ನ ಮತ್ತು ಬೆಳ್ಳಿ, ಹರಳುಗಳು, ಅರೆ ಬೆಲೆ ಬಾಳುವ ಹರಳುಗಳು.

**ಭಾರತದ ವಿದೇಶಿ ವ್ಯಾಪಾರದ ದಿಕ್ಕು:**

ಒಂದು ದೇಶ ಯಾವ ಯಾವ ದೇಶಗಳೊಂದಿಗೆ ತನ್ನ ವ್ಯಾಪಾರ ಸಂಬಂಧ ಹೊಂದಿದೆ ಎಂಬುದನ್ನು ತಿಳಿಸುವುದೇ ವ್ಯಾಪಾರದ ದಿಕ್ಕು.

ಭಾರತಕ್ಕೆ ಸಂಬಂಧಿಸಿದಂತೆ ಇದರಲ್ಲಿ 5 ಗುಂಪುಗಳಿವೆ.

1) ಪಶ್ಚಿಮ ಏಷ್ಯಾ ರಾಷ್ಟ್ರಗಳು
2) ರಷ್ಯಾ ಮತ್ತು ಸುತ್ತಮುತ್ತ ರಾಷ್ಟ್ರಗಳು
3) ಏಷ್ಯಾದ ರಾಷ್ಟ್ರಗಳು
4) ಆಫ್ರಿಕಾದ ರಾಷ್ಟ್ರಗಳು
5) ಉತ್ತರ ಅಮೇರಿಕಾ ರಾಷ್ಟ್ರಗಳು

ಭಾರತ ಅತೀ ಹೆಚ್ಚು ವ್ಯಾಪಾರ ಸಂಬಂಧ ಹೊಂದಿರುವುದು ಏಷ್ಯಾ ರಾಷ್ಟ್ರಗಳ ಜೊತೆ. ಅದರಲ್ಲಿ ರಫ್ತು 50%, ಆಮದು 60.8%ರಷ್ಟು ಇರುತ್ತದೆ. ಯೂರೋಪಿನ ರಾಷ್ಟ್ರಗಳೊಂದಿಗೆ ಆಮದು 18.7%, ರಫ್ತು 19%ರಷ್ಟು. ಉತ್ತರ ಅಮೇರಿಕಾದ ರಾಷ್ಟ್ರಗಳೊಂದಿಗೆ ಆಮದು 9.1% ರಫ್ತು 16%ರಷ್ಟು ಮತ್ತು ಆಫ್ರಿಕಾದ ರಾಷ್ಟ್ರಗಳೊಂದಿಗೆ ಆಮದು 8.8%ರಷ್ಟು ರಫ್ತು 8.1%, ರಷ್ಯಾದೊಂದಿಗೆ ಆಮದು 1.7% ರಫ್ತು 1%ರಷ್ಟು ವ್ಯಾಪಾರ ವಹಿವಾಟು ನಡೆಯುತ್ತದೆ.

**ಭಾರತದ ವಿದೇಶಿ ವ್ಯಾಪಾರದಲ್ಲಿ ಬದಲಾವಣೆ:**

ಏಪ್ರಿಲ್ 1, 2015ರಂದು ವಾಣಿಜ್ಯ ಸಚಿವರಾದ ನಿರ್ಮಲಾ ಸೀತಾರಾಮನ್‌ರವರು 2015–20ರವರೆಗೂ ಭಾರತದ ವ್ಯಾಪಾರ ವಿದೇಶಿ ನೀತಿಯನ್ನು ಘೋಷಿಸಿದರು. ಹೊಸ ವಿದೇಶಿ ವ್ಯಾಪಾರ ನೀತಿ ಭಾರತ ಸರ್ಕಾರದ ಡಿಜಿಟಲ್ ಇಂಡಿಯಾ ಮತ್ತು ಮೇಕ್ ಇನ್ ಇಂಡಿಯಾವನ್ನು ಸಾಧಿಸಲು ತಯಾರಾದ ನೀತಿಯಾಗಿದೆ.

**ಹೊಸ ವಿದೇಶಿ ನೀತಿಗಳು:**

2 ಮುಖ್ಯ ಯೋಜನೆಗಳನ್ನು ರೂಪಿಸಲಾಗಿದೆ.

1) ಎಂಇಐಎಸ್ – ಮಲ್ಟಿ ಮರ್ಚೆಂಡೀಸ್ ಎಕ್ಸ್‌ಪೋರ್ಟ್ ಫ್ರಮ್ ಇಂಡಿಯಾ ಸ್ಕೀಮ್.

2) ಎಸ್‌ಇಐಎಸ್ – ಸರ್ವಿಸ್ ಎಕ್ಸ್‌ಪೋರ್ಟ್ಸ್ ಫ್ರಮ್ ಇಂಡಿಯಾ ಸ್ಕೀಮ್.

**ರಫ್ತು:**

ಕಣ್ಣಿಗೆ ಕಾಣುವಂತಹ ವಸ್ತು ಮತ್ತು ಸೇವೆಗಳನ್ನು ಹೊರ ದೇಶಗಳಿಗೆ ಕಳುಹಿಸುವುದನ್ನು ರಫ್ತು ಎನ್ನುವರು. ರಫ್ತಿನಿಂದಾಗುವ ಪ್ರಯೋಜನಗಳು ಈ ಕೆಳಗಿನಂತಿವೆ.

* ರಫ್ತುಗಳನ್ನು ಹೆಚ್ಚಿಸುವುದು: ವಿಶೇಷ ಆರ್ಥಿಕ ವಲಯಗಳಿಗೆ ಉತ್ತೇಜನ ಮತ್ತು ಈ–ವಾಣಿಜ್ಯಕ್ಕೆ ಪ್ರೋತ್ಸಾಹ ನೀಡುವುದು.

* ರಫ್ತು ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು.

* ರಫ್ತು ಪ್ರೋತ್ಸಾಹವು ಕನಿಷ್ಠ ಪರ್ಯಾಯ ತೆರಿಗೆ ಮತ್ತು ಲಾಭಾಂಶ ವಿತರಣೆ ತೆರಿಗೆ ಎರಡನ್ನು ರದ್ದುಗೊಳಿಸುವುದು.

* ಉತ್ತಮ ಗುಣಮಟ್ಟದ ಅಂದರೆ ಪ್ರಾಮಾಣೀಕೃತವಾದ ರಫ್ತುಗಳಿಗೆ ಮಾತ್ರ ಅವಕಾಶ.

* ರಫ್ತುಗಳನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಸಾಧಿಸಲು ರಫ್ತು ಅಭಿವೃದ್ಧಿ ಅಭಿಯಾನ ಆರಂಭಿಸುವುದು.

* ಕೈಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚು ಪಾಲನ್ನು ಒದಗಿಸುವ ಮೂಲಕ ಕೈಗಾರಿಕಾ ರಫ್ತನ್ನು ಪ್ರೋತ್ಸಾಹಿಸುವುದು.

* ಮುಂದಿನ 5 ವರ್ಷಗಳಲ್ಲಿ ವಿದೇಶಿ ವ್ಯಾಪಾರ ಕ್ಷೇತ್ರದಲ್ಲಿ ಉತ್ಪಾದನೆ ಮಾರಾಟ, ಇ–ವಾಣಿಜ್ಯ, ಕ್ಷೇತ್ರದಲ್ಲಿ ಉದ್ಯೋಗಾವಕಾಶ ಹೆಚ್ಚಿಸುವುದು.

* ವಿದೇಶಿ ವ್ಯಾಪಾರ ನೀತಿಯ ಗುರಿಗಳನ್ನು ಸಾಧಿಸಲು ಕನಿಷ್ಠ 2 ಬಾರಿ ಅಂದರೆ 21/2 ವರ್ಷಗಳಿಗೊಮ್ಮೆ ಕಾರ್ಯ ವೈಖರಿಯನ್ನು ಪರಿಶೀಲಿಸುವುದು.

* ಅಂತರಾಷ್ಟ್ರೀಯ ವ್ಯಾಪಾರದಲ್ಲಿ ಭಾರತದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದು.

* ಡಬ್ಲ್ಯೂಟಿಓ ಭಾಗವಾಗಿ ಭಾರತ ತನ್ನ ವ್ಯಾಪಾರವನ್ನು ಮತ್ತಷ್ಟು ಬಲಗೊಳಿಸಲು ವ್ಯಾಪಾರ ಮಂಡಳಿ ಹಾಗೂ ರಾಷ್ಟ್ರೀಯ ವ್ಯಾಪಾರ ಸಮಿತಿಯು ಸಾಧಿಸುವ ಅವಶ್ಯಕತೆ ಇದೆ.

(ಸೆನ್ವ್ಯಾಟ್ ಎಂಬುದು ಕೇಂದ್ರೀಯ ಮೌಲ್ಯವರ್ಧಿತ ತೆರಿಗೆಯನ್ನು ಜಾರಿಗೊಳಿಸುವುದಾಗಿದೆ. ವಿಎಟಿ ಮತ್ತು ಡಿಡಿಟಿ ಬದಲಾಗಿ ಸೆಂಟ್ರಲ್ ವ್ಯಾಲ್ಯೂ ಆಡೆಡ್ ಟ್ಯಾಕ್ಸ್ ಜಾರಿಯಾಗಿದೆ.)

**ವಿದೇಶಿ ಬಂಡವಾಳ:**

**ಭಾರತಕ್ಕೆ ವಿದೇಶಿ ಬಂಡವಾಳದ ಮಹತ್ವ:**

1) ದೇಶದ ಗಡಿಯ ಒಳಭಾಗದಲ್ಲಿ ಪಡೆಯಬಹುದಾದ ಬಂಡವಾಳ ದೇಶಿಯ ಬಂಡವಾಳ.

2) ದೇಶದ ಹೊರಭಾಗದಿಂದ ಪಡೆಯುವ ಬಂಡವಾಳವನ್ನು ವಿದೇಶಿ ಅಥವಾ ಅಂತರಾಷ್ಟ್ರೀಯ ಬಂಡವಾಳ ಎನ್ನುವರು.

**ವಿದೇಶಿ ಬಂಡವಾಳದ ವಿಧಗಳು:**

1) ವಿದೇಶಿ ನೇರ ಬಂಡವಾಳ (ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್)

2) ವಿದೇಶಿ ಸಾಂಸ್ಥಿಕ / ಕ್ಷೇತ್ರಿಯ ಬಂಡವಾಳ (ಫಾರಿನ್ ಇನ್‌ಸ್ಟಿಟ್ಯೂಷನಲ್ ಇನ್‌ವೆಸ್ಟ್‌ಮೆಂಟ್)

* 2014–15 ಭಾರತಕ್ಕೆ ಬಂದ ವಿದೇಶಿ ಹೂಡಿಕೆ 38,385 ಮಿಲಿಯನ್ ಡಾಲರ್.

* ನೇರವಾಗಿ ಹೂಡಿಕೆ 16,183 ಮಿಲಿಯನ್ ಡಾಲರ್.

* ಪರೋಕ್ಷವಾಗಿ ಹೂಡಿಕೆ 22,202 ಮಿಲಿಯನ್ ಡಾಲರ್.

**ಭಾರತದ ಆರ್ಥಿಕತೆಯ ಮೇಲೆ ವಿದೇಶಿ ಬಂಡವಾಳದ ಪ್ರಭಾವ:**

1) ದೇಶದ ಬಂಡವಾಳ ಸಮಸ್ಯೆಯ ನಿವಾರಣೆ

2) ತಂತ್ರಜ್ಞಾನದ ಉನ್ನತೀಕರಣ

3) ಮೂಲಭೂತ ಸೌಕರ್ಯಗಳ ಅಭಿವೃದ್ಧಿ

4) ಕೈಗಾರೀಕರಣ

5) ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ

6) ಪಾವತಿ ಶುಲ್ಕಿನ ಬಿಕ್ಕಟ್ಟಿನ ಸಮಸ್ಯೆಯನ್ನು ಬಗೆಹರಿಸಲು

**ಅನಾನುಕೂಲಗಳು:**

1) ಸಂಪನ್ಮೂಲಗಳ ದುರ್ಬಳಕೆಯಾಗುವ ಸಾಧ್ಯತೆ

2) ವಿದೇಶಿ ಬಂಡವಾಳ ಒಂದೇ ಅಭಿವೃದ್ದಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ

3) ಸ್ವಾವಲಂಬನೆಗೆ ಧಕ್ಕೆ ಅಥವಾ ಅತಿಯಾದ ಅವಲಂಬನೆ.

**ಭಾರತದ ಪ್ರಸ್ತುತ ಪಾವತಿ ಶಿಲ್ಕಿನ ಸ್ಥಿತಿ:**

* ಚಾಲ್ತಿ ಖಾತೆಯ ಸ್ಥಿತಿ 17,492 ಮಿಲಿಯನ್ ಡಾಲರ್‌ಗಳು

* ಬಂಡವಾಳ ಖಾತೆಯ ಸ್ಥಿತಿ 38,539 ಮಿಲಿಯನ್ ಡಾಲರ್‌ಗಳು

* ಪ್ರಸ್ತುತ ಭಾರತದ ಪಾವತಿ ಶಿಲ್ಕು ಅನಾನುಕೂಲಕರ ಸ್ಥಿತಿಯಲ್ಲಿದೆ. ಶಿಲ್ಕಿನ ಮಿಗತೆ 18,076 ಮಿಲಿಯನ್ ಡಾಲರ್‌ಗಳು.

**ಪಾವತಿ ಶಿಲ್ಕು ಅನಾನುಕೂಲಕರವಾಗಿರಲು ಕಾರಣವಾದ ಸಂಗತಿಗಳು:**

* ಆಮದುಗಳ ತೀರ ಹೆಚ್ಚಳ – ಜನಸಂಖ್ಯೆ ಹೆಚ್ಚಳದಿಂದ ಉತ್ಪಾದನೆಯ ಮಟ್ಟ ಕಡಿಮೆ ಇರುವುದರಿಂದ

* ರಫ್ತುಗಳ ಮಂದಗತಿ ಬೆಳವಣಿಗೆ

* ಬಡ್ಡಿ ಪಾವತಿಯ ಹೆಚ್ಚಳ – ಕಳೆದ ಆರ್ಥಿಕ ವರ್ಷದಲ್ಲಿ ಬಡ್ಡಿ ಪಾವತಿಯ ಪ್ರಮಾಣ 327 ಮಿಲಿಯನ್

* ಬಂಡವಾಳ ಖಾತೆಯಲ್ಲಿ ಕೊರತೆ

* ಅಂತರಾಷ್ಟ್ರೀಯ ಮಟ್ಟದ ವಿದ್ಯಮಾನಗಳು – ಅಂತರಾಷ್ಟ್ರೀಯ ಮಟ್ಟದಲ್ಲಿ ಆಗುವ ಬದಲಾವಣೆಗಳನ್ನು ವಿದ್ಯಮಾನಗಳು ಎನ್ನುವರು.

* ಬಂಡವಾಳ ಖಾತೆಯ ಬಿಕ್ಕಟ್ಟಿಗೆ ಪರಿಹಾರ, ಪಾವತಿ ಶಿಲ್ಕಿನ ಬಿಕ್ಕಟ್ಟಿಗೆ ಆಮದಿನ ಸ್ವರೂಪದಲ್ಲಿ ಬದಲಾವಣೆ.

* ಆಮದಿನ ನಿಯಂತ್ರಣ.

* ರಫ್ತಿಗೆ ಪ್ರೋತ್ಸಾಹ – ರಫ್ತಿಗೆ ಬೇಕಾದ ಹಣಕಾಸು ಸಹಾಯ ಧನ.

* ಹಣದ ಅಪಮೌಲೀಕರಣ – ಉದ್ದೇಶಪೂರ್ವಕವಾಗಿ ನಮ್ಮ ದೇಶದ ಹಣದ ಮೌಲ್ಯವನ್ನು ಬೇರೆ ರಾಷ್ಟ್ರದ ಹಣಕ್ಕೆ ಹೋಲಿಕೆ ಮಾಡಿ ಕಡಿಮೆ ಕೊಡುವುದು ಅಪಮೌಲೀಕರಣ ಮಾಡಿದಾಗ ಆಮದು ದುಬಾರಿಯಾಗುತ್ತದೆ ಮತ್ತು ರಫ್ತು ಅಗ್ಗವಾಗುತ್ತದೆ.

* ವಿದೇಶಿ ನೆರವು.

* ಸರ್ಕಾರದ ಹಸ್ತಕ್ಷೇಪ: ಸರ್ಕಾರ ರಫ್ತು ಮತ್ತು ಆಮದುಗಳಲ್ಲಿ ಹಸ್ತಕ್ಷೇಪ ಮಾಡಬೇಕು.

* ಕಾಲಕಾಲಕ್ಕೆ ವ್ಯಾಪಾರ ನೀತಿಯು ಘೋಷಣೆ ಮಾಡಬೇಕು.

* ರೂಪಾಯಿ ಪರಿವರ್ತನೆ.

ಹಣದ ಅಪಮೌಲೀಕರಣ ಮತ್ತು ರೂಪಾಯಿಗಳ ಪರಿವರ್ತನೆಯನ್ನು ಆರ್‌ಬಿಐ ನಿರ್ವಹಿಸುತ್ತದೆ. ಮಿಕ್ಕಿದ್ದೆಲ್ಲಾ ಅಂಶಗಳನ್ನು ಸರ್ಕಾರ ನಿರ್ವಹಿಸುತ್ತದೆ.

**ರೂಪಾಯಿ ಪರಿವರ್ತನೆ:**

ಇದರಲ್ಲಿ 2 ವಿಧ.

1) ಚಾಲ್ತಿಖಾತೆಯ ಪರವರ್ತನೆ: ರಫ್ತು ವಿನಿಮಯ ಹಣ ಸೇರುತ್ತದೆ, ನಂತರ ಸ್ವಲ್ಪ ಸ್ವಲ್ಪ ಭಾಗವನ್ನು ಭಾರತ ರೂಪಾಯಿಗೆ ಪರಿವರ್ತನೆಯಾಗುತ್ತದೆ. 1994ರ ನಂತರ ಇದು ಬದಲಾಯಿತು.

2) ಬಂಡವಾಳ ಖಾತೆಯ ಪರಿವರ್ತನೆ: ಚಾಲ್ತಿ ಖಾತೆಗೆ ಸಂಬಂಧಪಟ್ಟಂತೆ ಮಧ್ಯಪ್ರವೇಶ ಮಾಡುವುದಿಲ್ಲ. ಪೂರ್ತಿ ಪರಿವರ್ತನೆ ಆಗುತ್ತದೆ.

ಭಾರತದಲ್ಲಿ 3 ಅವಧಿಯಲ್ಲಿ ರೂಪಾಯಿಯನ್ನು ಸರ್ಕಾರ ಸ್ವಯಂ ಅಪಮೌಲ್ಯಗೊಳಿಸಲಾಯಿತು.

1) 1948–49 (ಕಾರಣ ಪಾಕಿಸ್ತಾನ ಯುದ್ಧ)

2) 1966 (ಚೀನಾ ಯುದ್ಧ ಸಮಯ)

3) 1991 (ಆರ್ಥಿಕ ಸುಧಾರಣೆಗಳ ಸಮಯ)

**ವಿನಿಮಯ ದರ / ವಿದೇಶಿ ವಿನಿಮಯ ದರ:**

ಒಂದು ರಾಷ್ಟ್ರದ ಹಣ ಮತ್ತೊಂದು ರಾಷ್ಟ್ರದ ಹಣದೊಂದಿಗೆ ವಿನಿಮಯವಾಗುತ್ತದೆ. ಇದೇ ವಿನಿಮಯ ದರ. ಇದರಲ್ಲಿ 2 ವಿಭಾಗಗಳಿವೆ.

1) ಸ್ಥಿರ ವಿನಿಮಯ ದರ

2) ಬದಲಾಗುವ ವಿನಿಮಯ ದರ

ಪ್ರತಿ ರಾಷ್ಟ್ರದ ನಾಣ್ಯಕ್ಕೆ ಇರುವಂತಹ ಬೇಡಿಕೆ ಮತ್ತು ಪೂರೈಕೆಯನ್ನು ವಿನಿಮಯ ದರ ಪೂರೈಸುತ್ತದೆ.

**ಇದೇಶಿ ಇನಿಮಯ 2 ಪರಿಕಲ್ಪನೆಗಳು:**

1) ಎನ್‌ಇಇಆರ್ – ನಾಮಿನಲ್ ಎಕ್ಸ್‌ಚೆಂಜ್ ರೇಟ್ / ನಾಮ ನಿರ್ದೇಶನದ ವಿನಿಮಯ ದರ.

2) ಆರ್‌ಇಇಆರ್ – ರೇರ್ ಎಕ್ಸ್‌ಚೆಂಜ್ ರೇಟ್ / ನೈಜ ನಿರ್ದೇಶನ ವಿನಿಮಯ ದರ.

(ಆಯಾ ದೇಶದ ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡು ವಿದೇಶಿ ವಿನಿಮಯವನ್ನು ನಿರ್ಧರಿಸಿದರೆ ಅದು ನೈಜ ವಿದೇಶಿ ವಿನಿಮಯ).

ಎನ್‌ಇಇಆರ್ – ಆಯಾ ದೇಶದ ಹಣದುಬ್ಬರವನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

**1) ವಿದೇಶಿ ವಿನಿಮಯದ ಸಂಗ್ರಹಣೆಯ ಉದ್ದೇಶಗಳು;**

ವಿದೇಶಿ ವಿನಿಮಯದ ಸಂಗ್ರಹಣ ಆರ್.ಬಿ.ಐ. ನೋಡಿಕೊಳ್ಳುತ್ತದೆ. 2014ರ ಅಂತ್ಯದ ವೇಳೆಗೆ 304.2 ಟ್ರಲಿಯನ್ ಡಾಲರ್‌ಗಳು. ಭಾರತವು ರಫ್ತು ಮಾಡುತ್ತಿರುವ ವಸ್ತುಗಳಲ್ಲಿ 38% ರಫ್ತು ಕರ್ನಾಟಕದ ಕೊಡುಗೆ ಇದೆ. ಭಾರತದಲ್ಲಿ ಕರ್ನಾಟಕದ ರಫ್ತಿನ ಪಾಲು 1,10,892 ಕೋಟಿ. (2013–14ರ ಅವಧಿಯಲ್ಲಿ 2,90,418 ಕೋಟಿ.)

ಕರ್ನಾಟಕ ರಫ್ತು ಮಾಡುತ್ತಿರುವ ವಸ್ತುಗಳೆಂದರೆ,

1) ಎಲೆಕ್ಟ್ರಾನಿಕ್

2) ಹರಳುಗಳು ಮತ್ತು ಜ್ಯೂವೆಲ್ಲರಿ ಮತ್ತು ಎಂಜಿನಿಯರಿಂಗ್ ಉತ್ಪನ್ನಗಳು

3) ಸಿದ್ದ ಉಡುಪುಗಳು

4) ರಾಸಾಯನಿಕ ವಸ್ತುಗಳು ಮತ್ತು ಸೌಂದರ್ಯವರ್ಧಕ ವಸ್ತುಗಳು

5) ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳು

6) ಕಡಲಿನ ಉತ್ಪನ್ನಗಳು

7) ಮಸಾಲೆ ಪದಾರ್ಥಗಳು

8) ಗೋಡಂಬಿ

9) ಕಬ್ಬಿಣದ ಅದಿರು ಮತ್ತು ಗ್ರಾನೈಟ್

10) ಉಣ್ಣೆಯ ವಸ್ತುಗಳು ಮತ್ತು ಉತ್ಪನ್ನಗಳು

**ರಫ್ತನ್ನು ಹೆಚ್ಚಿಸಲು ನೀತಿಗಳು;**

1) ಕರ್ನಾಟಕದ ಕೈಗಾರಿಕೆಯ ನೀತಿ 2014–15

2) 2013ರ ಅಂತರ್ ಬಾಹ್ಯಾಕಾಶ ಯೋಜನೆ

3) ಕರ್ನಾಟಕದ ನೀತಿ 2009

4) ಕರ್ನಾಟಕದ ಪ್ರವಾಸೋದ್ಯಮ ನೀತಿ 2009

5) ಕರ್ನಾಟಕದ ಔಷಧಿ ನೀತಿ 2013

6) ಕರ್ನಾಟಕದ ಜವಳಿ ನೀತಿ 2013

# ಅಧ್ಯಾಯ – 3

# ಅಭಿವೃದ್ಧಿ ಮಾದರಿಗಳು

ಸಾಮಾನ್ಯವಾಗಿ ಒಂದು ಪ್ರದೇಶದ ಜನರ ಸಮಸ್ಯೆಗಳನ್ನು ನಿವಾರಿಸಿ ಅವರ ಆದಾಯ ಮಟ್ಟವನ್ನು ಹೆಚ್ಚಿಸುವಂತಹ ಕ್ರಿಯೆಯೇ ಅಭಿವೃದ್ಧಿ.

**ಅಭಿವೃದ್ಧಿಯ ಮಾದರಿಗಳು:**

1) ಗಾಂಧಿಯವರ ಮಾದರಿ

2) ಕ್ಷೇತ್ರಿಯ ಮಾದರಿ

3) ಗುಂಪು, ಸಮುದಾಯ ಮಾದರಿ

4) ಸಹಭಾಗಿತ್ವದ ಮಾದರಿ

5) ಸೇವಾ ಆಧಾರಿತ ಮಾದರಿ

6) ಭಾರತಕ್ಕೆ ಸೂಕ್ತವಾದುದು ಮತ್ತು ಸಹಭಾಗಿತ್ವದ ಮಾದರಿ.

1) ಗಾಂಧಿಯವರ ಮಾದರಿ: ಗ್ರಾಮೀಣ ಭಾಗದ ಅಭಿವೃದ್ಧಿಯಿಂದ ದೇಶದ ಅಭಿವೃದ್ಧಿಯನ್ನು ಭಾರತ ಅಳವಡಿಸಿಕೊಂಡಿದೆ.

2) ಕ್ಷೇತ್ರಿಯ ಮಾದರಿ: ಪ್ರಾಥಮಿಕ ವಲಯ, ದ್ವಿತೀಯ ವಲಯ, ತೃತೀಯ ವಲಯ.

ಕ್ಷೇತ್ರಿಯ ಮಾದರಿಯಲ್ಲಿ ಅಭಿವೃದ್ಧಿ ಪ್ರಕ್ರಿಯೆ ಕ್ಷೇತ್ರ, ವಲಯ ಮೂಲಕ ಉಂಟಾಗುತ್ತದೆ. 3 ವಲಯಗಳಲ್ಲಿ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಒಂದು ಹಂತದ ನಂತರ ಸರ್ಕಾರ ಅಭಿವೃದ್ಧಿಯ ಮಧ್ಯೆ ಪ್ರವೇಶ ಮಾಡುವುದಿಲ್ಲ.

3) ಗುಂಪು ಮತ್ತು ಸಮುದಾಯ ಮಾದರಿ: ಇದನ್ನು ಕೇಂದ್ರೀಕರಣಗೊಳಿಸುವ ಮಾರ್ಗ ಸಮುದಾಯ ಮಾರ್ಗ ಎಂದು ಕರೆಯುತ್ತೇವೆ. ಅಭಿವೃದ್ಧಿಗಾಗಿ ಕೆಲವು ಸಮುದಾಯ ಗುಂಪನ್ನು ಮಾತ್ರ ಕೇಂದ್ರೀಕರಿಸಲಾಗುತ್ತದೆ. ಈ ಮಾದರಿಯನ್ನು ನಬಾರ್ಡ್ ವಿಶೇಷ ಯೋಜನಾ ತಂತ್ರದಲ್ಲಿ ಅಳವಡಿಕೆ ಮಾಡಿಕೊಂಡಿದೆ. ಇದರಿಂದ ಪ್ರಾದೇಶಿಕ ಅಸಮತೋಲನ ಉಂಟುಮಾಡುತ್ತದೆ. ಭಾರತದಲ್ಲಿ ಇದನ್ನು ಅಳವಡಿಸಿಲ್ಲ.

4) ಸಹಭಾಗಿತ್ವದ ಮಾದರಿ: ಅಭಿವೃದಿದಯ ಪ್ರತಿ ಹಂತದಲ್ಲಿ ಜನರ ಪಾಲ್ಗೊಳ್ಳುವಿಕೆ ಜನರ ಸಹಭಾಗಿತ್ವದ ಮಾದರಿ. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಜನರನ್ನು ಭಾಗಿಯಾಗಿಸಿ ಆ ಮೂಲಕ ಅಭಿವೃದ್ಧಿಯನ್ನು ಸಾಧಿಸಬಹುದು. ಈ ಮಾರ್ಗ ವಿಕೇಂದ್ರೀಕೃತ ಯೋಜನೆ ಕೆಳಹಂತದ ಕಾರ್ಯಾಚರಣೆ ಕೈಗೊಳ್ಳುವುದನ್ನು ಸೂಚಿಸುತ್ತದೆ.

**ಅನುಕೂಲಗಳು:**

1) ಪ್ರಜಾಸತ್ತಾತ್ಮಕ ಮಾದರಿ

2) ಆರ್ಥಿಕ ಸಮಾನತೆಯ ಸಾಧನೆ

3) ಜನರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವುದು

4) ಗ್ರಾಮೀಣ ಅಭಿವೃದ್ಧಿಗೆ ಪೂರಕ ಕಾರ್ಯಗಳಲ್ಲಿ ಭಾಗವಹಿಸುವಿಕೆ

5) ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲಿ ನಿವಾರಣೆ

**ಅನಾನುಕೂಲಗಳು:**

1) ಸಂಪನ್ಮೂಲದ ಅಭಾವ

2) ಆದ್ಯತೆಗಳನ್ನು ಸಮರ್ಪಕವಾಗಿ ಗುರುತಿಸಲು ಸಾಧ್ಯವಿಲ್ಲದಿರುವಿಕೆ. ಇದನ್ನು ನಾವು ನಮ್ಮ ಪಂಚಾಯಿತಿ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

5) ಸೇವಾ ಆಧಾರಿತ ಮಾದರಿ: ಸೇವಾ ಪ್ರವೇಶ ಮಾರ್ಗವನ್ನು ಒಂದು ನಿರ್ದಿಷ್ಟ ಭೌಗೋಳಿಕ ಪ್ರವೇಶವನ್ನು ಗುರುತಿಸಿ ಆ ಪ್ರವೇಶವನ್ನು ಯಾವುದಾದರೂ ಸಂಸ್ಥೆ ನೆರವಾಗುವ ಮುಲಕ ಅಭಿವೃದ್ಧಿಯಾಗುತ್ತದೆ.

6) ಸಮಗ್ರ ಅಭಿವೃದ್ಧಿ ಮಾದರಿ: ಯಾವುದೇ ತಾರತಮ್ಯವಿಲ್ಲದೆ ಲಭ್ಯವಿರುವ ಇಡೀ ಪ್ರದೇಶವನ್ನು ಅಭಿವೃದ್ಧಿಗಾಗಿ ಗುರುತಿಸುವುದು ಸಮಗ್ರ ಅಭಿವೃದ್ಧಿ ಮಾದರಿ.

* ಭಾರತದಂತಹ ರಾಷ್ಟ್ರಕ್ಕೆ ಯಾವ ಅಭಿವೃದ್ಧಿ ಮಾದರಿಯನ್ನು ಸೂಚಿಸುವಿರಿ?

**ಗ್ರಾಮ ಮತ್ತು ನಗರ ಪ್ರದೇಶಗಳ ನಡುವಿನ ಅಸಮಾನತೆಗಳು:**

**ಗ್ರಾಮ ಮತ್ತು ನಗರ ಪ್ರದೇಶದ ಅಸಮಾನತೆ:**

ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಸಾಮಾನ್ಯ ಸಂಗತಿ ಈ ಅಸಮಾನತೆಯಿಂದಲೇ ಗ್ರಾಮ ಮತ್ತು ನಗರ ಪರಿಕಲ್ಪನೆ ಉದಯಿಸಿದೆ.

**ಅಸಮಾನತೆಗೆ ಕಾರಣಗಳು:**

1) ನೈಸರ್ಗಿಕ ಪ್ರಭಾವ

2) ಆದಾಯದ ಮಟ್ಟದಲ್ಲಿ ಅಸಮಾನತೆ

3) ವ್ಯಾಪಾರದ ಸ್ವರೂಪ

4) ಉತ್ಪಾದನೆಯಲ್ಲಿ ವ್ಯತ್ಯಾಸ

5) ಇಳಿಮುಖ ಪ್ರತಿಫಲ ನಿಯಮದ ಅನ್ವಯಿಕೆ

6) ಮೂಲ ಸೌಕರ್ಯದ ಲಭ್ಯತೆ

7) ಅಸಮರ್ಪಕವಾದ ವಿತರಣಾ ವ್ಯವಸ್ಥೆ

8) ನಗರೀಕರಣ ಮತ್ತು ಕೈಗಾರೀಕರಣದ ಅಭಾವ

**ಅಸಮಾನತೆಯ ಸೂಚಕಗಳು:**

1) ತಲಾ ವರಮಾನ, ತಲಾ ಆದಾಯದ ಮಟ್ಟ

2) ಬಡತನ

3) ಕೈಗಾರಿಕೆಗಳ ಅಭಿವೃದ್ಧಿ

4) ಜನಸಂಖ್ಯಾ ವ್ಯತ್ಯಾಸ

5) ಹೂಡಿಕೆಯನ್ನು ಆಕರ್ಷಿಸುವ ಮೂಲ ಸೌಕರ್ಯಗಳು

6) ಉದ್ಯೋಗಾವಲಂಬನೆ ಕೃಷಿ, ಕೈಗಾರಿಕೆ

**ಅಸಮಾನತೆಯನ್ನು ಹೋಗಲಾಡಿಸುವ ಕ್ರಮಗಳು:**

1) ಮೂಲ ಸೌಕರ್ಯಗಳ ಅಭಿವೃದ್ಧಿ

2) ಪ್ರಾದೇಶಿಕ ಮಟ್ಟದ ಯೋಜನೆಗಳು

3) ಹಣಕಾಸು ಸಂಪನ್ಮೂಲಗಳ ವರ್ಗಾವಣೆ

* ಅಲ್ಲಿನ ಜನಸಂಖ್ಯೆ

* ಅದರ ವ್ಯಾಪ್ತಿ

* ಕೋಶಿಯ ಶಿಸ್ತು

* ತೆರಿಗೆಯ ಸಂಗ್ರಹಣಾ ಸಾಮರ್ಥ್ಯ

* ಇವುಗಳನ್ನು ಗಣನೆಗೆ ತೆಗೆದುಕೊಂಡ ಹಣಕಾಸಿನ ಹಂಚಿಕೆ ಮಾಡಬೇಕು.

4) ಹಿಂದುಳಿದ ಪ್ರದೇಶಗಳ ಅಭಿವೃದ್ದಿಗೆ ವಿಶೇಷ ಪ್ರಾಶಸ್ತ್ಯ. ಉದಾ: ಈಶಾನ್ಯ ರಾಜ್ಯಗಳ ಅಭಿವೃದ್ದಿ, ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ.

5) ಕೃಷಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ದಿ. ಈ ವಲಯ ಅಭಿವೃದ್ದಿ ಆದರೆ ದೇಶದ ಅಭಿವೃದ್ದಿ ಆದಂತೆ.

6) ಹಿಂದುಳಿದ ಪ್ರದೇಶಗಳಿಗೆ ವಿಶೇಷ ಸೌಲಭ್ಯ (ಶಿಕ್ಷಣ, ಉದ್ಯೋಗ, ಮೀಸಲಾತಿ).

7) ಅಂತರ್ಗತ ಅಭಿವೃದ್ದಿ.

**ಕರ್ನಾಟಕದಲ್ಲಿ ವಿಶೇಷ ಆರ್ಥಿಕ ವಲಯಗಳ ನಿರೀಕ್ಷೆ ಮತ್ತು ಸವಾಲುಗಳು:**

**ವಿಶೇಷ ಆರ್ಥಿಕ ವಲಯ:**

ರಫ್ತುಗಳನ್ನು ಉತ್ತೇಜಿಸುವುದಕ್ಕಾಗಿ ಮೀಸಲಾಗಿರುವ ವಲಯವನ್ನು ವಿಶೇಷ ಆರ್ಥಿಕ ವಲಯ ಎಂದು ಕರೆಯಲಾಗುತ್ತದೆ. 2005ರಲ್ಲಿ ಭಾರತ ಸರ್ಕಾರದ ವಿಶೇಷ ಆರ್ಥಿಕ ವಲಯಗಳ ಕಾಯ್ದೆಯನ್ನು ಜಾರಿಗೊಳಿಸಿದೆ.

**ಎಸ್ಇಜೆಡ್‌ನ ಉದ್ದೇಶಗಳು:**

1) ಸರಕು ಮತ್ತು ಸೇವೆಗಳ ರಫ್ತನ್ನು ಹೆಚ್ಚಿಸುವುದು

2) ಉದ್ಯೋಗ ಅವಕಾಶ ನಿರ್ಮಾಣ (ರಫ್ತು ಕ್ಷೇತ್ರದಲ್ಲಿ)

3) ಪೂರಕ ಆರ್ಥಿಕ ಚಟುವಟಿಕೆಗಳ ನಿರ್ಮಾಣ

4) ದೇಶಿಯ ಮತ್ತು ವಿದೇಶಿಯ ಹೂಡಿಕೆ ಮೂಲಗಳನ್ನು ಹೆಚ್ಚಿಸುವುದು

5) ಮೂಲ ಸೌಕರ್ಯಗಳ ಅಭಿವೃದ್ದಿ

ಎಸ್.ಇ.ಜೆಡ್‌ಗೂ ಮುಂಚೆ ಇ.ಪಿ.ಜೆಡ್ (ಎಕ್ಸ್‌ಪೋರ್ಟ್ ಪ್ರೋಸೆಸಿಂಗ್ ಝೋನ್)ನ್ನು 1965ರಲ್ಲಿ ಜಾರಿಗೆ ತರಲಾಯಿತು. (ರಫ್ತು ಪ್ರೋತ್ಸಾಹಕ ವಲಯಗಳು – ಇ.ಪಿ.ಜೆಡ್).

**ಎಸ್.ಇ.ಜೆಡ್‌ನ ಲಕ್ಷಣಗಳು:**

1) ಈ ವಲಯಗಳಲ್ಲಿ ಆಮದು ರಫ್ತು ಸುಂಕ ಇರುವುದಿಲ್ಲ.

2) 5 ವರ್ಷಗಳ ತೆರಿಗೆ ರಜೆ

3) ಮುಂದಿನ 5 ವರ್ಷಗಳ ನಂತರ 50%ರಷ್ಟು ತೆರಿಗೆ

4) ಕೈಗಾರಿಕೆಗೆ ಬೇಕಾದ ಕಚ್ಚಾ ಪದಾರ್ಥ ತಂತ್ರಜ್ಞಾನ ಮುಕ್ತವಾಗಿ ಆಮದು ಮಾಡಿಕೊಳ್ಳಬಹುದು

5) 10 ವರ್ಷಗಳಿಗೆ ಆದಾಯ ತೆರಿಗೆ ವಿನಾಯಿತಿ

6) ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ಪಡಿಸುವುದಕ್ಕಾಗಿ ರಾಜ್ಯ ಸರ್ಕಾರಗಳಿಗೆ ಅಗತ್ಯ ಉದಾರೀಕರಣ ಮಾಡಿಕೊಳ್ಳುವಂತೆ ಸಲಹೆ.

ಭಾರತದಲ್ಲಿ 586 ವಿಶೇಷ ಆರ್ಥಿಕ ವಲಯಗಳಿವೆ. ಕರ್ನಾಟಕದಲ್ಲಿ 74 ವಿಶೇಷ ಆರ್ಥಿಕ ವಲಯಗಳಿವೆ.

**ಕರ್ನಾಟಕದಲ್ಲಿ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗಿರುವ ನೀತಿಗಳು:**

* ಇವುಗಳಿಗಾಗಿ ಒಂದೇ ಹಂತದಲ್ಲಿ ಭೂಮಿಯನ್ನು ತೆರವುಗೊಳಿಸುವುದು (ಏಕಗವಾಕ್ಷಿ ಯೋಜನೆ)
* ಭೂಮಿಯನ್ನು ವಶಪಡಿಸಿಕೊಳ್ಳುವಾಗ ಪರಿಹಾರ ನೀಡಿಕೆ
* ವಿಶೇಷ ಆರ್ಥಿಕ ವಲಯಗಳನ್ನು ಏಕ ಕೃಷಿ ಬೆಳೆಯುವ / ಕೃಷಿ ಭೂಮಿಯನ್ನು ಹೊಂದಲು ಅವಕಾಶ
* ರಾಜ್ಯಮಟ್ಟದ ಎಲ್ಲಾ ತೆರಿಗೆಯಿಂದ 5 ವರ್ಷಗಳ ವಿನಾಯಿತಿ
* ಆ ಪ್ರದೇಶದಲ್ಲಿ ನೀರಿನ ಪೂರೈಕೆ ಮತ್ತು ತ್ಯಾಜ್ಯ ನಿರ್ವಹಣೆಗೆ ಸರ್ಕಾರವೇ ಬಂಡವಾಳ ಹೂಡುತ್ತದೆ
* ಈ ಪ್ರದೇಶಗಳಲ್ಲಿ ರಫ್ತು ಅಭಿವೃದ್ಧಿಗೆ ವಿಶ್ವೇಶ್ರಯ್ಯ ವ್ಯಾಪಾರ ಕೇಂದ್ರ ಅಗತ್ಯ ನೆರವು ಒದಗಿಸುತ್ತದೆ. ಅಲ್ಲದೇ ಕರ್ನಾಟಕ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಸಂಬಂಧಿಸಿದ ಚಟುವಟಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಬದ್ಧವಾಗಿದೆ.

**ಕರ್ನಾಟಕದಲ್ಲಿರುವ ವಿಶೇಷ ಆರ್ಥಿಕ ವಲಯಗಳಿಗೆ ಸಂಬಂಧಿಸಿದ ಸಮಸ್ಯೆಗಳು:**

* ಮೂಲ ಸೌಕರ್ಯದ ಕೊರತೆ
* ತರಬೇತಿ ಸೌಲಭ್ಯಗಳ ಅಭಾವ
* ಈ ಪರಿಯೋಜನೆಗಳ ಅನುಷ್ಠಾನದಲ್ಲಿ ವಿಳಂಬ
* ದೇಶೀಯ ಮತ್ತು ಅಂತರಾಷ್ಟ್ರೀಯ ಬಂಡವಾಳ ಆಕರ್ಷಿಸುವಲ್ಲಿ ವಿಫಲತೆ
* 2014–15ರ ಅವಧಿಯಲ್ಲಿ ರಫ್ತು ಮೌಲ್ಯದ ಕುಸಿತ , ಇಳಿತ
* ಇವುಗಳ ಅನುಮೋದನೆಯಲ್ಲಿ ವಿಳಂಬ

**ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ಅಸಮಾನತೆಗಳು, ಕಾರಣಗಳು:**

ಕರ್ನಾಟಕದ ಪ್ರಾದೇಶಿಕ ಅಸಮತೋಲನವನ್ನು ಡಾ.ಡಿ.ಎಂ.ನಂಜುಂಡಪ್ಪನವರ ಸಮಿತಿ ಅಧ್ಯಾಯನ ಮಾಡಿ ಅಸಮತೋಲನ ಸಂಪೂರ್ಣ ಚಿತ್ರಣವನ್ನು ಒದಗಿಸಿದೆ. ಇದನ್ನು ಪ್ರಾದೇಶಿಕ ಅಸಮತೋಲನ ನಿವಾರಣೆಯ ಉನ್ನತ ಅಧಿಕಾರ ಸಮಿತಿ ಎಂದು ಕರೆಯಲಾಗಿದೆ. ಈ ಸಮಿತಿ ಅನ್ವಯ ಕರ್ನಾಟಕದ ಪ್ರಾದೇಶಿಕ ಅಸಮತೋಲನವನ್ನು ಸ್ವಾತಂತ್ರ್ಯದ ಅವಧಿಯಲ್ಲಿ ಗುರುತಿಸುವುದು. ಇದು ಏಕೀಕರಣದ ಅವಧಿಯಲ್ಲಿ ಮುಂದುವರೆಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಸಮರ್ಪಕವಾದ ಕಾರ್ಯಕ್ರಮಗಳು ಈ ಅಸಮತೋಲನವನ್ನು ಹೆಚ್ಚಿಸಿದವು.

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನವನ್ನು 6 ಸೂಚಕಗಳು ವ್ಯಕ್ತಪಡಿಸುತ್ತವೆ.

1) ಜಿಲ್ಲೆಗಳ ಆದಾಯ ಮತ್ತು ತಲಾ ಆದಾಯ (ಬೆಂಗಳೂರು 1ನೇ ಸ್ಥಾನ – ಯಾದಗಿರಿ ಕೊನೇ ಸ್ಥಾನ)

2011ರ ಅಂಕಿ ಅಂಶಗಳ ಪ್ರಕಾರ 1,03,417 ರೂ.ಗಳು ಬೆಂಗಳೂರು ಮತ್ತು ಯಾದಗಿರಿಯಲ್ಲಿ 18,042 ರೂ.ಗಳು.

2) ಜಿಲ್ಲೆಗಳ ಗಾತ್ರ ಮತ್ತು ಜನಸಂಖ್ಯೆ.

* ಅತಿ ದೊಡ್ಡದು–ಬೆಳಗಾವಿ, ಚಿಕ್ಕದು–ಬೆಂಗಳೂರು ನಗರ.
* ಜನಸಂಖ್ಯೆ–ಹೆಚ್ಚು–ಬಂಗಳೂರು ನಗರ, ಕಡಿಮೆ–ಕೊಡಗು.

3) ಕೈಗಾರಿಕೆಗಳ ವರ್ಗೀಕರಣ:

ಅತೀ ಹೆಚ್ಚು ಕೈಗಾರೀಕರಣ – ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ಮೈಸೂರು, ಬೆಳಗಾವಿ.

ಅತೀ ಕಡಿಮೆ – ಯಾದಗಿರಿ, ಬೀದರ್, ಗದಗ್, ಬಿಜಾಪುರ, ಕೊಪ್ಪಳ.

4) ಜನರ ಜೀವನ ಮಟ್ಟ: ಜನರ ಜೀವನ ಮಟ್ಟವನ್ನು ತಲಾವರಮಾನದ ಮೇಲೆ ಅಳತೆ ಮಾಡುವರು. ತಲಾವರಮಾನ ಹೆಚ್ಚಾಗುವ ಜಿಲ್ಲೆಯಲ್ಲಿ ಅನುಭೋಗದ ವೆಚ್ಚ ಹೆಚ್ಚಾಗುತ್ತದೆ.

5) ಸಾಕ್ಷರತಾ ಮಟ್ಟ: ದಕ್ಷಿಣ ಕನ್ನಡ, ಬೆಂಗಳೂರು ನಗರ, ಉಡುಪಿ ಜಿಲ್ಲೆ, ಮುಂಚೂಣಿಯಲ್ಲಿದೆ. ಯಾದಗಿರಿ, ರಾಯಚೂರು, ಮುಂತಾದ ಜಿಲ್ಲೆಗಳು ಸಾಕ್ಷರತಾ ಮಟ್ಟದಲ್ಲಿ ಹಿಂದುಳಿದಿವೆ.

6) ಮೂಲ ಸೌಕರ್ಯಗಳಲ್ಲಿ ನಗರ ಅತ್ಯಂತ ಮುಂದುವರೆದ ಜಿಲ್ಲೆ. 6 ಜಿಲ್ಲೆಗಳಿವೆ. ಉತ್ತಮ ಅಭಿವೃದ್ಧಿ ಸಾಧಿಸಿದ ಜಿಲ್ಲೆಗಳು. (ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು, ಮಂಡ್ಯ, ಮೈಸೂರು.) ಹಿಂದುಳಿದ ಜಿಲ್ಲೆಗಳು ಕಲ್ಬುರ್ಗಿ, ಬೀದರ್, ಚಿತ್ರದುರ್ಗ, ಕೊಪ್ಪಳ, ರಾಯಚೂರು, ವಿಜಾಪುರ.

114 ತಾಲ್ಲೂಕುಗಳು ಹಿಂದುಳಿದ ತಾಲೂಕುಗಳೆಂದು ಗುರುತಿಸಲ್ಪಟ್ಟಿವೆ. ಅದರಲ್ಲಿ 39 ಅತ್ಯಂತ ಹಿಂದುಳಿದ, 40 ಅತೀ ಹಿಂದುಳಿದ, 35 ಹಿಂದುಳಿದ ತಾಲೂಕುಗಳೆಂದು ಗುರುತಿಸಲಾಗಿದೆ. ಈ ತಾಲೂಕುಗಳಿಗೆ ವಿಶೇಷವಾಗಿ ಹೆಚ್ಚುವರಿ ಅಭಿವೃದ್ಧಿಯನ್ನು ಒದಗಿಸಬೇಕಾದ ಅವಶ್ಯಕತೆ ಇದೆ.

**ನಂಜುಂಡಪ್ಪ ಸಮಿತಿಯ ಅನ್ವಯ ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ನೀಡಲಾದ ಶಿಫಾರಸ್ಸುಗಳು ಮತ್ತು ಅವುಗಳ ಅನುಷ್ಠಾನ:**

1) ಕಲ್ಬುರ್ಗಿಯಲ್ಲಿ ಕೇಂದ್ರೀಯ ವಿಶ್ವಿವಿದ್ಯಾನಿಲಯದ ಸ್ಥಾಪನೆ.

2) ಧಾರವಾಡ ಮತ್ತು ಕಲ್ಬುರ್ಗಿಯಲ್ಲಿ ಉಚ್ಚನ್ಯಾಯಾಲಯ ಪೀಠಗಳ ಸ್ಥಾಪನೆ.

3) ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯದ ಸ್ಥಾಪನೆ.

4) ಹುಬ್ಬಳ್ಳಿ ಮತ್ತು ಕಲ್ಬುರ್ಗಿಯಲ್ಲಿ ಐಟಿಗಳ ಸ್ಥಾಪನೆ.

5) ಕಲ್ಬುರ್ಗಿಯಲ್ಲಿ ಫುಡ್ ಪಾರ್ಕ್ ಸ್ಥಾಪನೆ ಮತ್ತು ವಿಮಾನ ನಿಲ್ದಾಣದ ಸ್ಥಾಪನೆ.

6) ಕಲ್ಬುರ್ಗಿಯಲ್ಲಿ ಜವಳಿ ಪಾರ್ಕಿನ ಸ್ಥಾಪನೆ.

7) ಬೀದರ್‌ನಲ್ಲಿ ಪಶು ವೈದ್ಯಕೀಯ ಮತ್ತು ಮೀನುಗಾರಿಕೆ ವಿ.ವಿ. ಸ್ಥಾಪನೆ.

8) 39 ಅತೀ ಹಿಂದುಳಿದ ತಾಲೂಕುಗಳಲ್ಲಿ ಕಸ್ತೂರ್ಬಿ ಬಾಲಕ ಬಾಲಕಿಯರ ಶಾಲೆಗಳನ್ನು ಸ್ಥಾಪಿಸಲಾಗಿದೆ.

9) ಬಾಗಲಕೋಟೆಯಲ್ಲಿ ತೋಟಗಾರಿಕಾ ಕಾಲೇಜಿನ ಸ್ಥಾಪನೆ.

10) ಹುಬ್ಬಳ್ಳಿಯಲ್ಲಿ ನೈರುತ್ಯ ವಲಯದ ರೈಲ್ವೆ ಕಛೇರಿಯನ್ನು ಸ್ಥಾಪಿಸಲಾಗಿದೆ.

11) 2006ರಿಂದ ಕರ್ನಾಟಕದ ವಿಧಾನ ಮಂಡಲದ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲಾಗುತ್ತದೆ.

**ನಂಜುಂಡಪ್ಪ ವರದಿಯ ಶಿಫಾರಸ್ಸಿಗೆ ಸಂಬಂಧಿಸಿದ ಪ್ರಸ್ತುತ ಸವಾಲುಗಳು:**

1) ವಿಶೇಷ ಅಭಿವೃದ್ಧಿ ಯೋಜನೆಯ ತಯಾರಿ ಮತ್ತು ಅನುಷ್ಠಾನ ಸಂಪೂರ್ಣವಾಗಿ ಒಳಪಡಿಸಲಾಗುತ್ತದೆ. ಹಿಂದುಳಿದ ಪ್ರದೇಶಗಳಲ್ಲಿ ಆಗಬೇಕಾದ ಯೋಜನೆಯನ್ನು ಈಗಾಗಲೇ ಜಿಲ್ಲಾ ಯೋಜನಾ ಸಮಿತಿಗಳು ತಯಾರಿಸಿದೆ.

2) ಕೃಷಿ ಮತ್ತು ಸಂಬಂಧಿಸಿದ ಯೋಜನೆಗಳು.

3) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅನುಷ್ಠಾನ.

4) ರೈತ ಸಂಪರ್ಕ ಕೇಂದ್ರಗಳು.

5) ಆರೋಗ್ಯ ಯೋಜನಾ ಆಯುಷ್, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್.

6) ಶಿಕ್ಷಣ – ಕಸ್ತೂರ್‌ಬಾ ಗಾಂಧಿ ಬಾಲಕಿಯರ ಶಾಲೆಗಳ ಸ್ಥಾಪನೆ. ಬೀದರ್, ಗುಲ್ಬರ್ಗಾ ವಿಶ್ವವಿದ್ಯಾನಿಲಯಗಳು, ಈ ಶಾಲೆ, ಕಾಲೇಜು, ವಿ.ವಿ. ಮೂಲ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು. ಮೂಲ ಸೌಕರ್ಯಗಳಿಗೆ ಸಂಬಂಧಿಸಿದಂತೆ, ಆಟದ ಮೈದಾನ, ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ನಬಾರ್ಡ್ ನೆರವಾಗಿದೆ.

7) ವಸತಿ ಸೌಕರ್ಯಗಳು – ಬಸವ ವಸತಿ ಯೋಜನಾ, ವಾಜಪೇಯಿ ನಗರ 2 ಮುಖ್ಯ ಕಾರ್ಯಕ್ರಮಗಳು ಮತ್ತು ವಸತಿ ಯೋಜನೆ.

8) ಮೂಲ ಸೌಕರ್ಯ ಅಭಿವೃದ್ಧಿ – ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಯೋಜನೆ ಹಿಂದುಳಿದ ತಾಲೂಕುಗಳಲ್ಲಿ ವಿಶೇಷವಾಗಿ ವಿಮಾನ ನಿಲ್ದಾಣಗಳ ಸ್ಥಾಪನೆ, ಬೀದರ್, ಕಲ್ಬುರ್ಗಿ, ವಿಜಯಪುರ, ಬೆಳಗಾಂ, ಹುಬ್ಬಳ್ಳಿಗಳಲ್ಲಿ.

* ಸುವರ್ಣ ರಸ್ತೆ ವಿಕಾಸ ಯೋಜನೆ

* ನಬಾರ್ಡ್‌ನ ರಸ್ತೆ ನಿರ್ಮಾಣ ಕಾರ್ಯಕ್ರಮ

* ಬಸ್ ನಿಲ್ದಾಣಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ

9) ನೀರಾವರಿ ಸೌಲಭ್ಯ – ನೀರಾವರಿಯ ಅಭಿವೃದ್ಧಿಗಾಗಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.

10) ಪ್ರವಾಸೋದ್ಯಮ ಅಭಿವೃದ್ಧಿ – ಬಾದಾಮಿ, ಪಟ್ಟದಕಲ್ಲು, ಸಿದ್ದಾಪುರ, ಸೌದತ್ತಿ, ಈ ಪ್ರವಾಸಿ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸುವುದು ಡಿ.ಆರ್.ಡಿ.ಎ.ಗೆ ಒಳಪಟ್ಟಿದೆ.

ಈ ಎಲ್ಲಾ ಯೋಜನೆಗಳನ್ನು ಅಭಿವೃದ್ಧಿಗೊಳಿಸಲು 20,139 ಕೋಟಿಗಳಷ್ಟು ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಲಾಗಿದೆ.

371(ಜೆ) ಅನ್ವಯ ಹಿಂದುಳಿದ ಜಿಲ್ಲೆಗಳಲ್ಲಿ ಹೈದರಾಬಾದ್–ಕರ್ನಾಟಕಕ್ಕೆ ಶಿಕ್ಷಣ ಮತ್ತು ಉದ್ಯೋಗಗಳಿಗೆ ನೆರವು ನೀಡಲಾಗಿದೆ.

**ಕರ್ನಾಟಕದ ವಿಶೇಷ ಅಭಿವೃದ್ಧಿ ಮಂಡಳಿಗಳು:**

ಪ್ರಸ್ತುತ 5 ಪ್ರಾದೇಶಿಕ ಮಂಡಳಿಗಳಿವೆ.

1) ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ – 1999 ಸ್ಥಾಪನೆ, ಕೇಂದ್ರ ಕಛೇರಿ: ಕಲ್ಬುರ್ಗಿ

2) ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ – 1993 – ಶಿವಮೊಗ್ಗ

3) ಬಯಲುಸೀಮೆ ಅಭಿವೃದ್ಧಿ ಮಂಡಳಿ – 1994 – ಚಿತ್ರದುರ್ಗ

4) ಪಶ್ಚಿಮ ಘಟ್ಟಗಳ ಅಭಿವೃದ್ಧಿ ಮಂಡಳಿ – 1991 – ಶಿವಮೊಗ್ಗ

5) ಕರಾವಳಿ ಪ್ರದೇಶ ಅಭಿವೃದ್ಧಿ ಮಂಡಳಿ – 2008 – ಮಂಗಳೂರು.

* **ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿ:**

* ರಸ್ತೆ ಮತ್ತು ಸೇತುವೆಗಳ ನಿರ್ಮಾಣ, ಸಣ್ಣ ನೀರಾವರಿ, ಶಿಕ್ಷಣ, ಕುಡಿಯುವ ನೀರಿನ ಸೌಲಭ್ಯ, ಆರೋಗ್ಯ ಶಕ್ತಿ.

* ಇದು ಕರ್ನಾಟಕದ 23%ರಷ್ಟು ಭೌಗೋಳಿಕ ವಿಸ್ತೀರ್ಣವನ್ನು ಒಳಗೊಂಡಿದೆ.

* ಕರ್ನಾಟಕ ಜನಸಂಖ್ಯೆ 17.73% ಜನಸಂಖ್ಯೆಯನ್ನು ಒಳಗೊಂಡಿದೆ.

* ಈ ಪ್ರದೇಶದ ಸಾಕ್ಷರತಾ ಮಟ್ಟ 64.45%ರಷ್ಟು.

* ಶಿಶು ಮರಣದ ದರ: ಪ್ರತಿ ಸಾವಿರಕ್ಕೆ 59.

* ಈ ಪ್ರದೇಶಗಳ ತಲಾ ವರಮಾನ: 44,832 ರೂ.

* ಈ ರೀತಿಯ ಹಿಂದುಳಿದಿರುವಿಕೆಯ 371(ಜೆ) ಅನುಷ್ಠಾನಗೊಳ್ಳಲು ಕಾರಣವಾಯಿತು.

* 371ಜೆಯ ಅನ್ವಯದಲ್ಲಿ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಪುನರ್ ರಚಿಸಲಾಯಿತು.

* ಉದ್ಯೋಗ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಮೀಸಲಾತಿ 70% ಮತ್ತು 80%.

* 371(ಜೆ)ಯ ಆಧಾರದ ಮೇಲೆ 6–12–13ರಂದು 28 ಜನ ಸದಸ್ಯರನ್ನು ಒಳಗೊಂಡ ಮಂಡಳಿಯನ್ನು ರಚಿಸಲಾಯಿತು. ಒಬ್ಬರು ಅಧ್ಯಕ್ಷರು ಮತ್ತು 5 ಜನ ಪದ ನಿಮಿತ್ಯ ಸದಸ್ಯರು 6 ಜನ ತಜ್ಞರ ತಂಡ. ಈ ಸದಸ್ಯರು 6 ತಿಂಗಳಿಗೊಮ್ಮೆ ಸಭೆ ಸೇರುತ್ತಾರೆ ಮತ್ತು ಕ್ರಮಗಳನ್ನು ಕೈಗೊಳ್ಳುತ್ತಾರೆ.

ಹೈದರಾಬಾದ್ – ಕರ್ನಾಟಕ ಅಭಿವೃದ್ಧಿ ಮಂಡಳಿಯು ಈ ಜಿಲ್ಲೆಗಳನ್ನು ಒಳಗೊಂಡಿದೆ. ಬೀದರ್, ಕೊಪ್ಪಳ, ಬಳ್ಳಾರಿ, ಗುಲ್ಬರ್ಗಾ, ದಾವಣಗೆರೆ, ರಾಯಚೂರು. ಕೇವಲ ತಾಲ್ಲೂಕು–ಹರಪ್ಪನ ಹಳ್ಳಿ.

# ಅಧ್ಯಾಯ – 4

# ಯೋಜನೆಗಳು

## ಯೋಜನೆಯ ಅರ್ಥ ವಿವರಣೆ:

ಆರ್ಥಿಕ ಯೋಜನೆಯ ಪರಿಕಲ್ಪನೆಯ ವ್ಯಾಖ್ಯಾನ ಈ ಕೆಳಕಂಡಂತಿವೆ.

ಶ್ರೀಮತಿ ಬಾರ್ಬಾರಾ ವೂಟನ್ನರ ಮೇರೆಗೆ, ಯೋಜನೆ ಎಂದರೆ 'ಸಾರ್ವಜನಿಕ ಅಧಿಕಾರ ವರ್ಗದವರು ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳುವ ಆರ್ಥಿಕ ಆದ್ಯತೆಗಳಾಗಿವೆ.'

## ಭಾರತದಲ್ಲಿ ಯೋಜನೆಯ ವಿಕಾಸ:

ಬ್ರಿಟೀಷ್ ಆಳ್ವಿಕೆಯ ಕಾಲದಲ್ಲೇ ಭಾರತಕ್ಕೆ ಆರ್ಥಿಕ ಯೋಜನೆಯನ್ನು ರೂಪಿಸುವ ಅನೇಕ ಪ್ರಯತ್ನಗಳು ನಡೆದವು. 1928ರಲ್ಲಿ ರಷ್ಯಾ ಪ್ರಥಮ ಬಾರಿಗೆ ಆರ್ಥಿಕ ಯೋಜನೆಯನ್ನು ಅನುಷ್ಠಾನಗೊಳಿಸಿ ಸಾಧಿಸಿದ ಅದ್ಭುತ ಪ್ರಗತಿಯಿಂದ ಆಕರ್ಷಿತರಾದ ಅನೇಕ ಭಾರತದ ಬುದ್ಧಿಜೀವಿಗಳು ಭಾರತ ಕೂಡ ಆರ್ಥಿಕ ಯೋಜನೆಗಳ ಮೂಲಕ ತನ್ನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದೆಂಬ ನಿಲುವು ತಾಳಿದರು, 1934ರಲ್ಲಿ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರು 'ಯೋಜಿತ ಆರ್ಥಿಕ ವ್ಯವಸ್ಥೆ' ಎಂಬ ಕೃತಿಯನ್ನು ಪ್ರಕಟಿಸಿ ಭಾರತಕ್ಕೆ ಯೋಜನೆಯ ಅವಶ್ಯಕತೆ ಬಗ್ಗೆ ಒತ್ತಿ ಹೇಳಿದರು. 'ಕೈಗಾರೀಕರಣ ಇಲ್ಲವೇ ವಿನಾಶ' ಎಂಬುವುದು ಅವರ ಸ್ಪಷ್ಟ ನಿಲುವಾಗಿತ್ತು. 1937ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಜವಹರಲಾಲ್ ನೆಹರೂ ಅವರ ನೇತೃತ್ವದಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯನ್ನು ರಚಿಸಿತು. ಈ ಸಮಿತಿ ತನ್ನ ವಿಚಾರಪೂರ್ವಕ ಚರ್ಚೆಯ ನಂತರ ಭಾರತದಲ್ಲಿ ಎಲ್ಲಾ ಪ್ರಮುಖ ಕೈಗಾರಿಕೆಗಳು, ಖನಿಜ, ರೈಲು, ನೌಕಾಯಾನ ಮತ್ತು ಇತರೆ ಸಾರ್ವಜನಿಕ ಉಪಯೋಗಿ ಕ್ಷೇತ್ರಗಳು ಸರ್ಕಾರಿ ಒಡೆತನಕ್ಕೆ ಒಳಪಟ್ಟಿರಬೇಕೆಂಬ ನಿಲುವು ತಾಳಿತು.

ಇದೇ ವೇಳೆಯಲ್ಲಿ ಟಾಟಾ ಮತ್ತು ಬಿರ್ಲಾಗಳು 'ಮುಂಬಾಯಿ ಯೋಜನೆ', ಕಾರ್ಮಿಕ ಮುಖಂಡರಾದ ಎಮ್.ಎನ್.ರಾಯ್ ಅವರಿಂದ 'ಜನತಾ ಯೋಜನೆ', ಪ್ರೊ.ಎಮ್.ಎನ್.ಅಗರ್‌ವಾಲ್ ಅವರಿಂದ 'ಗಾಂಧಿ ಯೋಜನೆ' ಮುಂತಾದವು ಪ್ರಸ್ತಾಪಕ್ಕೆ ಬಂದವು. ಇವೆಲ್ಲಾ 1944ರಲ್ಲಿ ಯೋಜನೆಗಳ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲಿಗೆ ಸಾಕ್ಷಿಯಾದವು.

ಸ್ವಾತಂತ್ರ್ಯಾ ನಂತರ ಭಾರತ ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು 1950ರಲ್ಲಿ 'ಯೋಜನಾ ಆಯೋಗ'ವನ್ನು ಸ್ಥಾಪಿಸಿತು. 1951ರಲ್ಲಿ ಮೊದಲ ಪಂಚವಾರ್ಷಿಕ ಯೋಜನೆ ಕಾರ್ಯಾರಂಭ ಮಾಡಿತು. ಅಲ್ಲಿಂದ ಇಲ್ಲಿಯವರೆಗೆ ಹನ್ನೊಂದು ಪಂಚವಾರ್ಷಿಕ ಮತ್ತು ಏಳು ವಾರ್ಷಿಕ ಯೋಜನೆಗಳು ಪೂರ್ಣಗೊಂಡು ಪ್ರಸ್ತುತ ಹನ್ನೆರಡನೇ (2012–2017) ಯೋಜನೆ ಪ್ರಗತಿಯಲ್ಲಿದೆ. ಪ್ರಸ್ತುತ ಯೋಜನಾ ಆಯೋಗವನ್ನು ರದ್ದುಪಡಿಸಿ, ನೀತಿ (ಎನ್ಐಟಿಐ: ನ್ಯಾಷನಲ್ ಇನ್‌ಸ್ಟಿಟ್ಯೂಷನ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ) ಆಯೋಗವನ್ನು ಸ್ಥಾಪಿಸಲಾಗಿದೆ. (01.01.2015ರಿಂದ). ಇದು ಥಿಂಕ್ ಟ್ಯಾಂಕ್ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದು ಚೀನಾ ದೇಶದ ಮಾದರಿಯನ್ನು ಹೊಂದಿದೆ.

## ಆರ್ಥಿಕ ಯೋಜನೆಯ ಅಗತ್ಯ:

ಆರ್ಥಿಕ ಯೋಜನೆಗಳನ್ನು ಇಂದು ವಿವಿಧ ದೇಶಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಯೋಜಿತ ಆರ್ಥಿಕ ವ್ಯವಸ್ಥೆಯು ಸ್ಪಷ್ಟ ದಿಕ್ಕನ್ನು ಪಡೆಯುತ್ತದೆಯಾದ್ದರಿಂದ ಅದು ಮುಕ್ತ ಆರ್ಥಿಕ ವ್ಯವಸ್ಥೆಗಿಂತ ಉತ್ತಮವಾದುದು. ಯೋಜನೆಯಿಲ್ಲದ ಆರ್ಥಿಕ ವ್ಯವಸ್ಥೆ ಚಾಲಕನಿಲ್ಲದ ವಾಹನವಿದ್ದಂತೆ. ಏಕೆಂದರೆ ಆರ್ಥಿಕ ವ್ಯವಸ್ಥೆ ದಿಕ್ಕುದೆಸೆಗಳೆಂಬುದಿರುವುದಿಲ್ಲ. ಯೋಜನೆಗಳು ಹಿಂದುಳಿದ, ಮುಂದುವರಿದ ಮತ್ತು ಮುಂದುವರೆಯುತ್ತಿರುವ ಎಲ್ಲ ದೇಶಗಳಿಗೂ ಅವಶ್ಯಕ. ಅದರಲ್ಲೂ ವಿಶೇಷವಾಗಿ ಅನೇಕ ಗಂಭೀರ ಸಮಸ್ಯೆಗಳನ್ನು ತನ್ನಲ್ಲಿ ತುಂಬಿಕೊಂಡಿರುವ ಭಾರತದಂತಹ ಆರ್ಥಿಕ ವ್ಯವಸ್ಥೆಗೆ ಯೋಜನೆಗಳು ಅತ್ಯಾವಶ್ಯಕ. ಭಾರತದ ವ್ಯವಸ್ಥೆಗೆ ಯೋಜನೆಯ ಅಗತ್ಯತೆಗಳನ್ನು ಈ ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

1) ಬಡತನದ ವಿಷವರ್ತುಲವನ್ನು ಭೇದಿಸುವುದು.

2) ಸಮಗ್ರ ಅಭಿವೃದ್ಧಿ: ದೇಶದಲ್ಲಿ ಸರ್ವಾಂಗೀಣ ಅತ್ಯಾವಶ್ಯಕ. ಲಭ್ಯವಿರುವ ಸಂಪನ್ಮೂಲಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಂಡು ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಬೇಕಿರುವುದು ಇಂದಿನ ಅವಶ್ಯಕತೆಯಾಗಿದೆ.

3) ಕೈಗಾರಿಕಾ ಬೆಳವಣಿಗೆ: ದೇಶದ ಕೈಗಾರಿಕಾ ಕ್ಷೇತ್ರ ತುಂಬಾ ಹಿಂದುಳಿದಿದೆ. ಕೈಗಾರಿಕೆಗಳ ಬೆಳವಣಿಗೆ ಉಳಿದೆಲ್ಲಾ ಕ್ಷೇತ್ರಗಳ ಬೆಳವಣಿಗೆಗೆ ಪೂರಕವಾಗಿರುತ್ತದೆ. ಆದ್ದರಿಂದ ಕೈಗಾರಿಕೆಗಳ ತ್ವರಿತ ಬೆಳವಣಿಗೆಗೆ ಆರ್ಥಿಕ ಯೋಜನೆಗಳು ಅವಶ್ಯಕ.

4) ಉದ್ಯೋಗಾವಕಾಶ ಸೃಷ್ಟಿ: ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕೆಂದರೆ ಯೋಜನೆ ಅತ್ಯಗತ್ಯ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ ಯೋಜನೆಗಳಿಂದ ಮಾತ್ರ ಸಾಧ್ಯ.

5) ಜೀವನಮಟ್ಟ ಸುಧಾರಣೆ: ಜನರ ಜೀವನಮಟ್ಟವನ್ನು ಸುಧಾರಿಸಬೇಕೆಂದರೆ, ಯೋಜನೆಗಳು ಅತ್ಯಾವಶ್ಯಕ. ಯೋಜನೆಗಳ ಮೂಲಕ ತ್ವರಿತ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದರ ಮೂಲಕ ಜನರ ತಲಾದಾಯವನ್ನು ಹೆಚ್ಚಿಸಿ ಜೀವನಮಟ್ಟವನ್ನು ಸುಧಾರಿಸಬಹುದು.

6) ವಿದೇಶಿ ವ್ಯಾಪಾರದ ಬೆಳವಣಿಗೆ: ವಿದೇಶಿ ವ್ಯಾಪಾರವು ದೇಶದ ಬೆಳವಣಿಗೆಯಲ್ಲಿ ಬಹುಮುಖ್ಯವಾದ ಪಾತ್ರ ವಹಿಸುತ್ತದೆ. ಇಂದು ಅನೇಕ ಹಿಂದುಳಿದ ರಾಷ್ಟ್ರಗಳು ತಮ್ಮ ಪಾವತಿ ಶಿಲ್ಕಿನಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿವೆ. ಅದಕ್ಕೆ ಭಾರತ ಕೂಡ ಹೊರತಾಗಿಲ್ಲ. ಆದ್ದರಿಂದ ದೇಶದ ವಿದೇಶಿ ವ್ಯಾಪಾರ ಕ್ಷೇತ್ರವನ್ನು ವಿಸ್ತರಿಸಿ ವ್ಯಾಪಾರದ ಕರಾರುಗಳನ್ನು ಉತ್ತಮಪಡಿಸಿಕೊಳ್ಳಲು ಯೋಜನೆಗಳು ಅವಶ್ಯಕ.

7) ಸಂಪನ್ಮೂಲಗಳ ಸದ್ಬಳಕೆ: ದೇಶದಲ್ಲಿ ಅನೇಕ ಸಂಪನ್ಮೂಲಗಳು ಹೇರಳವಾಗಿ ಲಭ್ಯವಿದೆ. ಭಾರತವು ಬಡಜನರಿಂದ ಕೂಡಿರುವ ಒಂದು ಸಂಪದ್ಭರಿತ ದೇಶವಾಗಿದೆ. ಲಭ್ಯವಿರುವ ಸಂಪನ್ಮುಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಆರ್ಥಿಕ ಯೋಜನೆ ತುಂಬಾ ಅವಶ್ಯಕ.

8) ಬಂಡವಾಳ ಕೊರತೆ ಸಮಸ್ಯೆಯ ನಿವಾರಣೆ: ಬಂಡವಾಳವು ಬಹುಮುಖ್ಯವಾದ ಉತ್ಪಾದನಾ ಕರ್ತೃ. ಭಾರತವು ಬಂಡವಾಳ ಕೊರತೆಯ ಸಮಸ್ಯೆಯನ್ನು ಎದುರಿಸುತ್ತಿದೆ. ಈ ಸಮಸ್ಯೆಯ ನಿವಾರಣೆಗೆ ಯೋಜನೆ ಬೇಕಾಗಿದೆ.

9) ಸಮತೋಲನ ಅಭಿವೃದ್ಧಿ: ಭಾರತವು ಇಂದು ಎದುರಿಸುತ್ತಿರುವ ಅನೇಕ ಗಂಭೀರ ಸಮಸ್ಯೆಗಳಲ್ಲಿ ಪ್ರಾದೇಶಿಕ ಅಸಮತೋಲನದ ಸಮಸ್ಯೆಯು ಒಂದು. ವಿವಿಧ ಪ್ರದೇಶಗಳು ಮತ್ತು ಕ್ಷೇತ್ರಗಳ ಅಸಮತೋಲನ ಅಭಿವೃದ್ಧಿಯ ಸಾಧನೆಗೆ ಯೋಜನೆಗಳು ಅತ್ಯಾವಶ್ಯಕ.

10) ಆರ್ಥಿಕ ಸಮಾನತೆ: ಭಾರತವು ಎಲ್ಲಾ ಪ್ರದೇಶಗಳ ಸಮಾನ ಆರ್ಥಿಕ ಅಭಿವೃದ್ಧಿಯನ್ನು ಹೊಂದಬೇಕಾದರೆ ಯೋಜಿತ ಅರ್ಥವ್ಯವಸ್ಥೆಯ ಎಲ್ಲಾ ಪ್ರದೇಶಗಳಿಗೂ ಸಮನಾದ ಆದ್ಯತೆಯನ್ನು ನೀಡಬೇಕು. ಇದರಿಂದ ಪ್ರಾದೇಶಿಕ ಅಸಮಾನತೆ ಕಡಿಮೆಯಾಗಿ ಆರ್ಥಿಕ ಸಮಾನತೆ ಉಂಟಾಗುತ್ತದೆ.

11) ಆರ್ಥಿಕ ಸ್ವಾವಲಂಬನೆ: ಭಾರತದಲ್ಲಿ ಕೆಲವು ಸರಕುಗಳ ಪೂರೈಕೆ ಮತ್ತು ಬೇಡಿಕೆಗಳ ನಡುವೆ ಅಗಾಧ ಅಂತರವಿದೆ. ಅನೇಕ ಸರಕುಗಳನ್ನು ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಿ ಆರ್ಥಿಕ ಸ್ವಾವಲಂಬನೆ ಸಾಧಿಸಲು ಯೋಜಿತ ಅಭಿವೃದ್ಧಿಯ ಅವಶ್ಯಕತೆ ಇದೆ.

12) ಸಾಮಾಜಿಕ ನ್ಯಾಯ: ದೇಶದಲ್ಲಿ ಹಿಂದುಳಿದವರು, ದುರ್ಬಲ ವರ್ಗದವರು ಗರಿಷ್ಟ ಸಂಖ್ಯೆಯಲ್ಲಿದ್ದಾರೆ. ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಯೋಜನೆಗಳು ಅತ್ಯವಶ್ಯ.

13) ಆರ್ಥಿಕ ಸ್ಥಿರತೆ: ಆರ್ಥಿಕ ಸ್ಥಿರತೆ ಅಭಿವೃದ್ಧಿಯ ಅತ್ಯಂತ ಮುಖ್ಯವಾದ ಅಂಶವಾಗಿದೆ. ದೇಶದಲ್ಲಿ ಆರ್ಥಿಕ ಯೋಜನೆಗಳನ್ನು ಜಾರಿಗೆ ತಂದು ಆರ್ಥಿಕ ಸ್ಥಿರತೆಯನ್ನು ಕಾಪಾಡುವುದು ಜರೂರು ಅವಶ್ಯಕತೆಯಾಗಿದೆ.

ಹೀಗೆ ಆರ್ಥಿಕ ಯೋಜನೆಗಳು ದೇಶದಲ್ಲಿ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಲು ಅವಶ್ಯವಾಗಿ ಬೇಕಾಗಿದೆ. ಆಧುನಿಕ ಜಗತ್ತಿನಲ್ಲಿ ಎಲ್ಲಾ ದೇಶಗಳು ಒಂದಲ್ಲ ಒಂದು ರೀತಿಯಲ್ಲಿ ಆರ್ಥಿಕ ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ಈ ದಿಸೆಯಲ್ಲಿ ಭಾರತವು ಹಿಂದೆ ಸರಿಯುವುದು ಸರಿಯಲ್ಲ.

**ಭಾರತದಲ್ಲಿ ಆರ್ಥಿಕ ಯೋಜನೆಗಳ ಸಾಮಾನ್ಯ ಧ್ಯೇಯೋದ್ದೇಶಗಳು:**

ಭಾರತವು ಸ್ವಾತಂತ್ರ್ಯ ಗಳಿಸಿದ ತರುವಾಯ 1951ರಲ್ಲಿ ಪ್ರಥಮ ಬಾರಿಗೆ ಆರ್ಥಿಕ ಯೋಜನೆಯನ್ನು ಅನುಷ್ಠಾನಗೊಳಿಸಿತು. 1950ರಲ್ಲಿ ಸ್ಥಾಪನೆಗೊಂಡ ಯೋಜನಾ ಆಯೋಗ ಯೋಜನೆಯ ಕರಡುಪ್ರತಿಯನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಮಗ್ನವಾಗಿದೆ. ಭಾರತದಲ್ಲಿ ಇದುವರೆಗೆ ಅನುಷ್ಟಾನಗೊಂಡ ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಯೋಜನೆಯ ದೀರ್ಘಕಾಲಿಕ ಸಾಮಾನ್ಯ ಧ್ಯೇಯೋದ್ದೇಶಗಳನ್ನು ಸ್ಪಷ್ಟಪಡಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.

1) ಆರ್ಥಿಕ ಪ್ರಗತಿ ಸಾಧನೆ

2) ಸ್ವಾವಲಂಬನೆಯ ಸಾಧನೆ

3) ನಿರುದ್ಯೋಗ ನಿವಾರಣೆ

4) ಆದಾಯ ಅಸಮಾನತೆಯ ಪರಿಹಾರ

5) ಬಡತನ ನಿರ್ಮೂಲನೆ

6) ಆರ್ಥಿಕತೆಯ ಆಧುನೀಕರಣ

7) ರಾಷ್ಟ್ರೀಯ ಆದಾಯದ ವೃದ್ಧಿ

8) ಸಾಮಾಜಿಕ ನ್ಯಾಯ

9) ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಸ್ಥಾಪನೆ

10) ದೇಶದ ಸರ್ವಾಂಗೀಣ ಅಭಿವೃದ್ಧಿ.

## ಪಂಚವಾರ್ಷಿಕ ಯೋಜನೆಗಳ ಸಾಧನೆಗಳು ಹಾಗೂ ವಿಫಲತೆಗಳು (1ರಿಂದ 11 ಪಂಚವಾರ್ಷಿಕ ಯೋಜನೆಗಳು).

**ಭಾರತದ ಪಂಚವಾರ್ಷಿಕ ಯೋಜನೆಗಳ ಸಾಧನೆ ಮತ್ತು ವೈಫಲ್ಯ:**

ಭಾರತವು ಸ್ವಾತಂತ್ರ್ಯ ಪಡೆಯುತ್ತಲೇ ತ್ವರಿತ ಆರ್ಥಿಕಾಭಿವೃದ್ಧಿಯ ಸಾಧನೆಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸುವ ನಿರ್ಧಾರ ಕೈಗೊಂಡಿತು. ಮೊದಲ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವುದರೊಂದಿಗೆ ಯೋಜನಾ ಶಕೆ ಪ್ರಾರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೆ 11 ಪಂಚವಾರ್ಷಿಕ ಯೋಜನೆಗಳು ಪೂರ್ಣಗೊಂಡಿದ್ದು ಈಗ ನಾವು 12ನೇ ಯೋಜನೆಯಲ್ಲಿದ್ದೇವೆ. 1951ರಿಂದ 1956ರವರೆಗೆ ಮೊದಲನೇ ಯೋಜನೆ, 1956ರಿಂದ 1961ರವರೆಗೆ ಎರಡನೇ ಯೋಜನೆ, 1961ರಿಂದ 1966ರವರೆಗೆ ಮೂರನೇ ಯೋಜನೆ, 1966–1969 ಮೊದಲನೇ ವಾರ್ಷಿಕ ಯೋಜನೆಗಳು (ಹಸಿರು ಕ್ರಾಂತಿ ಅವಧಿ) 1969ರಿಂದ 1974ರವರೆಗೆ ಐದನೇ ಯೋಜನೆ, ಈ ಮಧ್ಯೆ 1978–80ರವರೆಗೆ ಉರುಳುವ ಯೋಜನೆಗಳು ಬಂದವು. 1980ರಿಂದ 1985ರವರೆಗೆ ಆರನೇ ಯೋಜನೆ, 1990–1992ರವರೆಗೆ ಮೂರನೇ ಬಾರಿ ವಾರ್ಷಿಕ ಯೋಜನೆಗಳು ಬಂದು, ಅವುಗಳನ್ನು ಆರ್ಥಿಕ ಸುಧಾರಣಾ ಅವಧಿ (ಎಲ್.ಪಿ.ಜಿ) ಎನ್ನುವರು. 1992ರಿಂದ 1997ರವರೆಗೆ ಎಂಟನೇ ಯೋಜನೆ ಹಾಗೂ 1997ರಿಂದ 2002ರವರೆಗೆ ಒಂಬತ್ತನೇ ಯೋಜನೆ, 2002ರಿಂದ 2007ರವರೆಗೆ 10ನೇ, 2007–2012ರವರೆಗೆ 11ನೇ ಯೋಜನೆ. ಹೀಗೆ 11 ಯೋಜನೆಗಳು ಪೂರ್ಣಗೊಂಡಿವೆ.

ಭಾರತವು ಈಗಾಗಲೇ ಸುಮಾರು ಅರವತ್ತು ವರ್ಷಗಳ ಯೋಜಿತ ಆರ್ಥಿಕಾಭಿವೃದ್ಧಿಯನ್ನು ಕಂಡಿದೆ. ಈ ಅವಧಿಯಲ್ಲಿ ಸಾಧಿಸಿದ ಪ್ರಗತಿ ಮತ್ತು ವಿಫಲವಾದ ಕ್ಷೇತ್ರಗಳ ಕೂಲಂಕುಷ ಅಧ್ಯಯನ ಮಾಡಿದರೆ ಯೋಜನೆಗಳ ನಿಜವಾದ ಸಾಧನೆ ತಿಳಿಯುತ್ತದೆ. ಈ ಅಧ್ಯಯನ ಮಿಶ್ರಪ್ರತಿಫಲಗಳ ಸಂಕ್ಷಿಪ್ತ ವಿವರಣೆಯಾಗಿ ಹೊರಹೊಮ್ಮುವುದು ನಮ್ಮ ಗಮನಕ್ಕೆ ಬರುತ್ತದೆ.

**ಯೋಜನೆಗಳ ಸಾಧನೆಗಳು:**

ಕಳೆದ ಆಲರು ದಶಕಗಳಾವಧಿಯು ಯೋಜಿತ ಆರ್ಥಿಕಾಭಿವೃದ್ಧಿಯ ಕಾಲದಲ್ಲಿ ಅನೇಕ ಸಾಧನೆಗಳನ್ನು ಮಾಡಲಾಗಿದೆ. ಅವುಗಳ ಸ್ಥೂಲ ಪರಿಚಯ ಈ ಕೆಳಗಿನಂತಿವೆ.

**1) ಬೆಳವಣಿಗೆ ಪ್ರಕ್ರಿಯೆಯ ಆರಂಭ:**

20ನೇ ಶತಮಾನದ ಮೊದಲರ್ಧ ಭಾಗದಲ್ಲಿ ಬ್ರಿಟೀಷರು ವಸಾಹತುಷಾಹಿ ನೀತಿಯಿಂದಾಗಿ ಯಾವುದೇ ರೀತಿಯ ಆರ್ಥಿಕ ಬೆಳವಣಿಗೆಯಿರಲಿಲ್ಲ. ದೇಶದಲ್ಲಿ ರಾಷ್ಟ್ರೀಯ ಆದಾಯ, ತಲಾದಾಯ, ಬಂಡವಾಳ ಹೂಡಿಕೆ ಪ್ರಮಾಣ ಎಲ್ಲವೂ ಕಡಿಮೇ ಇದ್ದು, ಆರ್ಥಿಕ ಯೋಜನೆಗಳ ಮೂಲಕ ಬೆಳವಣಿಗೆಯ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಕಳೆದ ಆರು ದಶಕಗಳ ಕಾಲದ ಆರ್ಥಿಕ ಯೋಜನೆಯ ಫಲವಾಗಿ ದೇಶದಲ್ಲಿ ರಾಷ್ಟ್ರೀಯ ಬೆಳವಣಿಗೆ ನೀತಿಯೊಂದು ಜಾರಿಗೆ ಬಂದಾಯಿತು.

**2) ಮೂಲ ಸೌಕರ್ಯಗಳ ನಿರ್ಮಾಣ:**

ಇಂಧನ ಉತ್ಪಾದನೆ, ನೀರಾವರಿ, ಸಾರಿಗೆ ಮತ್ತು ಸಂಪರ್ಕ, ಶಿಕ್ಷಣ ಮುಂತಾದ ಮೂಲ ಸೌಕರ್ಯಗಳು ಆರ್ಥಿಕಾಭಿವೃದ್ಧಿ ಮೂಲ ಸಾಧನಗಳಿದ್ದ ಹಾಗೆ. ಅವುಗಳ ಕೊರತೆ ಅಭಿವೃದ್ಧಿಯನ್ನು ತಡೆಹಿಡಿಯುತ್ತದೆ. ಆದ್ದರಿಂದ ಭಾರತದಲ್ಲಿ ವಿವಿಧ ಆರ್ಥಿಕ ಯೋಜನೆಗಳ ಅವಧಿಯಲ್ಲಿ ಈ ಮೂಲ ಸೌಕರ್ಯಗಳ ನಿರ್ಮಾಣಕ್ಕೆ ವಿಶೇಷ ಆದ್ಯತೆ ನೀಡಲಾಯಿತು. ತತ್ಪರಿಣಾಮವಾಗಿ ವಿದ್ಯುತ್ ಉತ್ಪಾದನೆ ಎರಡನೇ ಯೋಜನೆಯ ಅವಧಿಯಲ್ಲಿದ್ದ ಕೇವಲ 3,400 ಮೇಗಾವ್ಯಾಟ್‌ನಿಂದ 2012–13ರ ವೇಳೆಗೆ 2,28,722 ಮೇಗಾವ್ಯಾಟ್‌ಗಳಿಗೇರಿದೆ. ಮೊದಲ ನಾಲ್ಕು ದಶಕಗಳ ಅವಧಿಯ ಯೋಜನಾ ಯುಗದಲ್ಲಿ ಸುಮಾರು 9000 ಕಿ.ಮೀ. ಉದ್ದದ ರೈಲ್ವೆ ಟ್ರಾಕ್ ನಿರ್ಮಿಸಲಾಯಿತು. ಸುಮಾರು 8,000 ಕಿ.ಮೀ. ಉದ್ದದ ರೈಲ್ವೆ ಟ್ರಾಕನ್ನು ವಿದ್ಯುದ್ದೀಕರಣಗೊಳಿಸಲಾಯಿತು. ಹಾಗೂ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಗಮನ ಹರಿಸಲಾಯಿತು. ವಾಯು ಸಾರಿಗೆ ಮತ್ತು ಜಲ ಸಾರಿಗೆಗಳು ಸಾಕಷ್ಟು ಅಭಿವೃದ್ಧಿಗೊಂಡವು. ನೀರಾವರಿ ಮತ್ತು ಶಿಕ್ಷಣ ಸೌಲಭ್ಯಗಳು ವಿಸ್ತರಣೆಗೊಂಡವು.

**3) ಮೂಲ ಮತ್ತು ಬಂಡವಾಳ ಸರಕು ಕೈಗಾರಿಕೆಗಳ ಅಭಿವೃದ್ಧಿ:**

ದೇಶಕ್ಕೆ ಸ್ವಾತಂತ್ರ್ಯ ಬರುವ ವೇಳೆಯಲ್ಲಿ ಕೈಗಾರಿಕಾ ರಂಗ ತೀರಾ ಹಿಂದುಳಿದಿತ್ತು. ಸ್ವಾತಂತ್ರ್ಯ ನಂತರ ಕಬ್ಬಿಣ ಮತ್ತು ಉಕ್ಕು, ಕೈಗಾರಿಕಾ ಯಂತ್ರೋಪಕರಣ, ಯಂತ್ರಗಳು, ಭಾರೀ ಇಂಜಿನಿಯರಿಂಗ್, ವಿದ್ಯುತ್ ಯಂತ್ರಗಳು, ಸಾರಿಗೆ ಸಲಕರಣೆಗಳು, ಸಿಮೆಂಟ್ ಮುಂತಾದ ಮೂಲ ಮತ್ತು ಬಂಡವಾಳ ಸರಕುಗಳು ಕೈಗಾರಿಕೆಗಳು ಅಭಿವೃದ್ಧಿಗೊಂಡವು.

**4)ಕೃಷಿ ಸುಧಾರಣೆ ಮತ್ತು ಹಸಿರು ಕ್ರಾಂತಿ:**

ಕೃಷಿ ಸುಧಾರಣೆ ಮತ್ತು ಹಸಿರು ಕ್ರಾಂತಿ ಆರ್ಥಿಕ ಯೋಜನೆಗಳ ಬಹುಮುಖ್ಯ ಸಾಧನೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ವ್ಯಾಪಕ ಸುಧಾರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಭೂ ಸುಧಾರಣೆ, ನೀರಾವರಿ ಸೌಲಭ್ಯಗಳ ಪೂರೈಕೆ, ಕೃಷಿಯ ಆಧುನೀಕರಣ, ಯಾಂತ್ರಿಕೃತ ಬೇಸಾಯ, ವೈಜ್ಞಾನಿಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಯೋಜನೆಗಳ ಫಲವಾಗಿ ಕೃಷಿ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಸಂಭವಿಸಿತು.

**5) ರಾಷ್ಟ್ರೀಯ ಆದಾಯದ ಹೆಚ್ಚಳ:**

ಸ್ವಾತಂತ್ರ್ಯ ನಂತರ ಆರ್ಥಿಕ ಯೋಜನೆಗಳ ಅನುಷ್ಠಾನದ ಪರಿಣಾಮವಾಗಿ ರಾಷ್ಟ್ರೀಯ ಆದಾಯ

ಮತ್ತು ತಲಾದಾಯಗಳ ಗಣನೀಯ ಪ್ರಮಾಣದಲ್ಲಿ ಹೆಚ್ಚಿದವು. ತಲಾ ಆದಾಯ 1950–51ರ ರೂ.255ರಿಂದ 2015–16ರ ವೇಳೆಗೆ ರೂ.1,25,000ಕ್ಕಿಂತ ಹೆಚ್ಚಿದೆ. ಕಳೆದ ಆರು ದಶಕಗಳ ಯೋಜಿತ ಅಭಿವೃದ್ಧಿಯ ಫಲವಾಗಿ ರಾಷ್ಟ್ರೀಯ ಆದಾಯ ಮತ್ತು ತಲಾದಾಯಗಳು ಹಲವಾರು ಪಟ್ಟು ಹೆಚ್ಚಿವೆ. ಇದರಿಂದಾಗಿ ಜನರ ಜೀವನಮಟ್ಟದಲ್ಲಿ ಸಾಕಷ್ಟು ಸುಧಾರಣೆಗಳಿವೆ.

**6) ಸಾರ್ವಜನಿಕ ರಂಗದ ಬೆಳವಣಿಗೆ:**

ಭಾರತದಲ್ಲಿ ಆರ್ಥಿಕ ಯೋಜನೆಗಳ ಪ್ರಮುಖ ಕೊಡುಗೆಯೆಂದರೆ ಸಾರ್ವಜನಿಕ ರಂಗದ ಅದ್ಭುತ ಬೆಳವಣಿಗೆಯಾಗಿದೆ. ಯೋಜನೆಗಳ ಫಲವಾಗಿ ಇಂದು ಬೃಹದಾಕಾರವಾಗಿ ಬೆಳೆದಿದೆ. ಯೋಜನೆಗಳಾವಧಿಯಲ್ಲಿ ಸಾರ್ವಜನಿಕ ರಂಗದ ಕ್ಷೇತ್ರದಲ್ಲಿ ಶೇ.45ರಷ್ಟು ಬಂಡವಾಳ ಹೂಡಿಕೆಯಾಗಿದೆ. ಇದೇ ವೇಳೆಯಲ್ಲಿ ಸಾರ್ವಜನಿಕ ಕ್ಷೇತ್ರದ ಹಣಕಾಸಿನ ಸಂಸ್ಥೆಗಳೂ ಸಹ ಅದ್ಭುತವಾಗಿ ಬೆಳವಣಿಗೆ ಸಾಧಿಸಿವೆ. 20 ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಗಿದೆ. ಹಾಗೂ ಅನೇಕ ವಿಶೇಷ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ,

**7) ಹೆಚ್ಚಿದ ಆಹಾರ ಉತ್ಪಾದನೆ:**

ಯೋಜನೆಗಳ ಅವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧಿಸಲಾದ ಅದ್ಭುತ ಪ್ರಗತಿಯಿಂದಾಗಿ ಕೃಷಿ ಉತ್ಪಾದನೆ 1950–51ರ 50.8 ಮಿಲಿಯನ್ ಟನ್‌ಗಳಿಂದ 2013–14ರಲ್ಲಿ 264 ಮಿಲಿಯನ್ ಟನ್‌ಗಳಿಗೇರಿದೆ. ಇದರಿಂದಾಗಿ ದೇಶವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಸಾಧ್ಯವಾಗಿದೆ.

**8) ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ:**

ಬಹುಪಯೋಗಿ ಉಪಗ್ರಹಗಳನ್ನು ಹಾರಿಬಿಡುತ್ತಿರುವ ಕೆಲವೇ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಕೂಡ ಒಂದು. ತಂತ್ರಜ್ಞಾನದ ಆಮದಿಗಾಗಿ ಇದೇಶವನ್ನು ಅವಲಂಬಿಸಿದ್ದ ದೇಶ ಇಂದು ವಿವಿಧ ಕ್ಷೇತ್ರಗಳಲ್ಲಿ ತಾಂತ್ರಿಕ ಪರಿಣತಿ ಸಾಧಿಸಿದೆ. ದೇಶದಲ್ಲಿ ಅನೇಕ ಸಂಶೋಧನಾ ಕೇಂದ್ರಗಳು ಅಸ್ತಿತ್ವಕ್ಕೆ ಬಂದಿವೆ. ತಮ್ಮ ಸ್ವಂತ ಉಪಗ್ರಹವನ್ನು ಹೊಂದಿರುವ ಕೆಲವೇ ರಾಷ್ಟ್ರಗಳ ಸಾಲಿಗೆ ಭಾರತ ಸೇರಿದೆ.

**9) ಕೈಗಾರಿಕಾ ಉತ್ಪಾದನೆಯಲ್ಲಿ ಹೆಚ್ಚಳ:**

ಕಬ್ಬಿಣ ಮತ್ತು ಉಕ್ಕು, ಸಿಮೆಂಟು, ಯಂತ್ರೋಪಕರಣಗಳು, ಕಾಗದ, ಭಾರಿ ವಿದ್ಯುತ್ ಉಪಕರಣಗಳು, ಇಂಜಿನಿಯರಿಂಗ್ ಸರಕುಗಳು, ಎಲೆಕ್ಟ್ರಾನಿಕ್ ಸರಕುಗಳು, ತಾಮ್ರ, ಅಲ್ಯೂಮಿನಿಯಂ ಮುಂತಾದ ಕೈಗಾರಿಕಾ ಸರಕುಗಳ ಉತ್ಪಾದನೆಗಾಗಿ ಅನೇಕ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೈಗಾರಿಕಾ ಉತ್ಪಾದನೆ ವಾರ್ಷಿಕ ಸರಾಸರಿ ಶೇ.5ಕ್ಕಿಂತಲೂ ಹೆಚ್ಚಿನ ದರದಲ್ಲಿ ಏರಿಕೆಯಾಗಿದೆ.

**10) ವಿದೇಶಿ ವ್ಯಾಪಾರ ಕ್ಷೇತ್ರದಲ್ಲಿ ಸುಧಾರಣೆ:**

ಸ್ವಾತಂತ್ರ್ಯ ಪೂರ್ವದಲ್ಲಿ ದೇಶವು ಪ್ರಾಥಮಿಕ ಸರಕುಗಳನ್ನು ರಫ್ತು ಮಾಡಿ ಬಂಡವಾಳ ಸರಕುಗಳನ್ನು ಆಮದು ಮಾಡಿಕೊಳ್ಳುತ್ತಲಿತ್ತು. ಆದರೆ ಸ್ವಾತಂತ್ರ್ಯ ನಂತರ ಇಂದು ಬಂಡವಾಳ ಸರಕುಗಳಿಗಾಗಿ ವಿದೇಶವನ್ನು ಅವಲಂಬಿಸಬೇಕಾದ ಪರಿಸ್ಥಿತಿಯಿಲ್ಲ. ಇಂದು ಇಂಜಿನಿಯರಿಂಗ್ ಸರಕುಗಳು ಮತ್ತು ಇತರೆ ಯಂತ್ರೋಪಕರಣಗಳ ರಫ್ತು ಗಣನೀಯವಾಗಿ ಹೆಚ್ಚಿದೆ.

**11) ಶಿಕ್ಷಣ ಕ್ಷೇತ್ರದಲ್ಲಿ:**

1950–51 ಕೇವಲ ಶೇ.16.7ರಷ್ಟಿದ್ದ ಸಾಕ್ಷರತಾ ಪ್ರಮಾಣ 2011ರ ವೇಳೆಗೆ ಶೇ.74.04ಕ್ಕೇರಿದೆ. ಅದೇ ರೀತಿ ತಾಂತ್ರಿಕ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಮತ್ತು ತರಬೇತಿ ಕೇಂದ್ರಗಳ ಸಂಖ್ಯೆ ಸಹ ಗಣನೀಯವಾಗಿ ಹೆಚ್ಚಿದೆ.

**12) ಸಾಮಾಜಿಕ ಸೇವೆಗಳ ವೃದ್ಧಿ:**

ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳು, ಸಂಪರ್ಕ ವ್ಯವಸ್ಥೆ, ಮನರಂಜನಾ ಕೇಂದ್ರಗಳು ಮುಂತಾದ ಸಾಮಾಜಿಕ ಸೇವೆಗಳು ಕ್ಷೇತ್ರದಲ್ಲಿ ಯೋಜನೆಗಳ ಅವಧಿಯಲ್ಲಿ ಸಾಕಷ್ಟು ವೃದ್ಧಿಯಾಗಿವೆ.

**ಆರ್ಥಿಕ ಯೋಜನೆಗಳ ವೈಫಲ್ಯ:**

ಭಾರತದಲ್ಲಿ ಆರ್ಥಿಕ ಯೋಜನೆಗಳು ಸಾಕಷ್ಟು ಪ್ರಗತಿ ಸಾಧಿಸಿರುವುದು ಈ ಹಿಂದಿನ ಚರ್ಚೆಯಿಂದ ಸ್ಪಷ್ಟವಾಯಿತು. ಆದರೆ ಅವುಗಳು ದೋಷಪೂರಿತವಾಗಿರಲಿಲ್ಲ ಎಂದು ಹೇಳಬರುವುದಿಲ್ಲ. ಆರ್ಥಿಕ ಯೋಜನೆಗಳ ಕಾರ್ಯವೈಖರಿಯ ಬಗ್ಗೆ ಅನೇಕ ಬಗೆಯ ಟೀಕೆಗಳು ಸುರಿಮಳಗಯ್ಯಲಾಗಿದೆ. ಯೋಜನೆಗಳಿಂದ ಸಾಕಷ್ಟು ಪ್ರಗತಿ ಸಾಧಿಸಿರುವುದು ನಿಜವಾದರು ಪ್ರಗತಿಯ ಫಲ ಯಾರಿಗೆ ತಲುಪಿದೆ ಎಂಬುದು ಮುಖ್ಯ. ಈ ಹಿನ್ನೆಲೆಯಲ್ಲಿ ಭಾರತದಲ್ಲಿನ ಆರ್ಥಿಕ ಯೋಜನೆಗಳ ವೈಫಲ್ಯವನ್ನು ಕೂಲಂಕಷವಾಗಿ ಅಧ್ಯಯನ ಮಾಡುವುದು ತುಂಬಾ ಸೂಕ್ತ.

1) ಗುರಿ ಮತ್ತು ಸಾಧನೆಗಳ ನಡುವಿನ ಅಂತರ: ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಅನುಷ್ಠಾನಗೊಂಡ ಮೇಲೆ ಸಾಕಷ್ಟು ಪ್ರಗತಿಯನ್ನೇನೋ ಸಾಧಿಸಲಾಗಿದೆ. ಆದರೆ ಇನ್ನು ಸಾಧಿಸಬೇಕಾದುದು ಬಹಳ ಇದೆ.

2) ಸಾಮಾಜಿಕ ನ್ಯಾಯದ ನಿರ್ಲಕ್ಷ.

3) ಕಾರ್ಯಗತದಲ್ಲಿ ಸೋಲು: ದೇಶದಲ್ಲಿ ಆರ್ಥಿಕ ಯೋಜನೆಗಳನ್ನು ತಯಾರಿಸಿ ಅನುಷ್ಠಾನಗೊಳಿಸುವ ವೇಳೆಯಲ್ಲಿ ಅತ್ಯುನ್ನತ ಧ್ಯೇಯೋದ್ದೇಶಗಳನ್ನು ಇಟಟುಕೊಳ್ಳಲಾಗಿತ್ತಾದರೂ ಅವುಗಳ ಸಾಧನೆ ಮಾತ್ರ ಸಾಧ್ಯವಾಗಿಲ್ಲ. ಅನೇಕ ಮಹತ್ವದ ಉದ್ದೇಶಗಳು ಉದ್ದೇಶಗಳಾಗಿಯೇ ಉಳಿದವು. ಯೋಜನೆಗಳನ್ನು ನಿರೀಕ್ಷಿತ ರೀತಿಯಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲದಿರುವುದು ಅನೇಕ ತೊಂದರೆಗಳಿಗೆ ಕಾರಣವಾಯಿತು.

4) ಬಡತನ ನಿವಾರಣೆ ಸಾಧ್ಯವಾಗಿಲ್ಲ.

5) ಕಾಡುತ್ತಿರುವ ನಿರುದ್ಯೋಗ ಸಮಸ್ಯೆ.

6) ಅಸಮಾನತೆಯ ಅಸ್ತಿತ್ವ: ಸಾಮಾಜಿಕ ನ್ಯಾಯ ಸ್ಥಾಪನೆಯಲ್ಲಿ ಆದಾಯ ಅಸಮಾನತೆ ನಿವಾರಣೆ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಭಾರತದಲ್ಲಿ ಇಷ್ಟೊಂದು ದೀರ್ಘಕಾಲದ ಆರ್ಥಿಕ ಯೋಜನೆಯ ನಂತರವು ಆದಾಯ ಅಸಮಾನತೆ ಅಸ್ತಿತ್ವದಲ್ಲಿದೆ. ದೇಶವು ಉಳ್ಳವರು ಮತ್ತು ಇಲ್ಲದವರೆಂಬ ಎರಡು ವರ್ಗಗಳ ಅಸ್ತಿತ್ವ ಹೊಂದಿದೆ.

7) ದೋಷಪೂರಿತ ಕೈಗಾರಿಕಾ ತಂತ್ರ.

8) ಯೋಗ್ಯ ಹಣಕಾಸಿನ ತಂತ್ರದ ಅಭಾವ.

9) ಪ್ರಾದೇಶಿಕ ಅಸಮತೋಲನ ಸಮಸ್ಯೆ.

10) ಹಣದುಬ್ಬರದ ಸಮಸ್ಯೆ.

11) ಮಿತಿಮೀರಿದ ಕೇಂದ್ರೀಕರಣ.

## ಕರ್ನಾಟಕದಲ್ಲಿ ಯೋಜನೆ

**ರಾಜ್ಯಮಟ್ಟದ ಯೋಜನಾ ಪ್ರಕ್ರಿಯೆ:**

ರಾಜ್ಯ ಮಟ್ಟದ ಯೋಜನೆಗೆ ಆಯಾ ರಾಜ್ಯದ ಮುಖ್ಯಮಂತ್ರಿಯು ಸಭಾಧ್ಯಕ್ಷರಾಗಿರುವರು. ರಾಜ್ಯದ ಯೋಜನಾ ಇಲಾಖೆಯು ವಿವಿಧ ಆಡಳಿತ ಇಲಾಖೆಗಳಿಗೆ ತಮ್ಮ ಯೋಜನಾ ಆಕಾರದ ಅಂದಾಜು ಮಾಡಲು ಹಾಗೂ ಯೋಜನೆಯ ಪ್ರಸ್ತಾಪ ಮಂಡಿಸಿದ ಬಳಿಕ ಯೋಜನಾ ಇಲಾಖೆಯು ಪರಿಶೀಲನೆ ಮಾಡುವುದು. ನಂತರ ಸಂಬಂಧಪಟ್ಟ ಆಡಳಿತ ಇಲಾಖೆಯ ಕಾರ್ಯದರ್ಶಿಗಳು, ಮುಖ್ಯಕಾರ್ಯದರ್ಶಿಗಳು ಈ ಯೋಜನೆಯನ್ನು ಚರ್ಚಿಸಿ ತಾತ್ಕಾಲಿಕ ಯೋಜನೆ ತಯಾರಿಸುವರು. ಯೋಜನಾ ವರದಿ ತಯಾರಿಸುವಾಗ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಪೂರ್ವಭಾವಿ ಚರ್ಚೆ ಮಾಡುವರು ಮತ್ತು ಸಂಪನ್ಮೂಲಗಳಿಗೆ ಅನ್ವಯಿಸುವಂತೆ ಯೋಜನಾ ಆಯೋಗದ ಡೆಪ್ಯೂಟಿ ಚೇರ್‌ಮನ್‌ರೊಂದಿಗೆ ಅಂತಿಮ ಚರ್ಚೆ ಮಾಡುವರು. ಹೀಗೆ ಸುದೀರ್ಘವಾಗಿ ಚರ್ಚೆ ಮಾಡಿ ಸಿದ್ದಪಡಿಸಿದ ಯೋಜನಾ ವರದಿಯನ್ನು ಅನುಮತಿ ಪಡೆಯಲು

ಸಚಿವ ಸಂಪುಟಕ್ಕೆ ಕಳುಹಿಸುವರು. ರಾಜ್ಯ ಸರ್ಕಾರ ಅಧಿಕಾರಿಗಳು ಹಾಗೂ ಆಯೋಗದೊಂದಿಗೆ ಚರ್ಚೆಯಾದ ಬಳಿಕ ಯೋಜನೆ ಕರಡಿನ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತದೆ.

1) ರಾಜ್ಯ ಆಯೋಗ ಮಂಡಳಿಯು ರಾಜ್ಯದ ಪರಿಮಿತಿಯಲ್ಲಿ ದೊರೆಯುತ್ತಿರುವ ಸಂಪನ್ಮೂಲಗಳನ್ನು ಪರಿಪೂರ್ಣವಾಗಿ ಸದುಪಯೋಗ ಮಾಡಿಕೊಂಡು, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಮಾಡುವಲ್ಲಿ ಯಶಸ್ವಿಯಾಗಿದೆ. ಉದಾ: ಕರ್ನಾಟಕ ರಾಜ್ಯವು ಹಿಮದುಳಿದ ಪ್ರದೇಶವೆಂದೇ ಹೆಸರುವಾಸಿಯಾಗಿರುವ ಉತ್ತರ ಕರ್ನಾಟಕದ ಅಭಿವೃದ್ಧಿ ಮಾಡಲು ವಿಶೇಷ ಪ್ಯಾಕೇಜುಗಳನ್ನೊಳಗೊಂಡಿರುವ ಮಂಡಳಿ ರಚಿಸಿದೆ.

2) ಗಾತ್ರ ಮತ್ತು ಜನಸಂಖ್ಯೆ ದೃಷ್ಟಿಯಿಂದ ರಾಷ್ಟ್ರ ಮತ್ತು ಅಂತರ್ ರಾಜ್ಯ ಯೋಜನೆಗಳಿಗಿಂತ ಚಿಕ್ಕದಾಗಿರುವುದರಿಂದ ರೂಪಿಸುವ ನೀತಿಗಳು ಮತ್ತು ಕಾರ್ಯಗಳು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸಬಹುದು.

3) ಯಾವುದೇ ಒಂದು ಪ್ರದೇಶವಾಗಲಿ ಅಥವಾ ಒಂದು ಸಮುದಾಯದ ಅಭಿವೃದ್ಧಿಗೆ ಸೂಕ್ತವೆನಿಸುವುದು.

4) ಕೇಂದ್ರ ಸರ್ಕಾರದಲ್ಲಿ ರೂಪಿಸಬಹುದಾದ ಕೆಲವು ಮೆಗಾ (ಬೃಹತ್) ಯೋಜನೆಗಳನ್ನು ಹೊರತುಪಡಿಸಿ ಉಳಿದೆಲ್ಲ ಸಣ್ಣಪುಟ್ಟ ವಲಯಗಳ ಅಭಿವೃದ್ಧಿಯಾಗಲು ಯೋಜನೆ ರೂಪಿಸಲು ನೇರವಾಗಿ ಬಂಡವಾಳ ಹೂಡಲು ಸರಳವಾಗುತ್ತದೆ.

5) ಕೇಂದ್ರದಲ್ಲಿ ರೂಪಿತವಾದ ನೀತಿ ಮತ್ತು ನಿಯಮಗಳನ್ನು ರಾಜ್ಯದ ಪರಿಸ್ಥಿತಿಗೆ ಅನುಗುಣವಾಗಿ ಹೊಂದಾಣಿಕೆ ಮಾಡಿಕೊಂಡು ಕಾರ್ಯಗತಗೊಳಿಸುತ್ತದೆ.

6) ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳ ಫಲಿತಾಂಶಗಳನ್ನು ಸರಳವಾಗಿ ಪರಿಶೀಲಿಸಬಹುದು.

7) ರಾಜ್ಯ ಮಟ್ಟದಲ್ಲಿಯ ಅಭಿವೃದ್ಧಿ ಕಾರ್ಯ ಚಟುವಟಿಕೆಗಳಲ್ಲಿ ಆಯಾ ಪ್ರದೇಶದ ಜನರನ್ನು ಪಾಲ್ಗೊಳ್ಳುವಂತೆ ಪ್ರೇರೇಪಿಸಬಹುದು.

8) ಭವಿಷ್ಯದಲ್ಲಿ ಯಾವ ಪ್ರಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ ಅಭಿವೃದ್ಧಿ ಮಾಡಬಹುದೆಂದು ರಾಜ್ಯ ಯೋಜನಾ ಆಯೋಗ ನಿರ್ಧರಿಸುವುದು.

## ರಾಜ್ಯಮಟ್ಟದ ಯೋಜನೆಯ ಪ್ರಯೋಜನಕಾರಿ:

ಭಾರತದ ಯೋಜನಾ ಆಯೋಗವು ಯೋಜನೆಯನ್ನು ವಿಕೇಂದ್ರೀಕರಣಗೊಳಿಸುವುದರ ಫಲವಾಗಿ ಆಯಾ ರಾಜ್ಯಗಳು ಸಂಪೂರ್ಣವಾಗಿ ಯೋಜನಾ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ.

ಕಳೆದ ಹಲವು ದಶಕಗಳಿಂದ ಆರ್ಥಿಕ ಯೋಜನೆಯ ಫಲವಾಗಿ ರಾಜ್ಯಗಳ ಮೂಲ ಸೌಕರ್ಯಗಳಾದ ಇಂಧನ ಉತ್ಪಾದನೆ, ಸಣ್ಣ ಮತ್ತು ಬೃಹತ್ ನೀರಾವರಿ, ಸಾರಿಗೆ ಸಂಪರ್ಕ, ಶಿಕ್ಷಣ ಮುಂತಾದವುಗಳಲ್ಲಿ ಅದ್ಭುತ ಪ್ರಗತಿಯಾಗಿದೆ. ಉದಾ: ಕರ್ನಾಟಕದ ಸಾಕ್ಷರತೆ ಪ್ರಮಾಣ ಶೇ.15ರಿಂದ 2011ರ ವೇಳೆಗೆ 75.60 (82.85% ಪುರುಷ ಮತ್ತು 68.13% ಮಹಿಳೆ)ಕ್ಕೇರಿದೆ. ಸಾಮಾನ್ಯವಾಗಿ ಎಲ್ಲಾ ಗ್ರಾಮಗಳು ರಸ್ತೆಗಳಿಂದ ಜೋಡಿಸಲ್ಪಟ್ಟಿರುವುದಲ್ಲದೆ, ಅದೇ ರೀತಿಯಾಗಿ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಲಾಗಿದೆ.

ಕೈಗಾರಿಕೆ ಪ್ರಾರಂಭಿಸಲು ಆಸಕ್ತಿ ಹೊಂದಿದವರಿಗೆ ಸರ್ಕಾರವು ಅನೇಕ ಅನುಕೂಲತೆ ನೀಡಿದೆ. ಉದಾ: ರಿಯಾಯಿತಿ ದರದಲ್ಲಿ ಸಾಲ, ವಿದ್ಯುತ್, ನೀರಿನ ಪೂರೈಕೆ ಅಲ್ಲದೆ ಕಂದಾಯ ಹಾಗೂ ವಾಣಿಜ್ಯ ತೆರಿಗೆಯಿಂದ ವಿನಾಯಿತಿ ಕೂಡ ನೀಡಿದೆ. ಕೃಷಿ ಅಭಿವೃದ್ಧಿ ಮಾಡಲು ಹಾಗೂ ಉತ್ಪಾದನೆ ಹೆಚ್ಚಿಸಲು ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವುದು, ಗೊಬ್ಬರ ಮತ್ತು ಬೀಜ ನೀಡುವುದು (ಚಿಕ್ಕ ಹಿಡುವಳಿದಾರರಿಗೆ), ಅತ್ಯಲ್ಪ ದರದಲ್ಲಿ ವಿದ್ಯುತ್ ಪೂರೈಕೆ ಹೀಗೆ ಅನೇಕ ಸೌಲಭ್ಯಗಳನ್ನು ನೀಡಲಾಗಿದೆ.

ಪ್ರತಿವರ್ಷ ಸಾವಿರಾರು ನಿರಾಶ್ರಿತ ಜನರಿಗೆ ವಸತಿ ಸೌಲಭ್ಯ ಒದಗಿಸುತ್ತಿರುವುದಲ್ಲದೆ, ಉಚಿತವಾಗಿ ಅಕ್ಕಿ, ಗೋಧಿ, (ಅನ್ನಭಾಗ್ಯ) ಸೀಮೆಎಣ್ಣೆ ಮುಂತಾದ ಪದಾರ್ಥಗಳ ಪೂರೈಕೆ ಮಾಡುತ್ತಿದೆ. ಪರಿಶಿಷ್ಟ ಜಾತಿ,

ಪಂಗಡ ಹಾಗೂ ಹಿಂದುಳಿದ ಜನರಿಗೆ ಶಿಕ್ಷಣ, ಉದ್ಯೋಗ, ವಸತಿ ನಿಲಯಗಳು, ಶಿಷ್ಯವೇತನ ಮುಂತಾದ ಸೌಲಭ್ಯ ಒದಗಿಸುತ್ತಿದೆ. ಎಲ್ಲಾ ಗ್ರಾಮಗಳಲ್ಲಿ ಕಿರಿಯ ಮತ್ತು ಹಿರಿಯ ಮಾದರಿ ಶಾಲೆಗಳನ್ನು ಪ್ರಾರಂಭಿಸಿ, ಅಲ್ಲಿಯ ಮಕ್ಕಳಿಗೆ ಮಧ್ಯಾಹ್ನದ ಊಟ ಹಾಗೂ ಸೈಕಲ್ ಪೂರೈಸುವ (ಬಿಸಿಯೂಟ) ಯೋಜನೆ ಜಾರಿಗೊಳಿಸಿದೆ. ಗ್ರಾಮೀಣ ಪ್ರದೇಶದ ಪರಿಸರ ಮತ್ತು ಜನರ ಆರೋಗ್ಯ ಕಾಪಾಡಲು ಶೌಚಾಲಯದ ವ್ಯವಸ್ಥೆ ಜಾರಿಗೆ ತಂದಿರುವುದಲ್ಲದೆ, ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಿ ವೈದ್ಯ, ದಾದಿಯರ ಹಾಗೂ ಇತರ ಸಿಬ್ಬಂದಿ ನೇಮಕ ಮಾಡಿದೆ. ಹೀಗೆ ಗ್ರಾಮೀಣ ಹಾಗೂ ನಗರ ಜನರ ಸರ್ವತೋಮುಖ ಬೆಳವಣಿಗೆಗೆ ಅನುಷ್ಠಾನಗೊಳಿಸಿದ ಹಲವು ಕಾರ್ಯಕ್ರಮಗಳು ಯಶಸ್ಸು ಕಂಡಿರುವುದೇ ಮೂಲ ಕಾರಣವಾಗಿದೆ.

**ಆರ್ಥಿಕ ಯೋಜನೆಗಳಲ್ಲಿ ಸಾಧಿಸಿದ ಪ್ರಗತಿ:**

ನಮ್ಮ ಇದುವರೆಗಿನ ಯೋಜನೆಗಳಿಂದಾದ ಸಾಧನೆಯು ಈ ಕೆಳಗಿನಂತೆ ವಿವರಿಸಬಹುದಾಗಿದೆ.

**1) ರಾಜ್ಯದ ವರಮಾನ ಮತ್ತು ತಲಾವರಮಾನ:**

ಕರ್ನಾಟಕದಲ್ಲಿ ಆರ್ಥಿಕ ಯೋಜನೆಗಳಲ್ಲಿ ವಿವಿಧ ವಲಯಗಳ ಪ್ರಗತಿಗಾಗಿ ಅಧಿಕ ಬಂಡವಾಳವನ್ನು ವೆಚ್ಚ ಮಾಡುತ್ತಲಿರುವುದರಿಂದ ರಾಜ್ಯದ ನಿವ್ವಳ ವರಮಾನ ಮತ್ತು ತಲಾ ಆದಾಯಗಳಲ್ಲಿ ಗಣನೀಯ ಹೆಚ್ಚಳವಾಗಿವೆ.

**2) ಒಕ್ಕಲುತನ:**

ಆರ್ಥಿಕ ಯೋಜನೆಗಳ ಪರಿಣಾಮವಾಗಿ ಒಕ್ಕಲುತನದ ರಂಗದಲ್ಲಿ ಗಣನೀಯ ಬದಲಾವಣೆ ಕಮಡುಬಂದಿತು. ಖುಷ್ಕಿ ಜಮೀನು ಅಭಿವೃದ್ಧಿ, ಅಧಿಕ ಇಳುವರಿ ತಳಿಗಳ ಕಾರ್ಯಕ್ರಮ, ಕೃಷಿ ವಿಸ್ತರಣಾ ಸೇವೆ, ಕೃಷಿ ಪರಿಕರಗಳ ಸೌಲಭ್ಯ, ಕೃಷಿ ತಂತ್ರಜ್ಞಾನ ಕ್ರಮ ಅಳವಡಿಕೆ ಮುಂತಾದವುಗಳಿಂದ ಒಕ್ಕಲುತನ ಉತ್ಪಾದನೆ ಗಮನಾರ್ಹವಾಗಿ ಹೆಚ್ಚಿದೆ.

**3) ನೀರಾವರಿ:**

ಕರ್ನಾಟಕದ ಒಕ್ಕಲುತನವು ಮಳೆಯನ್ನು ಅವಲಂಬಿಸಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನೀರಾವರಿ ಯೋಜನೆಗಳಿಗೆ ನಮ್ಮ ಆರ್ಥಿಕ ಯೋಜನೆಗಳಲ್ಲಿ ಅಪಾರ ಹಣ ವೆಚ್ಚ ಮಾಡಲಾಗಿದೆ. ರಾಜ್ಯದಲ್ಲಿ ಹರಿಯುವ ನದಿಗಳ ಜಲಸಂಪನ್ಮೂಲಗಳನ್ನು ಮತ್ತು ಅಂತರ್ಜಲ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು ಸಣ್ಣ, ಮಧ್ಯಮ ಮತ್ತು ದೊಡ್ಡ ಪ್ರಮಾಣದ ಹಲವಾರು ನೀರಾವರಿ ಯೋಜನೆಗಳನ್ನು ನಮ್ಮ ಆರ್ಥಿಕ ಯೋಜನೆಗಳಲ್ಲಿ ಕಾರ್ಯಗತಗೊಳಿಸಲಾಗಿದೆ. ಇಂದು ನಮ್ಮ ರಾಜ್ಯದಲ್ಲಿ 14 ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳು, 12 ಮಧ್ಯಮ ಪ್ರಮಾಣದ ನೀರಾವರಿ ಯೋಜನೆಗಳು ಮತ್ತು ಯೋಜನೆತರನ್ವಯ 5 ದೊಡ್ಡ ನೀರಾವರಿ ಯೋಜನೆಗಳು ಮತ್ತು 6 ಮಧ್ಯಮ ನೀರಾವರಿ ಯೋಜನೆಗಳು ಕಾರ್ಯಗತವಾಗಿವೆ.

**4) ವಿದ್ಯುಚ್ಛಕ್ತಿ:**

ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾದ ನದಿಗಳು ಕರ್ನಾಟಕದಲ್ಲಿ ಸಾಕಷ್ಟು ಹರಿದಿವೆ. ಆದ್ದರಿಂದ ನಮ್ಮ ಆರ್ಥಿಕ ಯೋಜನೆಗಳಲ್ಲಿ ಇದರ ಅಭಿವೃದ್ಧಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಗಿದೆ. ಆರ್ಥಿಕ ಯೋಜನೆಗಳು ಪ್ರತಿಫಲವಾಗಿ ರಾಜ್ಯದ ವಿದ್ಯುತ್ ಸ್ಥಾಪಿತ ಸಾಮರ್ಥ್ಯ 1956ರಲ್ಲಿ 189 ಮೆಗಾವ್ಯಾಟ್ ಇದ್ದುದು, 2014–15ರಲ್ಲಿ 15,052 (31.03.2015) ಮೆಗಾವ್ಯಾಟ್‌ಗಳಿಗೆ ಹೆಚ್ಚಿದೆ. ಇಂದು ಕರ್ನಾಟಕದಲ್ಲಿ ಪ್ರತಿವರ್ಷ 2,000 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತಿದೆ.

**5) ಕೈಗಾರಿಕೆ:**

ಕರ್ನಾಟಕದಲ್ಲಿ ಕೈಗಾರಿಕಾಭಿವೃದ್ಧಿಗೆ ಅವಶ್ಯಕವಾದ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿವೆ. ರಾಜ್ಯ ಸರ್ಕಾರದ ಉದಾರ ನೀತಿ, ಕೈಗಾರಿಕೆಗಳ ಬೆಳವಣಿಗೆಗೆ ಕಲ್ಪಿಸುವ ಪರಿಕರಗಳ ಸೌಕರ್ಯ, ಕಡಿಮೆ ಬಡ್ಡಿದರದ ಹಣಕಾಸು ಸೌಕರ್ಯ ಹಿಂದುಳಿದ ಪ್ರದೇಶಗಳಲ್ಲಿ ಉದ್ದಿಮೆಗಳ ಸ್ಥಾಪನೆಗೆ ಪ್ರೋತ್ಸಾಹ, ಕಯಗಾರಿಕಾ ವಸಾಹತುಗಳ ಸೌಲಭ್ಯ ರಿಯಾಯಿತಿಗಳು, ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ ಮುಂತಾದ ಕಾರಣಗಳಿಂದಾಗಿ ಇಂದು ಕರ್ನಾಟಕ

ರಾಜ್ಯವು ಕೈಗಾರಿಕಾ ನಕ್ಷೆಯಲ್ಲಿ ಒಂದಾಗಿದೆ. ಒಟ್ಟು ರಾಜ್ಯದ ಜಿ.ಡಿ.ಪಿ.ಗೆ ಶೇ.26ರಷ್ಟು ಕೊಡುಗೆಯನ್ನು ನೀಡುತ್ತಿದೆ.

**6) ಸಾರಿಗೆ ಮತ್ತು ಸಂಪರ್ಕ:**

ಸಾರಿಗೆ ಮತ್ತು ಸಂಪರ್ಕ ಆರ್ಥಿಕಾಭಿವೃದ್ಧಿಯ ಜೀವನಾಡಿ ಇದ್ದ ಹಾಗೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು 3,973 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಇದ್ದು, ಒಟ್ಟು 9,829 ರಾಜ್ಯ ಹೆದ್ದಾರಿ ಇದ್ದು, ಅಲ್ಲದೆ ಜಿಲ್ಲಾ, ತಾಲ್ಲೂಕು, ಗ್ರಾಮ, ನಗರ ರಸ್ತೆಗಳನ್ನು ನಿರ್ಮಿಸಲಾಗಿದೆ. ಹಲವು ಯೋಜನೆಯಡಿಯಲ್ಲಿ ರಾಜ್ಯದ ಕುಗ್ರಾಮಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ಬಂದರುಗಳ ಅಭಿವೃದ್ಧಿಗೆ ತೀವ್ರ ಗಮನ ಹರಿಸಲಾಗುತ್ತಿದ್ದು ಮಂಗಳೂರು ಮತ್ತು ಕಾರವಾರ ಬಂದರುಗಳು ಅಂತರಾಷ್ಟ್ರೀಯ ಬಂದರುಗಳಾಗಿ ಅಭಿವೃದ್ಧಿ ಹೊಂದಿವೆ.

**7) ಉದ್ಯೋಗಾವಕಾಶ:**

ಜನಸಂಖ್ಯೆಯ ಏಕರಿಕೆಯಿಂದಾಗಿ ಹೆಚ್ಚು ಜನರಿಗೆ ಉದ್ಯೋಗಾವಕಾಶ ಕಲ್ಪಿಸಿ ಕೊಡುವುದು ಅನಿವಾರ್ಯ. ಆದ್ದರಿಂದ ನಮ್ಮ ಆರ್ಥಿಕ ಯೋಜನೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದೆ.

**8) ಸಾಮಾಜಿಕ ಸೇವೆಗಳು:**

ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಮಾಜಿಕ ಸೇವೆಗಳ ಪ್ರಗತಿಗಾಗಿ ಅಪಾರ ಹಣವನ್ನು ತೊಡಗಿಸಲಾಗಿದೆ. ಸಾಮಾಜಿಕ ಸೇವೆಗಳು ನೇರವಾಗಿ ಸಂಪತ್ತನ್ನು ಸಂಪಾದಿಸದಿದ್ದರೂ ಜನರ ಉತ್ಪಾದನಾ ಸಾಮರ್ಥ್ಯವನ್ನು ಸುಧಾರಿಸಲು ಅವು ಸಹಾಯಕಾರಿಯಾಗುತ್ತವೆ. ಶಿಕ್ಷಣ, ಕ್ರೀಡೆ, ಕಲೆ, ಸಂಸ್ಕೃತಿ, ವೈದ್ಯಕೀಯ ಸೌಕರ್ಯ, ನಗರಾಭಿವೃದ್ಧಿ, ಗೃಹ ನಿರ್ಮಾಣ, ನೀರು ಪೂರೈಕೆ, ನಗರ ನೈರ್ಮಲ್ಯ ಮುಮತಾದವುಗಳು ಸಾಮಾಜಿಕ ಸೇವೆಗಳಲ್ಲಿ ಅಡಕವಾಗಿರುತ್ತವೆ. ಮಾಧ್ಯಮಿಕ ಶಾಲೆಗಳ ಮತ್ತು ಕಾಲೇಜುಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದೆ. ಅದರಂತೆಯೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾಕಾರ್ಯಗಳಲ್ಲಿ ಅಭೂತ ಪೂರ್ವ ಪ್ರಗತಿಯಾಗಿದೆ.

ಹೀಗೆ ಪಂಚವಾರ್ಷಿಕ ಯೋಜನೆಗಳಿಂದಾಗಿ, ಹಲವಾರು ಸಾಧನೆಗಳಾಗಿದ್ದು, ಇವೆಲ್ಲವೂ ಪ್ರಗತಿಯ ಸಂಕೇತಗಳಾಗಿವೆ.

# ಅಧ್ಯಾಯ – 5

# ವಿಕೇಂದ್ರೀಕರಣ

**ಮೇಲಿನ ಹಂತದಿಂದ ಕೆಳಹಂತದ ಯೋಜನೆ ಹಾಗೂ ಕೆಳಹಂತದಿಂದ ಉನ್ನತ ಹಂತದ ಯೋಜನೆಗಳ ಏರಿಳಿಕೆಗಳು:**

1950ರಲ್ಲಿ ಆರಂಭಗೊಂಡ ಪಂಚವಾರ್ಷಿಕ ಯೋಜನೆಗಳು ಕೇಂದ್ರದಿಂದ ಆರಂಭಿಸಲ್ಪಟ್ಟು, ಮುಂದೆ 1960ರ ದಶಕದಲ್ಲಿ ರಾಜ್ಯಗಳಿಗೆ ಪ್ರತ್ಯೇಕ ಯೋಜನೆಗಳನ್ನು ಹಾಕಿಕೊಳ್ಳಬೇಕು ಎಂದು ಮಾರ್ಗದರ್ಶನ ನೀಡಲಾಯಿತು. ಜಿಲ್ಲಾಮಟ್ಟದಲ್ಲಿ, ನಗರಸಭೆ ಮಟ್ಟದಲ್ಲಿ ಹಾಗೂ ಪಂಚಾಯತ್‌ಗಳ ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಲು ಕೇಳಿಕೊಳ್ಳಲಾಯಿತು. 1980ರ ಹೊತ್ತಿಗೆ ಭಾರತ ಬಹುಹಂತದ ಯೋಜನೆಗಳನ್ನು ನಿರೂಪಿಸಿ ಅನುಷ್ಠಾನಗೊಳಿಸಲು ಸಿದ್ದವಾಯಿತು.

1) ಬಹುಹಂತದ ಯೋಜನೆಗಳಲ್ಲಿ ಮೊದಲನೇ ಹಂತ ಕೇಂದ್ರೀಯ ಯೋಜನೆಗಳು– ಪಂಚವಾರ್ಷಿಕ ಯೋಜನೆಗಳು ಹಾಗೂ 20 ಅಂಶಗಳ ಕಾರ್ಯಕ್ರಮ, ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ.

2) ಎರಡನೇ ಹಂತದ ಯೋಜನೆಗಳು 1960ರ ದಶಕದಲ್ಲಿ ರಾಜ್ಯಗಳ ಮಟ್ಟದಲ್ಲಿ ಪ್ರಾರಂಭಗೊಂಡಿತು. ರಾಜ್ಯ ಯೋಜನಾ ಮಂಡಳಿಗಳಿಗೆ ಮುಖ್ಯಮಂತ್ರಿಯವರು ಇದಕ್ಕೆ ಅಧ್ಯಕ್ಷರಾಗಿದ್ದರು. ರಾಜ್ಯ ಯೋಜನೆಗಳು ಸಹ 5 ವರ್ಷಗಳಿಗೆ ವಿಸ್ತರಿಸಿದ್ದು ಕೇಂದ್ರ ಸರ್ಕಾರದ ಯೋಜನೆಗಳಂತೆಯೇ ಹಣಕಾಸು ವಿಂಗಡಣೆ, ಕ್ರೋಢಿಕರಣ ಇವೇ ಮುಂತಾದ ಅಂಶಗಳನ್ನು ಹೊಂದಿತ್ತು.

3) ಮೂರನೇ ಹಂತದ ಯೋಜನೆಗಳೆಂದರೆ 1960ರ ದಶಕದಲ್ಲಿ ಪ್ರಾರಂಭಗೊಂಡ ಜಿಲ್ಲಾಮಟ್ಟದ ಯೋಜನೆಗಳು ಇವುಗಳನ್ನು ಜಿಲ್ಲಾ ಅಭಿವೃದ್ಧಿ ಬೋರ್ಡ್‌ಗಳೆಂದು ಕರೆಯಲಾಯಿತು. ಜಿಲ್ಲಾಧಿಕಾರಿ ಈ ಬೋರ್ಡ್‌ಗಳಿಗೆ ಅಧ್ಯಕ್ಷರಾಗಿದ್ದರು. ಜಿಲ್ಲಾಮಟ್ಟದ ಯೋಜನೆಗಳನ್ನು ಇತ್ತೀಚೆಗೆ ನಗರಸಭೆಗಳು ಪಟ್ಟಣ ಪಂಚಾಯತ್‌ಗಳು ಹಾಗೂ ಪಂಚಾಯತ್‌ಗಳ ಮೂಲಕ ಕೈಗೊಳ್ಳಲಾಗುವುದು.

4) ನಾಲ್ಕನೇ ಹಂತದ ಯೋಜನೆಗಳನ್ನು ಬ್ಲಾಕ್ ಮಟ್ಟದಲ್ಲಿ ಕೈಗೊಳ್ಳಲಾಯಿತು. ಇವು ಜಿಲ್ಲಾ ಯೋಜನಾ ಸಮಿತಿಯಡಿಯಲ್ಲಿಯೇ ಕಾರ್ಯ ನಿರ್ವಹಿಸಬೇಕಾಯಿತು. ಇದೇ ಸಮಿತಿಗಳು ಸ್ಥಳೀಯ ಮಟ್ಟದಲ್ಲಿ ಯೋಜನೆಗಳನ್ನು ನಿರೂಪಿಸಲು ಸಹಾಯ ಮಾಡುತ್ತಿದೆ.

5) ಐದನೇ ಹಂತದ ಯೋಜನೆಗಳು ಸ್ಥಳೀಯ ಯೋಜನೆಗಳೆಂದು ಕರೆಯಲಾಗುವುದು. ಇವುಗಳ ಅನುಷ್ಠಾನ ಮುಖ್ಯವಾಗಿ ಮೂರು ವಿಧಗಳಲ್ಲಿ ನಡೆಯುತ್ತವೆ.

1. ಹಳ್ಳಿಗಳ ಮಟ್ಟದಲ್ಲಿ
2. ಗುಡ್ಡಗಾಡು ಪ್ರದೇಶದಲ್ಲಿ
3. ಬುಡಕಟ್ಟು ಪ್ರದೇಶದಲ್ಲಿ

ಬಹುಹಂತದ ಯೋಜನೆಗಳು ಮುಖ್ಯವಾಗಿ ವಿಕೇಂದ್ರೀಕರಣ ಪ್ರಕ್ರಿಯೆಯನ್ನು ದೇಶದಲ್ಲಿ ವ್ಯಾಪಿಸುವುದಕ್ಕಾಗಿ ಕೈಗೊಂಡ ಕಾರ್ಯಕ್ರಮವಾಗಿತ್ತು. ಹೀಗಾಗಿ ಭಾರತದ ಪ್ರಜಾಸತ್ತಾತ್ಮಕ ಉದ್ದೇಶಕ್ಕೆ ಅನುಗುಣವಾಗಿ ಈ ವಿವಿಧ ಹಂತದ ಯೋಜನೆಗಳನ್ನು ಜಾರಿಗೊಳಿಸಲು ಯೋಜಿಸಲಾಗಿತ್ತು. ಆದರೆ ಅವುಗಳ ಎಲ್ಲಾ ಉದ್ದೇಶ ಈಡೇರಿಲ್ಲ.

**ವೈಫಲ್ಯತೆಗೆ ಕಾರಣಗಳು:**

1) ಬಹುಹಂತದ ಯೋಜನೆ ಜನರನ್ನು ಸಕ್ರಿಯವಾಗಿ ಯೋಜನೆಗಳನ್ನು ಪಾಲ್ಗೊಳ್ಳುವಂತೆ ಮಾಡಲು ಅಸಮರ್ಥವಾಗಿದೆ.

2) ಕೇವಲ ಕೇಂದ್ರಸರ್ಕಾರದಿಂದ ಪ್ರಾಯೋಜಿಸಲ್ಪಟ್ಟ ಯೋಜನೆಗಳು ಅನುಷ್ಠಾನಗೊಂಡವೇ ವಿನ: ರಾಜ್ಯಗಳಿಗೆ ಅನುಷ್ಠಾನ ಮಾಡಲು ಬೇಕಾದ ಹಣಕಾಸಿನ ಸಂಪನ್ಮೂಲಗಳು ಇರಲಿಲ್ಲ.

3) ಸ್ಥಳೀಯ ಮಟ್ಟದ ಅಭಿವೃದ್ಧಿ ಪ್ರಾಧಿಕಾರಗಳು ಯಾವುದೇ ಶಾಸನೀಯ ಅಧಿಕಾರವನ್ನು ಪಡೆಯದೇ ಇದ್ದುದರಿಂದ ಸ್ಥಳೀಯ ಸರ್ಕಾರಗಳ ಪಾತ್ರ ಯೋಜನಾ ಪ್ರಕ್ರಿಯೆಯಲ್ಲಿ ಕೇವಲ ಪೂರಕ ಸ್ವರೂಪದಲ್ಲಿತ್ತೇ ವಿನ: ಪೂರ್ಣ ಪ್ರಮಾಣದಲ್ಲಿ ಇರಲಿಲ್ಲ.

ಹೀಗೆ ಯೋಜನಾ ಪ್ರಕ್ರಿಯೆಯಲ್ಲಿ ವಿಕೇಂದ್ರೀಕರಣ ವಿಕಾಸವು ಉಂಟಾಗಿದ್ದು ಅವು ಬಹುಮತದ ಯೋಜನೆಗಳ ಮುಲಕ ಜಾರಿಗೊಳ್ಳುವ ಹಾಗೆ ಆಯಿತು.

**ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಯೋಜನಾ ವ್ಯವಸ್ಥೆ ಹಾಗೂ ಅನುಭವ, ಯೋಜನೆ ಹಾಗೂ ಸಾಮರ್ಥ್ಯ ನಿರ್ಮಾಣ, ಯೋಜನೆ ಹಾಗೂ ನೆರವು:**

ಪಂಚಾಯತ್ ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಸ್ವರೂಪದ ಅಧಿಕಾರ ಹಂಚಿಕೆಯಾಗಿರುತ್ತದೆ. ಈ ಸಂಸ್ಥೆಯ ಯೋಜನಾ ಸ್ವರೂಪಗಳು ಹಾಗೂ ಸಂರಚನೆಗಳು ಈ ಕೆಳಗಿನಂತಿವೆ.

1) ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಗಳಿಗೆ ಯೋಜನೆಗಳನ್ನು ಸಿದ್ದಪಡಿಸುವುದು.

2) ಪಂಚಾಯತ್ ರಾಜ್ಯಗಳಿಗೆ ವಹಿಸಲ್ಪಟ್ಟ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದಂತಹ ಯೋಜನೆಗಳ ಅನುಷ್ಠಾನ.

ಪಂಚಾಯತ್ ರಾಜ್ ಸಂಸ್ಥೆಯಲ್ಲಿ ಸ್ಥಳೀಯ ನಾಗರಿಕ ಸಭೆಯಾದ ಗ್ರಾಮಸಭೆಗೆ ಪಂಚಾಯತಿಗಳ ಕಾರ್ಯಕ್ಷಮತೆಯಲ್ಲಿ ಪ್ರಮುಖ ಪಾತ್ರವಿರುತ್ತದೆ. ಈ ಅಧಿನಿಯಮವು ಗ್ರಾಮಸಭೆಗಳಲ್ಲಿ ಗ್ರಾಮೀಣ ಬಡಜನರು ಮಹಿಳೆಯರು ಮತ್ತು ಉಪೇಕ್ಷೆಗೆ ಒಳಗಾದವರು ತಮ್ಮ ಜೀವನದ ಮೇಲೆ ಪರಿಣಾಮ ಬೀರುವ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಒಂದು ಅವಕಾಶ ಒದಗಿಸುತ್ತದೆ. ಪಂಚಾಯತ್ ರಾಜ್ ಯೋಜನೆಗಳಲ್ಲಿ ಈ ಕೆಳಗಿನ ಅಂಶಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

1) ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕರ್ತರ ತರಬೇತಿ.

2) ಪಂಚಾಯತ್ ರಾಜ್ ಸಂಸ್ಥೆಗಳ ವಿವಿಧ ಘಟ್ಟಗಳಲ್ಲಿನ ಆಡಳಿತ ಪಾರದರ್ಶಕತೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಲೆಕ್ಕಪರಿಶೋಧನೆಯ ಪದ್ದತಿ.

3) ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಪಂಚಾಯತ್ ಪ್ರಾಯೋಜಿತ ಯೋಜನೆಗಳ ಅನುಷ್ಠಾನ.

4) ಜಂಟಿ ಅರಣ್ಯ ನಿರ್ವಹಣೆ ಸಮಿತಿಗಳು, ಗ್ರಾಮ ಶಿಕ್ಷಣ ಸಮಿತಿಗಳು ಹಾಗೂ ಜಲಾನಯನ ಪ್ರದೇಶದ ಬಳಕೆದಾರರ ಸಂಘಗಳಂತಹ ಇತರ ಸಂಸ್ಥೆಗಳೊಂದಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಅಂತರ ಸಹಕಾರ.

5) ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ನಡುವೆ ಸೌಹಾರ್ದಯುತ ಸಂಬಂಧ ಕಲ್ಪಿಸುವುದು.

6) ಜಿಲ್ಲಾ ಯೋಜನಾ ಸಮಿತಿಗಳನ್ನು ಕಾರ್ಯಶೀಲಗೊಳಿಸುವುದು ಅಗತ್ಯ.

ಸಂವಿಧಾನ 73 ಮತ್ತು 74ನೇ ತಿದ್ದುಪಡಿ ಅಧಿನಿಯಮದ ಅಂಗೀಕಾರದಿಂದಾಗಿ ವಿಕೇಂದ್ರೀಕೃತ ಯೋಜನೆ ಪ್ರಕ್ರಿಯೆಗೆ ಹೆಚ್ಚಿನ ಒತ್ತು ದೊರೆಯಿತು. ಈ ಅಧಿನಿಯಮದಲ್ಲಿ ಜಿಲ್ಲೆಯ ಪಂಚಾಯತ್‌ಗಳು ಹಾಗೂ ಪುರಸಭೆಗಳು ಸಿದ್ದಪಡಿಸಿದ ಯೋಜನೆಗಳನ್ನು ಕ್ರೋಢಿಕರಿಸಲು ಮತ್ತು ಇಡೀ ಜಿಲ್ಲಾ ಯೋಜನೆಯ ಕರಡು ರಚನೆಗೆ ಅವಕಾಶ ಒದಗಿಸಲಾಗಿದೆ. ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ಸಿಕ್ಕಿಂ, ತಮಿಳುನಾಡು, ತ್ರಿಪುರ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಮಾತ್ರ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲಾಗಿದೆ.

ವಿಕೇಂದ್ರೀಕರಣದ ಮುಕ್ಯ ಘಟಕವಾಗಿ ಪಂಚಾಯತ್ ರಾಜ್ ಸಂಸ್ಥೆ ಇಂದು ಕಾರ್ಯ ನಿರ್ವಹಿಸುತ್ತಿದ್ದು, ಇದರಡಿಯಲ್ಲಿ ಸ್ಥಳೀಯ ಯೋಜನೆಗಳು ರೂಪಿತಗೊಳ್ಳುತ್ತಿವೆ. ಯೋಜನೆಗಳ ವಿನ್ಯಾಸ, ಅನುಷ್ಠಾನ ಹಾಗೂ

ಜನರ ಭಾಗವಹಿಸುವಿಕೆ ಪಮಚಾಯತ್ ರಾಜ್ ಮಟ್ಟದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕಂಡುಬಂದಿದೆ. ಅದರಲ್ಲೂ ಮುಖ್ಯವಾಗಿ ದಕ್ಷಿಣ ರಾಜ್ಯಗಳಲ್ಲಿ ಅಂದರೆ ತಮಿಳ್ನಾಡು, ಕರ್ನಾಟಕ, ಕೇರಳಗಳಲ್ಲಿ ಸ್ಥಳೀಯ ಯೋಜನೆಗಳನ್ನು ಅತ್ಯಂತ ಗರಿಷ್ಠ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗಿದೆ. ಆದರೆ ಇದರಲ್ಲಿ ಕೆಲವು ತೊಂದರೆಗಳು ಇವೆ.

1) ರಾಜ್ಯ ಸರ್ಕಾರದಿಂದ ವರ್ಗಾವಣೆ ಹೊಂದುವ ಸಂಪನ್ಮೂಲಗಳು ನಿಗದಿತ ಕಾಲಕ್ಕೆ ತಲುಪದೆ ಇರುವುದು.

2) ಕೆಲವು ತೆರಿಗೆ ವಿಷಯಗಳಲ್ಲಿ ಪಂಚಾಯತ್ ರಾಜ್‌ಗಳಿಗೆ ಸ್ಪಷ್ಟತೆ ಇಲ್ಲದೆ ಇರುವುದು.

3) ಕೆಲವು ರಾಜ್ಯ ಸರ್ಕಾರಗಳು ಅವಶ್ಯವಾದ ಇನ್ನೂ ಹೆಚ್ಚಿನ ಅಧಿಕಾರಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗೆ ವರ್ಗಾಯಿಸದೇ ಇರುವುದು.

4) ಸ್ಥಳೀಯ ಜನರಿಗೆ ಮಾಹಿತಿ ಹಕ್ಕಿನ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದೇ ಇರುವುದು.

5) ಇನ್ನೂ ಕೆಲವು ಪ್ರದೇಶಗಳಲ್ಲಿ ಪಂಚಾಯತ್ ರಾಜ್ ಚುನಾವಣೆಗಳಲ್ಲಿ ಹಣಬಲ ಹಾಗೂ ದೈಹಿಕ ಬಲವನ್ನು ಪ್ರಯೋಗ ಮಾಡುತ್ತಿರುವುದು.

ಈ ಎಲ್ಲಾ ಅಂಶಗಳು ಪಂಚಾಯತ್ ರಾಜ್ ಅನುಷ್ಠಾನದಲ್ಲಿ ಕಂಡುಬರುತ್ತಿವೆ.

ಫೆಡರಲ್ ಮಾದರಿಯ ಒಕ್ಕೂಟ ವ್ಯವಸ್ಥೆ ಹೊಂದಿರುವ ಭಾರತ 3ನೇ ಹಂತದ ಸ್ಥಳೀಯ ಸರ್ಕಾರಗಳಿಗೆ ಹಣಕಾಸು ವರ್ಗಾವಣೆಯನ್ನು ಮಾಡುವುದು ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ. ರಾಷ್ಟ್ರಪತಿಗಳಿಂದ ನೇಮಕಗೊಂಡ ಹಣಕಾಸು ಆಯೋಗಗಳು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೇರವಾಗಿ ಹಣಕಾಸು ಅನುದಾನವನ್ನು ವರ್ಗಾಯಿಸುವ ಬಗ್ಗೆ ಚಿಂತನೆ ನಡೆದಿದೆ. ಸಾಮಾನ್ಯವಾಗಿ ಪಂಚಾಯತ್ ರಾಜ್ ಸಂಸ್ಥೆಗಳು ವಿವಿಧ ಮೂಲಗಳಿಂದ ಹಣಕಾಸಿನ ಅನುದಾನವನ್ನು ಪಡೆಯುತ್ತಿದೆ.

1) ರಾಜ್ಯಸರ್ಕಾರ ನೇಮಿಸಿದ ರಾಜ್ಯ ಹಣಕಾಸು ಆಯೋಗ ಶಿಫಾರಸ್ಸು ಮಾಡಿದೆ.

2) ತಮ್ಮ ಆಂತರಿಕ ತೆರಿಗೆ ಹಾಗೂ ತೆರಿಗೆಯೇತರ ಮೂಲಗಳಿಂದ ಪಡೆಯುವ ಹಣಕಾಸು ಅನುದಾನ.

3) ಕೇಂದ್ರ ಹಣಕಾಸು ಆಯೋಗದಿಂದ ಶಿಫಾರಸ್ಸು ಮಾಡಲ್ಪಟ್ಟು ಅದರಿಂದ ಪಡೆಯುವ ಹಣಕಾಸಿನ ಸಂಪನ್ಮೂಲಗಳು.

**ಕರ್ನಾಟಕದಲ್ಲಿ ವಿಕೇಂದ್ರೀಕರಣ, ಸಂಪನ್ಮೂಲ ಕ್ರೋಢೀಕರಣ ಹಾಗೂ ವರ್ಗಾವಣೆ. ಪಂಚಾಯತ್ ವಿಕೇಂದ್ರೀಕರಣ ಕರ್ನಾಟಕದಲ್ಲಿ ಪಂಚಾಯತ್‌ಗಳ ಆರ್ಥಿಕ ಭದ್ರತೆ:**

ಕರ್ನಾಟಕ ರಾಜ್ಯ 1980ರ ದಶಕದ ಕೊನೆಗೆ ನೈಜ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದಿತು. ಅಶೋಕ್ ಮೆಹ್ತಾ ಸಮಿತಿಯ ವರದಿ ವಿಕೇಂದ್ರೀಕೃತ ವ್ಯವಸ್ಥೆಯನ್ನು ಜಾರಿಗೊಳಿಸಲು ಪ್ರೇರಣೆ ಹಾಗೂ ಸ್ಫೂರ್ತಿಯನ್ನು ಕೊಟ್ಟಿತು. ಪರಿಣಾಮವಾಗಿ, 'ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿ, ಮಂಡಲ್ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಅಧಿನಿಯಮ 1983'ನ್ನು ಹೊರತಂದು, 1987ರಲ್ಲಿ ಮೂರು ಹಂತದ ಪಂಚಾಯತಿಗಳನ್ನು ಸ್ಥಾಪಿಸಲಾಯಿತು. ಈ ವಿಕೇಂದ್ರೀಕೃತ ಸಂಸ್ಥೆಗಳು 5 ವರ್ಷಗಳ ಕಾಲ (1987–88ರಿಂದ 1991–92) ನಿಜವಾದ ಸ್ವಾಯತ್ತತೆಯುಳ್ಳ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆಯಿತು. ರಾಜ್ಯದ ವಿಕೇಂದ್ರೀಕೃತ ಆಡಳಿತದ ಯಶಸ್ಸು ಪರೋಕ್ಷವಾಗಿ ಸಂವಿಧಾನದ 73ನೇ ತಿದ್ದುಪಡಿಗೆ ನಾಂದಿಯಾಯಿತು.

ಸಂವಿಧಾನದ 73ನೇ ತಿದ್ದುಪಡಿ (1992) ಆಧಾರದ ಮೇಲೆ ರಾಜ್ಯ ಸರ್ಕಾರ 1993ರಲ್ಲಿ ಒಂದು ನೂತನ ಶಾಸನ 'ಕರ್ನಾಟಕ ಪಂಚಾಯಿತಿ ರಾಜ್ ಅಧಿನಿಯಮ 1993'ನ್ನು ಜಾರಿಗೆ ತಂದು ಮೂರು ಹಂತದ ಪಂಚಾಯಿತಿ ಸಂಸ್ಥೆಗಳನ್ನು ಚುನಾಣೆಗಳ ಮೂಲಕ 1994 ಮತ್ತು 1995ರಲ್ಲಿ ಸ್ಥಾಪಿಸಲಾಯಿತು. ಈ

ಸ್ಥಳೀಯ ಸಂಸ್ಥೆಗಳಿಗೆ ಹಿಂದೆ ನೀಡಲಾಗಿದ್ದ ಅಧಿಕಾರ, ಪ್ರಕಾರ್ಯಗಳು, ಹಣಕಾಸು ಮತ್ತು ಸಿಬ್ಬಂದಿಯನ್ನು ಮುಂದುವರೆಸಿತು. ಆದರೆ ಅಧಿಕಾರ ವಿಷಯದಲ್ಲಿ ಪಂಚಾಯಿತಿ ಸಂಸ್ಥೆಗಳಿಗೆ ಹಿಂದೆ ನೀಡಿದ್ದ ಅಧಿಕಾರದಲ್ಲಿ ಸ್ವಲ್ಪ ಮೊಟಕು ಮಾಡಿತು.

ಈ ಸ್ಥಳೀಯ ಸಂಸ್ಥೆಗಳು ಸ್ವಾಯತ್ತತೆಯುಳ್ಳ ಸಂಸ್ಥೆಗಳಾಗಿ ಕೆಲಸ ನಿರ್ವಹಿಸಲು ಅತಿ ಮುಖ್ಯವಾಗಿ ಆರ್ಥಿಕ ಭದ್ರತೆ ಹೊಂದಿರಬೇಕು. ಆರ್ಥಿಕ ಭದ್ರತೆ ಎಂದರೆ ಪ್ರತಿಯೊಂದು ಹಂತದ ಪಂಚಾಯಿತಿ ತನ್ನದೇ ಆದ ಸ್ವಂತ ಹಣಕಾಸು ಕ್ರೋಢಿಕರಿಸುವ ಅಧಿಕಾರ ಹೊಂದಿರಬೇಕು. ಇದರ ಜೊತೆಗೆ ಸರ್ಕಾರದಿಂದ ಅಭಿವೃದ್ಧಿ ಯೋಜನೆಗಳಿಗೆ ಸಾಕಷ್ಟು ಅನುದಾನವನ್ನು ವರ್ಗಾಯಿಸಬೇಕು. ಅಭಿವೃದ್ಧಿಯ ಸಲುವಾಗಿ ಸಾಲ ಎತ್ತುವ ಅವಕಾಶವನ್ನು ಸಹ ಈ ಸಂಸ್ಥೆಗಳಿಗೆ ನೀಡಿರಬೇಕು. ಎಲ್ಲಾ ಮೂಲಗಳಿಂದ ಲಭ್ಯವಿರುವ ಸಂಪನ್ಮೂಲಗಳು ತಮಗೆ ವಹಿಸಿರುವ ಪ್ರಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಲು ಸಾಕಾಗುವಷ್ಟಿರಬೇಕು ಮತ್ತು ಸಂಪನ್ಮೂಲಗಳನ್ನು ಸ್ವಇಚ್ಛೆಯಂತೆ ವೆಚ್ಚ ಮಾಡಲು ಸ್ವಾತಂತ್ರ್ಯ ಸಹ ಇರಬೇಕು. ಇದಕ್ಕೆ ವಿರುದ್ಧವಾಗಿ, ಅಂದರೆ ಸ್ವಂತ ಸಂಪನ್ಮೂಲಗಳ ಕೊರತೆಯಿದ್ದರೆ, ಈ ಸಂಸ್ಥೆಗಳು ಯಾವಾಗಲೂ ಸರ್ಕಾರದ ಮೇಲೆ ಅವಲಂಬಿತವಾಗಿರಬೇಕಾಗುತ್ತದೆ.

### ಗ್ರಾಮೀಣ ಪಂಚಾಯತ್‌ಗಳ ಹಣಕಾಸು:

ಕರ್ನಾಟಕದಲ್ಲಿ ಮೂರು ಹಂತದ ಪಂಚಾಯತ್‌ಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಮಾತ್ರ ತೆರಿಗೆ ವಿಧಿಸುವ ಅಧಿಕಾರ ನೀಡಲಾಗಿದೆ. ಇವುಗಳ ಮುಖ್ಯ ತೆರಿಗೆ ಮೂಲಗಳೆಂದರೆ ಕಟ್ಟಡ, ಮನೆ ಕಂದಾಯ, ನೀರು ಮತ್ತು ದೀಪಗಳ ತೆರಿಗೆ, ಮನೋರಂಜನೆ (ಚಿತ್ರಮಂದಿರ ಹೊರತುಪಡಿಸಿ) ವಾಹನ (ಮೋಟಾರ್ ವಾಹನ ಹೊರತುಪಡಿಸಿ)ಗಳ ಮೇಲಿನ ತೆರಿಗೆ, ಮಾರುಕಟ್ಟೆ, ಬಸ್, ಆಟೋ ನಿಲ್ದಾಣಗಳ ಮೇಲೆ ಶುಲ್ಕ, ಕಾರ್ಖಾನೆಗಳ ಮೇಲೆ ತೆರಿಗೆ ಮತ್ತು ಇನ್ನು ಇತರೆ ತೆರಿಗೆಗಳು.

ಗ್ರಾಮಪಂಚಾಯತ್‌ಗಳು ತೆರಿಗೆಯೇತರ ಮೂಲಗಳಾದ ಕಟ್ಟಡ, ಅಂಗಡಿಗಳಿಂದ ಬಾಡಿಗೆ, ಹರಾಜು (ಮರ, ಹಣ್ಣು, ಮೀನು)ಗಳಿಂದ ಸ್ವಂತ ಆಸ್ತಿಗಳ ಮಾರಾಟದಿಂದ ಕೊಡುಗೆ, ದಾನದ ರೂಪದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಬಹುದು.

ಇದಲ್ಲದೇ ಗ್ರಾಮಪಂಚಾಯತ್‌ಗಳು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಅನುದಾನಗಳನ್ನು ಪಡೆಯುತ್ತವೆ. ರಾಜ್ಯ ಸರ್ಕಾರದಿಂದ ಶಾಸನಬದ್ಧವಾಗಿ ಪ್ರತಿ ಗ್ರಾಮಪಮಚಾಯತ್‌ಗೆ ಒಮದು ವರ್ಷಕ್ಕೆ ರೂ.20 ಲಕ್ಷ (2013–14ರಿಂದ) ಅನುದಾನ, 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಸುಮಾರು ರೂ.2,00,000 ವರ್ಗಾವಣೆ ಆಗುತ್ತದೆ.

ಗ್ರಾಮ ಪಂಚಾಯತಿಗಳು ಕರ್ನಾಟಕದಲ್ಲಿ ಪಂಚಾಯಿತಿ ರಾಜ್ ಅದಿನಿಯಮ ಪ್ರಕರಣ 214 ಪ್ರಕಾರ ಸಾಲಗಳನ್ನು ಅಭಿವೃದ್ಧಿ ಉದ್ದೇಶಗಳಿಗೆ ಪಡೆಯಬಹುದು.

### ತಾಲ್ಲೂಕು ಪಂಚಾಯಿತಿಗಳ ಸಂಪನ್ಮೂಲಗಳು:

ಕರ್ನಾಟಕದಲ್ಲಿ ತಾಲ್ಲೂಕು ಪಂಚಾಯಿತಿಗಳಿಗೆ ಯಾವುದೇ ತೆರಿಗೆ ವಿಧಿಸುವ ಅಧಿಕಾರ ನೀಡಿಲ್ಲ. ಆದರೆ ತಾಲ್ಲೂಕು ಪಂಚಾಯಿತಿಗಳು ರಾಜ್ಯದ ನೋಂದಣಿ ಶುಲ್ಕದಲ್ಲಿ ಪಾಲು ಪಡೆಯುತ್ತವೆ. ಈ ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳ ಹಾಗೆ ತನ್ನ ಸ್ವಂತ ಆಸ್ತಿ ಮತ್ತು ಕಟ್ಟಡಗಳಿಂದ (ಬಾಡಿಗೆ, ಮಾರಾಟ) ಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳಬಹುದು. ಆದರೆ ತಾಲ್ಲೂಕು ಪಂಚಾಯಿತಿಗಳ ಪ್ರಮುಖ ಆರ್ಥಿಕ ಶಕ್ತಿ ಎಂದರೆ ರಾಜ್ಯ ಮತ್ತು ಕೇಂದ್ರದ ಅನುದಾನಗಳು. ರಾಜ್ಯ ಸರ್ಕಾರ ಯೋಜನೆ ಮತ್ತು ಯೋಜನೇತರ ಬಾಬ್ತುಗಳಿಗೆ ಭಾರತ ಸರ್ಕಾರದಿಂದ ಯೋಜನೆ ಕಾರ್ಯಕ್ರಮಗಳಿಗೆ ಅನುದಾನವನ್ನು ಪ್ರತಿವರ್ಷ ವರ್ಗಾವಣೆ ಮಾಡುತ್ತದೆ. ಇದಲ್ಲದೆ, 14ನೇ ಹಣಕಾಸು ಆಯೋಗ ಗೊತ್ತುಪಡಿಸಿದ ಪ್ರಕಾರ ಭಾರತ ಸರ್ಕಾರದಿಂದ ಕೊಡುಗೆ ಸಹ ಲಭ್ಯ. ತಾಲ್ಲೂಕು ಪಂಚಾಯಿತಿಗಳು ಶಾಸನಬದ್ಧವಾಗಿ ಅಂದರೆ ಪಂಚಾಯಿತಿ ಅಧಿನಿಯಮ, ಪ್ರಕರಣ 215ನೇ ಪ್ರಕಾರ ಸಾಲಗಳನ್ನು ಎತ್ತಬಹುದು. ಈ ಎಲ್ಲಾ ಮೂಲಗಳಿಂದ ಪ್ರತಿ ತಾಲ್ಲೂಕು ಪಂಚಾಯಿತಿಗೆ ಒಂದು ವರ್ಷಕ್ಕೆ ಸರಾಸರಿ ಸುಮಾರು ರೂ.14 ಕೋಟಿಗಳು ಲಭ್ಯವಿದೆ.

### ಜಿಲ್ಲಾ ಪಂಚಾಯಿತಿಗಳ ಸಂಪನ್ಮೂಲಗಳು:

ಜಿಲ್ಲಾ ಪಂಚಾಯಿತಿಗಳ ಆರ್ಥಿಕ ಮೂಲಗಳು ತಾಲ್ಲೂಕು ಪಂಚಾಯಿತಿಗಳ ಹಾಗೆಯೇ ಇರುತ್ತದೆ. ಆದರೆ ಒಂದು ವ್ಯತ್ಯಾಸವೆಂದರೆ ಜಿಲ್ಲಾ ಪಂಚಾಯಿತಿಗಳೊಂದಿಗೆ ರಾಜ್ಯ ಸರ್ಕಾರ ಯಾವುದೇ ತೆರಿಗೆಯ ಹಣವನ್ನು ಹಂಚಿಕೊಳ್ಳುವುದಿಲ್ಲ. ಈ ಎಲ್ಲಾ ಪಂಚಾಯಿತಿಗಳು ಹೆಚ್ಚು ಕಡಿಮೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನುದಾನಗಳ ಮೇಲೆ ಅವಲಂಬಿತವಾಗಿರುತ್ತದೆ. ರಾಜ್ಯ ಸರ್ಕಾರದಿಂದ ಯೋಜನೆ ಮತ್ತು ಯೋಜನೇತರ ಅನುದಾನದ, ಕೇಂದ್ರ ಸರ್ಕಾರದಿಂದ ಯೋಜನೆ ಬಾಬ್ತು ಅನುದಾನ ಮತ್ತು 14ನೇ ಹಣಕಾಸು ಆಯೋಗದ ಮೇರೆಗೆ ಅನುದಾನ ವರ್ಗಾವಣೆ ಆಗುತ್ತದೆ. ಜಿಲ್ಲಾ ಪಂಚಾಯಿತಿಗಳು ಪ್ರಕರಣ 216ರ ಪ್ರಕಾರ ಅಭಿವೃದ್ಧಿ ಯೋಜನೆಗಳಿಗೆ ಸಾಲವನ್ನು ಎತ್ತಬಹುದು. ಎಲ್ಲಾ ಮೂಲಗಳಿಂದ ಲಭ್ಯವಿರುವ ಸಂಪನ್ಮೂಲಗಳು ಪ್ರತಿ ಜಿಲ್ಲಾ ಪಂಚಾಯಿತಿಗೆ ಒಂದು ವರ್ಷಕ್ಕೆ ಸರಾಸರಿ ಸುಮಾರು ರೂ.100 ಕೋಟಿಗಳು ಆಗುತ್ತದೆ.

### ಜಿಲ್ಲಾ ಯೋಜನಾ ಸಮಿತಿ:

ಅಧಿಕಾರ ವಿಕೇಂದ್ರೀಕರಣದ ದಿಟ್ಟ ಹೆಜ್ಜೆಯಾಗಿ ಕರ್ನಾಟಕವು ಸಂವಿಧಾನದ 73ನೇ ತಿದ್ದುಪಡಿಯ ಅನುಸಾರ ಕರ್ನಾಟಕ ಪಂಚಾಯತ್ ರಾಜ್ ಕಾನೂನು 1993ನ್ನು ಜಾರಿಗೆಗೊಳಿಸಿದೆ. ಸಂವಿಧಾನದ 73ನೆಯ ತಿದ್ದುಪಡಿಯ ಎಲ್ಲಾ ಮುಖ್ಯಾಂಶಗಳನ್ನು ಒಳಗೊಂಡಿರುವ ಈ ಸಮಗ್ರ ಶಾಸನವು ರಾಜ್ಯದಲ್ಲಿ 3 ಶ್ರೇಣಿಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಅವುಗಳೆಂದರೆ, ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ಗಳು.

ಕರ್ನಾಟಕ ಪಂಚಾಯತ್ ರಾಜ್ ಕಾನೂನು 1993ರ 310ನೇ ಪ್ರಕರಣದ ಪ್ರಕಾರ ಸರ್ಕಾರವು ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು, ಗ್ರಾಮ ಪಂಚಾಯಿತಿಗಳು, ಪಟ್ಟಣ ಪಂಚಾಯಿತಿಗಳು, ಜಿಲ್ಲೆಯಲ್ಲಿರುವ ಪುರಸಭೆಗಳು ಮತ್ತು ನಗರಸಭೆಗಳ ಯೋಜನೆಗಳನ್ನು ಕ್ರೋಢೀಕರಿಸಲು ಮತ್ತು ಒಟ್ಟಾರೆ ಜಿಲ್ಲೆಗಾಗಿ ಒಂದು ಅಭಿವೃದ್ಧಿ ಯೋಜನೆಯನ್ನು ಕರಡನ್ನು ತಯಾರಿಸಲು ಪ್ರತಿಯೊಂದು ಜಿಲ್ಲೆಗೂ ಒಂದೊಂದು 'ಜಿಲ್ಲಾ ಯೋಜನಾ ಸಮಿತಿ'ಗಳನ್ನು ರಚಿಸಬೇಕೆಂದು ಸೂಚಿಸಿದೆ.

ಇದರನ್ವಯ ಕರ್ನಾಟಕ ಸರ್ಕಾರವು ರಾಜ್ಯದ 30 ಜಿಲ್ಲೆಗಳಲ್ಲಿ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಿದೆ. ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಮೆಟ್ರೋಪಾಲಿಟನ್ ಯೋಜನಾ ಸಮಿತಿಯನ್ನು ರಚಿಸಲು ಕ್ರಮ ಕೈಗೊಂಡಿದೆ.

ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿಯು ಇಡೀ ಜಿಲ್ಲೆಯನ್ನು ಅಥವಾ ಅದರ ಭಾಗವನ್ನು ಪ್ರತಿನಿಧಿಸುವ ಲೋಕಸಭಾ ಸದಸ್ಯರು, ಜಿಲ್ಲೆಯಲ್ಲಿ ಮತದಾರನೆಂದು ನೋಂದಾಯಿಸಿದ ರಾಜ್ಯಸಭಾ ಸದಸ್ಯರು, ಜಿಲ್ಲಾ ಪಂಚಾಯತ್ ಅಧ್ಯಕ್ಷ, ಜಿಲ್ಲೆಯ ಕೇಂದ್ರ ಸ್ಥಳದ ಪುರಸಭೆ ಅಥವಾ ನಗರ ಸಭೆಯ ಅಧ್ಯಕ್ಷ ಅಥವಾ ಮೇಯರ್ ಜಿಲ್ಲೆಯ ಪಂಚಾಯತ್ ಸದಸ್ಯರು ಮತ್ತು ಪುರಸಭೆ ಅಥವಾ ನಗರಸಭೆಗಳ ಕೌನ್ಸಿಲರ್‌ಗಳ ಪೈಕಿ ಅವರ ಒಟ್ಟು ಸಂಖ್ಯೆಯು 4/5 ಭಾಗದಷ್ಟು ವ್ಯಕ್ತಿಗಳನ್ನು ಸದಸ್ಯರನ್ನಾಗಿ ಹೊಂದಿರುತ್ತದೆ. ಜಿಲ್ಲಾ ವ್ಯಾಪ್ತಿಯ ವಿಧಾನಸಭಾ ಸದಸ್ಯರು, ಜಿಲ್ಲೆಯಲ್ಲಿ ಮತದಾರರೆಂದು ನೋಂದಾಯಿತರಾದ ವಿಧಾನ ಪರಿಷತ್ ಸದಸ್ಯರು ಹಾಗೂ ಜಿಲ್ಲಾಧಿಕಾರಿಗಳು ಸಮಿತಿಯ ಕಾರ್ಯದರ್ಶಿಯಾಗಿರುತ್ತಾರೆ. ಸಮಿತಿಯ ಅಧ್ಯಕ್ಷರನ್ನು ನಿಯಮಾನುಸಾರ ಆಯ್ಕೆ ಮಾಡಲಾಗುತ್ತದೆ.

ಜಿಲ್ಲೆಯ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಪ್ರತಿ ವರ್ಷವೂ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ದಪಡಿಸಿ, ನಿಗದಿಪಡಿಸಿದ ದಿನಾಂಕದೊಳಗ3ಎ ತಾಲ್ಲೂಕು ಪಂಚಾಯಿತಿಗೆ ಸಲ್ಲಿಸುತ್ತವೆ. ಪಂಚಾಯಿತಿಗೆ ಸಲ್ಲಿಸುತ್ತದೆ. ಪ್ರತಿಯೊಂದು ತಾಲ್ಲೂಕು ಪಂಚಾಯಿತಿಯ ಪ್ರತಿ ವರ್ಷವು ಗ್ರಾಮ ಪಂಚಾಯಿತಿಗಳು ಸಲ್ಲಿಸಿದ ಅಭಿವೃದ್ಧಿ ಯೋಜನೆಗಳನ್ನು ಪಡೆದ ನಂತರ ತಾಲ್ಲೂಕು ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸಿ, ನಿಗದಿಪಡಿಸಿದ ದಿನಾಂಕದೊಳಗೆ ಜಿಲ್ಲಾ ಪಂಚಾಯಿತಿಗೆ ಸಲ್ಲಿಸುತ್ತವೆ. ನಂತರ ಪ್ರತಿಯೊಂದು ಜಿಲ್ಲಾ ಪಂಚಾಯಿತಿಯು ಪ್ರತೀ ವರ್ಷ ತಾಲ್ಲೂಕು ಅಭಿವೃದ್ಧಿ ಯೋಜನೆಗಳು ಕೈ ಸೇರಿದ ಮೇಲೆ ಜಿಲ್ಲಾ ಅಭಿವೃದ್ಧಿ ಯೋಜನೆಯೊಂದನ್ನು ತಯಾರಿಸಿ ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸುತ್ತವೆ.

**ಜಿಲ್ಲಾ ಯೋಜನಾ ಸಮಿತಿಯ ಕಾರ್ಯಗಳು:**

ಜಿಲ್ಲಾ ಯೋಜನಾ ಸಮಿತಿಯ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ನೆರವಾಗುತ್ತದೆ. ಅದರ ಕಾರ್ಯಗಳು ಈ ಕೆಳಗಿನಂತಿವೆ.

1) ಜಿಲ್ಲಾ ಯೋಜನಾ ಸಮಿತಿಯ ಜಿಲ್ಲಾ ಪಂಚಾಯಿತಿ ತಾಲ್ಲುಕು ಪಂಚಾಯಿತಿಗಳು, ಗ್ರಾಮ ಪಂಚಾಯಿತಿಗಳು ಹಾಗೂ ಜಿಲ್ಲೆಯಲ್ಲಿನ ಪಟ್ಟಣ ಪಂಚಾಯಿತಿಗಳು, ಪುರಸಭೆಗಳು ಮತ್ತು ನಗರಸಭೆಗಳು ತಯಾರಿಸಿ ಸಲ್ಲಿಸಿದ ಯೋಜನೆಗಳನ್ನು ಕ್ರೋಢೀಕರಿಸಿ, ಇಡೀ ಜಿಲ್ಲೆಯ ಅಭಿವೃದ್ಧಿಗಾಗಿ ಕರಡು ಯೋಜನೆಯೊಂದನ್ನು ತಯಾರಿಸುತ್ತದೆ.

2) ಪ್ರಾದೇಶಿಕ ಯೋಜನೆ, ನೀರಿನ ಹಂಚಿಕೆ ಮತ್ತು ಇತರೆ ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ, ಮೂಲ ಸೌಕರ್ಯಗಳ ಅಭಿವೃದ್ಧಿ ಮತ್ತು ಪರಿಸರದ ಸಂರಕ್ಷಣೆ ಇವುಗಳನ್ನು ಒಳಗೊಂಡಂತೆ ಜಿಲ್ಲೆಯ ಸ್ಥಳೀಯ ಸಮಾನ ಹಿತಾಸಕ್ತಿಗಳನ್ನು ಕಾಪಾಡುತ್ತದೆ.

3) ಲಭ್ಯವಿರುವ ಹಣಕಾಸು ಸಂಪನ್ಮೂಲ ಅಥವಾ ಇತರೆ ಸಂಪನ್ಮೂಲಗಳ ವ್ಯಾಪ್ತಿ ಮತ್ತು ಸ್ವರೂಪಗಳ ಬಗ್ಗೆ ಗಮನ ಹರಿಸುತ್ತದೆ.

4) ಯೋಜನೆಗಳ ತಯಾರಿಕೆಯಲ್ಲಿ ರಾಜ್ಯಪಾಲರ ಆದೇಶದ ಮೂಲಕ ಸರ್ಕಾರ ನಿರ್ದಿಷ್ಟ ಪಡಿಸಿದ ಸಂಘ ಸಂಸ್ಥೆಗಳ ಸಲಹೆ ಪಡೆಯುತ್ತದೆ.

5) ಅಂತಹ ಸಮಿತಿಗಳ ಶಿಫಾರಸ್ಸಿನಂತೆ ತಯಾರಾದ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತದೆ.

ಹೀಗೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಜಿಲ್ಲಾಮಟ್ಟದಲ್ಲಿ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುವಲ್ಲಿ ಜಿಲ್ಲಾ ಯೋಜನಾ ಸಮಿತಿಗಳು ಮಹತ್ವದ ಪಾತ್ರ ವಹಿಸುತ್ತವೆ.

**ರಾಜ್ಯ ಹಣಕಾಸು ಹಾಗೂ ಸ್ಥಳೀಯ ಹಣಕಾಸು, ರಾಜ್ಯ ಹಣಕಾಸು ಆಯೋಗ**

**ರಾಜ್ಯ ಹಣಕಾಸು ಆಯೋಗ:**

73ನೇ ಸಂವಿಧಾನ ತಿದ್ದುಪಡಿಯ ಪ್ರಕರಣ 243(1) ಅನ್ವಯ ಪ್ರತಿಯೊಂದು ರಾಜ್ಯವು ಐದು ವರ್ಷಕ್ಕೊಮ್ಮೆ ಹಣಕಾಸು ಆಯೋಗವನ್ನು ರಚಿಸಬೇಕು. ಈ ಆಯೋಗದ ಜವಾಬ್ದಾರಿಗಳೆಂದರೆ,

1) ರಾಜ್ಯದ ಸಂಪನ್ಮೂಲಗಳನ್ನು ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುವುದು.

2) ರಾಜ್ಯದ ಯಾವುದೇ ತೆರಿಗೆ, ಶುಲ್ಕಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸುವುದು ಮತ್ತು

3) ಅನುದಾನಗಳ ವರ್ಗಾವಣೆಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುವುದು.

ಈ ಕಟ್ಟುಪಾಡಿನ ಮೇರೆಗೆ ರಾಜ್ಯ ಸರ್ಕಾರ 1995ರಲ್ಲಿ ಡಾ.ಜಿ.ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ರಾಜ್ಯ ಹಣಕಾಸು ಆಯೋಗವನ್ನು ನೇಮಿಸಿತು. ಆಯೋಗವು ತನ್ನ ವರದಿಯನ್ನು 1996ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಆಯೋಗ ಮಾಡಿದ ಹಲವಾರು ಶಿಫಾರಸ್ಸುಗಳು ಅಂಗೀಕಾರವಾಗಿವೆ.

ಪಂಚಾಯಿತಿಗಳು ಹೆಚ್ಚಾಗಿ ಸರ್ಕಾರದ ಅನುದಾನಗಳ ಮೇಲೆ ಅವಲಂಬಿತವಾಗಿವೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ತೆರಿಗೆ ವಿಧಿಸುವ ಅಧಿಕಾರ ಇಲ್ಲ. ಆದ್ದರಿಂದ ಪಂಚಾಯತ್ ರಾಜ್ ಸಂಸ್ಥೆಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ ರಾಜ್ಯ ಮತ್ತು ಕೇಂದ್ರದಿಂದ ಪಂಚಾಯಿತ್ ರಾಜ್ ಸಂಸ್ಥೆಗಳಿಗೆ ಸಾಕಷ್ಟು ಅನುದಾನ ವರ್ಗಾವಣೆಯಾಗುತ್ತಾ ಇದೆ.

# ಅಧ್ಯಾಯ – 6

# ಗ್ರಾಮೀಣ ಅಭಿವೃದ್ಧಿ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು

**ಜನರ ಆರೋಗ್ಯಮಟ್ಟ ಸುಧಾರಿಸಲು ಕೈಗೊಂಡ ಪರಿಹಾರ ಕ್ರಮಗಳು:**

1) ಗ್ರಾಮೀಣ ಭಾಗದಲ್ಲಿ ಹೆಚ್ಚು ಸೌಲಭ್ಯಗಳನ್ನು ಹೊಂದಿರುವ ಆಸ್ಪತ್ರೆಗಳು ನಿರ್ಮಾಣ.

2) ಗ್ರಾಮೀಣ ಭಾಗಕ್ಕೆ ಆರೋಗ್ಯ ಶಿಕ್ಷಣವನ್ನು ವಿಸ್ತರಿಸುವುದು.

3) ಪ್ರಸ್ತುತ 'ಎಎಸ್‌ಹೆಚ್' ಕಾರ್ಯಕರ್ತರು ಆರೋಗ್ಯದ ಸ್ವಚ್ಛತೆಯ ಜಾಗೃತಿ ಮೂಡಿಸುವಲ್ಲಿ ನಿರತರಾಗಿದ್ದಾರೆ.

4) ಪೌಷ್ಟಿಕಾಂಶದ ಆಹಾರ ಪೂರೈಕೆ ಮೂಲಕ ಆಹಾರ ಭದ್ರತೆ ಒದಗಿಸುವುದು.

5) ಸಾಂಕ್ರಾಮಿಕ ರೋಗಗಳ ಹತೋಟಿ.

6) ಗ್ರಾಮೀಣ ಭಾಗದಲ್ಲಿ ಜೀವ ರಕ್ಷಕ ಔಷಧಿಗಳನ್ನು ಉಚಿತವಾಗಿ ಪೂರೈಸುವುದು.

7) ಗ್ರಾಮೀಣದ ಜನರಿಗೆ ಆರೋಗ್ಯ ವಿಮಾ ಸೌಲಭ್ಯ ಯಶಸ್ವಿಯಾಗಿ ಪೂರೈಸುವುದು.

8) ಉತ್ತಮ ಗುಣಮಟ್ಟದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ.

9) ಪರಿಸರದ ಗುಣಮಟ್ಟವನ್ನು ಉತ್ತಮ ಪಡಿಸುವುದು.

**ಆರೋಗ್ಯವನ್ನು ಉತ್ತಮವಾಗಿಸುವಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು:**

* ಸಾರ್ವತ್ರಿಕ ಲಸಿಕೆ ಕಾರ್ಯಕ್ರಮ – 1985

* ಪಲ್ಸ್ ಪೋಲಿಯೋ ಕಾರ್ಯಕ್ರಮ – 1991

* ಜನನಿ ಸುರಕ್ಷಾ ಯೋಜನೆ – 2005: ಇದು ಕೇಂದ್ರದ ಸರ್ಕಾರದ ಕಾರ್ಯಕ್ರಮವಾಗಿದೆ. ಇದು ತಾಯಿಯ ಮರಣ ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ. ಕರ್ನಾಟಕದಲ್ಲಿ 2006–07ರಿಂದ ಜಾರಿಯಲ್ಲಿದೆ. ತಾಯಂದಿರ ಸುರಕ್ಷಿತವಾಗಿ ಹಣಕಾಸನ್ನು ಒದಗಿಸಲಾಗಿದೆ. ಕರ್ನಾಟಕದಲ್ಲಿ ಪ್ರಸ್ತುತ ಈ ಯೋಜನೆಯಡಿಯಲ್ಲಿ 'ಹೆರಿಗೆಯ ಸಮಯ'ದಲ್ಲಿ ಅಂದರೆ ಸಾಮಾನ್ಯ ಹೆರಿಗೆಯ ಸಮಯದಲ್ಲಿ ಗ್ರಾಮೀಣ ಜಾಗದಲ್ಲಿ 700 ರೂ. ಮತ್ತು ಸಿಜೆರಿನ್ ಹೆರಿಗೆ 1,500 ರೂ.ಗಳನ್ನು ನೀಡಲಾಗುತ್ತಿದೆ.

* ವಂದೇ ಮಾತರಂ ಯೋಜನೆ: 2004ರಲ್ಲಿ ಜಾರಿ ಆಯಿತು. ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ತಪಾಸಣೆಗಾಗಿ ಸರ್ಕಾರ ಜಾರಿಗೊಳಿಸಿದ ಕಾರ್ಯಕ್ರಮ ಇದಾಗಿದೆ.

* ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮ.

* ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ: 2005ರಲ್ಲಿ ಜಾರಿಗೆ ಬಂದ ಈ ಯೋಜನೆಯ ಗುರಿ ಗ್ರಾಮೀಣ ಭಾಗದ ಎಲ್ಲಾ ಜನರಿಗೆ ಆರೋಗ್ಯ ದೊರೆಯುವಂತಾಗುವುದು. ಇದರ ಉದ್ದೇಶ ಶಿಶು ಮರಣ, ತಾಯಂದಿರ ಮರಣ ದರವನ್ನು ತಗ್ಗಿಸುವುದು, ಜನರ ಆರೈಕೆಗಳನ್ನು ಹೆಚ್ಚಿಸುವುದು, ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣ, ಎಲ್ಲರಿಗೂ ಪ್ರಾಥಮಿಕ ಆರೋಗ್ಯ ಸೌಲಭ್ಯಗಳನ್ನು ವಿಸ್ತರಿಸುವುದು, ವಿವಿಧ ರೋಗಗಳಿಂದ ಮರಣ ಹೊಂದುವ ಪ್ರಮಾಣವನ್ನು ತಗ್ಗಿಸುವುದು. ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಸಾರ್ವತ್ರಿಕರಣಗೊಳಿಸುವುದು.

**ಕರ್ನಾಟಕ ಸರ್ಕಾರದ ಮುಖ್ಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳು:**

1) ಜನನಿ ಸುರಕ್ಷಾ ಯೋಜನೆ 2005ರಲ್ಲಿ ಜಾರಿಗೆ ಆಯಿತು.

2) ತಾಯಿ ಭಾಗ್ಯ ಯೋಜನೆ 2006ರಲ್ಲಿ ಜಾರಿಗೆ ಆಯಿತು. ಈ ಕಾರ್ಯಕ್ರಮ 2006ರಲ್ಲಿ ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಮಕ್ಕಳು ಮರಣ ಪ್ರಮಾಣ ಮತ್ತು ಮಾತೃ ಮರಣ ಪ್ರಮಾಣ ಕಡಿಮೆಗೊಳಿಸುವುದು ಈ ಕಾರ್ಯಕ್ರಮದ ಉದ್ದೇಶ. ಈ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ 100 ಹೆರಿಗೆಗಳಿಗೆ ಉಚಿತ ಆರೋಗ್ಯ ಸೇವೆ ಒದಗಿಸುವುದು. ಖಾಸಗಿ ಆಸ್ಪತ್ರೆಗಳಿಗೆ 3 ಲಕ್ಷ ರೂ.ಗಳ ಸಂಭಾವನೆ ನಿಗದಿಪಡಿಸಲಾಗಿದೆ. ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಾಗಲಕೋಟೆ, ಚಾಮರಾಜನಗರ, ಬಿಜಾಪುರ, ಕಲ್ಬುರ್ಗಿ, ಯಾದಗಿರಿಗಳಲ್ಲಿ ಈ ಕಾರ್ಯಕ್ರಮ ಜಾರಿಯಾಗಿದೆ.

3) ಮಡಿಲು ಕಾರ್ಯಕ್ರಮ: ಹೆರಿಗೆಯಾದ ಸಂದರ್ಭದಲ್ಲಿ ತಾಯಿಗೆ ಮತ್ತು ಮಗುವಿಗೆ ಅಗತ್ಯ ವಸ್ತುಗಳ ಪೂರೈಕೆಗಳನ್ನು ವಿತರಿಸಲು ಕರ್ನಾಟಕ ಸರ್ಕಾರ 2006ರಲ್ಲಿ ಜಾರಿಗೊಳಿಸಿದೆ. ಕಾರ್ಯಕ್ರಮ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಮೊದಲ 2 ಹೆರಿಗೆಗಳಿಗೆ ಮಾತ್ರ ಸೀಮಿತವಾಗಿದೆ. ಈ ಕಾರ್ಯಕ್ರಮದಲ್ಲಿ 19 ಸಾಮಗ್ರಿಗಳನ್ನು ಒದಗಿಸಲಾಗಿದೆ.

4) ಸುವರ್ಣ ಆರೋಗ್ಯ ಚೈತನ್ಯ ರಾಷ್ಟ್ರೀಯ ಬಾಲ ಸ್ವಾಸ್ಥ ಮಿಷನ್ 2008–09ರಲ್ಲಿ ಜಾರಿಗೆ ಬಂದಿತು. ಶಾಲಾ ಮಕ್ಕಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸಲು ಜಾರಿಯಾದ ಕಾರ್ಯಕ್ರಮ. ಶಾಲಾ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಅಗತ್ಯ. ಮಕ್ಕಳಿಗೆ ಉಚಿತ ಚಿಕಿತ್ಸೆಯನ್ನು ಒದಗಿಸಲಾಗುತ್ತದೆ. 2014ರ ಅವಧಿಗೆ 1,00,001 ಮಕ್ಕಳಿಗೆ ಶಸ್ತ್ರ ಚಿಕಿತ್ಸೆ ಸೇವೆಯನ್ನು ಒದಗಿಸಲಾಗಿದೆ.

5) ಆರೋಗ್ಯ ಕವಚ (108): ಉಚಿತ ಆಂಬ್ಯುಲೆನ್ಸ್ ಸೇವೆ ಒದಗಿಸುವುದು. ಇದು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದೊಂದಿಗೆ ಜಾರಿಯಲ್ಲಿರುವ ಕಾರ್ಯಕ್ರಮ. ಪ್ರಸ್ತುತ ಕರ್ನಾಟಕದಲ್ಲಿ 711 ಆಂಬ್ಯುಲೆನ್ಸ್ ಸೇವೆಯನ್ನು ಒದಗಿಸುತ್ತದೆ.

6) ಆರೋಗ್ಯ ಯೋಜನೆಯು 2006ರಲ್ಲಿ ಬಂದ ಕಾರ್ಯಕ್ರಮವಾಗಿದೆ. ಮಹಿಳೆಯರ ಗರ್ಭಿಣಿ ಮತ್ತು ತಾಯಂದಿರ ಪೌಷ್ಟಿಕಾಂಶತೆಯನ್ನು ಹೆಚ್ಚಿಸುವ ಕಾರ್ಯಕ್ರಮ ಇದಾಗಿದೆ. 2000 ರೂ. ಪ್ರೋತ್ಸಾಹ ಧನ ನೀಡಲಾಗುತ್ತದೆ.

7) ಸಂಚಾರಿ ಆರೋಗ್ಯ ಘಟಕಗಳು 2005ರಲ್ಲಿ ಜಾರಿಗೆ ಬಂದಿತು. ಕುಗ್ರಾಮ ಪ್ರದೇಶಗಳಿಗೆ ಸಂಚಾರ ಆರೋಗ್ಯ ಸೇವೆಯನ್ನು ಒದಗಿಸಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತರು ಪ್ರಮುಖ ಪಾತ್ರ ವಹಿಸುತ್ತಾರೆ.

8) ಬಾಲ ಸಂಜೀವಿನಿ ಕಾರ್ಯಕ್ರಮ: 2010ರಲ್ಲಿ ಜಾರಿಗೆ ಬಂದಿತು. ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆಯನ್ನು ಒದಗಿಸುವುದು, 6 ವರ್ಷದ ಒಳಗಿನ ಬಿಪಿಎಲ್ ಕುಟುಂಬದ ಮಕ್ಕಳು ಈ ಸೇವೆಯನ್ನು ಪಡೆಯಬಹುದಾಗಿದೆ. ಸರ್ಕಾರ 30 ಆಸ್ಪತ್ರೆಗಳನ್ನು ಈ ಯೋಜನೆಯನ್ನು ಗುರುತಿಸಲಾಗಿದೆ. ನವಜಾತ ಶಿಶುಗಳಿಗೆ ಗರಿಷ್ಠ 50,000/– ಚಿಕಿತ್ಸೆ ಮತ್ತು 1–6 ವರ್ಷದ ವಯೋಮಾನದ ಮಕ್ಕಳಿಗೆ ಗರಿಷ್ಠ 35,000/– ಚಿಕಿತ್ಸೆಯನ್ನು ಒದಗಿಸಲಾಗುತ್ತದೆ. ಇದು 10 ವಿಭಿನ್ನ ಕಾಯಿಲೆಯನ್ನು ತನ್ನ ಪಟ್ಟಿಯಲ್ಲಿ ಒಳಗೊಂಡಿದೆ. (ಇಂಟಿಗ್ರೇಟೆಡ್ ಡಿಸೀಸ್ ಸೂಪರ್ ಪ್ರೋಗ್ರಾಂ).

9) ಕೆಹೆಚ್ಎಸ್‌ಡಿಆರ್‌ಪಿ – ಕರ್ನಾಟಕ ಹೆಲ್ತ್ ಸಿಸ್ಟಂ ಡೆವಲಪ್‌ಮೆಂಟ್ ಪ್ರೋಗ್ರಾಂ: ಕರ್ನಾಟಕ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆ ಇದಾಗಿದೆ. 2013ರಿಂದ ಜಾರಿಯಲ್ಲಿರುವ ಕಾರ್ಯಕ್ರಮವು ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಜಾರಿಯಲ್ಲಿರುವ ಯೋಜನೆಯಾಗಿದೆ. ಈ ಯೋಜನೆ ಗ್ರಾಮೀಣ ಭಾಗವನ್ನು ವಿಶೇಷವಾಗಿ ಪರಿಗಣಿಸಿ ಎಲ್ಲಾ ಪ್ರದೇಶವನ್ನು ತನ್ನ ವ್ಯಾಪ್ತಿಗೆ ಒಳಗೊಂಡಿದೆ. ಇದರ ಅಡಿಯಲ್ಲಿರುವ ಕಾರ್ಯಕ್ರಮಗಳೆಂದರೆ,

1) ಕಬ್ಬಿಣಾಂಶಯುಕ್ತ ಮಾತ್ರೆಗಳನ್ನು ವಿತರಿಸುವುದು.

2) ವರ್ಷದಲ್ಲಿ ಕನಿಷ್ಟ 2 ಬಾರಿ ಆರೋಗ್ಯ ತಪಾಸಣೆಯನ್ನು ಒದಗಿಸುವುದು.

3) ಪೌಷ್ಠಿಕಾಂಶಯುಕ್ತ ಆಹಾರ ಸೇವನೆ ಸಮತೋಲನ ಆಹಾರಕ್ಕೆ ಸಂಬಂಧಿಸಿದಂತೆ ಉಚಿತ ಸಲಹೆಗಳನ್ನು ಒದಗಿಸುವುದು.

2013–14ರಲ್ಲಿ ವಿಶ್ವ ಸಂಸ್ಥೆಯ ಬ್ಯಾಂಕ್ ಈ ಕಾರ್ಯಕ್ರಮಕ್ಕಾಗಿ 70 ಮಿಲಿಯನ್ ಡಾಲರ್ ಹಣಕಾಸನ್ನು ಒದಗಿಸಿದೆ.

ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆಯ ಸಾಧನೆಗಳು ಕೆಳಗಿನಂತಿವೆ.

* ಎಲ್ಲಾ ಜಿಲ್ಲೆಗಳಲ್ಲಿ ಗುಣಮಟ್ಟದ ಆರೋಗ್ಯದ ವ್ಯವಸ್ಥೆ.

* ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ಹಲವು ರೋಗಗಳನ್ನು ತಡೆಗಟ್ಟಲಾಗಿದೆ.

* ವೈದ್ಯಕೀಯ ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಒದಗಿಸಲಾಗಿದೆ.

* 44 ಸರ್ಕಾರೇತರ ಸಂಘಟನೆಗಳು ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ನಿರತವಾಗಿದೆ.

* ದಾವಣಗೆರೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಿಶೇಷವಾಗಿ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕ್ಯಾನ್ಸರ್ ರೋಗದ ಕವಚವನ್ನು ಸದೃಢಗೊಳಿಸಲು ಈ ಕಾರ್ಯಕ್ರಮದ ಅಡಿಯಲ್ಲಿ 150 ಆಂಬ್ಯುಲೆನ್ಸ್‌ನ್ನು ಖರೀದಿಸಲಾಗಿದೆ.

* ಈ ಕಾರ್ಯಕ್ರಮದಡಿಯಲ್ಲಿ 109 ಸಂಚಾರಿ ಆರೋಗ್ಯ ಚಿಕಿತ್ಸಾಲಯ ಆರಂಭಿಸಲಾಗಿದೆ.

* ಆಯುಷ ಪದ್ದತಿಗೆ ಅವಶ್ಯಕವಾದ ಹಣಕಾಸನ್ನು ಮತ್ತು ಸಂಘಟನಾತ್ಮಕ ನೆರವನ್ನು ಒದಗಿಸಲಾಗಿದೆ.

**ಗ್ರಾಮೀಣ ಶಿಕ್ಷಣ:**

ಆರ್ಥಿಕ ಅಭಿವೃದ್ಧಿಯನ್ನು ಪ್ರೇರೇಪಿಸುವ ಶಿಕ್ಷಣವು ಸಾರ್ವತ್ರಿಕವಾಗಿ ಅಗತ್ಯವಾಗಿರುವ ಮೂಲ ಕಾರ್ಯವಾಗಿದೆ. ನಗರ ಮತ್ತು ಗ್ರಾಮೀಣ ಎರಡೂ ಪ್ರದೇಶಗಳನ್ನು ಪ್ರತಿನಿಧಿಸುತ್ತದೆ. ಗ್ರಾಮೀಣ ಭಾಗಕ್ಕೆ ಬೇಕಾದ ಅವಶ್ಯಕತೆಯನ್ನು ಗ್ರಾಮೀಣ ಶಿಕ್ಷಣದ ಮೂಲಕ ಪೂರೈಕೆಯಾಗುತ್ತದೆ. ಉದಾಹರಣೆಗೆ,

1) ಉತ್ತಮ ಬೇಸಾಯದ ನಿರ್ವಹಣೆ.

2) ಅಂಕಿ ಅಂಶಗಳ ಸಂಗ್ರಹಣೆಗೆ ಅಗತ್ಯವಾದ ಲೆಕ್ಕ ಪತ್ರಗಳನ್ನು ಹೊಂದಲು.

3) ಗ್ರಾಮೀಣ ಜನರ ಜೀವನಮಟ್ಟ ಹೆಚ್ಚಿಸುವುದು.

4) ಸಂಶೋಧನೆಯನ್ನು ಅಭಿವೃದ್ಧಿ ಪಡಿಸಲು.

5) ಉತ್ತಮ ಮಾರುಕಟ್ಟೆಯ ನಿರ್ವಹಣೆ.

6) ಗ್ರಾಮೀಣ ಭಾಗದ ಸಾಮಾಜಿಕ ಆರ್ಥಿಕ ಸ್ಥಾನವನ್ನು ಉತ್ತಮಪಡಿಸುವುದು.

**ಶಿಕ್ಷಣಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳು:**

1) ರಾಷ್ಟ್ರೀಯ ಸಾಕ್ಷರತಾ ಮಿಷನ್: ಭಾರತದಲ್ಲಿ ಸಾಕ್ಷರತಾ ಮಟ್ಟವನ್ನು ಹೆಚ್ಚಿಸಲು ಎಲ್ಲಾ ಕಾರ್ಯಕ್ರಮಗಳು ಇದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. 2000ದ ಅವಧಿಯಲ್ಲಿಯೇ 100%ರಷ್ಟು ಸಾಕ್ಷರತೆಯನ್ನು ಸಾಧಿಸಬೇಕು ಎಂಬುವುದು ರಾಷ್ಟ್ರೀಯ ಸಾಕ್ಷರತೆಯ ಗುರಿಯಾಗಿತ್ತು. ಈ ಗುರಿ ಸಾಧನೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವು ಕಾರ್ಯಕ್ರಮಗಳನ್ನು ಈಗಲೂ ಮುನ್ನಡೆಸಿಕೊಂಡು ಹೋಗಲಾಗುತ್ತಿದೆ. ಉದಾ: ಆರ್.ಟಿ.ಇ., ಸರ್ವ ಶಿಕ್ಷಾ ಅಭಿಯಾನ.

2) ಸರ್ವ ಶಿಕ್ಷಣ ಅಭಿಯಾನ: ಇದನ್ನು 2002ರಲ್ಲಿ ಪ್ರಾರಂಭಿಸಲಾಯಿತು. ಸಂವಿಧಾನದ 86ನೇ ತಿದ್ದುಪಡಿಯ ಅನ್ವಯ 6–14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು 21(ಎ) ವಿಧಿಯ ಅಧೀನದಲ್ಲಿ ಒದಗಿಸಲಾಗಿದೆ. ಇದು ಪ್ರತಿ ರಾಜ್ಯ ಸರ್ಕಾರದ ಅಭಿಯಾನವಾಗಿದೆ. ಸರ್ವ ಶಿಕ್ಷಣ ಅಭಿಯಾನ 2010ರ ವೇಳೆಗೆ ಈ ಗುರಿಯನ್ನು ಸಾಧಿಸುವ ಹಿನ್ನೆಲೆಯಲ್ಲಿ ಕಾರ್ಯ ನಿರತವಾಗಿದೆ. ಸರ್ವ ಶಿಕ್ಷಣ ಅಭಿಯಾನ

ಅಡಿಯಲ್ಲಿ 2002ರಿಂದ 2010ರ ಅವಧಿಯಲ್ಲಿ ಹಲವು ಕಾರ್ಯಕ್ರಮಗಳನ್ನು ಕರ್ನಾಟಕ ಸರ್ಕಾರ ಜಾರಿಗೊಳಿಸಿದೆ. ಅವುಗಳು,

ಅ) ಅಕ್ಷರ ದಾಸೋಹ

ಬ) ಬೀದಿಯಿಂದ ಶಾಲೆಗೆ

ಕ) ಟೆಂಟ್ ಶಾಲೆಗಳ ನಿರ್ಮಾಣ (ಸಂಚಾರಿಗಳ ನಿರ್ಮಾಣ)

ಇ) ಬಾ ಬಾಲೆ ಶಾಲೆಗೆ (ಹೆಣ್ಣು ಮಕ್ಕಳ ಶಿಕ್ಷಣ ಪ್ರೋತ್ಸಾಹಿಸಲು)

ಈ) ನಲಿ ಕಲಿ (ಶಿಕ್ಷಣವನ್ನು ಆಕರ್ಷಿಸಲು)

ಉ) ಶಾಲೆಗಳಲ್ಲಿ ಕಪ್ಪು ಹಲಗೆಯ ಕಾರ್ಯಕ್ರಮ

ಊ) ಸೈಕಲ್‌ಗಳ ವಿತರಣೆ (ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜಾರಿ)

ಋ) ಎಜುಸ್ಯಾಟ್, ದೂರ ಸಂಪರ್ಕ ಆಧಾರಿತ ಶಿಕ್ಷಣ

3) ವಿದ್ಯಾ ವಿಕಸನ ಯೋಜನೆಯನ್ನು ಕರ್ನಾಟಕ ಸರ್ಕಾರ 2013–14ರ ಸಾಲಿನಲ್ಲಿ ಪ್ರಾರಂಭಿಸಿತು. ಈ ಕಾರ್ಯಕ್ರಮದ ಮೂಲಕ ನೋಟ್ ಪುಸ್ತಕಗಳ ವಿತರಣೆ ಮಾಡಲಾಯಿತು.

4) ವಿದ್ಯಾ ಸಿರಿ: 2013–14ರಲ್ಲಿ ಪ್ರಾರಂಭಿಸಲಾದ ಈ ಕಾರ್ಯಕ್ರಮದ ಮೂಲಕ ವಸತಿ ನಿಲಯದಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು, 6–14 ವರ್ಷದ ಗುಂಪನ್ನು ಹೊರತುಪಡಿಸಿ ಶಿಕ್ಷಣ ಒದಗಿಸುವ ಕಾರ್ಯಕ್ರಮ ಇದರ ಉದ್ದೇಶವಾಗಿದೆ.

5) ರಾಷ್ಟ್ರೀಯ ಉನ್ನತ ಶಿಕ್ಷಣದ ಅಭಿಯಾನ್: 11ನೇಯ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಉನ್ನತ ಶಿಕ್ಷಣವನ್ನು ಹೊಮದದ ಜನಸಂಖ್ಯೆಯನ್ನು ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸಲು ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನವನ್ನು ಜಾರಿಗೊಳಿಸಲಾಯಿತು. ಇದಕ್ಕಾಗಿ ಅಖಿಲ ಭಾರತ ಉನ್ನತ ಶಿಕ್ಷಣ ಸಮಿತಿಯನ್ನು ನಡೆಸಲಾಯಿತು. ಮಾನವ ಸಂಪನ್ಮೂಲ ಇಲಾಖೆ ಈ ಸಮೀಕ್ಷೆಯ ಆಧಾರದ ಮೇಲೆ ಹಲವು ಕಾರ್ಯಗಳನ್ನು ಜಾರಿಗೊಳಿಸಿ ಉನ್ನತ ಶಿಕ್ಷಣವನ್ನು ಎಲ್ಲಾ ಭಾಗದ ಜನರಿಗೆ ತಲುಪಿಸುವ ಉದ್ದೇಶದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಂಡಿದೆ. 12ನೇ ಪಂಚವಾರ್ಷಿಕ ಯೋಜನೆ ವೇಳೆಗೆ 40%ರಷ್ಟು ಉನ್ನತ ಶಿಕ್ಷಣವನ್ನು ಒದಗಿಸಬಹುದು.

ವಿಶ್ವ ವಿದ್ಯಾಲಯಗಳ ಪ್ರಥಮ ದರ್ಜೆ ಕಾಲೇಜುಗಳು ಪಾಲಿಟೆಕ್ನಿಕ್ ಕಾಲೇಜುಗಳನ್ನು ಈ ವ್ಯಾಪ್ತಿಗೆ ಒಳಪಡಿಸಲಾಗಿದೆ. 18 ವಿಶ್ವವಿದ್ಯಾನಿಲಯಗಳು, 362 ಸರ್ಕಾರಿ ಪ್ರಥಮ ದರ್ಜೆಯ ಕಾಲೇಜುಗಳು, 10 ಇಂಜಿನಿಯರಿಂಗ್ ಕಾಲೇಜು, 81 ಪಾಲಿಟೆಕ್ನಿಕ್ ಕಾಲೇಜುಗಳನ್ನು ಗುರುತಿಸಲಾಗಿದೆ. ಈ ಅಭಿಯಾನದಲ್ಲಿ ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಪ್ರಾದೇಶಿಕ ಅಸಮತೋಲನ ಸುಧಾರಣೆಗೆ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಿಂದುಳಿದ ಪ್ರದೇಶಕ್ಕೆ ಸೇರಿದ ಜನರಿಗೆ ವಿಶೇಷ ಅವಕಾಶವನ್ನು ಒದಗಿಸುವ ಗುರಿ ಹೊಂದಿದೆ. ಇದರೊಂದಿಗೆ 2009ರಲ್ಲಿ ಜಾರಿಯಾದ ಶಿಕ್ಷಣ ಹಕ್ಕು ಕಾಯ್ದೆ ಶಿಕ್ಷಣವನ್ನು ಎಲ್ಲಾ ವರ್ಗದವರಿಗೆ ವಿಶೇಷವಾಗಿ ಹಿಂದುಳಿದ ವರ್ಗದವರಿಗೆ ಸರ್ಕಾರಿ, ಸಾರ್ವಜನಿಕ ಮತ್ತು ಖಾಸಗಿ ವಲಯದ ಮೂಲಕ ತಲುಪಿಸುವ ಭರವಸೆ ನೀಡಿದೆ. 2009ರಿಂದ ಅನ್ವಯವಾಗಿ 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ' ಪ್ರಸ್ತುತ 10ನೇ ತರಗತಿಯವರೆಗೆ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು 12ನೇ ತರಗತಿಯವರೆಗೂ ವಿಸ್ತರಿಸುವ ಗುರಿಯನ್ನು ಹೊಂದಿದೆ.

ಎಲ್ಲಾ ಕಾರ್ಯಕ್ರಮಗಳನ್ನು ಹೊರತಾಗಿ ಶಿಕ್ಷಣದ ಗುಣಮಟ್ಟ ಮತ್ತು ಪ್ರಮಾಣದ ವಿಸ್ತರಿಸುವಲ್ಲಿ ಹಲವು ತೊಡಕುಗಳಿರುವುದನ್ನು ಕಾಣಬಹುದು. ತೊಡಕುಗಳು ಈ ಕೆಳಗಿನಂತೆ ವಿವರಿಸಲಾಗಿದೆ.

1) ಕಡಿಮೆ ಗುಣಮಟ್ಟ

2) ವ್ಯಾಪಕ ಭ್ರಷ್ಟಾಚಾರ

3) ಮೂಲ ಸೌಕರ್ಯಗಳ ಅಭಾವ

4) ಶಿಕ್ಷಣದ ವ್ಯಾಪಾರೀಕರಣ

5) ಮಾನವ ಯೋಜನೆಯ ಶಕ್ತಿಯ ಅಭಾವ

6) ಶಿಕ್ಷಣವನ್ನು ಆಕರ್ಷಕವಾಗಿ ಒದಗಿಸುವಲ್ಲಿ ಅಸಾಧ್ಯವಾದದ್ದು

7) ಅವೈಜ್ಞಾನಿಕ ಶಿಕ್ಷಣ ಪದ್ಧತಿ

## ಕುಡಿಯುವ ನೀರಿನ ನೈರ್ಮಲ್ಯ:

ಕುಡಿಯುವ ನೀರು ಮೂಲ ಸೌಕರ್ಯಗಳಲ್ಲಿ ಮೂಲವಾದುದು. ಒಂದು ಪ್ರದೇಶದ ಸ್ಥಾನಮಾನವನ್ನು, ಜನರ ಸಾಮರ್ಥ್ಯವನ್ನು, ಜನರ ಆರೋಗ್ಯವನ್ನು, ಕುಡಿಯುವ ನೀರಿನ ಸೌಲಭ್ಯ ವ್ಯಕ್ತಪಡಿಸುತ್ತದೆ. ಸಮೀಕ್ಷೆಯ ಅನ್ವಯ ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ ಕನಿಷ್ಠ 5 ಲೀಟರ್ ಶುದ್ಧ ನೀರಿನ ಅವಶ್ಯಕತೆ ಇದ್ದು, ಇದರಲ್ಲಿ ನೇರವಾಗಿ 3 ಲೀಟರ್ ನೀರು ಕುಡಿಯುವುದಕ್ಕೆ ಬಳಕೆಯಾಗುತ್ತದೆ.

ಗ್ರಾಮೀಣ ಭಾಗದ 88.01%ರಷ್ಟು ಕುಟುಂಬಗಳಿಗೆ ಶುದ್ಧವಾದ ನೀರಿನ ಅಭಾವವಿದೆ. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸರ್ಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಅನಿರೀಕ್ಷಿತವಾಗಿ ಗ್ರಾಮೀಣ ಭಾಗಕ್ಕೆ ಸಂಬಂಧಿಸಿದಂತೆ 55 ಐಪಿಸಿಡಿ (ಲಿ.ಪರ್ / ಕನ್‌ಷ್ಯೂಮ್ಡ್ ಡೇ) ಕನಿಷ್ಠ 50 ಲಿ.ಐಪಿಸಿಡಿಯನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ.

**ಕುಡಿಯುವ ನೀರನ್ನು ಒದಗಿಸಲು ಜಾರಿಗೊಂಡ ಕಾರ್ಯಕ್ರಮಗಳು:**

**1) ಗ್ರಾಮೀಣ ನೀರು ಪೂರೈಕೆ ಕಾರ್ಯಕ್ರಮ:**

1972–73ರಲ್ಲಿ ಜಾರಿಯಾದ 100%ರಷ್ಟು ಕೇಂದ್ರ ಸರ್ಕಾರ ಅನುದಾನಿತ ಕಾರ್ಯಕ್ರಮ ಇದಾಗಿದೆ. ಇದನ್ನು 1991ರಲ್ಲಿ ರಾಜೀವ್‌ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಕಾರ್ಯಕ್ರಮ ಎಂದು ಮರುನಾಮಕರಣ ಮಾಡಲಾಯಿತು.

**2) ಪ್ರಧಾನಮಂತ್ರಿ ಗ್ರಾಮೋದಯ:**

ಈ ಯೋಜನೆಯನ್ನು 2000–01ರಲ್ಲಿ ಜಾರಿಗೊಳಿಸಲಾಯಿತು. ಗ್ರಾಮೀಣ ಭಾಗದಲ್ಲಿ ಮಾನವ ಸಂಪನ್ಮೂಲ ಸುಸ್ಥಿರ ಅಭಿವೃದ್ಧಿ ಈ ಕಾರ್ಯಕ್ರಮದ ಗುರಿಯಾಗಿದೆ. ಇದರಲ್ಲಿ 6 ಅಂಗಗಳಿವೆ. ಅವುಗಳು,

1. ಪ್ರಾಥಮಿಕ ಶಿಕ್ಷಣ
2. ಗ್ರಾಮೀಣ ವಸತಿ
3. ಗ್ರಾಮೀಣ ಕುಡಿಯುವ ನೀರಿನ ಪೂರೈಕೆ
4. ಪೌಷ್ಠಿಕಾಂಶದ ಆಹಾರ
5. ಗ್ರಾಮೀಣ ವಿದ್ಯುದೀಕರಣ
6. ಪ್ರಾಥಮಿಕ ಆರೋಗ್ಯ

ಈ ಕಾರ್ಯಕ್ರಮದಲ್ಲಿ 10%ರಷ್ಟು ಹಣವನ್ನು ಗ್ರಾಮೀಣ ಕುಡಿಯುವ ನೀರಿನ ಪೂರೈಕೆಗೆ ಮೀಸಲಿಡಲಾಗಿದೆ.

**3) ಭಾರತದ ನಿರ್ಮಾಣ:**

ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕುಡಿಯುವ ನೀರಿನ ಕಾರ್ಯಕ್ರಮ 2002ರ ವೇಳೆಗೆ ಎಲ್ಲಾ ಗ್ರಾಮಗಳಿಗೆ ಶುದ್ದ ಕುಡಿಯುವ ನೀರನ್ನು ಒದಗಿಸುವ ಗುರಿಯನ್ನು ಹೊಂದಿದೆ.

**ಉದ್ದೇಶಗಳು:**

1. ಕುಡಿಯುವ ನೀರಿನ ಸೌಲಭ್ಯದ ಪೂರೈಕೆ.

2. ಎಲ್ಲಾ ಶಾಲೆಗಳು ಹಾಗೂ ಅಂಗನವಾಡಿಗಳಿಗೆ ಸುರಕ್ಷಿತ ಕುಡಿಯುವ ನೀರನ್ನು ಪೂರೈಸುವುದು.

3. ಗ್ರಾಮ ಪಂಚಾಯಿತಿಗಳನ್ನು ಉತ್ತೇಜಿಸುವ ಮೂಲಕ ಸ್ಥಳೀಯ ನೀರಿನ ಮೂಲಗಳನ್ನು ಉತ್ತೇಜಿಸುವ ಮತ್ತು ಪೂರೈಸುವ ಕ್ರಮ ಕೈಗೊಳ್ಳುವುದು.

4. ಕುಡಿಯುವ ನೀರಿನ ಮೂಲಗಳ ಸಮರ್ಪಕ ನಿರ್ವಹಣೆ.

5. ಜಲನಿರ್ವಹಣೆಯಲ್ಲಿ ಜನರ ಸಹಭಾಗಿತ್ವವನ್ನು ಹೆಚ್ಚಿಸುವುದು.

6. ದುರ್ಬಲ ವರ್ಗಗಳ ಕುಟುಂಬಗಳಿಗೆ ನೀರಿನ ಪೂರೈಕೆಗೆ ಹೆಚ್ಚಿನ ಆದ್ಯತೆ.

7. ನೀರಿನ ಶುದ್ದೀಕರಣಕ್ಕಾಗಿ ಅಲ್ಪ ವೆಚ್ಚ ತಂತ್ರಜ್ಞಾನವನ್ನು ಅಭಿವೃದ್ದಿಪಡಿಸುವುದು.

2014ರ ಅಂತ್ಯದ ವೇಳೆಗೆ ವಿಶೇಷವಾಗಿ ಕರ್ನಾಟಕದಲ್ಲಿ 6,924 ಗ್ರಾಮಗಳಿಗೆ ಶುದ್ದ ಕುಡಿಯುವ ನೀರನ್ನು ಒದಗಿಸಲಾಗಿದೆ. ಇದರಲ್ಲಿ 394 ಗ್ರಾಮಗಳು ಅಗತ್ಯವಾದ 55 ಎಲ್‌ಪಿಸಿಡಿ ಕುಡಿಯುವ ನೀರಿನ ವ್ಯವಸ್ಥೆಯನ್ನು 100% ಹೊಂದಿದೆ.

**ಕರ್ನಾಟಕದಲ್ಲಿ ನೀರಿನ ನಿರ್ವಹಣೆ:**

ನೀರಿನ ಗುಣಮಟ್ಟ ನಿರ್ವಹಣೆಗಾಗಿ ಕ್ರಿಯಾ ಯೋಜನೆ 2014–15ರಲ್ಲಿ ಎಲ್ಲಾ ಗ್ರಾಮೀಣ ಭಾಗಕ್ಕೂ ಕನಿಷ್ಠ 100 ಜನಸಂಖ್ಯೆಗಿಂತ ಕಡಿಮೆ ಜನಸಂಖ್ಯೆ ಹೊಮದಿರುವ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಲಭ್ಯ ಹೊಂದುವ ಗುರಿ ಹೊಮದಿದೆ. ಎಲ್ಲಾ ಗ್ರಾಮಗಳನ್ನು ತಲುಪಲು ಈ ಕಾರ್ಯಕ್ರಮದಲ್ಲಿ 2,500 ರೂ.ಗಳ ವೆಚ್ಚವನ್ನು ನಿಗದಿಪಡಿಸಲಾಗಿದೆ. ಈ ಕ್ರಿಯಾ ಯೋಜನೆಯ ಅಡಿಯಲ್ಲಿ ಹಣಕಾಸನ್ನು ಕೆಳಗಿನ 2 ಉದ್ದೇಶಗಳಿಗೆ ಬಳಸಲಾಗಿದೆ.

ಎ) ಅಂತರ್ಜಲ ರಕ್ಷಿಸುವ ವಿಧಾನಗಳು:

* ತಡೆ ಅಣೆಕಟ್ಟು ನಿರ್ಮಾಣ
* ಬಾವಿ ತೋಡುವುದು
* ಇಂಗು ಗುಂಡಿಗಳ ನಿರ್ಮಾಣ
* ಮೇಲ್ಛಾವಣಿ ನೀರಿನ ಕೊಯ್ಲು ಇತ್ಯಾದಿ

ಬಿ) ಮಾನವ ಸಂಪನ್ಮೂಲ ಚಟುವಟಿಕೆಗಳು:

* ನೀರಿನ ಗುಣಮಟ್ಟದ ಉಸ್ತುವಾರಿ
* ಮಾಹಿತಿ ನಿರ್ವಹಣೆ
* ಸಂಶೋಧನೆ ಅಭಿವೃದ್ದಿ

**ಮರುಭೂಮಿ ಅಭಿವೃದ್ದಿ ಯೋಜನೆ: (1997–98)**

ಕರ್ನಾಟಕದ 6 ಜಿಲ್ಲೆಗಳಾದ ಬಾಗಲಕೋಟೆ, ಬಿಜಾಪುರ, ಕೊಪ್ಪಳ, ದಾವಣಗೆರೆ, ಬಳ್ಳಾರಿ,

ಚಿತ್ರದುರ್ಗಗಳನ್ನು ಇದು ಒಳಗೊಂಡಿದೆ. ಈ ಕಾರ್ಯಕ್ರಮದ ಮೂಲಕ ಆಯ್ಕೆಯಾದ ಜಿಲ್ಲೆಗಳಲ್ಲಿ ಕನಿಷ್ಠ 70 ಎಲ್‌ಪಿಸಿಡಿ ಪೂರೈಕೆಯನ್ನು ಒದಗಿಸಬಹುದು. ಈ ಜಿಲ್ಲೆಗಳಲ್ಲಿ ನೀರಿನ ಮಟ್ಟವನ್ನು ಹೆಚ್ಚಿಸಲು ಕೊಳವೆ ಬಾವಿ, ನೀರಾವರಿ ಯೋಜನೆಗಳಿಗೆ ನೆರವಾಗಿದೆ. ಶಾಲೆ ಮತ್ತು ಅಂಗನವಾಡಿಗಳಿಗೆ ಅಗತ್ಯ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಗುರಿ ಹೊಂದಿದೆ.

## ನೈರ್ಮಲ್ಯ:

### ಗ್ರಾಮೀಣ ನೈರ್ಮಲ್ಯ:

ನೈರ್ಮಲ್ಯ ಎಂಬುವುದು ಅತೀ ಮುಖ್ಯವಾದ ಸಾಮಾಜಿಕ ಮೂಲ ಸೌಕರ್ಯ. ಇದು ಘನ ಮತ್ತು ಓಣ ತ್ಯಾಜ್ಯಗಳ ಅಂದರೆ ಮಾನವ ತ್ಯಾಜ್ಯ ಹಾಗೂ ಪರಿಸರ ತ್ಯಾಜ್ಯಗಳನ್ನು ಒಳಗೊಂಡ ಕಲುಷಿತ ವಿಲೇವಾರಿಯನ್ನು ಪ್ರತಿನಿಧಿಸುತ್ತದೆ. ಸ್ವಾತಂತ್ರ್ಯ ನಂತರದಲ್ಲಿ ಗ್ರಾಮೀಣ ನೈರ್ಮಲ್ಯ ಬಹುದೊಡ್ಡ ಸಮಸ್ಯೆಯಾಗಿದೆ. ನೈರ್ಮಲ್ಯ, ಸೌಲಭ್ಯವನ್ನು ಒದಗಿಸಲು ಸರ್ಕಾರದ ಕಾರ್ಯಕ್ರಮಗಳು ಕೆಳಗಿನ ಸೌಲಭ್ಯಗಳನ್ನು ವಿಸ್ತರಿಸುವ ಗುರಿ ಹೊಂದಿದೆ.

1) ವೈಯಕ್ತಿಕ ಶೌಚಾಲಯ

2) ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ

3) ಅಂಗನವಾಡಿಯಲ್ಲಿ ಶೌಚಾಲಯ

4) ಸಮುದಾಯ ಶೌಚಾಲಯಗಳು

5) ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಮತ್ತು ಉತ್ಪಾದನಾ ಕೇಂದ್ರಗಳು

6) ಮಾಹಿತಿ ಶಿಕ್ಷಣ ಮತ್ತು ಸಂಪರ್ಕ ಚಟುವಟಿಕೆಗಳು

### ಸರ್ಕಾರದ ನೈರ್ಮಲ್ಯ ಕಾರ್ಯಕ್ರಮಗಳು:

1) 1986ರಲ್ಲಿ ಜಾರಿಗೆ ಬಂದ ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮವನ್ನು 1999ರಲ್ಲಿ ಸಮಗ್ರ ನೈರ್ಮಲ್ಯ ಕಾರ್ಯಕ್ರಮವೆಂದು ಮರುನಾಮಕರಣ ಮಾಡಲಾಯಿತು. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಮುದಾಯದ ಸಹಭಾಗಿಯೊಂದಿಗೆ ಜಾರಿಯಾದ ಕಾರ್ಯಕ್ರಮವಾಗಿದೆ.

### ಉದ್ದೇಶಗಳು:

1. ಜನರ ಜೀವನಮಟ್ಟ ಮತ್ತು ಆರೋಗ್ಯ ಸುಧಾರಣೆ.

2. ಆರೋಗ್ಯ ಮತ್ತು ಶಿಕ್ಷಣ ಶುಚಿತ್ವದ ಬಗ್ಗೆ ಅರಿವು ಮೂಡಿಸುವುದು.

3. ಗ್ರಾಮೀಣ ಭಾಗದ ಶಾಲೆ ಮತ್ತು ಅಂಗನವಾಡಿ ಶುಚಿತ್ವ ನೈರ್ಮಲ್ಯವನ್ನು ಅಭ್ಯಾಸವನ್ನು ಆರಂಭದಲ್ಲೇ ಬೆಳೆಸುವುದು.

4. ಗ್ರಾಮೀಣ ಭಾಗದಲ್ಲಿ ಕಡಿಮೆ ವೆಚ್ಚ, ಉತ್ತಮ ಗುಣಮಟ್ಟದ ನೈರ್ಮಲ್ಯ ಸೌಲಭ್ಯಗಳನ್ನು ಪ್ರೋತ್ಸಾಹಿಸುವುದು.

5. ಉತ್ತಮ ನೈರ್ಮಲ್ಯ ಸೌಲಭ್ಯವನ್ನು ಗ್ರಾಮೀಣ ನೀರಿನ ಮೂಲಗಳನ್ನು ಆಹಾರ ಧಾನ್ಯಗಳ ಗುಣಮಟ್ಟವನ್ನು ಉತ್ತಮ ಪಡಿಸುವುದು.

2) ಸಂಪೂರ್ಣ ನೈರ್ಮಲ್ಯ ಕಾರ್ಯಕ್ರಮವನ್ನು 1919ರಲ್ಲಿ ಜಾರಿಗೆ ತರಲಾಯಿತು. ಗ್ರಾಮೀಣ ಭಾಗದಲ್ಲಿ ನೈರ್ಮಲ್ಯ ಸಾಧಿಸುವ ಗುರಿ ಹೊಂದಿದೆ. ಇದು 6 ಉದ್ದೇಶಗಳನ್ನು ಒಳಗೊಂಡಿದೆ. ಅವುಗಳು,

1. ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ.

2. ಅಂಗನವಾಡಿಯಲ್ಲಿ ಶೌಚಾಲಯ ವ್ಯವಸ್ಥೆ.

3. ಸಮೂಹದ ಶೌಚಾಲಯ ವ್ಯವಸ್ಥೆ.

4. ವೈಯಕ್ತಿಕ ಶೌಚಾಲಯ ವ್ಯವಸ್ಥೆ.

5. ಗ್ರಾಮೀಣದ ನೈರ್ಮಲ್ಯ ಉತ್ಪನ್ನಗಳ ಉತ್ಪಾದನಾ ಕೇಂದ್ರಗಳು.

6. ಗ್ರಾಮೀಣ ಭಾಗದಲ್ಲಿ ಮಾಹಿತಿ ಶಿಕ್ಷಣ ಸೌಲಭ್ಯ.

ಸಂಪೂರ್ಣ ನೈರ್ಮಲ್ಯ ಆಂದೋಲನದಲ್ಲಿ 2009–10ರ ವೇಳೆಗೆ 58.42%ರಷ್ಟು ಜನಸಂಖ್ಯೆಯನ್ನು ಬಳಸಲಾಯಿತು. ಅದೇ ಅವಧಿಯಲ್ಲಿ 5.70 ಕೋಟಿ ವ್ಯಕ್ತಿಗಳ ಶೌಚಾಲಯಗಳು, 8.9 ಲಕ್ಷ ಶಾಲಾ ಶೌಚಾಲಯಗಳು, 2.77 ಲಕ್ಷ ಅಂಗನವಾಡಿ ಶೌಚಾಲಯಗಳ ನಿರ್ಮಾಣಕ್ಕೆ 2009–10ರ ವೇಳೆಗೆ 1,200 ಕೋಟಿ ರೂ. ವೆಚ್ಚ ಮಾಡಲಾಯಿತು.

3) 2012–13ರಲ್ಲಿ ನಿರ್ಮಲ ಭಾರತ ಅಭಿಯಾನ ಪರಿಚಯಿಸಲಾಯಿತು. ಇದು ಸಂಪೂರ್ಣ ನೈರ್ಮಲ್ಯ ಅಭಿಯಾನದ ಒಂದು ಭಾಗ. ಇದು ಗ್ರಾಮೀಣ ಮತ್ತು ನಗರ ಎರಡೂ ಭಾಗವನ್ನು ತನ್ನ ವ್ಯಾಪ್ತಿಗೆ ಒಳಗೊಂಡಿದೆ.

**ಉದ್ದೇಶಗಳು:**

* ಸ್ವಚ್ಛತೆಯನ್ನು ಕಾಯ್ದುಕೊಳ್ಳುವ ಹಿನ್ನೆಲೆಯಲ್ಲಿ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಶೌಚಾಲಯ ವ್ಯವಸ್ಥೆಯನ್ನು ಒದಗಿಸುವುದು.

* ಗ್ರಾಮೀಣ ಮತ್ತು ನಗರ ಭಾಗಗಳಿಗೆ ಸಹಾಯಧನ ನೀಡಿಕೆ ಮೂಲಕ ಶೌಚಾಲಯ ಸೌಲಭ್ಯವನ್ನು ವಿಸ್ತರಿಸುವುದು.

* 90:10 ಅನುಪಾತದಲ್ಲಿ ಜನರಿಗೆ ಹಣಕಾಸು ನೆರವನ್ನು ಒದಗಿಸುವುದು.

* ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ ಪ್ರಸ್ತುತ 1,200 ರೂ.ಗಳನ್ನು ಗುಡ್ಡಗಾಡು ಪ್ರದೇಶಗಳಲ್ಲಿ 1,500 ರೂ.ಗಳನ್ನು ಒದಗಿಸಲಾಗುತ್ತದೆ.

## ಸ್ವಚ್ಛ ಭಾರತ ನಿರ್ಮಾಣ ಅಭಿಯಾನ:

ಅಕ್ಟೋಬರ್ 2, 2014ರಂದು ನಿರ್ಮಲ ಭಾರತ ಅಭಿಯಾನವನ್ನು ಸ್ವಚ್ಛ ಭಾರತ ಅಭಿಯಾನ ಎಂದು ಮರುನಾಮಕರಣ ಮಾಡಲಾಯಿತು. ಇದರಲ್ಲಿ 2 ಭಾಗಗಳಿವೆ. ಅವುಗಳು,

1) ಕುಡಿಯುವ ನೀರು

2) ನೈರ್ಮಲ್ಯ ವ್ಯವಸ್ಥೆ

**ಉದ್ದೇಶಗಳು:**

1) ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿ.

2) 2019ರ ವೇಳೆಗೆ ಎಲ್ಲರಿಗೂ ಸುರಕ್ಷಿತ ಕುಡಿಯುವ ನೀರಿನ ಪೂರೈಕೆ.

3) ವಾರ್ಷಿಕ ಶೌಚಾಲಯದ ಬೆಳವಣಿಗೆ 3%ರಿಂದ 10% ಹೆಚ್ಚಿಸುವುದು.

4) ಪ್ರಸ್ತುತ ದೈನಂದಿನ ಶೌಚಾಲಯ ನಿರ್ಮಾಣವನ್ನು 14,000ದಿಂದ 48,000ಕ್ಕೆ ಹೆಚ್ಚಿಸುವುದು.

5) 2019ರ ವೇಳೆಗೆ ಭಾರತವನ್ನು ಬಯಲು ಮಲ ವಿಸರ್ಜನೆ ಮುಕ್ತ ರಾಷ್ಟ್ರವನ್ನಾಗಿ ಮಾಡುವುದು.

6) ಮುಂದಿನ 5 ವರ್ಷಗಳಿಗೆ ಮಲ ಮುಕ್ತ ರಾಷ್ಟ್ರವನ್ನಾಗಿ ಮಾಡುವುದು.

**ಸ್ವಚ್ಛ ಭಾರತ ಅಭಿಯಾನವನ್ನು ಬಲಪಡಿಸಲು ಕ್ರಮಗಳು:**

1) ಎಲ್ಲಾ ರಾಜ್ಯ ಸರ್ಕಾರಗಳು 2019ರ ವೇಳೆಗೆ ಸ್ವಚ್ಛ ಭಾರತದ ಗುರಿಯನ್ನು ಪೂರ್ಣಗೊಳಿಸುವ ಒಪ್ಪಂದಕ್ಕೆ ಸಹಿ ಹಾಕಿವೆ.

2) ಎಲ್ಲಾ ರಾಜ್ಯಗಳಿಗೆ ಅನುದಾನವನ್ನು ಸಕಾಲದಲ್ಲಿ ಸರಿಯಾಗಿ ಬಿಡುಗಡೆ ಮಾಡುವುದು. ಅಗತ್ಯ ಕುಟುಂಬಗಳಿಗೆ ಶೌಚಾಲಯ ನಿರ್ಮಾಣಕ್ಕಾಗಿ ನಬಾರ್ಡ್ ಸಣ್ಣ ಕೈಗಾರಿಕೆಗಳ (ಎಸ್ಐಡಿಬಿಐ) ಬ್ಯಾಂಕ್ ಸಹ ಸಾಲ ಸೌಲಭ್ಯ ನೀಡುವುದು.

3) ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ನೈರ್ಮಲ್ಯ ಸಮನ್ವಯಕರವನ್ನು ನೇಮಿಸುವುದು.

4) ಸ್ವಚ್ಛತಾ ದೂತರು: ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಸ್ವಚ್ಛತಾ ದೂತರನ್ನು ಗುರುತಿಸುವುದು. ಇವರು ನೈರ್ಮಲ್ಯದ ಪರಿಣತಿಯನ್ನು ಹೊಂದಿದ್ದು ಸ್ವಚ್ಛ ಭಾರತ ಅಭಿಯಾನಕ್ಕೆ ಜನರನ್ನು ಪ್ರೇರೇಪಿಸುತ್ತಾರೆ.

5) ವಾರ್ಷಿಕ ನೈರ್ಮಲ್ಯ ಸಮೀಕ್ಷೆ ಪ್ರತಿ ವರ್ಷ ನಡೆಸುವುದು. ಸ್ವಚ್ಛ ಭಾರತ ಅಭಿಯಾನವನ್ನು ಬಲಪಡಿಸಲು ಈ ಕಾರ್ಯವನ್ನು ಕೈಗೊಳ್ಳಲಾಗಿದೆ.

6) ಚರಂಡಿ ವ್ಯವಸ್ಥೆ.

## ಬಡತನ ಮತ್ತು ನಿರುದ್ಯೋಗ:

ಬಡತನ ನಿರ್ಮೂಲನೆ ಮತ್ತು ಉದ್ಯೋಗ ನಿರ್ಮಾಣವು ಒಂದನ್ನೊಂದು ಜೀವಿಸುವ ಪೂರಕವಾದ ಸರ್ಕಾರದ ಕಾರ್ಯಕ್ರಮಗಳ ಈ ಕಾರ್ಯಗಳನ್ನು ಸ್ವಾತಂತ್ರ್ಯ ನಂತರ ಎಲ್ಲಾ ಅವಧಿಯಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಜಾರಿಗೊಳಿಸಿರುವುದನ್ನು ಕಾಣಬಹುದು. ಭಾರತ ಕರ್ನಾಟಕ ಸರ್ಕಾರ ಜಾರಿಗೊಳಿಸಿರುವ ಬಡತನ ನಿರ್ಮೂಲನೆ ಮತ್ತು ಉದ್ಯೋಗ ನಿರ್ಮಾಣ ಕಾರ್ಯಕ್ರಮಗಳನ್ನು 5 ಗುಂಪುಗಳಾಗಿ ವರ್ಗೀಕರಣ ಮಾಡಲಾಗಿದೆ.

### ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ:

1993–94ರಲ್ಲಿ ನಗರ ಭಾಗಗಳಿಗೆ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಯಿತು. 1994–95ರಲ್ಲಿ ಗ್ರಾಮೀಣ ಗ್ರಾಮಕ್ಕೆ ಇದನ್ನು ವಿಸ್ತರಿಸಲಾಯಿತು. ಸುಶಿಕ್ಷಿತ ನಿರುದ್ಯೋಗಿಗಳಿಗೆ ಸ್ವ ಉದ್ಯೋಗಾವಕಾಶ ನೀಡುವುದು. ಇದು 100%ರಷ್ಟು ಕೇಂದ್ರ ಸರ್ಕಾರ ಪ್ರಾಯೋಜಿಸಿದ ಕಾರ್ಯಕ್ರಮ 2005–06ರ ವೇಳೆಗೆ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಒಟ್ಟು 16:50 ಲಕ್ಷ ಉದ್ಯೋಗಾವಕಾಶವನ್ನು ನಿರ್ಮಾಣ ಮಾಡಲಾಗಿತ್ತು. 2008ರಲ್ಲಿ ಈ ಕಾರ್ಯಕ್ರಮವನ್ನು ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆಯೊಂದಿಗೆ ವಿಲೀನಗೊಳಿಸಲಾಯಿತು. ಇದು ಸ್ವಯಂ ಉದ್ಯೋಗ ಹಾಗೂ ಕೂಲಿ ಉದ್ಯೋಗಾವಕಾಶ ಒದಗಿಸುವ ಗುರಿ ಹೊಂದಿದೆ.

### ಕೂಲಿ ಉದ್ಯೋಗ ನಿರ್ಮಾಣ ಮತ್ತು ವೇತನ ಉದ್ಯೋಗ ನಿರ್ಮಾಣ:

ಸರ್ಕಾರದ ಕಾಮಗಾರಿಯಲ್ಲಿ ಸ್ಥಳೀಯ ಮಾನವ ಶಕ್ತಿಯನ್ನು ಬಳಕೆ ಮಾಡಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿ ಆದಾಯ ಮೂಲವನ್ನು ಹೆಚ್ಚಿಸಿ ಬಡತನವನ್ನು ಹೋಗಲಾಡಿಸುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

ಮುಖ್ಯ ಉದ್ಯೋಗ ನಿರ್ಮಾಣ ಕಾರ್ಯಕ್ರಮಗಳೆಂದರೆ,

*** ಜವಹಾರ್ ರೋಜ್‌ಗಾರ್ ಯೋಜನೆ:**

1979ರಲ್ಲಿ ಜಾರಿಗೆ ತರಲಾದ ಈ ಯೋಜನೆಯನ್ನು ಈಗಾಗಲೇ ಜಾರಿಗೆಯಲ್ಲಿದ್ದ 'ರಾಷ್ಟ್ರೀಯ ಉದ್ಯೋಗ ಯೋಜನೆ ಮತ್ತು ಗ್ರಾಮೀಣ ಭೂ ಉದ್ಯೋಗ ನಿರ್ಮಾಣ' ಕಾರ್ಯಕ್ರಮ ಒಟ್ಟುಗೂಡಿಸಿ ಜಾರಿಗೊಳಿಸಲಾಯಿತು.

**ಇದರ ಉದ್ದೇಶಗಳು:**

* ಗ್ರಾಮೀಣ ಭಾಗದ ಬಡತನ ರೇಖೆಯ ಕೆಳಗಿರುವ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ.
* ಈ ಕಾರ್ಯಕ್ರಮವನ್ನು 4.4 ಕೋಟಿ ಕುಟುಂಬಗಳಿಗೆ ಉದ್ಯೋಗಾವಕಾಶ ಒದಗಿಸುವ ಗುರಿ ಹೊಂದಿದೆ.
* ಈ ಕಾರ್ಯಕ್ರಮ 80:20ರ ಅನುಪಾತದಲ್ಲಿ ಹಣಕಾಸು ಒದಗಿಸುವ ಕಾರ್ಯಕ್ರಮ.
* 30%ರಷ್ಟು ಉದ್ಯೋಗಾವಕಾಶಗಳು ಮಹಿಳೆಯರಿಗೆ ಮೀಸಲಾಗಿತ್ತು.

* ಈ ಕಾರ್ಯಕ್ರಮದಲ್ಲಿ ಭೂ ಅಭಿವೃದ್ಧಿ ರಸ್ತೆ ನಿರ್ಮಾಣ ಚರಂಡಿ ನಿರ್ಮಾಣ ಈ ಕಾಮಗಾರಿಗಳಿಗೆ ಆದ್ಯತೆ.

* 1998ರ ವೇಳೆಗೆ 3.5 ಕೋಟಿ ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಲಾಗಿತ್ತು.

* 1999ರಲ್ಲಿ 'ಜವಹಾರ್ ರೋಜ್‌ಗಾರ್ ಯೋಜನೆ'ಯನ್ನು ಜವಹಾರ್ ಗ್ರಾಮ ಸಮೃದ್ಧಿ ಯೋಜನೆಯೆಂದು ಮರುನಾಮಕರಣ ಮಾಡಲಾಯಿತು.

* ವೇತನ ಉದ್ಯೋಗವನ್ನು ಗ್ರಾಮೀಣ ಭಾಗದಲ್ಲಿ ಮತ್ತಷ್ಟು ಬಲಪಡಿಸಲು ಗ್ರಾಮೀಣ ಮೂಲ ಸೌಕರ್ಯಗಳ ವಿಸ್ತರಣೆ ಈ ಕಾರ್ಯಕ್ರಮದ ಗುರಿಯಾಗಿತ್ತು.

* 75:25ರ ಅನುಪಾತ.

* ಈ ಕಾರ್ಯಕ್ರಮದ ಗ್ರಾಮೀಣ ಭಾಗದ ಮೂಲಸೌಕರ್ಯವನ್ನು ವಿಸ್ತರಿಸಲು ನೆರವಾಗಿದೆ.

**4) ಸಂಪೂರ್ಣ ಗ್ರಾಮೀಣ ಯೋಜನೆ:**

2001ರಲ್ಲಿ 268.32 ದಶಲಕ್ಷ ಉದ್ಯೋಗಾವಕಾಶ ಮಾಡಲಾಯಿತು. 2001ರಲ್ಲಿ ಈಗಾಗಲೇ ಜಾರಿಯಲ್ಲಿದ್ದ 'ಜವಹಾರ್ ಗ್ರಾಮ ಸಮೃದ್ಧಿ ಮತ್ತು ಉದ್ಯೋಗ ಭರವಸೆ ಯೋಜನೆ'ಯನ್ನು ವಿಲೀನಗೊಳಿಸಿ ಸಂಪೂರ್ಣ ಗ್ರಾಮ ರೋಜ್‌ಗಾರ್ ಯೋಜನೆಯಾಗಿ ಜಾರಿಗೊಳಿಸಲಾಯಿತು.

**ಉದ್ದೇಶಗಳು:**

* ಆಹಾರ ಸಂರಕ್ಷಣೆ ಮತ್ತು ಹೆಚ್ಚುವರಿ ಕೂಲಿ, ವೇತನ ಉದ್ಯೋಗದ ನಿರ್ಮಾಣ (ಭದ್ರತೆ).

* ವೇತನ ಉದ್ಯೋಗವನ್ನು ಒದಗಿಸುವಲ್ಲಿ ಶಾಶ್ವತ ಸಮುದಾಯ, ಆಸ್ತಿಗಳ ನಿರ್ಮಾಣಕ್ಕೆ ಹೆಚ್ಚುವರಿ ಒತ್ತು.

**ಲಕ್ಷಣಗಳು:**

1) 1,000 ಕೋಟಿ ಮಾನವ ದಿನಗಳ ಉದ್ಯೋಗ ನಿರ್ಮಾಣ.

2) 87.5:12.5ಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುಪಾತದಲ್ಲಿ ಹಣಕಾಸನ್ನು ಒದಗಿಸುತ್ತದೆ.

3) 2006ರಲ್ಲಿ ಈ ಕಾರ್ಯಕ್ರಮವನ್ನು ಎನ್‌ಆರ್‌ಈಜಿಪಿ ಕಾರ್ಯಕ್ರಮದೊಂದಿಗೆ ವಿಲೀನ ಮಾಡಲಾಯಿತು.

**ಇನ್ನಿತರ ಕಾರ್ಯಕ್ರಮಗಳು:**

* ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆ 2001

* ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ 2000–01

* ಭಾರತ ನಿರ್ಮಾಣ ಕಾರ್ಯಕ್ರಮ – 2005

* ಅಂಬೇಡ್ಕರ್ ಆವಾಸ ಯೋಜನೆ

* ಇಂದಿರಾಗಾಂಧಿ ಆವಾಸ ಯೋಜನೆ

## ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎನ್‌ಆರ್‌ಈಜಿಪಿ):

2006 ಫೆಬ್ರವರಿಯಲ್ಲಿ ಭಾರತ ಸರ್ಕಾರ ಈಗಾಗಲೇ ಜಾರಿಯಲ್ಲಿದ್ದ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ ಮತ್ತು ರಾಷ್ಟ್ರೀಯ ಕೂಲಿಗಾಗಿ ಕಾಳು ಕಾರ್ಯಕ್ರಮವನ್ನು ವಿಲೀನಗೊಳಿಸಿ ಜಾರಿಗೆ ತಂದಿತು.

**ವಿಶೇಷ ಲಕ್ಷಣಗಳು:**

ಈ ಕಾರ್ಯಕ್ರಮ 2005ರ ಎನ್‌ಆರ್‌ಈಜಿಎ ಯು ಬೆಂಬಲಿತವಾಗಿದೆ. ಇದು 100 ದಿನಗಳ ಉದ್ಯೋಗದ ಭರವಸೆ, ಗ್ರಾಮೀಣ ಭಾಗದಲ್ಲಿರುವ ಕೌಶಲ್ಯ ರಹಿತ ನಿರುದ್ಯೋಗಿಗಳಿಗೆ ಆಧ್ಯತೆಯ ಗುರಿಯನ್ನು ಹೊಂದಿದೆ.

* ಇದು ಕನಿಷ್ಠ ಕೂಲಿ ಕಾಯ್ದೆಯ ಬೆಂಬಲವನ್ನು ಹೊಂದಿದೆ.
* ನಿರುದ್ಯೋಗಿ ಭತ್ಯೆಯನ್ನು ಸರ್ಕಾರ ಒದಗಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದೆ.

**ಈ ಕಾರ್ಯಕ್ರಮದ ವ್ಯಾಪ್ತಿ:**

2006ರಲ್ಲಿ ಈ ಕಾರ್ಯಕ್ರಮ ಭಾರತದ 200 ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ತರಲಾಯಿತು. ಬೀದರ್, ಚಿತ್ರದುರ್ಗ, ದಾವಣಗೆರೆ, ಗುಲ್ಬರ್ಗಾ, ರಾಯಚೂರು – ಕರ್ನಾಟಕದಿಂದ ಆಯ್ಕೆಯಾದ ಜಿಲ್ಲೆಗಳು. 2ನೇ ಹಂತ ಭಾರತದ 250 ಜಿಲ್ಲೆಗಳ ಈ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. ಕರ್ನಾಟಕ 6 ಜಿಲ್ಲೆಗಳು – ಬೆಳಗಾಂ, ಬಳ್ಳಾರಿ, ಚಿಕ್ಕಂಗಳೂರು, ಕೊಡಗು, ಹಾಸನ, ಶಿವಮೊಗ್ಗಾ ಈ 6 ಜಿಲ್ಲೆಗಳಿಗೆ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. 2008–09ರಲ್ಲಿ ಭಾರತದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಯಿತು. 2009ರಲ್ಲಿ ಈ ಕಾರ್ಯಕ್ರಮವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವೆಂದು ಮರುನಾಮಕರಣ ಮಾಡಲಾಯಿತು.

**ಈ ಕಾರ್ಯಕ್ರಮದ ಸಾಧನೆ:**

ಈ ಕಾರ್ಯಕ್ರಮ ಜಾರಿಗೆ ಬಂದ 8 ವರ್ಷಗಳಲ್ಲಿ ಗ್ರಾಮೀಣ ಭಾಗದಲ್ಲಿ ಹಲವು ಚಟುವಟಿಕೆಗಳನ್ನು ಕಾಣಬಹುದು.

1) ಉದ್ಯೋಗಾವಕಾಶಗಳ ಹೆಚ್ಚಳ.
2) 2013ರ ಅಂತ್ಯದ ವೇಳೆಗೆ 3.39 ಕೋಟಿ ವಿಭಿನ್ನ ಜಿಲ್ಲೆಗಳಲ್ಲಿ ಉದ್ಯೋಗಾವಕಾಶವನ್ನು ಒದಗಿಸಲಾಗುತ್ತದೆ.
3) ಶಾಶ್ವತ ಆಸ್ತಿಗಳ ನಿರ್ಮಾಣ.
4) ಎಂಜಿಎನ್‌ಆರ್‌ಈಜಿಎಸ್ ಕಾಮಗಾರಿಗಳನ್ನು ಪೂರ್ಣಗೊಳಿಸಲು ನೆರವಾಗಿದೆ. ಅವುಗಳೆಂದರೆ,
   * ಇಂದಿರಾ ಆವಾಸ ಯೋಜನೆ
   * ಭಾರತ ನಿರ್ಮಾಣ ಕಾರ್ಯಕ್ರಮ
   * ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆ

**ಎಂಜಿಎನ್‌ಆರ್‌ಈಜಿಪಿ ಕರ್ನಾಟಕದಲ್ಲಿ:**

ಕರ್ನಾಟಕ ರಾಜ್ಯದಲ್ಲಿ 2013ರ ವೇಳೆಗೆ 5.08 ಲಕ್ಷ ಉದ್ಯೋಗಾವಕಾಶಗಳು ನಿರ್ಮಾಣ ಮಾಡಲಾಯಿತು. ಕರ್ನಾಟಕದಲ್ಲಿ ಪ್ರಸ್ತುತ ಕೂಲಿಯನ್ನು 224 ರೂ. (31.03.2016)ಗಳಿಗೆ ನಿಗದಿ ಮಾಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ನಿರುದ್ಯೋಗ ಭತ್ಯೆ 30 ದಿನಗಳಿಗೆ 25/– ರೂ. ಉಳಿದ ದಿನಗಳಿಗೆ 50/–ರಷ್ಟು ನೀಡಲಾಗಿದೆ.

**ಸಾಮಾಜಿಕ ಭದ್ರತೆ ಕಾರ್ಯಕ್ರಮಗಳು:**

ಸಾಮಾಜಿಕ ಭದ್ರತೆಯ ಅನಿರ್ದಿಷ್ಟ ಬದಲಾವಣೆಗಳ ವಿರುದ್ದ ಹಾಗೂ ದುರ್ಬಲ ವರ್ಗಗಳ ರಕ್ಷಣೆಗಾಗಿ ಜಾರಿಯಲ್ಲಿರುವ ಕಾರ್ಯಕ್ರಮಗಳೇ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು. 1995ರಲ್ಲಿ ಜಾರಿಯಾದ ನೇಷನ್ ಸೋಷಿಯಲ್ ಪ್ರೋಗ್ರಾಂ ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮವಾಗಿದೆ.

ಈ ಕೆಳಗಿನ ಕಾರ್ಯಕ್ರಮಗಳು ಎನ್‌ಎಸ್‌ಪಿ ಪಟ್ಟಿಯಲ್ಲಿ ಬರುತ್ತದೆ.

1) ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಂಚಣಿ ಯೋಜನೆ.

2) ಇಂದಿರಾಗಾಂಧಿ ರಾಷ್ಟ್ರೀಯ ವಿಧವಾ ವೇತನ ಯೋಜನೆ.

3) ಇಂದಿರಾಗಾಂಧಿ ರಾಷ್ಟ್ರೀಯ ಅಂಗವಿಕಲರ ಪಿಂಚಣಿ ಯೋಜನೆ.

4) ರಾಷ್ಟ್ರೀಯ ಕುಟುಂಬ ಕಲ್ಯಾಣ ಯೋಜನೆ.

5) ಅನ್ನಪೂರ್ಣ ಯೋಜನೆ.

ಇಡೀ ರಾಷ್ಟ್ರದಲ್ಲಿ ಎಲ್ಲಾ ಬಡತನ ರೇಖೆಗಿಂತ ಕೆಳಗಿರುವವರಿಗೆ ನೀಡಲಾಗುತ್ತದೆ. ಇದರ ಜೊತೆಗೆ ಆಮ್ ಆದ್ಮಿ ಭಿಮಾ ಯೋಜನೆ 2007ರಿಂದ ಕೃಷಿ ಸಾಮಾಜಿಕ ಭದ್ರತೆ ಒದಗಿಸಲು ಈ ಯೋಜನೆ ಜಾರಿಯಲ್ಲಿದೆ.

**ಆಹಾರ ಭದ್ರತೆ:**

* ಸಾಮಾಜಿಕ ವಿತರಣಾ ವ್ಯವಸ್ಥೆ 1950.
* ಗುರಿಯ ಸಾರ್ವಜನಿಕ ವಿತರಣಾ ವ್ಯವಸ್ಥೆ 1997.
* ಕೂಲಿಗಾಗಿ ಕಾಳು ಕಾರ್ಯಕ್ರಮ 1977.
* ರಾಷ್ಟ್ರೀಯ ಕೂಲಿಗಾಗಿ ಕಾಳು ಕಾರ್ಯಕ್ರಮ 1977.
* ಅಂತ್ಯೋದಯ ಅನ್ನ ಯೋಜನೆ.
* ಶಾಲಾ ಮಕ್ಕಳಿಗೆ ಆಹಾರ ಭದ್ರತೆ.
* ಅನ್ನ ಭಾಗ್ಯದ ಯೋಜನೆ.
* ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮ.

**ವಸತಿ ಕಾರ್ಯಕ್ರಮಗಳು:**

* ಇಂದಿರಾ ಆವಾಸ ಯೋಜನೆ.
* ಅಂಬೇಡ್ಕರ್ ಆವಾಸ ಯೋಜನೆ.
* ಸಮಗ್ರ ಆವಾಸ ಯೋಜನೆ.
* ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ.
* ಭಾರತ ನಿರ್ಮಾಣ ಯೋಜನೆ.

**ಕರ್ನಾಟಕ ಸರ್ಕಾರಕ್ಕೆ ಸಂಬಂಧಿಸಿದಂತೆ ವಸತಿ ಕಾರ್ಯಕ್ರಮಗಳು:**

1) ಬಸವ ವಸತಿ ಯೋಜನೆ.

2) ಪಿಯೂಆರ್ಎ (ಪ್ರೊವೈಡಿಂಗ್ ಆಫ್ ಅರ್ಬನ್ ಅಮೆನ್‌ಟೀಸ್ ಇನ್ ರೂರಲ್ ಏರಿಯಾ).

**ಗ್ರಾಮೀಣ ಭಾಗದಲ್ಲಿ ನಗರದ ಸೌಲಭ್ಯಗಳ ವಿಸ್ತರಣೆ:**

ಭಾರತ ಸರ್ಕಾರ ಗ್ರಾಮೀಣ ಭಾಗದಲ್ಲಿ ಅಭಿವೃದ್ಧಿ ತರಲು ಜಾರಿಗೆ ತಂದ ಕಾರ್ಯಕ್ರಮ ಇದಾಗಿದೆ. ನಗರ ಭಾಗದ ಸೌಲಭ್ಯಗಳ ವಿಸ್ತರಿಸುವ ಮೂಲಕ ಸಕಲ ಸೌಕರ್ಯಗಳನ್ನು ನೀಡುವುದು.

**ಪುರ (ಪಿಯೂಆರ್ಎ) ಪ್ರೊವೈಡಿಂಗ್ ಆಫ್ ಅರ್ಬನ್ ಅಮೆನ್‌ಟೀಸ್ ಇನ್ ರೂರಲ್ ಏರಿಯಾ):**

ಪುರ ಮಾದರಿಯನ್ನು ನವ ಗಾಂಧಿ ಮಾದರಿ ಎಂದು ಕರೆಯಲಾಗುತ್ತದೆ. ಗಾಂಧಿ ಮಾದರಿಯ ಆಧುನಿಕ ರೂಪದಲ್ಲಿ ಪುರ ಯೋಜನೆಯಲ್ಲಿ ಕಾಣಬಹುದು. ಇದರ ಪ್ರಮುಖ ಲಕ್ಷಣಗಳೆಂದರೆ,

1) ಕೃಷಿ ಭವಿಷ್ಯದ ಸಮೃದ್ಧಿಯ ಚಾಲನಾಶಕ್ತಿಯಾಗಿರಲು ಸಾಧ್ಯವಿಲ್ಲ. ಕೃಷಿ ಮೇಲಿನ ಅವಲಂಬನೆ ಕಡಿಮೆಯಾಗಿದೆ. ಡಾ.ಎ.ಪಿ.ಜೆ. ಅವರು ಭಾರತದಲ್ಲಿ ಕೃಷಿ ಅವಲಂಬಿತ ಸಂಖ್ಯೆ 20% ಮತ್ತು ಅದರ ಕೊಡುಗೆ 10% ಇಳಿಯಲಿದೆ ಎಂದು ಹೇಳಿದ್ದಾರೆ.

2) ಕೈಗಾರಿಕಾ ಮತ್ತು ಸೇವಾ ವಲಯದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿ. 2020ರ ವೇಳೆಗೆ ಕೈಗಾರಿಕಾ ಮತ್ತು ಸೇವಾ ವಲಯದ ಮೇಲೆ ಅವಲಂಬಿತ ಪ್ರಮಾಣ 75%ಕ್ಕೆ ಹೆಚ್ಚಾಗುತ್ತದೆ. ರಾಷ್ಟ್ರೀಯ ವರಮಾನದ 90%ರಷ್ಟು ಕೊಡುಗೆಯನ್ನು ಈ 2 ವಲಯಗಳು ಒದಗಿಸುತ್ತದೆ.

3) ಹಳ್ಳಿಗಳಿಗೆ ಅಧಿಕ ವೆಚ್ಚದ ಮುಂದುವರಿದ ತಂತ್ರಜ್ಞಾನವನ್ನು ಒದಗಿಸಬೇಕು.

4) ನಗರಗಳಂತೆ ಗ್ರಾಮೀಣ ಪ್ರದೇಶಗಳಿಗೂ ಒಂದು ರೀತಿಯ ತಲಾ ಹೂಡಿಕೆಯ ಪ್ರಮಾಣವನ್ನು ಒದಗಿಸಬೇಕು.

5) ಗ್ರಾಮೀಣ ನಿಧಿಗಳನ್ನು ಹೂಡಿಕೆಗಾಗಿಯೇ ಹೊರತು ಅನುಭೋಗಕಲ್ಲ.

6) ಗ್ರಾಮೀಣ ಅಭಿವೃದ್ಧಿಯನ್ನು ಕಂಪನಿ ಮಾದರಿಯ ಸಾಮಾಜಿಕ ಜವಾಬ್ದಾರಿಯನ್ನು ಪರಿಗಣಿಸಬೇಕು.

ಪುರ ಯೋಜನೆಯ ಈ ಹಂತಗಳು ದೀರ್ಘಾವಧಿಯ ಗ್ರಾಮೀಣ ಭಾಗದ ಅಭಿವೃದ್ಧಿಯನ್ನು ಉಂಟುಮಾಡುವ ತಂತ್ರಗಳಾಗಿವೆ. ಈ ತಂತ್ರಗಳನ್ನು ಗ್ರಾಮೀಣ ಭಾಗದಲ್ಲಿ ಅಳವಡಿಸಿಕೊಂಡರೆ ಕೆಳಗಿನ ಗುರಿಗಳನ್ನು ಸಾಧಿಸಬಹುದು ಎಂಬುವುದು ಅಬ್ದುಲ್ ಕಲಾಂರವರ ಉದ್ದೇಶವಾಗಿದೆ.

1) ಉದ್ಯೋಗಾವಕಾಶಗಳ ವಿಸ್ತರಣೆ.

2) 2020ರ ವೇಳೆಗೆ 2ನೇ ಹಸಿರು ಕ್ರಾಂತಿಯ ಸಾಧನೆ.

3) ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ 400 ಮಿಲಿಯನ್ ಟನ್ ಉತ್ಪಾದನೆ ಮಾಡುವ ಸಾಮರ್ಥ್ಯ ಹೊಂದಬಹುದು.

4) ಸಾಮಾಜಿಕ ಬದಲಾವಣೆಯನ್ನು ಸಾಧಿಸಬಹುದು.

ಪುರ ಒಂದು ಕಾರ್ಯಕ್ರಮದಲ್ಲಿ ಗ್ರಾಮೀಣ ಅಭಿವೃದ್ಧಿಯ ತಂತ್ರ ಚರ್ಚಿಸಿ ಅಬ್ದುಲ್ ಕಲಾಂರವರು ಪುರ ಮತ್ತು ಗಾಂಧೀಜಿಯವರ ಗ್ರಾಮೀಣಾಭಿವೃದ್ಧಿ ತಂತ್ರ ಗ್ರಾಮೀಣ ಸೌಕರ್ಯ, ಸಣ್ಣ ಕೈಗಾರಿಕೆ, ಅಬ್ದುಲ್ ಉದ್ಯೋಗ ನೀಡುವುದನ್ನು ರೂಪಿಸಲಾಗಿದೆ.

## ಕರ್ನಾಟಕದಲ್ಲಿ ಸ್ವ ಸಹಾಯ ಗುಂಪುಗಳು ಹಾಗೂ ಸೂಕ್ಷ್ಮ ಹಣಕಾಸು ಸಂಸ್ಥೆಗಳು:

ಗ್ರಾಮೀಣ ಭಾಗಗಳಿಗೆ ಹಣಕಾಸಿನ ಸೌಲಭ್ಯಗಳನ್ನು ಇಸ್ತರಿಸಲು ಸ್ವಸಹಾಯ ಗುಂಪುಗಳು ಮಹತ್ತರ ಪಾತ್ರ ನಿರ್ವಹಿಸುತ್ತದೆ. ಸ್ವಸಹಾಯ ಗುಂಪುಗಳ ತಮ್ಮ ಸದಸ್ಯರಿಗೆ ಹಣಕಾಸು ಮತ್ತು ಹಣಕಾಸೇತರ ಸೌಲಭ್ಯಗಳನ್ನು ವಿಸ್ತರಿಸುವ ಸಂಸ್ಥೆಗಳಾಗಿವೆ. ಸ್ವಸಹಾಯ ಗುಂಪುಗಳು 1971ರಲ್ಲಿ ಬಾಂಗ್ಲಾ ದೇಶದ ನಿರಾಶ್ರಿತರಿಂದ ಗುಜರಾತ್ ರಾಜ್ಯದಲ್ಲಿ ಪರಿಚಿತವಾದ ಗುಂಪುಗಳು. ಒಂದೇ ರೀತಿಯ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನವನ್ನು ಹೊಂದಿರುವ ಜನರು ಒಂದುಗೂಡಿ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಲು ರೂಪಿಸಿಕೊಂಡ ಗುಂಪುಗಳೇ 'ಸ್ವಸಹಾಯ ಗುಂಪುಗಳು.'

**ಸ್ವ ಸಹಾಯ ಗುಂಪುಗಳ ಲಕ್ಷಣಗಳು:**

1) ಸಮಾನ ಆರ್ಥಿಕ ಮತ್ತು ಸಮಾನ ಹಿನ್ನೆಲೆ.

2) ಸಮಾನ ವಯಸ್ಕರ ಗುಂಪು.

3) ಒಂದು ಗುಂಪಿನಲ್ಲಿ ಕನಿಷ್ಠ 10 ಮತ್ತು ಗರಿಷ್ಠ 20 ಸದಸ್ಯರು.

4) ನೋಂದಾಯಿತರಲ್ಲಿ ಅನೌಪಚಾರಿಕ ಗುಂಪು.

5) ವಯೋಮಿತಿ 18ರಿಂದ 60 ವರ್ಷ.

6) ಒಂದು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತ.

7) ಉತ್ಪಾದಕ ಚಟುವಟಿಕೆಗಳಿಗೆ ಪ್ರೋತ್ಸಾಹ.

8) ಇದು ಸಹಕಾರಿ ತತ್ವದ ಆದೇಶವಾಗಿದೆ.

9) ವಾರದ ಸಭೆಗಳ ಮೂಲಕ ನಿರ್ಣಯ ಕೈಗೊಳ್ಳುವಿಕೆ.

10) ಇವು ರಾಜಕೀಯೇತರ ಗುಂಪುಗಳು.

11) ಉಳಿತಾಯದ ಹಣ ಸಂಗ್ರಹಣೆ.

**ಸ್ವ ಸಹಾಯದ ಅನುಕೂಲಗಳು:**

1) ಉಳಿತಾಯಕ್ಕೆ ಪ್ರೋತ್ಸಾಹ.

2) ಸಾಮೂಹಿಕ ಚೌಕಾಶಿಯ ಹೆಚ್ಚಳ.

3) ಸಂಪನ್ಮೂಲಗಳ ಸಮರ್ಪಕ ಹಂಚಿಕೆ.

4) ಅನುತ್ಪಾದಕ ವೆಚ್ಚವನ್ನು ಕಡಿಮೆ ಮಾಡುತ್ತದೆ.

5) ಸದಸ್ಯರ ಆರ್ಥಿಕ ಸ್ಥಾನಮಾನದ ಹೆಚ್ಚಳ.

6) ಸದಸ್ಯರ ಸಾಮಾಜಿಕ ಮತ್ತು ಶೈಕ್ಷಣಿಕ ವಿಕಾಸ.

7) ಗುಂಪು ಚಟುವಟಿಕೆಗಳಿಗೆ ಪ್ರೋತ್ಸಾಹ.

8) ಕಿರು ಉದ್ಯೋಗಗಳ ಸ್ಥಾಪನೆ.

9) ಬಡತನ ನಿರ್ಮೂಲನೆ.

ಸ್ವ ಸಹಾಯ ಗುಂಪುಗಳು ಜನರ ಸ್ವ ಸಹಾಯ ಗುಂಪುಗಳಾಗಿದ್ದು ಆಯಾ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ನೆರವಾಗುತ್ತಿದೆ.

**ಸ್ತ್ರೀ ಶಕ್ತಿ ಗುಂಪುಗಳು:**

ಕರ್ನಾಟಕದಲ್ಲಿ ಸ್ವ ಸಹಾಯ ಗುಂಪುಗಳನ್ನು ಸ್ತ್ರೀ ಶಕ್ತಿ ಗುಂಪುಗಳ ಮೂಲಕ ಗುರುತಿಸಲಾಗುತ್ತದೆ. 2000–01ರಲ್ಲಿ ಮಹಿಳಾ ಸಬಲೀಕರಣ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಮೂಲಕ ಮಹಿಳಾ ಸಬಲೀಕರಣ, ಇಂತಹ ಗುಂಪುಗಳು ನಿರ್ದಿಷ್ಟ ವರ್ಗದ ಮಹಿಳೆಯರು ಆರ್ಥಿಕವಾಗಿ ಸ್ಥಾನಮಾನವನ್ನು ಹೆಚ್ಚಿಸಲು ಸಹಾಯಕವಾಗಿವೆ. ದಕ್ಷಿಣ ಭಾರತದಲ್ಲಿ ಸ್ತ್ರೀ ಶಕ್ತಿ ಯೋಜನೆಗಳು ಯಶಸ್ವಿಯಾಗಿವೆ.

**ಮುಖ್ಯ ಲಕ್ಷಣಗಳು:**

* ಸಾಮಾನ್ಯವಾಗಿ 15ರಿಂದ 20 ಸದಸ್ಯರಿರುತ್ತಾರೆ.

* ಈ ಗುಂಪುಗಳ ಸದಸ್ಯರ ಶೈಕ್ಷಣಿಕ ಆರೋಗ್ಯ ಹಾಗೂ ಸಾಮಾಜಿಕ ಸ್ಥಾನಮಾನ ಹೆಚ್ಚಳಕ್ಕೆ ವಿಶೇಷವಾಗಿ ನೆರವಾಗುತ್ತದೆ.

* ಪ್ರತಿವಾರ ಸಭೆ ಸೇರುತ್ತದೆ. ಕನಿಷ್ಠ 10 ರೂ.ಗಳ ಉಳಿತಾಯ.

* ಉಳಿತಾಯದ ಹಣವನ್ನು ಸದಸ್ಯರೊಂದಿಗೆ ಆಂತರಿಕ ಸಾಲದಲ್ಲಿ ಬಳಸುತ್ತಿದ್ದಾರೆ.

* ಉಳಿತಾಯದ ಹಣದೊಂದಿಗೆ ಬ್ಯಾಂಕ್ ಸಾಲದ ಜೋಡಣೆ.

* ಸದಸ್ಯರಲ್ಲಿ ಅರಿವು ಮೂಡಿಸುವ ಮೂಲಕ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಕ್ಕೆ ನೆರವಾಗುತ್ತದೆ.

* 2014 ಡಿಸೆಂಬರ್ ವೇಳೆಗೆ ಕರ್ನಾಟಕದಲ್ಲಿ ಸ್ತ್ರೀ ಶಕ್ತಿ ಗುಂಪುಗಳು 20 ಲಕ್ಷ ಸದಸ್ಯರುಗಳನ್ನೊಳಗೊಂಡಿದೆ.

**ಸೂಕ್ಷ್ಮ ಹಣಕಾಸು (ಕಿರು ಸಾಲ):**

ಸೂಕ್ಷ್ಮ ಹಣಕಾಸು, ಕಿರು ಹಣಕಾಸು ಸಾಲ ಸೌಲಭ್ಯವನ್ನು ದುರ್ಬಲ ವರ್ಗಗಳಿಗೆ ವಿಸ್ತರಿಸುವ ನಬಾರ್ಡನ ಕಾರ್ಯೋಜಿತ ಯೋಜನೆ ಇದಾಗಿದೆ. ಕಿರು ಹಣಕಾಸು, ಸೂಕ್ಷ್ಮ ಹಣಕಾಸು ಹೆಸರನ್ನು ಸೂಚಿಸುವಂತೆ ಸಣ್ಣ ಮೊತ್ತದ ಸಾಲದ ಪೂರೈಕೆ ಇದರ ಉದ್ದೇಶವಾಗಿದೆ.

**ಸೂಕ್ಷ್ಮ ಘಟಕ:**

ಕಿರು ಘಟಕ ಕಿರು ಹಣಕಾಸನ್ನು ಪೂರೈಕೆ ಮಾಡುವ ಘಟಕವನ್ನು ಕಿರು ಘಟಕವೆಂದು ಪರಿಗಣಿಸಲಾಗಿದೆ.

**ಕಿರು ಹಣಕಾಸು ಮತ್ತು ಕಿರು ಸಾಲ:**

ಕಿರು ಹಣಕಾಸು ವಿಶಾಲ ವ್ಯಾಪ್ತಿಯಾಗಿದ್ದು, ಸಣ್ಣ ಉಳಿತಾಯದ ಸಂಗ್ರಹಣೆ, ಸಣ್ಣ ಮೊತ್ತದ ಸಾಲದ ಪೂರೈಕೆ, ಸಣ್ಣ ಸಾಲಗಾರರು, ವಿಮಾ ಸೌಲಭ್ಯವನ್ನು ಒಳಗೊಂಡಿದೆ. ಕಿರು ಸಾಲ, ಸೂಕ್ಷ್ಮ ಸಾಲ.

**ಕಿರು ಹಣಕಾಸಿನ ಮಾದರಿಗಳು:**

ಸೂಕ್ಷ್ಮ ಹಣಕಾಸು ವಿಭಿನ್ನ ಮೂಲಗಳಿಂದ ಸಂಗ್ರಹಣೆಯಾಗಿ ವಿಭಿನ್ನ ಮೂಲಗಳಿಗೆ ವಿಸ್ತರಣೆಯಾಗುತ್ತದೆ. ಇದನ್ನು 4 ಗುಂಪುಗಳಾಗಿ ವಿಂಗಡಿಸಬಹುದು.

1) ಸ್ವ ಸಹಾಯ ಗುಂಪು ಮಾದರಿ

2) ಸಹಕಾರಿ ಮಾದರಿ

3) ಗ್ರಾಮೀಣ ಬ್ಯಾಂಕ್ ಮಾದರಿ

4) ಲಾಭ ಪ್ರೇರಿತ, ಆಧಾರಿತ ಮಾದರಿ.

## 2007ರ ಕಿರು ಹಣಕಾಸು ಅಭಿವೃದ್ಧಿ ಮತ್ತು ನಿಯಂತ್ರಣ ಮಸೂದೆ:

ಈ ಮಸೂದೆಯ ಅನ್ವಯ ಕೆಳಗಿನ ವಿಶೇಷ ಲಕ್ಷಣಗಳನ್ನು ಹೊಂದಿ ಕಿರು ಹಣಕಾಸನ್ನು ಒದಗಿಸುವ ಎಲ್ಲಾ ಸಂಸ್ಥೆಗಳನ್ನು ನಬಾರ್ಡ್ ನಿಯಂತ್ರಿಸುತ್ತದೆ. ಕಿರು ಹಣಕಾಸು ಎಂಬುವುದು ಗರಿಷ್ಟ 50,000 ರೂ.ಗಳನ್ನು ಗೃಹ ನಿರ್ಮಾಣದ ಉದ್ದೇಶಕ್ಕಾಗಿ ಮತ್ತು 1,50,000 ರೂ.ಗಳ ಹಣಕಾಸಿನ ವಹಿವಾಟಾಗಿದೆ.

ಕಿರು ಹಣಕಾಸನ್ನು ಒದಗಿಸುವ ಬ್ಯಾಂಕ್ ಸಹಕಾರಿ ಸಂಘ, ಸೇವೆಗಳು, ಸ್ವ ಸಹಾಯ ಗುಂಪುಗಳನ್ನು ಕಿರು ಹಣಕಾಸು ಸಂಸ್ಥೆಗಳೆಂದು ವ್ಯಾಖ್ಯಾನಿಸಲು ಎಲ್ಲಾ ಕಿರು ಹಣಕಾಸು ಸಂಸ್ಥೆಗಳು ನಬಾರ್ಡ್‌ನಲ್ಲಿ ನೋಂದಾವಣಿಯಾಗಬೇಕು. ಸೂಕ್ಷ್ಮ ಹಣಕಾಸು ಸಂಸ್ಥೆ ಎಂದು ನೋಂದಾವಣಿಯಾಗುವ ಯಾವುದೇ ಸಂಸ್ಥೆ ತನ್ನ ಕಾರ್ಯವನ್ನು ನಿರ್ವಹಿಸಬೇಕು. ಪ್ರತಿ ಸೂಕ್ಷ್ಮ ಹಣಕಾಸು ಸಂಸ್ಥೆ ಗಳಿಸಿದ ನಿವ್ವಳ ಲಾಭದ 105%ರಷ್ಟು ನಬಾರ್ಡ್‌ನ ಕಿರು ಹಣಕಾಸು ಅಭಿವೃದ್ಧಿ ಮತ್ತು ಈಕ್ವಿಟಿ ನಿಧಿಗೆ ವರ್ಗಾಯಿಸಬೇಕು.

## ಕರ್ನಾಟಕದಲ್ಲಿ ಸೂಕ್ಷ್ಮ ಹಣಕಾಸು ವ್ಯವಸ್ಥೆ:

ಕರ್ನಾಟಕದಲ್ಲಿ 21 ಸಂಸ್ಥೆಗಳು ಸೂಕ್ಷ್ಮ ಹಣಕಾಸು ಸಂಸ್ಥೆಗಳಾಗಿ ನೋಂದಾವಣಿಯಾಗಿವೆ. ಇದರಲ್ಲಿ 65%ರಷ್ಟು ಸ್ವ ಸಹಾಯ ಗುಂಪುಗಳಾಗಿವೆ. ಇದರಲ್ಲಿ 65%ರಷ್ಟು ಹಣಕಾಸನ್ನು ಒದಗಿಸುವ ಮೂಲಕ ಕರ್ನಾಟಕದ 1.2 ಕೋಟಿ ಕುಟುಂಬಗಳಿಗೆ ನೆರವಾಗಿದೆ. ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಕಿರು ಹಣಕಾಸಿನ ಸಂಸ್ಥೆಗಳ ಉಳಿತಾಯದ ಸಂಗ್ರಹಣೆ ಮತ್ತು ಸಾಲ ನಿಡಿಕೆಯ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದೆ. ಅಲ್ಲದೇ ಕೇಂದ್ರ ಸರ್ಕಾರದ ಆದ್ಯತಾ ವಲಯಗಳ ಸಾಲ ನೀಡಿಕೆಯಲ್ಲಿಯ ಮುಂಚೂಣಿಯಲ್ಲಿದೆ.

● ● ● ● ● ● ● ● ● ● ● ● ● ●